
ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ



ಐಸಾಕ್ ಬಾಷೆವಿಸ್ ಸಿಂಗರ್

ವಾಚಿಕೆ

ಲಿಂಗರಾಜು

ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ

ಐಸಾಕ್ ಬಾಷೆವಿಸ್ ಸಿಂಗರ್

ವಾಚಿಕೆ

ಐಸಾಕ್ ಬಾಷೆವಿಸ್ ಸಿಂಗರ್
(೧೯೦೪-೧೯೯೧)

೧೯೭೮ರ ನೊಬೆಲ್ ಪುರಸ್ಕಾರಕ್ಕೆ ಪಾತ್ರನಾದ ಲೇಖಕ ಐಸಾಕ್ ಬಾಷೆವಿಸ್ ಸಿಂಗರ್. ಪೂರ್ವ ಯೂರೋಪಿನ ಯಹೂದಿಗಳ, ಸ್ಲಾವ್ ಗುಂಪಿಗೆ ಸೇರಿದ ಯಿದ್ದಿಷ್ ಎಂಬ ಭಾಷೆಯೊಂದಿದೆ ಎಂಬುದು ಹೊರಜಗತ್ತಿಗೆ ಪರಿಚಯವಾದದ್ದೇ ಸಿಂಗರ್‌ನಿಂದ. ಜನಾಂಗೀಯ ದ್ವೇಷಕ್ಕೆ ಗುರಿಯಾಗಿ ಎರಡು ಮಹಾಯುದ್ಧಗಳಲ್ಲಿ ಮಿಲಿಯಾಂತರ ಯಹೂದಿಯರು ಹತ್ಯೆಗೀಡಾಗಿ ಹಲವರು ವಲಸೆ ಹೋದಂತೆ ಸಿಂಗರ್ ಕೂಡ ಪೋಲೆಂಡ್‌ನಿಂದ ಅಮೆರಿಕೆಗೆ ಹೋದ. ಅಲ್ಲಿನ 'ಜ್ಯೂಯಿಷ್ ಡೈಲಿ ಫಾರ್ವರ್ಡ್' ಪತ್ರಿಕೆಯಲ್ಲಿ ವೃತ್ತಿಗೆ ಸೇರಿ ಮೃತಭಾಷೆ ಎಂದೇ ಕರೆಸಿಕೊಳ್ಳುತ್ತಿದ್ದ ಯಿದ್ದಿಷ್‌ನಲ್ಲಿ ಕತೆ-ಕಾದಂಬರಿಗಳನ್ನು ಬರೆಯಲಾರಂಭಿಸಿದ. ಯಹೂದಿ ಬದುಕಿನ ದಟ್ಟ ವಿವರಗಳಿಂದ ಕೂಡಿದ ಇವನ ಕೃತಿಗಳು ಹೊಸ ಸಂವೇದನೆಯೊಂದನ್ನು ತೆರೆದು, ಜಗತ್ತಿನ ಹಲವು ಭಾಷೆಗಳಿಗೆ ಅನುವಾದಗೊಂಡು ಮುಂದೆ ಸಿಂಗರ್‌ನಿಗೆ ಪ್ರಸಿದ್ಧಿಯನ್ನು ತಂದವು. ಷೇಕ್ಸ್‌ಪಿಯರ್‌ನ ನಂತರ ಮಾನವ ಬದುಕಿನ ಎಲ್ಲ ರೀತಿಯ ಪಾತ್ರಗಳನ್ನು ಚಿತ್ರಿಸಿದ ಅಪರೂಪದ ಲೇಖಕ ಸಿಂಗರ್. ಜನಪದ ಕಥಾ ಪರಂಪರೆಯನ್ನು ಆಧುನಿಕತೆಯ ಚೌಕಟ್ಟಿಗೆ ತೆರೆದವರಲ್ಲಿಯೂ ಪ್ರಮುಖ ಲೇಖಕ. ನಲವತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿರುವ ಸಿಂಗರ್, ಕಥನಶೈಲಿಯನ್ನು ಕುತೂಹಲದ ಎಳೆಯೊಂದಿಗೆ ನಿರ್ಮಿಸುತ್ತಲೇ ಕಥೆಯ ಆವರಣವೊಂದನ್ನು ನಿರ್ಮಿಸುವ ಅದ್ಭುತ ಕಲೆಗಾರಿಕೆಯನ್ನು ತನ್ನ ಕತೆ-ಕಾದಂಬರಿಗಳಲ್ಲಿ ಅಚ್ಚೊತ್ತಿದ್ದಾನೆ. ಮೃತಭಾಷೆಯೊಂದಕ್ಕೆ ನೊಬೆಲ್ ಗೌರವವನ್ನು ತರುವಂಥ ಸಾಧನೆಗೈದ ಸಿಂಗರ್‌ನ ಈ ವಾಚಿಕೆಯನ್ನು ಲಿಂಗರಾಜು ಅವರು ಕನ್ನಡ ಓದುಗರಿಗಾಗಿ ಸಿದ್ಧಪಡಿಸಿದ್ದಾರೆ.

ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ

ಐಸಾಕ್ ಬಾಷೆವಿಸ್ ಸಿಂಗರ್

ವಾಚಿಕೆ

ಆಯ್ಕೆ / ಅನುವಾದ

ಲಿಂಗರಾಜು

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು - ೫೬೦ ೦೧೮

ISAAC BASHEVIS SINGER : Selected translation's of Noble Laureate Isaac Bashevis Singer. Selected and translated by Sri Lingaraju, Published by Kannada Pustaka Pradhikara (Kannada Book Authority), Pampa Mahakavi Road, Chamarajpet, Bangalore - 560 018.

Price : **Rs. 36/-** Pages : **XXX + 218**

ಮೊದಲ ಮುದ್ರಣ : ೧೯೯೬

ಬೆಲೆ : ರೂ. ೩೬/-

ಮುಖಪುಟ : ರಾ. ಸೂರಿ

ಮುದ್ರಣ :

ಅಂಕಿತ ಎಂಟರ್‌ಪ್ರೈಸಸ್

ಜಯನಗರ , ಬೆಂಗಳೂರು - 560 082

☎ : 649633

ಮುನ್ನುಡಿ

ಪುಸ್ತಕ ಪ್ರಾಧಿಕಾರವು ಕನ್ನಡ ಪುಸ್ತಕೋದ್ಯಮದ ಬೆಳವಣಿಗೆಗೆ ಪೂರಕವಾಗಿ ಅನೇಕ ಯೋಜನೆಗಳನ್ನು ರೂಪಿಸಿಕೊಂಡಿದೆ. ಅವುಗಳಲ್ಲಿ ಮುಖ್ಯವಾದುವೆಂದರೆ, ಕನ್ನಡದಲ್ಲಿ ಆಯಾ ವರ್ಷ ಪ್ರಕಟವಾಗುವ ಕೃತಿಗಳನ್ನು ಲೇಖಕರಿಂದ : ಪ್ರಕಾಶಕರಿಂದ ಕೊಂಡು ಗ್ರಂಥಾಲಯಗಳ ಮೂಲಕ ಓದುಗರಿಗೆ ತಲುಪಿಸುವುದು ಹಾಗೂ ಅತ್ಯುತ್ತಮವಾದ ಕೃತಿಗಳನ್ನು ಪರಿಣತ ವಿದ್ವಾಂಸರಿಂದ ಬರೆಯಿಸಿ ಪ್ರಕಟಿಸುವುದು.

ಈ ಯೋಜನೆಗಳಿಗೆ ಪೂರಕವಾಗಿ ಕಳೆದ ಐದು ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ಸೃಜನಶೀಲ ಹಾಗೂ ಸೃಜನೇತರ ಸಾಹಿತ್ಯವನ್ನು ಕನ್ನಡಿಗರಿಗೆ ಒದಗಿಸುತ್ತಾ ಬಂದಿದೆ. ಕನ್ನಡದ ಮೌಲಿಕವಾದ, ಹಲವಾರು ವರ್ಷಗಳಿಂದ ಬೇಡಿಕೆಯಲ್ಲಿದ್ದೂ ಪುನರ್ ಮುದ್ರಣವಾಗದಿದ್ದ ಗ್ರಂಥಗಳನ್ನು ಆಯ್ದು "ಜನಪ್ರಿಯ ಪುಸ್ತಕ ಮಾಲೆ"ಯ ಮೂಲಕ ಪ್ರಕಟಿಸುತ್ತಾ ಬಂದಿದೆ. ಹಾಗೆಯೇ ಸಮಕಾಲೀನ ಸಾಹಿತ್ಯ, ಶಿಕ್ಷಣ, ಸಂಸ್ಕೃತಿ, ಮಾನವಿಕ, ಶಾಸ್ತ್ರ ವಿಚಾರ, ಕಲೆ, ಶಿಶು ಸಾಹಿತ್ಯ ಹಾಗೂ ವಿಜ್ಞಾನ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿಶಿಷ್ಟವಾದ ಕೃತಿಗಳನ್ನು ಹೊರತರುವ ಉದ್ದೇಶದಿಂದ ಮೂಲಭೂತ ಶೈಕ್ಷಣಿಕ ಮಾಲೆ, ವಿಜ್ಞಾನ ದೀಪಮಾಲೆ, ಮಕ್ಕಳ ಪುಸ್ತಕ ಮಾಲೆಗಳನ್ನು ಪ್ರಾರಂಭಿಸಿದೆ. ಅಲ್ಲದೆ, ಕನ್ನಡದ ಕೆಲವು ಲೇಖಕರ ಶತಮಾನೋತ್ಸವ ಸಂದರ್ಭದಲ್ಲಿ ಅವರ ಪ್ರಾತಿನಿಧಿಕ ಸಂಕಲನವನ್ನು ಸಂಪಾದಿಸಿ ಪ್ರಕಟಿಸುವ ಕೆಲಸವನ್ನೂ ಮಾಡುತ್ತಿದೆ.

ಜಗತ್ತಿನ ಬೇರೆ ಬೇರೆ ವಿಜ್ಞಾನಿಗಳ, ತತ್ವಜ್ಞಾನಿಗಳ ಬದುಕು ಮತ್ತು ಬರಹಗಳನ್ನು ಕುರಿತು ತಜ್ಞರಿಂದ ಬರೆಯಿಸಿ ಕನ್ನಡದ ಓದುಗರಿಗೆ ತಲುಪಿಸಬೇಕೆಂಬ ಮಹತ್ವಾಕಾಂಕ್ಷೆಯನ್ನೂ ಪ್ರಾಧಿಕಾರ ಹೊಂದಿದೆ. ಹೀಗೆ ಪರಿಚಯಿಸುವುದರ ಮೂಲಕ ಬೇರೆ ಬೇರೆ ದೇಶಗಳ ಭಾಷೆ, ಸಂಸ್ಕೃತಿ ಹಾಗೂ ನಾಗರಿಕತೆಗಳನ್ನು ಅರ್ಥ ಮಾಡಿ ಕೊಳ್ಳಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ನೊಬೆಲ್ ಬಹುಮಾನ ವಿಜೇತ ಲೇಖಕರ ಮಾಲಿಕೆಯೊಂದನ್ನು 'ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ' ಎಂದು ಆರಂಭಿಸುತ್ತಿದ್ದೇವೆ.

ನೊಬೆಲ್ ಬಹುಮಾನ ಜಗತ್ತಿನಲ್ಲಿಯೇ ಅತ್ಯಂತ ಪ್ರತಿಷ್ಠಿತವಾದ ಬಹುಮಾನ. ಅಲ್‌ಫ್ರೆಡ್ ನೊಬೆಲ್ ತನ್ನ ಉಯಿಲಿನಲ್ಲಿ ತನ್ನ ಉಳಿದಿರುವ ಆಸ್ತಿಯನ್ನೇ ಮೂಲ ಬಂಡವಾಳವಾಗಿಟ್ಟುಕೊಂಡು ಅದರಿಂದ ಬರುವ ಬಡ್ಡಿ ಹಣದಲ್ಲಿ ಪ್ರತಿವರ್ಷ ಐದು

ಬಹುಮಾನಗಳನ್ನು ಕೊಡುವಂತೆ ತಿಳಿಸಿದ್ದಾರೆ. ಈ ಬಹುಮಾನಗಳು 'ಭೌತಶಾಸ್ತ್ರ', 'ರಸಾಯನಶಾಸ್ತ್ರ', 'ಶರೀರ ಶಾಸ್ತ್ರ' ಅಥವಾ 'ವೈದ್ಯಕೀಯ ಶಿಕ್ಷಣ', 'ಸಾಹಿತ್ಯ' ಹಾಗೂ 'ಮನುಕುಲದ ಶಾಂತಿಗಾಗಿ' ಎಂದು ಸೂಚಿಸಿದ್ದಾರೆ. ಹಾಗೆ ಆಯಾ ವರ್ಷ ಬಹುಮಾನ ಪಡೆಯುವವರು ಹಿಂದಿನ ವರ್ಷಾವಧಿಯಲ್ಲಿ ಮಾನವ ಕುಲಕ್ಕೆ ತುಂಬ ಪ್ರಯೋಜನಕಾರಿಯಾದ, ಅತ್ಯಂತ ಶ್ರೇಷ್ಠ ಕಾರ್ಯ ಮಾಡಿರಬೇಕು. ವಿವಿಧ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿವಿಧ ಅಕಾಡೆಮಿಗಳು ಆಯ್ಕೆ ಮಾಡಿ ಬಹುಮಾನವನ್ನು ನಿರ್ಧರಿಸುತ್ತವೆ. ಈ ಬಹುಮಾನ ನೀಡುವಲ್ಲಿ ಅಭ್ಯರ್ಥಿಗಳ ರಾಷ್ಟ್ರೀಯತೆಯನ್ನು ಪರಿಗಣಿಸಬಾರದೆಂಬುದನ್ನು ನೊಬೆಲ್ ಸೂಚಿಸಿದ್ದಾರೆ. ಸ್ಕ್ಯಾಂಡಿನೇವಿಯಾದವರಾಗಿರಲಿ ಅಥವಾ ಇಲ್ಲದಿರಲಿ ಬಹುಮಾನ ನೀಡಲು ಮಾತ್ರ ಎಲ್ಲಾ ರೀತಿಯಿಂದಲೂ ಅರ್ಹವಾಗಿದ್ದವರಿಗೆ ಸಲ್ಲುವಂತಾಗಬೇಕೆಂಬುದು ಅವರ ಆಶಯವಾಗಿತ್ತು. ಸಾಹಿತ್ಯ ಕ್ಷೇತ್ರದಲ್ಲಿ ಇಂತಹ ಪುರಸ್ಕಾರವನ್ನು ಪಡೆದ ಸಾಹಿತಿಗಳನ್ನು ಕುರಿತ ಕೃತಿಗಳನ್ನು ಕನ್ನಡಿಗರಿಗೆ ತಲುಪಿಸುವುದು ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ.

ಪ್ರಸ್ತುತ 'ನೊಬೆಲ್ ವಾಚಿಕೆಗಳು' ಎಂಬ ಈ ಮಾಲಿಕೆಯ ಕೃತಿಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸಿದ್ಧಪಡಿಸಿಕೊಟ್ಟಿದೆ. ಅಕಾಡೆಮಿಯ ಹಿಂದಿನ ಅಧ್ಯಕ್ಷರಾದ ಪ್ರೊ|| ಬರಗೂರು ರಾಮಚಂದ್ರಪ್ಪ ಅವರು ಬೇರೆ ಬೇರೆ ಲೇಖಕರಿಂದ ಹಸ್ತಪ್ರತಿಗಳನ್ನು ಸಿದ್ಧಪಡಿಸಲು ನೆರವಾಗಿದ್ದಾರೆ. ಅಕಾಡೆಮಿಯು ಸಿದ್ಧಪಡಿಸಿದ ಈ ಕೃತಿಗಳನ್ನೆಲ್ಲಾ ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸಲು ಇಂದಿನ ಅಧ್ಯಕ್ಷರಾದ ಶ್ರೀ ಶಾಂತರಸರವರು ಒಪ್ಪಿಗೆ ನೀಡಿದ್ದಾರೆ. ಇವರಿಬ್ಬರಿಗೆ ಪ್ರಾಧಿಕಾರವು ಆಭಾರಿಯಾಗಿದೆ. ಪ್ರಸ್ತುತ 'ಐಸಾಕ್ ಬಾಷೆವಿಸ್ ಸಿಂಗರ್' ಕೃತಿಯನ್ನು ಲಿಂಗರಾಜು ಅವರು ಸಿದ್ಧಪಡಿಸಿರುವುದಲ್ಲದೆ ಈ ಮಾಲಿಕೆಯಲ್ಲಿ ಕೃತಿಗಳು ಇಷ್ಟು ಅಚ್ಚುಕಟ್ಟಾಗಿ ಹೊರ ಬರಲು ಶ್ರಮಿಸಿದ್ದಾರೆ. ಈ ಮಾಲಿಕೆಯ ಹೊದಿಕೆಗಳ ವರ್ಣವಿನ್ಯಾಸವನ್ನು ಕಲಾವಿದ ರಾ. ಸೂರಿ ಅವರು ರಚಿಸಿದ್ದಾರೆ ; ಹಾಗೆಯೆ ಅಂಕಿತ ಎಂಟರ್‌ಪ್ರೈಸಸ್ ಅವರು ಅಂದವಾಗಿ ಮುದ್ರಿಸಿಕೊಟ್ಟಿದ್ದಾರೆ ; ಈ ಎಲ್ಲರಿಗೂ ಕೃತಜ್ಞತೆಗಳು. ಸಹೃದಯ ಕನ್ನಡಿಗರು ಈ ಮಾಲಿಕೆಯನ್ನು ಆದರದಿಂದ ಸ್ವಾಗತಿಸಿ ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಾರೆಂದು ಆಶಿಸುತ್ತೇನೆ.

ನೆಲಮನೆ ದೇವೇಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ಪರಿವಿಡಿ

ಕೃತಜ್ಞತೆಗಳು

ಸಿಂಗರ್‌ನ ಸಾಹಿತ್ಯದತ್ತ ನನ್ನ ಗಮನವನ್ನು ಸೆಳೆದು ಈ ಅನುವಾದ ಗಳ ಬಗೆಗೆ ಮೊದಲಿನಿಂದಲೂ ವಿಮರ್ಶಾತ್ಮಕವಾಗಿ ನೋಡಿ ಬೆಂಬಲವಿತ್ತಿರುವ ಶಿವಪ್ರಕಾಶ್ ಅವರಿಗೆ ;

ಸಿಂಗರ್ ಕೃತಿಗಳನ್ನು ನನ್ನ ಓದಿಗೆ ಲಭ್ಯವಾಗಿಸಲು ತಮ್ಮ ಗ್ರಂಥಭಂಡಾರವನ್ನು ನನಗೆ ಮುಕ್ತವಾಗಿ ತೆರೆದ ಜಿ.ಕೆ. ಗೋವಿಂದರಾವ್ ಅವರಿಗೆ ;

ಈ ಅನುವಾದಿತ ಕತೆಗಳನ್ನು ಓದಿ ಅಭಿಪ್ರಾಯ ಸೂಚಿಸುತ್ತ ಅನುವಾದ ಪ್ರಕ್ರಿಯೆಯ ಒಳಸುಳಿಗಳನ್ನು ಕಂಡುಕೊಳ್ಳಲು ನೆರವಾಗಿರುವ ಬಿದರಹಳ್ಳಿ ನರಸಿಂಹ ಮೂರ್ತಿ, ಕೇಶವ ಮಳಗಿ, ಎಂ.ಕೆ. ಶಂಕರ್, ಎಂ.ಕೆ. ಅನಿಲ್, ನಿರಂಜನಾರಾಧ್ಯ, ಲಕ್ಷ್ಮೀಪತಿ ಕೋಲಾರ, ಎಂ.ಎಸ್. ಶ್ರೀರಾಮ್, ಮುನಿಶಾಮಪ್ಪ, ಮಲ್ಲೇಪುರಂ ಜಿ. ವೆಂಕಟೇಶ್ ಮತ್ತಿತರ ಆತ್ಮೀಯರಿಗೆ ;

ಈ ಕಾರ್ಯಕ್ಕೆ ಕೊನೆ ಹಂತದಲ್ಲಿ ಒಂದು ಉತ್ತಮ ಗ್ರಂಥವನ್ನು ನನಗೆ ಬಳುವಳಿಯಾಗಿಯೇ ಕಳಿಸಿಕೊಟ್ಟು ನೆರವಾಗಿರುವ ಎಸ್. ದಿವಾಕರ್ ಅವರಿಗೆ ;

ಇಲ್ಲಿನ ಒಂದೆರಡು ಕತೆಗಳನ್ನು ಈ ಹಿಂದೆ ಪ್ರಕಟಿಸಿರುವ ಪತ್ರಿಕೆಗಳವರಿಗೆ, ಮುಖ್ಯವಾಗಿ ವೈ.ಎನ್.ಕೆ, ಜಿ.ಎನ್.ರಂಗನಾಥರಾವ್, ಡಿ.ವಿ. ರಾಜಶೇಖರ್ ಅವರಿಗೆ ;

ಚನ್ನವೀರದೇವರು ಮತ್ತು ಚನ್ನಬಸವಾರಾಧ್ಯ ದಂಪತಿಗಳಿಗೆ ಹಾಗೂ ನಾಗೇಶ ಹೆಗಡೆ ಅವರಿಗೆ ; ಹಾಗೂ

ಸಿಂಗರ್‌ನ ಇಂಥದೊಂದು ಕೃತಿಯನ್ನು ಪ್ರಕಟಿಸಬೇಕು ಎಂಬ ನನ್ನೊಳಗಿನ ತುಡಿತಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಡಿಯಲ್ಲಿ ಈ ಕೃತಿ ಸಿದ್ಧಗೊಳ್ಳಲು ಕಾರಣರಾದ ಬರಗೂರು ರಾಮಚಂದ್ರಪ್ಪ ಮತ್ತು ಅಕಾಡೆಮಿಯ ಎಲ್ಲರಿಗೆ ;

ತಡವಾಗಿಯಾದರೂ ಈ ಕೃತಿ ಪ್ರಕಟಗೊಳ್ಳಲು ಕಾರಣಕರ್ತರಾಗಿರುವ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ನೆಲಮನೆ ದೇವೇಗೌಡ ಅವರಿಗೆ ;

ನೀಟಾಗಿ ಮುದ್ರಿಸಿರುವ ಅಂಕಿತ ಎಂಟರ್‌ಪ್ರೈಸಸ್‌ನವರಿಗೆ, ಮುಖಪುಟ ಚಿತ್ರಿಸಿರುವ ರಾ. ಸೂರಿ ಅವರಿಗೆ ; ಕೊನೆಯದಾಗಿ ಈ ಕೃತಿಯನ್ನು ಓದಿನಲ್ಲಿ ತಮ್ಮದಾಗಿಸಿಕೊಳ್ಳಲಿರುವ ಓದುಗರಾದ ನಿಮಗೆ

- ನನ್ನ ಹೃತ್ಪೂರ್ವಕವಾದ ಕೃತಜ್ಞತೆಗಳು.

ಲಿಂಗರಾಜು

ಪ್ರಸ್ತಾವನೆ

ಒಂದು : ಯಹೂದಿ ಜನಾಂಗ

ಜಗತ್ತಿನ ಮಾನವೇತಿಹಾಸದಲ್ಲಿ ಕೆಲವು ಜನಾಂಗಗಳು ಮಾತ್ರ ತಮ್ಮ ಚರಿತ್ರೆಯ ರೂಪುರೇಷೆಗಳನ್ನು ತೋರಿಕೊಳ್ಳುತ್ತಿದ್ದು, ಇವುಗಳಲ್ಲಿ ಜ್ಯೂಗಳು ಅಥವಾ ಯಹೂದಿ ಜನಾಂಗದ ಇತಿಹಾಸ ಗಮನ ಸೆಳೆದುಕೊಳ್ಳುವ ವೈಶಿಷ್ಟ್ಯತೆ ಪಡೆದುಕೊಂಡಿದೆ. ಬೈಬಲ್‌ನ ಕಾಲಾವಧಿಯಲ್ಲಿ ಯಹೂದಿಯರನ್ನು ಹೀಬ್ರೂಗಳು ಎಂದು ಕರೆಯಲಾಗು ತ್ತಿತ್ತು. ಆಗ ಇವರು ನೆಲೆಯಾಗಿ ಇದ್ದದ್ದು ಇಂದಿನ ಇಸ್ರೇಲ್ ಭೂಮಿಯಲ್ಲಿ.

ಜ್ಯೂಗಳ ಅಥವಾ ಯಹೂದಿಯರ ಪೂರ್ವಿಕ ಅಬ್ರಾಹಂ. ಇವನು ಮೆಸಪಿಟೋಮಿಯಾದಲ್ಲಿ ವಾಸವಿದ್ದವನು. ಕ್ರಿ.ಪೂ. ೧೮೦೦ ರಿಂದ ೧೫೦೦ ನಡುವಿನ ಸುಮಾರಿನಲ್ಲಿ ಮೆಸಪಿಟೋಮಿಯಾವನ್ನು ತೊರೆದ ಅಬ್ರಾಹಂ, ಆನಂತರದಲ್ಲಿ ಪ್ಯಾಲೆಸ್ಟೈನ್ ಎಂದು ಕರೆಯಲಾದ ಕ್ಯಾನನ್ ತಲುಪಿದ. ಬೈಬಲ್‌ನ ಆಧಾರದಂತೆ ಅಬ್ರಾಹಂನೇ ಏಕದೇವೋಪಾಸನೆಯ ಹೀಬ್ರೂಗಳನ್ನು ಕಂಡ. ಆನಂತರದಲ್ಲಿ ಇವರ ನಡುವೆ ಪ್ರಾಮುಖ್ಯತೆ ಗಳಿಸಿಕೊಂಡ. ಈ ಕ್ಯಾನನ್‌ನಲ್ಲಿ ಆಗ ಇತರೆ ಜನಾಂಗಗಳು ಹಲವು ದೈವಗಳ ಆರಾಧನೆಯಲ್ಲಿ ಮುಳುಗಿದ್ದವು. ಅಬ್ರಾಹಂನ ಮಗ ಐಸಾಕ್, ಮೊಮ್ಮಗ ಜಾಕೋಬ್. ಇವನೇ ಮುಂದೆ ಇಸ್ರಾಯಿಲ್ ಎಂದು ಪ್ರಸಿದ್ಧಿ ಪಡೆದ. ಇವರ ವಂಶದಲ್ಲಿ ಮುಂದೆ ಬಂದ ಜೋಸೆಫ್‌ನನ್ನು ಈಜಿಪ್ಟ್‌ಗೆ ಗುಲಾಮತನದಲ್ಲಿ ಮಾರಲಾಯಿತು. ಆದರೆ ಈಜಿಪ್ಟ್‌ನ ಅಂದಿನ ಫೆರೋ ಈ ಜೋಸೆಫ್‌ನ ಪ್ರಾಮಾಣಿಕತೆ ಮತ್ತು ಕಾರ್ಯವೈಖರಿಗಳಿಂದ ಸಂತೋಷಗೊಂಡು ಇವನನ್ನು ಪ್ರಧಾನಮಂತ್ರಿಯಾಗಿಸಿದ. ಈ ಅವಧಿಯಲ್ಲಿ ಸಾಕಷ್ಟು ಯಹೂದಿಗಳು ಕ್ಯಾನನ್‌ನಿಂದ ಈಜಿಪ್ಟ್‌ಗೆ ಬಂದು ನೆಲೆಸಿದರು. ಹಲವು ವರ್ಷಗಳವರೆಗೆ ನೆಮ್ಮದಿಯ ಜೀವನ ನಡೆಸಿದರು. ಆದರೂ ಇವರು ಗುಲಾಮತ್ವದಿಂದ ಮುಕ್ತವಾಗಿರಲಿಲ್ಲ.

ಈಜಿಪ್ಟ್‌ನಲ್ಲಿ ಕ್ರಿ.ಪೂ. ೧೨೦೦ರ ಸುಮಾರಿನಲ್ಲಿ ಗುಲಾಮತ್ವದಲ್ಲಿಯೇ ನೆಲೆಸಿದ್ದ ಇವರನ್ನು ಇಲ್ಲಿಂದ ಹೊರತರಲು ಕಾರಣನಾದವನು ಮೊಸೆಸ್. ಬೈಬಲ್‌ನ ಪ್ರಕಾರ ಇವರು ಈ ಸಂದರ್ಭದಲ್ಲಿ ಪಾರಾಗಲು ದೇವರೇ ಮೊಸೆಸ್‌ನಿಗೆ ನೆರವು ನೀಡಿದ್ದಾನೆ. ಯಹೂದಿಗಳಿಗೆ ಬಹುಮುಖ್ಯವಾಗಿರುವ 'ಹತ್ತು ನಿಯಾಮಕ

ಸೂತ್ರ'*ಗಳನ್ನು (ಟೆನ್ ಕಮಾಂಡ್‌ಮೆಂಟ್ಸ್) ಮೋಸೆಸ್‌ನ ಮೂಲಕ ದೇವರೇ ಕಳುಹಿಸಿಕೊಟ್ಟ ಎಂಬ ನಂಬಿಕೆಯಿದೆ.[೧] ಸುಮಾರು ಇನ್ನೂರು ವರ್ಷಗಳವರೆಗೆ ಕ್ಯಾನನ್‌ನಲ್ಲಿ ನೆಲೆಯಾಗಲು ಯಹೂದಿಗಳು ಸೆಣಸಾಟದಲ್ಲೇ ಮುಳುಗಬೇಕಾಯಿತು. ಈ ಮೊದಲೇ ಇಲ್ಲಿ ನೆಲೆಯಾಗಿದ್ದ ಇತರೆ ಬುಡಕಟ್ಟಿನವರೊಂದಿಗೆ ನಡೆದ ಈ ಸೆಣಸಾಟ ಕ್ರಿ.ಪೂ. ೧೦೩೦ರ ಸುಮಾರಿನಲ್ಲಿ, ತಮ್ಮದೇ ಪಂಗಡಗಳ ನಡುವೆ ನ್ಯಾಯಾಧಿಪತಿಯ ಸ್ಥಾನಗಳಲ್ಲಿ ತಮ್ಮೊಳಗೇ ರೂಢಿಸಿಕೊಳ್ಳುತ್ತ ಬಂದಿದ್ದ ವ್ಯವಸ್ಥೆಗೆ ಹೊಸರೂಪ ತಂದುಕೊಂಡು, ಹಲವು ಬುಡಕಟ್ಟುಗಳು ಒಂದು ಹೊಂದಾಣಿಕೆಯಲ್ಲಿ ಒಬ್ಬ ರಾಜನ ವ್ಯವಸ್ಥೆಯನ್ನು ರೂಪಿಸಿದವು. ಇದು ಮುಂದುವರಿದು ಡೇವಿಡ್ ಮತ್ತು ಸಾಲೋಮನ್‌ನ ಅವಧಿಯಲ್ಲಿ ಇಸ್ರೇಲ್ ಸಾಮ್ರಾಜ್ಯ ಮೆಲ್ಲಗೆ ಬಲಗೊಂಡಿತು. ಜೆರು ಸಲೇಮ್ ರಾಜಧಾನಿಯಾಗಿ ಇಲ್ಲಿ ಒಂದು ದೇವಾಲಯವೂ ಅದ್ಭುತವಾಗಿ ನಿರ್ಮಾಣ ಗೊಂಡಿತು ; ಯಹೂದಿಗಳ ಧಾರ್ಮಿಕ ನಂಬಿಕೆ ಮತ್ತು ಒಗ್ಗಟ್ಟಿಗೆ ಮುಂದೆ ಇದು ಕೇಂದ್ರವಾಯಿತು. ಈ ಅವಧಿಯಲ್ಲಿಯೇ ಮೋಸೆಸ್‌ನಿಂದ ಬಂದವು ಎನ್ನಲಾದ, ಬದುಕಿನ ಹತ್ತು ಸೂತ್ರಪ್ರಾಯ ನಿಯಮಗಳು ತಲೆಮಾರುಗಳವರೆಗೆ ಸಾಗಿಕೊಳ್ಳುವಾಗ 'ತೋರಾ' (ನಿಯಮಗಳು) ಎಂದು ಕರೆಯಲ್ಪಡತೊಡಗಿದ್ದವು. ಇವು ಬೈಬಲ್‌ನಲ್ಲಿನ ಮೊದಲ ಐದು ಸೃಷ್ಟಿಯನ್ನು ಕುರಿತ ಕೃತಿಗಳೂ ಆಗಿವೆ. 'ಯಹೂದಿ' ಧರ್ಮ (ಜುದಾಯಿಸಂ)ಕ್ಕೆಈ ತೋರಾಗಳೇ ತಳಹದಿಗಳು.

ಸಾಲೋಮನ್‌ನ ಸಾವಿನ ನಂತರ ಈ ಸಾಮ್ರಾಜ್ಯ ಎರಡಾಗಿ ಒಡೆದುಕೊಂಡಿತ್ತು. ದಕ್ಷಿಣ ಭಾಗ ಹತ್ತು ಬುಡಕಟ್ಟುಗಳಲ್ಲಿ ಚೆದುರಿಕೊಂಡರೆ, ಉತ್ತರ ಭಾಗ ಇಸ್ರೇಲ್ ಎಂದೇ ಕರೆದುಕೊಳ್ಳತೊಡಗಿತ್ತು. ದಕ್ಷಿಣದ ಎರಡು ಬುಡಕಟ್ಟುಗಳು ಜೆರುಸಲೇಂನ್ನು ರಾಜಧಾನಿಯಾಗಿಸಿಕೊಂಡು ತಮ್ಮ ಸಾಮ್ರಾಜ್ಯವನ್ನು ಜುಧಾ ಎಂದು ಕರೆದು ಕೊಂಡವು. ಮುಂದೆ ಇದೇ 'ಜ್ಯೂ' ಎಂದು ಪರಿವರ್ತಿತವಾಯಿತು. ಹೀಗೆ ಇವು

---

* ಅನುಬಂಧ-೧ ನೋಡಿ

೧. ಈ ಜನಾಂಗದ ಪ್ರಾಚೀನ ಬುಡಕಟ್ಟಿನ ಹಿರಿಯರ ಮೂಲಕ ಮೌಖಿಕವಾಗಿ ಹರಿದುವೇ ಈ ಹತ್ತು ನಿಯಮಗಳು ; ಹತ್ತರ ಸಂಖ್ಯೆ ಎರಡು ಕೈಗಳ ಬೆರಳುಗಳ ಎಣಿಕೆಗೆ ಹೊಂದಿ ಕೊಳ್ಳುವಂತೆ ನೆನಪಿನಲ್ಲಿ ಇರಿಸಿಕೊಳ್ಳುತ್ತ ಬಂದ ಸೂತ್ರಗಳು ಎಂಬ ಸಮಾಜಶಾಸ್ತ್ರೀಯ ಅಭಿಪ್ರಾಯವೂ ಇದೆ. ಯಹೂದಿ ಧರ್ಮ ಕಾಲಾಂತರದುದ್ದಕ್ಕೂ ಬೆಳೆದು ಬರುವಲ್ಲಿ ಇವೇ ತಳಹದಿ ಆಗಿರುವುದರಿಂದ ಇವನ್ನು ಅನುಬಂಧದಲ್ಲಿ ನೀಡಲಾಗಿದೆ.

ರಾಜಕೀಯವಾಗಿ ಎರಡಾಗಿದ್ದರೂ ತಮ್ಮ ಧಾರ್ಮಿಕತೆಯನ್ನು ಮೊದಲಿನಂತೆಯೇ ಮುಂದುವರಿಸಿಕೊಳ್ಳುತ್ತಿದ್ದವು.

ಆನಂತರದಲ್ಲಿ ಈ ಜನಾಂಗದೊಳಗೆ ಹಲವು ಚಿಂತಕರು, ಪ್ರವಾದಿಗಳ ರೂಪದಲ್ಲಿ 'ಯಹೂದಿ' ಬದುಕನ್ನು ಒಂದು ಧಾರ್ಮಿಕ ಸ್ವರೂಪದಲ್ಲಿ ಬೆಳೆಸಿದರು. ಎಲಿಜಾ, ಅಮೋಸ್, ಇಸೈಯಾ, ಜೆರೇಮಿಯಾ ಮುಂತಾದವರು ಇವರಲ್ಲಿ ಪ್ರಮುಖರಾಗಿದ್ದು ಬೈಬಲ್‌ನಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ. ಈ ಅವಧಿಯಲ್ಲಿಯೇ ಅಸ್ಸೀರಿಯನ್ನರು ಮಧ್ಯಪೂರ್ವ ಪ್ರಾಂತ್ಯಗಳ ಮೇಲೆ ಆಕ್ರಮಣ ಮಾಡುತ್ತ ಇಸ್ರೇಲ್‌ನ ಉತ್ತರ ಭಾಗವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಆನಂತರದಲ್ಲಿ ಈ ಉತ್ತರ ಭಾಗದವರು ತಮ್ಮ ಪೂರ್ವ ಸ್ವರೂಪವನ್ನು ಕಳೆದುಕೊಳ್ಳುತ್ತ ಬದಲಾವಣೆಗೆ ಒಳಪಟ್ಟರು. ಮುಂದೆ ಕ್ರಿ.ಪೂ. ೫೮೭ರ[೨] ಸುಮಾರಿಗೆ ಬೆಬಿಲೋನಿಯರು ದಕ್ಷಿಣ ಭಾಗವನ್ನು ಆಕ್ರಮಿಸಿ ಜೆರುಸಲೇಂನ ದೇವಾಲಯವನ್ನು ಒಡೆದರು. ಸಾಕಷ್ಟು ಯಹೂದಿಗಳನ್ನು ಸೆರೆಯಾಳುಗಳಾಗಿ ಬೆಬಿಲೋನಿಯಾಗೆ ಒಯ್ದರು. ಆದರೆ ಈ ಅವಧಿಯಲ್ಲಿ ಈ ಹಿಂದೆ ಉತ್ತರ ಭಾಗದಲ್ಲಿರುವವರು ತಮ್ಮ ಮೂಲತನವನ್ನು ಕಳೆದುಕೊಂಡಂತೆ ಈ ಯಹೂದಿಗಳು ಬದಲಾಗಲಿಲ್ಲ. ತಮ್ಮ ಸಂಸ್ಕೃತಿಯನ್ನು ಇವರು ಕಟ್ಟುನಿಟ್ಟಾಗಿ ಉಳಿಸಿಕೊಳ್ಳುತ್ತಾ ನಡೆದಿದ್ದರು. ಇದಕ್ಕೆ ಪ್ರೇರಣೆ ಇತ್ತದ್ದು ಎಜಾಕಿಲ್. ಮುಂದೆ ಪರ್ಷಿಯಾದ ದೊರೆ ಸೈರುಸ್‌ನು ಬೆಬಿಲೋನಿಯಾವನ್ನು ಆಕ್ರಮಿಸಿಕೊಂಡಾಗ ಯಹೂದಿಗಳು ಸೆರೆಯಿಂದ ಮರಳಿ ಹೋಗಲು ಅವಕಾಶವಿತ್ತು. ಕೆಲವರು ಬೆಬಿಲೋನಿಯಾದಲ್ಲಿ ಉಳಿದರೂ ಮರಳಿಹೋದ ಯಹೂದಿಯರು ಒಡೆದ ದೇವಾಲಯವನ್ನು ಮರಳಿ ನಿರ್ಮಿಸಿದರು.

---

೨. ಜೆರುಸಲೇಂ ನಗರ ಯಹೂದಿಗಳು, ಕ್ರೈಸ್ತರು ಮತ್ತು ಮುಸ್ಲಿಮ್ ಈ ಮೂರು ಧರ್ಮ ಗಳವರಿಗೂ ಪವಿತ್ರ ಸ್ಥಳವಾಗಿದೆ. ಯಹೂದಿಗಳಿಗೆ ಇದು ಇವರ ಮೊದಲ ಸಾಮ್ರಾಜ್ಯದ ರಾಜಧಾನಿ. ಮುಂದೆ ಇಲ್ಲಿಯೇ ಇವರ ಮೊದಲ ದೇವಾಲಯ ಸಾಲೋಮನ್‌ನಿಂದ ನಿರ್ಮಿತವಾಯಿತು ; ಕ್ರೈಸ್ತರಿಗೆ ಈ ನಗರ ಪವಿತ್ರವಾಗಿರುವುದು ಯೇಸುವಿನ ಜೀವಿತದ ಹಲವು ಕಾಲ ಇಲ್ಲಿ ಉರುಳಿರುವದರೊಂದಿಗೇ ಈತನನ್ನು ಸಮಾಧಿ ಮಾಡಿದ್ದು ಇಲ್ಲಿಯೇ. ಮುಸ್ಲಿಮರಿಗೆ ಈ ನಗರ ಪವಿತ್ರವಾಗಿರುವುದು, ಪ್ರವಾದಿ ಮುಹಮ್ಮದ್‌ರು ಸ್ವರ್ಗಕ್ಕೆ ಏರಿದ್ದು ಈ ನಗರದಿಂದ ಎಂಬ ನಂಬಿಕೆ ಇರುವುದರಿಂದ ; ಮೆಕ್ಕಾ, ಮದೀನ ನಂತರದ ಸ್ಥಾನ ಇವರಲ್ಲಿ ಈ ನಗರಕ್ಕೆ ಇದೆ.

ಕ್ರಿ.ಪೂ. ೩೦೦ ರಿಂದ ೨೦೦ರ ನಡುವಿನ ಅವಧಿಯಲ್ಲಿ ಯಹೂದಿ ಸಾಮ್ರಾಜ್ಯ ಅಲೆಕ್ಸಾಂಡರ್‌ನನ್ನು ಒಳಗೊಂಡಂತೆ ಹಲವು ವಿದೇಶಿಯರ ಆಡಳಿತಕ್ಕೆ ಒಳಪಟ್ಟಿತ್ತು. ಇದು ಕ್ರಿ.ಪೂ. ೬೩ರಲ್ಲಿ ರೋಮನ್‌ರ ಆಡಳಿತಕ್ಕೆ ಸಿಲುಕಿದಾಗ ಯಹೂದಿಗಳು ತುಂಬ ಸಂಕಷ್ಟಕ್ಕೆ ಒಳಗಾದರು. ಹಲವರು ತಲೆತಪ್ಪಿಸಿಕೊಂಡು ದೇಶಾಂತರ ಹೋದರು. ಇಲ್ಲಿಯೇ, ಯಹೂದಿಗಳಲ್ಲಿಯೇ ಹುಟ್ಟಿದ ಯೇಸು ಮುಂದೆ ಯಹೂದಿಗಳ ಚಕ್ರವರ್ತಿ ಎಂಬ ಹಂತಕ್ಕೆ ಏರಿಕೊಂಡ. ಆದರೆ ರೋಮನರು ತಮ್ಮ ಸಾಮ್ರಾಜ್ಯದಲ್ಲಿ ಬೇರೆ ಚಕ್ರವರ್ತಿ ಇಲ್ಲ ಎಂದು ಪ್ರತಿಬಂಧಿಸಿದರು. ಯೇಸುವಿನ ಅನುಯಾಯಿಗಳು ತಮ್ಮನ್ನು ಕ್ರೈಸ್ತರು ಎಂದು ಕರೆದುಕೊಂಡು, ದೇವರೇ ಮೈಸಯ್ಯನಾಗಿ ಯೇಸು ಪ್ರಭುವನ್ನು ಕಳಿಸಿದ್ದಾನೆ ಎಂದು ನಂಬಿದರೆ, ಯಹೂದಿಗಳು ಈ ನಂಬಿಕೆಗೆ ಹೊರತಾಗಿ ತಮ್ಮ ಸಾಂಪ್ರದಾಯಿಕ ನಂಬಿಕೆಗಳಲ್ಲಿಯೇ ಉಳಿದರು. ಈ ಅವಧಿಯಲ್ಲಿ ಮತ್ತೆ ಯಹೂದಿಯರ ದೇವಾಲಯ ಕ್ರಿ.ಶ. ೭೦ರಲ್ಲಿ ಕೆಡವಲ್ಪಟ್ಟಿತು. ಯೇಸುವನ್ನು ಶಿಲುಬೇಗೇರಿಸುವಲ್ಲಿ ನಡೆದ ಕಾರ್ಯದಲ್ಲಿ ಯಹೂದಿಗಳ ಪಾಲೂ ಇದೆ. ಹೀಗಾಗಿ ಇವರು ಅಪವಾದಕ್ಕೆ ಒಳಗಾದರು. ರೋಮನರ ವಿಜಯ ಯಹೂದಿಗಳನ್ನು ಮತ್ತೆ ಆಘಾತದಲ್ಲಿ ಕೆಡವಿದರೂ ಮುಂದೆ ಇವರಿಗೆ ಸುವರ್ಣ ಯುಗವನ್ನೇ ತಂದಿತು. ಯಹೂದಿಯರ ಹೋರಾಟ ಸಫಲತೆಯ ಹಾದಿಯಲ್ಲಿ ಸಾಗಿತು. ಜೆರುಸಲೇಮ್‌ನಲ್ಲಿ ಇವರಿಗೆ ಸ್ಥಾನ ನೀಡಿದಂತೆ ಉಳಿದ ಭಾಗಗಳಲ್ಲೂ ಇವರು ತಮ್ಮ ಸಾಂಸ್ಕೃತಿಕತೆಯನ್ನು ಬೆಳೆಸಿಕೊಳ್ಳಲು ಉತ್ತಮ ಅವಕಾಶ ಬಂದಿತು. ಬೆಬಿಲೋನಿಯಾ, ಗೆಲಿಲೀಗಳಲ್ಲಿ 'ಯಶೀವಾ'ಗಳೆಂದು ಕರೆಯುವ ಪಾಠಶಾಲೆಗಳು ಅಧ್ಯಯನ ಕೇಂದ್ರ ಗಳಾಗಿ ವಿದ್ವಾಂಸರಿಗೆ ಮನ್ನಣೆ ತರತೊಡಗಿದವು. ಪಾರಂಪರಿಕ ಯಹೂದಿ ನಂಬಿಕೆ ಮತ್ತು ನಿಯಮಗಳು 'ಮಿಷ್ನಾ'ಗಳೆಂದು ಸಂಕಲನಗೊಂಡವು. ವಿದ್ವಾಂಸರು ಇವಕ್ಕೆ ಬರೆದ ವಿವರಣೆಗಳು 'ಗೆಮಾರಾ'ಗಳೆಂದು ಪ್ರಸಿದ್ಧಿಗೆ ಬಂದವು. ಈ ಮಿಷ್ನ ಮತ್ತು ಗೆಮಾರಾಗಳು 'ತಾಲಮೂದ್' ಎಂಬ ಸ್ವರೂಪದಲ್ಲಿ ಇವರಿಗೆ ಎರಡನೆ ಬೈಬಲ್ ಅನ್ನು ನೀಡಿದವು. ಯಹೂದಿಗಳ ಪವಿತ್ರ ಗ್ರಂಥವಾಗಿ ಆನಂತರ ಇದು ಗೌರವ ಪಡೆದುಕೊಳ್ಳುತ್ತ ಬಂದಿತು.

ಕ್ರಿ.ಶ. ೧೦೦೦ದ ನಂತರ ಸ್ಪೈನ್‌ನನ್ನು ಕೇಂದ್ರವಾಗಿಸಿಕೊಂಡ ಯಹೂದಿ ಪಂಥ ಮತ್ತಷ್ಟು ಉಜ್ವಲವಾಗಿ ತನ್ನ ಸ್ವರೂಪವನ್ನು ಬೆಳೆಸಿಕೊಂಡಿತು. ಈ ಅವಧಿಯಲ್ಲಿ ಯಹೂದಿಗಳು ಅಷ್ಕೆನಾಜಿಂ ಮತ್ತು ಸೆಪರ್ದಿಂ ಎಂದು ಎರಡು ಮುಖ್ಯ ಕವಲುಗಳಾಗಿ ಒಡೆದುಕೊಂಡರು. ಮಧ್ಯ ಮತ್ತು ಪೂರ್ವ ಯೂರೋಪಿನ ಭಾಗಗಳಲ್ಲಿ ಹರಡಿಕೊಂಡವರು

ಅಷ್ಕೆನಾಜಿಗಳೆಂದು ಗುರುತಿಸಿಕೊಳ್ಳಲಾರಂಭಿಸಿದರೆ, ಸ್ಪೈನ್‌ನಿಂದ ಪೋರ್ಚುಗಲ್ ಮತ್ತು ಮೆಡಿಟರೇನಿಯನ್ ಸಮುದ್ರದ ಸುತ್ತ ಹರಡಿಕೊಂಡವರು ಸೆಪರ್ದಿಂ ಎಂದುಕೊಂಡರು. ಈ ಎರಡೂ ಕವಲುಗಳಲ್ಲಿ ಕ್ರಮೇಣ ಆಹಾರ, ಉಡುಪು ಮತ್ತು ಕಲೆಗಳಲ್ಲಿ ವಿಭಿನ್ನತೆ ಬೆಳೆಯಿತು. ಅಷ್ಕೆನಾಜಿಗಳು ತಮ್ಮ ಮೂಲದ ಹೀಬ್ರೂವಿನಿಂದಲೇ ತಾವು ನೆಲೆಗೊಂಡಲ್ಲಿನ ಪ್ರದೇಶದ ಭಾಷೆಯಾಗಿದ್ದ ಅಂದಿನ ಜರ್ಮನ್‌ನಿಂದ ಸಮ್ಮಿಶ್ರಗೊಂಡ ಜುದೋ-ಜರ್ಮನ್‌ನನ್ನು ಹುಟ್ಟುಹಾಕಿಕೊಂಡಿದ್ದರು. ಮುಂದೆ ಇದು ಸಾಮಾನ್ಯ ರೂಪ ಪಡೆದು 'ಯಿದ್ದಿಷ್' ಎಂದು ನಿಂತಿತು. ಸೆಪರ್ದಿಗಳ ಭಾಷೆ 'ಲದೀನೋ' ಎಂದು ಬೆಳೆಯಿತು.

ಜಗತ್ತಿನ ಮಾನವೇತಿಹಾಸದಲ್ಲಿ ತುಂಬ ಪ್ರಸಿದ್ಧರಾದ ಹಲವು ವ್ಯಕ್ತಿಗಳಲ್ಲಿ ಯಹೂದಿಗಳು ಮೊದಲಿಗರಾಗಿದ್ದು ಹಲವು ಕ್ಷೇತ್ರಗಳಲ್ಲಿ ಇವರು ತಮ್ಮ ಸಾಧನೆಗಳನ್ನು ತೋರುತ್ತಿದ್ದಾರೆ. ಸ್ಪಿನೋಜ ತತ್ವಶಾಸ್ತ್ರದಲ್ಲಿ ಐರೋಪ್ಯ ವೈಚಾರಿಕತೆಗೆ ಒಂದು ಹೊಸ ಅಲೆ ತರಲು ಕಾರಣವಾಗಿರುವಂತೆಯೇ, ಜಗತ್ತನ್ನೇ ಬೆರಗುಗೊಳಿಸಿದ ಐನ್‌ಸ್ಟಿನ್, ಕಾಲ್‌ಮಾರ್ಕ್ಸ್, ಫ್ರಾಯ್ಡ್, ಟ್ರಾಟ್‌ಸ್ಕಿ, ಬರ್ಗ್‌ಸನ್, ಕಾಫ್ಕ ಮೊದಲಾಗಿ ಹಲವರು ಯಹೂದಿ ಮೂಲದವರು.

ಸಮೃದ್ಧ ಸಾಂಸ್ಕೃತಿಕ ಪರಂಪರೆ ಹೊಂದಿರುವ ಈ ಜನಾಂಗ ಐರೋಪ್ಯ ಖಂಡದ ಹಲವೆಡೆಗಳಲ್ಲಿ ತನ್ನ ಪ್ರಭಾವ ಬೀರಿಕೊಳ್ಳುತ್ತ ಬರುತ್ತಿರುವಾಗಲೇ ಹತ್ತೊಂಬತ್ತನೇ ಶತಮಾನದಲ್ಲಿ ಹುಟ್ಟಿಕೊಂಡ ಜನಾಂಗ ದ್ವೇಷಕ್ಕೆ ಗುರಿಯಾಯಿತು. ಇದಕ್ಕೆ ಮುಖ್ಯವಾಗಿ ಕಾರಣವಾದದ್ದು ಇವರಲ್ಲೇ ಹುಟ್ಟಿಕೊಳ್ಳುತ್ತ ಬಂದಿದ್ದ ಯಹೂದಿ ವಾದ. ತಮ್ಮದೇ ಆದ ಧಾರ್ಮಿಕ ನೆಲೆಯ ಭೂಮಿಯನ್ನು ಪಡೆದುಕೊಳ್ಳಬೇಕು ಎಂಬ ಹಂಬಲ ಯಹೂದಿಗಳಲ್ಲಿ ಸಹಜ ಎನ್ನುವಂತೆ ತೋರುತ್ತಿದ್ದರೂ, ಮುಂದೆ ಇದೇ ಪ್ಯಾಲೆಸ್ಟೈನ್‌ನನ್ನು ಟರ್ಕಿಯರಿಂದ ಬಿಡಿಸಿ ಯಹೂದಿಗಳಿಗೆ ಕೊಡುವಲ್ಲಿ ಬ್ರಿಟನ್ ದೇಶ ಪ್ರಧಾನ ಪಾತ್ರ ವಹಿಸುವಂತಾಗಿ ಮೊದಲ ವಿಶ್ವಯುದ್ಧದ ಕಾರಣ ಗಳಲ್ಲಿ ಪ್ರಮುಖ ಪಾತ್ರವಹಿಸಿತು.

ಆನಂತರ ಜರ್ಮನಿಯಲ್ಲಿ ಆಡಳಿತಕ್ಕೆ ಬಂದ ಹಿಟ್ಲರ್‌ನ ಕಾಲ ಯಹೂದಿಯರ ಬದುಕನ್ನು ಅತಂತ್ರಕ್ಕೆ ಸಿಲುಕಿಸಿತು. ಯಹೂದಿಯರ ರಾಷ್ಟ್ರೀಯತೆಯನ್ನು ಇವರಿಗೆ ಇಲ್ಲದಂತಾಗಿಸಿ, ಇವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುತ್ತ, ಸಿನಗಾಗ್‌ಗಳನ್ನು ಒಡೆಯಲಾಯಿತು. ಸಾವಿರಾರು ಯಹೂದಿಯರನ್ನು ಸೆರೆಯಾಗಿ ಹಿಡಿದು ಡೇರೆಗಳಲ್ಲಿ

ಕೊಳೆ ಹಾಕಲಾಯಿತು. ಆರ್ಯಶ್ರೇಷ್ಠತ್ವ ಘೋಷಣೆಯ ಹಿಟ್ಲರ್‌ನ ನಿರಂಕುಶತೆ ಯೂರೋಪಿನ ಇತರೆಡೆಗಳಲ್ಲೂ ಯಹೂದಿಯರ ಮೇಲೆ ದ್ವೇಷಕ್ಕೆ ಇಂಬುಗೊಟ್ಟಿತು. ಯಹೂದಿಗಳ ಬದುಕು ಕಾಲಾಂತರದಲ್ಲಿನ ಅಲೆಮಾರಿತನಕ್ಕೆ ಮತ್ತೆ ಸಿಲುಕಿಕೊಂಡು ಬಿಕ್ಕಟ್ಟಿಗೆ ಒಳಗಾಯಿತು. ೧೯೪೫ರ ಮುಕ್ತಾಯದ ವೇಳೆಗೆ ಯಹೂದಿಯರ ನರ ಮೇಧ ಒಂಬತ್ತು ಮಿಲಿಯನ್ ತಲುಪಿತ್ತು ! ಒಂದು ಮಿಲಿಯನ್ ಮಕ್ಕಳೂ ಇದರಲ್ಲಿ ಒಳಗೊಂಡಿದ್ದುದು ಅಮಾನವೀಯವಾದ ಒಂದು ಕಾಲಘಟ್ಟಕ್ಕೆ ಕರಿಗುರುತಾಗಿದೆ.

ಇಂದು ಯಹೂದಿಗಳು ಜಗತ್ತಿನಾದ್ಯಂತ ಸುಮಾರು ೧೮ ಮಿಲಿಯನ್ ಸಂಖ್ಯೆ ಯಲ್ಲಿದ್ದಾರೆ. ಇಸ್ರೇಲ್, ಅಮೆರಿಕಾ ಮತ್ತು ರಷಿಯಾದಲ್ಲಿ ಇವರು ಹೆಚ್ಚು ಪ್ರಮಾಣ ದಲ್ಲಿದ್ದರೂ ಇವರ ಸಮಸ್ಯೆಗಳು ಎಲ್ಲೆಡೆಗಳಲ್ಲಿಯೂ ಗಂಭೀರವಾಗಿಯೇ ಮುಂದುವರಿದು ಕೊಳ್ಳುತ್ತಿವೆ. ಜಗತ್ತಿನ ಪ್ರಭಾವಿ ಧರ್ಮಗಳಾಗಿರುವ ಕ್ರಿಶ್ಚಿಯನ್ ಮತ್ತು ಇಸ್ಲಾಂಗಳ ಹುಟ್ಟಿಗೆ ತನ್ನೊಳಗಿನಿಂದಲೇ ಪ್ರೇರೇಪಣೆ ನೀಡಿರುವ ಯಹೂದಿ ಧರ್ಮ ತನ್ನ ಸಾಂಸ್ಕೃತಿಕ ವೈಶಿಷ್ಟ್ಯತೆಯಿಂದಲೇ ಕಾಲಾಂತರದುದ್ದಕ್ಕೂ ಬಿಕ್ಕಟ್ಟಿಗೆ ಒಳಗಾಗುತ್ತ ಬಂದಿದ್ದರೂ ಮತ್ತೆ ಮತ್ತೆ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳುತ್ತಲೇ ಬಂದಿದೆ.

ಎರಡು : ಯಿದ್ದಿಷ್ ಭಾಷೆ ಮತ್ತು ಸಾಹಿತ್ಯ

ಹೀಬ್ರೂ-ಜರ್ಮನ್‌ಗಳ ಸಮ್ಮಿಶ್ರಣದೊಂದಿಗೆ ಒಂದು ಹೊಸತನದಲ್ಲಿ ಯಿದ್ದಿಷ್ ಭಾಷೆ ಸಾವಿರ ವರ್ಷಗಳ ಹಿಂದೆ ಹುಟ್ಟಿಕೊಂಡಿರುವುದನ್ನು ಈ ಹಿಂದೆ ಸೂಚಿಸಲಾಗಿದೆ. ಆಗ ಇದು ಹಲವು ಭಾಷೆಗಳಂತೆ ಜನಪದರ ಗ್ರಾಮ್ಯ ಭಾಷೆಯಾಗಿಯೇ ಇತ್ತು. ಆಡು ಮಾತಿನ ಭಾಷೆಯಾಗಿದ್ದರೂ ಯಿದ್ದಿಷ್‌ನಲ್ಲಿ ಬರಹ ಇರಲಿಲ್ಲ. ಇದಕ್ಕೆ ಮುಖ್ಯ ಕಾರಣ ಬರಹಕ್ಕೆ ಯಹೂದಿ ವಿದ್ವಾಂಸರು ಹೀಬ್ರೂವನ್ನೇ ಬಳಸುತ್ತಿದ್ದುದಾಗಿತ್ತು. ಆದರೆ ೧೨ ಮತ್ತು ೧೩ನೇ ಶತಮಾನದ ಅವಧಿಯಲ್ಲಿ ಯಿದ್ದಿಷ್ ಭಾಷೆಯಲ್ಲಿಯೇ ಸ್ವತಂತ್ರ ಕೃತಿಗಳು ರಚನೆಗೊಂಡವು. ಹೆಂಗಸರು ಮತ್ತು ಸಾಮಾನ್ಯರು ಈ ಭಾಷೆಯ ಮೂಲಕ ಧಾರ್ಮಿಕ ಹಾಗೂ ಸಾಹಿತ್ಯದ ತಿಳಿವು ಪಡೆಯಲಿ ಎಂಬ ಆಶಯವೇ ಈ ಭಾಷೆ ಬರಹದ ರೂಪ ತಾಳುವಂತೆ ಮಾಡಿತ್ತು. ಬೈಬಲ್, ಪ್ರಾರ್ಥನಾ ಗ್ರಂಥಗಳು ಮತ್ತು ಧಾರ್ಮಿಕ ಕವಿತೆಗಳು ಜರ್ಮನ್ ಮತ್ತು ಇತಾಲಿಯನ್ ಭಾಷೆಯಿಂದ ಮಧ್ಯಕಾಲೀನ ಅವಧಿಯಲ್ಲಿ ಯಿದ್ದಿಷ್ ಭಾಷೆಯಲ್ಲಿ ರೂಪಾಂತರ ತಾಳತೊಡಗಿದ್ದವು. ಯಹೂದಿ ಜನಪದ ಗಾಯಕರು ಮತ್ತು ಹಾಸ್ಯಗಾರರು ಈ ಮಾದರಿಗಳ ಅನುಕರಣೆಯಲ್ಲಿ

ಯಿದ್ದಿಷ್ ಭಾಷೆಯನ್ನು ಬಳಸಲಾರಂಭಿಸಿದ್ದರು. ಇವುಗಳಲ್ಲಿ ಹೆಚ್ಚಿನವು ರಾಜರು ಮತ್ತು ಅವರ ಹೆಂಗಳೆಯರ ಪ್ರಣಯದ ಕತೆಗಳು ; ಮೊದಲಿನ ಯಿದ್ದಿಷ್ ಕೃತಿ ಲಭ್ಯವಿರುವುದು ಜರ್ಮನ್ ಮೂಲದ ಯಹೂದಿಯಾದ ಎಲಿಜ ಲೆವೀಟ ಕಿರುಕುಳದಿಂದ ಇಸ್ರೇಲಿಗೆ ಹೋಗಿ ನಿಂತ ಕಥಾನಕದ ಒಂದು ವೀರಗಾಥೆ. ಇತಾಲಿಯನ್ ಮೂಲವನ್ನು ಇದರಲ್ಲಿ ಯಹೂದಿಗಳಿಗೆ ಅಳವಡಿಸಲಾಗಿತ್ತು. ಈ ಅವಧಿಯಲ್ಲಿಯೇ ಹಲವು ಕೃತಿಗಳು ಯಿದ್ದಿಷ್‌ನಲ್ಲಿ ರಚನೆಗೊಂಡವು. ಯಿದ್ದಿಷ್ ಸಾಹಿತ್ಯ ಹೀಗೆ ಬೆಳೆಯುತ್ತಿದ್ದ ಸಂದರ್ಭ ದಲ್ಲಿಯೇ ೧೬೧೮ ರಿಂದ ೪೮ರವರೆಗೆ, ಮೂವತ್ತು ವರ್ಷಗಳವರೆಗೆ ನಡೆದ ಯುದ್ಧ ಇಲ್ಲಿನ ಯಹೂದಿಯರನ್ನು ಈ ನೆಲದಿಂದ ಒಕ್ಕಲೆಬ್ಬಿಸಿ ಇವರು ಹೆಚ್ಚು ಪ್ರಮಾಣದಲ್ಲಿ ಪೋಲೆಂಡ್ ಆಶ್ರಯಿಸುವಂತೆ ಮಾಡಿತು. ಆನಂತರ ಯಿದ್ದಿಷ್ ಭಾಷೆ ಮತ್ತೆ ಸಾಹಿತ್ಯ ಸೃಷ್ಟಿಯನ್ನು ಕಂಡುಕೊಳ್ಳಲು ೧೮ನೇ ಶತಮಾನದ ಕೊನೆಯ ಭಾಗದವರೆಗೆ ಕಾಯ ಬೇಕಾಗುವಂತೆ ಮಾಡಿತು.

ಮಧ್ಯಕಾಲೀನ ಅವಧಿಯಲ್ಲಿ ರಚನೆಗೊಂಡಿದ್ದ ಯಿದ್ದಿಷ್ ಸಾಹಿತ್ಯ ಹೆಚ್ಚಿನ ಪ್ರಮಾಣದಲ್ಲಿ ಧಾರ್ಮಿಕ ನೆಲೆಯದ್ದೇ ಆಗಿತ್ತು. ಮತ್ತೆ ಇದೇ ನೆಲೆಯನ್ನು ಹೊಸತನಕ್ಕೆ ಹೊರಳಿಸಿಕೊಂಡ ಯಿದ್ದಿಷ್ ಸಾಹಿತ್ಯ ತನ್ನಲ್ಲಿ ಆಧುನಿಕತೆಯನ್ನು ಒಳಗೊಂಡಿತು. ಮೆಂದೆಲ್ ಎಂದೇ ಪ್ರಖ್ಯಾತನಾದ ಮೆಂದೆಲ್ ಮೋಖೆರ್ ಸ್ಫೋರಿಮ್ 'ಆಧುನಿಕ ಯಿದ್ದಿಷ್ ಸಾಹಿತ್ಯ ಪಿತಾಮಹ'ನಾಗಿ ಈ ಭಾಷೆಯಲ್ಲಿ ಮಾರ್ಗ ಸಾಹಿತ್ಯದ ಗಾಂಭೀರ್ಯ ವನ್ನು ತಂದ. ಈ ಮೆಂದಲ್‌ನಿಂದಲೇ ಪ್ರೇರಣೆ ಪಡೆದ ಶೊಲೆಮ್ ಅಲೈಷೆಮ್ ಯಿದ್ದಿಷ್ ಸಾಹಿತ್ಯಕ್ಕೆ ಜಾನಪದ ಸತ್ವವನ್ನು ಕೂಡಿಸಿದ. ಜಗತ್ತಿನ ಮಹಾ ಮಾನವತಾವಾದಿ ಲೇಖಕರಲ್ಲಿ ಒಬ್ಬನಾದ ಈತನ ಮುಖ್ಯ ವಸ್ತು ಕೊನೆ ತಲುಪಲು ಹೋರಾಟ ನಡೆಸುವ ರೀತಿಯಲ್ಲಿ ಜಗತ್ ಸಾಹಿತ್ಯದಲ್ಲಿಯೇ ಅನನ್ಯದ್ದಾಗಿದೆ. (ಮೂಲತಃ ಪಶ್ಚಿಮ ರಷಿಯಾ ದವನಾದ ಈತ ಹಲವು ಯಹೂದಿಗಳಂತೆ ಅಮೆರಿಕೆಯಲ್ಲಿ ಕೊನೆಗಾಲವನ್ನು ಕಳೆದ.) ಐಸಾಕ್ ಲೈಬ್ ಪೆರೇತ್ಜ್ ಮತ್ತು ಶೊಲೆಮ್ ಅಶ್ಚ್ ಆಧುನಿಕ ಯಿದ್ದಿಷ್ ಸಾಹಿತ್ಯದ ಇನ್ನಿಬ್ಬರು ಲೇಖಕರು. ಆಧುನಿಕ ಐರೋಪ್ಯ ವಿಚಾರಧಾರೆಯಿಂದ ಪ್ರಭಾವಿತನಾಗಿದ್ದ ಪೆರೇತ್ಜ್ ತನ್ನ ಸುತ್ತಲೂ ಬರಹಗಾರರ ಒಂದು ತಂಡವನ್ನೇ ಕಟ್ಟಿಕೊಂಡಿದ್ದ. ಯಹೂದಿ ಧಾರ್ಮಿಕತೆಯನ್ನು ಸಾಹಿತ್ಯದೊಳಗೆ ತರಲು ಒಪ್ಪದಂತಿದ್ದ ಈತ ಕತೆಗಳೊಂದಿಗೆ ಕಾವ್ಯನಾಟಕಗಳನ್ನೂ ಬರೆದು ಸಂಪಾದಕತ್ವದ ಹೊಣೆಯನ್ನೂ ಹೊತ್ತಿದ್ದ. ಶೊಲೆಮ್

ಆಶ್ಚ್, ಬೈಬಲ್ ಆಧಾರಿತ ಕಾದಂಬರಿಗಳಿಂದ ಯಿದ್ದಿಷ್ ಸಾಹಿತ್ಯ ಬೆಳೆಸಿರುವ ಲೇಖಕ. ಈ ಅವಧಿಯ ಮತ್ತೊಬ್ಬ ಪ್ರಮುಖ ಲೇಖಕ ಐಸಾಕ್ ಜೋಷುವ ಸಿಂಗರ್. ತಾನು ಬದುಕಿದ ಅಲ್ಪಾವಧಿಯಲ್ಲಿಯೇ 'ಬ್ರದರ್ಸ್ ಅಷ್ಕೆನಾಜಿ'ಯಂಥ ಕಾದಂಬರಿ ರಚಿಸಿ, ಯಿದ್ದಿಷ್‌ನಲ್ಲಿ ದಾಸ್ತೋಯೆವ್‌ಸ್ಕಿಯ 'ಬ್ರದರ್ಸ್ ಕರಮಜೋವ್' ಕಾದಂಬರಿಗೆ ಸರಿಸಮನಾದ ಸೃಷ್ಟಿಶೀಲತೆ ತೋರಿದ. ಈತನ ತಮ್ಮನೇ ಐಸಾಕ್ ಬಾಷೆವಿಸ್ ಸಿಂಗರ್. ಯಿದ್ದಿಷ್ ಭಾಷೆಗಷ್ಟೇ ಅಲ್ಲದೆ ಯಿದ್ದಿಷ್ ಸಾಹಿತ್ಯಕ್ಕೂ ಜಗದ್ವಿಖ್ಯಾತಿ ತಂದ ಈತ ಸಿಂಗರ್ ಎಂದೇ ಪ್ರಸಿದ್ಧಿ ಪಡೆದು ಜಗತ್ತಿನಾದ್ಯಂತ ಓದುಗರನ್ನು ಪಡೆದುಕೊಂಡ ಈ ಶತಮಾನದ ಶ್ರೇಷ್ಠ ಲೇಖಕರಲ್ಲಿ ಒಬ್ಬ.

ಮೂರು : ಐಸಾಕ್ ಬಾಷೆವಿಸ್ ಸಿಂಗರ್

"ಸಾಹಿತ್ಯ ಚಕ್ರವರ್ತಿಗಳು ತಮ್ಮ ಮೂಲ ಜನಾಂಗದ ಸಂಸ್ಕೃತಿಯೊಂದಿಗೆ ತುಂಬ ಆಳವಾದ ಸಂಬಂಧ ಪಡೆದುಕೊಂಡಿರುತ್ತಾರೆ. ಇವರ ಇತಿಹಾಸ, ದೈವೀಸ್ವಭಾವ, ಅಭ್ಯಾಸಗಳು ಇವರ ಬಲಹೀನತೆ, ಶಕ್ತಿಸಾಮರ್ಥ್ಯ ಎಲ್ಲವನ್ನೂ ಇವರು ಚೆನ್ನಾಗಿ ಅರಿತಿರುತ್ತಾರೆ. ಇಂಥವರು ತಮ್ಮ ಜನ ಪಕ್ವಗೊಂಡು ಪರಂಪರೆಯೊಂದಿಗೆ ಗಟ್ಟಿಗೊಂಡಿದ್ದಾಗ ಇವರ ನಡುವಿನಿಂದ ಹುಟ್ಟಿಕೊಳ್ಳುತ್ತಾರೆ."

- ಇವು ಸಿಂಗರ್‌ನೇ ಒಂದೆಡೆಯಲ್ಲಿ ಹೇಳಿಕೊಂಡಿರುವ ಮಾತುಗಳು. ಈ ಮಾತುಗಳನ್ನು ಈತನಿಗೇ ಅನ್ವಯ ಮಾಡಬಹುದು. ಯಹೂದಿ ಜನಾಂಗ ಈ ಶತಮಾನದಲ್ಲಿ ಕಂಡುಕೊಂಡ ಏಳುಬೀಳಿನ ಬದುಕನ್ನು ಈ ಜನಾಂಗದ ಪರಂಪರೆ, ಇತಿಹಾಸ ದೊಳಗಿನಿಂದಲೇ ಸಾಹಿತ್ಯಕ ರೂಪವಾಗಿಸಿದವನು ಐಸಾಕ್ ಬಾಷೆವಿಸ್ ಸಿಂಗರ್. ಇವನು ಮೂಲತಃ ಪೋಲೆಂಡ್ ದೇಶದವನು. ವಾರ್ಸಾ ಸಮೀಪದ ರದ್‌ಜ್ಮಿನ್ ಪೇಟೆಯಲ್ಲಿದ್ದ ಇವರ ಮನೆತನ ತಲೆಮಾರುಗಳಿಂದಲೂ ಗೌರವದ ಸ್ಥಾನ ಪಡೆದಿತ್ತು. ಇವರದು ಯಹೂದಿಗಳಲ್ಲಿನ ಧರ್ಮಗುರುಗಳಾದ ರಬಾಯಿಗಳ ವಂಶ. ಇವನ ತಂದೆ ಪೆನ್‌ಷನ್ ಮೆನ್ನಿಮ್ ಸಿಂಗರ್. ಈತ ಹ್ಯಾಸ್ಡಿಕ್ ವಿದ್ವಾಂಸನಾಗಿದ್ದ. ಈತನ ತಂದೆ, ಅಂದರೆ ಐಸಾಕ್ ಬಾಷೆವಿಸ್‌ನ ಅಜ್ಜ ತಾಲಮದ್ ಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡಿ ಗೌರವ ಮತ್ತು ಪ್ರಸಿದ್ಧಿ ಪಡೆದಿದ್ದ ರಬಾಯಿಯಾಗಿದ್ದ. ಸಿಂಗರ್ ಹುಟ್ಟುವ ವೇಳೆಗೆ ಇವರ ವಂಶ ವಾರ್ಸಾ ನಗರಕ್ಕೆ ಬಂದು ನೆಲೆಸಿತ್ತು.

೧೯೦೪ರ ಜುಲೈ ೧೪ ರಂದು ಹುಟ್ಟಿದ ಸಿಂಗರ್‌ನ ಬಾಲ್ಯದ ಕೆಲವರುಷಗಳು ಇಲ್ಲಿಯೇ ಕಳೆದವು. ರಬಾಯಿಗಳಾದ ಇವರ ಮನೆಗೆ ಸದಾ ಜನ ತಮ್ಮ ತೊಂದರೆಗಳ ನಿವಾರಣೆಗೆಂದು, ಧಾರ್ಮಿಕ ಆಚರಣೆಗಳನ್ನು ನಡೆಸಲೆಂದು, ಸಲಹೆಗಳನ್ನು ಕೇಳಲೆಂದು ಬರುತ್ತಲೇ ಇರುತ್ತಿದ್ದರು. "ವಾರ್ಸಾದ ಕ್ರೋಚ್‌ಮಾಲ್ನಾ ಬೀದಿಯಲ್ಲಿದ್ದ ನನ್ನ ತಂದೆಯ ಮನೆ ಒಂದು ರೀತಿಯಲ್ಲಿ ಅಧ್ಯಯನ ಮಂದಿರವಾಗಿತ್ತು. ಅನೇಕ ರೀತಿಯ ಜನ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅಲ್ಲಿಗೆ ಬರುತ್ತಿದ್ದರು. ಅಲ್ಲಿ ಪ್ರಾರ್ಥನಾ ಸಭೆ ನಡೆಯುತ್ತಿತ್ತು. ಜನ ಕತೆ ಹೇಳುತ್ತಿದ್ದರು. ಮದುವೆಗಳೂ ನಡೆಯುತ್ತಿದ್ದವು. ಚಿಕ್ಕವನಿದ್ದಾಗ ನಾನು ನನ್ನ ಅಣ್ಣನೂ, ಗುರುವೂ ಆದ ಐ.ಜೆ. ಸಿಂಗರ್‌ನಿಂದ ಸ್ಪಿನೋಜಾ, ಮ್ಯಾಕ್ಸ್‌ನಾರ್ಡಾ ಮೊದಲಾದವರ ಧರ್ಮ ವಿರುದ್ಧವಾದ ಕ್ರಾಂತಿಕಾರಿ ವಾದಗಳೆಲ್ಲದರ ಪರಿಚಯ ಪಡೆದೆ. ನನ್ನ ತಂದೆ ತಾಯಿಯರಿಂದ ದೇವರನ್ನು ನಂಬದ ಸತ್ಯ ಪರಿಶೋಧಕರಿಗೆ, ದೇವರನ್ನು ನಂಬಿದವರು ನೀಡಬಹುದಾದ ಉತ್ತರಗಳನ್ನು ಕೇಳಿ ಕಲಿತೆ. ನಮ್ಮ ಮನೆಯಲ್ಲಿ, ನಮ್ಮಂಥ ಅನೇಕ ಮನೆಗಳಲ್ಲಿ ಯಿದ್ದಿಷ್ ದಿನ ಪತ್ರಿಕೆಯ ಅಂದಂದಿನ ಸಮಾಚಾರಗಳ ಚರ್ಚೆಯಂತೆಯೇ ಶಾಶ್ವತ ಸತ್ಯಗಳ, ನಿರಂತರ ಮೌಲ್ಯಗಳ ಕುರಿತ ಚರ್ಚೆಯೂ ಸಹಜವಾಗಿ ನಡೆಯುತ್ತಿತ್ತು. ಇದು ಅವರ ದಿನನಿತ್ಯದ ಬದುಕಿನ ಒಂದು ಅಂಗವಾಗಿತ್ತು." ಇವು ಸಿಂಗರ್‌ನೆ ತನ್ನ ಬಾಲ್ಯದ ಬಗೆಗೆ ಹೇಳಿಕೊಂಡಿರುವ ಮಾತುಗಳು. ಎಳೆಬಾಲ್ಯದಲ್ಲಿ ಕಂಡ ಸುತ್ತಲಿನ ಬದುಕು ಸಿಂಗರ್‌ನಿಗೆ ಕೊನೆಯುದ್ದಕ್ಕೂ ಆಂತರಿಕ ಸತ್ವವಾಗಿ ಬರವಣಿಗೆಗೆ ಹೊಸತನಗಳನ್ನು ಕೊಡುತ್ತಾ ಬಂದಿತು. ಈತನಿಗೆ ನೊಬೆಲ್ ಬಹುಮಾನವನ್ನು ತಂದುಕೊಟ್ಟ ಕೃತಿಯಾದ **'ಇನ್ ಮೈ ಫಾದರ್ಸ್ ಕೋರ್ಟ್'**ನಲ್ಲಿ ಈ ಬಾಲ್ಯಾವಧಿಯಲ್ಲಿ ಕಂಡ ಜೀವನದ ದಟ್ಟ ಚಿತ್ರಣವಿದೆ.

ಈ ಬಾಲ್ಯದ ಅವಧಿಯಲ್ಲಿ ಸಾಂಪ್ರದಾಯಿಕ ರೀತಿಯಲ್ಲಿ ರಬಾಯಿಯಾಗುವ ಶಿಕ್ಷಣವನ್ನು ತುಂಬ ಕಟ್ಟುನಿಟ್ಟಿನಲ್ಲಿ - ಯಹೂದಿಗಳ ಧಾರ್ಮಿಕ ಶಿಕ್ಷಣ ಮಾದರಿಯಲ್ಲಿ - ಪಡೆದ ಸಿಂಗರ್ ಯೌವನ ಅಡಿಯಿಡುವ ಅವಧಿಯಲ್ಲಿ ಮೂರ್ನಾಲ್ಕು ವರ್ಷಗಳ ಕಾಲವನ್ನು ತನ್ನ ಅಜ್ಜನ ಸ್ಟೈಪಲ್ ಆಗಿದ್ದ ಬಿಲ್ಗೋರೆಯಲ್ಲಿಯೂ ಕಳೆದು, ಯಹೂದಿಗಳ ಬದುಕಿನ ಆಳ ಅರಿವುಗಳನ್ನೆಲ್ಲ ತನ್ನ ಅರಿವಿನಲ್ಲಿ ಇರಿಸಿಕೊಂಡ. ಇವನ ಹಿರಿ ಅಣ್ಣನಾಗಿದ್ದ ಇಸ್ರಾಯಿಲ್ ಜೋಷುವ ಸಿಂಗರ್ ಇವನ ಮೇಲೆ ಬಾಲ್ಯದಲ್ಲಿಯೇ ತುಂಬ ಪ್ರಭಾವ ಬೀರಿದ್ದ. ವಾರ್ಸಾದಲ್ಲಿ ಪ್ರೊಫೆಸರ್ ಆಗಿದ್ದ ಅಣ್ಣ ಇಸ್ರಾಯಿಲ್ ಜೋಷುವನ ಜೊತೆ

ಇರಲು ಬಿಲ್ಗೋರೆಯಿಂದ ಬಂದ ನಂತರ ೧೯೨೭ರಲ್ಲಿ ಇಲ್ಲಿನ ಯಿದ್ದಿಷ್ ಪ್ರೆಸ್‌ನಲ್ಲಿ ಪತ್ರಕರ್ತ ನಾಗಿ ಸೇರಿದ. ಇಲ್ಲಿಯೇ ಇವನು ತನ್ನ ಸಾಹಿತ್ತಿಕ ಜೀವನವನ್ನು ಆರಂಭಿಸಿದ. ಆಗ ವಾರ್ಸಾ ನಗರ ಯಹೂದಿಗಳ ಸಾಂಸ್ಕೃತಿಕ ಕೇಂದ್ರವಾಗಿದ್ದು ಯಿದ್ದಿಷ್ ಸಾಹಿತ್ಯ ಆಗಲೇ ಹೊಸಗಾಳಿಯನ್ನು ಮೈಗೂಡಿಸಿಕೊಂಡಿತ್ತು. ಸಾಂಪ್ರದಾಯಿಕ ಯಹೂದಿ ಬದುಕಿನ ಚಿತ್ರ ದಲ್ಲಿ ಮೆಂದಲ್ ಪ್ರಸಿದ್ಧನಾಗಿದ್ದಂತೆ, ಪೆರೆತ್ಸ್‌ನ ಬರಹಗಳು ಇದಕ್ಕೆ ಹೊರತಾಗಿ ನಿಲ್ಲುವಂತೆ ಬರುತ್ತಿದ್ದವು.

ಸಿಂಗರ್‌ನ ಅಣ್ಣ ಇಸ್ರಾಯಿಲ್ ಜೋಷುವ ಈ ಅಂಶವನ್ನು ಒಪ್ಪಿಕೊಂಡರೂ ಯಹೂದಿ ಬದುಕಿನ ನೆಲೆಯನ್ನು ಬಗೆಯುವಂಥ ಮಾರ್ಗ ಕ್ರಮಿಸುತ್ತಿದ್ದ. ಬಾಷೆವಿಸ್ ಸಿಂಗರ್‌ನಿಗೆ ಈ ಎಲ್ಲವೂ ಒಂದು ಹೊಸ ದಿಕ್ಕನ್ನೇ ತೋರಿಸುತ್ತಿದ್ದವು. ಈ 'ಆಧುನಿಕತೆ'ಯ ಸಾಹಿತ್ಯವನ್ನು 'ಸಿಹಿವಿಷ' ಎಂದು ಕರೆಯುತ್ತಿದ್ದ ಸಿಂಗರ್‌ನ ತಂದೆ ತಮ್ಮ ಎರಡನೇ ಮಗನೂ ಸಾಹಿತ್ಯದ ಹಾದಿ ಹಿಡಿಯುವುದು ಬೇಕಿಲ್ಲ ಎಂಬ ಅಪೇಕ್ಷೆ ಹೊಂದಿದ್ದರು. ಆದರೆ ಸಿಂಗರ್ ಈ ವೇಳೆಗಾಗಲೇ ಕತೆಗಳ ರಚನೆಯೊಂದಿಗೆ 'ಸೇಟನ್ ಇನ್ ಗೋರೆ' ಎಂಬ ತನ್ನ ಮೊದಲ ಕಾದಂಬರಿಯನ್ನು ಬರೆದಿದ್ದ. ಹೀಬ್ರೂ, ಪೋಲಿಷ್ ಮತ್ತು ಜರ್ಮನ್ ಭಾಷೆಯ ಹಲವು ಕೃತಿಗಳನ್ನು ಯಿದ್ದಿಷ್‌ಗೆ ಅನುವಾದಿಸಿದ್ದ. ಥಾಮಸ್ ಮಾನ್‌ನ **'ದ ಮ್ಯಾಜಿಕ್ ಮೌಂಟನ್'** ಮತ್ತು ನುಟ್ ಹ್ಯಾಮ್‌ಸನ್‌ನ **'ದ ಹಂಗರ್'** ಕಾದಂಬರಿಗಳು ಈ ಅನುವಾದದಲ್ಲಿ ಸೇರಿದ್ದವು.

ಈ ಅವಧಿಯಲ್ಲಿ ಸಿಂಗರ್‌ನ ಮದುವೆ ರಷಲ್‌ಳೊಡನೆ ನಡೆದಿತ್ತು. ಆದರೆ ಇವಳೊಂದಿಗೆ ಇವನು ಹೆಚ್ಚು ಕಾಲ ಬಾಳಲಿಲ್ಲ. ಈ ವೇಳೆಗಾಗಲೇ ಯೂರೋಪಿ ನಾದ್ಯಂತ ಹಬ್ಬಿಕೊಂಡಿದ್ದ ಯಹೂದಿ ದ್ವೇಷದ ದಳ್ಳುರಿಯಿಂದ ಯಹೂದಿಗಳು ದೇಶಾಂತರ ಹೊರಟಿದ್ದರು. ಇಸ್ರಾಯಿಲ್ ಜೋಷುವ ೧೯೩೪ರಲ್ಲಿ ಅಮೆರಿಕೆಗೆ ವಲಸೆ ಹೋಗಿದ್ದ. ಮರುವರ್ಷವೇ ಐಸಾಕ್ ಸಿಂಗರ್‌ನೂ ಅಣ್ಣನ ಹಾದಿ ಹಿಡಿದು ಅಮೆರಿಕೆಗೆ ಹೋದ. ಇವನೊಂದಿಗೆ ಬಾರಲು ಒಪ್ಪದ ರಷಲ್ ಕಮ್ಯುನಿಸ್ಟ್ ಕಾರ್ಯಕರ್ತ ಳಾಗಿರಲು ಮಗುವಿನೊಂದಿಗೆ ಮಾಸ್ಕೋಗೆ ಹೋಗಿದ್ದಳು.

ಅಮೆರಿಕೆಯಲ್ಲಿ, ನ್ಯೂಯಾರ್ಕ್‌ನಿಂದ ಹೊರಡುವ 'ಜ್ಯೂಯಿಷ್ ಡೈಲಿ ಫಾರ್ವರ್ಡ್' ಪತ್ರಿಕೆಯಲ್ಲಿ ಪತ್ರಕರ್ತನಾಗಿ ಸೇರಿದ ಸಿಂಗರ್ ಒಂಬತ್ತು ವರ್ಷಗಳ ಕಾಲ ಸಾಹಿತ್ಯಕ ಬರವಣಿಗೆಯನ್ನೇ ನಿಲ್ಲಿಸಿದ್ದ. "ನಾನು ಈ ದೇಶಕ್ಕೆ ಬಂದಾಗ ಕೆಲವು

ವರ್ಷಗಳ ಕಾಲ ನನ್ನ ಬರವಣಿಗೆಯನ್ನು ನಿಲ್ಲಿಸಿದ್ದು ನಿಜ. ಓದುಗರಿಲ್ಲ ಎಂದು ಯೋಚಿಸಿದ್ದೆನೇನೋ, ನನಗೆ ಖಂಡಿತವಾಗಿ ಗೊತ್ತಿಲ್ಲ" ಎಂದು ಈತನೇ ಈ ಅವಧಿಯ ಬಗೆಗೆ ಹೇಳಿಕೊಂಡಿದ್ದಾನೆ. ಆದರೆ ಆನಂತರ ಮತ್ತೆ ಬರೆಯಲು ಆರಂಭಿಸಿದ ಸಿಂಗರ್ ತನ್ನ ಸೃಷ್ಟಿಶೀಲತೆಗೆ ಯಿದ್ದಿಷ್ ಭಾಷೆಯನ್ನೇ ಬಳಸಿದ. 'ಜ್ಯೂಯಿಷ್ ಡೈಲಿ ಫಾರ್ವರ್ಡ್' ಪತ್ರಿಕೆಯಲ್ಲಿ ಮೊದಲು ಪ್ರಕಟಗೊಳ್ಳುತ್ತಿದ್ದ ಇವನ ಬರಹಗಳು ಆನಂತರ ಅನುವಾದಗೊಳ್ಳಲು ಆರಂಭಿಸಿದವು. ಈತನ ಅಪೂರ್ವ ಕತೆಗಳಲ್ಲೊಂದಾದ '**ಜಿಂಫಲ್ ದ ಫೂಲ್**' ಕತೆಯನ್ನು ಸಾಲ್‌ಬೆಲೋ ಇಂಗ್ಲೀಷಿಗೆ ಅನುವಾದಿಸಿದಾಗಲೂ ಮೊದ ಮೊದಲು ಓದುಗರ ಆಸಕ್ತಿ ಆಶಾದಾಯಕವಾಗಿರಲಿಲ್ಲ. ಅನಂತರ ಮೆಲ್ಲಗೆ ಈತನ ಸಾಹಿತ್ಯ ಓದುಗರನ್ನು ಗಳಿಸಿಕೊಂಡಿತು. ಈತನ ಕತೆಗಾರಿಕೆಗೆ ಓದುಗರೊಂದಿಗೆ ವಿಮರ್ಶ ಕರೂ ಬೆರಗು ತೋರಿದರು. ಸಿಂಗರ್‌ನ ಬರಹಗಳೆಲ್ಲ ಅನುವಾದಗೊಳ್ಳುತ್ತ ಜಗತ್ತಿನಾದ್ಯಂತ ಕುತೂಹಲ ಹುಟ್ಟಿಸಿದವು. ಯಹೂದಿ ಬದುಕಿನ ದಟ್ಟ ಚಿತ್ರಣವನ್ನು ನೀಡುವುದರಲ್ಲಿ ಒಂದು ತೆರನ ಹೊಸ ಸಂವೇದನೆ ಮೂಡಿಸತೊಡಗಿದ್ದ ಈತನ ಸಾಹಿತ್ಯ, ಯಿದ್ದಿಷ್ ಭಾಷೆಯ ಲೇಖಕರು ಇದುವರೆಗೂ ತಮ್ಮ ಸಾಹಿತ್ಯದಲ್ಲಿ ತಂದಿರದಿದ್ದ ವ್ಯಾಪಕತೆಯನ್ನು ತನ್ನಲ್ಲಿ ತುಂಬಿಕೊಂಡಿದ್ದು ಓದುಗರಲ್ಲಿ ಮೆಚ್ಚುಗೆ ಗಳಿಸತೊಡಗಿತ್ತು.

ಹಲವರು ಬರೆಯಲು ಅಳುಕುವ ಪ್ರೇತ, ದೆವ್ವಗಳಂತವು ಸಿಂಗರ್‌ನ ಕತೆಗಳಲ್ಲಿ ತಾವೇ ಕತೆಗಳ ನಿರೂಪಣೆ ಮಾಡುವಲ್ಲಿ ಒಂದು ಕಾಲದ ಬದುಕನ್ನು ಪ್ರತೀಕಾತ್ಮಕವಾಗಿ ಕಟ್ಟತೊಡಗುವ ರೀತಿ ಜಗತ್ತಿನ ಆಧುನಿಕ ಸಾಹಿತ್ಯದಲ್ಲಿಯೇ ಅಪೂರ್ವವಾದದ್ದಾಗಿ ಯಹೂದಿಗಳ ಬದುಕಿನ ನೆಲೆಗೆ ಬಿಂಬವೊಂದನ್ನು ಹಿಡಿಯಲಾರಂಭಿಸಿತ್ತು, ಇಂಥ ಕತೆಗಳನ್ನು ಬರೆಯಲು ಇವನಿಗೆ ಮೃತದ ಹಾದಿ ಹಿಡಿದಿದ್ದ ಯಿದ್ದಿಷ್ ಭಾಷೆಯೂ ನೆರವಿಗೆ ಬಂದಿತ್ತು. "ನಾನು ದೆವ್ವಗಳ ಕತೆಗಳನ್ನು ಬರೆಯಬೇಕಿದೆ. ದೆವ್ವಗಳ ಕತೆಗಳಿಗೆ ಸಾಯುತ್ತಿರುವ ಭಾಷೆಯೊಂದೇ ಹೊಂದಿಕೊಳ್ಳಬಲ್ಲದು" ಎಂದು ಇವನೇ ಹೇಳಿದ್ದಾನೆ. '**ದ ಲಾಸ್ಟ್ ದೆಮನ್**'ನಂಥ ಕತೆಯನ್ನು ಒಂದು ದೆವ್ವವೇ ನಿರೂಪಿಸಿಕೊಳ್ಳುತ್ತದೆ. ಯಹೂದಿಗಳ ದೆವ್ವದ ನಂಬಿಕೆ ಈತನ ಸಾಹಿತ್ಯಕ್ಕೆ ಒಂದು ವಿನೂತನ ಸಂವಿಧಾನವನ್ನೇ ತಂದುಕೊಟ್ಟು ಕಾಲದೇಶಗಳನ್ನು ಮೀರುವ ಪ್ರಕ್ರಿಯೆಯಲ್ಲಿ ಧ್ವನಿಪೂರ್ಣವಾಗಿ ನೋವು, ನಲಿವು, ವಿಷಾದಗಳನ್ನೆಲ್ಲ ಮಿಡಿಯುತ್ತದೆ.

"ಅವರ ಕಥೆಗಳನ್ನು ಓದಿದಾಗ ಮಾನವನರಿವಿನ ಇತಿಹಾಸದ ಯಾವುದೋ

ಒಂದು ಮೂಲೆಯಲ್ಲಿ ಅವು ರಚಿತವಾದ ಹಾಗೆ ಭಾಸವಾಗುತ್ತದೆ. ಸಿಂಗರ್ ಕತೆಗಳು ಭವಿಷ್ಯಕಾಲದಿಂದ ಹಿಂದಿರುಗಿ ಬಂದಂತೆ ಅನ್ನಿಸಿದರೂ, ವಾಸ್ತವವಾಗಿ ಅವು ಅನಂತತೆಯ ಪ್ರದಕ್ಷಿಣೆಯನ್ನು ಹಿಮ್ಮುಖವಾಗಿ ಮುಗಿಸಿ ಬಂದಿರುತ್ತವೆ" ಎಂದು ವಿಲಿಯಂ ಗಾಸ್‌ನಂಥ ವಿಮರ್ಶಕ ಹೇಳಿದ್ದಾನೆ. ಆದರೆ ಹಿಮ್ಮುಖ ನಡೆಯ ಅನುಭವದಲ್ಲಿ ಈ ಕತೆಗಳು ಉಂಟುಮಾಡುವ ಪರಿಣಾಮ ಮತ್ತು ಒಟ್ಟು ನೋಟದತ್ತ ಅವಲೋಕಿಸಿದಾಗ ಸಿಂಗರ್‌ನಲ್ಲಿ ಈ ಅಂಶ ಎಷ್ಟು ಪ್ರಭಾವಯುತವಾಗಿ ಬಂದಿದೆ, ಸಫಲತೆಯನ್ನೂ ತಂದುಕೊಂಡಿದೆ ಎನ್ನುವುದನ್ನು ಕಾಣಬಹುದು. 'ಅಲೋನ್' ನಂಥ ಕಥೆಯಲ್ಲಿ ಯೂರೋಪ್‌ನಿಂದ ದೂರದ ಅಮೆರಿಕೆಯಲ್ಲಿನ ಮಿಯಾಮಿ ಬೀಚ್‌ನಲ್ಲಿಯೂ ಯಹೂದಿ ಪ್ರೇತವೊಂದರ ರೂಪ ಕಾಣಬರುತ್ತದೆ.

ಅಮೆರಿಕೆಗೆ ಬಂದ ನಂತರ ೧೯೪೦ರಲ್ಲಿ ಸಿಂಗರ್ ಎರಡನೆಯ ಮದುವೆಯನ್ನು, ಜರ್ಮನಿಯಿಂದ ಬಹಿಷ್ಕೃತಳಾಗಿ ಬಂದು ಒಂದು ಡಿಪಾರ್ಟ್‌ಮೆಂಟ್ ಸ್ಟೋರ್ಸ್‌ನಲ್ಲಿ ಸೇಲ್ಸ್‌ಕ್ಲರ್ಕ್‌ಳಾಗಿದ್ದ ಅಲ್ಮಾ ಹೈಮಾನ್‌ಳೊಂದಿಗೆ ಆದ. ಈಕೆಗೆ ಮೊದಲ ಮದುವೆಯಿಂದ ಎರಡು ಮಕ್ಕಳಿದ್ದವು. ಅಲ್ಮಾಳೊಂದಿಗೆ ತುಂಬು ಬಾಳನ್ನು ಬಾಳಿದ ಸಿಂಗರ್ ಮಾಸ್ಕೋಗೆ ರಷಲ್ ಕರೆದೊಯ್ದಿದ್ದ ಮಗುವನ್ನು ತನ್ನ ಬಳಿಗೆ ಕರೆಸಿಕೊಂಡಿದ್ದ.

ಸಿಂಗರ್ ಹಲವು ಭಾಷೆಗಳನ್ನು ಬಲ್ಲವನಾಗಿದ್ದ. ಮಾತೃಭಾಷೆಯಾದ ಯಿದ್ದಿಷ್‌ನೊಂದಿಗೆ ಪೋಲಿಷ್, ಜರ್ಮನ್, ಜೆಕ್, ರಷ್ಯನ್, ಇಂಗ್ಲೀಷ್‌ಗಳಲ್ಲದೆ ಹೀಬ್ರೂನಲ್ಲಿಯೂ ಪ್ರಾವೀಣ್ಯತೆ ಗಳಿಸಿಕೊಂಡಿದ್ದ. ಆರಂಭದಲ್ಲಿ ಯಿದ್ದಿಷ್‌ನೊಂದಿಗೆ ಹೀಬ್ರೂನಲ್ಲಿಯೂ ಬರೆಯುತ್ತಿದ್ದ. ತನ್ನ ಮೂಲಭಾಷೆಯಾದ ಯಿದ್ದಿಷ್‌ನಲ್ಲಿ ಮಿತಸಂಖ್ಯೆಯ ಓದುಗರನ್ನು ಮಾತ್ರ ಪಡೆದಿದ್ದ ಸಿಂಗರ್ ಇತರೆ ಭಾಷೆಗಳಲ್ಲಿ ಅಸಂಖ್ಯ ಓದುಗರನ್ನು ಗಳಿಸಿದ್ದ. ಆದರೆ ಮೂಲ ಯಿದ್ದೀಷ್‌ನ ಬರವಣಿಗೆಯ ಅನುಭವ ಅನುವಾದಗಳಲ್ಲಿ ಬರಲಾರದು ಎಂದು ಹಲವರು ಅಭಿಪ್ರಾಯಪಟ್ಟಿದ್ದಾರೆ. ಈ ಕಾರಣಕ್ಕಾಗಿ ಈತ ಅನುವಾದಕ್ಕೆ ತುಂಬ ಸೂಕ್ಷ್ಮವಾದ ಗಮನ ಇರಿಸಿಕೊಂಡಿದ್ದ. "ಇಂಗ್ಲೀಷ್ ಅನುವಾದ ನನಗೆ ವಿಶೇಷವಾಗಿ ಮುಖ್ಯವಾದದ್ದು. ಏಕೆಂದರೆ ಇತರೆ ಭಾಷೆಗಳಿಗೆ ಅನುವಾದವಾಗುವಾಗ ಇಂಗ್ಲೀಷ್ ಪ್ರತಿ ಆಕರವಾಗಿರುತ್ತದೆ" ಎಂದು ಸ್ವತಃ ಈತನೇ ಹೇಳಿಕೊಂಡಿದ್ದಾನೆ. ಇಂಗ್ಲೀಷ್ ಅನುವಾದಕರ ಜೊತೆ ತಾನೇ ಕುಳಿತು ಮೂಲಕ್ಕೆ ಆದಷ್ಟು ಹತ್ತಿರವಾಗುವಂತೆ ಅನುವಾದದ ಕಾರ್ಯವನ್ನು ಈತ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದ. "ಅನುವಾದ

ಯಾವಾಗಲೂ ಲೇಖಕನನ್ನು ಮುಕ್ಕುಗೊಳಿಸುವಂಥಹದು. ಇದು ಇವನನ್ನು ಕೊಲೆ ಮಾಡುವುದಿಲ್ಲ. ಇವನು ಒಳ್ಳೆಯವನಾಗಿದ್ದರೆ (ಅಂದರೆ ಇವನ ಸಾಹಿತ್ಯ) ಅನುವಾದದಲ್ಲಿಯೂ ಇವನು ಮೂಲದಂತೆಯೇ ಹೊರಹೊಮ್ಮಿಕೊಳ್ಳುತ್ತಾನೆ. ಇದನ್ನು ನಾನು ನನ್ನ ಸ್ವಂತ ಅನುಭವದಲ್ಲೇ ಕಂಡಿದ್ದೇನೆ" ಎಂದು ತನ್ನ ನಿದರ್ಶನವನ್ನೇ ನೀಡಿ ಕೊಂಡಿರುವ ಸಿಂಗರ್ ಅನುವಾದ ಪ್ರಕ್ರಿಯೆಯನ್ನು ಚೆನ್ನಾಗಿಯೇ ತಿಳಿದವನಾಗಿದ್ದ : "ಅನುವಾದ ಒಂದು ರೀತಿಯಲ್ಲಿ ನನಗೆ ಸಹಾಯ ಮಾಡಿದೆ. ಏಕೆಂದರೆ ನಾನು ನನ್ನ ಮೂಲದೊಂದಿಗೆ ಅನುವಾದವನ್ನು ಇರಿಸಿಕೊಂಡು ಅನುವಾದಕರೊಂದಿಗೆ ಮತ್ತೆ ಮತ್ತೆ ತಿದ್ದುತ್ತ ಹೋಗುತ್ತೇನೆ. ನನ್ನ ಬರವಣಿಗೆಯ ತೊಂದರೆಗಳನ್ನು ಇಂಥ ಸಂದರ್ಭಗಳಲ್ಲಿ ಕಂಡಿದ್ದೇನೆ."

ಸಿಂಗರ್‌ನಿಗೆ ಸಾಹಿತ್ಯ ಬದುಕಿನಲ್ಲಿ ಬದಲಾವಣೆ ತರುತ್ತದೆ ಎಂಬ ನಂಬಿಕೆ ಇರಲಿಲ್ಲ. "ಮಾನವ ದುರಂತವನ್ನು ಸ್ವಲ್ಪ ಕಾಲವಾದರೂ ಮರೆಯಲು ಕಲೆ ಒಂದು ಸಾಧನ ಅಷ್ಟೇ" ಎಂಬುದು ಇವನ ದೃಷ್ಟಿಕೋನ. ತತ್ವಶಾಸ್ತ್ರವನ್ನೂ ಒಳಗೊಂಡು ಹಲವು ವಿಷಯಗಳ ಬಗೆಗೆ ಆಳವಾದ ಜ್ಞಾನ ಪಡೆದಿದ್ದ ಈತ ತನ್ನ ಬರವಣಿಗೆಯ ಉದ್ದಕ್ಕೂ ಈ ಜ್ಞಾನವನ್ನು ತನ್ನ ಬರವಣಿಗೆಯೊಳಗೆ ಬಾಧಕವಾಗದಂತೆ ಎಚ್ಚರದಿಂದ ಕಾಯ್ದುಕೊಂಡಿದ್ದಾನೆ. ಇವನ ಸಾಹಿತ್ಯದಲ್ಲಿ ಡಾ. ಫಿಷಲ್‌ಸನ್‌ರಂಥ ಮೇಧಾವಿ ತತ್ವಜ್ಞಾನಿಯಂಥ ಪಾತ್ರವನ್ನು ಒಳಗೊಂಡು ರಬಾಯಿಗಳು, ಪ್ರೇಮಿಗಳು, ಮುದುಕಿಯರು, ಕಟುಕರು, ಭಿಕ್ಷುಕರು, ಸೂಳೆಯರು, ಅಲೆಮಾರಿಗಳು, ಮೊದಲಾಗಿ ಪಶುಪಕ್ಷಿಗಳ ಪಾತ್ರಗಳೆಲ್ಲ ಇವೆ. ಷೇಕ್ಸ್‌ಪಿಯರ್‌ನ ನಂತರ ಬದುಕಿನ ಎಲ್ಲ ರೀತಿಯ ಪಾತ್ರಗಳನ್ನೂ ಹೀಗೆ ಸಾಹಿತ್ಯದಲ್ಲಿ ತಂದಿರುವ ಲೇಖಕನೆಂದರೆ ಸಿಂಗರ್ ಒಬ್ಬನೇ.

ಗದ್ಯ ಲೇಖನದಲ್ಲಿಯೇ ಕಾವ್ಯಾತ್ಮಕತೆಯನ್ನು ಮೈಗೂಡಿಸಿಕೊಂಡಿರುವ ಈತನ ಲೇಖನಿಯಿಂದ ಸುಮಾರು ಇನ್ನೂರೈವತ್ತಕ್ಕೂ ಹೆಚ್ಚು ಕಥೆಗಳೂ, ಹತ್ತು ಕಾದಂಬರಿಗಳೂ, ಎರಡು ಆತ್ಮಕಥನಕ ಕೃತಿಗಳೂ ರಚಿತವಾಗಿವೆ. **'ಜಿಂಪೆಲ್ ದ ಫೂಲ್', 'ಎ ಫ್ರೆಂಡ್ ಆಫ್ ಕಾಫ್ಕ', 'ದ ಸಿಯಾನ್ಸ್ ಅಂಡ್ ಅದರ್ ಸ್ಟೋರೀಸ್', 'ಶಾರ್ಟ್ ಫ್ರೈಡೇ ಅಂಡ್ ಅದರ್ ಸ್ಟೋರೀಸ್', 'ಎ ಕ್ರೌನ್ ಆಫ್ ಫೆದರ್ಸ್ ಅಂಡ್ ಅದರ್ ಸ್ಟೋರೀಸ್', 'ಫ್ಯಾಷನ್ಸ್ ಅಂಡ್ ಅದರ್ ಸ್ಟೋರೀಸ್', 'ದ ಸ್ಪಿನೋಜ ಆಫ್ ಮಾರ್ಕೆಟ್ ಸ್ಟ್ರೀಟ್', 'ಓಲ್ಡ್ ಲವ್ ಅಂಡ್ ಅದರ್ ಸ್ಟೋರೀಸ್', 'ಎ ಲಿಟ್ಲ್ ಬಾಯ್ ಇನ್ ಸರ್ಚ್ ಆಫ್**

ಗಾಡ್', 'ಇಮೇಜ್ ಅಂಡ್ ಅದರ್ ಸ್ಟೋರಿಸ್', 'ದ ಡೆತ್ ಆಫ್ ಮೆಥುಸೆಲಾ ಅಂಡ್ ಅದರ್ ಸ್ಟೋರಿಸ್' ಇವನ ಕಥಾ ಸಂಕಲನಗಳು. 'ಕಲೆಕ್ಟೆಡ್ ಸ್ಟೋರಿಸ್ ಆಫ್ ಐಸಾಕ್ ಬಾಷೆವಿಸ್ ಸಿಂಗರ್' ಎಂದು ಆಯ್ದ ಕಥೆಗಳ ಸಂಕಲನವೂ ಇದೆ.

'ದ ಮ್ಯಾನರ್' ಮತ್ತು 'ಎಸ್ಟೇಟ್' ಒಂದೇ ಕಥಾನಕನವನ್ನು ಹಂಚಿಕೊಂಡಿರುವ ಕಾದಂಬರಿದ್ವಯಗಳಾದರೆ, 'ದ ಮ್ಯಾಜಿಸಿಯನ್ ಆಫ್ ಲುಬ್ಲಿನ್', 'ಎನಿಮೀಸ್ - ಎ ಲವ್ ಸ್ಟೋರಿ', 'ದ ಫ್ಯಾಮಿಲಿ ಮೊಸ್ಕಾಟ್', 'ಸೇಟನ್ ಇನ್ ಗೋರೆ', 'ಶೋಷ', 'ದ ಪೆನಿಟೆಂಟ್', 'ಸ್ಕಮ್' ಮತ್ತು 'ದ ಕಿಂಗ್ ಆಫ್ ದ ಫೀಲ್ಡ್ಸ್' ಇವನ ಕಾದಂಬರಿಗಳು. (ಕೊನೆ ಕಾದಂಬರಿಯನ್ನು ಸ್ವತಃ ಸಿಂಗರ್‌ನೇ ಇಂಗ್ಲಿಷ್‌ಗೆ ಅನುವಾದಿಸಿದ್ದಾನೆ) 'ಇನ್ ಮೈ ಫಾದರ್ಸ್ ಕೋರ್ಟ್' ಮತ್ತು 'ಲವ್ ಅಂಡ್ ಎಕ್ಸೈಲ್' ಇವನ ಆತ್ಮಕಥಾನಕಗಳು.

'ದ ಮ್ಯಾಜಿಸಿಯನ್ ಆಫ್ ಲುಬ್ಲಿನ್' ಮತ್ತು 'ಎನಿಮೀಸ್' ಕಾದಂಬರಿಗಳೊಂದಿಗೆ 'ಯೆಂತಲ್' ಕತೆ ಚಲನಚಿತ್ರಗಳಾಗಿವೆ.

ಈ ಸಾಹಿತ್ಯಿಕ ಕೃತಿಗಳಲ್ಲದೆ ಈತನ ಲೇಖನಿಯಿಂದ ಅಸಂಖ್ಯ ಲೇಖನಗಳು ರಚನೆಗೊಂಡಿವೆ. ಪತ್ರಕರ್ತನಾಗಿದ್ದುಕೊಂಡು ಬರವಣಿಗೆಯನ್ನು ನಿತ್ಯವೂ ಅವಿರತವಾಗಿ ಮುಂದುವರಿಸಿಕೊಂಡಿದ್ದ ಸಿಂಗರ್ ಬರವಣಿಗೆಯ ನಡುವೆ ಎದುರಾಗುವ ಅಡ್ಡಿಗಳ ಬಗೆಗೆ ತುಂಬ ಸಹನೆ ಇರಿಸಿಕೊಂಡಿದ್ದ. "ಬೆಳಿಗ್ಗೆ ಏಳುವಾಗಲೇ ನಾನು ಬರೆಯುವ ಒತ್ತಡಗಳಲ್ಲಿ ಮುಳುಗುತ್ತಿದ್ದೆ. ಸದಾಕಾಲ ನಾನು ಬರೆಯಲು ಕೂಡುವ ಆಕಾಂಕ್ಷೆಯಲ್ಲಿ ಇರುವಂಥವನು. ಹಲವಾರು ದಿನ ಏನನ್ನಾದರೂ ಬರೆಯುತ್ತಲೇ ಇರುತ್ತಿದ್ದೆ. ಆದರೆ ಟೆಲಿಫೋನ್ ಕರೆಗಳು ಮತ್ತು ಕೆಲವು ವೇಳೆ ಜ್ಯೂಯಿಷ್ ಫಾರ್ವರ್ಡ್‌ಗೆ ಲೇಖನಗಳನ್ನೂ ಬರೆಯಬೇಕಾಗುತ್ತಿತ್ತು. ಮತ್ತೆ ಕೆಲವು ಸಂದರ್ಭಗಳಲ್ಲಿ ಒಂದು ಸಮೀಕ್ಷಾ ಲೇಖನ ಬರೆಯಬೇಕಾಗುತ್ತಿತ್ತು ಅಥವಾ ನಾನೇ ಸಂದರ್ಶನದಲ್ಲಿ ಕೇಳುವವರ ಪ್ರಶ್ನೆ ಅಥವಾ ವಿಷಯಗಳಿಗೆ ಅಭಿಪ್ರಾಯೋತ್ತರಗಳನ್ನು ಕೊಡಬೇಕಾಗುತ್ತಿತ್ತು. ಎಲ್ಲ ಸಮಯದಲ್ಲಿಯೂ ನಾನು ಅಡ್ಡಿಗಳನ್ನು ಎದುರಿಸುತ್ತಿದ್ದೆ" ಎಂದುಕೊಂಡಿರುವ ಈತ ಬರಹದ ಕೈಂಕರ್ಯವನ್ನು ಅಪೂರ್ವ ರೀತಿಯಲ್ಲಿ ಕಾಯ್ದುಕೊಳ್ಳುತ್ತ ಬಂದಿದ್ದ.

೧೯೬೦ರಿಂದ ಈಚೆಗೆ ತುಂಬ ತಡವಾಗಿ ಮಕ್ಕಳ ಕತೆಗಳನ್ನು ಬರೆಯಲು ಆರಂಭಿಸಿದ್ದ ಸಿಂಗರ್ ತನ್ನ ಸೃಜನಶೀಲತೆಗೆ ಹೊಸ ಆಯಾಮ ತಂದುಕೊಂಡಿದ್ದ.

"ನಾನು ಮಕ್ಕಳಿಗೆ ಏಕೆ ಬರೆಯಲು ಪ್ರಾರಂಭಿಸಿದೆ ಎನ್ನುವುದಕ್ಕೆ ಐನೂರು ಕಾರಣಗಳಿವೆ. ಆದರೆ ಸಮಯದ ಅಭಾವದಿಂದ ನಾನು ಅವುಗಳಲ್ಲಿ ಕೇವಲ ಹತ್ತನ್ನು ತಿಳಿಸುತ್ತೇನೆ" ಎಂದಿರುವ ಸಿಂಗರ್‌ನ ಈ ಕೆಲವು ಕಾರಣಗಳು ಈ ಕೆಳಕಂಡಂತಿವೆ.

೧. ಮಕ್ಕಳು ಪುಸ್ತಕಗಳನ್ನು ಓದುತ್ತಾರೆ ; ವಿಮರ್ಶೆಗಳನ್ನಲ್ಲ. ಅವರು ವಿಮರ್ಶಕರ ಬಗ್ಗೆ ಗುಲ್ಲೆಬ್ಬಿಸುವುದಿಲ್ಲ.

೨. ಮಕ್ಕಳು ತಮ್ಮ ವ್ಯಕ್ತಿತ್ವ ಗುರುತಿಸಿಕೊಳ್ಳಲು ಓದುವುದಿಲ್ಲ.

೩. ಅವರಿಗೆ ಮನಶ್ಶಾಸ್ತ್ರದ ಉಪಯೋಗವಿಲ್ಲ.

೪. ಅವರು ಕಾಫ್ಕಾ ಅಥವಾ ಫಿನ್ನೆಗಾನ್ಸ್‌ವೇಕ್ ಅನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವುದಿಲ್ಲ.

೫. ಅವರು ದೈವ, ಕುಟುಂಬ, ದೇವತೆಗಳು, ದೆವ್ವಗಳು, ಮಾಟಗಾತಿಯರು, ಪ್ರೇತಗಳು, ತರ್ಕ, ಸ್ಪಷ್ಟತೆ, ವಿರಾಮ ಚಿಹ್ನೆಗಳು ಮತ್ತು ಇತರ ಹಳೆಯ ಕಾಲದ ವಿಷಯಗಳನ್ನು ಇನ್ನೂ ನಂಬುತ್ತಾರೆ.

೬. ಅವರು ಕುತೂಹಲಕರ ಕತೆಗಳನ್ನು ಪ್ರೀತಿಸುತ್ತಾರೆಯೇ ಹೊರತು ವ್ಯಾಖ್ಯಾನಗಳು ; ಕೈಪಿಡಿಗಳು ಅಥವಾ ಅಡಿಟಿಪ್ಪಣಿಗಳನ್ನಲ್ಲ.

೭. ಒಂದು ಪುಸ್ತಕ ಬೇಸರ ತಂದರೆ ಸಂಕೋಚವಿಲ್ಲದೆ, ತಿಳಿದ ದೊಡ್ಡವರ ಭಯವಿಲ್ಲದೆ ಮುಕ್ತವಾಗಿ ಆಕಳಿಸುತ್ತಾರೆ.

ಈ ಕಾರಣಗಳಲ್ಲಿ ಸಾಹಿತ್ಯದ ಮೂಲಗುಣಗಳತ್ತಲೇ ಗಮನ ಸೆಳೆಯುವ ಯತ್ನದಲ್ಲಿರುವ ಸಿಂಗರ್ ತನ್ನ ಕತೆಗಳು ಜನಪದ ಕತೆಗಳಿಗೆ ಹತ್ತಿರವಾಗುವಂತೆ ಇರುವುದನ್ನು ತೋರಿಸಿಕೊಳ್ಳುತ್ತಾನೆ. "ಬಾಲ್ಯದಿಂದಲೂ ನನಗೆ ಒಂದು ಕತೆಯಲ್ಲಿ ತೀವ್ರ ಬಿಗಿಯಿರುವುದು ಪ್ರಿಯವಾದುದಾಗಿತ್ತು. ಆದ್ದರಿಂದಲೇ ಆರಂಭ ಮತ್ತು ಕೊನೆ ಇರುತ್ತವೆ ಹಾಗೂ ಕೊನೆಯಲ್ಲಿ ಏನು ಸಂಭವಿಸುತ್ತದೆ ಎಂಬ ಕುತೂಹಲಕಾರಿ ಭಾವನೆಯೂ ಇರುತ್ತದೆ. ಈ ಅಂಶವನ್ನು ನಾನು ಈಗಲೂ ಉಳಿಸಿಕೊಂಡಿದ್ದೇನೆ" ಎಂದು ಹಲವು ವರ್ಷಗಳ ಕತೆಗಳ ಬರವಣಿಗೆಯ ಅನುಭವದಲ್ಲಿ ಈತನೇ ಹೇಳಿಕೊಂಡಿದ್ದಾನೆ. ಈತನ ಕತೆಗಳು ಹಾಗೂ ಕಾದಂಬರಿಗಳಲ್ಲಿ ಅಲ್ಲಲ್ಲಿ ಥಟ್ಟನೆ

ಮಿಂಚಿನ ಝಳಕು ಮಿಂಚಿಕೊಳ್ಳುತ್ತ, ಓದುಗರಲ್ಲಿ ಓದಿನ ಅನುಭವಕ್ಕೆ ವ್ಯಾಪಕತೆಯನ್ನು ಭಾವಸೆಲೆಯನ್ನೂ ಆರ್ದ್ರಗೊಳಿಸುವ ಕ್ರಿಯೆಗಳಾಗಿ ಮೂಡುತ್ತವೆ. ಒಬ್ಬ ಮಹಾಲೇಖಕ ಮಾತ್ರ ಇಂಥದನ್ನು ಉಂಟುಮಾಡಬಲ್ಲ.

ಇವನ ಹಲವಾರು ಕತೆಗಳಲ್ಲಿ, ಈತನ ಬಳಿಗೆ ತಮ್ಮ ಕತೆಗಳನ್ನು ಹೇಳಿಕೊಳ್ಳಲು ಬರುವ ಪಾತ್ರಗಳೂ, ಆಧುನಿಕ ಬದುಕಿನಲ್ಲಿ ಯಹೂದಿಗಳ ಅಲೆಮಾರಿತನ ಪಾರಂಪರಿಕವಾಗಿಯೇ ಮುಂದುವರಿಯುತ್ತಿರುವುದೂ ಕಾಣಬರುತ್ತದೆ. ಜಗತ್ತಿನ ಕಥೆಗಳಲ್ಲಿಯೇ ಅಪೂರ್ವವಾಗಿರುವ ಕಥೆಗಳಲ್ಲಿ ಹಲವಾರನ್ನು ನೀಡಿರುವ ಈತ ತಾನು ಬರೆದಿರುವುದನ್ನೆಲ್ಲ ಯಹೂದಿ ಸಾಂಸ್ಕೃತಿಕ ನೆಲೆಯ ಮೇಲೆಯೇ ನಿಲ್ಲಿಸಿದ್ದಾನೆ. "ನನ್ನದು ಎಲ್ಲವನ್ನೂ ಪ್ರಶ್ನಿಸುವ, ಸಕಾರಣವಾಗಿ ಒಪ್ಪಿಕೊಳ್ಳುವ ಮನೋಭಾವವೆಂಬುದು ನಿಜವಾದರೂ ಜ್ಯೂಗಳಿಂದ ಜಗತ್ತು ಕಲಿಯುವುದು ಬಹಳಷ್ಟಿದೆ ಎಂದು ನನಗನಿಸುತ್ತದೆ. ಅವರ ಬದುಕಿನ ಕ್ರಮ, ಮಕ್ಕಳನ್ನು ಬೆಳೆಸುವ ಬಗ್ಗೆ ನೋವು ಹಿಂಸೆಗಳಲ್ಲೂ ಅವರು ಪ್ರಕಟಿಸುವ ಸಮಾಧಾನ, ಕತ್ತಲ ನಡುವೆಯೂ ಬೆಳಕು ಕಾಣಬಯಸುವ ಅವರ ನಂಬಿಕೆ, ಇವೆಲ್ಲವೂ ನಾವು ಗಂಭೀರವಾಗಿ ಪರಿಗಣಿಸಬೇಕಾದ ಸಂಗತಿಗಳಾಗಿವೆ" ಎಂದು ಈತನೇ ತನ್ನ ಸಂಸ್ಕೃತಿಯ ಬಗೆಗೆ ಹೇಳಿಕೊಂಡಿದ್ದಾನೆ. ತನ್ನ ಕತೆ-ಕಾದಂಬರಿಗಳಿಂದ ಜಗತ್ತಿನ ಪ್ರತಿಷ್ಠಿತ ನೊಬೆಲ್ ಪುರಸ್ಕಾರ ಪಡೆವಂಥ, ನಿಜವಾದ ಅರ್ಥದಲ್ಲಿನ ಮೌಲ್ಯಾತ್ಮಕ ಸಾಹಿತ್ಯವನ್ನು ಸೃಷ್ಟಿಸಿದ ಈತ ತನಗೆ ನೊಬೆಲ್ ಪುರಸ್ಕಾರ ಬಂದಿದೆ ಎಂಬ ಸುದ್ದಿ ಕೇಳಿದಾಗ "ಇದು ನಿಜವೇ?" ಎಂದು ಅಚ್ಚರಿಯಲ್ಲಿ ನಂಬಲಾಗದಂತೆ ಪ್ರಶ್ನಿಸಿದ್ದ. ಈ ಪುರಸ್ಕಾರ ತನಗೆ ಮತ್ತಷ್ಟು ಪ್ರಖ್ಯಾತಿ ತಂದುಕೊಟ್ಟ ಬಗ್ಗೆ ಸಂತೃಪ್ತ ಭಾವನೆ ಹೊಂದಿದ್ದ ಈತ "ನೊಬೆಲ್ ಬಂದ ನಂತರ ನಾನು ಬದಲಾಗಲಿಲ್ಲ. ನನ್ನ ಬಗ್ಗೆ ಜನ ಬದಲಾದರು" ಎಂದು ಹೇಳಿದ.

ಸಂಸ್ಕೃತಿಯ ಅಂತರವನ್ನು ಮೀರಿಯೂ ನಿಲ್ಲುವಂಥ ಅಪೂರ್ವ ಸಾಹಿತ್ಯ ಸೃಷ್ಟಿಯಲ್ಲಿ ಜಗತ್ತಿನಾದ್ಯಂತ ಅಪಾರವಾದ ಓದುಗ ವರ್ಗವನ್ನು ಗಳಿಸಿಕೊಂಡಿದ್ದವನು ಸಿಂಗರ್. ಈತನ ತಂದೆ ಈತನೂ 'ಸಿಹಿವಿಷ'ದಂಥ ಸಾಹಿತ್ಯ ರಚಿಸಿಯಾನು ಎಂದುಕೊಂಡಿದ್ದನ್ನು ಮುಂದೆ ಹುಸಿಯಾಗಿಸಿದ. ತನ್ನ ಜನಾಂಗದ ಯಿದ್ದಿಷ್ ಭಾಷೆಗೆ ವಿಶ್ವಮಾನ್ಯತೆಯನ್ನು - ಇದು ಮೃತದ ಹಾದಿ ಹಿಡಿಯುತ್ತಿದ್ದರೂ - ತಂದುಕೊಟ್ಟ. ತನ್ನ ನೊಬೆಲ್ ಸ್ವೀಕೃತಿ ಭಾಷಣದಲ್ಲಿ ಈ ಅಂಶವನ್ನೂ ಹೇಳಿಕೊಂಡ. "ನನ್ನ ಈ ಭಾಷೆಗೆ ಯಾವುದೇ ನೆಲೆಯಿಲ್ಲ. ಯಾವ ಸರ್ಕಾರದ ಬೆಂಬಲವೂ ಇಲ್ಲ. ಆಯುಧಗಳು,

ಗುಂಡು, ಮದ್ದು, ಮಿಲಿಟರಿ ಶಕ್ತಿ, ಯುದ್ಧ ಕೌಶಲ ಮೊದಲಾದ ಪದಗಳು ಈ ಭಾಷೆಯಲ್ಲಿಲ್ಲ. ಉನ್ನತ ವರ್ಗದ ಜ್ಯೂಗಳಿಂದ ನಾಗರಿಕ ಜನಾಂಗದಿಂದ ಕಡೆಗಣಿಸಲ್ಪಟ್ಟ ಭಾಷೆಯಿದು. ಆದರೆ ದೊಡ್ಡ ದೊಡ್ಡ ಧರ್ಮಗಳ ಬೋಧನೆಯನ್ನು ಯಿದ್ದಿಷ್ ಮಾತನಾಡುವ ಅಸ್ಪೃಶ್ಯ ಜನ ದಿನನಿತ್ಯ ಬದುಕುತ್ತಾರೆ. ನಿಜವಾಗಿ ನೋಡಿದರೆ ಅವರೇ ಬೈಬಲ್‌ನಲ್ಲಿ ಹೇಳುವ ತತ್ವಗಳ ಸಾಕಾರ ಜೀವಿಗಳು, ಮನುಷ್ಯ-ಮನುಷ್ಯ ಸಂಬಂಧಗಳಿಗಿಂತ ಅವರಿಗೆ ಬೇರೆ ಮಹತ್ವದ ಗ್ರಂಥಗಳಿಲ್ಲ. ಅವರ ಸಮಗ್ರ ಬದುಕಿನ ಅರ್ಥ ಈ ಸಂಬಂಧಗಳಲ್ಲಿದೆ. ತೋರಾ, ತಾಲಮೂದ್, ಮಿಶ್ನ, ಕಬಾಲ ಮೊದಲಾದ ಎಲ್ಲವೂ ಅವರಿಗೆ ಈ ಸಂಬಂಧಗಳಲ್ಲಿಯೇ ಇವೆ. ಈ ಜನ ಬದುಕುತ್ತಿರುವ ಸ್ಥಳ ಶಿಕ್ಷೆಗೊಳಗಾದ ಅಸಂಖ್ಯಾತ ಜನತೆಯ ವಸತಿ ಪ್ರದೇಶ ಮಾತ್ರವಲ್ಲ, ಸ್ವಶಿಸ್ತಿನ ಶಾಂತಿ-ಮಾನವೀಯತೆಗಳ ಪ್ರಯೋಗಾಲಯವೂ ಹೌದು. ಮನುಷ್ಯನ ಎಲ್ಲ ರೀತಿಯ ಕ್ರೌರ್ಯದ ನಡುವೆಯೂ ಮಾನವೀಯತೆಯನ್ನು ಉಳಿಸಿಕೊಳ್ಳಲು ಈ ಜನಾಂಗ ಹೋರಾಡುತ್ತಿದೆ."

ಈ ಮಾತುಗಳಲ್ಲಿ ಸಿಂಗರ್ ಯಿದ್ದಿಷ್ ಭಾಷೆ ಮತ್ತು ಯಹೂದಿ ಜನಾಂಗದ ಸ್ಥಿತಿಯ ಅಳಲನ್ನು ತೋಡಿಕೊಂಡು ಸಂಸ್ಕೃತಿಯ ನೆಲೆಗಟ್ಟನ್ನು ಒಡೆಯುವಂಥ ಯಾಜಮಾನ್ಯತೆ ತೋರಿಕೊಳ್ಳುತ್ತ ಪ್ರತಿಷ್ಠೆ ಮೆರೆದುಕೊಳ್ಳುವ ಇತರೆ ಸಂಸ್ಕೃತಿಗಳ ಮನೋಭಾವ ಎಂಥದೆಂದು ಸೂಚ್ಯವಾಗಿಯೇ ತೋರಿದ್ದಾನೆ.

ಸಿಂಗರ್‌ನ ವಿಚಾರಗಳು ವಿಭಿನ್ನ ದೃಷ್ಟಿಕೋನದವಾಗಿದ್ದವು. ತತ್ವಶಾಸ್ತ್ರವನ್ನು ಆಳವಾಗಿ ಓದಿಕೊಂಡಿದ್ದ ಇವನು ದೇವರಲ್ಲಿ ನಂಬಿಕೆ ಇರಿಸಿಕೊಂಡಿದ್ದ. "ದೇವರ ಮೇಲಿನ ನಂಬಿಕೆ ಕಾಮದಷ್ಟೇ ಅಗತ್ಯವಾದದ್ದು" ಎಂದು ಈತನೇ ಹೇಳಿಕೊಂಡಿದ್ದಾನೆ. ಜಗತ್ತಿನಲ್ಲಿ ಒಳಿತು ಮತ್ತು ಕೆಡಕುಗಳು ಪರಸ್ಪರ ಸಂಘರ್ಷದಲ್ಲಿ ಮುಳುಗಿಕೊಂಡೇ ಇರುತ್ತವೆ ; ಇವುಗಳಲ್ಲಿ ಕೆಡುಕು ಮೇಲುಗೈ ಸಾಧಿಸಲು ಯತ್ನಿಸುತ್ತಲೇ ಇರುತ್ತದೆ ಎಂಬ ನಿಲುವು ಹೊಂದಿದ್ದ ಸಿಂಗರ್ 'ಇಸಂ'ಗಳಿಂದ ದೂರವಾಗಿದ್ದ. "ಸಾಹಿತ್ಯದಲ್ಲಿನ ಹಲವಾರು 'ಇಸಂ' ಗಳು, ಪಂಥಗಳು ಪ್ರೊಫೆಸರ್‌ಗಳ ಕಲ್ಪನೆಗಳಷ್ಟೇ" ಎನ್ನುತ್ತಿದ್ದ ಇವನು "ಸಣ್ಣ ಮೀನು ಮಾತ್ರ ಶಾಲೆಗಳಲ್ಲಿ ಈಜುತ್ತದೆ" ಎಂದು ತನ್ನ ಮಾರ್ಗವನ್ನು ನಿರ್ದೇಶಿಸಿಕೊಳ್ಳುತ್ತ ಒಟ್ಟು ಬದುಕನ್ನು ಮುಕ್ತವಾಗಿ ನೋಡುವ ದೃಷ್ಟಿಕೋನ ಹೊಂದಿದ್ದ.

"ಇವನ ಕಥೆಗಳನ್ನು ನಾನು ತುಂಬ ಇಷ್ಟಪಡುತ್ತೇನೆ. ಏಕೆಂದರೆ ಇವುಗಳನ್ನು ಓದುವುದು ನನ್ನಲ್ಲಿ ಹಿತವಾದ ಒಳ್ಳೆಯ ಭಾವನೆಗಳನ್ನು ಮೂಡಿಸುತ್ತದೆ" ಎನ್ನುವುದು

ಇವನ ಕತೆಗಳ ಬಗೆಗೆ ಒಬ್ಬ ಸಾಮಾನ್ಯ ಓದುಗನ ಅನಿಸಿಕೆಯಾಗಿತ್ತು. ಇಂಥ ಸರಳತೆಯೇ ಇವನಿಗೆ ಜಗದ್ವಿಖ್ಯಾತಿ ತಂದಿದ್ದವು. ತನ್ನ ೮೭ನೇ ವಯಸ್ಸಿನಲ್ಲಿ, ತುಂಬು ಬಾಳಿನ ಕೊನೆಯಲ್ಲಿ ಅಮೆರಿಕೆಯಲ್ಲಿ ನಿಧನ ಹೊಂದಿದ.

* * * *

ಇಂಥ ಒಬ್ಬ ಮಹಾನ್ ಲೇಖಕನ ಒಟ್ಟು ಸಾಹಿತ್ಯವನ್ನು ಪ್ರತಿನಿಧಿಸುವಂತೆ ಒಂದು ಸಂಕಲನವನ್ನು ಒಂದು ಮಿತಿಯೊಳಗೆ ತರುವಾಗ ಎದುರುಗೊಳ್ಳುವ ಸಮಸ್ಯೆಗಳು ಈ ಸಂಕಲನದ ಸಂದರ್ಭದಲ್ಲಿಯೂ ಎದುರಾಗಿವೆ ; ಆದರೂ ಸಿಂಗರ್ ತನ್ನ ಸಾಹಿತ್ಯದಲ್ಲಿ ತುಂಬಾ ಆಳದ ನೆಲೆಯಲ್ಲಿ ತನ್ನ ಸಂಸ್ಕೃತಿಯ ಬೇರುಗಳನ್ನು ಪಡೆದುಕೊಂಡಿದ್ದನ್ನು ಗಮನದಲ್ಲಿ ಇರಿಸಿಕೊಂಡು, ಆತ ಕಾದಂಬರಿಕಾರನಾಗಿದ್ದೂ, ಕತೆಗಳಲ್ಲಿಯೇ ಅಪೂರ್ವ ಪ್ರತಿಭೆ ಮೆರೆದುಕೊಂಡಿರುವುದನ್ನು ಪರಿಗಣಿಸಿ ಇಲ್ಲಿ ಹನ್ನೊಂದು ಕತೆಗಳನ್ನೂ, ಇವನ ಮೊದಲ ಕಾದಂಬರಿಯ ಒಂದು ಅಧ್ಯಾಯವನ್ನೂ, ಆತ್ಮಕಥಾನಕದ ಒಂದು ಭಾಗ ವನ್ನೂ ಅನುವಾದಿಸಲಾಗಿದೆ.

ಈ ಕತೆಗಳಲ್ಲಿ 'ಸ್ಪಿನೋಜ' ಜಗತ್ಪ್ರಸಿದ್ಧಿ ಪಡೆದಿರುವಂಥಹುದು. 'ಯೆಂತಲ್' ಚಲನಚಿತ್ರವಾಗಿರುವ ನೀಳ್ಗತೆ. ಶಿವರಾಮ ಕಾರಂತರ 'ಮೈಮನಗಳ ಸುಳಿಯಲ್ಲಿ' ಕಾದಂಬರಿಯಲ್ಲಿನ ಮೈ-ಮನಸ್ಸಿನ ವಿಘಟನೆಯ ವಸ್ತುವನ್ನು ಯಹೂದಿ ಬದುಕಿನ ನೆಲೆಯಲ್ಲಿ ನೋಡಿರುವ ಈ ಕತೆ ಸಿಂಗರ್‌ನ ಸಾಹಿತ್ಯದಲ್ಲಷ್ಟೇ ಅಲ್ಲದೆ ಜಗತ್ತಿನ ಸಾಹಿತ್ಯದಲ್ಲಿಯೇ ಅಪೂರ್ವದ್ದಾಗಿದೆ. ಓದಿನಲ್ಲಿಯೇ ತಮ್ಮೊಳಗಿನ ಒಳಸುಳಿಗಳನ್ನು ಬಿಚ್ಚಿಕೊಳ್ಳುವ ಸಿಂಗರ್‌ನ ಕತೆಗಳ ಬಗೆಗೆ ಹೆಚ್ಚಿನ ವಿವರಣೆಗಳ ಅಗತ್ಯ ಬೇಕಾಗುವುದಿಲ್ಲ. ವಾಸ್ತವತೆಯೊಂದಿಗೆ ಮಾಂತ್ರಿಕ ಸ್ಪರ್ಶ ನೀಡುವ ಕಲೆಗಾರಿಕೆ ಸಿಂಗರ್‌ನಲ್ಲಿ ಹೇಗೆ ಸಿದ್ಧಿಗೊಂಡಿತ್ತು ಎಂಬುದನ್ನು ಇಲ್ಲಿನ ಕೆಲವೇ ಕತೆಗಳಲ್ಲಿಯೂ ಕಾಣಬಹುದು. ಫ್ಯಾಂಟಸಿ ಯಂಥ ಕತೆಗಳಲ್ಲಿಯೂ ಸಾಂಸ್ಕೃತಿಕತೆಯ ದಟ್ಟತೆಯನ್ನು ತುಂಬಿರುವ 'ಕೋ ಕ್ಕೋ ಕ್ಕೋ' ಮತ್ತು 'ಮತ್ತೆ ಮುಖಾಬಿಲೆ' ಕತೆಗಳು ಒಬ್ಬ ಶ್ರೇಷ್ಠ ಲೇಖಕನಿಂದ ಮಾತ್ರ ರಚನೆಗೊಳ್ಳುವಂಥವು. ವಾಸ್ತವ ಮತ್ತು ಫ್ಯಾಂಟಸಿಗಳ ನಡುವೆ ನಿಲ್ಲುವಂತೆ, ಓದುಗ ರನ್ನು ಬೆರಗುಗೊಳಿಸುವಂತೆಯೇ ವಿಮರ್ಶಕರನ್ನೂ ತಬ್ಬಿಬ್ಬುಗೊಳಿಸುವಂತಿರುವ 'ಮತ್ತೆ ಮುಖಾಬಿಲೆ' ಕತೆ ಸಿಂಗರ್‌ನಲ್ಲಿನ ಕಲೆಗಾರಿಕೆಗೆ ಮತ್ತೊಂದು ತೆರನಾದ ಸಾಕ್ಷ್ಯ ವಾಗಿದೆ. ಭಾವೋದ್ರೇಕವಿಲ್ಲದೆ ಚಿತ್ರಣಗೊಂಡಿರುವ 'ಸಂತಸದ ಒಂದು ದಿನ' ಭಾವವನ್ನೇ

ಕಲಕುತ್ತದೆ. **'ಅಮೆರಿಕಾದಿಂದ ಬಂದವನು'** ಆಧುನಿಕತೆ ಎನ್ನುವುದು ಹಳೆಗಾಲದ ಮೇಲೆ ಹಾಯ್ದು ಬರುವುದರ ಕಿರು ಚಿತ್ರಣವನ್ನೂ ಕೊಡುತ್ತದೆ. **'ಎತ್ತರ ಮತ್ತು ಗಿಡ್ಡ'** ಹಾಗೂ **'ತೈಬೆಲೆ ಮತ್ತು ಅವಳ ದೆವ್ವ'** ಗ್ರಾಮೀಣ ಬದುಕಿನ ಚಿತ್ರಣದೊಂದಿಗೆ ಇತರೆ ಅಂಶಗಳನ್ನೂ ಹೊಳೆಸುತ್ತದೆ. **'ಶಿಧಾ ಮತ್ತು ಕುಜೇಬ'** ಹಿಟ್ಲರ್ ಕಾಲದ ಒಂದು ದಾರುಣ ಚಿತ್ರವನ್ನು ಕಿರಿದಾದ ಆವರಣದೊಳಗೇ ಮನಮುಟ್ಟುವಂತೆ, ಅಳಿಯದ ಆಕಾರದಲ್ಲಿ ನೀಡುತ್ತದೆ. **'ವಿಚ್ಛೇದನ'** ಕತೆಯೊಂದರ ರಚನೆಯನ್ನು ಅಭ್ಯಾಸ ಮಾಡಲು ಉತ್ತಮ ಮಾದರಿಯಂತಿದೆ. ಈ ಕತೆ ಎಲ್ಲಿಯೂ ಅನಗತ್ಯ ವಿವರಗಳತ್ತ ಜಾರುವುದಿಲ್ಲ. ಒಬ್ಬ ಹುಡುಗನ ಕಣ್ಣಿನೊಂದಿಗೇ ಅಪೂರ್ವ ಚೌಕಟ್ಟನ್ನೂ ನಿರ್ಮಿಸುತ್ತದೆ.

ಓದಿನಲ್ಲೇ ತಮ್ಮೊಳಗನ್ನು ತೋರಿಕೊಳ್ಳುವ ಈ ಕತೆಗಳ ಬಗೆಗೆ ವಿಮರ್ಶಕತೆಯೊಂದಿಗೆ ಈ ಪ್ರಸ್ತಾವನೆಯನ್ನೂ ಇನ್ನಷ್ಟು ಲಂಬಿಸದೆ ಸಿಂಗರ್‌ನಲ್ಲಿ ಈ ಸಂಕಲನಕ್ಕೆ ಸೇರಬೇಕಾದ ಇನ್ನೂ ಹತ್ತಕ್ಕೂ ಮಿಕ್ಕ ಉತ್ತಮ ಕಥೆಗಳು **'ಜಿಂಫಲ್'**, **'ಷಾರ್ಟ್ ಫ್ರೈಡೇ'**, **'ಎ ಕ್ರೌನ್ ಆಫ್ ಫೆದರ್ಸ್'** ಮುಂತಾಗಿ ಇನ್ನೊಂದು ಸಂಕಲನಕ್ಕೆ ಅನುವಾದಿಸುವಷ್ಟಿವೆ ಎಂದಷ್ಟೇ ಸೂಚಿಸುತ್ತೇನೆ. ಇಲ್ಲಿ **'ಇನ್ ಮೈ ಫಾದರ್ಸ್ ಕೋರ್ಟ್'**ನಿಂದಲೂ ಒಂದು ಅಧ್ಯಾಯವನ್ನು ಮಾತ್ರ ಅನುವಾದಿಸಿದೆ. ಈ ಕೃತಿಯಲ್ಲಿ ಸಿಂಗರ್ ತನ್ನ ಬಾಲ್ಯದಲ್ಲಿ ಕಂಡ ಮನೆ, ಸುತ್ತಲಿನ ಪರಿಸರ, ಮನೆಗೆ ಬಂದು ಹೋಗುತ್ತಿದ್ದವರ ನಡೆ-ನುಡಿ, ಆಚಾರ-ವಿಚಾರಗಳು ಎಲ್ಲವನ್ನೂ ಮುಗ್ಧತೆಯ ಕಣ್ಣಿನೊಂದಿಗೇ ದಾಖಲಿಸಿವೆ.

ಈ ಅನುವಾದಗಳು ಒಮ್ಮೆಗೇ ಕೂತು ಮಾಡಿರುವಂಥವಲ್ಲ. ಸುಮಾರು ಹತ್ತು ವರುಷಗಳ ಅಂತರ ಈ ಅನುವಾದಗಳಲ್ಲಿದೆ. ಯಾವ ಭಾಗವನ್ನು ಕತ್ತರಿಸದೆ ಕನ್ನಡಿಸುವ ಯತ್ನವನ್ನು ಎಲ್ಲ ಕಡೆಯೂ ಕಾಯ್ದುಕೊಂಡಿದ್ದೇನೆ. ಈ ಅನುವಾದದ ಸಂದರ್ಭದಲ್ಲಿ ಓದಿನ ಓಟದಲ್ಲಿ ಕಾಣದ ಸೂಕ್ಷ್ಮತೆಗಳನ್ನೆಲ್ಲ ಕಂಡಿದ್ದೇನೆ. ಅನುವಾದವೂ ಒಂದು ಸೃಜನಶೀಲ ಪ್ರಕ್ರಿಯೆ ಎಂದು ಅನುಭವಿಸಿದ್ದೇನೆ.

ಸಿಂಗರ್‌ನೇ ಹೇಳಿರುವ "ಕತ್ತಲ ನಡುವೆಯೂ ಬೆಳಕು ಕಾಣಬಯಸುವ" ಯಹೂದಿ ಬದುಕಿನ ಯಿದ್ದಿಷ್ ಸಾಹಿತ್ಯದ ಈ ಕಿರುಸಂಕಲನ ತನ್ನೆಲ್ಲ ಮಿತಿಗಳ ನಡುವೆಯೂ ಈ ಅಂಶವನ್ನು ಓದುಗರಲ್ಲಿ ಹೊಳೆಸುತ್ತದೆ ಎಂಬ ನಂಬಿಕೆಯಿದೆ.

ಲಿಂಗರಾಜು

ಒಂದು ಟಿಪ್ಪಣಿ *

.....ಸಣ್ಣಕಥೆ ಇಂದಿನ ದಿನಗಳಲ್ಲಿ ರೂಢಿಗತದ್ದಾಗಿಲ್ಲ. ಇದು ಸೃಜನಶೀಲ ಲೇಖಕನಿಗೆ ಸವಾಲಿನದ್ದಾಗಿ ರೂಪುಗೊಳ್ಳುತ್ತಿದೆ ಎನ್ನುವುದನ್ನು ನಾನು ಈಗಲೂ ನಂಬಿಕೊಂಡಿದ್ದೇನೆ. ಕಾದಂಬರಿಯಂತೆ ಸಮೀಕ್ಷಾತ್ಮಕವಾಗಿಯೂ, ದೀರ್ಘವಾದ ಅಡ್ಡ ಹೊರಳುವಿಕೆಯಲ್ಲಿಯೂ, ಗತಸ್ಮರಣ ಚಿತ್ರಗಳಲ್ಲಿ ಮತ್ತು ತಳುಚೌಕಟ್ಟಿನಲ್ಲಿ ಮುಳುಗದ ಸಣ್ಣಕಥೆ ನೇರವಾಗಿ ತನ್ನ ಕೊನೆತಿರುವು (ಕ್ಲೈಮ್ಯಾಕ್ಸ್) ತಲುಪುವ ಗುರಿ ಹೊಂದಿರುತ್ತದೆ. ಇದು ವಿವರಣಾತ್ಮಕತೆಗಳ ಒತ್ತಾಯವಿಲ್ಲದೆ ತೀವ್ರತೆ ಮತ್ತು ರಹಸ್ಯವನ್ನು ಒಳಗೊಂಡಿರುತ್ತದೆ. ಜೊತೆಗೆ ಸಂಕ್ಷೇಪತೆ ಇದರ ತುಂಬ ಮುಖ್ಯವಾದ ಸತ್ವ. ಸಣ್ಣಕಥೆ ಖಂಡಿತವಾಗಿಯೂ ಒಂದು ಸ್ಪಷ್ಟ ಯೋಜನಾಬದ್ಧತೆಯದು ; ಸಾಹಿತ್ಯದೊಳಗಿನ ಹರಟೆಯಾದ "ಜೀವಿತದ ಒಂದು ತೂತು" ಅಲ್ಲ. ಸಣ್ಣಕಥೆಯ ಶ್ರೇಷ್ಠಸಿದ್ಧರಾದ ಚೆಕಾಫ್, ಮೊಪಾಸಾ ಹಾಗೂ 'ಹಳೆ ಒಡಂಬಡಿಕೆ'ಯಲ್ಲಿನ ಉತ್ತಮ ಭಾಗವಾದ ಜೋಸೆಫ್‌ನ ಕಥೆಯಲ್ಲಿ ಇವರು ಎತ್ತ ಸಾಗುತ್ತಿದ್ದಾರೆ ಎನ್ನುವುದು ಸ್ಪಷ್ಟವಾಗಿ ತೋರಿಕೊಳ್ಳುತ್ತದೆ. ಇವುಗಳನ್ನು ಯಾರೇ ಆದರೂ ಮತ್ತೆ ಮತ್ತೆ ಓದಿದರೂ ಎಂದಿಗೂ ಇವು ಬೇಸರವಾಗುವುದಿಲ್ಲ. ಕಾದಂಬರಿ ಸಾಮಾನ್ಯವಾಗಿ ಪದವ್ಯಂಜನಗಳದು. ನಿಜವಾದ ಸಂಗತಿ ಏನೆಂದರೆ, ಕಾದಂಬರಿಯ ಲೇಖಕ ಮನಶ್ಶಾಸ್ತ್ರ ಮತ್ತು ಇತರೆ ವಾದಗಳೊಂದಿಗೆ ಮುಳುಗಿ ಕೈಯಾಡಿಸಲು ಯತ್ನಿಸುವುದಿಲ್ಲ. ಶ್ರೇಷ್ಠಸಾಹಿತ್ಯ ತಾನು ವಿನೋದಪಡಿಸುವಾಗ ಇದರ ಸೂಚನೆ ನೀಡುತ್ತದೆ. ಇದು ಸ್ಪಷ್ಟತೆ ಹಾಗೂ ನಿಗೂಢತೆ ಎರಡನ್ನೂ ಒಳಗೊಂಡಿರುತ್ತದೆ. ಒಂದು ಸ್ಪಷ್ಟ ಉದ್ದೇಶದಲ್ಲಿ ಇದು ಒಂದು ಮಾಂತ್ರಿಕ ಶಕ್ತಿಯನ್ನು ಬೆಳೆಸಿಕೊಂಡಿರುತ್ತದೆ. ನಂಬಿಕೆಯಲ್ಲಿ ಅನುಮಾನ, ಜೀವದ ಗಳಿಕೆಯಲ್ಲಿ ಅತ್ಯಪೇಕ್ಷೆಯನ್ನು ಒಳಗೊಂಡಿರುತ್ತದೆ. ಇದು ಅಪೂರ್ವ ಮತ್ತು ಸಾಮಾನ್ಯದ್ದಾಗಿರುತ್ತದೆ. ರಾಷ್ಟ್ರೀಯ ಮತ್ತು ವಿಶ್ವಾತ್ಮಕದ್ದಾಗಿರುತ್ತದೆ. ವಾಸ್ತವಿಕ ಮತ್ತು ರಹಸ್ಯಾತ್ಮಕದ್ದಾಗಿರುತ್ತದೆ. ಇತರೆಯವರಿಂದ ವಿವರಣೆಗಳಿಗೆ ಒಳಗಾಗುತ್ತಿದ್ದರೂ ತಾನು ಮಾತ್ರ ಏನನ್ನೂ ಹೇಳಲೂ ಇದು ಯತ್ನಿಸುವುದಿಲ್ಲ. ಇಂಥ ಸ್ಪಷ್ಟ ಸತ್ಯಗಳು ಮಾತ್ರ ಉಳಿದುಕೊಳ್ಳುತ್ತವೆ. ಏಕೆಂದರೆ ಹುಸಿವಿಮರ್ಶೆ ಮತ್ತು ಮಿಥ್ಯಾವಾಸ್ತವಿಕತೆ ನಮ್ಮ ತಲೆಮಾರಿನಲ್ಲಿ ಒಂದು ತೆರನ ವಿಸ್ಮರಣಾತ್ಮಕ ಸಾಹಿತ್ಯವನ್ನು ಸೃಷ್ಟಿಸಿದೆ.....

ಐ.ಬಿ. ಸಿಂಗರ್

---

* *'ದ ಕಲೆಕ್ಟೆಡ್ ಸ್ಟೋರೀಸ್'ನ ಲೇಖಕನ ಟಿಪ್ಪಣಿಯಲ್ಲಿ.*

ಮಾರ್ಕೆಟ್ ಬೀದಿಯ ಸ್ಪಿನೋಜ

೧

ವಾರ್ಸಾದ ಮಾರ್ಕೆಟ್ ಬೀದಿಯ ಮಹಡಿ ಗೋಪುರದಲ್ಲಿನ ತಮ್ಮ ಕೋಣೆಯಲ್ಲಿ ಡಾ. ನಹುಮ್ ಫಿಷಲ್‌ಸನ್ ನಿಧಾನವಾಗಿ ಅತ್ತಿಂದಿತ್ತ ನಡೆದಾಡುತ್ತಿದ್ದರು. ಡಾ. ಫಿಷಲ್‌ಸನ್ ಬಿಳಿಗಡ್ಡದ ತೆಳ್ಳನೆಯ ಗೂನು ಮನುಷ್ಯ. ಕುತ್ತಿಗೆಯಂಚಿನ ಒಂದಿಷ್ಟು ಕೂದಲುಗಳನ್ನು ಬಿಟ್ಟರೆ ತಲೆ ಪೂರ್ತಿ ಬೋಳಾಗಿತ್ತು. ಹಕ್ಕಿಯ ಕೊಕ್ಕಿನಂತೆ ಮೂಗು ಬಾಗಿತ್ತು. ಕಣ್ಣುಗಳ ರೆಪ್ಪೆ ಕಪ್ಪಗೆ ದೊಡ್ಡವಾಗಿದ್ದು ದೊಡ್ಡ ಪಕ್ಷಿಯೊಂದರ ರೆಕ್ಕೆಗಳಂತೆ ಬಡಿದಾಡುತ್ತಿದ್ದವು. ಇದು ಬೇಸಿಗೆ ಕಾಲದ ಕಾವಿನ ಸೆಖೆಯ ಸಂಜೆ ಹೊತ್ತು. ಆದರೂ ಡಾ. ಫಿಷಲ್‌ಸನ್ ಮಂಡಿಯವರೆಗೆ ಮುಟ್ಟುವ ಕರಿಕೋಟನ್ನು ತೊಟ್ಟಿದ್ದರು ಮತ್ತು ಗಡುಸಾದ ಕೊರಳಪಟ್ಟಿಯೊಂದಿಗೆ ಟೈಯನ್ನೂ ಕಟ್ಟಿದ್ದರು. ಬಾಗಿಲ ಬಳಿಯಿಂದ ಮಲಗುವ ಜಾಗದ ಕಿಟಕಿಯವರೆಗೆ ಹೆಜ್ಜೆ ಇರಿಸಿದ ಇವರು ಮತ್ತೆ ಹೊರಳಿದರು. ಹೊರಗಡೆ ನೋಡಬೇಕೆಂದರೆ ಯಾರೇ ಆದರೂ ಒಂದಿಷ್ಟು ಮೆಟ್ಟಿಲುಗಳನ್ನು ಹತ್ತಬೇಕಿತ್ತು. ಮೇಜಿನ ಮೇಲೆ ಹಿತ್ತಾಳೆಗಂಬದಲ್ಲಿ ಒಂದು ಮೊಂಬತ್ತಿ ಉರಿಯುತ್ತಿತ್ತು. ತರಾವರಿಯ ಕೀಟಗಳು ಬೆಳಕಿನ ಸುತ್ತ ಹಾರಾಡುತ್ತಿದ್ದವು. ಈಗಲೋ ಇನ್ನೊಂದು ಗಳಿಗೆಯಷ್ಟರಲ್ಲಿಯೋ ಯಾವುದಾದರೂ ಒಂದು ಕೀಟ ಬೆಂಕಿಯ ಹತ್ತಿರ ಹೋಗಿ ತನ್ನ ರೆಕ್ಕೆಯನ್ನು ಸುಟ್ಟುಕೊಳ್ಳುತ್ತದೆ ಅಥವಾ ಉರಿದುಹೋಗುತ್ತದೆ. ಉರಿ ಥಟ್ಟನೆ ಪ್ರಕಾಶಗೊಳ್ಳುತ್ತದೆ. ಇಂಥ ಕ್ಷಣಗಳಲ್ಲಿ ಡಾ. ಫಿಷಲ್‌ಸನ್ ಮುಖವನ್ನು ವಿಕಾರಗೊಳಿಸಿಕೊಳ್ಳುತ್ತಿದ್ದರು. ಇವರ ಸುಕ್ಕುಮುಖ ಅಲುಗಾಡುತ್ತಿತ್ತು. ಒಣತುಟಿಗಳು ಕಂಪಿಸುತ್ತಿದ್ದವು. ಕೊನೆಗೊಮ್ಮೆ ತಮ್ಮ ಜೇಬಿನಿಂದ ಕರ್ಚೀಫ್ ತೆಗೆದ ಇವರು ಕೀಟಗಳನ್ನು ಬೆದರಿಸಿದರು.

"ಇಲ್ಲಿಂದ ಹೊರಟ್ಹೋಗಿ, ಬುದ್ಧಿ ಇಲ್ಲದ ಮೂರ್ಖ ಮುಂಡೇವೆ" ಜೋರಾಗಿ ಬೈದರು.

"ನೀವಿಲ್ಲಿ ಬಿಸಿ ಮಾಡಿಕೊಳ್ಳೋದಿಲ್ಲ ; ನಿಮ್ಮನ್ನ ನೀವೇ ಸುಟ್ಟುಕೊಳ್ಳತೀರಿ."

ಕೀಟಗಳು ಹಾರಿಹೋದವು. ಆದರೆ ಒಂದು ಕ್ಷಣ ಕಳೆಯುವಷ್ಟರಲ್ಲಿ ಮತ್ತೆ ಮರಳಿ ಬಂದು ಬೆಳಕಿನ ಸುತ್ತ ಸುತ್ತತೊಡಗಿದವು. ಡಾ. ಫಿಷಲ್‌ಸನ್ ಸುಕ್ಕುಗಟ್ಟಿದ ಹಣೆಯ ಬೆವರನ್ನು ಒತ್ತಿಕೊಂಡು ನಿಟ್ಟುಸಿರಿಟ್ಟರು. "ಮನುಷ್ಯರಂತೆ ಇವಕ್ಕೂ ಆಸೆ. ಒಂದು ಕ್ಷಣದ ಉಲ್ಲಾಸ ಅಷ್ಟೆ". ಮೇಜಿನ ಮೇಲೆ ಲ್ಯಾಟಿನ್ ಭಾಷೆಯ ಒಂದು ಪುಸ್ತಕ ತೆರೆದುಕೊಂಡಿತ್ತು. ಇದರ ಅಗಲ ಸಾಲುಗಳ ನಡುವೆ ಡಾ. ಫಿಷಲ್‌ಸನ್ ಬರೆದಿದ್ದ ಸಣ್ಣ ಅಕ್ಷರಗಳ ಟಿಪ್ಪಣಿ ಮತ್ತು ಟೀಕೆಗಳು ತುಂಬಿದ್ದವು. ಇದು ಸ್ಪಿನೋಜನ ಎಥಿಕ್ಸ್. ಡಾ. ಫಿಷಲ್‌ಸನ್ ಇದನ್ನು ಕಳೆದ ಮೂವತ್ತು ವರ್ಷಗಳಿಂದಲೂ ಓದುತ್ತಿದ್ದರು. ಇದರ ಪ್ರತಿಯೊಂದು ವಾಕ್ಯ, ಟಿಪ್ಪಣಿ ಮತ್ತು ಅಭಿಪ್ರಾಯಗಳು ಇವರಿಗೆ ಕಂಠಸ್ಥವಾಗಿದ್ದವು. ಯಾವಾಗ ಬೇಕಾದರೂ ಒಂದು ನಿರ್ದಿಷ್ಟ ಪ್ಯಾರಾ ನೋಡಬೇಕು ಅನಿಸಿದರೆ ಇವರು ಹುಡುಕಾಡದಂತೆ ಅದನ್ನು ತೆರೆಯುತ್ತಿದ್ದರು. ಆದರೆ, ಹೀಗಿದ್ದೂ ಕೂಡ ಎಥಿಕ್ಸ್‌ನ ಅಧ್ಯಯನವನ್ನು ಪ್ರತಿದಿನವೂ ಗಂಟೆಗಟ್ಟಲೆ ಮುಂದುವರಿಸುತ್ತಿದ್ದರು. ತಮ್ಮ ಮೊಳಕೈನಲ್ಲಿ ಗಾಜಿನ ಕನ್ನಡಕ ಹಿಡಿಯುತ್ತಿದ್ದರು, ಪಿಸು ಗುಡುತ್ತಿದ್ದರು, ತಲೆ ಅಲುಗಿಸುತ್ತ ಒಪ್ಪಿಗೆ ಸೂಚಿಸುತ್ತಿದ್ದರು. ನಿಜವಾದ ಸಂಗತಿ ಏನೆಂದರೆ, ಡಾ. ಫಿಷಲ್‌ಸನ್ ತುಂಬ ಹೆಚ್ಚಾಗಿ ಅಧ್ಯಯನ ಮಾಡಿದ್ದರು. ಕ್ಲಿಷ್ಟ ವಾಕ್ಯಗಳು, ಪೂರ್ಣವಾಗಿ ಅರ್ಥವಾಗಿರದ ಭಾಗಗಳು ಮತ್ತು ರಹಸ್ಯಗಳನ್ನು ಒಡೆಯುವಂಥವನ್ನು ಇವರು ಹುಡುಕುತ್ತಿದ್ದರು. ಅರ್ಥವಾಗಿರದ ಪ್ರತಿಯೊಂದು ವಾಕ್ಯವೂ ಸ್ಪಿನೋಜನ ವಿದ್ಯಾರ್ಥಿಗಳಿಗೆಲ್ಲ ಕಟಕುತ್ತಲೇ ಇರುತ್ತಿತ್ತು. ಕಾಂಟ್ ಮತ್ತು ಅವನ ಅನುಯಾಯಿಗಳು ದಿಟವಾದ ಕಾರಣಗಳಿಗಾಗಿ ಈಗಾಗಲೇ ಎಲ್ಲ ರೀತಿಯ ವಿಮರ್ಶೆಯನ್ನೂ ಮಾಡಿದ್ದರು. ಡಾ. ಫಿಷಲ್‌ಸನ್ ಎಥಿಕ್ಸ್‌ಗೆ ಒಂದು ಟೀಕೆಯನ್ನು ಬರೆದಿದ್ದರು. ಡ್ರಾಯರ್ ತುಂಬ ಇವರ ಟಿಪ್ಪಣಿ ಮತ್ತು ಟೀಕೆಗಳಿದ್ದವು. ಆದರೆ ಇವರಿಂದ ಈ ಕಾರ್ಯವನ್ನು ಪೂರ್ಣಗೊಳಿಸಲು ಸಾಧ್ಯವಾಗಿರಲಿಲ್ಲ. ಹೊಟ್ಟೆಪಾಡನ್ನು ಸರಿದೂಗಿಸಿಕೊಳ್ಳುವುದು ಸುಮಾರು ವರ್ಷಗಳಿಂದಲೂ ಸಮಸ್ಯೆಯಾಗಿದ್ದು ಈಗ ದಿನದಿನಕ್ಕೂ ಹದಗೆಡಲಾರಂಭಿಸಿತ್ತು. ಈಗ ಒಂದಿಷ್ಟು ಚಮಚೆ ಗಂಜಿ ಸೇವಿಸುತ್ತಿರುವುದು ಇವರಿಗೆ ಹೊಟ್ಟೆನೋವು ತರಲಾರಂಭಿ ಸಿತ್ತು. "ಅಯ್ಯೋ ದೇವರೇ, ಇದು ಕಷ್ಟದ್ದು. ತುಂಬ ಕಷ್ಟಕರವಾದದ್ದು." ತಮಗೆ ತಾವೆ ಹೇಳಿಕೊಳ್ಳುತ್ತಿದ್ದರು. ತಿಷೆವಿತ್ಜ್‌ನ ರಬಾಯಿ ಯಾಗಿದ್ದ ಸ್ವರ್ಗವಾಸಿಯಾಗಿರುವ ಇವರ ತಂದೆ ಹೇಳುತ್ತಿದ್ದ ರೀತಿಯಲ್ಲಿಯೇ ಹೇಳುತ್ತಿದ್ದರು. "ಇದು ತುಂಬ ಗಡಸು, ತುಂಬಾ ಗಡಸು."

ಡಾ. ಫಿಷಲ್‌ಸನ್ ಸಾಯಲು ಹೆದರುತ್ತಿರಲಿಲ್ಲ. ಮೊದಲನೆಯದಾಗಿ, ಇವರು ಹೆಚ್ಚು ಕಾಲ ತಾರುಣ್ಯದವರಾಗಿರಲಿಲ್ಲ. ಎರಡನೆಯದಾಗಿ, ಎಥಿಕ್ಸ್‌ನ ನಾಲ್ಕನೆ ಅಧ್ಯಾಯದಲ್ಲಿ ಇದನ್ನು ಉಲ್ಲೇಖಿಸಲಾಗಿದೆ. "ಒಬ್ಬ ಸ್ವತಂತ್ರ ಮನುಷ್ಯ ಸಾವಿಗೆ ಹೊರತಾದುದನ್ನು ಚಿಂತಿಸುತ್ತಾನೆ ಮತ್ತು ತನ್ನ ಅರಿವಿನಲ್ಲಿ ಇವನು ಧ್ಯಾನಗೈಯ್ಯುವುದು ಸಾವನ್ನಲ್ಲ, ಬದುಕನ್ನು." ಮೂರನೆಯದಾಗಿ, ಇದನ್ನೂ ಅಲ್ಲಿಯೇ ಹೇಳಿದೆ, "ಮನುಷ್ಯನ ಮನಸ್ಸು ಮನುಷ್ಯ ದೇಹದೊಂದಿಗೇ ನಾಶವಾಗುವುದಿಲ್ಲ. ಇದು ಒಂದೆಡೆಯಲ್ಲಿ ಶಾಶ್ವತವಾಗಿ ಉಳಿದುಕೊಂಡಿರುತ್ತದೆ." ಹೀಗಿದ್ದರೂ ಸಹ, ಡಾ. ಫಿಷಲ್‌ಸನ್ ಅವರ ಹುಣ್ಣು (ಇದು ಕ್ಯಾನ್ಸರ್ ಇದ್ದರೂ ಇರಬಹುದು) ಇವರಿಗೆ ಬಾಧೆಯನ್ನೂ ಕೊಡುತ್ತಲೇ ಬಂದಿದೆ. ಇವರ ಮೂಗು ಈಗಾಗಲೇ ಕಟ್ಟಿಕೊಂಡಿದೆ. ಸದಾ ಕೆಮ್ಮುತ್ತಿರುತ್ತಾರೆ. ಪ್ರತಿಸಲವೂ ವಾಸನೆ ಸೂಸುವ ಉಸಿರನ್ನು ಹೊರಬಿಡುತ್ತಾರೆ. ಇವರು ಹೃದ್ರೋಗ ಮತ್ತು ನರದೌರ್ಬಲ್ಯಗಳಿಂದಲೂ ನರಳುತ್ತಿದ್ದಾರೆ. ಕೆಲವು ಸಲ ವಾಂತಿ ಮಾಡುತ್ತಾರೆ. ಮತ್ತೆ ಕೆಲವು ಸಲ ಇವರು ಈರುಳ್ಳಿ, ಬೆಳ್ಳುಳ್ಳಿ ಮತ್ತು ಹುರಿದ ತಿನಿಸುಗಳನ್ನು ತಿನ್ನಲು ಇಷ್ಟಪಡುತ್ತಾರೆ. ಡಾಕ್ಟರ್‌ಗಳು ಹೇಳಿದ್ದ ಔಷಧಿಗಳನ್ನೆಲ್ಲ ಇವರು ತುಂಬ ಹಿಂದೆಯೇ ಬಿಟ್ಟಿದ್ದರು, ತಮ್ಮದೇ ಆದ ವಿಧಾನಗಳನ್ನು ಅನುಸರಿಸುತ್ತಿದ್ದರು. ಊಟದ ನಂತರ ಮೂಲಂಗಿ ತುರಿಯನ್ನು ಸೇವಿಸುವುದು, ಹಾಸಿಗೆಯಲ್ಲಿ ಮಲಗಿದಾಗ ಒಂದು ಕಡೆಗೆ ತಲೆ ಹೊರಳಿಸಿಕೊಳ್ಳುವುದು ತುಂಬ ಉಪಯುಕ್ತವಾದುವು ಎನ್ನುವುದನ್ನು ಇವರು ಕಂಡುಕೊಂಡಿದ್ದರು. ಆದರೆ ಈ ಸರಳವೈದ್ಯ ವಿಧಾನಗಳು ತಾತ್ಕಾಲಿಕ ಉಪಶಮನದವು ಎಂದೂ ತಿಳಿದಿತ್ತು. ಇವರು ಭೇಟಿ ಮಾಡಿದ ಡಾಕ್ಟರ್‌ಗಳು ಇವರನ್ನು ಪರೀಕ್ಷಿಸಿ ಇವರಿಗೆ ಯಾವ ತೊಂದರೆಗಳೂ ಇಲ್ಲ ಎಂದಿದ್ದರು. "ಇದು ನರಗಳ ಒತ್ತಡ", ಅವರು ಹೇಳಿದ್ದರು. "ನೀವು ನೂರು ವರ್ಷದ ತನಕ ಬದುಕಿರತೀರಿ."

ಆದರೆ ಉರಿ ಬೇಸಿಗೆಯ ಈ ರಾತ್ರಿಯಲ್ಲಿ ಮಾತ್ರ ಡಾ. ಫಿಷಲ್‌ಸನ್ ಅವರಿಗೆ ತಮ್ಮ ಶಕ್ತಿ ಕ್ಷೀಣಿಸುತ್ತಿದೆ ಎಂದು ಭಾಸವಾಯಿತು. ಇವರ ಮಂಡಿಗಳು ಸೆಟೆದುಕೊಂಡವು, ನಾಡಿಗಳು ದುರ್ಬಲವಾದವು. ಓದಲೆಂದು ಕುಳಿತರು, ದೃಷ್ಟಿ ಮಂಜುಗಟ್ಟಿತು. ಪುಟದ ಅಕ್ಷರಗಳು ಹಸಿರಿನಿಂದ ಹಳದಿ ಬಣ್ಣಕ್ಕೆ ಹೊರಳಿದವು. ಸಾಲುಗಳು ಒಂದರೊಳಗೊಂದು ಕೂಡಿಕೊಂಡು ಮೇಲೆ ಕೆಳಗೆ ಹಾರಾಡತೊಡಗಿದವು. ಪುಸ್ತಕದ ಬಿಳಿ ಬಣ್ಣದ ಸ್ಥಳಗಳು ವಿಚಿತ್ರ ರೀತಿಯಲ್ಲಿ ಕಾಣದಂತಾದವು. ಮೇಲ್ಛಾವಣಿಯ

ತಗಡಿನಿಂದ ಕಾವು ನೇರವಾಗಿ ಕೆಳಕ್ಕೆ ಇಳಿಯತೊಡಗಿತ್ತು ; ಡಾ. ಫಿಷಲ್‌ಸನ್ ಅವರಿಗೆ ತಾವು ಒಲೆಗೂಡಿನೊಳಗೆ ಇರುವಂತೆ ಭಾಸವಾಗಿತ್ತು. ಕಿಟಕಿಯತ್ತ ಮೂರ್‍ನಾಲ್ಕು ಹೆಜ್ಜೆಗಳನ್ನು ಇರಿಸುತ್ತ ನಡೆದಾಡಿದವರು ಕೊನೆಗೆ ತಲೆಯನ್ನು ಹೊರಚಾಚಿ ಸಂಜೆಯ ತಂಪು ಗಾಳಿಗೆ ಒಡ್ಡಿದರು. ಈ ಭಂಗಿಯಲ್ಲಿ ಇವರು ತಮ್ಮ ಕಾಲುಗಳು ತೂಗಾಡುವಂತಾದವು ಎನ್ನುವ ಸಮಯದವರೆಗೂ ನಿಂತರು. "ಓಹ್, ಎಷ್ಟು ತಂಪಾಗಿರೋ ಗಾಳಿ" ಇವರು ಗೊಣಗಿದರು. "ನಿಜವಾಗಿಯೂ ಚೆನ್ನಾಗಿದೆ" ಇವರು ಸ್ಪಿನೋಜ ಹೇಳಿರುವುದನ್ನು ನೆನಪಿಸಿಕೊಂಡರು. ನೈತಿಕತೆ ಮತ್ತು ಸಂತಸಗಳು ಸಂಬಂಧ ಹೊಂದಿರುವಂಥವು. ಒಬ್ಬ ಮನುಷ್ಯ ನೀತಿವಂತನಾಗಿರುವುದು ಅವನಿಗೆ ಸ್ವಲ್ಪವಾದರೂ ಸಂತಸ ತರುವ ಕಾರಣದ್ದಾಗಿರುತ್ತದೆ.

೨

ಡಾ. ಫಿಷಲ್‌ಸನ್ ಕಿಟಕಿಯ ಹತ್ತಿರ ಮೇಲಿನ ಮೆಟ್ಟಲಿನಲ್ಲಿ ನಿಂತು ಹೊರ ನೋಡುತ್ತ ಎರಡು ಜಗತ್ತುಗಳನ್ನು ಕಾಣುತ್ತಿದ್ದರು. ಇವರ ಮೇಲ್ಗಡೆಯಲ್ಲಿ ದಟ್ಟವಾಗಿ ತುಂಬಿಕೊಂಡ ಸ್ವರ್ಗಗಳಿದ್ದವು. ಡಾ. ಫಿಷಲ್‌ಸನ್ ಖಗೋಳಶಾಸ್ತ್ರವನ್ನು ಗಂಭೀರವಾಗಿ ಅಧ್ಯಯನ ಮಾಡಿರಲಿಲ್ಲ. ಆದರೆ ಸೂರ್ಯನ ಸುತ್ತಲೂ ಇರುವ ಭೂಮಿಯಂಥ ಗ್ರಹಗಳಿಗೆ ಇರುವ ವ್ಯತ್ಯಾಸವನ್ನು, ಸ್ಥಿರವಾಗಿರುವ ನಕ್ಷತ್ರಗಳನ್ನು, ತಮ್ಮ ಬೆಳಕಿನ ಕಿರಣಗಳನ್ನು ನಮಗೆ ತಲುಪಿಸಲು ನೂರಾರು-ಸಾವಿರಾರು ವರುಷಗಳಾಗುವಷ್ಟು ದೂರದಲ್ಲಿ ಇರುವ ಹಲವಾರು ಸೂರ್ಯರುಗಳನ್ನೆಲ್ಲ ತಿಳಿದಿದ್ದರು. ವ್ಯೋಮಾಕಾಶದಲ್ಲಿ ನಕ್ಷತ್ರ ಪುಂಜಗಳ ನಡುವಿನ ಸಾಲಿನಲ್ಲಿ ಭೂಮಿ ಸಾಗುವ ಪ್ರಕಾಶಮಾನವಾದ ಜ್ಯೋತಿರ್ಮಾರ್ಗವನ್ನು ಇವರು ಗುರುತಿಸುತ್ತಿದ್ದರು. ತಾವು ವಿದ್ಯಾಭ್ಯಾಸ ಮಾಡಿದ ಸ್ವಿಟ್ಜರ್‌ಲೆಂಡ್‌ನಿಂದ ತಂದಿದ್ದ ಚಿಕ್ಕ ದೂರದರ್ಶಕವೊಂದನ್ನು ಡಾ. ಫಿಷಲ್‌ಸನ್ ಇರಿಸಿಕೊಂಡಿದ್ದರು. ಇದರಿಂದ ಚಂದ್ರನನ್ನು ನೋಡುವುದು ಇವರಿಗೆ ಸಂತೋಷ ತರುತ್ತಿತ್ತು. ಚಂದ್ರನ ಹೊರಮೈನಲ್ಲಿ ಇರುವ ಜ್ವಾಲಾಮುಖಿಗಳು ಸೂರ್ಯನ ಬೆಳಕಿನಲ್ಲಿ ಗೋಚರವಾಗುವುದನ್ನೂ, ಕತ್ತಲಿನಲ್ಲಿ ಮರೆಯಾಗುವುದನ್ನೂ ಇವರು ಸ್ಪಷ್ಟವಾಗಿ ಕಾಣುತ್ತಿದ್ದರು. ಉಬ್ಬುತಗ್ಗುಗಳು ಮತ್ತು ಏರಿಳಿವುಗಳನ್ನು ದಿಟ್ಟಿಸುವುದರಲ್ಲಿ ಇವರು ಯಾವಾಗಲೂ ಬೇಸರಗೊಳ್ಳುತ್ತಿರಲಿಲ್ಲ. ಇವೆಲ್ಲವೂ ಇವರಿಗೆ ದೂರದವಾಗಿಯೂ ಹತ್ತಿರದವಾಗಿಯೂ ಕಾಣುತ್ತಿದ್ದವು. ಒಟ್ಟಾಗಿಯೂ ಬಿಡಿಬಿಡಿಯಾಗಿಯೂ ಗೋಚರಿಸುತ್ತಿದ್ದವು. ಈಗಲೋ, ಇನ್ನೊಂದು

ಕ್ಷಣದಲ್ಲಿಯೋ ತನ್ನ ಹಿಂದೆ ಬೆಳಕಿನ ಬಾಲವನ್ನು ಇರಿಸಿಕೊಂಡ ಉಲ್ಕೆಯೊಂದು ಆಗಸದ ಸೀಮಾರೇಖೆಯಿಂದ ಉರುಳಿ ಬೀಳುತ್ತ ಕೊನೆಗೆ ಕಾಣದಂತಾಗುತ್ತದೆ. ಉಲ್ಕೆಗಳು ನಮ್ಮ ವಾತಾವರಣವನ್ನು ತಲುಪುತ್ತವೆ ಎನ್ನುವುದು ಡಾ. ಫಿಷಲ್‌ಸನ್ ಅವರಿಗೆ ತಿಳಿದಿತ್ತು ; ಇವು ಉರಿದು ಬೂದಿಯಾಗುವುದೋ ಅಥವಾ ಸಮುದ್ರದಲ್ಲಿ ಬೀಳುವುದೋ ಅಥವಾ ಯಾವುದಾದರೂ ಜನವಾಸದ ಪ್ರದೇಶದಲ್ಲಿ ಬೀಳುವುದೂ ಕೂಡ ತಿಳಿದಿತ್ತು. ಬೀದಿಯ ಉದ್ದಕ್ಕೂ ಇದ್ದ ಮನೆಗಳ ಮೇಲೆ ಛಾವಣಿಗಳ ಮೇಲೆಡೆಗಳಲ್ಲಿ ಡಾ. ಫಿಷಲ್‌ಸನ್ ಅವರಿಗೆ ನಿಧಾನವಾಗಿ ನಕ್ಷತ್ರಗಳು ಗೋಚರಿಸಿದವು. ಹೌದು, ಡಾ. ಫಿಷಲ್‌ಸನ್ ಮೇಲೆ ನೋಡಿದಾಗ ಸ್ಪಿನೋಜ ಹೇಳಿರುವ ಅನಂತ ವಿಸ್ತಾರದ ದೇವರಿಗೆ ಸೇರಿರುವ ಸ್ವರ್ಗಗಳಲ್ಲಿ ಇದ್ದರು. ಇದು ಡಾ. ಫಿಷಲ್‌ಸನ್ ಅವರಲ್ಲಿ ಇವರ ದುರ್ಬಲತೆಯನ್ನೂ ನಶ್ವರ ಮನುಷ್ಯ ಎನ್ನುವುದನ್ನೂ ತೊಡೆದು, ಅನಂತ ವಿಸ್ತಾರದಲ್ಲಿ ಕೂಡಿಸುವಂತೆ ತಾವು ಸದಾಕಾಲವೂ ಅಶರೀರಿ ಸೂಕ್ಷ್ಮಜೀವಿಗಳಾಗಿ ವಿಶ್ವದಲ್ಲಿ ಬೆರೆತುಕೊಂಡಿದ್ದು ದೈವಾಧೀನತೆಯಲ್ಲಿ ಬೇರೆಯಾಗಿರುವ ತಾವು ನಾಶವಾಗುವಂಥವರಲ್ಲ ಎಂಬ ಭಾವದಲ್ಲಿ ಇರಿಸಿತು. ಈ ಸಂದರ್ಭದಲ್ಲಿ ಡಾ. ಫಿಷಲ್ ಸನ್ ಅವರಿಗೆ ಅಮ್‌ಸ್ಟರ್‌ಡಾಮ್‌ನ ತತ್ವಜ್ಞಾನಿ ಹೇಳಿರುವ ಮನಸ್ಸಿನ ತುರೀಯಾತೀತ ಅವಸ್ಥೆಯ ಅನುಭವವಾಯಿತು. ಡಾ. ಫಿಷಲ್‌ಸನ್ ನೀಳವಾಗಿ ಉಸಿರೆಳೆದುಕೊಂಡರು. ಬಿಗಿಯಾದ ತಮ್ಮ ಕೊರಳಪಟ್ಟಿ ಬಿಗಿದುಕೊಳ್ಳುವಂತೆ ತಲೆಯನ್ನು ಮೇಲೆ ಎತ್ತಿದರು. ಭೂಮಿ, ಸೂರ್ಯ, ನಕ್ಷತ್ರಗಳೊಂದಿಗೆ ತಾವೂ ಕೂಡ ಜ್ಯೋತಿರ್ಮಾರ್ಗದಲ್ಲಿ ಸುತ್ತುತ್ತಿರುವಂತೆ ಭಾಸವಾಯಿತು. ಅನಂತವ್ಯೋಮದ ಚರಾಚರಗಳೆಲ್ಲ ಅನಂತದಲ್ಲಿನ ಆಲೋಚನೆಗಳು ಎನ್ನುವಂತಾಯಿತು. ಇವರ ಕಾಲುಗಳು ಹಗುರವಾಗಿ ತೂಕವಿಲ್ಲ ದಂತಾದವು. ತಮ್ಮ ಕಾಲುಗಳನ್ನು ಕಳಚಿಕೊಂಡು ಅನಂತವಿಸ್ತಾರಕ್ಕೆ ಹಾರುವವರಂತೆ ಇವರು ಕಿಟಕಿಯ ಎರಡು ಪಟ್ಟಿಗಳನ್ನೂ ಬಿಗಿಯಾಗಿ ಹಿಡಿದರು.

ಆಕಾಶವನ್ನು ದೃಷ್ಟಿಸುತ್ತಿದ್ದ ಡಾ. ಫಿಷಲ್‌ಸನ್ ಅವರ ದೃಷ್ಟಿ ಆಯಾಸಗೊಂಡು ಕೆಳಹರಿದಾಗ ಮುಂಗಡೆಯ ಮಾರ್ಕೆಟ್ ಬೀದಿಯತ್ತ ಹೊರಳಿತು. ಯನಷ್‌ನ ಮಾರ್ಕೆಟ್‌ನಿಂದ ಕಬ್ಬಿಣದ ಮಾರ್ಕೆಟ್‌ವರೆಗೆ ಸಣ್ಣ ಸಣ್ಣ ಚುಕ್ಕೆಗಳಂತೆ ಸಾಲಾಗಿ ಉರಿಯುತ್ತಿದ್ದ ಗ್ಯಾಸ್‌ದೀಪಗಳ ಕಿರು ಓಣಿಯವರೆಗೂ ಇವರ ದೃಷ್ಟಿಗೆ ಕಾಣುತ್ತಿತ್ತು. ಒಂದಿಷ್ಟು ಚಿಮಣಿಗಳಿಂದ ಹೊಗೆ ಏಳುತ್ತಿತ್ತು. ಬೇಕರಿಗಳವರು ತಮ್ಮ ಒಲೆಗಳನ್ನು

ಕಾವುಗೊಳಿಸುತ್ತಿದ್ದರು. ಕರಿಹೊಗೆಯೊಳಗೆ ಅಲ್ಲಲ್ಲಿ ಕಿಡಿಗಳೂ ಹಾರುತ್ತಿದ್ದವು. ಈ ಬೀದಿಯಲ್ಲಿ ಹಿಂದೆಂದೂ ಕಂಡಿರದಂಥ ಗದ್ದಲವಿತ್ತು, ಮತ್ತು ಬೇಸಿಗೆಯ ಸಂಜೆಯಲ್ಲಿ ಜನಜಂಗುಳಿ ತುಂಬಿತ್ತು. ಕಳ್ಳರು, ಸೂಳೆಯರು, ದರೋಡೆಕೋರರು, ಸೋಮಾರಿ ಹಾಸ್ಯಗಾರರು ಚೌಕದಲ್ಲಿ ಕುಳಿತು ಕುರುಕು ತಿಂಡಿಯ ಬಿಸ್ಕತ್ತುಗಳನ್ನು ತುಂಬಿಕೊಂಡು ಮುಂದೆ ನೋಡುತ್ತಿದ್ದರು. ಪ್ರಾಯದ ಹುಡುಗರು ಜೋರಾಗಿ ನಗುತ್ತಿದ್ದರು. ಹುಡುಗಿಯರು ಕಿರುಚಾಡುತ್ತಿದ್ದರು. ತನ್ನ ಮುಂದೆ ಲಿಂಬೆ ಶರಬತ್ತಿನ ಪಿಪಾಯಿ ಇರಿಸಿಕೊಂಡಿದ್ದವನೊಬ್ಬ ಒಂದೊಂದು ಸಲ ಜೋರಾಗಿ ಕೂಗುತ್ತಿದ್ದ. ರಕ್ತದ ಶರಬತ್ತಿನಂತಿದ್ದ ಹಣ್ಣುಗಳನ್ನು ಕತ್ತರಿಸಲು ಉದ್ದದ ಚಾಕನ್ನು ಇರಿಸಿಕೊಂಡಿದ್ದ ಕಲ್ಲಂಗಡಿ ಹಣ್ಣಿನವನು ತೀರ ಕೆಟ್ಟದನಿಯಲ್ಲಿ ಕೂಗಿಡುತ್ತಿದ್ದ. ಬರಬರುತ್ತ ಬೀದಿ ಮತ್ತಷ್ಟು ಗಡಿಬಿಡಿಯಲ್ಲಿ ಮುಳುಗಿತು. ತಮ್ಮ ದೊಡ್ಡ ಚಕ್ರಗಳನ್ನು ಉರುಳಿಸುತ್ತ ಫೈರ್‌ಇಂಜಿನ್‌ಗಳು ಬಂದವು ; ಇವು ಮುಂದೆ ಹೋಗದಂತೆ ಕಪ್ಪನೆಯ ಕುದುರೆಗಳು ಬೀಸುಗಾಳಿಯಂತೆ ಅಡ್ಡವಾದವು. ನಂತರ ತನ್ನ ಸೈರನ್‌ನೊಂದಿಗೆ ಆಂಬುಲೆನ್ಸ್ ಬಂದಿತು. ಆಮೇಲೆ ಒಂದಿಷ್ಟು ಕಪಟಿಗಳು ತಮ್ಮೊಳಗೆ ಹೊಡೆದಾಡತೊಡಗಿದರು, ಪೊಲೀಸರನ್ನೂ ಕರೆತರಬೇಕಾಯಿತು. ನಡೆದು ಹೋಗುತ್ತಿದ್ದ ಒಬ್ಬಾತ ಸುಲಿಗೆಗೆ ಒಳಗಾದ, ಓಡುತ್ತ ಸಹಾಯಕ್ಕಾಗಿ ಕೂಗಿಕೊಂಡ. ಕೆಲವು ಲಾರಿಗಳು ಹಳ್ಳಿಗಾಡಿನಿಂದ ಬೇಕರಿಯವರಿಗಾಗಿ ತಂದಿದ್ದ ಸೌದೆಗಳನ್ನು ಬೇಕರಿಗಳು ಇರುವಲ್ಲಿಗೆ ಹಾಕಲು ಹೋಗುತ್ತಿದ್ದವು. ಆದರೆ ಕುದುರೆಗಳು ಗಾಡಿಗಳನ್ನು ಮುಂದೆ ಎಳೆಯದೆ ಡ್ರೈವರ್‌ಗಳು ಪ್ರಾಣಿಗಳನ್ನು ಬೈಯುತ್ತಿದ್ದರು, ಮತ್ತು ಗಾಡಿಗಳವರು ಕುದುರೆಗಳಿಗೆ ಚಾಟಿಯಿಂದ ಹೊಡೆಯುತ್ತಿದ್ದರು. ಗೋಪುರಗಳ ಗಂಟೆಗಳು ಬಡಿಯಲು ಆರಂಭಿಸಿದವು. ಈಗಷ್ಟೇ ಏಳು ಗಂಟೆಯಾಗಿತ್ತು. ಈ ವೇಳೆಗೆ ಅಂಗಡಿಗಳನ್ನು ಮುಚ್ಚಲು ನಿಗದಿಸಲಾಗಿತ್ತು. ಆದರೆ ವ್ಯಾಪಾರ ಈಗ ತಾನೆ ಆರಂಭವಾಗಿತ್ತು. ಗಿರಾಕಿಗಳು ಆತುರಾತುರವಾಗಿ ಹಿಂಬಾಗಿಲುಗಳಲ್ಲಿ ಹೋಗುತ್ತಿದ್ದರು. ಬೀದಿಯಲ್ಲಿ ಇದ್ದ ರಷಿಯನ್ ಪೊಲೀಸರು ತಮಗೆ ಕೊಡಬೇಕಿರುವುದನ್ನು ಕೊಟ್ಟಿದ್ದುದರಿಂದ ಇದನ್ನೆಲ್ಲ ಗಮನಿಸುತ್ತಿರಲಿಲ್ಲ. ವ್ಯಾಪಾರಿಗಳು ತಮ್ಮ ಮಾಲುಗಳಿಗೆ ಕೂಗಿಕೊಳ್ಳುತ್ತಲೇ ಇದ್ದರು. ಪ್ರತಿಯೊಂದು ಕೂಗೂ ಇನ್ನೊಬ್ಬರದನ್ನು ಮೀರಿಸುತ್ತಿತ್ತು.

"ಬಂಗಾರ, ಬಂಗಾರ, ಬಂಗಾರ" ಕೊಳೆತ ಹಣ್ಣುಗಳನ್ನು ಇರಿಸಿಕೊಂಡಿದ್ದ ಹೆಂಗಸೊಬ್ಬಳು ಕಿರುಚುತ್ತಿದ್ದಳು.

"ಸಕ್ಕರೆ, ಸಕ್ಕರೆ, ಸಕ್ಕರೆ" ಬಿರಿದು ಒಡೆದ ಹಣ್ಣುಗಳನ್ನು ಇರಿಸಿಕೊಂಡಿದ್ದವನು ಅರಚುತ್ತಿದ್ದ.

"ತಲೆಗಳು, ತಲೆಗಳು, ತಲೆಗಳು" ಮೀನಿನ ತಲೆಗಳನ್ನು ಮಾರುವ ಹುಡುಗನೊಬ್ಬ ಚೀರಿಡುತ್ತಿದ್ದ.

ತುಸು ದೂರದಲ್ಲಿ ಕಾಣುವ ಹ್ಯಾಸ್ಡಿಕ್ ಓದುಮನೆಯ ಕಿಟಕಿಯಿಂದ, ಡಾ. ಫಿಷಲ್‌ಸನ್ ಅವರಿಗೆ ಉದ್ದನೆಯ ಸೈಡ್‌ಲಾಕ್‌ಗಳ ಹುಡುಗರು ತಮ್ಮ ಮುಂದೆ ಧರ್ಮಗ್ರಂಥಗಳನ್ನು ಇರಿಸಿಕೊಂಡು ಎತ್ತರದ ದನಿಯಲ್ಲಿ ಹಾಡುತ್ತಿರುವಂತೆ ಪಠಣದಲ್ಲಿ ಮುಳುಗಿರುವುದೂ ಕಾಣಿಸುತ್ತಿತ್ತು. ಹಮಾಲಿಗಳು, ಕೊಲೆಗಡುಕರು ಮತ್ತು ಹಣ್ಣು ಮಾರುವವರು ಕೆಳಗಿನ ಹೆಂಡದ ಅಂಗಡಿಯೊಂದರಲ್ಲಿ ಬೀರ್ ಕುಡಿಯುತ್ತಿದ್ದರು. ಹೆಂಡದಂಗಡಿಯ ತೆರೆದ ಬಾಗಿಲಿನಲ್ಲಿ ಸ್ನಾನದ ಮನೆಯಿಂದ ಬರುವ ಹಬೆಯಂತೆ ಹೊಗೆ ಬರುತ್ತಿತ್ತು, ಇಲ್ಲಿ ಎತ್ತರದ ದನಿಯಲ್ಲಿ ಸಂಗೀತವೂ ಇತ್ತು. ಫ್ಯಾಕ್ಟರಿಯಿಂದ ಮನೆಗೆ ಹೋಗುತ್ತಿರುವ ಕೆಲಸಗಾರರು ಹೆಂಡದಂಗಡಿಯ ಮುಂದೆ ಹಾದು ಹೋಗುತ್ತಿದ್ದರು. ಹೀಗೆ ಹೋಗುವಾಗ ಕುಡಿದಿರುವವರನ್ನೂ ಹಿಡಿದು ಕರೆದೊಯ್ಯುತ್ತಿದ್ದರು. ಡಾ. ಫಿಷಲ್‌ಸನ್ ಅವರಿಗೆ ಇದು ತಮ್ಮ ಬೆಂಕಿಯನ್ನು ತಾವೇ ನರಕಕ್ಕೆ ಒಯ್ಯುತ್ತಿರುವಂತೆ ಕಾಣಿಸುತ್ತಿತ್ತು. ಗೊಗ್ಗರುದನಿಯ ರೆಕಾರ್ಡ್ ಹಾಡುಗಳು ತಮ್ಮ ಕರ್ಕಶತೆಯನ್ನು ತೆರೆದ ಕಿಟಕಿಗಳಿಂದ ಹೊರಗೆ ಹರಿಸುತ್ತಿದ್ದವು. ಭಾರಿ ರಜೆಗಳ ಪೂಜಾಕ್ರಮಗಳು ಪೋಲಿಶೈಲಿಯ ಹಾಡುಗಳತ್ತ ಹೊರಳಿದ್ದವು.

ಡಾ. ಫಿಷಲ್‌ಸನ್ ಸಣ್ಣದಾಗಿ ಉರಿಯುತ್ತಿದ್ದ ದೀಪದತ್ತ ಗಂಭೀರವಾಗಿ ಹೊರಳಿದರು. ಕಿವಿಗಳನ್ನು ಇತ್ತ ಹೊರಳಿಸಿದರು. ಇಂಥ ಗದ್ದಲದ ನಡತೆ ನಿರುದ್ದಿಶ್ಯ ಕಾರಣದ್ದು ಎನ್ನುವುದು ಇವರಿಗೆ ತಿಳಿದಿತ್ತು. ಈ ಜನಗಳು ಹುರುಳಿಲ್ಲದ ಭಾವನೆಗಳಿಗೆ ಉತ್ತೇಜಿತರಾಗುತ್ತಾರೆ, ಭಾವನೆಗಳನ್ನೇ ಕುಡಿಯುತ್ತಾರೆ ಹಾಗೂ ಸ್ಪಿನೋಜನ ಪ್ರಕಾರ ಯಾವಾಗಲೇ ಆಗಲಿ ಇದು ಒಳ್ಳೆಯದಲ್ಲ. ಸಂತೋಷ ಬಂದ ಕೂಡಲೆ ಇವೆಲ್ಲ ಓಡಿಹೋಗುತ್ತವೆ. ಸೆರೆಯಲ್ಲಿ ಇರುವಂತೆ, ಕಾಯಿಲೆಯಂತೆ ಇವೆಲ್ಲ ಉಳಿದುಕೊಂಡಿರುತ್ತವೆ. ಅಜ್ಞಾನದ ಫಲದಿಂದ ಅವಮಾನ ಹಾಗೂ ನೋವನ್ನು ಅನುಭವಿಸುವಂತೆ ಮಾಡುತ್ತವೆ. ಮಾಳಿಗೆಗಳ ಮೇಲೆ ಸುತ್ತುತ್ತಾ ಹಾರಾಡುವ ಬೆಕ್ಕುಗಳೂ ಕೂಡ ಪೇಟೆಯಲ್ಲಿ ಇರುವ ಇವರಿಗಿಂತ ಹೆಚ್ಚು ಆರಾಮವಾಗಿ ಇರುತ್ತವೆ. ಇವೂ ಸಹ

ಕೆಲಸದ ಹೆಂಗಸರ ದನಿಯಲ್ಲಿ ಕಿರುಚುತ್ತವೆ ಹಾಗೂ ದೆವ್ವಗಳಂತೆ ಗೋಡೆಗಳ ಮೇಲೆ ಓಡುತ್ತವೆ. ಚಾವಣಿ ಹಾಗೂ ಸೂರುಗಳ ಮೇಲೆ ನೆಗೆದು ಹಾರುತ್ತವೆ. ಒಂದು ಮರಿ ಬೆಕ್ಕು ಡಾ. ಫಿಷಲ್‌ಸನ್ ಅವರ ಕಿಟಕಿಯ ಅಂಚಿನಲ್ಲಿ ಹಾರಿ ಅರಚಿತು. ಡಾ. ಫಿಷಲ್ ಸನ್ ಅವರೂ ಈಗ ಬೆಚ್ಚುವಂತಾಯಿತು. ಡಾಕ್ಟರ್ ಕಿಟಕಿಯ ಒಳಸರಿದು ಪಟ್ಟಿಯನ್ನು ಹಿಡಿದರು. ಕರಿಪ್ರಾಣಿಯ ಹಳದಿ ಕಣ್ಣುಗಳನ್ನು ನೇರವಾಗಿ ನೋಡಿದರು. "ಥತ್, ದೂರ ಹೋಗು. ಅಜ್ಞಾನಿ ಮುಂಡೇದೆ !" ಮರಿಬೆಕ್ಕು ಓಡಿ ಹೋಗುವವರೆಗೂ ಮೇಲಿನ ಪಟ್ಟಿಯನ್ನು ಇವರು ಹಿಡಿದೇ ಇದ್ದರು.

೩

ಡಾ. ಫಿಷಲ್‌ಸನ್ ಅವರು ತತ್ವಶಾಸ್ತ್ರವನ್ನು ಅಧ್ಯಯನ ಮಾಡುತ್ತಿದ್ದ ಜ್ಯೂರಿಚ್‌ನಿಂದ ವಾರ್ಸಾಗೆ ಬಂದಾಗ ಇವರಿಗೆ ಭವ್ಯ ಭವಿಷ್ಯವೊಂದು ಕಾದಿತ್ತು. ಇವರು ಸ್ಪಿನೋಜನ ಮೇಲೆ ಒಂದು ಮುಖ್ಯವಾದ ಪುಸ್ತಕ ಬರೆಯುತ್ತಿರುವುದು ಇವರ ಸ್ನೇಹಿತರುಗಳಿಗೆಲ್ಲ ತಿಳಿದಿತ್ತು. ಪೋಲಿಷ್ ಭಾಷೆಯ ಯಹೂದಿ ಪತ್ರಿಕೆಯೊಂದು ಇವರನ್ನು ಬರಹಗಳಿಗಾಗಿ ಸ್ವಾಗತಿಸಿತ್ತು ; ಹಲವಾರು ಶ್ರೀಮಂತ ಮನೆಗಳವರಿಗೆ ಇವರು ಗೌರವಾನ್ವಿತ ಅತಿಥಿಗಳಾಗಿದ್ದರು, ಇವರನ್ನು ವಾರ್ಸಾದಲ್ಲಿನ ಸಿನಗಾಗ್‌ನ ಗ್ರಂಥಾಲಯಕ್ಕೆ ಮುಖ್ಯ ಗ್ರಂಥಪಾಲಕರನ್ನಾಗಿಸಿದ್ದರು. ಹೀಗಿದ್ದರೂ ಆಗ ಇವರನ್ನು ಮದುವೆಯಾಗದ ವಯಸ್ಸಾದ ಗಂಡು ಎಂದು ತೀರ್ಮಾನಿಸಿದ್ದರು. ಮದುವೆ ದಲ್ಲಾಳಿಗಳು ಶ್ರೀಮಂತ ಹೆಣ್ಣುಗಳ ಹಲವಾರು ಸಂಬಂಧಗಳಿಗಾಗಿ ಇವರನ್ನು ಕೇಳಿ ನೋಡಿದರು. ಆದರೆ ಡಾ. ಫಿಷಲ್‌ಸನ್ ಈ ಆಹ್ವಾನಗಳನ್ನು ಒಪ್ಪಿಕೊಳ್ಳಲಿಲ್ಲ. ಇವರು ಸ್ಪಿನೋಜನಂತೆ ಏಕಾಂಗಿಯಾಗಿ ಇರಬೇಕು ಅಂದುಕೊಂಡರು, ಮತ್ತು ಹೀಗೆಯೇ ಉಳಿದುಕೊಂಡರು. ಆದರೆ ರಬಾಯಿಗಳೊಂದಿಗೆ ಭಿನ್ನಾಭಿಪ್ರಾಯ ಮೂಡಿತ್ತು. ಏಕೆಂದರೆ ಇವರು ಹೊಂದಿದ್ದ ವೈಚಾರಿಕ ಆಲೋಚನೆಗಳ ಕಾರಣದಿಂದ. ಇದರಿಂದಾಗಿ ಇವರು ಹೊಂದಿದ್ದ ಗ್ರಂಥ ಪಾಲಕ ಹುದ್ದೆಗೆ ರಾಜೀನಾಮೆ ಕೊಡುವಂತಾಗಿತ್ತು. ಇದಾದ ನಂತರ ಸುಮಾರು ವರ್ಷ ಗಳ ಕಾಲ ಹೀಬ್ರೂ ಮತ್ತು ಜರ್ಮನ್ ಪಾಠಗಳನ್ನು ಹೇಳಿಕೊಡುತ್ತ ಇವರು ತಮ್ಮ ಜೀವಿತವನ್ನು ಆಧರಿಸಿಕೊಂಡಿದ್ದರು. ಆಮೇಲೆ ಇವರು ಕಾಯಿಲೆ ಬಿದ್ದಾಗ ಬರ್ಲಿನ್‌ನ ಯಹೂದಿ ಸಂಘ ಇವರಿಗೆ ವರ್ಷಕ್ಕೆ ಐನೂರು ಮಾರ್ಕ್‌ಗಳನ್ನು ಕೊಡಲು

ತೀರ್ಮಾನಿಸಿತ್ತು. ಇದಕ್ಕೆ ಕಾರಣರಾದದ್ದು ಬಹುಶಃ ಸುಪ್ರಸಿದ್ಧರಾದ ಡಾ. ಹೈಲ್ದ್‌ಷ್ಮೈರ್ ಇರಬಹುದು. ತತ್ವಶಾಸ್ತ್ರದ ವಿಷಯದಲ್ಲಿ ಈ ಇಬ್ಬರಿಗೂ ಪತ್ರ ವ್ಯವಹಾರವಿತ್ತು. ನಿವೃತ್ತಿ ವೇತನದಂತೆ ಬರುತ್ತಿದ್ದ ಈ ಅಲ್ಪ ಹಣದ ಕಾರಣದಿಂದ ಡಾ. ಫಿಷಲ್‌ಸನ್ ಮಹಡಿಗೋಪುರದ ಕೋಣೆಗೆ ವಾಸಕ್ಕೆ ಬಂದು ನಿಂತು ಒಂದು ಸೀಮೆಎಣ್ಣೆ ಸ್ಟವ್‌ನಿಂದ ಸ್ವತಃ ಅಡುಗೆ ಮಾಡಿಕೊಳ್ಳಲು ಆರಂಭಿಸಿದ್ದರು. ಇವರ ಬಳಿ ಹಲವಾರು ಖಾನೆಗಳ ಒಂದು ಮರದ ಬೀರಿತ್ತು. ಪ್ರತಿಯೊಂದು ಖಾನೆಯ ಮೇಲೂ ಇದರಲ್ಲಿ ಇರುತ್ತಿದ್ದ ಆಹಾರ ಪದಾರ್ಥದ ಹೆಸರಿನ ಚೀಟಿಯಿತ್ತು - ಗೋಧಿ, ಅಕ್ಕಿ, ಬಾರ್ಲಿ, ಈರುಳ್ಳಿ, ಕ್ಯಾರೆಟ್, ಆಲೂಗಡ್ಡೆ, ಅಣಬೆ. ವಾರಕ್ಕೆ ಒಂದು ಸಲ ತಮಗೆ ಬೇಕಿರುವ ಸಾಮಗ್ರಿಗಳನ್ನು ಕೊಂಡು ತರಲು ಹೋಗುತ್ತಿದ್ದ ಡಾ. ಫಿಷಲ್‌ಸನ್ ಅಗಲದ ತಮ್ಮ ದೊಡ್ಡ ಕರಿ ಹ್ಯಾಟ್ ಹಾಕಿಕೊಂಡು, ಒಂದು ಕೈಯಲ್ಲಿ ಬುಟ್ಟಿ ಮತ್ತೊಂದು ಕೈಯಲ್ಲಿ ಸ್ಪಿನೋಜನ ಎಥಿಕ್ಸ್ ಹಿಡಿದು ಹೊರಡುತ್ತಿದ್ದರು. ಸಾಮಾನುಗಳನ್ನು ಕೊಡುವುದು ತಡವಾಯಿತೆಂದರೆ ಇವರು ಎಥಿಕ್ಸ್‌ನ್ನು ತೆರೆಯುತ್ತಿದ್ದರು. ವ್ಯಾಪಾರಿಗಳಿಗೆ ಇವರ ಪರಿಚಯವಿತ್ತು, ತಮ್ಮ ಅಂಗಡಿಗಳಿಗೆ ಇವರನ್ನು ಕರೆಯುತ್ತಿದ್ದರು.

"ಚೆನ್ನಾಗಿರೋ ಒಳ್ಳೆ ಗಿಣ್ಣಿನ ತುಂಡು ಡಾಕ್ಟರೇ - ನಿಮ್ಮ ಬಾಯೊಳಗೇ ಕರಗುತ್ತೆ".

"ಈಗ ತಾನೆ ಕಾಡಿಂದ ಬಂದಿರೋ ಅಣಬೆ ಡಾಕ್ಟರೇ."

"ಹೆಂಗಸರಿಗೆ ದಾರಿ ಬಿಡರಿ ಡಾಕ್ಟರೇ" ಕಟುಕ ಕೂಗುತ್ತಿದ್ದ. "ದಯವಿಟ್ಟು ಬಾಗಿಲು ಕಟ್ಟಿಕೊಳ್ಳಬೇಡಿ."

ತಮ್ಮ ಕಾಯಿಲೆಯ ಮೊದಲ ದಿನಗಳಲ್ಲಿ ಡಾ. ಫಿಷಲ್‌ಸನ್ ಸಂಜೆಯ ಹೊತ್ತಿನಲ್ಲಿ ಒಂದು ಕೆಫೆಗೆ ಹೋಗುತ್ತಿದ್ದರು. ಈ ಕೆಫೆ ಹೀಬ್ರೂ ಉಪಾಧ್ಯಾಯರು ಮತ್ತು ಇತರೆ ಮೇಧಾವಿಗಳಿಗೆ ಅನುಕೂಲವಾದುದಾಗಿತ್ತು. ಇಲ್ಲಿ ಅರ್ಧಲೋಟ ಕರಿಕಾಫಿ ಕುಡಿಯುತ್ತ ಚೆಸ್ ಆಡುವುದು ಇವರಿಗೆ ಅಭ್ಯಾಸವಾಗಿತ್ತು. ಕೆಲವು ಸಲ ಇವರು ಹೋಲಿಕ್ರಾಸ್ ಬೀದಿಯಲ್ಲಿ ಎಲ್ಲ ತರದ ಹಳೆಪುಸ್ತಕ ಹಾಗೂ ಪತ್ರಿಕೆಗಳು ಅಗ್ಗದ ಬೆಲೆಗೆ ಸಿಗುವ ಅಂಗಡಿಗಳಲ್ಲಿ ಹೋಗಿ ನಿಲ್ಲುತ್ತಿದ್ದರು. ಒಂದೊಂದು ಸಲ ಇವರ ಹಳೆಯ ಶಿಷ್ಯರಲ್ಲಿ ಒಬ್ಬ ಸಂಜೆಹೊತ್ತಿನಲ್ಲಿ ಹೋಟೆಲ್ ಒಂದರಲ್ಲಿ ಇವರನ್ನು

ಭೇಟಿಯಾಗುವ ಕಾರ್ಯಕ್ರಮವನ್ನು ಏರ್ಪಡಿಸಿರುತ್ತಿದ್ದ. ಡಾ. ಫಿಷಲ್‌ಸನ್ ಬಂದಾಗ ಈತ ತನ್ನ ಸ್ನೇಹಿತರುಗಳಿಗೆಲ್ಲ ಆಶ್ಚರ್ಯ ತೋರಿಸಿಕೊಳ್ಳುತ್ತ ಇವರು ಟೇಬಲ್‌ನ ಮುಖ್ಯ ಕುರ್ಚಿಯಲ್ಲಿ ಕೂರಲು ಬಲವಂತವಾಗಿ ಒತ್ತಾಯಿಸಿ ತಮ್ಮನ್ನೆಲ್ಲ ಕುರಿತು ಭಾಷಣ ಮಾಡಲೆಂದು ಕೋರುತ್ತಿದ್ದ. ಆದರೆ ಇವೆಲ್ಲ ತುಂಬ ಹಿಂದೆ ನಡೆಯುತ್ತಿದ್ದ ಸಂಗತಿಗಳು. ಈಗ ಜನರಿಗೆ ಇವರ ಬಗೆಗೆ ಹೆಚ್ಚಿನ ಆಸಕ್ತಿಯೇನಿಲ್ಲ. ಇವರು ತಾವಾಗಿಯೇ ಪೂರ್ತಿಯಾಗಿ ದೂರವಾಗಿರುವ ಮರೆತುಹೋಗಿರುವ ಮನುಷ್ಯರಾಗಿದ್ದರು. ೧೯೦೫ರಲ್ಲಿ ಹುಡುಗರು ಬೀದಿಗಳಲ್ಲಿ ಏರ್ಪಡಿಸಿದ ಸ್ಟ್ರೈಕ್‌ಗಳು, ಪೊಲೀಸ್ ಸ್ಟೇಷನ್‌ಗಳಿಗೆ ಬಾಂಬ್‌ಗಳನ್ನು ಹಾಕಿದ್ದು, ಮುಷ್ಕರಕಾರರಿಗೆ ಶೂಟ್ ಮಾಡಿದ್ದು; ಇದರಿಂದಾಗಿ ಅಂಗಡಿಗಳು ವಾರದ ದಿನಗಳಲ್ಲಿಯೂ ಪೂರ್ಣವಾಗಿ ಮುಚ್ಚಿಕೊಂಡಿದ್ದವು. ಹೀಗಾಗಿ ಇವರು ಜನರಿಗೆ ಪೂರ್ತಿಯಾಗಿ ಮರೆತು ಹೋಗುವಂತಾಗಿದ್ದರು. ಆಧುನಿಕ ಯಹೂದಿಗಳು ಮಾಡುವ ಎಲ್ಲವೂ ಇವರಿಗೆ ಹೀನಾಯವೆನ್ನಿಸಿತ್ತು - ಯಹೂದಿವಾದ, ಸಮಾಜವಾದ, ನಾಸ್ತಿಕವಾದ. ಪ್ರಶ್ನಿಸುವ ಪ್ರಾಯದವನೊಬ್ಬ ಇತರರಿಗೆ ಏನೂ ಅಲ್ಲ ಅನ್ನಿಸುತ್ತಿತ್ತು. ಆದರೆ ಅಜ್ಞಾನದಿಂದ ಸಮಾಜವನ್ನು ಒಡೆಯುವವನು ಯಾವ ಕಾರಣವೂ ಇಲ್ಲದೆ ವಿನಾಕಾರಣ ಸಮಾಜದಿಂದ ಹೊರಗೆ ಹೋಗುವ ಸಾಧ್ಯತೆಯಿತ್ತು. ಇವರು ಈಗಲೂ ಹೀಬ್ರೂ ಪತ್ರಿಕೆಯೊಂದನ್ನು ಓದುತ್ತಿದ್ದರು. ಆದರೆ ಆಧುನಿಕ ಹೀಬ್ರೂವಿನಲ್ಲಿ ಬೈಬಲ್ ಅಥವಾ ಮಿಷ್ನಾಗಳಲ್ಲಿ ಇರುವಂಥ ಮಾರ್ಗಗಳು ಇಲ್ಲ ಎಂಬ ಭಾವನೆ ತಾಳಿಕೊಂಡಿದ್ದರು. ಪೋಲಿಷ್ ಪದಗಳಲ್ಲಿನ ಸ್ಪೆಲಿಂಗ್ ಕೂಡ ಆಗಲೇ ಬದಲಾಗುತ್ತಿದ್ದವು. ಹೆಸರಾಂತ ಆಧ್ಯಾತ್ಮಿಕ ಮನುಷ್ಯರೂ ವಿನಾಕಾರಣ ಮರೆ ಯುತ್ತಾರೆ ಮತ್ತು ತಮ್ಮದೊಂಬಿಗಳಲ್ಲಿ ಮುಳುಗುತ್ತಾರೆ ಎಂದು ಡಾ. ಫಿಷಲ್‌ಸನ್ ತೀರ್ಮಾನಿಸಿದ್ದರು. ಆಗೀಗ ಇವರು ಈಗಲೂ ಗ್ರಂಥಾಲಯಗಳಿಗೆ ಭೇಟಿ ನೀಡುತ್ತಿದ್ದರು. ಆಧುನಿಕ ಇತಿಹಾಸ ಮತ್ತು ತತ್ವಶಾಸ್ತ್ರದ ಕೆಲವು ಪುಸ್ತಕಗಳನ್ನು ಎರವಲು ತರುತ್ತಿದ್ದರು. ಆದರೆ ಈ ಪ್ರೊಫೆಸರ್‌ಗಳಿಗೆಲ್ಲ ಸ್ಪಿನೋಜ ಅರ್ಥವಾಗಿಲ್ಲ ಎನ್ನುವುದನ್ನು ಇವರು ಕಂಡುಕೊಂಡರು ; ಇವನನ್ನು ತಪ್ಪಾಗಿ ಉದಾಹರಿಸುವುದು ; ತಮ್ಮ ಗೊಂದಲಗಳ ಅಸಂಬದ್ಧ ಆಲೋಚನೆಗಳನ್ನೆಲ್ಲ ಈ ತತ್ವಜ್ಞಾನಿಗೆ ಆರೋಪಿಸುವುದು ; ಹೀಗಿದ್ದೂ, ಇವರೆಲ್ಲ ಈ ಮಾರ್ಗದಲ್ಲಿಯೇ ಭಾವೋದ್ವೇಗಗಳಲ್ಲಿ ಏಕೆ ಹೋಗುತ್ತಿದ್ದಾರೆ ಎನ್ನುವುದು ಡಾ. ಫಿಷಲ್‌ಸನ್ ಅವರಿಗೆ ತಿಳಿಯದಂತಾಗಿತ್ತು, ಇವರು ಕೋಪಗೊಳ್ಳುತ್ತಿದ್ದರು, ಥಟ್ಟನೆ ಪುಸ್ತಕ ಮುಚ್ಚುತ್ತಿದ್ದರು, ದೂರ ತಳ್ಳುತ್ತಿದ್ದರು. "ಮೂರ್ಖರು", 'ಇವರು

ಗೊಣಗುತ್ತಿದ್ದರು. "ಕತ್ತೆಗಳು, ಮೊನ್ನೆ ಹುಟ್ಟಿರೋರು". ಆನಂತರ ಇವರು ಎಂದಿಗೂ ಆಧುನಿಕ ತತ್ವಶಾಸ್ತ್ರವನ್ನು ನೋಡಬಾರದು ಎಂದು ಆಣೆ ಇಟ್ಟುಕೊಂಡಿದ್ದರು.

೪

ಪ್ರತಿ ಮೂರು ತಿಂಗಳಿಗೊಮ್ಮೆ ಹಣ ಪಾವತಿ ಮಾಡಲು ಬರುವ ವಿಶೇಷ ಪೋಸ್ಟ್‌ಮ್ಯಾನ್ ಡಾ. ಫಿಷಲ್‌ಸನ್ ಅವರಿಗೆ ಎಂಬತ್ತು ರೂಬಲ್‌ಗಳನ್ನು ತರುತ್ತಿದ್ದ. ಜುಲೈ ತಿಂಗಳ ಆರಂಭದಲ್ಲಿ ಇವರು ತಮ್ಮ ಮೂರು ತಿಂಗಳ ಹಣವನ್ನು ನಿರೀಕ್ಷಿಸುತ್ತಿದ್ದರು. ಆದರೆ ದಿನಗಳ ಮೇಲೆ ದಿನಗಳು ಉರುಳಿದವು. ದಪ್ಪ ಮೀಸೆಯ, ಷರಟಿನಲ್ಲಿ ಹೊಳೆವ ಗುಂಡಿಗಳನ್ನು ಉಳ್ಳ ಎತ್ತರದ ಮನುಷ್ಯ ಬರಲಿಲ್ಲ. ಡಾಕ್ಟರ್ ಉದ್ವಿಗ್ನಗೊಂಡರು. ಇವರ ಬಳಿ ಒಂದು ಗ್ರೋಷನ್ ಮಾತ್ರ ಉಳಿದಿತ್ತು. ಯಾರಿಗೆ ಗೊತ್ತು - ಬರ್ಲಿನ್ ಸಂಘ ತನ್ನ ನೆರವನ್ನು ಹಿಂತೆಗೆದುಕೊಂಡಿರಬಹುದು ; ಅಥವಾ ಡಾ. ಹೈಲ್ಡ್‌ಷ್ಮೈರ್ ತೀರಿಕೊಂಡಿರಬಹುದು, ದೇವರಿಗೇ ಗೊತ್ತು ; ಪೋಸ್ಟ್ ಆಫೀಸಿನ ವ್ಯವಹಾರದಲ್ಲಿ ಅಜಾಗರೂಕತೆ ನಡೆದಿರಬಹುದು. ಪ್ರತಿಯೊಂದಕ್ಕೂ ಒಂದೊಂದು ಕಾರಣ ಇರುತ್ತದೆ ಎಂದು ಡಾ. ಫಿಷಲ್‌ಸನ್ ಅವರಿಗೆ ತಿಳಿದಿತ್ತು. ಎಲ್ಲದಕ್ಕೂ ದೃಢಚಿತ್ತದಲ್ಲಿಯೇ ಇರಬೇಕು. ಎಲ್ಲವೂ ಸಂಭವನೀಯವಾದುದೇ. ಹಾಗೂ ಮನುಷ್ಯ ಇಂಥವುಗಳಿಗೆಲ್ಲ ಚಿಂತೆಗೆ ಒಳಗಾಗಬೇಕಿಲ್ಲ. ಚಿಂತೆ ಯಾವಾಗಲೂ ಮೆದುಳನ್ನು ಪ್ರವೇಶಿಸುತ್ತದೆ ಹಾಗೂ ನೊಣಗಳಂತೆ ಮುತ್ತಿಕೊಳ್ಳುತ್ತದೆ. ಕೆಟ್ಟದ್ದು ಮತ್ತಷ್ಟು ಕೆಟ್ಟದಾಗುವಂತಾಗುತ್ತದೆ. ಇದು ಇವನನ್ನೇ ಆವರಿಸಿಕೊಳ್ಳುತ್ತದೆ. ಇವನು ಆತ್ಮಹತ್ಯೆ ಗೈದುಕೊಳ್ಳುವತ್ತ ಸಾಗುತ್ತಾನೆ. ಆದರೆ ಸ್ಪಿನೋಜ ಆತ್ಮಹತ್ಯೆಯನ್ನು ಸಮ್ಮತಿಸಿಲ್ಲ ಎನ್ನುವುದು ಇವನಿಗೆ ಆನಂತರ ನೆನಪಾಗುತ್ತದೆ. ಆಗ ತನ್ನ ಜೀವಿತವನ್ನು ಪಾಪಗಳೊಂದಿಗೆ ತುಲನೆ ಮಾಡಿಕೊಳ್ಳುತ್ತಾನೆ.

ಒಂದು ದಿನ ಡಾ. ಫಿಷಲ್‌ಸನ್ ಅವರು ಸ್ವರಪ್ರಸ್ತಾರದ ಪುಸ್ತಕವೊಂದನ್ನು ಅಂಗಡಿಯೊಂದರಲ್ಲಿ ಕೊಳ್ಳಲು ಹೊರಗೆ ಹೋದಾಗ, ಜನ ಯುದ್ಧದ ಬಗೆಗೆ ಮಾತನಾಡುವುದನ್ನು ಕೇಳಿಸಿಕೊಂಡರು. ಸೈಬೀರಿಯಾದ ಎಲ್ಲೋ ಒಂದೆಡೆ ಆಸ್ಟ್ರಿಯಾದ ದೊರೆಯನ್ನು ಶೂಟ್ ಮಾಡಲಾಗಿದೆ. ಆಸ್ಟ್ರಿಯಾದವರು ಸೈಬೀರಿಯಾದವರ ಮೇಲೆ ಪ್ರತೀಕಾರ ತೀರಿಸಿಕೊಳ್ಳಲು ಹೊರಡುತ್ತಿದ್ದಾರೆ. ಅಂಗಡಿ ಮಾಲಿಕ ಇನ್ನೂ ಹರೆಯದವನು,

ಹಳದಿ ಗಡ್ಡ ಮತ್ತು ಹಳದಿ ಕಣ್ಣುಗಳುಳ್ಳ ಇವನು ಹೇಳಿದ್ದ, "ನಾವು ಒಂದು ಸಣ್ಣ ಯುದ್ಧ ಎದುರಿಸತಿದೀವಿ". ಇವನು ಡಾ. ಫಿಷಲ್‌ಸನ್ ಅವರಿಗೆ ಒಂದಿಷ್ಟು ಆಹಾರ ಸಾಮಗ್ರಿಗಳನ್ನು ಸಂಗ್ರಹಿಸಿಕೊಳ್ಳುವಂತೆ ಹೇಳಿದ. ಏಕೆಂದರೆ ಸಮೀಪಿಸುತ್ತಿರುವ ಭವಿಷ್ಯ ತೀರ ಕಡಿಮೆಯದಾಗಿರುವಂತಿದೆ.

ಎಲ್ಲವೂ ಶೀಘ್ರವಾಗಿಯೇ ನಡೆಯಿತು. ಡಾ. ಫಿಷಲ್‌ಸನ್ ಅವರು ದಿನಪತ್ರಿಕೆಗೆ ನಾಲ್ಕು ಗ್ರೋಷನ್‌ಗಳನ್ನು ಖರ್ಚು ಮಾಡಬಹುದೇ ಎನ್ನುವುದನ್ನು ನಿರ್ಧರಿಸಿಕೊಳ್ಳಲಾಗ ಲಿಲ್ಲ. ಪೋಸ್ಟರ್‌ಗಳು ಯುದ್ಧಕ್ಕೆ ಭರ್ತಿಯಾಗುವವರ ಪ್ರಚಾರಕ್ಕೆಂದು ತೂಗಿಕೊಂಡಿ ದ್ದವು. ಬೀದಿಯಲ್ಲಿ ನಡೆದಾಡುವ ಜನರು ದುಂಡನೆಯ, ಕಬ್ಬಿಣದ ಪಟ್ಟಿಗಳನ್ನು ಸೊಂಟಕ್ಕೆ ಬಿಗಿದುಕೊಂಡಿದ್ದರು, ತಾವು ಸೈನ್ಯಕ್ಕೆ ಭರ್ತಿಯಾಗಿರುವ ಸೂಚನೆಯನ್ನು ತೋರಿಕೊಳ್ಳುತ್ತಿದ್ದರು. ಇವರ ಹಿಂದೆ ಅಳುತ್ತಿರುವ ಇವರ ಹೆಂಡತಿಯರೂ ಇರುತ್ತಿದ್ದರು. ಒಂದು ಸೋಮವಾರ ಡಾ. ಫಿಷಲ್‌ಸನ್ ಅವರು ತಮ್ಮ ಕೊನೆ ಕೊಪೆಕ್‌ಗಳಿಗೆ ಆಹಾರ ಸಾಮಗ್ರಿಗಳನ್ನು ಕೊಳ್ಳಲೆಂದು ಹೋದಾಗ, ಅಂಗಡಿಗಳು ಮುಚ್ಚಿರುವುದು ಕಂಡಿತು. ವ್ಯಾಪಾರಿಗಳು ಹಾಗೂ ಇವರ ಹೆಂಡತಿಯರು ಹೊರಗಡೆ ಕುಳಿತಿದ್ದರು. ಮಾರಾಟದ ವ್ಯವಹಾರ ನಿಶ್ಚಿತವಿಲ್ಲ ಎಂದು ವಿವರಿಸಿದರು. ಆದರೆ ಕೆಲವು ವಿಶೇಷ ಗಿರಾಕಿಗಳು ಒಂದು ಬದಿಯಿಂದ ಒಳತೂರಿಕೊಂಡು ಹಿಂದಿನ ಬಾಗಿಲುಗಳಿಂದ ಹೊರಗೆ ಬರುತ್ತಿದ್ದರು. ಬೀದಿಯಲ್ಲಿ ಎಲ್ಲವೂ ಗೊಂದಲಮಯವಾಗಿತ್ತು. ಪೊಲೀಸರು ಕತ್ತಿಗಳನ್ನು ತಿರುವಿ ಬೀಸುತ್ತ ಕುದುರೆಗಳ ಮೇಲೆ ಸವಾರಿ ಮಾಡುತ್ತಿದ್ದರು. ಹೆಂಡದಂಗಡಿಯ ಬಳಿ ಭಾರಿ ದೊಡ್ಡ ಗುಂಪು ನೆರೆದಿತ್ತು. ಇಲ್ಲಿ ತ್ಸಾರ್ ಸೈನಿಕ ಪಡೆಯಿತ್ತು. ಹೆಂಡದಂಗಡಿಯಲ್ಲಿ ಕೂಡಿಟ್ಟಿದ್ದ ವಿಸ್ಕಿಯನ್ನು ಚರಂಡಿಗೆ ಸುರಿಯಲಾಗಿತ್ತು.

ಡಾ. ಫಿಷಲ್‌ಸನ್ ತಮ್ಮ ಹಳೆಯ ಕೆಫೆಗೆ ಹೋದರು. ಇಲ್ಲಿ ಇವರು ತಮಗೆ ಪರಿಚಯದ ಯಾರಿಂದಲಾದರೂ ಸಲಹೆ ಪಡೆದುಕೊಳ್ಳಬಹುದು ಎಂದುಕೊಂಡಿದ್ದರು. ಆದರೆ ಇವರ ಪರಿಚಯದ ಒಬ್ಬ ವ್ಯಕ್ತಿಯೂ ಇವರ ಬಳಿ ಹಾದು ಹೋಗಲಿಲ್ಲ. ನಂತರ ಇವರು ತಾವು ಒಂದು ಕಾಲದಲ್ಲಿ ಗ್ರಂಥಪಾಲಕರಾಗಿದ್ದ ಸಿನಗಾಗ್‌ನ ರಬಾಯಿಯನ್ನು ನೋಡಲು ನಿರ್ಧರಿಸಿದರು. ಆದರೆ ಆರು ಮೂಲೆಗಳ ಟೋಪಿ ಧರಿಸಿದ್ದ ರಬಾಯಿ ಮತ್ತು ಅವರ ಮನೆಯವರು ಸ್ಥಳ ಬಿಟ್ಟು ಹೋಗಿದ್ದಾರೆ ಎಂದು ಸಿನಗಾಗ್‌ನ ಹಾಡುಗಾರ ತಿಳಿಸಿದ. ಡಾ. ಫಿಷಲ್‌ಸನ್ ಪೇಟೆಯಲ್ಲಿ ಬೇರೆಯ ಹಳೆ

ಸ್ನೇಹಿತರನ್ನು ಹೊಂದಿದ್ದರು. ಆದರೆ ಈ ಯಾರೂ ತಮ್ಮ ಮನೆಗಳಲ್ಲಿ ಇರದಂತಿರುವುದನ್ನು ಕಂಡರು. ತುಂಬ ನಡೆದದ್ದರಿಂದ ಇವರ ಕಾಲುಗಳು ನೋಯುತ್ತಿದ್ದವು ; ಕಪ್ಪು ಮತ್ತು ಹಸಿರು ಗುಳ್ಳೆಗಳು ಇವರ ಕಣ್ಣುಗಳ ಮುಂದೆ ಕಾಣಿಸಿಕೊಂಡವು. ಇವರಿಗೆ ತಾವು ಬಳಲಿರುವುದರ ಭಾಸವಾಯಿತು. ನಿಂತರು. ತಲೆ ಸುತ್ತುತ್ತಿರುವುದು ನಿಲ್ಲಲಿ ಎಂದು ನಿರೀಕ್ಷಿಸಿದರು. ಹತ್ತಿರದಲ್ಲಿ ಹಾದು ಹೋಗುತ್ತಿದ್ದವರು ಇವರ ಬಗೆಗೆ ಅನುಕಂಪ ತೋರಿದರು. ಕಪ್ಪುಕಂಗಳ ಹೈಸ್ಕೂಲ್ ಹುಡುಗಿಯೊಬ್ಬಳು ಇವರಿಗೆ ಒಂದು ನಾಣ್ಯವನ್ನು ಕೊಡಲು ಯತ್ನಿಸಿದಳು. ಯುದ್ಧ ಆಗಷ್ಟೇ ಆರಂಭವಾಗಿತ್ತು. ಸೈನಿಕರು ಯುದ್ಧದ ಪೂರ್ಣ ಉಡುಗೆಯೊಂದಿಗೆ ಮಾರ್ಚ್‌ಫಾಸ್ಟ್ ಮಾಡುತ್ತಿದ್ದರು - ಈ ಮನುಷ್ಯರಿಗೆಲ್ಲ ಧೂಳು ಮೆತ್ತಿಕೊಂಡಿತ್ತು, ಇವರು ಬಿಸಿಲಿನಲ್ಲಿ ಬೆಂದಿದ್ದರು. ಇವರುಗಳಿಗಾಗಿ ರಸ್ತೆ ಬದಿಯಲ್ಲಿ ಕ್ಯಾಂಟೀನ್‌ಗಳು ತೆರೆದಿದ್ದವು. ತಮ್ಮ ಎದೆಗಳ ಮೇಲೆ ಇವರು ಬುಲೆಟ್‌ಗಳನ್ನು ಧರಿಸಿದ್ದರು. ಇವರ ಬಂದೂಕುಗಳ ತುದಿಗಳು ಹಸಿರು ಬೆಳಕಿಗೆ ಹೊಳೆಯುತ್ತಿದ್ದವು. ಇವರೆಲ್ಲ ಅಳುದನಿಯಲ್ಲಿ ಹಾಡುತ್ತಿದ್ದರು. ಫಿರಂಗಿಗಳೊಂದಿಗೆ ಮನುಷ್ಯರು ಬರುತ್ತಿದ್ದರು. ಪ್ರತಿಯೊಂದನ್ನೂ ಎಂಟು ಕುದುರೆಗಳು ಎಳೆಯುತ್ತಿದ್ದವು ; ಜೋಲು ಹೆಗಲಿನ ಇವು ಭಯಗೊಂಡು ಉಸಿರುಗರೆಯುತ್ತಿದ್ದವು. ಡಾ. ಫಿಷಲ್‌ಸನ್ ಅವರಿಗೆ ವಾಕರಿಕೆ ಬರುವಂತಾಯಿತು. ಇವರ ಹೊಟ್ಟೆ ನೋವಿನಲ್ಲಿ ಮುಳುಗಿತು ; ಕರುಳುಗಳು ತಾವಾಗಿಯೇ ಸುತ್ತಿಕೊಳ್ಳುತ್ತ ಹೊರಗೆ ಬರುತ್ತಿರುವಂತಾಯಿತು. ಇವರ ಮುಖದಲ್ಲಿ ತಣ್ಣನೆಯ ಬೆವರು ಒಸರಿಕೊಂಡಿತು.

"ನಾನು ಸಾಯತಿದೀನಿ". ಇವರು ಯೋಚಿಸಿದರು. "ಇದು ಕೊನೆ". ಹೀಗೆಯೇ ತಮ್ಮನ್ನು ತಾವು ಬಹಳ ಹೊತ್ತಿನವರೆಗೆ ಸಂಬಾಳಿಸಿಕೊಳ್ಳುತ್ತ ಮನೆಯವರೆಗೆ ಹೋಗಲು ಸಾಧ್ಯವಾಗದೆ ಕಬ್ಬಿಣದ ಮಂಚವೊಂದರ ಮೇಲೆ ಮಲಗಿದರು, ನಿಂತರು. ಮೇಲುಸಿರುಗರೆದರು ಮತ್ತು ಏದುಸಿರು ಬಿಟ್ಟರು. ಸಣ್ಣದಾಗಿ ನಿದ್ದೆಯೂ ಬಂದಿತು. ಏಕೆಂದರೆ ಇವರು ತಮ್ಮ ಸ್ವಂತ ಊರಾದ ತಿಷೆವಿತ್ಜ್‌ನಲ್ಲಿ ಇರುವಂಥ ಕಲ್ಪನೆ ಮೂಡಿತ್ತು. ಇವರ ಗಂಟಲು ನೋವಾಗಿತ್ತು, ಇವರ ತಾಯಿ ತುಂಬ ಗಡಿಬಿಡಿಯಲ್ಲಿ ಇವರ ಕೊರಳ ಸುತ್ತ ಉಪ್ಪಿನ ಕಾವನ್ನು ಕೊಡುತ್ತಿದ್ದರು. ಇವರು ಮನೆಯ ಹೊರಗೆ ನಡೆಯುತ್ತಿದ್ದ ಮಾತುಕತೆಗಳನ್ನೂ ಕೇಳಿಸಿಕೊಳ್ಳುತ್ತಿದ್ದರು ; ಇವರಿಗೆ ಕಪ್ಪೆಯೊಂದು ಹೇಗೆ ಕಡಿಯಿತು ಎಂದು. ಎಂಥದೋ ಒಂದು ಮೊಂಬತ್ತಿ. ಇವರು ಹೊರಗೆ ಹೋಗಲು ಬಯಸುತ್ತಿದ್ದರು. ಆದರೆ ಅವರು ಬಿಡುತ್ತಿರಲಿಲ್ಲ. ಏಕೆಂದರೆ ಕ್ಯಾಥೊಲಿಕ್‌ರ ಮೆರವಣಿಗೆಯೊಂದು ಹಾದು

ಹೋಗುತ್ತಿತ್ತು. ಮನುಷ್ಯರು ಉದ್ದನೆಯ ಉಡುಗೆಗಳಲ್ಲಿದ್ದರು. ತಮ್ಮ ಕೈಗಳಲ್ಲಿ ಎರಡು ಬದಿಗಳಲ್ಲಿಯೂ ಬಾಯಿಯನ್ನುಳ್ಳ ಕತ್ತಿಗಳನ್ನು ಹಿಡಿದಿದ್ದರು. ಪವಿತ್ರಜಲವನ್ನು ಪ್ರೋಕ್ಷಿಸುತ್ತಿದ್ದರು. ಶಿಲುಬೆಗಳು ಹೊಳೆಯುತ್ತಿದ್ದವು ; ಪವಿತ್ರಚಿತ್ರಗಳು ಗಾಳಿಯಲ್ಲಿ ಹಾರಾಡುತ್ತಿದ್ದವು. ಇಲ್ಲಿ ಒಂದು ರೀತಿಯ ಸುಗಂಧ ವಾಸನೆ ಮತ್ತು ಹೊಗೆಗಳಿದ್ದವು. ಥಟ್ಟನೆ ಆಕಾಶ ಸುಡುತ್ತಿರುವಂಥ ಕೆಂಬಣ್ಣಕ್ಕೆ ತಿರುಗಿತ್ತು. ಇಡಿಯ ಜಗತ್ತು ಉರಿಯ ಹತ್ತಿತ್ತು. ಗಂಟೆಗಳು ಬಾರಿಸಿದ್ದವು ; ಜನ ಕೆಟ್ಟದಾಗಿ ಚೀರಾಡುತ್ತಿದ್ದರು. ನೆತ್ತಿಯ ಮೇಲೆ ಹಕ್ಕಿಗಳ ಗುಂಪುಗಳು ಅರಚಾಡುತ್ತಿದ್ದವು. ಡಾ. ಫಿಷಲ್‌ಸನ್ ಏಳಲೆಂದು ಯತ್ನಿಸಿದರು. ಇವರ ಶರೀರ ಬೆವರಿನಲ್ಲಿ ಮುಳುಗಿತ್ತು. ಇವರ ಗಂಟಲು ಈಗ ನಿಜವಾಗಿಯೂ ಒಣಗಿತ್ತು. ಇವರು ತಮ್ಮ ವಿಲಕ್ಷಣ ಕನಸಿನ ಬಗೆಗೆ ಚಿಂತಿಸಲು ಯತ್ನಿಸಿದರು. ಇದರ ವೈಚಾರಿಕತೆಯನ್ನು ಹುಡುಕಲೆತ್ನಿಸಿದರು. ಇದರ ಹಿನ್ನೆಲೆಯಲ್ಲಿ ತಮಗೆ ಏನು ಸಂಭವಿಸಬಹುದು ಎನ್ನುವುದನ್ನು ಅರ್ಥೈಸಿಕೊಳ್ಳಲು ಒಂದು ತೆರನಾಗಿ ರುವ ವಿಶೇಷವಾದ ಸಾರ್ವತ್ರಿಕತೆಗಳೊಂದಿಗೆ ತೂಗಿ ನೋಡಿದರು. ಆದರೆ ಪ್ರಜ್ಞೆಗೆ ಏನೂ ಎಟುಕಲಿಲ್ಲ. "ಇರಲಿ, ಮೆದುಳು ತಿಳಿಯೋಕೆ ಆಗದಷ್ಟು ಕೆಟ್ಟದ್ದು" ಡಾ. ಫಿಷಲ್‌ಸನ್ ಯೋಚಿಸಿದರು. "ಈ ಭೂಮಿ ಕೆಟ್ಟದರ ಕಡೆಗೆ ಹೋಗತಿದೆ."

ಇವರು ಮತ್ತೊಂದು ಸಲ ಕಂಗಳನ್ನು ಮುಚ್ಚಿಕೊಂಡರು ; ಮತ್ತೊಂದು ಸಲ ನಿದ್ದೆಯಲ್ಲಿ ಮುಳುಗಿದರು ; ಮತ್ತೊಂದು ಸಲ ಕನಸು ಕಂಡರು.

೫

ಸಾರ್ವಕಾಲಿಕ ನಿಯಮಗಳು ಹೀಗೆ ಕಾಣುವಂತಿದ್ದರೂ ಡಾ. ಫಿಷಲ್‌ಸನ್ ಅವರನ್ನು ಕೊನೆಯ ಅಂತ್ಯದತ್ತ ತಳ್ಳಲಿಲ್ಲ.

ಡಾ. ಫಿಷಲ್‌ಸನ್ ಅವರ ಮಹಡಿಗೋಪುರದ ಕೋಣೆಯ ಎಡಭಾಗಕ್ಕೆ ಒಂದು ಬಾಗಿಲಿದ್ದು ಇದು ಅರೆಗತ್ತಲಿನ ಮೂಲೆಯೆಡೆಗೆ ತೆರೆದುಕೊಂಡಿರುತ್ತಿತ್ತು. ಇಲ್ಲಿ ಅಡ್ಡಾದಿಡ್ಡಿಯಾಗಿ ಪೆಟ್ಟಿಗೆ ಮತ್ತು ಬುಟ್ಟಿಗಳಿದ್ದವು, ಸದಾಕಾಲ ವಾಸನೆ ಸೂಸುವ ಈರುಳ್ಳಿ ಮತ್ತು ಬಟ್ಟೆ ತೊಳೆಯುವ ಸೋಪ್ ಸಹ ಇಲ್ಲಿರುತ್ತಿತ್ತು. ಈ ಬಾಗಿಲಿನ ಹಿಂಭಾಗದ ಆಚೆ ಬದಿಯಲ್ಲಿ ನೆರೆಹೊರೆಯವರೆಲ್ಲ ಕರಿದೋಬಿ ಎಂದು ಕರೆಯುತ್ತಿದ್ದ ಮದುವೆಯಾಗದ ಒಬ್ಬ ಹೆಂಗಸಿದ್ದಳು. ದೋಬಿ ತೆಳ್ಳಗೆ ಉದ್ದವಾಗಿದ್ದಳು, ಬೇಕರಿಯವನ

ಇದ್ದಲಿನಂತೆ ಕಪ್ಪಗಿದ್ದಳು. ಇವಳು ಹರಿದ ಮೂಗನ್ನು ಹೊಂದಿದ್ದಳು, ಇವಳ ಮೇಲು ತುಟಿಯಲ್ಲಿ ಮೀಸೆಗಳಿದ್ದವು. ಗಂಡಸರ ದನಿಯಲ್ಲಿ ಇವಳು ಒರಟಾಗಿ ಮಾತಾಡುತ್ತಿದ್ದಳು. ಇವಳು ಗಂಡಸರ ಷೂಗಳನ್ನೇ ಹಾಕಿಕೊಳ್ಳುತ್ತಿದ್ದಳು. ಸುಮಾರು ವರ್ಷಗಳವರೆಗೆ ಈ ಕರಿದೋಬಿ ಬೇಕರಿಯವನ ಹತ್ತಿರದಿಂದ ತಂದಿರುತ್ತಿದ್ದ ಬ್ರೆಡ್, ಬನ್ ಮತ್ತು ಬಗೇಲ್‌ಗಳನ್ನು ಮನೆಯ ಗೇಟ್ ಹತ್ತಿರ ಮಾರುತ್ತಿದ್ದಳು. ಆದರೆ ಒಂದು ದಿನ ಇವಳಿಗೂ ಬೇಕರಿಯವನಿಗೂ ಜಗಳ ನಡೆದು ಇವಳು ತನ್ನ ವ್ಯಾಪಾರವನ್ನು ಮಾರ್ಕೆಟ್ ಜಾಗಕ್ಕೆ ಬದಲಾಯಿಸಿದ್ದಳು. ಅಲ್ಲಿ ಇವಳು ಒಡೆದ ಮೊಟ್ಟೆಗಳಿಗೇ "ಸುಕ್ಕುಗಳು" ಎಂದು ಕರೆದುಕೊಂಡು ಮಾರಾಟ ಮಾಡುತ್ತಿದ್ದಳು. ಕರಿದೋಬಿಗೆ ಗಂಡಿನ ಅದೃಷ್ಟವಿರಲಿಲ್ಲ. ಇವಳು ಎರಡು ಸಲ ಬೇಕರಿ ಉದ್ಯೋಗದವರೊಂದಿಗೆ ನಿಶ್ಚಿತಗೊಂಡಿದ್ದಳು. ಆದರೆ ಎರಡು ಸಂದರ್ಭಗಳಲ್ಲೂ ಇವಳೊಂದಿಗಿನ ನಿಶ್ಚಿತಾರ್ಥ ವನ್ನು ಅವರು ಹಿಂದಿರುಗಿಸಿದ್ದರು. ಇದಾದ ಕೆಲವು ಕಾಲದ ನಂತರ ಇವಳು ಒಬ್ಬ ವಯಸ್ಸಾದ ಮನುಷ್ಯನೊಂದಿಗೆ ನಿಶ್ಚಿತಾರ್ಥವನ್ನು ಒಪ್ಪಿಕೊಂಡಿದ್ದಳು. ಗಾಜಿನ ಕೆಲಸ ಮಾಡುತ್ತಿದ್ದ ಇವನು ವಿಚ್ಛೇದನ ಹೊಂದಿದವನು ಎಂದು ತಿಳಿದಿತ್ತು. ಆದರೆ ಕೊನೆಯಲ್ಲಿ, ಈಗಲೂ ಇವನಿಗೆ ಹೆಂಡತಿಯಿದ್ದಾಳೆ ಎಂದು ತಿಳಿಯಿತು. ಕರಿದೋಬಿ ಅಮೆರಿಕೆಯಲ್ಲಿ ಒಬ್ಬ ದಾಯಾದಿಯನ್ನು ಪಡೆದಿದ್ದಳು. ಷೂ ತಯಾರಿಸುವ ಕೆಲಸದ ಈ ದಾಯಾದಿ ಇವಳನ್ನು ಕರೆಸಿಕೊಳ್ಳಲು ಮೇಲಿಂದ ಮೇಲೆ ಒತ್ತಾಯಗಳನ್ನು ಕಳಿಸುತ್ತಿದ್ದ. ಆದರೆ ದೋಬಿ ವಾರ್ಸಾದಲ್ಲಿಯೇ ಉಳಿದಿದ್ದಳು. ಇವಳು ಹೆಂಗಸರುಗಳಿಂದ ಯಾವಾಗಲೂ ಕಟಕಿಸಿಕೊಳ್ಳುತ್ತಲೇ ಇರುತ್ತಿದ್ದಳು. "ನಿನಗೆ ಅದೃಷ್ಟವೇ ಇಲ್ಲ ದೋಬಿ. ನೀನು ಹೀಗೇ ಮುದುಕಿಯಾಗಿ ಸಾಯೋ ಹಣೆಬರಹದವಳು". ದೋಬಿಯೂ ಉತ್ತರಿಸುತ್ತಲೇ ಇರುತ್ತಿದ್ದಳು. "ನಾನು ಯಾವ ಗಂಡಸಿಗೂ ದಾಸಿಯಾಗಿ ನಿಶ್ಚಯ ವಾಗೋಲ್ಲ. ಎಲ್ಲ ತೆವಲಿನವರು."

ದೋಬಿ ಅವತ್ತು ಮಧ್ಯಾಹ್ನ ಅಮೆರಿಕೆಯಿಂದ ಬಂದ ಒಂದು ಪತ್ರವನ್ನು ಪಡೆದಳು. ಸಾಮಾನ್ಯವಾಗಿ ಇವಳು ದರ್ಜಿ ಲೈಜೆರ್ ಹತ್ತಿರ ಹೋಗಿ ಅವನಿಗೆ ಓದಿ ಹೇಳಲು ಹೇಳುತ್ತಿದ್ದಳು. ಹೀಗಿದ್ದೂ, ಅಂದು ಲೈಜೆರ್ ಹೊರಗೆಲ್ಲೋ ಹೋಗಿದ್ದುದ ರಿಂದ, ಜನರೆಲ್ಲ ಮತಾಂತರಗೊಂಡು ಯಾವಾಗಲೂ ಪ್ರಾರ್ಥನೆಗೆ ಹೋಗುವುದಿಲ್ಲ ಎನ್ನುತ್ತಿದ್ದ, ಆಚೆ ಮಹಡಿಯಲ್ಲಿನ ಡಾ. ಫಿಷಲ್‌ಸನ್ ಅವರಲ್ಲಿಗೆ ಹೋಗಲು ಯೋಚಿಸಿದಳು. ಇವಳು ಡಾಕ್ಟರ್ ಅವರ ಕೋಣೆಯ ಬಾಗಿಲನ್ನು ಬಡಿದಳು. ಆದರೆ

ಉತ್ತರ ಬರಲಿಲ್ಲ. "ಈ ಪಾಖಂಡಿ ಹೊರಗೆ ಹೋಗಿರಬಹುದೇನೋ". ದೋಬಿ ಯೋಚಿಸಿದಳು. ಆದರೆ ಮತ್ತೊಂದು ಸಲ ಬಡಿದಳು. ಈ ಸಲ ಬಾಗಿಲು ಒಂದಿಷ್ಟು ಒಳಗೆ ಸರಿಯಿತು. ಇವಳು ತಳ್ಳಿ ಒಳಹೋದಳು, ದಿಗ್ಭ್ರಮೆಗೊಂಡು ನಿಂತಳು. ಡಾ. ಫಿಷಲ್‌ಸನ್ ಪೂರ್ಣ ಉಡುಗೆಯಲ್ಲಿ ಹಾಸಿಗೆಯಲ್ಲಿ ಮಲಗಿದ್ದರು ; ಮುಖ ಮೇಣದಂತೆ ಹಳದಿಯಾಗಿತ್ತು. ಇವರ ಆದಂ ಸೇಬುಗಳು ಹೊರ ಬಿದ್ದಿದ್ದವು ; ಗಡ್ಡ ಮೇಲ್ಮುಖವಾಗಿ ನಿಂತಿತ್ತು. ದೋಬಿ ಚೀರಿದಳು. ಇವಳಿಗೆ ಖಂಡಿತವಾಗಿಯೂ ಇವರು ಸತ್ತಿದ್ದಾರೆ ಎನ್ನಿಸಿತ್ತು. ಆದರೆ - ಇಲ್ಲ- ಇವರ ಶರೀರ ಮಿಸುಕಾಡುತ್ತಿದೆ. ದೋಬಿ ಟೇಬಲ್ ಮೇಲಿದ್ದ ಒಂದು ಗ್ಲಾಸನ್ನು ತೆಗೆದುಕೊಂಡು ಕಾರಿಡಾರ್‌ಗೆ ಓಡಿದಳು. ಹೂಜಿಯಿಂದ ನೀರು ತುಂಬಿಕೊಂಡು ಓಡ್ತುತ್ತ ಹೊರಳಿ ಬಂದಳು. ಪ್ರಜ್ಞಾ ಶೂನ್ಯ ಮನುಷ್ಯನ ಮುಖದ ಮೇಲೆ ನೀರೆರಚಿದಳು. ಡಾ. ಫಿಷಲ್‌ಸನ್ ತಲೆಯನ್ನು ಅಲುಗಿಸಿ, ಕಣ್ಣುಗಳನ್ನು ತೆರೆದರು.

"ಏನಾಗಿದೆ ನಿಮಗೆ ?" ದೋಬಿ ಕೇಳಿದಳು. "ಕಾಯಿಲೇನಾ ನಿಮಗೆ?"

"ಏನಿಲ್ಲ, ಥ್ಯಾಂಕ್‌ಯೂ ವೆರಿಮಚ್."

"ನಿಮ್ಮ ಮನೆಯವರು ಇದಾರಾ ? ನಾನು ಅವರನ್ನ ಕರೀತೀನಿ."

"ಮನೆಯವರು ಯಾರೂ ಇಲ್ಲ" ಡಾ. ಫಿಷಲ್‌ಸನ್ ಹೇಳಿದರು.

ದೋಬಿ ಬೀದಿಯ ಮೂಲೆಯಿಂದ ಕ್ಷೌರಿಕನನ್ನು ಕರೆತರಲು ನೋಡಿದಳು. ಆದರೆ ಡಾ. ಫಿಷಲ್‌ಸನ್ ಕ್ಷೌರಿಕನ ನೆರವೇನೂ ಬೇಕಿಲ್ಲ ಎಂದು ಸಂಜ್ಞೆ ಮಾಡಿದರು. ಹೀಗಾಗಿ ದೋಬಿ ಅಂದು ಮಾರ್ಕೆಟ್‌ಗೆ ಹೋಗಲಿಲ್ಲ. ಅಂದು "ಸುಕ್ಕುಗಳು" ದೊರೆಯಲಿಲ್ಲ. ಇವಳು ಒಂದಿಷ್ಟು ಒಳ್ಳೆಯದನ್ನು ಮಾಡಲು ನಿರ್ಧರಿಸಿಕೊಂಡಳು. ಕಾಯಿಲೆ ಮನುಷ್ಯ ಹಾಸಿಗೆಯಿಂದ ಏಳಲು ಮತ್ತು ಹೊದಿಕೆಯನ್ನು ಕೊಡವಲು ಇವಳು ನೆರವಾದಳು. ಆಮೇಲೆ ಇವಳು ಡಾ. ಫಿಷಲ್‌ಸನ್ ಅವರ ಉಡುಪುಗಳನ್ನು ಕಳಚಿದಳು. ಸೀಮೆಯೆಣ್ಣೆ ಸ್ಟವ್‌ನಿಂದ ಒಂದಿಷ್ಟು ಸೂಪ್ ಸಿದ್ಧ ಮಾಡಿದಳು. ದೋಬಿಯ ಕೋಣೆಗೆ ಯಾವಾಗಲೂ ಬಿಸಿಲು ಪ್ರವೇಶಿಸುತ್ತಲೇ ಇರಲಿಲ್ಲ. ಆದರೆ ಇಲ್ಲಿ ಸೂರ್ಯನ ಬೆಳಕಿನ ಚೌಕಗಳು ಮಸಕು ಗೋಡೆಗಳ ಮೇಲೆ ಹೊಳೆದುಕೊಳ್ಳುತ್ತಿದ್ದವು. ನೆಲಕ್ಕೆ ಕೆಂಬಣ್ಣವನ್ನು ಬಳಿಯಲಾಗಿತ್ತು. ಹಾಸಿಗೆಯ ಮೇಲ್ಗಡೆ, ಕುತ್ತಿಗೆಯ

ಸುತ್ತ ದೊಡ್ಡ ನೆರಿಗೆ ಹಾಗೂ ಉದ್ದ ಕೂದಲುಗಳನ್ನುಳ್ಳ ಒಂದು ಚಿತ್ರವನ್ನು ತೂಗು ಹಾಕಿತ್ತು. "ಇಷ್ಟೊಂದು ವಯಸ್ಸಾದ ಮನುಷ್ಯನಾದರೂ ತನ್ನ ಜಾಗಾನ ಎಷ್ಟೊಂದು ಒಪ್ಪವಾಗಿ ಮತ್ತು ಶುದ್ಧವಾಗಿ ಇಟ್ಟುಕೊಂಡಿದಾನೆ" ದೋಬಿ ಮೆಚ್ಚುಗೆದೋರುತ್ತ ಯೋಚಿಸಿದಳು. ಡಾ. ಫಿಷಲ್‌ಸನ್ ಎಥಿಕ್ಸ್ ಕೇಳಿದರು. ಇವಳು ಆಗುವುದಿಲ್ಲ ಎನ್ನದೆ ಎತ್ತಿಕೊಟ್ಟಳು. ಇವಳಿಗೆ ಇದು ಖಂಡಿತವಾಗಿಯೂ ದೊಡ್ಡ ಪ್ರಾರ್ಥನಾ ಪುಸ್ತಕ ಎನ್ನಿಸಿತು. ನಂತರ [illegible] ಗಡಿಬಿಡಿಯಲ್ಲಿ ಮುಳುಗಿದಳು. ಒಂದು ಪಾತ್ರೆಯಲ್ಲಿ ನೀರು ತಂದಳು. ನೆಲವನ್ನು ಒರೆಸಿದಳು. ಡಾ. ಫಿಷಲ್‌ಸನ್ ಊಟ ಮಾಡಿದರು ; ಇದು ಮುಗಿದ ನಂತರ ಇವರು ಸಾಕಷ್ಟು ಚೈತನ್ಯ ತುಂಬಿಕೊಂಡಿದ್ದರು. ದೋಬಿ ಇವರಿಗೆ ತನ್ನ ಪತ್ರ ಓದಿಹೇಳಲು ಕೇಳಿದಳು.

ಇವರು ಇದನ್ನು ಮೆಲ್ಲಗೆ ಓದಿದರು. ಇವರ ಕೈಗಳಲ್ಲಿ ಕಾಗದ ನಡುಗುತ್ತಿತ್ತು. ಇದು ನ್ಯೂಯಾರ್ಕ್‌ನಿಂದ ಬಂದಿತ್ತು. ದೋಬಿಯ ದಾಯಾದಿಯಿಂದ. ಮತ್ತೊಂದು ಸಲ ಅವನು ಇವಳಿಗೆ "ಖಂಡಿತವಾಗಿಯೂ ಮುಖ್ಯವಾದ ಪತ್ರ" ಬರೆದಿದ್ದ. ಅಮೆರಿಕಾಕ್ಕಾಗಿ ಒಂದು ಟಿಕೆಟ್ ಕಳಿಸಿದ್ದ. ಕತೆಯನ್ನು ಈಗ ದೋಬಿ ಹೃದಯದಲ್ಲೇ ಅರಿತಳು. ತನ್ನ ದಾಯಾದಿ ಗೀಚಿರುವುದು ವಯಸ್ಸಾಗಿರುವ ಮನುಷ್ಯನಿಗೆ ಸಹಾಯವಾಗಿರಲಿ ಎಂದು. "ಅವನು ಹಾಸಿಗೆ ಹಿಡಿದಿದ್ದಾನೆ" ದೋಬಿ ಹೇಳಿದಳು. "ಅವನು ನನ್ನನ್ನ ತುಂಬ ಹಿಂದೆಯೇ ಮರೆತಿದ್ದ. " ದೋಬಿ ಸಂಜೆಗೆ ಮತ್ತೆ ಬಂದಳು. ಮಂಚದ ಬದಿಯ ಕುರ್ಚಿಯ ಮೇಲೆ ಹಿತ್ತಾಳೆಗಂಬವೊಂದರಲ್ಲಿ ಒಂದು ಮೊಂಬತ್ತಿ ಉರಿಯುತ್ತಿತ್ತು. ಕೆಂಪನೆಯ ನೆರಳುಗಳು ಗೋಡೆ ಮತ್ತು ಸೂರಿನಲ್ಲಿ ಅದುರುತ್ತಿದ್ದವು. ಡಾ. ಫಿಷಲ್‌ಸನ್ ಹಾಸಿಗೆಯಲ್ಲಿ ಎದ್ದು ಕುಳಿತು ಒಂದು ಪುಸ್ತಕವನ್ನು ಓದುತ್ತಿದ್ದರು. ಮೊಂಬತ್ತಿ ಇವರ ಹಣೆಯ ಮೇಲೆ ಬಂಗಾರದ ಬೆಳಕನ್ನು ಪ್ರಕಾಶಿಸುತ್ತ ಎರಡಾಗಿ ಹೊತ್ತಿ ಉರಿಯುತ್ತಿರುವಂತೆ ತೋರಿಕೊಳ್ಳುತ್ತಿತ್ತು. ಕಿಟಕಿಯಲ್ಲಿ ಹಕ್ಕಿಯೊಂದು ಹಾರಾಡುತ್ತಾ ಟೇಬಲ್ ಮೇಲೆ ಕೂರುತ್ತಿತ್ತು. ದೋಬಿ ಒಂದು ಕ್ಷಣ ಆಶ್ಚರ್ಯ ಗೊಂಡಳು. ಈ ಮನುಷ್ಯ ಇವಳನ್ನು ಸೂಳೆಯಾಗಿಸಲು ಯೋಚಿಸುತ್ತಿದ್ದಾನೆಯೇ, ಕಪ್ಪು ಕನ್ನಡಕಗಳು ಹಾಗೂ ರಾತ್ರಿಯಲ್ಲಿ ಸಂಚರಿಸುವ ಶವಪೆಟ್ಟಿಗೆಗಳು ಮತ್ತು ಭಯಾನಕ ಹೆಂಗಸನ್ನಾಗಿಸುವವನು ಇವನೇ ಇರಬಹುದೇನೋ. ಹೀಗಿದ್ದೂ, ಇವಳು ಒಂದಿಷ್ಟು ಹೆಜ್ಜೆಗಳನ್ನು ಇನ್ನೂ ಮುಂದೆ ಇರಿಸಿ ವಿಚಾರಿಸಿದಳು. "ಹೇಗಿದೀರಿ ? ಒಂದಿಷ್ಟು ಉತ್ತಮವಾ?"

"ಒಂದಿಷ್ಟು ಪರವಾಗಿಲ್ಲ ಥ್ಯಾಂಕ್‌ಯೂ."

"ನೀವು ನಿಜವಾಗಿಯೂ ಮತಾಂತರಗೊಂಡಿರೋರೇನು ?" ಈ ಪದದ ನಿಜವಾದ ಅರ್ಥ ಏನು ಎನ್ನುವುದು ತನಗೆ ಗೊತ್ತಿರದಿದ್ದರೂ ಕೇಳಿದಳು.

"ನಾನು ಮತಾಂತರಗೊಂಡಿರೋನಾ? ಇಲ್ಲ, ನಾನು ಬೇರೆ ಎಲ್ಲ ಯಹೂದಿಗಳ ಹಾಗೆಯೇ ಒಬ್ಬ ಯಹೂದಿ" ಡಾ. ಫಿಷಲ್‌ಸನ್ ಉತ್ತರಿಸಿದರು.

ಡಾಕ್ಟರ್ ಅವರ ದೃಢ ಮಾತುಗಳು ದೋಬಿಗೆ ಇವರು ತನ್ನ ಮನೆಯವರು ಎಂಬ ಭಾಸ ಮೂಡಿಸಿತು. ಇವಳು ಒಂದು ಬಾಟಲಿ ಸೀಮೆಎಣ್ಣೆ ಹುಡುಕಿ ತಂದಳು, ಸ್ಟವ್ ಹಚ್ಚಿದಳು. ಇದಾದ ನಂತರ ತನ್ನ ಕೋಣೆಯಿಂದ ಒಂದು ಲೋಟ ಹಾಲು ತಂದಳು. ನಂತರ ಕಷಾ ಬೇಯಿಸಲು ಆರಂಭಿಸಿದಳು. ಡಾ. ಫಿಷಲ್‌ಸನ್ ಎಥಿಕ್ಸ್‌ನ ಓದನ್ನು ಮುಂದುವರಿಸಿದರು. ಆದರೆ ಇವತ್ತಿನ ಬೈಗಿನಲ್ಲಿ ಇವರು ತಮ್ಮ ಪ್ರಜ್ಞೆಗೆ ಸಿದ್ಧಾಂತಗಳು ಮತ್ತು ವಿವರಣೆಗಳು ಇತರೆ ವಿವರಣೆಗಳ ಪ್ರತ್ಯಕ್ಷ ಪ್ರಮಾಣಗಳು ಮತ್ತು ಆಧಾರಗಳ ಸಿದ್ಧಾಂತಗಳು ನಿಲುಕಿಕೊಳ್ಳದಂತೆ ಇರುವುದನ್ನೂ ಕಂಡರು. ನಡುಗುತ್ತಿರುವ ಕೈನಿಂದ ಪುಸ್ತಕವನ್ನು ತಮ್ಮ ಕಣ್ಣುಗಳ ಬಳಿಗೆ ಎತ್ತಿಹಿಡಿದು ಓದಿದರು. "ಮಾನವ ಶರೀರ ಕಲ್ಪನೆಯ ಪ್ರತಿಯೊಂದು ರೂಪಾಂತರವೂ ಮಾನವ ಶರೀರದ ಬುದ್ಧಿಗೇ ಸರಿ ಹೊಂದುವಂಥಹುದಲ್ಲ..... ಪ್ರತಿಯೊಂದು ಮಾನವ ಮನಸ್ಸಿನ ಕಲ್ಪನೆಯ ಕಲ್ಪನೆಯೂ ಮಾನವ ಮನಸ್ಸಿನ ಬುದ್ಧಿಗೆ ಸರಿ ಹೊಂದುವಂಥಹುದಲ್ಲ."

೬

ಡಾ. ಫಿಷಲ್‌ಸನ್ ಅವರಿಗೆ ತಾವೀಗ ಯಾವ ದಿನವಾದರೂ ಸಾಯುವುದು ಖಂಡಿತ ಅನ್ನಿಸಿತ್ತು. ತಮ್ಮ ಉಯಿಲನ್ನು ಇವರು ಸಿದ್ಧ ಮಾಡಿದರು. ತಮ್ಮ ಎಲ್ಲ ಪುಸ್ತಕಗಳು ಹಾಗೂ ಹಸ್ತಪ್ರತಿಗಳನ್ನು ಸಿನಗಾಗ್‌ನ ಲೈಬ್ರರಿಗೆ ಬಿಟ್ಟರು. ಇವರ ಬಗೆಗೆ ಆಸಕ್ತಿ ತೋರಿಸಿ ರಕ್ಷಣೆ ಮಾಡಿದ ದೋಬಿಗೆ ಇವರ ಬಟ್ಟೆಗಳು ಹಾಗೂ ಫರ್ನೀಚರ್‌ಗಳು ಹೋಗತಕ್ಕದ್ದು. ಆದರೆ ಸಾವು ಬರಲಿಲ್ಲ. ಬದಲಾಗಿ ಆರೋಗ್ಯ ಉತ್ತಮಗೊಂಡಿತು. ದೋಬಿ ತನ್ನ ವ್ಯಾಪಾರಕ್ಕಾಗಿ ಮಾರ್ಕೆಟ್‌ಗೆ ಮರಳಿದಳು. ಆದರೆ ಇವಳು ಮುದಿಮನುಷ್ಯನನ್ನು ದಿನಕ್ಕೆ ಹಲವು ಸಲ ಭೇಟಿಯಾಗುತ್ತಿದ್ದಳು. ಇವರಿಗೆ ಸೂಪ್

ಸಿದ್ಧಮಾಡುತ್ತಿದ್ದಳು. ಒಂದು ಗ್ಲಾಸ್ ಟೀಯನ್ನು ಇವರಿಗೆಂದು ಇರಿಸುತ್ತಿದ್ದಳು, ಇವರಿಗೆ ಯುದ್ಧದ ಸುದ್ದಿಗಳನ್ನು ಹೇಳುತ್ತಿದ್ದಳು. ಜರ್ಮನ್‌ರು ಕಲಿಷ್, ಬೆಂದಿನ್ ಹಾಗೂ ಸೆಸ್ನೆಷೋಗಳನ್ನು ಆಕ್ರಮಿಸಿಕೊಂಡು, ವಾರ್ಸಾದೆಡೆಗೆ ಮುನ್ನುಗ್ಗಿದ್ದಾರೆ. ಒಂದು ದಿನ ಬೆಳಗಿನಲ್ಲಿ ಫಿರಂಗಿಗಳು ಗುಡುಗಾಡಿ ಸಿಡಿಸುವ ಸದ್ದನ್ನು ಯಾರಾದರೂ ಕೇಳಬಹುದು ಎಂದು ಜನ ಹೇಳುತ್ತಿದ್ದಾರೆ ; ಯೋಚಿಸಬೇಕಾದ್ದು ಬಹಳವಿದೆ ಎಂದು ದೋಬಿ ದೂರಿದಳು. "ಅವರೆಲ್ಲ ನೊಣಗಳ ಹಾಗೆ ಉದುರಿ ಬೀಳತಾರೆ" ಇವಳು ಹೇಳಿದಳು. "ಹೆಂಗಸರದು ಎಷ್ಟೊಂದು ಭಯಾನಕವಾಗ ದೌರ್ಭಾಗ್ಯ".

ಯಾಕೆ ಎಂದು ಇವಳು ವಿವರಿಸಲಿಲ್ಲ. ಆದರೆ ಮುದಿಮನುಷ್ಯನ ಮಹಡಿ ಕೋಣೆ ಇವಳನ್ನು ಆಕರ್ಷಿಸಿತ್ತು. ಇವಳು ಬಂಗಾರದ ಗೆರೆಯಂಚಿನ ಪುಸ್ತಕಗಳನ್ನು ಕಪಾಟಿನಿಂದ ತೆಗೆಯಲು ಇಚ್ಛಿಸಿದಳು. ಇವುಗಳ ಧೂಳು ಜೊಡಪಿದಳು. ಕಿಟಕಿಯ ಕಟ್ಟೆಯ ಬಳಿ ಇವುಗಳನ್ನು ಗಾಳಿಗೆ ಇರಿಸಿದಳು. ಇವಳು ಕಿಟಕಿಯೆಡೆಗೆ ಒಂದಿಷ್ಟು ಹೆಜ್ಜೆ ಗಳನ್ನಿರಿಸುತ್ತಿದ್ದಳು ಮತ್ತು ದೂರದರ್ಶಕದಲ್ಲಿ ಹೊರಗೆ ನೋಡುತ್ತಿದ್ದಳು. ಡಾ. ಫಿಷಲ್ ಸನ್ ಅವರೊಂದಿಗಿನ ಮಾತುಕತೆಗಳಲ್ಲಿಯೂ ಇವಳು ಖುಷಿಗೊಳ್ಳುತ್ತಿದ್ದಳು. ಇವರು ತಾವು ವ್ಯಾಸಂಗ ಮಾಡಿದ ಸ್ವಿಡ್ಜರ್‌ಲೆಂಡ್ ಬಗೆಗೆ ಇವಳಿಗೆ ಹೇಳುತ್ತಿದ್ದರು. ತಾವು ಹಾದು ಬಂದ ದೊಡ್ಡ ನಗರಗಳ ಬಗೆಗೆ, ಬೇಸಿಗೆಯಲ್ಲಿ ಕೂಡ ಹಿಮಾವೃತವಾಗಿರುತ್ತಿದ್ದ ದೊಡ್ಡ ನಗರಗಳ ಬಗೆಗೆ ಹೇಳುತ್ತಿದ್ದರು. ಇವರ ತಂದೆ ಒಬ್ಬ ರಬಾಯಿಯಾಗಿದ್ದರು. ಇವರು ಹೇಳಿದ್ದರು : ಇದಕ್ಕೂ ಮೊದಲು ಡಾ. ಫಿಷಲ್‌ಸನ್ ಒಂದು ಯಶೀವಾದಲ್ಲಿ ಹಾಜರಾಗುತ್ತಿದ್ದ ವಿದ್ಯಾರ್ಥಿಗಳಾಗಿದ್ದರು. ಇವಳು ಇವರಿಗೆ ಎಷ್ಟು ಭಾಷೆಗಳನ್ನು ಬಲ್ಲರು ಎಂದು ಕೇಳಿದ್ದಳು. ಇವರಿಗೆ ಯಿದ್ದಿಷ್ ಅಲ್ಲದೆ ಹೀಬ್ರೂ, ರಷ್ಯನ್, ಜರ್ಮನ್ ಮತ್ತು ಫ್ರೆಂಚ್ ಭಾಷೆಗಳು ಮಾತಾಡಲು ಹಾಗೂ ಬರೆಯಲು ತಿಳಿದಿವೆ ಎಂಬಲ್ಲಿಗೆ ಈ ಮಾತು ಹೊರಳಿತ್ತು. ಇವರು ಲ್ಯಾಟಿನ್ ಸಹ ತಿಳಿದಿದ್ದಾರೆ. ಇಷ್ಟೊಂದು ವಿದ್ಯಾವಂತ ಮನುಷ್ಯ ಮಾರ್ಕೆಟ್ ಬೀದಿಯ ಮಹಡಿಗೋಪುರದ ಕೋಣೆಯಲ್ಲಿ ವಾಸ ಮಾಡುವುದು ದೋಬಿಗೆ ಆಶ್ಚರ್ಯ ಮೂಡಿಸಿತು. ಆದರೆ ಈ ಎಲ್ಲಕ್ಕಿಂತಲೂ ಹೆಚ್ಚಿನ ಆಶ್ಚರ್ಯವನ್ನು ಇವಳಿಗೆ ಮೂಡಿಸಿದ್ದು ಎಂದರೆ, ಇವರು "ಡಾಕ್ಟರ್" ಎಂಬ ಬಿರುದು ಪಡೆದುಕೊಂಡಿದ್ದರೂ ಇವರು ಔಷಧಿಚೀಟಿಗಳನ್ನು ಬರೆಯದಂತಿರುವುದು. "ನೀವು ಯಾಕೆ ನಿಜವಾದ ಡಾಕ್ಟರಾಗಿಲ್ಲ?" ಇವಳು ಇವರನ್ನು ಕೇಳಿದ್ದಳು. "ನಾನೂ ಒಬ್ಬ ಡಾಕ್ಟರ್!" ಇವರು ಉತ್ತರವಿತ್ತಿದ್ದರು. "ನಾನು ಬೇರೆ ವೈದ್ಯರ ಹಾಗಲ್ಲ". "ಯಾವ ತರದ ಡಾಕ್ಟರು?"

"ತತ್ವಶಾಸ್ತ್ರದ ಡಾಕ್ಟರು". ಇವಳಿಗೆ ಇದರ ಅರ್ಥ ಏನೆಂದು ತಿಳಿಯದಿದ್ದರೂ ಇದು ತುಂಬ ಮುಖ್ಯವಾದದ್ದು ಎಂದು ಭಾವಿಸಿದಳು. "ಅಯ್ಯೋ ನಮ್ಮವ್ವನೇ" ಇವಳು ಹೇಳುತ್ತಿದ್ದಳು"ಇಂಥ ಮೆದಳನ್ನ ನೀವು ಎಲ್ಲಿ ಸಂಪಾದಿಸಿದಿರಿ ?"

ಆನಂತರ ಒಂದು ಸಂಜೆ ದೋಬಿ ಇವರಿಗೆ ಇವರ ಒಡಕುಗಳು ಹಾಗೂ ಹಾಲಿನೊಂದಿಗೆ ಟೀ ಲೋಟ ಕೊಟ್ಟ ಮೇಲೆ, ಇವರು ಇವಳನ್ನು, ಇವಳು ಎಲ್ಲಿಂದ ಬಂದವಳು, ಇವಳ ತಂದೆ-ತಾಯಿಗಳು ಯಾರು ಮತ್ತು ಇವಳು ಯಾಕೆ ಮದುವೆಯಾಗಿಲ್ಲ ಎಂದೆಲ್ಲ ಪ್ರಶ್ನಿಸಲು ಆರಂಭಿಸಿದರು. ದೋಬಿ ಬೆರಗಾಗಿದ್ದಳು. ಇದುವರೆಗೆ ಇವಳನ್ನು ಯಾರೂ ಹೀಗೆ ಪ್ರಶ್ನಿಸಿರಲಿಲ್ಲ. ಇವಳು ಗಂಭೀರ ದನಿಯಲ್ಲಿ ತನ್ನ ಕತೆಯನ್ನು ಇವರಿಗೆ ಹೇಳಿದಳು. ಹನ್ನೊಂದು ಗಂಟೆಯವರೆಗೆ ಇಲ್ಲಿಯೇ ಉಳಿದಳು. ಇವಳ ತಂದೆ ಮಾಂಸದ ಅಂಗಡಿಗಳ ಕೂಲಿಯಾಗಿದ್ದ. ಇವಳ ತಾಯಿ ಕಟುಕರ ಮನೆಯಲ್ಲಿ ಕೋಳಿ ಪುಕ್ಕ ಕೀಳುತ್ತಿದ್ದಳು. ಇವರ ಕುಟುಂಬ ಮಾರ್ಕೆಟ್ ಬೀದಿಯ ೧೯ನೇ ನಂಬರಿನ ನೆಲ ಮನೆಯಲ್ಲಿ ವಾಸವಾಗಿತ್ತು. ಇವಳಿಗೆ ಹತ್ತು ವರ್ಷ ತುಂಬಿದಾಗ ಇವಳು ಮನೆಗೆಲಸದ ಹುಡುಗಿಯಾಗಿ ಸೇರಿದ್ದಳು. ಇವಳು ಕೆಲಸ ಮಾಡುತ್ತಿದ್ದುದು ಚೌಕದೀಪ ಮಾಲುಗಳನ್ನು ಕದ್ದು ತರುತ್ತಿದ್ದ ಕಳ್ಳರಿಗೆ ರಕ್ಷಣೆ ನೀಡುತ್ತಿದ್ದಂಥವನು. ದೋಬಿ ಒಬ್ಬ ಸೋದರನನ್ನು ಹೊಂದಿದ್ದು ರಷ್ಯನ್ ಸೈನ್ಯ ಸೇರಿದ ಇವನು ಮರಳಲೇ ಇಲ್ಲ. ಇವಳ ಸೋದರಿ ಪ್ರಾಗ್‌ನ ಒಬ್ಬ ಗಾಡಿ ಓಡಿಸುವನನ್ನು ಮದುವೆಯಾಗಿದ್ದು ಹೆರಿಗೆಯಲ್ಲಿ ಸಾವನ್ನಪ್ಪಿದಳು. ೧೯೦೫ರಲ್ಲಿ ಕ್ರಾಂತಿಕಾರಿಗಳು ಮತ್ತು ಅಧೋಜಗತ್ತಿನವರ ನಡುವೆ ನಡೆದ ಯುದ್ಧಗಳನ್ನೆಲ್ಲ ದೋಬಿ ಹೇಳಿದಳು. ಅರೆಗುರುಡ ಇತ್ಸೆ ಮತ್ತು ಇವನ ಗ್ಯಾಂಗ್‌ನವರು ಅಂಗಡಿಗಳಿಂದ ಹೇಗೆ ಹಣ ವಸೂಲು ಮಾಡುತ್ತಿದ್ದರು, ಶನಿವಾರಗಳ ಮಧ್ಯಾಹ್ನ ತಿರುಗಾಡಲು ಹೋದ ಹರೆಯದ ಹುಡುಗ ಹುಡುಗಿಯರು ಹಣ ಕೊಡದಿದ್ದರೆ ಹೇಗೆ ಮೇಲೆ ಬೀಳುತ್ತಿದ್ದರು ಎಂದೆಲ್ಲ ಹೇಳಿದಳು. ಹೆಂಗಸರನ್ನು ಅಪಹರಿಸಿ ಬೋನಸ್ ಅಯರಸ್‌ಗೆ ಸಾಗಿಸಿ ಮಾರಾಟ ಮಾಡುವ ತಲೆಹಿಡುಕರ ಬಗೆಗೂ ಹೇಳಿದಳು. ಕೆಲವು ವೈರಿಗಳು ಇವಳನ್ನು ಒಂದು ವೇಶ್ಯಾಗೃಹಕ್ಕೆ ಮಾರಲೂ ನೋಡಿದ್ದರು. ಆದರೆ ಇವಳು ಓಡಿಬಂದಿದ್ದಳು. ಇವಳು ತನಗಾದ ಸಾವಿರಾರು ಕೆಡಕುಗಳನ್ನೆಲ್ಲ ದೂರಿಕೊಂಡಳು. ಇವಳು ದರೋಡೆಗೊಳಗಾಗಿದ್ದಳು ; ಇವಳ ಬಾಯ್‌ಫ್ರೆಂಡ್ ಕಳೆದುಹೋಗಿದ್ದ, ಇವಳ ಪ್ರತಿಸ್ಪರ್ಧಿ ಒಂದು ಸಲ ಇವಳ ದುಂಡು ಬ್ರೆಡ್ ಬುಟ್ಟಿಗೆ ಸೀಮೆಎಣ್ಣೆ ಹೊಯಿದು ಸುಟ್ಟಿದ್ದ ; ಷೂ ಮಾಡುತ್ತಿದ್ದ ಇವಳ ದಾಯಾದಿ ಅಮೆರಿಕಾಕ್ಕೆ ಹೋಗುವ

ಮೊದಲು ಇವಳಿಗೆ ನೂರಾರು ರೂಬಲ್‌ಗಳ ಮೋಸ ಮಾಡಿದ. ಡಾ. ಫಿಷಲ್‌ಸನ್ ಇವಳು ಹೇಳುವುದನ್ನು ಗಮನವಿಟ್ಟು ಕೇಳಿದರು. ಇವರು ಇವಳನ್ನು ಪ್ರಶ್ನಿಸುತ್ತಿದ್ದರು, ತಮ್ಮ ತಲೆ ಅಲುಗಾಡಿಸುತ್ತಿದ್ದರು, ಹೂಂಗುಡುತ್ತಿದ್ದರು.

"ಒಳ್ಳೇದು, ನೀನು ದೇವರನ್ನ ನಂಬತೀಯೇನು?" ಇವರು ಕೊನೆಯದಾಗಿ ಇವಳನ್ನು ಕೇಳಿದರು.

"ನನಗೆ ಗೊತ್ತಿಲ್ಲ" ಇವಳು ಉತ್ತರಿಸಿದಳು. "ನೀವು?"

"ಹೌದು, ನಂಬಿಕೆಯಿದೆ."

"ಹಾಗಿದ್ದ ಮೇಲೆ ನೀವು ಸಿನಗಾಗ್‌ಗೆ ಯಾಕೆ ಹೋಗೋದಿಲ್ಲ?" ಇವಳು ಕೇಳಿದಳು.

"ದೇವರು ಎಲ್ಲ ಕಡೆ ಇದಾನೆ" ಇವರು ಉತ್ತರವಿತ್ತರು. "ಸಿನಗಾಗ್‌ನಲ್ಲಿ, ಮಾರ್ಕೆಟ್‌ನಲ್ಲಿ ಈ ಕೋಣೇಲಿ. ನಾವೂ ಸಹ ದೇವರ ಅಂಶವೇ."

"ಇಂಥ ವಿಷಯಗಳನ್ನ ಹೇಳಬೇಡಿ" ದೋಬಿ ಹೇಳಿದಳು. "ನೀವು ನನ್ನನ್ನ ದಿಗಿಲು ಬೀಳಿಸಬೇಡಿ."

ಇವಳು ರೂಮಿನಿಂದ ಹೊರಹೋದಳು. ಡಾ. ಫಿಷಲ್‌ಸನ್ ಇವಳು ಮಲಗಲು ಹೋದಳು ಅಂದುಕೊಂಡರು. ಆದರೆ ಯಾಕೆ "ಗುಡ್‌ನೈಟ್" ಹೇಳ ಲಿಲ್ಲ ಎಂದು ಆಶ್ಚರ್ಯವಾಯಿತು. "ನಾನು ನನ್ನ ತತ್ವಶಾಸ್ತ್ರದಿಂದ ಇವಳನ್ನ ಹೊರಗೆ ತಳ್ಳಿದೆನೇನೋ" ಎಂದು ಯೋಚಿಸಿದರು. ಮರುಕ್ಷಣದಲ್ಲಿಯೇ ಇವರಿಗೆ ಇವಳ ಹೆಜ್ಜೆಗಳ ಸದ್ದು ಕೇಳಿಸಿತು. ಚಿಲ್ಲರೆ ವ್ಯಾಪಾರಿಯಂತೆ ಇವಳು ಬಟ್ಟೆಗಳನ್ನು ತಂದಿದ್ದಳು.

"ಇವನ್ನ ನಿಮಗೆ ತೋರಿಸಬೇಕು ಅನ್ನಿಸತಿದೆ ನನಗೆ" ಇವಳು ಹೇಳಿದಳು. "ಇವೆಲ್ಲ ನನ್ನ ಮದುಮಗಳ ಉಡುಗೆಗಳು". ಈ ಬಟ್ಟೆಗಳನ್ನು ಇವಳು ಕುರ್ಚಿಯ ಮೇಲೆ ಹರಡತೊಡಗಿದಳು - ಉಣ್ಣೆ, ರೇಷ್ಮೆ ಹಾಗೂ ವೈಲೆಟ್. ಪ್ರತಿಯೊಂದು ಉಡುಪನ್ನೂ ಹೊರಳಿಸುತ್ತ ತೆಗೆದುಕೊಳ್ಳುತ್ತಿದ್ದ ಇವಳು ತನ್ನ ಮೈಮೇಲೆ ಒತ್ತಿ ಹಿಡಿಯುತ್ತಿದ್ದಳು. ಮದುವಣಗಿತ್ತಿಯ ತನ್ನ ಪ್ರತಿಯೊಂದು ಉಡುಗೆಯ ವಿವರವನ್ನೂ ಇವರಿಗೆ ನೀಡಿದಳು - ಅಂಡರ್‌ವೇರ್, ಷೂಗಳು, ಕಾಲುಚೀಲಗಳು.

"ನಾನು ದುಂದು ಮಾಡಿಲ್ಲ" ಇವಳು ಹೇಳಿದಳು. "ನಾನು ಕೂಡಿ ಇಟ್ಟಿರೋ ಅಂಥವಳು. ಅಮೆರಿಕಾಕ್ಕೆ ಹೋಗೋಕೆ ನನ್ನ ಹತ್ತಿರ ಬಹಳ ದುಡ್ಡು ಇದೆ."

ಆನಂತರ ಇವಳು ಮೌನಿಯಾದಳು. ಇವಳ ಮುಖ ಕೆಂಬಣ್ಣಕ್ಕೆ ಹೊರಳಿತು. ಇವಳು ಡಾ. ಫಿಷಲ್‌ಸನ್ ಅವರನ್ನು ಓರೆಗಣ್ಣಿನಲ್ಲಿ ಅಳುಕುತ್ತ ರಹಸ್ಯಮಯವಾಗಿ ದೃಷ್ಟಿಸಿದಳು. ಡಾ. ಫಿಷಲ್‌ಸನ್ ಅವರ ಶರೀರ ಥಟ್ಟನೆ ಚಳಿಯಲ್ಲಿ ಇರುವಂತೆ ನಡುಗಿತು. ಇವರು ಹೇಳಿದರು. "ತುಂಬ ಒಳ್ಳೇದು. ಸುಂದರವಾದ ವಸ್ತುಗಳು". ಇವರ ರೆಪ್ಪೆ ಅದುರಿತು, ಇವರು ತಮ್ಮ ಗಡ್ಡವನ್ನು ಎರಡು ಬೆರಳುಗಳಲ್ಲಿ ನೀವಿಕೊಂಡರು. ಬೊಚ್ಚು ಬಾಯಿಯಲ್ಲಿ ಖಿನ್ನವಾದ ನಗುವೊಂದು ಕಂಡಿತು. ಇವರ ದೊಡ್ಡ ಕಣ್ಣುಗಳೂ ಕೂಡ ಇಂಥದೇ ನಗುವಿನೊಂದಿಗೆ ಮಹಡಿ ಕಿಟಕಿಯಿಂದ ಹೊರಗಿನ ದೂರಕ್ಕೆ ದೃಷ್ಟಿ ಹರಿಸಿದವು.

೭

ಒಂದು ದಿನ ಈ ಕರಿದೋಬಿ ರಬಾಯಿ ಅವರ ಕೋಣೆಗೆ ಬಂದಳು. ಡಾ. ಫಿಷಲ್‌ಸನ್ ಅವರನ್ನು ತಾನು ಮದುವೆಯಾಗುವುದಾಗಿ ಪ್ರಕಟಿಸಿದಳು. ರಬಾಯಿಯವರ ಹೆಂಡತಿ ಇವಳು ಹುಚ್ಚಿಯಾಗಿದ್ದಾಳೆ ಎಂದು ಯೋಚಿಸಿದರು. ಆದರೆ ಈ ಸುದ್ದಿ ಆಗಲೇ ದರ್ಜಿ ಲೈಜೆರ್‌ನಿಗೆ ತಲುಪಿತ್ತು ಹಾಗೂ ಬೇಕರಿಯವರಿಗೆ ಮತ್ತು ಇತರೆ ಅಂಗಡಿಗಳನ್ನೂ ಮುಟ್ಟಿತ್ತು. ಇವರು ಈ "ಮುದಿಗನ್ಯೆ" ತುಂಬ ಅದೃಷ್ಟವಂತೆ ಎಂದುಕೊಂಡರು ; ಡಾಕ್ಟರ್‌ರು ತುಂಬ ದುಡ್ಡನ್ನು ಕೂಡಿಟ್ಟಿರಬೇಕು ಎಂದು ಹೇಳಿದರು. ಆದರೆ ಇವಳಿಗೆ ಸದಾ ರೋಗ ಅಂಟಿಸುತ್ತಿದ್ದವರ ದೃಷ್ಟಿಯಲ್ಲಿ ಇವರು ಕೆಳಮಟ್ಟಕ್ಕೆ ಇಳಿದಿದ್ದರು. ಡಾ. ಫಿಷಲ್‌ಸನ್ ಅವರು ಈಗಾಗಲೇ ಮದುವೆ ಚಿಕ್ಕದಾಗಿ, ಸರಳವಾಗಿರಬೇಕು, ರಬಾಯಿಯವರ ಕೋಣೆಗೆ ಕೆಲವೇ ಜನ ಆಗಮಿಸಿದರೆ ಸಾಕು ಎಂದು ಸೂಚಿಸಿದ್ದರು. ಸಾಮಾನ್ಯವಾಗಿ ಬರಿಗಾಲಿನಲ್ಲಿ ಇರುತ್ತ ಅಂಡರ್‌ವೇರ್‌ನಲ್ಲಿ ತಮ್ಮ ತಲೆ ಮೇಲೆ ಕಾಗದದ ಪೆಟ್ಟಿಗೆಗಳನ್ನು ಹೊತ್ತೊಯ್ಯುತ್ತಿದ್ದ ಬೇಕರಿ ಕೆಲಸಗಾರರು ಈಗ ತಿಳುಬಣ್ಣದ ಸೂಟ್‌ಗಳು, ಸ್ಟ್ರಾ ಹ್ಯಾಟ್‌ಗಳು, ಹಳದಿ ಷೂಗಳು ಹಾಗೂ ಸೊಗಸಾದ ಟೈ ಧರಿಸಿದ್ದರು ; ಇವರಿಗೆಂದು ದೊಡ್ಡ ಕೇಕ್‌ಗಳು ಮತ್ತು ಬ್ರೆಡ್‌ಗಳನ್ನು ತುಂಬಿದ ಪೆಟ್ಟಿಗೆಗಳನ್ನು ತಂದಿದ್ದರು. ಯುದ್ಧದ ಸಮಯದಲ್ಲಿ ಮರೆತುಹೋಗಿದ್ದ

ನ್ಪೋಡ್ಕಾದ ಒಂದು ಬಾಟಲಿಯನ್ನೂ ಇವರು ಹೊಂಚಿದ್ದರು. ರಬಾಯಿಯವರ ಕೋಣೆಗೆ ವಧೂವರರು ಆಗಮಿಸಿದಾಗ ಜನರಿಂದ ಗುಲ್ಲೆದ್ದಿತ್ತು. ಹೆಂಗಸರು ತಮ್ಮ ಕಣ್ಣುಗಳನ್ನೇ ನಂಬಿರಲಿಲ್ಲ. ಈ ಹೆಂಗಸರಿಗೆ ತಮ್ಮ ಪರಿಚಯದವಳನ್ನೇ ನೋಡುತ್ತಿದ್ದೇವೆ ಎಂಬಂತಾಗಿರಲಿಲ್ಲ. ದೋಬಿ ಧರಿಸಿದ್ದ ಅಗಲ ಅಂಚಿನ ಹ್ಯಾಟ್ ಚೆರ್ರಿ, ದ್ರಾಕ್ಷಿ ಮತ್ತು ಗರಿಗಳನ್ನುಳ್ಳದ್ದಾಗಿತ್ತು. ಇವಳ ಉಡುಪು ಬಿಳಿ ರೇಷ್ಮೆಯದಾಗಿತ್ತು. ಉದ್ದನೆಯ ಸೆರಗಿತ್ತು. ಕಾಲುಗಳಲ್ಲಿ ಬಂಗಾರ ಬಣ್ಣದ ಹೈಹೀಲ್ಡ್ ಷೂಗಳಿದ್ದವು. ಇವಳ ಒರಟು ಕೊರಳಿನಲ್ಲಿ ಮುತ್ತಿನಹಾರವೊಂದು ತೂಗಿಕೊಂಡಿತ್ತು. ಇದಿಷ್ಟೇ ಅಲ್ಲ ; ಇವಳ ಬೆರಳುಗಳು ಹೊಳೆವ ಹರಳಿನ ಉಂಗುರಗಳಿಂದ ತುಂಬಿದ್ದವು. ಇವಳ ಮುಖವನ್ನು ಮರೆಮಾಡಲಾಗಿತ್ತು. ವಿಯನ್ನಾ ಸಭಾಂಗಣದಲ್ಲಿ ನಡೆಯುವ ಸಿರಿವಂತ ಕನ್ಯೆಯರ ಮದುವೆಯೊಂದರ ಹೆಣ್ಣಿನಂತೆ ಕಾಣತೊಡಗಿದ್ದಳು ಇವಳು. ಬೇಕರಿ ಕೆಲಸಗಾರರು ಖುಷಿಯಿಂದ ಸಿಳ್ಳೆ ಊದಿದ್ದರು. ಡಾ. ಫಿಷಲ್‌ಸನ್ ಅವರೂ ತಮ್ಮ ಕರಿಕೋಟು ಮತ್ತು ಅಗಲ ಅಂಚಿನ ಷೂಗಳನ್ನು ಧರಿಸಿದ್ದರು. ಇವರು ನಡೆಯಲು ಹಿಂಜರಿಯುತ್ತಿದ್ದರು ; ದೋಬಿಯ ಮೇಲೆ ಬಾಗಿದ್ದರು. ಬಾಗಿಲ ಬಳಿ ಗುಂಪನ್ನು ಕಂಡಾಗ ಇವರು ಹೆದರಿದ್ದರು. ಹಿಂದೆ ಸರಿಯಲಾರಂಭಿಸಿದ್ದರು. ಆದರೆ ರಬಾಯಿಯೊಂದಿಗೆ ಮೊದಲು ಕೆಲಸ ಮಾಡುತ್ತಿದ್ದ ಒಬ್ಬಾತ ಹೇಳಿದ. "ಬನ್ನಿ, ಒಳಗೆ ಬನ್ನಿ ಮದುವಣಿಗರೇ, ಅಳುಕ ಬೇಡಿ. ಈಗ ನಾವೆಲ್ಲ ಅಣ್ಣತಮ್ಮಂದಿರು."

ಸಮಾರಂಭ ವಿಧಿಪೂರ್ವಕವಾಗಿ ನಡೆಯಿತು. ಉದ್ದನೆಯ ನಿಲುವಂಗಿ ಧರಿಸಿದ್ದ ರಬಾಯಿಯವರು ಮದುವೆಯ ನಿಶ್ಚಿತಾರ್ಥವನ್ನು ಬರೆದರು, ಹಾಗೂ ಒಪ್ಪಂದದ ಗುರುತಿಗಾಗಿ ವಧೂವರರ ಕೈಗಳಿಗೆ ತಮ್ಮ ಕರ್ಚೀಫನ್ನು ಮುಟ್ಟಿಸಿದರು ; ರಬಾಯಿಯವರು ಇವರ ಟೊಪ್ಪಿಗೆಯ ಅಂಚನ್ನೂ ಉಜ್ಜಿದರು. ಸಭೆ ತುಂಬಲೆಂದು ಬೀದಿಯಿಂದ ಕರೆತಂದಿದ್ದ ಕೂಲಿಯಾಳುಗಳು ಛತ್ರವನ್ನು ತುಂಬಿಕೊಂಡಿದ್ದರು. ಡಾ. ಫಿಷಲ್‌ಸನ್ ಅವರಿಗೆ ತಮ್ಮ ಸಾವಿನ ದಿನದ ಬಳಿ ನಿಲುವಂಗಿ ಹಾಕಿರುವಂತಾಯಿತು. ದೋಬಿ ವಿಧಿಯಂತೆ ಇವರ ಸುತ್ತ ಏಳು ಸುತ್ತುಗಳನ್ನು ಸುತ್ತಿದಳು. ಗೋಡೆಗಳಲ್ಲಿ ಮದುವಣಗಿತ್ತಿಯ ಮೊಂಬತ್ತಿಗಳ ಬೆಳಕುಗಳು ನಲಿದಾಡಿ, ನೆರಳುಗಳ ನರ್ತನಗೈದಿದ್ದವು. ಬಟ್ಟಲಿಗೆ ವೈನ್ ಸುರಿದ ರಬಾಯಿಯವರು ಕೆಟ್ಟ ಆಲಾಪದಲ್ಲಿ ವಚನಗಳನ್ನು ಪಠಿಸಿದರು. ದೋಬಿ ಅಳುವೊಂದನ್ನು ಬಿಕ್ಕಿದಳು. ಬೇರೆ ಹೆಂಗಸರಂತೆಯೇ, ತಮ್ಮ ಲೇಸಿನ ಹ್ಯಾಂಡ್ ಕರ್ಚೀಫ್ ತೆರೆದ ಹೆಂಗಳೆಯರು ಸೊಟ್ಟಮೋರೆ ಮಾಡಿಕೊಳ್ಳುತ್ತ ಇದನ್ನು ಒರೆಸಿದರು.

ಬೇಕರಿಯವರು ಸಿಳ್ಳೆ ಊದುತ್ತ ಒಬ್ಬರಿಗೊಬ್ಬರು ಮೆಲ್ಲಗೆ ಮೈತಟ್ಟಿ ಹೊಡೆಯುತ್ತಿದ್ದರೆ, ರಬಾಯಿಯವರು ತಮ್ಮ ಬೆರಳನ್ನು ತುಟಿಯ ಮೇಲಿರಿಸುತ್ತ ಗಲಾಟೆ ಹೆಚ್ಚಾಯಿತು ಎಂಬಂತೆ ಪಿಸುಗುಟ್ಟಿದ್ದರು "ಎಹ್ ನೂ ಓಹ್". ಹೆಣ್ಣಿನ ಬೆರಳಿಗೆ ಮದುವೆಯುಂಗುರ ತೊಡಿಸುವ ಸಮಯವಾಯಿತು. ಆದರೆ ಮದುವಣಿಗನ ಕೈ ನಡುಗಲು ಆರಂಭಿಸಿ ದೋಬಿಯ ತೋರ್ಬೆರಳನ್ನು ಹುಡುಕಲು ಪ್ರಯಾಸಪಟ್ಟಿತು. ವಿಧಿಯಂತೆ ಮುಂದಿನ ಕಾರ್ಯ ಗ್ಲಾಸನ್ನು ಒಡೆಯುವುದು. ಆದರೆ ಡಾ. ಫಿಷಲ್‌ಸನ್ ಬಟ್ಟಲನ್ನು ಸುಮಾರು ಸಲ ಎಸೆದರೂ ಇದು ಒಡೆಯಲಿಲ್ಲ. ಹುಡುಗಿಯರು ತಮ್ಮ ತಲೆಗಳನ್ನು ಕೆಳಹಾಕಿ ಸಂತೋಷದಿಂದ ಒಬ್ಬರಿಗೊಬ್ಬರು ಜಿಗುಟುತ್ತ ಕಿಸಿಕಿಸಿ ನಕ್ಕರು. ಕೊನೆಗೆ ಒಬ್ಬ ಕೂಲಿಯವನು ತನ್ನ ಹಿಮ್ಮಡಿಯಿಂದ ಬಟ್ಟಲಿಗೆ ಒದೆದಾಗ ಇದು ಒಡೆದು ರಬಾಯಿಯವರಿಗೂ ಕೂಡ ನಗು ತಡೆದುಕೊಳ್ಳಲು ಸಾಧ್ಯವಾಗಿರಲಿಲ್ಲ. ಸಮಾರಂಭದ ನಂತರ ಅತಿಥಿಗಳು ವೋಡ್ಕ ಕುಡಿದರು, ಬಿಸ್ಕೆಟ್ ಪದಾರ್ಥಗಳನ್ನು ತಿಂದರು. ದೋಬಿಯೊಂದಿಗೆ ಮೊದಲು ಕೆಲಸ ಮಾಡುತ್ತಿದ್ದವರು ಡಾ. ಫಿಷಲ್‌ಸನ್ ಅವರ ಬಳಿ ಬಂದು ಹೇಳಿದರು, "ಮಜಲ್ ತೋವ್ ಮದುವಳಿಗರೇ, ನಿಮ್ಮ ಅದೃಷ್ಟ ನಿಮ್ಮ ಹೆಂಡತಿಯವರದರಷ್ಟೇ ಚೆನ್ನಾಗಿದೆ". "ಥ್ಯಾಂಕ್‌ಯೂ, ಥ್ಯಾಂಕ್‌ಯೂ" ಡಾ. ಫಿಷಲ್‌ಸನ್ ಮೆಲ್ಲಗೆ ನುಡಿದರು. "ಆದರೆ ನನಗೆ ಅಂಥ ಅದೃಷ್ಟವೇನೂ ಕಾಣತಿಲ್ಲ." ಇವರಿಗೆ ಆದಷ್ಟು ಬೇಗ ತಮ್ಮ ಮಹಡಿಗೋಪುರದ ಕೋಣೆಗೆ ಮರಳಬೇಕು ಎನ್ನಿಸಿತ್ತು. ಇವರ ಹೊಟ್ಟೆ ತೋಳಸುತ್ತಿರುವಂತೆ ಭಾಸವಾಗಿತ್ತು, ಎದೆ ನೋಯತೊಡಗಿತ್ತು. ಇವರ ಮುಖ ಹಸಿರುಗಟ್ಟಿತ್ತು. ದೋಬಿ ಥಟ್ಟನೆ ಕೋಪಗೊಂಡಳು. ತನ್ನ ಸೆರಗನ್ನು ಹಿಂದೆ ಸರಿಸಿ ಜನರಿಗೆ ಹೇಳಿದಳು, "ಯಾಕೆ ನಗ್ತಿದೀರಿ ನೀವು ? ಇದು ನಾಟಕವಲ್ಲ" ಉಡುಗೊರೆಗಳು ತುಂಬಿದ ನುಣುಪಿನ ಬಟ್ಟೆಯನ್ನು ಹೊದಿಸಿದ ಬುಟ್ಟಿಯನ್ನು ತೆಗೆದುಕೊಳ್ಳದಂತೆ ಇವಳು ತನ್ನ ಗಂಡನ ಜೊತೆ ಐದನೆ ಮಹಡಿಯ ತಮ್ಮ ಕೋಣೆಗಳತ್ತ ಮರಳಿದಳು.

ಡಾ. ಫಿಷಲ್‌ಸನ್ ತಮ್ಮ ಕೋಣೆಯಲ್ಲಿ ಹೊಸದಾಗಿ ಮಾಡಿಸಿದ್ದ ಮೆತ್ತನೆಯ ಹಾಸಿಗೆಯಲ್ಲಿ ಉರುಳಿ ಎಥಿಕ್ಸ್ ಓದಲು ಆರಂಭಿಸಿದರು. ದೋಬಿ ತನ್ನ ಕೋಣೆಗೆ ಮರಳಿದಳು. ವೈದ್ಯರು ಇವಳಿಗೆ ಇವರು ವಯಸ್ಸಾದವರು, ಶಕ್ತಿಯಿಲ್ಲದ ಕಾಯಿಲೆ ಮನುಷ್ಯ ಎಂದು ವಿವರಿಸಿದ್ದರು. ಇವಳಿಗೆ ಇವರ ಬಗ್ಗೆ ಅವರು ಭರವಸೆ ನೀಡಿರಲಿಲ್ಲ. ಹೀಗಿದ್ದೂ ಇವಳು ರೇಷಿಮೆಯ ನೈಟ್‌ಗೌನ್ ತೊಟ್ಟು ಮರಳಿದ್ದಳು, ಚಪ್ಪಲಿಗಳನ್ನು ಪಟಗುಟ್ಟಿಸಿದ್ದಳು. ಇವಳ ಕೂದಲುಗಳು ಹೆಗಲ ಮೇಲೆ ತೂಗಿ ಬಿದಿದ್ದು.

ಮುಖದಲ್ಲಿ ಒಂದು ತೆರನ ನಗುವಿತ್ತು, ನಾಚಿಕೆಯಿತ್ತು ಹಾಗೂ ಅನುಮಾನವಿತ್ತು. ಡಾ. ಫಿಷಲ್‌ಸನ್ ಅದುರಿದರು, ಇವರ ಕೈಗಳಿಂದ ಎಥಿಕ್ಸ್ ಜಾರಿ ಬಿದ್ದಿತು. ಮೊಂಬತ್ತಿ ಹೊರಗೆ ಹೋಯಿತು. ದೋಬಿ ಕತ್ತಲಿನಲ್ಲಿ ಡಾ. ಫಿಷಲ್‌ಸನ್ ಅವರನ್ನು ಅಪ್ಪಿದಳು, ಇವರ ತುಟಿಗೆ ಚುಂಬನವಿತ್ತಳು. "ಮುದ್ದಿನ ಪತಿರಾಯರೇ' ಇವಳು ಪಿಸುಗುಟ್ಟಿದಳು, "ಮಜಲ್ ತೋವ್".

ಅಂದು ರಾತ್ರಿ ಏನು ನಡೆಯಿತೋ ಅದನ್ನು ಒಂದು ಪವಾಡ ಎನ್ನಬಹುದು. ಪ್ರಕೃತಿಯ ನಿಯಮದಂತೆ ಪ್ರತಿಯೊಂದು ಸಂದರ್ಭವೂ ಹೊಂದಿಕೊಳ್ಳುವಂಥದಾಗಿ ಇರುವುದಿಲ್ಲ. ಕರಿದೋಬಿ ತಮ್ಮನ್ನು ಮರುಳುಗೊಳಿಸಿದಳು ಎಂದು ಡಾ. ಫಿಷಲ್‌ಸನ್ ಯೋಚಿಸಿದರು. ಹುದುಗಿದ್ದ ಶಕ್ತಿಗಳು ಇವರಲ್ಲಿ ಪುಟಿದುಕೊಂಡಿದ್ದವು. ಆರಾಧನೆ ಯಲ್ಲಿನ ವೈನನ್ನು ಇವರು ಒಂದು ಹನಿಯಷ್ಟು ಸೇವಿಸಿದ್ದರೂ ಇವರಿಗೆ ಮತ್ತೇರಿ ದಂತಾಗಿತ್ತು. ಇವರು ದೋಬಿಯನ್ನು ಚುಂಬಿಸಿದರು. ತಮ್ಮ ಪ್ರೀತಿಯನ್ನು ಮಾರ್ನುಡಿ ದರು. ಹಿಂದೆಯೇ ಮರೆತು ಹೋಗಿದ್ದ ಕ್ಲೋಪ್‌ಸ್ಟೋಕ್, ಲೆಸ್ಸಿಂಗ್, ಗಯಟೆಯವರ ಸುಭಾಷಿತಗಳು ಇವರ ತುಟಿಗಳಿಗೆ ಬಂದಿದ್ದವು. ಉಬ್ಬಸ ಮತ್ತು ನವೆ ನಿಂತಿತ್ತು. ಇವರು ದೋಬಿಯನ್ನು ಅಪ್ಪಿದರು. ಅವಳನ್ನು ತಮಗೆ ಒತ್ತಿಕೊಂಡರು, ಇವರು ಮರಳಿ ಪ್ರಾಯ ಪಡೆದಿರುವಂತಾಗಿದ್ದರು. ದೋಬಿ ಹರ್ಷದಿಂದ ಮೂರ್ಛೆ ಹೋಗು ವಂತಾಗಿದ್ದಳು ; ಅಳುತ್ತಿದ್ದಳು, ಇವರಿಗೆ ತಿಳಿಯಲಾಗದ ವಾರ್ಸಾದ ಒರಟು ಭಾಷೆ ಯಲ್ಲಿ ಪಿಸುಪಿಸುಗುಟ್ಟಿದಳು. ಆನಂತರ ಡಾ. ಫಿಷಲ್‌ಸನ್ ಅವರು ಈಗ ಹರೆಯದಲ್ಲಿ ರುವವರಂತೆ ಗಾಢನಿದ್ದೆಯಲ್ಲಿ ಮುಳುಗಿದರು. ತಾವು ಸ್ವಿಟ್ಜರ್‌ಲೆಂಡ್‌ನಲ್ಲಿ ಇರುವಂತೆ ಹಾಗೂ ಪರ್ವತಗಳನ್ನು ಏರುತ್ತಿರುವವರಂತೆ ಕನಸು ಕಂಡರು - ಓಡುತ್ತಿದ್ದರು, ಬೀಳುತ್ತಿದ್ದರು, ಹಾರುತ್ತಿದ್ದರು. ಮುಂಜಾವಿನಲ್ಲಿ ಇವರು ತಮ್ಮ ಕಣ್ಣುಗಳನ್ನು ತೆರೆದರು : ತಮ್ಮ ಕಿವಿಗಳಲ್ಲಿ ಯಾರೋ ಏನನ್ನೋ ಕುಟ್ಟುತ್ತಿರುವ ಭಾಸ ಮೂಡಿಸಿತ್ತು. ದೋಬಿ ಗೊರಕೆಯಲ್ಲಿದ್ದಳು. ಡಾ. ಫಿಷಲ್‌ಸನ್ ತಕ್ಷಣ ಹಾಸಿಗೆಯಿಂದ ಎದ್ದರು. ತಮ್ಮ ಉದ್ದ ನಿಲುವಂಗಿಯೊಂದಿಗೆ ಕಿಟಕಿಯ ಬಳಿ ನಡೆದರು. ಮೆಟ್ಟಿಲುಗಳ ಮೇಲೆ ಏರಿದರು. ಆಶ್ಚರ್ಯಗೊಂಡು ಹೊರಗೆ ನೋಡಿದರು. ಮಾರ್ಕೆಟ್ ಬೀದಿ ನಿದ್ದೆಯಲ್ಲಿತ್ತು, ಗಾಢ ನಿಶ್ಚಲತೆಯ ಉಸಿರಾಟದಲ್ಲಿತ್ತು. ಗ್ಯಾಸ್ ದೀಪಗಳು ಮಿಣುಕುತ್ತಿದ್ದವು. ಅಂಗಡಿ ಗಳ ಬಾಗಿಲುಗಳು ಕಬ್ಬಿಣದ ಅಡ್ಡಪಟ್ಟಿಗಳೊಂದಿಗೆ ಮುಚ್ಚಿಕೊಂಡಿದ್ದವು. ತಂಪುಗಾಳಿ ಬೀಸುತ್ತಿತ್ತು. ಡಾ. ಫಿಷಲ್‌ಸನ್ ಮೇಲೆ ಆಗಸವನ್ನು ನೋಡಿದರು. ಕಪ್ಪುಕಮಾನು

ನಕ್ಷತ್ರಗಳಿಂದ ಕಿಕ್ಕಿರಿದಿತ್ತು - ಹಸಿರು, ಕೆಂಪು, ಹಳದಿ, ನೀಲಿ ನಕ್ಷತ್ರಗಳು. ಇವುಗಳಲ್ಲಿ ದೊಡ್ಡದಾಗಿರುವವೂ ಇದ್ದವು, ಚಿಕ್ಕವೂ ಇದ್ದವು. ಮೇಲೆ ಕಾಣುತ್ತಿರುವಂಥವುಗಳಲ್ಲಿ ಮಿಣುಕುವಂಥವು ಹಾಗೂ ಉಜ್ವಲ ಹೊಳಪಿನವಿದ್ದುವು. ಇವುಗಳಲ್ಲಿ ಗುಂಪುಗೂಡಿರುವಂಥವೂ ಇದ್ದವು ಹಾಗೂ ಒಂಟಿಯಾಗಿರುವಂಥವೂ ಇದ್ದವು. ಒಂದು ಸಣ್ಣನೋಟ ಹರಿಸುವುದರಲ್ಲಿ ಡಾ. ಫಿಷಲ್‌ಸನ್ ಖಂಡಿತವಾಗಿಯೂ ತಮ್ಮ ಇಳಿಗಾಲದಲ್ಲಿ ಕರಿದೋಬಿಯೊಂದಿಗೆ ಮದುವೆಯಾಗಿದ್ದಾರೆ ಎನ್ನಬಹುದಿತ್ತು. ಮುಂದೆ ನಡೆಯುವಂತೆ ಕಾಣಲಿದ್ದ ಮಹಾಯುದ್ಧ ಕೂಡ ಏನೂ ಅಲ್ಲ ಲೋಕವಿಧಿಯ ತಾತ್ಕಾಲಿಕ ಆಟ ಎನ್ನುವಂತಾಗಿತ್ತು. ಕಲ್ಪಾಂತರಗಳಿಂದ ಸ್ಥಿರವಾಗಿರುವ ನಕ್ಷತ್ರಗಳು ಅಸೀಮದ ಅನಂತಾಕಾಶದಲ್ಲಿ ತಮ್ಮ ಪಯಣವನ್ನು ಮುಂದುವರಿಸಿಕೊಳ್ಳುತ್ತವೆ. ಧೂಮಕೇತುಗಳು, ಗ್ರಹಗಳು, ಉಪಗ್ರಹಗಳು, ಲಘುಗ್ರಹಗಳು ಈ ಪ್ರಕಾಶಮಯ ಕೇಂದ್ರಗಳನ್ನು ಸುತ್ತುತ್ತಲೇ ಇರುತ್ತವೆ. ವಿಶ್ವದ ಮುಮ್ಮುಖತೆಯಲ್ಲಿ ಜಗತ್ತುಗಳು ಹುಟ್ಟುತ್ತವೆ ಮತ್ತು ಸಾಯುತ್ತವೆ. ಪಂಚಭೂತಗಳಿಗೂ ಮೊದಲಿನ ಅನಾದಿ ತಾರಾಮಂಡಲಗಳು ರೂಪುಗೊಳ್ಳುತ್ತವೆ. ಈಗಲೋ ಇನ್ನೊಂದು ಗಳಿಗೆಯಲ್ಲೋ ಒಂದು ನಕ್ಷತ್ರ ಸಡಿಲವಾಗುತ್ತದೆ ಮತ್ತು ಆಗಸದ ಅಂಚಿನಲ್ಲಿ ಇಳಿಯುತ್ತದೆ, ತನ್ನ ಹಿಂದೆ ಉರಿಯ ಪಟ್ಟಿಯನ್ನು ಎಳೆದುಕೊಳ್ಳುತ್ತದೆ. ಇದು ಉಲ್ಕಾಪಾತಗಳು ಧುಮ್ಮಿಕ್ಕುವ ಆಗಸ್ಟ್ ತಿಂಗಳು. ಹೌದು, ದೈವೀಕ ಸತ್ಯ ಕೊನೆ ಹಾಗೂ ಮೊದಲಿನದರಂತೆ ಹಿಗ್ಗಿಕೊಳ್ಳುತ್ತಿರುವಂಥಹುದು ; ಇದು ನಿರುಪಾಧಿಕವಾದುದು, ಅವಿಭಾಜ್ಯವಾದುದು, ಶಾಶ್ವತವಾದುದು, ಕಾಲಮಿತಿ ಇಲ್ಲದುದು ಹಾಗೂ ತನ್ನ ವಿಶೇಷತೆಯಲ್ಲಿ ಅನಂತವಾದುದು. ಇದರ ಅಲೆಗಳು ಹಾಗೂ ಗುಳ್ಳೆಗಳು ವಿಶ್ವದ ಕಡಾಯಿಯಲ್ಲಿ ನರ್ತನಗೈಯುತ್ತವೆ, ಬೇಯುತ್ತ ಬದಲಾಗುತ್ತವೆ, ತುಂಡಾಗದ ಸರಪಳಿಯನ್ನು ಕಾರಣ ಮತ್ತು ಪ್ರಯತ್ನಗಳೆಂದು ಹಿಂಬಾಲಿಸುತ್ತವೆ ; ಹಾಗೂ ಇವರು, ನಿರ್ವಾಹವಿಲ್ಲದ ಡಾ. ಫಿಷಲ್‌ಸನ್, ಇದರ ಭಾಗವಾಗಿ ಇರುತ್ತಾರೆ. ಡಾಕ್ಟರ್ ತಮ್ಮ ಕಣ್‌ರೆಪ್ಪೆಗಳನ್ನು ಮುಚ್ಚಿಕೊಂಡರು. ತಮ್ಮ ಹಣೆಯ ಮೇಲೆ ತಂಪುಗಾಳಿ ಬೀಸಲು ಅನುವಿತ್ತರು. ತಮ್ಮ ಗಡ್ಡದ ಕೂದಲುಗಳನ್ನು ನೀವಿದರು. ನಡುರಾತ್ರಿಯ ಗಾಳಿಯನ್ನು ನೀಳವಾಗಿ ಉಸಿರಾಡಿದರು. ಕಿಟಕಿಯ ಪಟ್ಟಿಯನ್ನು ಕೈಗಳಿಂದ ಆಧರಿಸಿ ಹಿಡಿದರು ಮತ್ತು ಪಿಸುಗುಟ್ಟಿದರು, "ದೈವೀಕ ಸ್ಪಿನೋಜ, ನನ್ನನ್ನ ಕ್ಷಮಿಸು. ನಾನೊಬ್ಬ ಹೆಡ್ಡನಾದೆ."

ಅಮೆರಿಕಾದಿಂದ ಬಂದವನು

ಲೆಂತಿನ್ ಸಣ್ಣ ಊರು. ಊರ ನಡುವೆ ಮರಳು ನೆಲದ ಸಂತೆಮಾಳವಿದೆ. ಸುತ್ತಿನ ಹಳ್ಳಿಗರು ವಾರಕ್ಕೊಂದು ಸಲ ಇಲ್ಲಿಗೆ ಸಂತೆಗೆಂದು ಬರುತ್ತಾರೆ. ಈ ಸಂತೆಮಾಳದ ಸುತ್ತಲೂ ಚಿಕ್ಕಪುಟ್ಟ ಗುಡಿಸಲುಗಳಿವೆ. ಇವುಗಳಲ್ಲಿ ಕೆಲವು ಜೊಂಡುಹುಲ್ಲು ಹೊದಿಸಿದುವಂಥವಾದರೆ ಮತ್ತೆ ಕೆಲವು ಮರದ ಪಟ್ಟಿಗಳ ಚಾವಣಿಯಿರುವ ಗುಡಿಸಲು ಗಳು. ಇವುಗಳ ಮೇಲಿನ ಚಿಮಣಿಗಳು ಸಣ್ಣ ಕುಂಡಗಳಂತೆ ಕಾಣುತ್ತವೆ. ಗುಡಿಸಲುಗಳ ಆಚೀಚೆಗೆಲ್ಲಾ ಬಯಲು ಭೂಮಿಯಿದೆ. ಭೂಮಿಯುಳ್ಳವರು ಇಲ್ಲೆಲ್ಲಾ ತರಕಾರಿ ಬೆಳೆಯುತ್ತಾರೆ. ಕೆಲವರು ತಮ್ಮ ಮೇಕೆಗಳನ್ನು ಮೇಯಿಸಲು ಹುಲ್ಲುಗಾವಲಾಗಿಯೂ ಬಿಟ್ಟುಕೊಳ್ಳುತ್ತಾರೆ.

ಬೆಲ್ ಈ ಗುಡಿಸಲುಗಳಲ್ಲೇ ಒಂದರಲ್ಲಿ ವಾಸವಾಗಿದ್ದ. ಸುಮಾರು ಎಂಭತ್ತು ವರ್ಷದ ಮುಪ್ಪಿನವನಾದ ಇವನ ಜೊತೆಯಲ್ಲಿ ಹೆಂಡತಿ ಬೆಲ್‌ಷಳೂ ಇದ್ದಳು. ರಷ್ಯಾದ ಹಳ್ಳಿಗಳಿಂದ ಪೋಲೆಂಡ್‌ಗೆ ಬಂದು ನೆಲೆಸಿದ ಯಹೂದಿಗಳಲ್ಲಿ ಈ ಬೆಲ್ ಸಹ ಒಬ್ಬನಾಗಿದ್ದ. ಜೋರುದನಿಯ ಇವನ ಪ್ರಾರ್ಥನೆಗಳನ್ನು ಕೇಳಿ ಲೆಂತಿನ್‌ನ ಜನ ಗೇಲಿ ಮಾಡುತ್ತಿದ್ದರು. 'ರ'ಕಾರವನ್ನು ಇವನು ತುಂಬ ಒತ್ತಿ ಮಾತಾಡುತ್ತಿದ್ದ. ಕುಳ್ಳಗಿದ್ದ ಇವನ ಭುಜಗಳು ಮಾತ್ರ ಅಗಲಕ್ಕಿದ್ದವು. ಮುಖದಲ್ಲಿ ಮೋಟುಗಡ್ಡವಿತ್ತು. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಅರೆದೋಳಿನ ಕೋಟು ತೊಡುತ್ತಿದ್ದ ಇವನು ಕಾಲಿಗೆ ಒರಟು ಬೂಟುಗಳನ್ನು ಹಾಕಿಕೊಳ್ಳುತ್ತಿದ್ದ. ತಲೆಗೆ ಕುರಿತುಪ್ಪಟದ ಟೋಪಿಯನ್ನು ಹಾಕಿಕೊಳ್ಳುತ್ತಿದ್ದ. ಯಾವಾಗಲೂ ಕಾಲೆಳೆಯುತ್ತಾ ನಿಧಾನವಾಗಿ ನಡೆಯುವುದೇ ಇವನ ಜಾಯಮಾನ. ಅರ್ಧ ಎಕರೆಯಷ್ಟು ಜಮೀನಿದ್ದ ಇವನಿಗೆ ಒಂದು ಹಸು ಮತ್ತು ಮೇಕೆಯೊಂದಿದ್ದು ಒಂದಿಷ್ಟು ಕೋಳಿಗಳೂ ಇದ್ದವು.

ಇವರಿಗಿದ್ದ ಒಬ್ಬನೇ ಮಗ ಸ್ಯಾಮ್ಯುಯಲ್ ನಲವತ್ತು ವರ್ಷಗಳ ಹಿಂದೆ ಅಮೆರಿಕಾಕ್ಕೆ ಹೋಗಿದ್ದ. ಅಮೆರಿಕಾದಲ್ಲಿ ಸ್ಯಾಮ್ಯುಯಲ್ ಕೋಟ್ಯಾಧೀಶನಾಗಿದ್ದಾನೆ ಎಂದು ಮಾತಾಡಿಕೊಳ್ಳುತ್ತಿದ್ದರು ಲೆಂತಿನ್‌ನ ಜನ. ಲೆಂತಿನ್‌ಗೆ ಬರುವ ಪೋಸ್ಟ್‌ಮ್ಯಾನ್ ಪ್ರತಿ ತಿಂಗಳೂ ಒಂದು ಪತ್ರ ಮತ್ತು ಮನಿಯಾರ್ಡರೊಂದನ್ನು ತಂದು ಬೆಲ್‌ಗೆ

ಕೊಡುತ್ತಿದ್ದ. ಪತ್ರದಲ್ಲಿ ಇಂಗ್ಲಿಷ್ ಅಕ್ಷರಗಳೇ ಹೆಚ್ಚಾಗಿರುತ್ತಿದ್ದುದರಿಂದ ಯಾರೂ ಓದುತ್ತಿರಲಿಲ್ಲ. ಅಪ್ಪ ಅಮ್ಮಂದಿರಿಗೆ ಸ್ಯಾಮ್ಯುಯಲ್ ಎಷ್ಟು ಹಣ ಕಳಿಸಿದ್ದಾನೆ ಎಂಬುದು ಮಾತ್ರ ಗುಟ್ಟಾಗಿಯೇ ಇತ್ತು. ವರ್ಷಕ್ಕೆ ಮೂರು ಸಲ ಜಕ್ರೋಜೈಮ್‌ಗೆ ನಡೆದು ಹೋಗುತ್ತಿದ್ದ ಬೆಲ್ ಮತ್ತು ಬೆಲ್‌ಷ ಈ ಹಣವನ್ನು ಕ್ಯಾಷ್ ಮಾಡಿಸುತ್ತಿದ್ದರು. ಆದರೆ ಈ ಹಣವನ್ನು ಮಾತ್ರ ಅವರು ಯಾವಾಗಲೂ ಬಳಸಿಕೊಂಡಿರಲಿಲ್ಲ. ಯಾವುದಕ್ಕಾಗಿ ಬೇಕಿತ್ತು? ಹೊಲ, ಹಸು, ಮೇಕೆ ಇವರಿಗೆ ಬೇಕಿದ್ದುದನ್ನೆಲ್ಲಾ ಕೊಡುತ್ತಿದ್ದವು. ಬೆಲ್‌ಷ ಕೋಳಿ ಮತ್ತು ಮೊಟ್ಟೆಗಳನ್ನು ಮಾರುತ್ತಿದ್ದಳು. ಅವರಿಗೆ ಬೇಕಿದ್ದ ಬ್ರೆಡ್ ಕೊಳ್ಳಲು ಇಷ್ಟರಲ್ಲೇ ಸಾಕಾಗುತ್ತಿತ್ತು.

ಮಗ ಕಳಿಸುವ ಹಣವನ್ನು ಬೆಲ್ ಎಲ್ಲಿಡುತ್ತಾನೆ ಅನ್ನುವುದು ಯಾರಿಗೂ ಬೇಕಾದ ವಿಷಯವಾಗಿರಲಿಲ್ಲ. ಲೆಂತಿನ್‌ನಲ್ಲಿ ಕಳ್ಳರಿರಲಿಲ್ಲ. ಗುಡಿಸಲಿನೊಳಗಿದ್ದ ಒಂದು ರೂಮಿನಲ್ಲಿ ಇವನಿಗೆ ಬೇಕಿದ್ದ ವಸ್ತುಗಳೆಲ್ಲವೂ ಇದ್ದವು; ಮಾಂಸದ ಶೆಲ್ಫ್, ಹಾಲು-ಮೊಸರಿನ ಶೆಲ್ಫ್, ಟೇಬಲ್, ಎರಡು ಹಾಸಿಗೆಗಳು, ಮಣ್ಣಿನ ಒಲೆಗೂಡು ಎಲ್ಲವೂ ಇದ್ದವು. ಕೋಳಿಗಳಿಗೆ ಕೊಟ್ಟಿಗೆಯೂ ಇತ್ತು. ಚಳಿಗಾಲವಾದಾಗ ಇವನ್ನು ಒಳಗೆ ಒಲೆಗೂಡಿನ ಹತ್ತಿರದಲ್ಲೇ ಗೂಡೆಯೊಳಗೆ ಕೂಡುತ್ತಿದ್ದರು. ಹೊರಗೆ ವಾತಾವರಣ ಸರಿಯಿಲ್ಲವೆಂದರೆ ಮೇಕೆಯೂ ಒಳಗಿರುತ್ತಿತ್ತು. ಹಳ್ಳಿಯ ಕೆಲವು ಅನುಕೂಲಸ್ಥರು ಸೀಮೆಎಣ್ಣೆಯ ಲ್ಯಾಂಪ್‌ಗಳನ್ನು ಬಳಸುತ್ತಿದ್ದರು. ಆದರೆ ಬೆಲ್ ಮತ್ತು ಬೆಲ್‌ಷರಿಗೆ ಇಂಥ ಹೊಸಗಾಲದ ವಸ್ತುಗಳ ಬಗ್ಗೆ ಆಸಕ್ತಿಯೇ ಇರಲಿಲ್ಲ. ಬತ್ತಿದೀಪಗಳನ್ನೇ ಬಳಸಿಕೊಳ್ಳುವುದರಲ್ಲಿ ಏನು ತಪ್ಪಿದೆ? ಸಬ್ಬತ್‌ನಲ್ಲಿ ಮಾತ್ರ ಬೆಲ್‌ಷ ಅಂಗಡಿಯಿಂದ ಮೂರು ಮೊಂಬತ್ತಿಗಳನ್ನು ಕೊಳ್ಳುತ್ತಿದ್ದಳು. ಬೇಸಿಗೆ ಕಾಲದಲ್ಲಿ ಈ ಇಬ್ಬರೂ ಸೂರ್ಯ ಹುಟ್ಟುವ ಹೊತ್ತಿಗೇ ಎದ್ದು ತಮ್ಮ ಕೋಳಿಗಳೊಡನೆ ಹೊರಟಿರುತ್ತಿದ್ದರು. ಹಗಲು ಹೆಚ್ಚಿಕೊಳ್ಳುವ ಚಳಿಗಾಲದಲ್ಲಿ ಮಾತ್ರ ಸಂಜೆಯ ಹೊತ್ತಿನಲ್ಲಿ ಬೆಲ್‌ಷ ಉಣ್ಣೆ ತುಪ್ಪಟ ನೂಲುವ ತನ್ನ ಗಾಲಿಯೊಡನೆ ಕೂರುತ್ತಿದ್ದಳು. ಬೆಲ್ ಇವಳ ಹಿಂಬದಿಯಲ್ಲೇ ಕುಳಿತು ಸಮಾಧಾನದಿಂದ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ.

ಸಾಯಂಕಾಲ ಪ್ರಾರ್ಥನೆಗೆಂದು ಸಿನಗಾಗ್‌ಗೆ ಹೋಗುತ್ತಿದ್ದ ಬೆಲ್ ಯಾವಾಗ ಲಾದರೂ ಕೆಲವು ಸುದ್ದಿಗಳನ್ನು ತಂದು ಹೆಂಡತಿಗೆ ಹೇಳುತ್ತಿದ್ದ: ಜಾರ್‌ನ ವಿರುದ್ಧ ವಾರ್ಸಾದಲ್ಲಿ ಕೆಲವರು ಮುಷ್ಕರ ಹೂಡಿದ್ದಾರೆ. ಡಾ. ಹರ್ಜಾಲ್ ಎನ್ನುವವರು

ಯಹೂದಿ ಗಳು ಮತ್ತೆ ಪ್ಯಾಲೆಸ್ಟೇನ್‌ಗೆ ಹೋಗಿ ನೆಲೆಸುವ ಉಪಾಯ ಕಂಡಿದ್ದಾರೆ... ಇವನ್ನೆಲ್ಲಾ ಕೇಳುವ ಬೆಲ್‌ಷ ತನ್ನ ದುಂಡು ತಲೆಯನ್ನು ಸುಮ್ಮನೆ ಅಲುಗಾಡಿಸುತ್ತಾಳೆ. ಅವಳು ಅರೆಗಿವುಡಿ. ಹೇಳಿದ ಮಾತನ್ನೇ ಬೆಲ್ ಮತ್ತೆಮತ್ತೆ ಹೇಳುತ್ತಿರುತ್ತಾನೆ. ಇವನ್ನೆಲ್ಲಾ ಕೇಳಿದ ಅವಳು ಸ್ವಲ್ಪಹೊತ್ತು ಸುಮ್ಮನಿದ್ದು ಕೊನೆಯಲ್ಲಿ 'ಅಂಥ ದೊಡ್ಡ ದೊಡ್ಡ ಪೇಟೆಗಳಲ್ಲಿ ಇಂಥ ವಿಷಯಗಳೆಲ್ಲಾ ನಡೆಯುತ್ತವೆ' ಅನ್ನುತ್ತಾಳೆ.

ಲೆಂತಿನ್‌ನಲ್ಲಿ ಮಾಮೂಲಿನ ಕೆಲವು ಸಂಗತಿಗಳನ್ನು ಬಿಟ್ಟು ಹೆಚ್ಚಿನದೇನೂ ಸಂಭವಿಸುತ್ತಿರಲಿಲ್ಲ; ಹಸುವೊಂದು ಕರುವನ್ನು ಈಯುತ್ತಿತ್ತು. ಹೊಸದಾಗಿ ಕೂಡಿದ ಹರೆಯದ ಜೋಡಿಯೊಂದಕ್ಕೆ ಔತಣಕೂಟ ನಡೆಯುತ್ತಿತ್ತು. ಇದೇ ಹುಡುಗಿ ಮಗುವೊಂದನ್ನು ಹೆರುತ್ತಿದ್ದಳು. ಆಗ ಮಾತ್ರ ಯಾವ ಸಮಾರಂಭವೂ ನಡೆಯುತ್ತಿರಲಿಲ್ಲ. ಆಗಾಗ ಯಾರಾದರೂ ಮರಣ ಹೊಂದುತ್ತಿದ್ದರು. ಹೆಣವನ್ನು ಜಕ್ರೋಜೈಮ್‌ಗೆ ಒಯ್ಯುತ್ತಿದ್ದರು. ಲೆಂತಿನ್‌ನಲ್ಲಿ ಸ್ಮಶಾನವಿರಲಿಲ್ಲ. ಈ ಊರಿನಲ್ಲಿದ್ದ ಪ್ರಾಯದ ಹುಡುಗರ ಸಂಖ್ಯೆ ತೀರಾ ಕಡಿಮೆ. ಇವರೆಲ್ಲ ಜಕ್ರೋಜೈಮ್, ನೋವಿಗ್ರೋಡ್, ವಾರ್ಸಾ ಇಲ್ಲವೇ ಅಮೆರಿಕೆಯಷ್ಟು ದೂರದ ಸ್ಥಳಗಳಿಗೆ ಹೋಗಿದ್ದಾರೆ. ಸ್ಯಾಮ್ಯುಯಲ್‌ನ ಪತ್ರಗಳಂತೆ ಇವರ ಪತ್ರಗಳನ್ನೂ ಓದಲು ಸಾಧ್ಯವಾಗುವುದಿಲ್ಲ. ಇವರ ಯಿದ್ದಿಶ್‌ನಲ್ಲಿ ಈಗ ಇವರು ನೆಲೆಸಿರುವ ದೇಶಗಳ ಭಾಷಾಪದಗಳೆಲ್ಲಾ ಸೇರಿಕೊಂಡಿರುತ್ತವೆ. ಇವರು ಫೋಟೋಗಳನ್ನೂ ಕಳಿಸುತ್ತಾರೆ. ಈ ಫೋಟೋಗಳಲ್ಲಿ ಗಂಡಸರು ದೊಡ್ಡ ಉದ್ದನೆಯ ಟೋಪಿಗಳನ್ನು ಹಾಕಿಕೊಂಡಿದ್ದರೆ ಹೆಂಗಸರು ಅಂದಚಂದದ ಉಡುಗೆಗಳನ್ನು ತೊಟ್ಟು ಗೊಂಬೆಗಳಂತಿರುತ್ತಾರೆ.

ಬೆಲ್ ಮತ್ತು ಬೆಲ್‌ಷರಿಗೂ ಇಂಥ ಫೋಟೋಗಳು ಬಂದಿದ್ದವು. ಆದರೆ ಇವನ್ನು ಸರಿಯಾಗಿ ನೋಡಲು ಈ ಇಬ್ಬರ ಬಳಿ ಕನ್ನಡಕವಿರಲಿಲ್ಲ. ಆದ್ದರಿಂದ ಇವನ್ನು ಕಣ್ಣಾಡಿಸಿ ನೋಡಿದ್ದರು, ಅಷ್ಟೆ. ಸ್ಯಾಮ್ಯುಯಲ್‌ಗೆ ಮಕ್ಕಳುಮರಿಗಳಿದ್ದು ಅವರಿಗೆಲ್ಲಾ ಹೊಸಗಾಲದ ಹೆಸರುಗಳಿದ್ದವು. ಈ ಮಕ್ಕಳು ಮದುವೆಯಾಗಿ ಅವರಿಗೂ ಮಕ್ಕಳಾಗಿವೆ. ಈ ಎಲ್ಲರ ಹೆಸರುಗಳೂ ತುಂಬ ದೊಡ್ಡತನದವಾಗಿದ್ದು ಬೆಲ್ ಮತ್ತು ಬೆಲ್‌ಷರಿಗೆ ಇವನ್ನು ನೆನಪಿಸಿಕೊಳ್ಳಲು ಸಾಧ್ಯವಾಗುವುದೇ ಇಲ್ಲ. ಹೆಸರುಗಳಲ್ಲೇನು ವ್ಯತ್ಯಾಸವಿದೆ? ಅಮೆರಿಕ ತುಂಬ ದೂರದಲ್ಲಿ ಸಮುದ್ರದ ಆಚೆಯಲ್ಲಿ ಜಗತ್ತಿನ ಕೊನೆ ಅಂಚಿನಲ್ಲಿದೆ. ಲೆಂತಿನ್‌ಗೆ ಬರುವ ತಾಲಮೂದ್ ಪಂಡಿತ ಅಮೆರಿಕದವರು ತಮ್ಮ

ತಲೆಯನ್ನು ಕೆಳಮಾಡಿ, ಕಾಲುಗಳನ್ನು ಮೇಲೆತ್ತಿಕೊಂಡು- ತಲೆಕೆಳಗಾಗಿ ನಡೆಯುತ್ತಾರೆ ಎಂದು ಹೇಳುತ್ತಾರೆ. ಬೆಲ್ ಮತ್ತು ಬೆಲ್‌ಷರಿಗೆ ಇದನ್ನು ಪೂರ್ತಿಯಾಗಿ ಅರ್ಥ ಮಾಡಿಕೊಳ್ಳಲಾಗುವುದಿಲ್ಲ. ಇದ್ಹೇಗೆ ಸಾಧ್ಯ?.... ಆದರೆ ಪಂಡಿತರು ಹೇಳಬೇಕಾದರೆ ಇದು ನಿಜವೇ ಇರಬೇಕು. ಒಂದು ಕ್ಷಣ ಯೋಚಿಸಿದ ಬೆಲ್‌ಷ ಹೇಳುತ್ತಾಳೆ, 'ಯಾವುದಾದರೂ ರೂಢಿ ಮಾಡಿಕೊಂಡ ಹಾಗೇ ಇರುತ್ತಲ್ಲವೆ ?'

ಆಮೇಲೆ ಈ ವಿಷಯವನ್ನು ಇವಳು ಮರೆತೇ ಬಿಡುತ್ತಾಳೆ. ಅತಿಯಾಗಿ ಯೋಚಿಸುವುದು ಬುದ್ಧಿಶಕ್ತಿಯನ್ನೇ ಕಳೆದುಬಿಡುತ್ತದೆ ಅನ್ನುವುದು ದೇವರಿಗೂ ಗೊತ್ತಿದೆ.

ಆವತ್ತು ಶುಕ್ರವಾರ. ಬೆಲ್‌ಷ ಬೆಳಿಗ್ಗೆಯೇ ಸಬ್ಬತ್‌ನ ಬ್ರೆಡ್‌ಗೆ ತಯಾರಿ ನಡೆಸಿ ನೆನೆಸಿದ್ದ ಹಿಟ್ಟನ್ನು ನಾದುತ್ತಾ ನಿಂತಿದ್ದಳು. ಗುಡಿಸಲಿನ ಬಾಗಿಲನ್ನು ತಳ್ಳಿಕೊಂಡು ಶ್ರೀಮಂತನಂತಿದ್ದ ಮನುಷ್ಯನೊಬ್ಬ ಒಳಗೆ ಬಂದ. ತುಂಬ ಎತ್ತರವಾಗಿದ್ದುದರಿಂದ ಬಗ್ಗಿ ಒಳಗೆ ಬಂದಿದ್ದ. ನುಣ್ಣನೆಯ ಹ್ಯಾಟ್ ಹಾಕಿಕೊಂಡಿದ್ದ ಇವನು ಫರ್ ಕೋಟನ್ನು ತೊಟ್ಟಿದ್ದ. ಇವನ ಹಿಂದೆಯೇ ಜಕ್ರೋಜೈಮ್‌ನಲ್ಲಿ ಕುದುರೆಗಾಡಿ ಓಡಿಸುವ ಷಕೀಲನೂ ಬಂದ. ಅವನ ಕೈಯಲ್ಲಿ ಚರ್ಮದ ಎರಡು ಸೂಟ್‌ಕೇಸ್‌ಗಳಿದ್ದವು. ಬೆಲ್‌ಷಳ ಹುಬ್ಬುಗಳು ಆಶ್ಚರ್ಯದಿಂದ ಮೇಲೇರಿದವು.

ಸುತ್ತೆಲ್ಲಾ ಹೊರಳಿನೋಡಿದ ಶ್ರೀಮಂತ ಮನುಷ್ಯ ಗಾಡಿಯವನಿಗೆ 'ಇದೇ ಜಾಗ' ಎಂದು ಯಿದ್ದಿಶ್‌ನಲ್ಲಿ ಹೇಳಿದ. ತನ್ನ ಜೇಬಿನಿಂದ ಬೆಳ್ಳಿ ನಾಣ್ಯವೊಂದನ್ನು ತೆಗೆದು ಗಾಡಿಯವನಿಗೆ ಕೊಟ್ಟ. ಗಾಡಿಯವನು ಕೈ ಕುಲುಕಲು ತನ್ನ ಕೈಯನ್ನು ಮುಂದೆ ಚಾಚಿದ. ಆದರೆ ಶ್ರೀಮಂತ ಮನುಷ್ಯ 'ಆಯ್ತು ಹೋಗು' ಎಂದ.

ಗಾಡಿಯವನು ಬಾಗಿಲು ಮುಚ್ಚಿಕೊಂಡು ಹೋದ ಮೇಲೆ ಶ್ರೀಮಂತ ಮನುಷ್ಯ, 'ಅಮ್ಮ, ನಾನು ನಿನ್ನ ಮಗ ಸ್ಯಾಮ್ಯುಯಲ್-ಸ್ಯಾಮ್' ಎಂದ.

ಈ ಮಾತನ್ನು ಕೇಳಿ ಬೆಲ್‌ಷಳ ಕಾಲುಗಳು ಸಟೆದುಕೊಂಡು, ಹಿಟ್ಟು ಮೆತ್ತಿಕೊಂಡಿದ್ದ ಕೈಗಳು ಕಡ್ಡಿಯಂತಾಗಿ ತಮ್ಮ ಶಕ್ತಿಯನ್ನೇ ಕಳೆದುಕೊಂಡಂತಾದುವು. ಶ್ರೀಮಂತ ಮನುಷ್ಯ ಅವಳನ್ನು ಅಪ್ಪಿಕೊಂಡು ಹಣೆ ಮತ್ತು ಕೆನ್ನೆಗಳಿಗೆ ಮುತ್ತುಗಳನ್ನಿಟ್ಟ. ಬೆಲ್‌ಷ ಕೋಳಿ ಕೆಕ್ಕರಿಸುವಂತೆ 'ನನ್ನ ಮಗ!' ಎಂದು ತೊದಲಿದಳು. ಸೌದೆ ಕೊಟ್ಟಿಗೆ ಯಿಂದ ಕಟ್ಟಿಗೆಗಳನ್ನು ತೆಗೆದುಕೊಂಡು ಬೆಲ್ ಒಳಗೆ ಬಂದ. ಇವನ ಹಿಂದೆ ಮೇಕೆಯೂ

ಒಳ ಬಂದಿತು. ಶ್ರೀಮಂತ ಮನುಷ್ಯನೊಬ್ಬ ತನ್ನ ಹೆಂಡತಿಗೆ ಮುದ್ದಿಡುತ್ತಿರುವುದನ್ನು ಕಂಡು ಕೈಲಿದ್ದ ಕಟ್ಟಿಗೆಗಳು ಕೆಳಗೆ ಬಿದ್ದವು. 'ಏನಿದು? ಯಾರು?!' ಎಂದ.

ಬೆಲ್‌ಷಳನ್ನು ಬಿಟ್ಟು ಬೆನ್‌ನ ಹತ್ತಿರಕ್ಕೆ ಬಂದ ಶ್ರೀಮಂತ ಮನುಷ್ಯ. 'ಅಪ್ಪ!' ಎಂದ.

ಬೆಲ್‌ನಿಗೆ ಒಂದು ಕ್ಷಣ ಏನೂ ಕೇಳಿಸದಂತಾಯಿತು. ಯಿದ್ದಿಶ್‌ನಲ್ಲಿ ಓದಿದ್ದ ಯಾವುದಾದರೂ ವಾಕ್ಯಗಳನ್ನು ಹೇಳಬೇಕು ಅನಿಸಿದರೂ ಯಾವ ಸಾಲುಗಳೂ ನೆನಪಾಗಲಿಲ್ಲ. ಕೊನೆಯಲ್ಲಿ 'ನೀನು ಸ್ಯಾಮ್ಯುಯಲ್ ಹೌದಾ?' ಎಂದ.

'ಹೌದಪ್ಪ ನಾನು ಸ್ಯಾಮ್ಯುಯಲ್.'

'ಒಳ್ಳೇದಪ್ಪ, ಚೆನ್ನಾಗಿ ನೆಮ್ಮದಿಯಿಂದ ಇದೀಯಲ್ಲವೇ?' ಎಂದು ಮಗನ ಕೈಗಳನ್ನು ಹಿಡಿದುಕೊಂಡ. ಈಗಲೂ ಅವನಿಗೆ, ತಾನು ಮೂರ್ಖನಾಗಿಲ್ಲವಲ್ಲವೇ? ಅನಿಸುತ್ತಿತ್ತು. ಸ್ಯಾಮ್ಯುಯಲ್ ಈ ಶ್ರೀಮಂತನಷ್ಟು ದೊಡ್ಡವನಾಗಿರಲಿಲ್ಲ. ಆದರೆ ಸ್ಯಾಮ್ಯುಯಲ್ ಮನೆ ಬಿಟ್ಟು ಹೋದಾಗ ಹದಿನೈದು ವರ್ಷದವನಾಗಿದ್ದ ಎನ್ನುವುದೂ ಬೆಲ್‌ನಿಗೆ ನೆನಪಾಯಿತು. ದೂರದಲ್ಲಿರುವ ಅಮೆರಿಕದಲ್ಲಿ ಇವನು ಬೆಳೆದು ದೊಡ್ಡವನಾಗಿದ್ದಾನೆ ಎಂಬದೂ ತಿಳಿಯಿತು. ಕೊನೆಯಲ್ಲಿ 'ನೀನು ಬರೋದನ್ನ ಮುಂಚೆ ತಿಳಿಸಬಾರದೇ?' ಎಂದು ಕೇಳಿದ.

'ನಾನು ಕಳಿಸಿದ್ದ ಕೇಬಲನ್ನ ತಗೊಳ್ಳಲಿಲ್ಲವೇ ನೀವು?' ಸ್ಯಾಮ್ಯುಯಲ್ ಕೇಳಿದ.

ಕೇಬಲ್ ಎಂದರೆ ಏನೆಂಬುದು ಬೆಲ್‌ಗೆ ತಿಳಿದಿರಲಿಲ್ಲ.

ಬೆಲ್‌ಷ ತನ್ನ ಕೈಗೆ ಅಂಟಿಕೊಂಡಿದ್ದ ಹಿಟ್ಟನ್ನು ತೊಳೆದುಕೊಂಡು ಮಗನನ್ನು ನೇವರಿಸಿದಳು. ಮತ್ತೆ ಅವಳಿಗೆ ಮುತ್ತಿಟ್ಟ ಸ್ಯಾಮ್ಯುಯಲ್ ಕೇಳಿದ, 'ನನ್ನ ಕೇಬಲನ್ನು ನೀನು ತಗೊಂಡೆಯಾ ಅಮ್ಮ?'

'ನಾನು ಇದನ್ನ ನೋಡೋಕೆ ಅಂತಲೇ ಬದುಕಿದ್ದರೆ ಈಗ ಸುಖವಾಗಿ ಸಾಯ್ತೀನಿ' ತನ್ನ ಮಾತಿನ ಬಗ್ಗೆ ಬೆಲ್‌ಷಳಿಗೇ ಆಶ್ಚರ್ಯವಾಗಿತ್ತು. ಬೆಲ್‌ನಿಗೆ ಸಹ ಆಶ್ಚರ್ಯವಾಯಿತು. ಸ್ವಲ್ಪಹೊತ್ತಿಗೆ ಮುಂಚೆ ನೆನಪು ಮಾಡಿಕೊಂಡು ಹೇಳ ಬೇಕೆಂದುಕೊಂಡದ್ದು ಇದೇ ಮಾತುಗಳು. ಆದರೆ ನೆನಪಾಗಿರಲೇ ಇಲ್ಲ. ಒಂದು

ಕ್ಷಣದ ನಂತರ ಹೆಂಡತಿಗೆ ಹೇಳಿದ. 'ಷೇಷ, ಇವತ್ತು ನೀನು ಇನ್ನೊಂದು ಸಬ್ಬತ್ತನ್ನ ಬೇಯಿಸಬೇಕು'.

ಸುಮಾರು ವರ್ಷಗಳಾದ ಮೇಲೆ ಬೆಲ್ ತನ್ನ ಹೆಂಡತಿಯ ಹೆಸರನ್ನಿಡಿದು ಕರೆದಿದ್ದ. ಅವಳ ಜೊತೆ ಮಾತಾಡುವಾಗ 'ಕೇಳಿಲ್ಲಿ' ಅನ್ನುತ್ತಿದ್ದ, ಅಥವಾ 'ಹೇಳಿದೆಯಾ?'ಎಂದು ಮಾತಾಡಿಸುತ್ತಿದ್ದ. ಹೊಸದಾಗಿ ಮದುವೆಯಾದ ಪ್ರಾಯದ ಹುಡುಗರು ಮತ್ತು ದೊಡ್ಡ ಪೇಟೆಗಳಲ್ಲಿರುವವರು ತಮ್ಮ ಹೆಂಡತಿಯರ ಹೆಸರಿಡಿದೇ ಮಾತಾಡಿಸುತ್ತಾರೆ!

ಬೆಲ್‌ಷಳಿಗೆ ಇಷ್ಟುಹೊತ್ತಿನ ನಂತರ ಅಳು ಉಕ್ಕಿಬಂತು. ಅವಳ ಕಣ್ಣುಗಳಿಂದ ಹಳದಿ ಹನಿಗಳು ಉರುಳಿ ಕೆನ್ನೆಯ ಮೇಲೆ ಹರಿದವು. ಅವಳ ಕಣ್ಣೆದುರಿನ ಎಲ್ಲವೂ ಮಸುಕಾಯಿತು. ಸ್ವಲ್ಪ ಹೊತ್ತು ಬಿಟ್ಟು ಹೇಳಿದಳು. 'ಇವತ್ತು ಶುಕ್ರವಾರ -ಸಬ್ಬತ್‌ಗೆ ಎಲ್ಲ ಅಡಿಗೆನೂ ಮಾಡ್ತೀನಿ' ಹೌದು. ಅವಳು ಇನ್ನೂ ಹಿಟ್ಟನ್ನು ನಾದಬೇಕಿತ್ತು. ಮನೆಗೆ ಬಂದಿರುವ ಇಂಥ ಅತಿಥಿಗೆ ದೊಡ್ಡ ಸಬ್ಬತ್ತನ್ನೇ ಮಾಡಬೇಕು. ಆಗ ಚಳಿಗಾಲ ವಾದ್ದರಿಂದ ಎಲ್ಲವನ್ನೂ ಬೇಗ ಬೇಗ ಮಾಡಬೇಕು ಎಂದು ಆತುರಗೊಂಡಳು.

ಆಕೆ ಆತುರದಲ್ಲಿ ಮುಳುಗಿ ಆತಂಕಗೊಂಡದ್ದನ್ನು ಕಂಡ ಸ್ಯಾಮ್ಯುಯಲ್ ಹೇಳಿದ. 'ನಾನೂ ನಿನಗೆ ಸಹಾಯ ಮಾಡ್ತೀನಿ ಅಮ್ಮ.'

ಬೆಲ್‌ಷಳಿಗೆ ನಗಬೇಕೆನ್ನಿಸಿತು. ಆದರೆ ಉಸಿರು ಕಟ್ಟಿದಂತಾಗಿ ಬಿಕ್ಕಳಿಕೆಯೊಂದು ಹೊರಗೆ ಬಂದಿತು. 'ಏನು ಹೇಳ್ತಿದಿಯಾ ನೀನು? ದೇವರ ಮೇಲೆ ಆಣೆ.'

ಸ್ಯಾಮ್ಯುಯಲ್ ತನ್ನ ಶ್ರೀಮಂತ ಉಡಿಗೆಗಳಾದ ಕೋಟು, ಜಾಕೆಟ್, ಟೋಪಿ ಗಳನ್ನು ತೆಗೆದಿರಿಸಿ ತೋಳುಗಳನ್ನು ಮೇಲೆ ಮಡಿಚಿಕೊಳ್ಳುತ್ತಾ ಹೇಳಿದ. 'ಅಮ್ಮ, ನಾನು ನ್ಯೂಯಾರ್ಕ್‌ನಲ್ಲಿ ಸುಮಾರು ವರ್ಷ ಬೇಕರ್‌ನಾಗಿದ್ದೆ.'

ಸ್ಯಾಮ್ಯುಯಲ್ ಹಿಟ್ಟು ನಾದಲು ಕೈಹಾಕಿದ.

'ಏನು! ಏನೇಳ್ತಿದೀಯಾ ನನ್ನ ಮಗನೇ? ನಾನು ನಿನ್ನನ್ನು ಮುದ್ದಾಗಿ ಕಡ್ಡಿಶ್ ಅಂತ ಕೂಗ್ತಿದ್ನಲ್ಲೋ....' ಎಂದ ಬೆಲ್‌ಷ ಜೋರಾಗಿ ಅಳಲಾರಂಭಿಸಿದಳು. ತನ್ನ ಶಕ್ತಿಯನ್ನು ಕಳೆದುಕೊಂಡಳು. ಹಾಸಿಗೆಯಲ್ಲಿ ಕುಸಿದು ಬಿದ್ದಳು.

'ಹೆಂಗಸರು ಯಾವಾಗಲೂ ಹೆಂಗಸರೇ' ಎಂದ ಬೆಲ್ ಇನ್ನಷ್ಟು ಸೌದೆಯನ್ನು ತರಲು ಕೊಟ್ಟಿಗೆಗೆ ಹೋದ. ಮೇಕೆ ಬಂದು ಹತ್ತಿರವೇ ಮಲಗಿಕೊಂಡಿತು. ಆಶ್ಚರ್ಯದಿಂದ ಕಣ್ಣರಳಿಸಿ ದೊಡ್ಡ ಮನುಷ್ಯನಂತಿದ್ದ ಸ್ಯಾಮ್ಯುಯಲ್‌ನ ಎತ್ತರವನ್ನೂ, ಅವನು ತೊಟ್ಟಿದ್ದ ವಿಚಿತ್ರ ಬಟ್ಟೆಗಳನ್ನೂ ಕಣ್ಣಾಡಿಸಿ ನೋಡಿತು.

ಬೆಲ್‌ನ ಮಗ ಅಮೆರಿಕದಿಂದ ಬಂದಿದ್ದಾನೆ ಎಂಬ ಸಂತೋಷದ ಸಮಾಚಾರ ಕೇಳಿ ನೆರೆಹೊರೆಯವರೆಲ್ಲಾ ಬಂದರು. ಸ್ಯಾಮ್ಯುಯಲ್‌ನನ್ನು ನೋಡಿ ಯೋಗಕ್ಷೇಮವನ್ನು ವಿಚಾರಿಸಿ ಶುಭ ಹಾರೈಸಿದರು. ಹೆಂಗಸರು ಬೆಲ್‌ಷಳಿಗೆ ಸಬ್ಬತ್ ಮಾಡಲು ನೆರವಿಗೆ ನಿಂತರು. ಕೆಲವರು ನಕ್ಕರು. ಕೆಲವರು ಅತ್ತರು. ಮದುವೆಗೆ ಕೂಡಿದವರಂತೆ ಜನ ರೂಮಿನೊಳಗೆ ತುಂಬಿಕೊಂಡರು. 'ಅಮೆರಿಕ ಹೇಗಿದೆ?' ಬೆಲ್‌ನ ಮಗನನ್ನು ಕೇಳಿದರು. 'ಅಮೆರಿಕ ತುಂಬ ಚೆನ್ನಾಗಿದೆ' ಸ್ಯಾಮ್ಯುಯಲ್ ಉತ್ತರಿಸಿದ.

'ಅಲ್ಲಿರೋ ಯಹೂದಿಗಳು ಚೆನ್ನಾಗಿ ಬದುಕಿದಾರೆಯೆ?'

'ಅಲ್ಲಿರೋ ಎಲ್ಲರೂ ಪ್ರತಿದಿವಸ ಬ್ರೆಡ್ ತಿನ್ತಾರೆ.'

'ಅಲ್ಲಿರೋ ಯಹೂದಿಗಳು ಮತಾಂತರವಾಗಿದಾರೆಯೇ ?'

'ನಾನು ಯಹೂದಿಯಾಗಿಯೇ ಇದೀನಿ.'

ಮೋಂಬತ್ತಿಗಳನ್ನು ಹಚ್ಚಿದ ಬೆಲ್‌ಷ ಪ್ರಾರ್ಥನೆಗೆ ಕುಳಿತಳು . ತಂದೆ ಮತ್ತು ಮಗ ಬೀದಿಯ ಆಚೆಗಿದ್ದ ಸಿನಗಾಗ್‌ಗೆ ಹೋದರು. ಹೊಸ ಹಿಮ ಸುರಿಯಲು ಪ್ರಾರಂಭಿಸಿತ್ತು. ಮಗ ದೊಡ್ಡ ಹೆಜ್ಜೆಗಳನ್ನಿಡುತ್ತಾ ನಡೆಯುತ್ತಿದ್ದ. 'ನಿಧಾನವಾಗಿ ಹೋಗು.' ಬೆಲ್ ಮಗನನ್ನು ಎಚ್ಚರಿಸಿದ.

ಸಿನಗಾಗ್‌ನಲ್ಲಿ ಎಲ್ಲ ಯಹೂದಿಗಳು, 'ನಾವೆಲ್ಲಾ ಏಳಿಗೆಯಾಗುವಂತೆ ಕೃಪೆದೋರು ದೇವರೇ' ಮತ್ತು 'ಬಾರೋ ನಮ್ಮ ಮದುಮಗನೇ' ಪ್ರಾರ್ಥನೆಗಳನ್ನು ಹಾಡಿದರು. ಹೊರಗಡೆ ಹಿಮ ಸುರಿಯುತ್ತಲೇ ಇತ್ತು. ಪ್ರಾರ್ಥನೆ ಮುಗಿಸಿ ಹೊರಬಂದ ಬೆಲ್ ಮತ್ತು ಸ್ಯಾಮ್ಯುಯಲ್‌ರಿಗೆ ಹಳ್ಳಿಯ ಗುರುತೇ ಸಿಗದಂತಾಗಿತ್ತು. ಎಲ್ಲವೂ ಹಿಮದಲ್ಲಿ ಮುಚ್ಚಿಕೊಂಡಿತ್ತು. ಛಾವಣಿ ಅಂಚಿನ ಗೆರೆಗಳು ಮತ್ತು ಕಿಟಕಿಗಳಲ್ಲಿ ಕಾಣುತ್ತಿದ್ದ

ಮೊಂಬತ್ತಿಗಳು ಮಾತ್ರ ನೋಡಲು ಕಾಣಿಸುತ್ತಿದ್ದವು. ಸ್ಯಾಮ್ಯುಯಲ್ 'ಇಲ್ಲಿ ಏನೂ ಬದಲಾಗಿಯೇ ಇಲ್ಲ'ಎಂದ.

ಬೆಲ್‌ಷ ಮೀನು ಹುರಿದು, ಚಿಕನ್ ಸೂಪ್‌ನೊಂದಿಗೆ ಅನ್ನ, ಮಾಂಸ, ಕ್ಯಾರೆಟ್‌ಗಳನ್ನೆಲ್ಲಾ ಬೇಯಿಸಿದ್ದಳು. ಗ್ಲಾಸ್‌ಗಳಿಗೆ ಹಳೆ ವೈನ್ ಸುರಿದುಕೊಂಡು ಕುಳಿತ ಬೆಲ್ ಭೋಜನಕೂಟದ ವಾಕ್ಯಗಳನ್ನು ಉಚ್ಚರಿಸಿದ. ಒಟ್ಟಿಗೆ ಕುಳಿತ ಮೂವರೂ ಊಟ ಮಾಡಿದರು. ವೈನ್ ಕುಡಿದರು; ಊಟದ ನಡುವಿನ ಮೌನ ಕ್ಷಣಗಳಲ್ಲಿ ಜೀರ್ದುಂಬಿಗಳು ಜೀಗುಟ್ಟುವುದೂ ಕೇಳುತ್ತಿತ್ತು. ಮಗ ಏನೇನೋ ಮಾತಾಡುತ್ತಲೇ ಇದ್ದ. ಆದರೆ ಬೆಲ್ ಮತ್ತು ಬೆಲ್‌ಷರಿಗೆ ಸ್ವಲ್ಪಮಾತ್ರವೇ ಅರ್ಥವಾಗಿತ್ತು. ಅವನ ಯಿಡ್ಡಿಶ್ ಬೇರೆ ರೀತಿಯಲ್ಲಿತ್ತು. ಇದರಲ್ಲಿ ಪರದೇಶದ ಪದಗಳೆಲ್ಲಾ ಸೇರಿಕೊಂಡಿದ್ದವು.

ಊಟದ ಕೊನೆಯ ಭೋಜನಕೂಟದ ಪ್ರಾರ್ಥನೆ ಮುಗಿದ ಮೇಲೆ ಸ್ಯಾಮ್ಯುಯಲ್ ಕೇಳಿದ. 'ಅಪ್ಪ, ನಾನು ಕಳಿಸಿದ್ದ ದುಡ್ಡನ್ನೆಲ್ಲಾ ನೀನು ಏನು ಮಾಡಿದೆ ?

ಬೆಲ್‌ನ ಬಿಳಿಹುಬ್ಬುಗಳು ಮೇಲೇರಿದವು. ' ಇಲ್ಲೇ ಇದೆಯಪ್ಪ' ಎಂದ.

'ನೀನದನ್ನ ಬ್ಯಾಂಕಿನಲ್ಲಿ ಇಡಲಿಲ್ಲವೇ?'

'ಲೆಂತಿನ್‌ನಲ್ಲಿ ಬ್ಯಾಂಕ್ ಇಲ್ಲ ಕಣಪ್ಪ'.

'ಹಾಗಿದ್ದರೆ ಎಲ್ಲಿ ಇಟ್ಟಿದೀಯಾ ?'

ಅನುಮಾನಿಸುತ್ತ ಬೆಲ್ ಅತ್ತಿತ್ತ ನೋಡಿದ. 'ಸಬ್ಬತ್ ದಿವಸ ಯಾರೂ ದುಡ್ಡನ್ನು ಮುಟ್ಟಬಾರದು. ಆದರೂ ತೋರುಸ್ತೀನಿ ಇರು' ಎಂದು, ಕೆಳಗೆ ಬಗ್ಗಿ ಹಾಸಿಗೆಯ ಕೆಳಗೆ ಕೈ ಇಟ್ಟು ತಡಕಿ ತೂಕದ ವಸ್ತುವೊಂದನ್ನು ಎಳೆದುಕೂಂಡ. ಒಂದು ಬೂಟ್ ಹೂರಗೆ ಬಂದಿತು. ಅದರ ಮೇಲೆ ಹುಲ್ಲನ್ನು ಮುಚ್ಚಿತ್ತು. ಬೆಲ್ ಹುಲ್ಲನ್ನು ಅತ್ತಿತ್ತ ಸರಿಸಿದ. ಬೂಟಿನ ತುಂಬ ಬಂಗಾರದ ನಾಣ್ಯಗಳಿದ್ದವು. ನಾಣ್ಯಗಳನ್ನು ನೋಡಿದ ಸ್ಯಾಮ್ಯುಯಲ್ ಬೂಟನ್ನು ಮೇಲೆತ್ತಿಕೊಂಡ.

'ಅಪ್ಪ, ಇದು ಬಂಗಾರದ ನಿಧಿ !'

'ಹೌದಪ್ಪ.'

'ನೀನ್ಯಾಕೆ ಖರ್ಚುಮಾಡಲಿಲ್ಲ ಇದನ್ನ ?'

'ಯಾವುದಕ್ಕಾಗಿ ಖರ್ಚು ಮಾಡಬೇಕಿತ್ತು? ದೇವರು ದೊಡ್ಡವನು, ನಮಗೆ ಬೇಕಿರೋದೆಲ್ಲ ಇದೆ.'

'ಎಲ್ಲಿಗಾದರೂ ಪ್ರವಾಸ ಹೋಗಬಹುದಿತ್ತಲ್ಲವೇ ?'

'ಎಲ್ಲಿಗೆ ಹೋಗಬೇಕಪ್ಪ. ಇದೇ ನಮ್ಮ ಮನೆ .'

ಮಗ ಒಂದರ ಹಿಂದೊಂದು ಪ್ರಶ್ನೆಗಳನ್ನು ಕೇಳಿದ. ಆದರೆ ಬೆಲ್‌ನ ಉತ್ತರಗಳು ಇದೇ ರೀತಿಯಲ್ಲಿದ್ದವು. ಅವರಿಗೆ ಏನೂ ಬೇಕಿರಲಿಲ್ಲ. ಇದ್ದ ಸ್ವಲ್ಪ ಜಮೀನು, ಹಸು, ಮೇಕೆ ಮತ್ತು ಕೋಳಿಗಳು ಅವರ ಅಗತ್ಯಕ್ಕೆ ಬೇಕಿರುವುದನ್ನೆಲ್ಲಾ ಕೊಡುತ್ತಿದ್ದವು. 'ಕಳ್ಳರಿಗೇನಾದರೂ ಇದು ಗೊತ್ತಾದರೆ ನೀವಿಲ್ಲಿ ವಾಸವಾಗಿರೋದೇ ಕಷ್ಟವಾಗುತ್ತಲ್ಲ.' ಸ್ಯಾಮ್ಯುಯಲ್ ಹೇಳಿದ.

'ಇಲ್ಲಿ ಕಳ್ಳರಿಲ್ಲ ಕಣಪ್ಪ.'

'ಈ ಹಣಾನೆಲ್ಲಾ ಏನು ಮಾಡೋದು?'

'ನೀನೇ ತಗೊಳಪ್ಪ.'

ಬೆಲ್ ಮತ್ತು ಬೆಲಷ ನಿಧಾನವಾಗಿ ಮಗನಿಗೂ, ಅವನ ಅಮೆರಿಕನ್ ಯದ್ದಿಶ್‌ಗೂ ಒಗ್ಗಿಕೊಳ್ಳುತ್ತಿದ್ದರು. ಬೆಲ್‌ಷಳಿಗೆ ಮಗನ ಮಾತುಗಳು ಅರ್ಥವಾಗುತ್ತಿದ್ದವು. ಅವಳಿಗೀಗ ಅವನ ದನಿಯ ಗುರುತೂ ಹತ್ತಲಾರಂಬಿಸಿತ್ತು. 'ನಾವು ದೊಡ್ಡ ಸಿನಗಾಗೊಂದನ್ನು ಕಟ್ಟಿಸಿದರೆ?' ಮಗ ಹೇಳಿದ.

'ಇಲ್ಲಿರೋ ಸಿನಗಾಗ್ ದೊಡ್ಡದಾಗೇ ಇದೆ ಕಣಪ್ಪ'ಬೆಲ್ ಉತ್ತರಿಸಿದ.

' ವಯಸ್ಸಾಗಿರೋ ಮುದುಕರಿಗೆ ಒಂದು ಮನೆ ಕಟ್ಟಿಸಿದರೆ?'

'ಇಲ್ಲಿ ಯಾರೂ ಬೀದಿಗಳಲ್ಲಿ ಮಲಗೊಲ್ಲ.'

ಮರುದಿನ ಸಬ್ಬತ್‌ನ ತಂಗಳೂಟ ಮುಗಿಸಿ ಕುಳಿತಿದ್ದಾಗ ಜಕ್ರೋಜೈಮ್‌ನಿಂದ ಬಂದ ಪೋಸ್ಟ್‌ಮ್ಯಾನ್ ಕಾಗದವೊಂದನ್ನ ಕೊಟ್ಟ-ಅದು ಸ್ಯಾಮ್ಯುಯಲ್‌ನೇ ಕಳಿಸಿದ್ದ

ಕೇಬಲ್! ಬೆಲ್ ಮತ್ತು ಬೆಲ್‌ಷರು ಒಂದಿಷ್ಟು ನಿದ್ದೆ ಮಾಡಲು ಉರುಳಿಕೊಂಡು ಸ್ವಲ್ಪಹೊತ್ತಿನಲ್ಲೇ ಗೊರಕೆಯಲ್ಲಿ ಮುಳುಗಿದರು. ಮೇಕೆಯು ಕತ್ತು ಚಾಚಿಕೊಂಡು ಮಲಗಿತು. ಸುತ್ತಾಡಿಬರಲು ಹೊರಟ ಸ್ಯಾಮ್ಯುಯಲ್ ಕೋಟು ತೊಟ್ಟು ಟೋಪಿಯನ್ನಿರಿಸಿ ಕೊಂಡ. ದಾಪುಗಾಲಿಡುತ್ತ ಸಂತೆಮಾಳವನ್ನು ದಾಟಿ ಊರಿನ ಹೊರ ಅಂಚಿನಲ್ಲಿದ್ದ ಹಳೆ ಗುಡಿಸಲಿನ ಬಳಿ ಬಂದು ಅದರ ಸೂರು ಹಿಡಿದುಕೊಂಡು ನಿಂತ. ಸಿಗಾರ್ ಸೇದಬೇಕೆನಿಸಿದರೂ ಸಬ್ಬತ್‌ನ ನೆನಪಾಯಿತು. ಯಾರ ಜೊತೆಯಲ್ಲಾದರೂ ಮಾತಾಡ ಬೇಕು ಅನಿಸುತ್ತಿದ್ದರೂ ಇಡೀ ಲೆಂತಿನ್ ನಿದ್ದೆಯಲ್ಲಿ ಮುಳುಗಿತ್ತು. ಸಿನಗಾಗ್‌ನತ್ತ ನಡೆದು ಹೋದಾಗ ಮುದುಕನೊಬ್ಬ ಪ್ರಾರ್ಥನೆಗಳನ್ನು ಹೇಳುತ್ತಿರುವುದು ಕೇಳಿಸಿತು. ಅವನ ಸಮೀಪಕ್ಕೆ ಹೋಗಿ 'ನೀನು ಪ್ರಾರ್ಥನೆ ಮಾಡ್ತಿದೀಯಾ ?' ಎಂದು ಕೇಳಿದ.

'ವಯಸ್ಸಾದ ಮೇಲೆ ಯಾರಾದರೂ ಇನ್ನೇನು ಮಾಡ್ತಾರೆ ?' .

'ನಿನಗೆ ನೀನು ಬದುಕಿದೀನಿ ಅನ್ನಿಸ್ತಿದೆಯಾ?'

ಮುದುಕನಿಗೆ ಈ ಮಾತು ಪೂರ್ಣವಾಗಿ ಅರ್ಥವಾಗಲಿಲ್ಲ. ನಗುತ್ತಾ ತನ್ನ ಬೊಚ್ಚುಬಾಯನ್ನು ತೆರೆದು ಹೇಳಿದ. 'ದೇವರು ಆರೋಗ್ಯವಾಗಿಟ್ಟರೆ ಯಾರಾದರೂ ಬದುಕಿರ್ತಾರೆ.'

ಸ್ಯಾಮ್ಯುಯಲ್ ಮನೆಗೆ ಮರಳಿದಾಗ ಸಂಜೆಯ ಕತ್ತಲು ಕವಿಯಲಾರಂಭಿಸಿತ್ತು. ಬೆಲ್ ಸಾಯಂಕಾಲದ ಪ್ರಾರ್ಥನೆಗೆ ಸಿನಗಾಗ್‌ಗೆ ಹೋದ. ಸ್ಯಾಮ್ಯುಯಲ್ ತಾಯಿಯೊಡ ನೆಯೇ ಉಳಿದ. ರೂಮಿನಲ್ಲಿ ನೆರಳುಗಳೇ ತುಂಬಿದವು.

ಬೆಲ್‌ಷ ಗಂಭೀರವಾಗಿ ಹಾಡುತ್ತಾ ಕುಳಿತಳು: 'ಅಬ್ರಾಹಂ ದೇವರೇ, ಐಸಾಕ್ -ಜಾಕೋಬರೇ . ಕಾಪಾಡಿ ನಮ್ಮ ಇಸ್ರೇಲ್‌ನ ಜನರನ್ನು ದಾಳಿಗಳಿಂದ : ಬೆಳೆಯಲಿ ಇವರ ಕೀರ್ತಿ. ಉರುಳಿತು ಸಬ್ಬತ್, ನಮಗಾಗಿ ಬರುತಿರೆ ಇನ್ನೊಂದು ಹೊಸವಾರ. ಆರೋಗ್ಯ ಕರುಣಿಸು, ಸೌಭಾಗ್ಯವನು ಕೊಡು: ಎಲ್ಲರಿಗೂ ಒಳ್ಳೆಯ ಫಲನೀಡು.'

'ಅಮ್ಮಾ ಸೌಭಾಗ್ಯಕೊಡು ಅಂತ ಪ್ರಾರ್ಥಿಸಬೇಡ. ನಿನ್ನ ಹತ್ತಿರ ಈಗಾಗಲೇ ಇದೆಯಲ್ಲ!'ಸ್ಯಾಮ್ಯುಯಲ್ ಹೇಳಿದ.

ಬೆಲ್ ಇದನ್ನು ಕೇಳಿಸಿಕೊಳ್ಳಲಿಲ್ಲ, ಕೇಳಿದರೂ ಕೇಳಿಸದಂತಿದ್ದಳು. ಅವಳ

ಮುಖ ನೆರಳು ಬೆಳಕಿನಿಂದ ಮಬ್ಬಾಗುತ್ತಿತ್ತು. ಸ್ಯಾಮ್ಯುಯಲ್ ಮಬ್ಬು ಬೆಳಕಿನಲ್ಲೇ ಕೋಟಿನ ಜೇಬಿಗೆ ಕೈ ಇರಿಸಿ ತನ್ನ ಪಾಸ್‌ಪೋರ್ಟ್, ಚೆಕ್ ಪುಸ್ತಕ, ಸಾಲದ ಪತ್ರಗಳನ್ನೆಲ್ಲಾ ಮುಟ್ಟಿ ನೋಡಿದ. ಇಲ್ಲಿಗೆ ಬರುವುದಕ್ಕೆ ಮುಂಚೆ ಅವನು ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡಿದ್ದ. ತನ್ನ ಅಪ್ಪಅಮ್ಮಂದಿರಿಗೆ ಉಡುಗೊರೆ ನೀಡಲು ಪೆಟ್ಟಿಗೆಯ ತುಂಬ ಏನೇನನ್ನೋ ತಂದಿದ್ದ. ಊರಿನ ನೆರೆಹೊರೆಯ ಎಲ್ಲರಿಗೂ ಇನ್ನೂ ಏನೇನನ್ನೋ ತಂದಿದ್ದ. ಇವನ್ನೆಲ್ಲಾ ಅವನು ಸ್ವಂತ ಖರ್ಚಿನಲ್ಲಿ ತಂದಿರಲಿಲ್ಲ. ನ್ಯೂಯಾರ್ಕ್‌ನಲ್ಲಿರುವ ಲೆಂತಿನ್ ಸೊಸೈಟಿಯವರು ಹಳ್ಳಿಗರಿಗೆ ಅನುಕೂಲತೆಗಳನ್ನು ಒದಗಿಸಲು ಫಂಡ್‌ನಲ್ಲಿ ಇಂಥ ಸೌಲಭ್ಯ ಕಲ್ಪಿಸಿದ್ದರು. ಆದರೆ ನಾಗರೀಕತೆಯಿಂದ ದೂರವಾಗಿ ಹಿಂದುಳಿದಿರುವ ಈ ಹಳ್ಳಿಯವರಿಗೆ ಏನೂ ಬೇಕಾಗಿರಲಿಲ್ಲ. ಮನೆಯ ಪ್ರಾರ್ಥನೆಗಳನ್ನು ಸಿನಗಾಗ್‌ನಲ್ಲೇ ಕೇಳಬಹುದಿತ್ತು. ಹಗಲಿಡೀ ಮೌನವಾಗಿದ್ದ ಜೀರ್ದುಂಬಿಗಳು ಮತ್ತೆ ಜೀಗುಟ್ಟಲು ಆರಂಭಿಸಿದ್ದವು. ಪ್ರಾರ್ಥನೆಗೆ ಕುಳಿತಿದ್ದ ಬೆಲ್‌ಷ ಅತಿ ಪಕ್ಕಕ್ಕೆ ಸರಿದು ಕುಳಿತು ತನ್ನ ಅಜ್ಜಿ ಮುತ್ತಜ್ಜಿಯರಿಂದ ಕೇಳಿದ್ದ ಹಾಡೊಂದನ್ನು ಹಾಡಲಾರಂಭಿಸಿದ್ದಳು.

ಶುದ್ಧ್ಯಾಽದ ಕುರಿಯೇ
ಕರುಣೆಯೊಳಗಿರು ನಿಉಽ
ತೋರಾದೊಳಗೆ ಮತ್ತೆ
ಒಳ್ಳೆಯದಗ್ಯೆಯಿಉಽ
ನೀಡಯ್ಯ ಸಕಲಉವ
ಬೂಟುಗಳ ಬಟ್ಟೆಗಳ
ಮತ್ತೆ ಬ್ರೆಡ್ಡನ್ನು
ಮತ್ತೆ ಮೆಸಯ್ಯಾಽ ಸೂತ್ರುವ.

ಶಿಧಾ ಮತ್ತು ಕುಜೀಬ

ಶಿಧಾ ಮತ್ತು ಸ್ಕೂಲಿಗೆ ಹೋಗುತ್ತಿದ್ದ ಅವಳ ಮಗ ಕುಜೀಬ ಒಂಬತ್ತು ಮಾರುದ್ದ ಆಳದ ನೆಲದಲ್ಲಿ ಎರಡು ಬಂಡೆ ತುದಿಗಳು ಕೂಡಿ ಕೆಳಗೆ ಅಂತರ್ಜಲ ಹರಿಯುತ್ತಿದ್ದ ಜಾಗದಲ್ಲಿ ಕುಳಿತಿದ್ದರು. ಶಿಧಾಳ ಮೈಯನ್ನು ಜೇಡನ ಗೂಡಿನಿಂದ ಮಾಡಿರುವಂತಿತ್ತು. ಅವಳ ಕೂದಲುಗಳು ಅವಳ ಮೊಣಕಾಲನ್ನು ಮುಟ್ಟುತ್ತಿದ್ದವು. ಹೆಜ್ಜೆಗಳು ಕೋಳಿ ಹೆಜ್ಜೆಯಂತಿದ್ದವು. ಒಕ್ಕಣ್ಣಿನ ರೆಪ್ಪೆ ರೆಕ್ಕೆಯಂತೆ ಬಡಿದಾಡುತ್ತಿತ್ತು. ನೋಡಲು ತಾಯಿಯಂತೇ ಕಾಣುತ್ತಿದ್ದ ಕುಜೀಬ ತಾಯಿಯ ರೂಪಕ್ಕಿಂತಲೂ ಹೆಚ್ಚಾಗಿ ಮೇಣದ ಕೊಂಬಿನಂತಿರುವ ಕತ್ತೆಯ ಕಿವಿಗಳಂತೆ ಕಿವಿಗಳನ್ನು ಹೊಂದಿದ್ದ. ಅತಿಯಾದ ಖಾಯಿಲೆಗಳಿಂದ ಬಡಕಲಾಗಿದ್ದ.ಅವನ ತಾಯಿ ತಾಮ್ರದ ಚೊಂಬಿನಿಂದ ಸಗಣಿಯನ್ನು ತೇದು ಮಾಡಿದ್ದ ಔಷಧಿಯನ್ನು ಅರ್ಧ ಗಂಟೆಗೊಂದು ಸಲ ಕೊಡುತ್ತಿದ್ದಳು. ಆಳದ ಕತ್ತಲು. ಹಾರೆಯ ಹೊಡೆತಗಳು.

ಶಿಧಾ ಮಗನ ಪಕ್ಕದಲ್ಲಿ ಉರುಳಿಕೊಂಡಳು. ತನ್ನ ಉದ್ದ ನಾಲಿಗೆಯಿಂದ ಅವನ ಹೊಕ್ಕಳನ್ನು ಕಚ್ಚಿ ಮುದ್ದಿಸಿದಳು. ಜ್ವರದ ತಾಪದಿಂದ ನಿದ್ದೆಯಲ್ಲಿದ್ದ ಕುಜೀಬ ತಟ್ಟನೆ ಎಚ್ಚರಗೊಂಡ.

'ನಂಗೆ ಹೆದ್ರಿಕೆಯಾಗ್ತಿದೆ ಅಮ್ಮ' ಕುಜೀಬ ಹೇಳಿದ.

'ಏನು ಹೆದರಿಕೇನಪ್ಪ?'

ಬೆಳಕಿಂದು, ಮನುಷ್ಯರದು.

ಶಿಧಾ ಥರಗುಟ್ಟಿ ನಡುಗಿದಳು. ಥಪ್ಪನೆ ಉಗಿದು ಅಂಥ ಕೆಟ್ಟ ಶಕ್ತಿಗಳು ತನ್ನ ಮಗನನ್ನು ಸೋಕದಿರಲಿ ಎಂದುಕೊಂಡಳು.

'ಏನು ಮಾತಾಡ್ತಿದೀಯಾ ಮಗಾ? ನಾವು ಬೆಳಕಿಂದ, ಮನುಷ್ಯರಿಂದ ತುಂಬಾ ದೂರದಾಗೆ ಸುರಕ್ಷಿತವಾಗಿದ್ದೀವಿ. ಇಲ್ಲಿ ಈಜಿಪ್ಟಿನಂಥ ಕತ್ಲು, ದೇವರ ದಯ, ಸ್ಮಶಾನದಂಗೆ ಇಲ್ಲಿ ಸದ್ದೇ ಇಲ್ಲ. ದೊಡ್ಡ ದೊಡ್ಡ ಬಂಡೆ ನಮ್ಮನ್ನ ಒಂಬತ್ತಾಳು ನೆಲದೊಳಗೆ ಭದ್ರವಾಗಿ ಇರಿಸಿವೆ.'

'ಆದರೆ ಮನುಷ್ಯರು ಬಂಡೆಗಳನ್ನೂ ಒಡಿತಾರೆ ಅಂತಾರಲ್ಲಮ್ಮ?' ಹುಡುಗ ಕೇಳಿದ.

'ಅಡಗೂಲಜ್ಜಿ ಕಥೆಗಳು!' ಅವನ ತಾಯಿ ಹೇಳಿದಳು. ಮನುಷ್ಯರ ಶಕ್ತಿ ಬರೀ ಮೇಲುಮೇಲಿಂದು. ಮೇಲ್ಗಡೆ ದೇವತೆಗಳಿದಾರೆ. ನೆಲದ ಮೇಲೆ ಎಷ್ಟೋ ಜನ ಹೇನುಗಳಂಗೆ ಹರಿದಾಡ್ತಾರೆ!'

'ಹಂಗಾದರೆ ಮನುಷ್ಯರು ಅಂದರೇನಮ್ಮ?'

'ಅವರೇನು ಗೊತ್ತಾ?- ಸೃಷ್ಟಿ ಮಾಡೋ ಬ್ರಹ್ಮನ ಕಸ, ಕೊಳಿಯೋ ಮಾಂಸ.... ಪಾಪದ ಪಾತ್ರೆ ಎಲ್ಲಿ ತುಂಬುತ್ತೋ ಅಲ್ಲಿ ಕರುಣೆ ಅನ್ನೋದು ನೊರೆಯಾಗಿ ಉಕ್ಕುತ್ತೆ... ಮನುಷ್ಯ ದೇವರು ಮಾಡಿರೋ ತಪ್ಪು ಸೃಷ್ಟಿ.'

'ಅಷ್ಟೊಂದು ಶಕ್ತಿ ಇರೋ ದೇವರು ಅದೆಂಗೆ ತಪ್ಪು ಮಾಡ್ತಾನಮ್ಮ?' ಹುಡುಗ ಕೇಳಿದ.

'ಅದೆಲ್ಲಾ ಗುಟ್ಟು ಮಗಾ!' ಶಿಥಾ ಉತ್ತರಿಸಿದಳು. 'ದೇವರು ಎಲ್ಲಾ ಲೋಕಾನೂ ಸೃಷ್ಟಿಸಿ ಆದ ಮೇಲೆ ನಮ್ಮವ್ವ ಲಿಲಿತ್‌ಳನ್ನು ಅವನು ತುಂಬಾ ಪ್ರೀತಿಸ್ತಾನಲ್ಲ, ಅದಕ್ಕೆ ಭೂಮಿ ಸೃಷ್ಟಿಸಿದ. ಅವನ ಲೆಕ್ಕದಾಗೀಗ ಅವನಿಗೆ ನಿಮಿಷಗಳು ಸರೀತಾ ಇದಾವೆ. ಇಂಥ ನಿಮಿಷದ ಕ್ಷಣದಾಗೇ ಕೆಟ್ಟತನದ ಜೊತೆ ಮಾಂಸ ಹೇಲು, ದುರಾಸೆ, ಪ್ರೀತಿಯನ್ನೋದೆಲ್ಲಾ ಸೇರಿಕೊಂಡಿರೋ ಮನುಷ್ಯರ್ನೂ ಸೃಷ್ಟಿಸಿದಾನೆ.

'ಮನುಷ್ಯ!'- ಶಿಥಾ ಉಗಿದಳು. 'ಅವನ ಚರ್ಮ ಬೆಳ್ಳಗೆ ಐತಿ. ಒಳಗೆ ಮಾತ್ರ ಕೆಂಪು, ತಾನು ಭಾರಿ ಶಕ್ತಿ ಇರೋನು ಅಂಥ ಕೂಗಾಡ್ತಾನೆ. ಆದರೆ ನಿಜವಾಗಿ ನೋಡಿದರೆ ಒಳಗೇ ಥರಗುಟ್ತಿರ್‍ತಾನೆ. ನಿತ್ರಾಣಿ. ಒಂದು ಕಲ್ಲು ಎಸೆದರೆ ಓಡ್ತನೆ, ಚಾಟೀಲಿ ಹೊಡೆದರೆ ರಕ್ತ ಸುರುಸ್ತಾನೆ. ಕಾವಿಗೆ ಕರಗ್ತನೆ. ಶೀತಕ್ಕೆ ಸೆಟೆದುಕೊಳ್ತನೆ. ಅವನ ಎದೇಲಿ ಯಾವಾಗಲೂ ಒಂದು ತಿದಿ ಒತ್ತುತಾ ಇರುತ್ತೆ. ಅವನ್ನೊಳಗೆ ಎಡಗಡೇಲಿ ಒಂದು ಸಣ್ಣ ಗೂಡು ಎಲ್ಲಾ ಹೊತ್ತಿನಗೂ ಬಡಕೊಳ್ತಾ ಇರುತ್ತೆ. ಮರಳೊಳಗೊ, ಕೆಸರಾಗೋ ಸಿಗಾಕಿಕೊಂಡಿದೀನಿ ಅನ್ನೋನಂಗೆ ನೆಗಿತಾ ಹಾರಾಡ್ತನೇ ಇರ್‍ತಾನೆ. ಹಿಂಗೆ ನೆಗದು ಹಾರಾಡ್ತಾನೆ. ಕೊನೆಗೆ ಮೈಯನ್ನು ಬಿಟ್ಟು ಹೋಗ್ತಾನೆ. ಸಾವಿರಾರು ಸಿಕ್ಕಲ್ಲಿ ಸಿಗಾಕಿ ಕೊಳ್ತಾನೆ. ಆದರಿಂದಲೆ ಅವನ ಹತ್ತಿರ ಅಷ್ಟೊಂದು ಹೊಲಸೂ ಸಿಟ್ಟೂ ಇರೋದು'.

'ಹಂಗಿದ್ದರೆ ಮನುಷ್ಯರ ಜೀವನ ಏನು ಮಾಡೋಕಿದೆಯಮ್ಮ?'

'ಕೆಡಕಿಗೆ.' ಶಿಥಾ ಮಗನಿಗೆ ಉತ್ತರಿಸಿದಳು. 'ಬರೀ ಕೆಡಕಿಗೆ. ಆದರೆ ಇಷ್ಟೊಂದು ಅವಸರ ಅವನನ್ನ ಕೊನೇಲಿ ನೆಮ್ಮದೀಲಿ ನಿಲ್ಲಿಸುತ್ತೆ. ಕೆಲವ್ರು ನಮ್ಮ ಜೀವನ ಇಂಥದಲ್ಲ ಅಂತ ವಾದ ಮಾಡ್ತಾರೆ. ಯಾಕೋ ಒಪ್ಪಿಕೊಳ್ಳೊಲ್ಲ. ಜೀವನ ಅನ್ನೋದು ಭೂಮಿ ಮೇಲೆ ಹುಟ್ಟೋದಷ್ಟೇ ಅಂತ ಯೋಚಿಸುತ್ತಾರೆ. ಎಲ್ಲಾ ಮೂರ್ಖರಂಗೆ ತಮ್ಮನ್ನೂ ಕರೆದುಕೊಳ್ತಾರೆ.'

'ನೀನೆ ಊಹಿಸ್ಕೊ! ವಿದ್ಯೆ ಕಲಿತರೆ, ಕಚಪಿಚಿ ಅಂತ ಇಂಕಿನಲ್ಲಿ ಕಾರಿಕೊಳ್ತರೆ. ಇವರ ಬುದ್ದಿವಂತಿಕೆ ಅನ್ನೋದು ಕುತ್ತಿಗೆ ಮೇಲಿನ ನರಗಳನ್ನು ಹೊತ್ತುಕೊಂಡು ಓಡಾಡ್ತರಲ್ಲ ಅಲ್ಲಿಂದ್ಲೇ ಬಂದಿರುತ್ತೆ. ಪ್ರಾಣಿಗಳು ನಡಕೊಳ್ಳೋ ಹಂಗೂ ನಡ ಕೊಳ್ಳೊಲ್ಲ. ಇವರ ಕಾಲುಗಳಲ್ಲಿ ಬಲನೇ ಇರೋಲ್ಲ. ತಮ್ಮೊಳಗೆ ಸೊಕ್ಕು ತುಂಬಿ ಕೊಳ್ಳೋದರಲ್ಲಿ ಮಾತ್ರ ಪ್ರವೀಣರು. ಆ ದೇವರಿಗೆ ತಾಳ್ಮೆ ಅನ್ನೋದು ಇಲ್ಲದಂಗಿದ್ದಿದ್ದರೆ ಈ ಕ್ರೂರಿಗಳ್ನೆಲ್ಲಾ ಯಾವಾಗಲೋ ನಾಶ ಮಾಡಿರತಿದ್ದ.

ತಾಯಿಯ ಮಾತುಗಳನ್ನು ನಂಬುತ್ತಾ ಕೇಳುತ್ತಿದ್ದ ಕುಜೀಬ ನರಳಲಾರಂಭಿಸಿದ.

'ಹೆದರಬೇಡ ಕುಜೀಬ. ಅವರು ಇಲ್ಲಿಗೆ ಬರೊಲ್ಲ.'

'ನನ್ನ ಕನಸಲ್ಲಿ ಕಂಡಿದ್ದರು.' ಕುಜೀಬ ನಡುಗುತ್ತಾ ಬಡಬಡಿಸಿದ.

'ಹಿಂಗೆ ನಡುಗಬೇಡ ಜಾಣ ಮರಿ' ಶಿಥಾ ಮಗನನ್ನು ಸಂತೈಸಿದಳು. 'ಕನಸುಗಳು ಮೇಲಿನ ಲೋಕದಿಂದ ಬರ್ತವೆ. ಅವು ವಿಚಿತ್ರವಾದವು.'

೨

ಸ್ವಲ್ಪಹೊತ್ತು ಗಾಢ ನಿದ್ದೆಯಲ್ಲಿ ಮುಳುಗಿದ್ದ ಕುಜೀಬ ತಟ್ಟನೆ ಚೀರಿ ಎದ್ದ. ತಾಯಿ ಅವನನ್ನು ಹಿಡಿದುಕೊಂಡಳು.

'ಏನಾಯ್ತು ಮಗ?'

'ಹೆದರಿಕೆ.....'

'ಮತ್ತೆ ಹೆದರಿಕೇನಾ?'

'ನನಗೆ ಮನುಷ್ಯರ ಕನಸು ಬಿತ್ತು.'

'ಅವರು ನಿನಗೆ ಹೇಗೆ ಕಂಡರು ಮಗಾ?'

'ತುಂಬಾ ಸಿಟ್ಟಿನಾಗಿದ್ದರು. ನನ್ನ ಕಿವಿ ಕಿವಿಡಾಗೊಂಗೆ ಸದ್ದು ಮಾಡ್ತಾ ಇದ್ದರು. ನನ್ನ ಕಣ್ಣನ್ನ ಕುರುಡು ಮಾಡೋ ಅಂತ ಬೆಳಕಿತ್ತು ಅವರ ಹತ್ರ. ನೀನು ನನ್ನನ್ನ ಏಳಿಸದಂಗಿದ್ದರೆ ನಾನು ಸತ್ತು ಹೋಗತಿದ್ದೆ.'

'ಸಮಾಧಾನ ಮಾಡಿಕೋ ಮಗಾ. ಒಂದು ಹಾಡು ಹೇಳ್ತೀನಿ'

ಶಿಥಾ ಮೆಲ್ಲಗೆ ಗುನುಗುತ್ತಾ ಹಾಡಿದಳು:

ದುಷ್ಟರ ದೂರವಿಡು
ಭೂತಳದ ದೇವತೆಯೇ!
ಸದ್ದನು ಒಡೆದು ಬಿಡು
ಮೌನದ ದೇವತೆಯೇ

ಬೆಳಕಿಂದ, ಮಾತಿಂದ
ನಮ್ಮನು ಕಾಯೆ
ಮೋಸದ ಜನರಿಂದ
ನಮ್ಮನು ಕಾಯೇ

ಒಂದು ಕ್ಷಣ ಎಲ್ಲವೂ ಶಾಂತವಾಯಿತು. ಕುಜೀಬ ತೂಕಡಿಸಲಾರಂಭಿಸಿದ, ಶಿಥಾ ಮಗನನ್ನು ಮೆಲ್ಲಗೆ ತಟ್ಟಿದಳು. ಮತ್ತೆ ರಾಗವಾಗಿ ಹಾಡಿದಳು. ಶಿಥಾಳಿಗೆ ಮನೆಯಲ್ಲಿಲ್ಲದ ತನ್ನ ಗಂಡ ಹರ್ಮಿಜ್‌ನ ನೆನಪಾಗಿ ಅವನ ಯೋಚನೆಯಲ್ಲಿ ಮುಳುಗಿದಳು. ಅವನು ಯಶೀವಾದ ಚಿತ್ರಮ್ ಮತ್ತು ತಚ್ಚಿಮ್‌ನಿಂದ ಸಾವಿರಾರು ಮಾರು ನೆಲದಾಳಕ್ಕೆ, ಭೂಮಿಯ ಮಧ್ಯಕ್ಕೆ ಹತ್ತಿರವಾಗಿ ಹೋದ. ಅವನು ಅಲ್ಲಿ ಮೌನದ ರಹಸ್ಯವನ್ನು ಅರಿಯುತ್ತಿರಬಹುದು. ಏಕೆಂದರೆ ಮೌನ ಅಲ್ಲಿ ಹೆಚ್ಚು ಪ್ರಮಾಣದಲ್ಲಿದೆ. ಶಿಥಾಳಿಗೆ ಈಗ ತಾನಿರುವ ಶಾಂತತೆಗಿಂತಲೂ ಹೆಚ್ಚಿನ ಪ್ರಶಾಂತತೆ ಅಲ್ಲಿರಬಹುದು ಎನ್ನಿಸಿತು. ಮೌನ ಹಣ್ಣುಗಳಿದ್ದಂತೆ, ಕಂದಕದೊಳಗೆ ಕಂದಕವಿದ್ದಂತೆ, ಬೀಜದೊಳಗೆ ಬೀಜವಿದ್ದಂತೆ. ಅದು ಕಟ್ಟಕಡೆಯ ಮೌನ. ಕೊನೆಯಲ್ಲಿರುವ ಅದು

ತುಂಬಾ ಸೂಕ್ಷ್ಮದ್ದು. ತೀರಾ ಸಣ್ಣದು. ಆದರೆ ಅದು ಏನೂ ಅಲ್ಲ. ಆದರೂ ಆ ಶಕ್ತಿಯಿಂದ ಜಗತ್ತುಗಳು ಸೃಷ್ಟಿಯಾಗುತ್ತವೆ. ಕೊನೆಯಲ್ಲಿರುವ ಅದು ಎಲ್ಲ ಸತ್ವಗಳಿಗಿಂತ ಸತ್ವಯುತವಾದದ್ದು. ಎಲ್ಲವೂ ನಿರಂತರವಾದುದೇ. ಚರ್ಮ, ತೊಗಟೆ, ಹೊರರೂಪ, ಇವೆಲ್ಲಾ ಏನೂ ಅಲ್ಲ. ಮೌನದ ಕೊನೆ ಅಂಚಿಗೆ, ಯಾರು ಈ ಕೊನೆಯ ಮೊನಚಿನಂಚಿಗೆ ತಲುಪುತ್ತಾರೋ ಅವರು ಕಾಲ ಮತ್ತು ಜಗತ್ತು, ಸಾವು ಮತ್ತು ವ್ಯಾಮೋಹ ಏನೂ ಅಲ್ಲ ಎಂದು ತಿಳಿದುಕೊಳ್ಳುತ್ತಾರೆ. ಅಲ್ಲಿ ಗಂಡು ಮತ್ತು ಹೆಣ್ಣು ಯಾವಾಗಲೂ ಒಟ್ಟಾಗಿಯೇ ಇರುತ್ತವೆ. ಇಚ್ಛೆ ಮತ್ತು ಕಾರ್ಯ ಒಂದೇ ಆಗಿರುತ್ತದೆ. ಕೊನೆಯ ಈ ಮೌನವೇ ದೇವರು. ಆದರೆ ದೇವರು ತನ್ನನ್ನು ತಾನು ಆಳದಲ್ಲಿ ಏಕೆ ಮರೆಮಾಡಿ ಹುದುಗಿಸಿಕೊಳ್ಳುತ್ತಾನೆ. ತನ್ನನ್ನು ಆಳದಲ್ಲೇ ಇರಿಸಿಕೊಳ್ಳುತ್ತಾನೇಕೆ?... ಅವನ ಸ್ವಭಾವ ತಳವಿಲ್ಲದ ಗವಿಯಿದ್ದಂತೆ. ತನ್ನನ್ನು ಹುಡುಕಾಡುವವರಿಗೆ ಪಾತಾಳದ ಆಳಕ್ಕೆ ಇಳಿಸುತ್ತಾನೆ.

ಕುಜೀಬ ಗಾಢ ನಿದ್ದೆಯಲ್ಲಿ ಮುಲುಗಿದ. ಶಿಫಾ ಕಲ್ಲನ್ನು ತಲೆದಿಂಬಾಗಿಸಿಕೊಂಡು ಒರಗಿದಳು... ಕುಜೀಬ ಹೇಗೆ ದೊಡ್ಡವನಾಗಿ ಬೆಳೆದು ಗಂಡಸಾಗುತ್ತಾನೆ ಎಂದು ಊಹಿಸಿಕೊಂಡಳು. ಅವನು ಮದುವೆಯಾಗಿ ತಂದೆಯಾಗುತ್ತಾನೆ. ಶಿಫಾ ಸೊಸೆ-ಮೊಮ್ಮಕ್ಕಳನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಾಳೆ. ಮೊಮ್ಮಕ್ಕಳು ಅಜ್ಜೀ ಎಂದು ಕೂಗುತ್ತವೆ. ಶಿಫಾ ಅವರ ತಲೆಯೊಳಗಿನ ಹೇನುಗಳನ್ನು ಕುಕ್ಕಿ ತೆಗೆಯುತ್ತಾಳೆ. ಹುಡುಗಿಗೆ ಜಡೆ ಹೆಣೆಯುತ್ತಾಳೆ. ಹುಡುಗನ ಮೂಗು ತೊಳೆಯುತ್ತಾಳೆ. ಅವರನ್ನು ಸ್ಕೂಲಿಗೆ ಕರೆದೊಯ್ಯುತ್ತಾಳೆ. ತಟ್ಟಿ ಮಲಗಿಸುತ್ತಾಳೆ. ಆಮೇಲೆ ಆ ಮಕ್ಕಳೂ ಬೆಳೆದು ದೊಡ್ಡವರಾಗಿ ಮಂಚದ ಪರದೆಯೊಳಗಿಂದ ಮದುವೆಗೆ ಹೋಗುತ್ತಾರೆ. ಮೊಮ್ಮಕ್ಕಳ ಮಕ್ಕಳು ಮತ್ತಷ್ಟು ಚೆನ್ನಾಗಿ ದಷ್ಟಪುಷ್ಟವಾಗಿ ಬೆಳೆಯುತ್ತವೆ.

ಅವಳ ಗಂಡ ಹರ್ಮಿಜ್ ಬೇರೊಂದು ಲೋಕದಲ್ಲಿ ರಬಾಯಿಯಾಗಿದ್ದಾನೆ. ತಾಯಿತಗಳನ್ನು ಕೊಡುತ್ತಿದ್ದಾನೆ. ಮಂತ್ರಗಳನ್ನು ಜಪಿಸುತ್ತಿದ್ದಾನೆ. ಕಾಡುವ ಪಿಶಾಚಿಗಳಿಗೆ ಬೆಟ್ಟದ ಅಧ್ಯಾಯದ ಉಪದೇಶ ನೀಡುತ್ತಿದ್ದಾನೆ. ಇಸ್ರೇಲಿನವರನ್ನು ಕಾಡುವ ಬಲಾಂಗರಿಗೆ ಮಂತ್ರ ಹಾಕುತ್ತಿದ್ದಾನೆ. ಕಪಟವೇಷದ ಉಪದೇಶಕರಿಗೆ ಸರಿಯಾದ ಉಪದೇಶ ನೀಡುತ್ತಿದ್ದಾನೆ. ಪ್ರಲೋಭನೆಗೆ ಒಳಗಾಗಿದ್ದ ಈಡನ್ ತೋಟದ ಅನಾದಿ ಸರ್ಪಕ್ಕೆ ಹೇಳಿದ್ದ ಮಾತುಗಳಿವು. ದುರಾಸೆಗೆ ಬಲಿಯಾಗುವ ಕಿನ್ನರರಿಗೂ ಅವನು ಉಪದೇಶ ನೀಡುತ್ತಿದ್ದಾನೆ. ಬಬೇಲದ ಕಂಬವನ್ನು ನಿರ್ಮಿಸಿ ಅನುಮಾನಪಟ್ಟ ನಾಲಿಗೆ

ಯವರಿಗೆ, ಪ್ರಳಯಕಾಲ ಸಮೀಪಿಸಿದಾಗಲೂ ಮೊಂಡು ಹಿಡಿಯುವ ಮನುಷ್ಯರಿಗೆ, ಜಿರೊಬೆಮ್ ಅಹಲ್, ಜಿಜಬೆಲ್ ಮತ್ತು ವಸ್ತಿಯ ಮೊಂಡರಿಗೂ ಒಳ್ಳೆಯ ಮಾತು ಹೇಳುತ್ತಿದ್ದಾನೆ. ಆಮೇಲೆ ಹರ್ಮಿಜ್ ದೇವತೆಗಳ ರಾಜನಾಗಿ ಬಿಡುತ್ತಾನೆ. ತನ್ನ ಸಿಂಹಾಸನದ ಮೇಲೆ ಕೂರುವ ಮಹಾರಾಣಿಗಾಗಿ ಹುಡುಕಿಸುತ್ತಾನೆ. ಯಾರೂ ಕಂಡು ಕೇಳಿರದಂತೆ ಸಾವಿರಾರು ಮೈಲಿ ದೂರದಲ್ಲಿರುವ ಇವಳಿಗಾಗಿ ಅವನಿಗೆ ಹುಚ್ಚು ಹಿಡಿಯುತ್ತದೆ.

ಶಿಧಾಳ ಹಗಲು ಕನಸು ತಟ್ಟನೆ ಒಡೆಯಿತು. ಅಸಾಧ್ಯ ಚಳಿ.. ಶಿಧಾಳ ಕಾಲು ನಡುಗಿದವು. ಸಾವಿರ ಸುತ್ತಿಗೆಗಳಿಂದ ಹೊಡೆಯುತ್ತಿರುವಂತೆ ಭಾರಿ ಸದ್ದು ಗವಿಯನ್ನು ತುಂಬಿಕೊಳ್ಳಲಾರಂಭಿಸಿತು. ಎಲ್ಲವೂ ನಡುಗತೊಡಗಿತು. ಕುಜೀಬ ಚಟ್ಟನೆ ಚೀರಿ ಎದ್ದ.

'ಅಮ್ಮ... ಅಮ್ಮ....' ಕುಜೀಬ ಕೂಗಿದ. 'ಓಡು... ಓಡಮ್ಮಾ...'

'ಕಾಪಾಡ್ರಿ! ರಾಕ್ಷಸರು! ಕಾಪಾಡ್ರಿ!' ಶಿಧಾ ಅರಚಿದಳು.

ತನ್ನ ತೋಳುಗಳಿಂದ ಕಜೀಬನನ್ನು ತಬ್ಬಿ ಹಿಡಿದ ಶಿಧಾ ಓಡಿ ಹೋಗಲು ಯತ್ನಿಸಿದಳು. ಆದರೆ ಎಲ್ಲಿಗೆ? ಎಲ್ಲಾ ಕಡೆಗಳಿಂದಲೂ ಹೊಡೆತಗಳು, ಬಿರುಕುಗಳು. ಬಂಡೆಗಳು ಆಗಲೆ ಕೆಳಗೆ ಉರುಳಲಾರಂಭಿಸಿದ್ದವು. ಕಲ್ಲಿನ ಚೂರು ಹಾರಿ ಬೀಳುತ್ತಿದ್ದವು. ನೆಲದೊಳಗಿನ ಮನೆ ಮುಟ್ಟಲು ದೈತ್ಯ ಮನುಷ್ಯರು ಆಗಲೆ ಸಣ್ಣ ಕಿಂಡಿ ಕೊರೆಯುತ್ತಿದ್ದರು. ತಾಯಿ ಮಗನನ್ನು ಧೂಳಿನ ಮಳೆ, ಮಿಂಚಿನ ಬೆಳಕು, ಕಲ್ಲಿನ ಬಾಣಗಳು ಸುತ್ತುವರಿಯುತ್ತಿದ್ದವು. ಆನಂತರ ಭಯಂಕರ ಹೊಳಪಿನ ಜಗತ್ತಿನಲ್ಲಿ ಹೆಸರೇ ಇಲ್ಲದ, ಅದನ್ನು ನೋಡಿದರೇ ಕುರುಡರಾಗುವ ಬೆಳಕೊಂದು ಒಳಗೆ ಬಿದ್ದಿತು. ರಾಕ್ಷಸ ಯಂತ್ರ ಬಂಡೆಯನ್ನು ಸೀಳಲಾರಂಭಿಸಿತ್ತು. ಶಿಧಾ ಎದುರಿನ ಬಂಡೆಯತ್ತ ಓಡಿದಳು. ಸಾವಿರಾರು ಕಲ್ಲಿನ ಚೂರು ಉದುರಿ ಬೀಳಲಾರಂಭಿಸಿದವು. ಕಣ್ಣು ಕುಕ್ಕುವ ಮತ್ತೊಂದು ಬೆಳಕು ಬಿದ್ದಿತು. ಮತ್ತೊಂದು ಭೈರಿಗೆ ಭಾರಿ ಶಕ್ತಿಯಿಂದ ಗರಗರನೆ ತಿರುಗುತ್ತಾ ಒಳ್ಳೆಯದು ಮತ್ತು ಕೆಟ್ಟದರ ಆಚೆ ತುದಿಯನ್ನು ಮುಟ್ಟುತ್ತಿರುವಂತೆ ಎಲ್ಲವನ್ನು ಸೀಳಿ ಒಡೆಯುವಂತೆ ಗವಿಯೊಳಗೆ ಇಳಿಯಿತು.

ಭಯಂಕರ ಉಸಿರುಗರೆದ ಕುಜೀಬ ತಟ್ಟನೆ ಮೂರ್ಛೆ ಹೋದ. ಈಗಾಗಲೇ

ಸತ್ತು ಹೋಗಿರುವಂತೆ ಶಿಧಾಳ ತೋಳುಗಳಲ್ಲಿ ಜೋತುಬಿದ್ದ. ಬಿರುಕು ಬಿಟ್ಟ ಕಲ್ಲು ಒಳಗೆ ಬೀಳುತ್ತಿರುವುದನ್ನು ನೋಡಿದ ಶಿಧಾ ಭಯದಿಂದ ತತ್ತರಿಸಿ ನಿಂತಲ್ಲೇ ಕಂಬ ದಂತಾದಳು. ಈವರೆಗೆ ಕೇಳಿರದ, ನೋಡಿರದ ಅಜ್ಜಿ ಮುತ್ತಜ್ಜಿಯರು ಹೇಳುತ್ತಿದ್ದ ಕತೆಗಳಿಗಿಂತಲೂ ಕ್ರೌರ್ಯವಾಗಿದ್ದುದನ್ನು ನೋಡುತ್ತಿದ್ದಳು. ಬಂಡೆ ಸೀಳುವ ಯಂತ್ರದ ಸದ್ದು ನಿಂತು ಮೌನ ನೆಲಸಿತು. ಕಲ್ಲುಗಳು ಉದುರಿ ಬೀಳುವುದೂ ನಿಂತಿತು. ಧೂಳಿನ ಹೊಗೆಯೊಳಗೆ ಮನುಷ್ಯರು ಇಳಿದು ಬಂದರು.. ಎತ್ತರದ ಎರಡು ಕಾಲಿನವರು. ಕೊಳಕಿನ ಗಬ್ಬು ನಾತ. ಟಾರ್ ಬಳಿದುಕೊಂಡಿರುವಂಥ ಕರೀ ಮುಖದಲ್ಲಿ ಬಿಳಿ ಹಲ್ಲಿನವರು. ದುಷ್ಟತನ, ಮತ್ಸರ, ಗರ್ವ ತುಂಬಿಕೊಂಡಿರುವ ಕಣ್ಣುಗಳು. ಅವಾಚ್ಯ ಮಾತುಗಳನ್ನಾಡುತ್ತ ಕೆಟ್ಟದಾಗಿ ನಗುತ್ತಿದ್ದರು. ಕುಣಿಯುತ್ತಿದ್ದರು. ಒಬ್ಬರ ಕಾಲನೊಬ್ಬರು ಹಿಡಿದು ಎತ್ತುತ್ತಿದ್ದರು. ವಿಷದ ಹೆಂಡ ಕುಡಿಯಲಾರಂಭಿಸಿದ್ದರು. ಅದರ ಹೊಲಸು ವಾಸನೆ ಶಿಧಾಳಿಗೆ ವಾಕರಿಕೆ ತರಿಸಿತು. ಕುಜೀಬನನ್ನು ಏಳಿಸಬೇಕೆಂದುಕೊಂಡರೂ ಹೆದರಿದಳು. ಅವನು ಎದ್ದರೆ ಕೂಗಿ ಅಳತೊಡಗುತ್ತಾನೆ. ಅಥವಾ ಇದನ್ನೆಲ್ಲಾ ನೋಡಿ ಸತ್ತೇ ಹೋಗಿಬಿಡುತ್ತಾನೆ. ಶಿಧಾಳಿಗೀಗ ಪ್ರಾರ್ಥಿಸುವುದೊಂದೇ ಉಳಿದಿದ್ದ ದಾರಿ. ಸೈತಾನನನ್ನು, ಅಸ್ಮೋಡಿಯುಸ್‌ನನ್ನು, ಲಿಲಿತ್‌ಳನ್ನು, ಸೃಷ್ಟಿಶಕ್ತಿಯ ಕ್ರಿಯೆಯನ್ನು ನಿಯಂತ್ರಿಸುವ ಎಲ್ಲ ದೇವತೆಗಳನ್ನೂ ಪ್ರಾರ್ಥಿಸಿದಳು. ನಮ್ಮನ್ನು ಕಾಪಾಡಿ. ನನ್ನ ಪುಣ್ಯಕ್ಕಾಗಿ ಅಲ್ಲ. ವಿದ್ವಾಂಸನಾಗಿದ್ದ ನನ್ನ ಗಂಡನ ಪುಣ್ಯಕ್ಕಾಗಿ... ನನ್ನ ಮುಗ್ಧ ಮಗನಿಗಾಗಿ. ವಂಶದ ಹಿರೀಕರು ಕಾಲಾನುಕಾಲದಿಂದ ಮಾಡಿರುವ ಪುಣ್ಯಕ್ಕಾಗಿ.... ಶಿಧಾ ಕಲ್ಲೊಳಗೆ ಕರಗುತ್ತಾ ಪ್ರಾರ್ಥಿಸಿದಳು. ಗೋಳಿಟ್ಟಳು. ಅವಳು ಮರಳಿ ಕಣ್ಣು ತೆರೆದಾಗ ಕೆಟ್ಟ ಆಕಾರಗಳು ಹೊರಗೆ ಹೋಗಿದ್ದವು. ಸದ್ದು ಅಡಗಿತ್ತು. ಗೆಹನ್ನಾದಿಂದ ಬಂದಿರುವ ಬೆಂಕಿಯಂತೆ ತಲೆಯ ಮೇಲೇ ಇಳಿಬಿದ್ದಿದ್ದ ಚೆಂಡಿನಂತೆ ಬೆಳಕಿನ ಲೈಟು, ಗಬ್ಬುನಾತ ಮತ್ತು ಕಸವಷ್ಟೇ ಅಲ್ಲಿ ಉಳಿದುಕೊಂಡಿತ್ತು. ಶಿಧಾ ಮಗನನ್ನು ಏಳಿಸಿದಳು.

'ಕುಜೀ...ಕುಜೀಬ,' 'ಏಳು!'ಶಿಧಾ ಮಗನನ್ನು ಕೂಗಿದಳು. 'ನಾವು ಭಾರಿ ಆಪತ್ತೊಳಗೆ ಸಿಗಾಕೊಂಡಿದೀವಿ. ಏಳು!'

ಕುಜೀಬ ಕಣ್ಣು ತೆರೆದ.

'ಏನಮ್ಮ ಇದು? ಬೆಳಕು!'

ಹುಡುಗ ಹೆದರಿ ಅಳಲಾರಂಭಿಸಿದ. ಶಿಧಾ ಮಗನನ್ನು ಮುದ್ದಿಸುತ್ತಾ ಸಮಾಧಾನ ಮಾಡಿದಳು. ಬಹಳ ಹೊತ್ತು ಇಲ್ಲೇ ಇರುವಂತಿಲ್ಲ. ಅವರು ಹುಡುಕುತ್ತಾರೆ. ಆದರೆ ಎಲ್ಲಿಗೆ ಹೋಗುವುದು? ಹರ್ಮಿಜ್ ಇರುವ ಕೆಳಲೋಕದ ದಾರಿ ತುಂಡರಿಸಿ ಹೋಗಿದೆ. ಶಿಧಾ ಗಂಡನಿಲ್ಲದ ವಿಧವೆ. ಕುಜೀಬ ತಂದೆಯಿಲ್ಲದ ಮಗ. ಹೋಗಲು ಸಾಧ್ಯವಿರುವುದು ಒಂದೇ ಕಡೆಗೆ; ಕೆಳಗೆ ಹೋಗಲು ಸಾಧ್ಯವಿಲ್ಲ; ಮೇಲಕ್ಕೇ ಹೋಗಬೇಕು. ತಾಯಿ ಮಗ ಪ್ರಯಾಸದಿಂದ ಮೇಲೆ ಹತ್ತಲಾರಂಭಿಸಿದರು. ಮೇಲೆ;ಮೇಲೆ ಕೂಡ ಗವಿಗಳಿವೆ, ಅಂತರಗಂಗೆ ಹರಿವ ನೆಲವಿದೆ. ಕೆತ್ತಿರುವ ಬಂಡೆಗಳಿವೆ. ಅಲ್ಲಿಯೂ ಕತ್ತಲು ಕವಿದಿರುವ ಬಂಡೆಗಳ ಸಂದುಗಳಿವೆ. ಅಲ್ಲಿಯೂ ಭಾರಿ ಕಾಡು ಮತ್ತು ಬಂಜರು ಮರುಭೂಮಿಯಿದೆ ಎಂದು ಕೇಳಿದ್ದಳು. ತನ್ನ ದುರಾಸೆಯಲ್ಲಿ 'ಮನುಷ್ಯ' ಈ ಎಲ್ಲವನ್ನೂ ಆವರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಅಲ್ಲಿಯೂ ಭೂತ, ಪ್ರೇತ, ಪಿಶಾಚಿ, ದೆವ್ವಗಳಂಥವು ವಾಸಿಸುತ್ತವೆ. ಅವೆಲ್ಲ ಬಹಿಷ್ಕಾರಕ್ಕೊಳಗಾಗಿವೆ ನಿಜ. ಬೇರೊಂದು ಜಗತ್ತಿನಿಂದ ಗಡಿಪಾರಾಗಿವೆ. ಆದರೆ ಗಡಿಪಾರಾಗುವುದು ಗುಲಾಮತನಕ್ಕಿಂತ ಮಿಗಿಲಾದದ್ದು.

ಶಿಧಾಳಿಗೆ ಕೊನೆಯ ಗೆಲವೂ ಕಪ್ಪು ಮುಸುಕಿಕೊಂಡಿರುತ್ತದೆ ಎಂದು ತಿಳಿಯಿತು. ಆಮೇಲೆ ದೆವ್ವಗಳೂ ತಮ್ಮ ಪ್ರೇತರೂಪದಿಂದ ಹೊರಗೆ ಬರುತ್ತವೆ. ಆದರೆ ಕೊನೆಯಲ್ಲೊಮ್ಮೆ ಜಗತ್ತಿನ ಬೆಳಕು ನಂದಿ ಹೋಗುವ ಕಾಲ ಸನ್ನಿಹಿತವಾಗುತ್ತದೆ. ಎಲ್ಲ ನಕ್ಷತ್ರಗಳೂ ಸಿಡಿದು ಹೋಗುತ್ತವೆ. ಎಲ್ಲಾ ದನಿಗಳೂ ಮೌನವಾಗುತ್ತವೆ. ಎಲ್ಲಾ ಹುಟ್ಟುಗಳೂ ತುಂಡರಿಸಿ ಬೀಳುತ್ತವೆ. ದೇವರು ಮತ್ತು ಸೈತಾನ ಒಂದೇ ಆಗುತ್ತಾರೆ. ಮನುಷ್ಯನ ನೆನಪು ಮತ್ತು ಅವನ ಅಸಹ್ಯಗಳು ಏನೂ ಆಗಿರುವುದಿಲ್ಲ. ಆದರೆ ದೇವರ ಕನಸಿನಲ್ಲಿ ಕೆಟ್ಟ ಕನಸೊಂದು ಸರಿದಿರುತ್ತದೆ. ತನ್ನ ನಿರಂತರದ ರಾತ್ರಿಯಲ್ಲಿ ತನ್ನನ್ನು ಕಂಗೆಡಿಸುತ್ತಿದ್ದುದನ್ನು ಅವನು ಹೊರಗೆ ಹಾಕುತ್ತಾನೆ.

●

ಸಂತಸದ ಒಂದು ದಿನ

ಮೂರು ಕೋಣೆಗಳಲ್ಲಿ ಅಡುಗೆ ಕೋಣೆಯೊಂದನ್ನು ಬಿಟ್ಟು ಉಳಿದವುಗಳಲ್ಲಿ ನೆರಳುಗಳು ಚಿತ್ರ ಬರೆದುಕೊಂಡವು. ಮೆಂದಲ್ ಬೈಲೆರ್ ಸೂರ್ಯನನ್ನು ಇಷ್ಟಪಡುತ್ತಿರಲಿಲ್ಲ. ಇವನಿಗೆ ಆಗಲೇ ವಯಸ್ಸಾಗಿತ್ತು. ತನ್ನ ಹೆಚ್ಚಿನ ಸಮಯವನ್ನು ಕೆಳಗೆ ಮಲಗಿಯೇ ಕಳೆಯುತ್ತಿದ್ದ. ಇವನು ಮಾಡಬಹುದಾಗಿರುವ ಏನನ್ನು ಪಡೆದುಕೊಂಡಿದ್ದ ? ತನ್ನ ಪೆನ್‌ಷೆನ್ನನ್ನು ಆಗಲೇ ಡ್ರಾ ಮಾಡಿಕೊಂಡಿದ್ದ. ಇದಿಷ್ಟೇ ಅಲ್ಲದೆ ಇವನ ಕಾಲುಗಳು ಬೇರೆ ನವೆಯಿಂದ ಕಡಿಯುತ್ತಿದ್ದವು. ರಾತ್ರಿ ನಿದ್ದೆ ಇಲ್ಲದೆ ಹಾಸಿಗೆಯಲ್ಲಿ ಹೊರಳಾಡುತ್ತಿದ್ದ. ಆದರೆ ದಿನವಿಡೀ ತೂಕಡಿಸುತ್ತಿದ್ದ. ಬೇಸಿಗೆಯ ಸೂರ್ಯ ಅವತ್ತು ಮಧ್ಯಾಹ್ನ ತುಂಬ ಪ್ರಖರವಾಗಿದ್ದು ನೆರಳುಗಳು ನುಸುಳಿಕೊಂಡಿದ್ದವು. ಇವನ ಹಣೆಯ ಮೇಲೆ ಒಂದು ನೊಣ ಕುಳಿತಿತ್ತು. ಇದನ್ನು ದೂರಕ್ಕೆ ಓಡಿಸಿದ. ಆದರೆ ಮತ್ತೆ ಇದು ಇವನ ಕೆಂಪು ಮೂಗಿನ ಮೇಲೆ ಹೊರಳಿ ಕುಳಿತಿತು. ಇವನು ಅರೆನಿದ್ದೆಯಲ್ಲಿ ಚಡಪಡಿಸುತ್ತಿದ್ದ. ಗುಮಾಸ್ತನಾಗಿ ಮೂವತ್ತೈದು ವರ್ಷಗಳ ಕಾಲ ಕೆಲಸ ಮಾಡಿದ ಕಂಪನಿಯಿಂದ ಬರುವ ಪೆನ್‌ಷನ್ ಜೀವನಕ್ಕೇ ಸಾಕಾಗುತ್ತಿರಲಿಲ್ಲ. ಇದರ ಜೊತೆಗೆ ಇವನು ಇದ್ದದ್ದು ಬಾಡಿಗೆ ಮನೆಯಲ್ಲಿ. ಇಷ್ಟೇ ಅಲ್ಲದೆ ಮನೆಯಲ್ಲಿ ಮದುವೆಯಾಗದ ಒಬ್ಬ ಹುಡುಗಿಯಿದ್ದಳು. ಸ್ಕೂಲಿನಲ್ಲಿ ಫೆಲಾ ಎಂದು ಕರೆಯುತ್ತಿದ್ದ ಇವನ ಮಗಳು ಫೈಗೆಲೆಳಿಗೆ ಆಗಲೇ ಇಪ್ಪತ್ನಾಲ್ಕು ವರ್ಷಗಳಾಗಿತ್ತು. ಆದರೂ ಈ ಫೆಲಾ ಹದಿನಾರರ ಹುಡುಗಿಯಂತೆ ನಡೆದುಕೊಳ್ಳುತ್ತಿದ್ದಳು. ಮೂರ್ಖ ಪುಸ್ತಕಗಳನ್ನು ಓದುತ್ತಿದ್ದಳು, ಕೆಲಸದ ಕಡೆ ನೋಡುತ್ತಿರಲಿಲ್ಲ. ಮದುವೆ ದಲ್ಲಾಳಿಗಳು ಇವಳಿಗೆ ಒಂದು ಗಂಡನ್ನು ನೋಡಲು ಪ್ರಯತ್ನಿಸಿದ್ದರು, ಆದರೆ ಇವಳು ಒಂದು ಗ್ರೋಷನ್ ಇಲ್ಲದವಳೂ ಕುರೂಪಿಯಂತೆಯೂ ಇದ್ದರೂ ಒಬ್ಬ ಶ್ರೀಮಂತನ ಮಗಳಂತೆ ಹಾಗೂ ಸುಂದರಿಯಂತೆ ವರ್ತಿಸುತ್ತ ಗದ್ದಲ ಮಾಡುತ್ತಿದ್ದಳು. ತನ್ನ ತೂಕಡಿಕೆಯ ನಡುವಿನಲ್ಲಿ ಮೆಂದಲ್ ನೆರೆತ ಗಡ್ಡ ನೇವರಿಸುತ್ತ, ಗಂಟಿಡುತ್ತ ಹೇಳುತ್ತಿದ್ದ. "ಇದೆಲ್ಲ ಯಾತಕ್ಕಾಗಿ ಬಂತು ? ಇವಳು ಯಾಕೆ ಕಾಯ್ತಿದಾಳೆ?'

ಮೆಂದಲ್‌ನ ಹೆಂಡತಿ ಮಲ್ಕಾಹ ಅಡುಗೆ ಕೋಣೆಯಲ್ಲಿ ಆಲೂಗೆಡ್ಡೆಗಳನ್ನು ಸುಲಿಯುತ್ತಿದ್ದಳು. ಒಂದೊಂದನ್ನು ಪಾತ್ರೆಯೊಳಗೆ ಹಾಕಿದಾಗಲೂ ನೀರು ಕುದಿಯು

ತ್ತಿತ್ತು. ಬೆಡ್‌ರೂಮಿನಲ್ಲಿ ಫೆಲಾ ಕಾಗದವೊಂದನ್ನು ಬರೆಯುತ್ತಿದ್ದಳು. ಅವತ್ತು ಬೆಳಿಗ್ಗೆ ಇವಳು ತನಗಾಗಿ ಅಂಚಿನಲ್ಲೆಲ್ಲ ಅಂದದ ಶೃಂಗಾರ ಗೆರೆಗಳನ್ನು ಉಳ್ಳ ಒಂದು ಹಾಳೆ ಕಾಗದವನ್ನೂ, ಒಂದು ಎನ್‌ವಲೆಪ್ ಕವರನ್ನೂ, ಮಸಿ ಉಗುಳದ ಒಳ್ಳೆಯ ಮುಳ್ಳಿನ ಒಂದು ಹೊಸ ಸ್ಟೀಲ್ ಪೆನ್ನನ್ನೂ ತಂದಿದ್ದಳು. ಸುಮಾರು ವಾರಗಳಿಂದ ಹಗಲೂರಾತ್ರಿ ಈ ಪತ್ರದ ಬಗೆಗೆ ಇವಳು ಯೋಚಿಸಿದ್ದಳು. ಪ್ರತಿ ವಾಕ್ಯವನ್ನೂ ಕಂಠಪಾಠವಾಗಿಸಿಕೊಂಡಿದ್ದಳು. ಇದು ಓದಲು ಹೀಗಿತ್ತು :

ಮಹಾಮಾನ್ಯರೂ ನೆಚ್ಚಿನ ಪ್ರಿಯ ಜನರಲ್ ಅವರೂ ಹಾಗೂ ದೈವೀಸ್ಫೂರ್ತ ಕವಿವರ್ಯರೂ ಆದವರೇ,

ನಾನು ಈಗ ಏನನ್ನು ಮಾಡುತ್ತಿರುವೆನೋ ಅದು ಕೆಟ್ಟತನದ್ದು ಅಥವಾ ಕೀಳಾದದ್ದು.

ಆದರೆ ನನಗೆ ನಾನು ಸಹಾಯಗೈದುಕೊಳ್ಳಲಾರೆ. ಒಂದು ಶಕ್ತಿ ನನಗಿಂತ ಬಲವಾಗಿದ್ದು, ನಿಮಗೆ ಬರೆಯುವ ಒತ್ತಡವನ್ನು ತಳ್ಳುತ್ತಿದೆ. ನನಗೆ ನೀವು ಉತ್ತರಿಸಲಾರಿರಿ ಎಂದು ಈಗಾಗಲೇ ತಿಳಿದಿದ್ದೇನೆ. ನನ್ನ ಪತ್ರವನ್ನೂ ನೀವು ಓದುವುದಿಲ್ಲವೇನೋ ಎನಿಸುತ್ತಿದೆ ನನಗೆ. ಮಹಾಮಾನ್ಯರಾದ ತಾವು ಇಂಥ ನೂರಾರು ಅಥವಾ ಸಾವಿರಾರು ಪತ್ರಗಳನ್ನು ಅಳಿದ ಆತ್ಮಗಳಿಂದ ಸ್ವೀಕರಿಸ ಬಹುದು (ಹ ಹ್ಹ!). ನಿಮಗೆ ನಾನು ನಿಜವನ್ನೇ ಹೇಳುತ್ತಿದ್ದೇನೆ, ನಾನೊಬ್ಬಳು ಯಹೂದಿ ಹುಡುಗಿ, ಬಡವಿ ಹಾಗೂ ಸುಂದರಳಾಗಿ ಇಲ್ಲದವಳು (ನನ್ನ ಚಿತ್ರ ಜೊತೆಯಲ್ಲಿ ಇದೆ). ಆದರೆ ನನಗೆ ತಿಳಿಯಲಾಗದ ನನ್ನನ್ನು ಸುಡುತ್ತಿರುವ ಪ್ರೇಮದಿಂದ ನಿಮ್ಮನ್ನು ಪ್ರೀತಿಸುತ್ತಿದ್ದೇನೆ. ಪ್ರೀತಿ- ನೀವು ಇದನ್ನು ಹಾಸ್ಯ ಎಂದು ಕರೆಯಿರಿ - ಈ ದುರಂತದಲ್ಲಿ ನಾನು ಅಕ್ಷರಶಃ ಸುಡುತ್ತಿರುವಂಥವಳು. ನಾನು ಯಾವಾಗಲೂ ನಿಮ್ಮ ಬಗ್ಗೆಯೇ ಯೋಚಿಸುತ್ತೇನೆ ಮತ್ತು ರಾತ್ರಿಯಲ್ಲಿ ನಿಮ್ಮ ಕನಸನ್ನು ಮಾತ್ರ ಕಾಣುತ್ತೇನೆ. ಇದೆಲ್ಲ ಹೇಗೆ ಪ್ರಾರಂಭವಾಯಿತು ಎನ್ನುವುದನ್ನು ಮಾತ್ರ ಹೇಳಲಾರೆ. ಆದರೆ ನಿಮ್ಮ ತಾಳ್ಮೆಯನ್ನು ಒಡೆಯಲೂ ನನಗೆ ಭಯವಾಗುತ್ತಿದೆ. ನಿಮ್ಮ ಎಲ್ಲ ಚಿತ್ರಗಳನ್ನು ನಾನು ಪತ್ರಿಕೆ ಮತ್ತು ಸಂಚಿಕೆಗಳಿಂದ ರಕ್ಷಿಸಿಕೊಂಡಿದ್ದೇನೆ. ನಾನು ಕಳ್ಳತನವನ್ನು ಕೂಡ ಮಾಡಿದ್ದೇನೆ, ಏಕೆಂದರೆ ನಿಮಗಾಗಿ. ನನ್ನ ಪ್ರೀತಿ ಕೆಫೆಗಳಲ್ಲಿ ಮ್ಯಾಗಜಿನ್‌ಗಳ ಪುಟಗಳನ್ನು ಹೊರಗೆ ಹರಿದಿದೆ. ನಿಮ್ಮ ಎಲ್ಲ ಉತ್ತಮ ಕವಿತೆಗಳು ನನ್ನಲ್ಲಿ ಕಂಠಪಾಠ

ವಾಗಿವೆ. ನಿಮ್ಮ ಎಲ್ಲ ಪುಸ್ತಕಗಳನ್ನು ನಾನು ಮತ್ತೆ ಮತ್ತೆ ಓದಿದ್ದೇನೆ, ವಿಶೇಷವಾಗಿ ಯುದ್ಧ ಭೂಮಿಯಲ್ಲಿನ ನಿಮ್ಮ ನಾಯಕತ್ವದವನ್ನು. ನಾನು ನಿಮಗಾಗಿ ಮಾತ್ರ ಜೀವಿಸಿದ್ದೇನೆ : ರೇಡಿಯೋದಲ್ಲಿ ನಿಮ್ಮ ಉಕ್ಕಿನ ಧ್ವನಿಯನ್ನು ಕೇಳುತ್ತಿರುವುದರಿಂದ; ನಿಮ್ಮನ್ನು ಪೆರೇಡ್‌ಗಳಲ್ಲಿ ನೋಡುತ್ತಿರುವುದರಿಂದ.

ಒಂದು ಸಲ ರೈಮಿ ಅನ್‌ಸ್ಕ ಕೆಫೆಯಲ್ಲಿ ನೀವು ನನ್ನನ್ನು ನೋಡಿದಿರಿ. ಆ ನೋಟದಲ್ಲಿ ನೀವು ನನಗೆ ಕೊಟ್ಟ ಸಂತಸ ನನ್ನ ಇಡೀ ಜೀವನವನ್ನೇ ತುಂಬುವಷ್ಟು ಪ್ರಭಾವಯುತವಾಗಿದೆ. ಲೇಖನಿ ಇದನ್ನು ವರ್ಣಿಸಲಾರದು - ಪ್ರತಿಭೆ ಇರುವ ತಮ್ಮಂಥವರಿಗೆ ಮಾತ್ರ ಇದು ತಿಳಿಯಬಲ್ಲದು. ನನ್ನ ಪತ್ರ ಈಗಾಗಲೇ ತುಂಬ ಉದ್ದವಾಯಿತು ಎಂದು ನನಗೆ ಗೊತ್ತು. ಈಗ ನಾನು ವಿಷಯಕ್ಕೆ ಬರುತ್ತೇನೆ. ನೀವು ದೇಶದ ಒಬ್ಬ ಹೀರೋ ಮಾತ್ರವಲ್ಲದೆ ಒಬ್ಬ ದೊಡ್ಡ ಕವಿಯೂ ಆಗಿದ್ದು ನಿಮಗೆ ಮೆಚ್ಚುಗೆ ಆಗುವಂಥ ಉಡುಗೊರೆಗಳನ್ನೂ ಪಡೆಯುವ ಹೃದಯವೊಂದನ್ನು ಉಳ್ಳ ಒಬ್ಬ ಮನುಷ್ಯರು ಎಂದು ನನಗೆ ಗೊತ್ತು. ಆದ್ದರಿಂದ ನಿಮ್ಮ ಅರ್ಧತಾಸಿನಷ್ಟು ಕಾಲವನ್ನು ನನಗೆ ನೀಡಬೇಕೆಂದು ನಿಮ್ಮಲ್ಲಿ ನಮ್ರಳಾಗಿ ಕೇಳಿಕೊಳ್ಳುತ್ತೇನೆ. ನಿಮ್ಮೊಂದಿಗೆ ಕೆಲವು ನಿಮಿಷಗಳನ್ನು ಕಳೆಯುವ ವಿಶೇಷ ಹಕ್ಕನ್ನು ನನಗೆ ನೀಡಿದರೆ ಇದನ್ನು ನನ್ನ ಕೊನೆ ಉಸಿರಿನವರೆಗೆ ನನ್ನ ಮನದಲ್ಲಿ ಉಳಿಯುವ ನನ್ನ ರಹಸ್ಯ ನಿಧಿಯಾಗಿ ಕಾಪಾಡಿಕೊಳ್ಳುತ್ತೇನೆ. ದುರದೃಷ್ಟವೆಂದರೆ, ನನ್ನ ತಂದೆತಾಯಿಗಳು ಟೆಲಿಫೋನ್ ಹೊಂದಿಲ್ಲ. ಆದ್ದರಿಂದ ನಿಮಗೆ ನನ್ನ ವಿಳಾಸವನ್ನು ನೀಡಿದ್ದೇನೆ. ಇತ್ತೀಚಿನ ದಿನಗಳಲ್ಲಿ ನಾನು ಹೆಚ್ಚಾಗಿ ಮನೆಯಲ್ಲೇ ಇರುತ್ತೇನೆ. ಈ ಪತ್ರ ಬರೆದಿರುವ ನಾನು ನನ್ನ ಅದೃಷ್ಟದ ಅವಕಾಶ ಎಷ್ಟು ಚಿಕ್ಕದು, ನಾನು ಎಷ್ಟು ದೊಡ್ಡ ಹೆಡ್ಡಿ, ಮತ್ತು ಎಂಥ ಸ್ವಾರ್ಥಿ ಎಂದೂ ತಿಳಿದಿದ್ದೇನೆ. ನನ್ನ ಆತ್ಮದ ಆಳಿಕೆಗಾರರೂ ಕವಿವರ್ಯರೂ ಹಾಗೂ ನನ್ನ ದೊಡ್ಡ ಹೀರೋ ಆಗಿರುವ ತಮಗೆ ಅಡ್ಯೂ.

ಎಂದೆಂದಿಗೂ ಸಾವಿರದ ಪ್ರೀತಿಯಿಂದ
ಫೆಲಾ ಬ್ಯೆಲೆರ್

ಪಿ.ಸೂ. ನನ್ನ ತಂದೆತಾಯಿಗಳು ಹಳೆಯ
ರೀತಿಯವರು ಮತ್ತು ತಮ್ಮ ಮಗಳ
ಹುಚ್ಚಾಟವನ್ನು ಅರಿಯದಂಥವರು.

ಕೊನೆಯ ಪದವನ್ನು ಬರೆದ ಫೆಲಾ ಒಂದು ನಿಟ್ಟುಸಿರನ್ನು ಹೊರಗೆ ಬಿಟ್ಟಳು. ಬರೆಯುವ ಹೊತ್ತಿನಲ್ಲಿ ಉದ್ದಕ್ಕೂ ಇವಳು ಕಂಪಿಸುತ್ತಿದ್ದಳು. ಹಾಳೆಯನ್ನು ಮಸಿ ಹೀರುವ ಬ್ಲೋಟಿಂಗ್‌ನಿಂದ ಒತ್ತಲು ಹೆದರಿದ್ದಳು. ಹೈಸ್ಕೂಲಿನಲ್ಲಿ ಇವಳ ಬರವಣಿಗೆ ಚೆನ್ನಾಗಿತ್ತು. ಆದರೆ ಆನಂತರದಲ್ಲಿ ಇದು ಕೆಟ್ಟುಹೋಗಿತ್ತು : ಅಕ್ಷರಗಳನ್ನು ಇವಳು ತುಂಬ ದೊಡ್ಡವಾಗಿಸಿದ್ದಳು, ಸಾಲುಗಳು ಸೊಟ್ಟಾಗಿದ್ದವು. ಸ್ಕೂಲಿನಲ್ಲಿ ಇವಳ ವಾಕ್ಯ ರಚನೆ ಮತ್ತು ಸ್ಪೆಲಿಂಗ್‌ಗಳೆಲ್ಲ ಉತ್ತಮವಾಗಿದ್ದವು. ಆದರೆ ಈಗ ಇವಳು ಎಳೆಮಕ್ಕಳಂತೆ ತಪ್ಪು ಮಾಡುತ್ತಿದ್ದಳು. ಇದೆಲ್ಲ ಇವಳ ಭಯದ ಫಲವಾಗಿತ್ತು. ಪದವೀಧರೆಯಾಗಲೇ ಇಲ್ಲ, ಗಣಿತದಲ್ಲಿ ಫೇಲಾಗಿದ್ದಳು. ಮೊದಲು ಇವಳು ಅಫೀಸಿನ ಕೆಲಸವೊಂದಕ್ಕಾಗಿ ಹುಡುಕಾಡಿದ್ದಳು. ಆದರೆ ಇದರಲ್ಲಿ ಯಶಸ್ವಿಯಾಗಲಿಲ್ಲ. ಕೊನೆಯಲ್ಲಿ ಇವಳು ಆಟದ ಆಟಿಕೆಗಳ ಒಂದು ಅಂಗಡಿಯಲ್ಲಿ ಸೇಲ್ಸ್‌ಗರ್ಲ್‌ಳಾಗಿ ಸೇರಿದ್ದಳು. ಆದರೆ ಮೊದಲ ದಿನವೇ ಅಟಿಗೆಗಳಲ್ಲಿ ಭಾರಿ ಬದಲಾವಣೆ ಮಾಡಿ ಅಲ್ಲಿಂದ ತಳ್ಳಲ್ಪಟ್ಟಿದ್ದಳು. ಇವಳ ತಾಯಿ ಇವಳನ್ನು ಯಾವಾಗಲೂ ಜರಿಯುತ್ತಲೇ ಇದ್ದಳು. ಇವಳ ತಂದೆ ಇವಳನ್ನು "ಹುಚ್ಚು ರಾಜಕುಮಾರಿ" ಎಂದು ಕರೆಯುತ್ತಿದ್ದ. ಫೆಲಾ ಕಪ್ಪಾಗಿ ಸಣ್ಣಗಿದ್ದಳು. ಅಗಲದ ಸೊಂಟ, ಡೊಂಕು ಕಾಲುಗಳು, ಕೊಕ್ಕಿನಂಥ ಮೂಗು ಹಾಗೂ ದೊಡ್ಡ ಉಬ್ಬುಗಣ್ಣುಗಳು. ತನ್ನ ಡೈರಿಯಲ್ಲಿ ಇವಳು ತನ್ನನ್ನು ಬಿರಿದು ಒಡೆಯುತ್ತಿರುವ ಹಣ್ಣಿಗೆ ಹೋಲಿಸಿ ಕೊಂಡಿದ್ದಳು. ಇವಳ ಎದೆ ಕೆಳಗೆ ತೂಗಿತ್ತು ; ಕೈಗಳು ಮಾಂಸ ತುಂಬಿಕೊಂಡು ದಪ್ಪಗೆ ಸಡಿಲಾಗಿದ್ದವು. ಬೇರೆ ಹುಡುಗಿಯರು ಇದನ್ನು ಇಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ ಫೆಲಾಳ ಮನೆಯಲ್ಲಿನ ತಿನಿಸುಗಳೆಲ್ಲ ಮಂದವಾದುವು - ಅಲೂಗಡ್ಡೆಗಳು, ಊದು ಗಡ್ಡೆ, ಕಷಾ. ಇದಿಷ್ಟೇ ಅಲ್ಲದೆ ಇವಳು ಚಾಕಲೇಟ್ ಜಗಿಯುವುದರಲ್ಲಿ ಅತಿಯಾಸೆ ಉಳ್ಳವಳು. ಇದಕ್ಕೂ ಹೆಚ್ಚಾಗಿ ಜಂತುಹುಳ ಹತ್ತಿದವಳಂತೆ ಇವಳು ಸದಾಕಾಲ ಹಸಿವಿ ನಲ್ಲೇ ಮುಳುಗಿರುತ್ತಿದ್ದಳು. ರಾತ್ರಿ ಒಂದೊಂದು ಸಲ ಮಲಗಿದ್ದವಳಿಗೆ ಎಚ್ಚರವಾದಾಗ ಇವಳಿಗೆ ತನ್ನ ಮೈ ಹಸಿಹಿಟ್ಟಿನಂತೆ ತೂರಿಕೊಳ್ಳುತ್ತಿರುವ ಭಾಸವಾಗುತ್ತಿತ್ತು. ಇವಳ ಚರ್ಮ ಸುಡುತ್ತಿತ್ತು. ಮೊಲೆಗಳು ಹಾಲಿನಿಂದ ತುಂಬಿರುವಂತೆ ಬಿಗಿದುಕೊಳ್ಳುತ್ತಿದ್ದವು ಹಾಗೂ ಫೆಲಾ ಕನ್ಯೆಯಾಗಿಯೇ ಇದ್ದಳು. ಕೆಲವು ಸಲ ಇವಳು ಇದ್ದಕ್ಕಿದ್ದಂತೆ ಹೆರುತ್ತಿರುವಂತೆ ಭಯಪಡುತ್ತಿದ್ದಳು. ಗಿಡವೊಂದರಲ್ಲಿ ಹೂ ಬಿರಿಯುವ ಮೊದಲು ದ್ರವವಾಗಿ ರಸ ಒಸರಿ ಹರಿವಂತೆ ಇವಳು ದ್ರವವಾಗಿರುವಂತೆ ಭಾಸವಾಗುತ್ತಿತ್ತು. ಇವಳ ಉಸಿರು ಬಿಗಿಯಾಗುತ್ತಿತ್ತು. ಇವಳ ಒಳಗಿನ ಭಾಗಗಳು ಬಿಗಿದುಕೊಳ್ಳುತ್ತಿದ್ದವು

ಹಾಗೂ ನುಲಿಯುತ್ತಿದ್ದವು, ರಾತ್ರಿಯಲ್ಲಿ ಇವಳು ಯಾವಾಗಲೂ ಬಚ್ಚಲಿಗೆ ಹೋಗುತ್ತಿದ್ದಳು. ಹೊತ್ತು ಸರಿದು ಉರುಳಿದಂತೆ ಇವಳು ಭಾರಿ ಬಾಯಾರಿಕೆಯಿಂದ ಬಳಲಿರುತ್ತಿದ್ದಳು. ಇವಳ ತಾಯಿ ಆಗಾಗ ಹೇಳುತ್ತಲೇ ಇರುತ್ತಿದ್ದಳು. "ಈ ಹುಡುಗಿದು ಏನು ಸಂಗತಿ ಇದು ? ಇವಳೊಳಗೆ ಬೆಂಕಿ ಸುಡತ್ತೈತೇನೋ. ದೇವರಿಗೇ ಗೊತ್ತು !"

ಆದಂ ಪಷೋಲ್‌ಸ್ಕಿಯ ಬಗೆಗಿನ ಪ್ರೇಮ ಫೆಲಾಳನ್ನು ಕಂಗೆಡಿಸುತ್ತಿತ್ತು. ತನ್ನ ಸುತ್ತಿನ ಎಲ್ಲವೂ ಇವಳಿಗೆ ಮಂಜಿನಲ್ಲಿ ಇರುವಂತೆ ಕಾಣಿಸುತ್ತಿತ್ತು. ಕೋಣೆಗಳಲ್ಲಿ ನಡೆಯುವಾಗ ಇವಳು ಕುರ್ಚಿಗಳು, ಟೇಬಲ್ ಅಥವಾ ಕಮೋಡ್‌ಗಳನ್ನು ಎಡವದೆ ನಡೆಯುತ್ತಿರಲಿಲ್ಲ. ಇವಳ ತಾಯಿ ಇವಳಿಗೆ ಟೀ ಕೊಟ್ಟರೆ ಬೆರಳಿನಲ್ಲಿ ಸೀಪುತ್ತಿದ್ದಳು. ಸ್ಟವ್ ಮೇಲಿನ ಹಾಲಿನ ದಬರಿ ಸುಡುವವರೆಗೂ ಇದರ ಕಾವನ್ನು ಅರಿಯದಂತೆಯೇ ಇರುತ್ತಿದ್ದಳು. ಫೆಲಾಳ ಉಡುಗೆಗಳಲ್ಲಿ ಇವಳಿಗೆ ಸರಿ ಹೊಂದುವಂಥವೇ ಇರಲಿಲ್ಲ. ಇವಳ ಸೊಂಟಪಟ್ಟಿ ಇವಳ ಚರ್ಮವನ್ನು ಕತ್ತರಿಸುತ್ತಿತ್ತು. ಇವಳ ಷೂಗಳು ನುಲಿದು ಕೊಂಡಿದ್ದವು ಹಾಗೂ ತನ್ನ ಕೂದಲನ್ನು ಇವಳು ಹೇಗೆ ತೊಳೆದುಕೊಳ್ಳುತ್ತಾಳೆ ಮತ್ತು ಬಾಚಿಕೊಳ್ಳುತ್ತಾಳೆ ಎನ್ನುವುದು ತಿಳಿಯದ ಸಂಗತಿಯಾಗಿತ್ತು, ಯಾವಾಗಲೂ ಜಿಗುಟುಗಟ್ಟಿ ಕೆದರಿರುತ್ತಿತ್ತು. ಇವಳ ತಿಂಗಳ ಮುಟ್ಟು ಆಗಲೇ ಅವಧಿಯನ್ನು ಅನಿಯಮಿತವಾಗಿಸಿ ಕೊಂಡಿತ್ತು. ಕೆಲವು ಸಲ ಬೇಗ ಆಗುತ್ತಿತ್ತು, ಕೆಲವು ಸಲ ತಡವಾಗುತ್ತಿತ್ತು. ಇವಳು ಭಯಗೊಳ್ಳುವಂತೆ ರಕ್ತ ಉಕ್ಕಿಕೊಂಡಿರುತ್ತಿತ್ತು. ಈ ಪತ್ರವನ್ನು ಮಸಿ ಹೀರುವ ಕಾಗದದಿಂದ ಒತ್ತದಂತೆ ಹಾಗೂ ತಪ್ಪಿಲ್ಲದಂತೆ ಮಾಡಿದ್ದು ಇವಳ ಪ್ರಯತ್ನವನ್ನು ಮೀರಿದ ಶಕ್ತಿಯಾಗಿತ್ತು. ದೇವರ ದಯೆ, ಇದು ಶುದ್ಧವಾಗಿ ಹೊರಹೊಮ್ಮಿತು ! ಅಲ್ಲಲ್ಲಿ ಒಂದೊಂದು ಪದಗಳನ್ನು ಕೂಡಿಸುವಲ್ಲಿ ಇವಳು ಸಫಲಳಾದಳು.

ಫೆಲಾ ಪತ್ರವನ್ನು ಒಂದು ಸಲ ಪೂರ್ತಿಯಾಗಿ ಓದಿದಳು. ಎರಡನೆ ಸಲ ಓದಿದಳು, ಮೂರನೆ ಸಲ ಓದಿದಳು. ಸಾಕಷ್ಟು ಅನುಮಾನದ ನಂತರ ಕೊನೆಗೂ ಪತ್ರವನ್ನು ಮಡಿಚಿದಳು, ಒಳಗೆ ಇರಿಸಿದಳು. ಎನ್‌ವಲೆಪ್ ಮೇಲೆ ವಿಳಾಸ ಬರೆದಳು. ಸ್ಟಾಂಪ್ ಹಚ್ಚಿದಳು, ಗಮ್ ಹಚ್ಚಿ ಸೀಲ್ ಮಾಡಿದಳು. ಇವಳ ಕೈಗಳು ಬಾಣದಂತೆ ನಿಮಿರಿದವು. ಕಾಲು ಕಂಪಿಸಿದವು. ತನ್ನ ವೇಗದ ಉಸಿರನ್ನು ತಾನೇ ಕೇಳಿದಳು. ನಡುಮನೆಯಲ್ಲಿ ಇವಳ ಅಪ್ಪ ಅರೆನಿದ್ದೆಯಲ್ಲಿ ಮುಳುಗಿದ್ದ. ಫೆಲಾ ತುದಿಗಾಲಿನಲ್ಲಿ ಮೌನವಾಗಿ ದಾಟುತ್ತ ಹೊರಟಳು. ಆದರೆ ಇವಳ ಹಿಂದೆಯೇ ಬಾಗಿಲು ಕೀರ್ರ್

ಟ್ಟಿತು. ಇವಳ ಹಿಮ್ಮಡಿಗಳು ನೆಲವನ್ನು ಝಾಡಿಸಿದವು. ಇವಳ ಅಪ್ಪ ತಕ್ಷಣ ಎದ್ದು ಕುಳಿತ.

"ಅಷ್ಟು ಜೋರಾಗಿ ಯಾಕೆ ಸದ್ದು ಮಾಡ್ತೀಯೇ, ಕಾಡುಪ್ರಾಣಿ?"

"ನನ್ನ ಹೆಡ್ಡತನ ನಿನಗೆ ಗೊತ್ತಿಲ್ಲವೇನಪ್ಪ, ನಾನು ಬೇಕೂಂತ ಮಾಡಲಿಲ್ಲ."

"ಯಾಕೆ ಹೀಗೆ ಸುಮ್ಮನೆ ಸುತ್ತಮುತ್ತ ಸುಳಿದಾಡ್ತೀಯ ? ನಿನ್ನ ವಯಸ್ಸಿನ ಹುಡುಗೇರು ಈಗಾಗಲೇ ಮಕ್ಕಳ ತಾಯಂದಿರಾಗಿದಾರೆ."

ಫೆಲಾಳ ಕಣ್ಣುಗಳಲ್ಲಿ ಕಣ್ಣೀರು ಹರಿದವು. "ಇದು ನನ್ನ ತಪ್ಪಾ ?"

ವಾಂತಿ ಬರುವಂತೆ ಇವಳ ಗಂಟಲಿನಲ್ಲಿ ಬಿಕ್ಕಳಿಕೆಯೊಂದು ಬಿಗಿಯಿತು. ಕಣ್ಣೀರು ಉದುರಿ ಬಿದ್ದು ಒದ್ದೆ ಮಾಡದಂತೆ ಪತ್ರವನ್ನು ಮರೆಯಾಗಿಸಿಕೊಂಡಳು. ಬಚ್ಚಲಿಗೆ ಓಡಿದಳು. ಇಲ್ಲಿ ಇವಳು ಅಳಬಹುದು, ಕೆಮ್ಮಬಹುದು, ತನ್ನನ್ನು ತಾನು ಸಂಭಾಳಿಸಿಕೊಳ್ಳಬಹುದು. ಟಾಯ್‌ಲೆಟ್ ಪೇಪರ್‌ಗೆ ಬದಲಾಗಿ ಅಲ್ಲಿ ಇದ್ದ ನ್ಯೂಸ್ ಪೇಪರ್‌ನಿಂದ ತನ್ನ ಮುಖವನ್ನು ಒರೆಸಿಕೊಂಡಳು. ನೀರನ್ನು ಫ್ಲಷ್ ಮಾಡಿ ಜೋರಾಗಿಯೇ ಹೇಳಿದಳು. "ಸ್ವರ್ಗದಲ್ಲಿ ಇರೋ ತಂದೆಯೇ, ಸತ್ಯವನ್ನ ನೀನೇ ನೋಡು."

೨

ಘಟನೆಗಳು ಚುರುಕಾಗಿ ನಡೆದವು. ಫೆಲಾ ಸೋಮವಾರ ಪತ್ರವನ್ನು ಹಾಕಿದಳು. ಮಂಗಳವಾರ ಕತ್ತಲಿರುವಾಗ ಇವಳು ಒಂದು ಟೆಲಿಗ್ರಾಂ ಪಡೆದಳು. ದೇವರ ದಯೆ, ಮನೆಯಲ್ಲಿ ಬೇರೆ ಯಾರೂ ಇರಲಿಲ್ಲ ! ತಂತಿ ತಂದು ಕೊಟ್ಟ ಹುಡುಗನಿಗೆ ಇವಳು ಹತ್ತು ಗ್ರೋಷನ್ ಕೊಡಬೇಕು ಅಂದುಕೊಂಡಳು. ಆದರೆ ಚಿಲ್ಲರೆ ದೊರೆಯದೆ ಇದಕ್ಕೆ ಬದಲಾಗಿ ಅರ್ಧ ಜ್ಲೋಟಿಯನ್ನು ಕೊಟ್ಟಳು. ಒಂದು ಬೆಂಕಿಕಡ್ಡಿಯನ್ನು ಗೀರಿ ಇದನ್ನು ಓದಿಕೊಂಡಳು : "ನಾಳೆ ನಾಲ್ಕು ಗಂಟೆಗೆ ನನಗಾಗಿ ಮರ್ಶಲ್‌ಕೋವ್‌ಸ್ಕಿ ಸಾಲುಮರಗಳ ವ್ಸಪೋಲ್ನ ಬೀದಿಯಲ್ಲಿ ಕಾಯುವುದು" ಫೆಲಾಳಿಗೆ ತನ್ನನ್ನು ತಾನು ಹಿಡಿದುಕೊಳ್ಳಲಾಗಲಿಲ್ಲ, ಬಚ್ಚಲಿಗೆ ಓಡಿದಳು. ಇಲ್ಲಿ, ಷೆಲ್ಫ್‌ಗೆ ಹೊಂದಿದಂತೆ ಇದ್ದ ಮೋಟು ಮೊಂಬತ್ತಿಯೊಂದನ್ನು ಹಚ್ಚಿ ಟೆಲಿಗ್ರಾಂನ್ನು ಮತ್ತೆ ಮತ್ತೆ ಓದಿದಳು. ಕಿರಿದಾದ ಈ ಅಪಾರ್ಟ್

ಮೆಂಟ್‌ನಲ್ಲಿ ಇದೊಂದೇ ಇವಳಿಗೆ ಇವಳ ಪ್ರತ್ಯೇಕ ಸ್ಥಳವಾಗಿತ್ತು. ಇವಳು ನಗಲಿಚ್ಛಿಸಿದಳು : ಇದೇ ಸಮಯಕ್ಕೆ ವಾಂತಿ ಬರುವಂತಾಯಿತು. ಇವಳು ಇಷ್ಟು ಬೇಗನೆ ಉತ್ತರವನ್ನು ನಿರೀಕ್ಷಿಸಿರಲೇ ಇಲ್ಲ. ಇವಳು ಸಿದ್ಧಳಾಗಿರಲಿಲ್ಲ. ಇವಳಿಗೆ ಉಡುಪುಗಳಿರಲಿಲ್ಲ, ಷೂಗಳಿರಲಿಲ್ಲ. ಇನ್ನೂ ಕೂದಲುಗಳನ್ನು ತೊಳೆದಿರಲಿಲ್ಲ, ಗುಂಗುರಾಗಿಸಿರಲಿಲ್ಲ. "ಇದೊಂದು ಕನಸು, ಒಂದು ಕನಸು". ಇವಳ ತಲೆಯೊಳಗೆ ಧ್ವನಿಯೊಂದು ಕೂಗಿಟ್ಟಿತು. "ನೀನೊಬ್ಬಳು ಹೆಡ್ಡಿ. ಈಗ ಯಾವ ಕ್ಷಣದಲ್ಲಾದರೂ ನೀನು ಎದ್ದುಬಿಡತೀಯ" ಫೆಲಾ ತನ್ನ ಕೆನ್ನೆಗಳನ್ನು ಚಿವುಟಿಕೊಂಡಳು, ತುಟಿಗಳ ಮೇಲೆ ಹೊಡೆದುಕೊಂಡಳು. ಮಧುರವಾದ ವಾಸನೆಯನ್ನು ಸೂಸಿಕೊಳ್ಳುತ್ತ ಕುದುರೆಯಂತೆ ಅತಿಯಾಗಿ ಬೆವರಲು ಆರಂಭಿಸಿದಳು. ಅವರ ಜೊತೇಲಿ ನಾನು ಹೇಗೆ ಹೋಗಲಿ ? ಯೋಚಿಸಿದಳು. ನಾನು ಸ್ವಚ್ಛವಾಗಿಲ್ಲದವಳು. ಓಹ್, ನಾನು ಮೂರ್ಛೆ ಹೋಗತೀನಿ.

ಇವಳು ತಲೆ ಸುತ್ತುವಂತಿರುವುದನ್ನು ತಡೆದುಕೊಂಡಳು. ಕುಡುಕಿಯಂತೆ ಇವಳ ತಲೆ ತೂರಾಡಿತು. ವಾಕರಿಕೆ ಬರಿಸುವ ರಸವೊಂದು ಇವಳ ಬಾಯಿಯಲ್ಲಿ ಹರಿಯಿತು. ಇದನ್ನಿವಳು ಹೊರಗೆ ಉಗಿದು ಅಡುಗೆ ಕೋಣೆಗೆ ಹೋದಳು. ನಲ್ಲಿಯ ಮೇಲೆ ಬಾಗಿದಳು, ಅರೆಗುಡುಕಳಂತೆ ತನ್ನ ಮುಖಕ್ಕೆ ತಣ್ಣನೆಯ ನೀರಿನಿಂದ ಎರಚಿಕೊಂಡು ತನ್ನಲ್ಲಿ ತಾನು ಚೈತನ್ಯ ತುಂಬಿಕೊಂಡಳು. ಷೆಲ್ಫ್ ಮೇಲೆ ಹುಳಿರಸದ ಒಂದು ಸೀಸೆ ಇರುವುದನ್ನು ಕಂಡಳು, ಎತ್ತಿಕೊಂಡು ಒಂದು ಗುಟುಕನ್ನು ಕುಡಿದಳು. "ಅತಿಯಾದ ಸಂತಸದೊಳಗೆ ನನ್ನಲ್ಲಿ ವಿಷ ತುಂಬಬೇಡಿ" ಮೇಲಿನ ಶಕ್ತಿಗಳಿಗೆ ಫೆಲಾ ಪ್ರಾರ್ಥಿಸಿದಳು. ಮಾಮೂಲಿನಂತೆ ಇವಳ ತಂದೆತಾಯಿಗಳು ಇಲ್ಲಿಯೇ ಇರಬೇಕಿತ್ತು. ಆದರೆ ಇಂದು ಅವರು ಕಾಯಿಲೆ ಬಿದ್ದಿರುವ ತಮ್ಮ ಒಬ್ಬ ಸ್ನೇಹಿತರನ್ನು ನೋಡಲು ಹೋಗಿದ್ದರು. ಮೊದಲು ಇವಳು ಏನನ್ನು ಮಾಡಬೇಕಿದೆ ? ಏನನ್ನು ಉಡಬೇಕಿವಳು ? ಇವಳ ಎಲ್ಲ ಉಡುಗೆಗಳೂ ಹರಿದಿವೆ, ಕರೆಗಟ್ಟಿವೆ, ಬಣ್ಣ ಕಳೆದುಕೊಂಡಿವೆ. ತುಂಬ ಬಿಗಿಯಾಗುತ್ತಿವೆ ಮತ್ತು ಹಳೆ ಸ್ಟೈಲಿನಲ್ಲಿವೆ. ಇವಳ ಕುಪ್ಪಸದಲ್ಲಿನ ಮೀನು ಮೂಳೆ ಉದುರಿಹೋಗಿವೆ. "ನಾನು ಅವರ ಜೊತೆ ಹೋಗೋದಿಲ್ಲ, ನಾನು ಹೋಗಲಾರೆ. ನನಗೆ ನಾನು ಅಪಮಾನಗೈದುಕೊಳ್ಳಲಾರೆ" ಫೆಲಾ ಜೋರಾಗಿ ಹೇಳಿದಳು. ಯಾರಾದರೂ ಇವಳಿಗೆ ನೆರವು ನೀಡಬೇಕಿದೆ ಅನ್ನಿಸಿತ್ತು, ಆದರೆ ಯಾರು ? ಇವಳು ಹಿಂದೊಮ್ಮೆ ಗೆಳತಿಯರಾದ ಹುಡುಗಿಯರನ್ನು ಪಡೆದಿದ್ದಳು, ಆದರೆ ಅವರೆಲ್ಲ ಈಗ ಯೂನಿವರ್ಸಿಟಿ

ಯಲ್ಲಿ ವಿದ್ಯಾರ್ಥಿಗಳಾಗಿದ್ದಾರೆ ಅಥವಾ ಗಂಡಂದಿರನ್ನು ಪಡೆದಿದ್ದಾರೆ. ಫೈನಲ್ ಪರೀಕ್ಷೆಗಳಲ್ಲಿ ಫೈಲ್ ಆದನಂತರ ಇವಳು ತನ್ನ ಗೆಳತಿಯರನ್ನು ಕಳೆದುಕೊಂಡಿದ್ದಳು. ಕೆಲವು ಹುಡುಗಿಯರು ಹತ್ತಿರದಲ್ಲಿಯೇ ತಮ್ಮ ಚಿಕ್ಕಪ್ಪ-ದೊಡ್ಡಪ್ಪಂದಿರ ಸಂಬಂಧಿಗಳನ್ನು ಹೊಂದಿದ್ದರು. ಆದರೆ ಫೆಲಾಳ ತಂದೆತಾಯಿಗಳು ತುಂಬ ಹಿಂದೆಯೇ ಹಳ್ಳಿಯನ್ನು ತೊರೆದಿದ್ದರು. "ನಿನ್ನ ತಲೇನ ಸಡಿಲ ಬಿಡಬೇಡ" ಫೆಲಾ ತನ್ನಲ್ಲಿಯೇ ಎಚ್ಚರ ಹೇಳಿಕೊಂಡಳು. "ಬಿಟ್ಟರೆ ನಿನ್ನನ್ನು ನೀನು ತುಂಡುಗಳಾಗಿ ಮಾಡಿಕೊಳ್ತೀಯ."

ಇವಳು ಒಂದು ಉಡುಗೆಯನ್ನು ಕೊಳ್ಳಬೇಕಿತ್ತು. ಜಬ್ಲಕೋವ್‌ಸ್ಕಿ ಬ್ರದರ್ಸ್‌ನಲ್ಲಿ ಯಾರು ಬೇಕಾದರೂ ರೆಡಿಮೇಡ್ ಉಡುಗೆಗಳನ್ನು ಪಡೆಯಬಹುದು. ಆದರೆ ಇವಳು ಹಣವನ್ನು ಎಲ್ಲಿಂದ ತರುತ್ತಾಳೆ ? ತನ್ನ ಶರೀರಕ್ಕೆ ಸರಿಹೊಂದುವಂಥ ಉಡುಗೆಯನ್ನು ಇವಳು ಹುಡುಕಿಕೊಳ್ಳಲು ಸಾಧ್ಯವಾದೀತೇ ? ಹಾಗೂ ತನ್ನ ಪೆಟ್ಟಿಕೋಟ್ ಮತ್ತು ಬ್ರೇಸರಿಗಳು ಹರಿದಿರುವಾಗ ಸೇಲ್ಸ್‌ಮಹಿಳೆಯರ ಎದುರಿಗೆ ಇವಳು ತನ್ನ ಉಡುಪನ್ನು ಅಲ್ಲಿ ಹೇಗೆ ಕಳಚುತ್ತಾಳೆ ? ಅವರು ಇವಳಿಗೆ ಉಗಿಯುತ್ತಾರೆ. "ಓಹ್, ಅರೆಹುಚ್ಚಿ ತಲೆಯೊಳಗೂ ಕನಸುಗಳು !" ಫೆಲಾ ಗುನುಗಿದಳು. "ಇದು ಸಾಧ್ಯವಿಲ್ಲ. ನಾನು ಸತ್ತು ಹೋದೆ - ಸತ್ತು ಹೋದೆ !" ಇವಳ ಹೊಟ್ಟೆ ಪಿಪಾಯಿಯಂತೆ ದೊಡ್ಡದಾಗಿ ಊದಲಾರಂಭಿಸಿತು, ಇವಳ ಕೀಲಸಂದುಗಳಲ್ಲಿ ಥಟ್ಟನೆ ಬದಲಾವಣೆ ಗಳಾಗುತ್ತಿರುವ ಸದ್ದು ಇವಳಿಗೇ ಕೇಳಿಸುತ್ತಿತ್ತು ; ಇವಳು ಏದುಸಿರಿಟ್ಟಳು. "ಸ್ವರ್ಗದಲ್ಲಿರೋ ದೈವವೇ, ನನಗೆ ನೆರವಾಗು" ಫೆಲಾ ಪ್ರಾರ್ಥಿಸಿದಳು. "ನೀನು ಒಂದು ಪವಾಡ ತೋರಿಸಿದೀಯ. ಇನ್ನೊಂದನ್ನ ತೋರಿಸು !" ದೇವರು ಉತ್ತರ ನೀಡಿದರೆ ಕೇಳುವ ನಿರೀಕ್ಷೆಯಲ್ಲಿ ಇವಳು ಮೌನಿಯಾದಳು. ಥಟ್ಟನೆ ಇವಳಿಗೆ ಬಚ್ಚಲಿನಲ್ಲಿ ಹಚ್ಚಿ ಇರಿಸಿದ್ದ ಮೊಂಬತ್ತಿಯ ನೆನಪಾಯಿತು. ಬೆಂಕಿಯ ಶಕ್ತಿ ಆರಂಭವಾಗಿಬಿಡುತ್ತದೆ. ಅದನ್ನು ಹೊರಗಿಡಲು ಓಡಿದಳು. ಕತ್ತಲಿನಲ್ಲಿಯೇ ಬೆಡ್‌ರೂಮಿನೆಡೆಗೆ ಹೊರಳಿದಳು. ಕುರ್ಚಿಯೊಂದನ್ನು ಎಡವಿದಳು. ಮೊಳಕಾಲು ಉರಿಯಲು ಆರಂಭಿಸಿತು. ತನ್ನ ಶರೀರವನ್ನು ಹಾಸಿಗೆಯ ಮೇಲೆ ಉರುಳಿಸಿದಳು. ಇಂಥ ಶಕ್ತಿಯೊಂದು ತನ್ನನ್ನು ಕೆಳ ಸೆಳೆದು ಎಳೆವಂತೆ ಚಾಪೆಯನ್ನು ಆಧರಿಸಿ ಹಿಡಿದಿದೆ ಎಂಬಂತೆ ನಿಶ್ಚಲಳಾದಳು. ಫಕ್ಕನೆ ನೆಗೆದಳು. ಟೆಲಿಗ್ರಾಂ ಎಲ್ಲಿದೆ ? ಇದು ಇನ್ನೂ ತನ್ನ ಮುಷ್ಟಿಯ ಬಿಗಿಯಲ್ಲಿಯೇ ಇರುವುದನ್ನು ಕಂಡಳು.

ಮಲಗಿದ್ದ ಫೆಲಾ ಇಲ್ಲಿಯೇ ಒಂದು ಪ್ಲಾನನ್ನು ರೂಪಿಸಿದಳು. ಇವಳು ಖಂಡಿತ

ವಾಗಿಯೂ ಒಂದು ತಪ್ಪುಗ್ಗೆಯುವ ಹೊಂದಾಣಿಕೆ ಮಾಡಿಕೊಂಡಳು, ರೋಷ್‌ಹಷ್ನಾಹ್ ಹಾಗೂ ಯೋಮ್‌ಕಿಪ್ಪರ್‌ಗಳಲ್ಲಿ ತನ್ನ ತಾಯಿ ಧರಿಸುವ ಬಂಗಾರದ ಸರವನ್ನು ಕದಿಯ ಬೇಕು. ಫೆಲಾ ಇದನ್ನು ಗಿರವಿಗೆ ಇಟ್ಟಿರುವುದನ್ನು ಅವಳು ಹುಡುಕಲಾರಳು. ಆಮೇಲೆ ಸ್ವಲ್ಪಕಾಲದ ನಂತರ ಇದನ್ನು ಹೊರಳಿ ಬಿಡಿಸಿಕೊಳ್ಳಬಹುದು. ಫೆಲಾ ಮೇಲೆ ಎದ್ದಳು, ಬೆಂಕಿಪೊಟ್ಟಣಕ್ಕಾಗಿ ತಡಕಿದಳು. ಗ್ಯಾಸ್ ಲ್ಯಾಂಪನ್ನು ಹಚ್ಚಿದಳು. ಸಿಂಹದ ತಲೆಗಳ ಬುಗುಟನ್ನುಳ್ಳ, ಮೇಲಿನ ಅಂಚಿನಲ್ಲಿ ಕಮಾನಾಗಿ ಬಾಗಿದ್ದ ದೊಡ್ಡ ಫರ್ನಿಚರ್‌ನ ಬಟ್ಟೆ ಗಳ ಡ್ರಾಯರನ್ನು ಎಳೆದಳು. ಕೆಳಗಡೆಯಲ್ಲಿ ತನ್ನ ತಾಯಿ ಒಡವೆಗಳನ್ನು ಇಡುತ್ತಿದ್ದ ಮರದ ಪೆಟ್ಟಿಗೆಯನ್ನು ಹೊರಗೆ ತೆಗೆದಳು. ಅಜ್ಜಿ ಯೆತ್ತಾಳಿಂದ ಪ್ರಾಪ್ತವಾಗಿದ್ದ ಬಂಗಾ ರದ ಸರ ಮೇಲುಗಡೆಯಲ್ಲಿಯೇ ಹಿಡಿತದಿಂದ ಜಾರಿ ಬೀಳುವಂತೆ ಇತ್ತು. ಇದನ್ನು ಮೇಲೆ ಎತ್ತಿದ ಫೆಲಾ ಆಶ್ಚರ್ಯಚಕಿತಳಾದಳು. ಇನ್ನೂರು ಜ್ಲೋಟೆಗಳಿಗಿಂತ ಒಂದು ಗ್ರೋಷನ್ನನ್ನೂ ನಾನು ಹೆಚ್ಚಾಗಿ ತೆಗೆದುಕೊಳ್ಳುವುದಿಲ್ಲ ಎಂದು ನಿರ್ಧರಿಸಿಕೊಂಡಳು.

ರಾತ್ರಿ ಒಂದು ನೀಳ ದುಃಸ್ವಪ್ನವಾಗಿತ್ತು. ಫೆಲಾ ಉದ್ವಿಗ್ನತೆಯಲ್ಲಿಯೇ ಮಲಗಿ ದ್ದಳು. ಎಚ್ಚರಗೊಂಡು ಏಳಲು ಯತ್ನಿಸುತ್ತಿದ್ದಳು. ಹೊರಳಿ ಮಲಗಲು ಮುದುಡಿ ಕೊಳ್ಳುತ್ತಿದ್ದಳು. ಒಂದು ನಿಮಿಷದಲ್ಲಿ ಬಿಸಿಯಾಗುತ್ತಿದ್ದಳು, ಮರುಕ್ಷಣದಲ್ಲಿ ತಣ್ಣ ಗಾಗುತ್ತಿದ್ದಳು. ಒಂದು ಕಾಲು ಅದುರುತ್ತಿತ್ತು, ಒಂದು ಕೈ ಸೆಳೆಯುತ್ತಿತ್ತು. ಇವಳ ಗಂಟಲು ಸುಡುತ್ತಿತ್ತು ಮತ್ತು ನೀರು ಕುಡಿಯಲು ಹೋಗುತ್ತಿದ್ದಳು ; ಹೊರಳಿ ಹಾಸಿಗೆಗೆ ಬರುತ್ತಿದ್ದಳು; ಮತ್ತೆ ಸರ್‍ರನೆ ಬಚ್ಚಲಿಗೆ ಹೊರಡುತ್ತಿದ್ದಳು. ಕಣ್ಣುಗಳನ್ನು ಮುಚ್ಚಿಕೊಳ್ಳುವ ಮೊದಲೇ ಇವಳ ಮುಂದೆ ಕನಸುಗಳು ಮುಕ್ಕರಿಯುತ್ತಿದ್ದವು. ಇವಳು ಒಂದೇ ಟೆಲಿಗ್ರಾಂನ್ನು ಸ್ವೀಕರಿಸಿರಲಿಲ್ಲ, ಟೆಲಿಗ್ರಾಂಗಳ ಒಂದು ಕಂತೆಯನ್ನೇ ಪಡೆದಿದ್ದಳು. ಪ್ರತಿಯೊಂದೂ ಬೇರೆ ಬೇರೆ ವಿಳಾಸಗಳವು, ಬೇರೆ ಬೇರೆ ದಿನಾಂಕಗಳವು. ಕೆಲವು ಆದಂ ಸಹಿಯುಳ್ಳವು, ಕೆಲವು ಪಷೋಲ್‌ಸ್ಕಿಯವು, ಕೆಲವು ಬರಿಯ ಜನರಲ್ ಅವರವು. ಉಳಿದವು ಕವಿವರ್ಯನವು. ಇದು ಯಾವ ರೀತಿಯ ಆಟ ? ಅವನು ಇವಳನ್ನು ಗೊಂದಲಗೊಳಿಸುತ್ತಿದ್ದಾನೆಯೇ? ಅವನು ಕೆಲವು ಮಿಲಿಟರಿ ರಹಸ್ಯಗಳನ್ನು ನಡೆಸುತ್ತಿದ್ದಾನೆಯೇ ? ಫೆಲಾ ದಿಗ್ಭ್ರಮೆಗೊಂಡಳು, ಮೇಲೆ ಎದ್ದಳು. ತನ್ನ ತಲೆದಿಂಬಿನ ಅಡಿಯಲ್ಲಿ ಸರಕ್ಕಾಗಿ ಹುಡುಕಿದಳು. ಆದರೆ ಇದು ಕಾಣದಾಗಿತ್ತು. ಇಲ್ಲಿ ಒಬ್ಬ ಕಳ್ಳ ನಿರುವನೇ? ಇವಳ ತಾಯಿ ಇದು ಇಲ್ಲದಂತಾಗಿರುವುದನ್ನು ಹುಡುಕಿದಳೇ ? ತನ್ನ

ಕನಸಿನಲ್ಲಿ ಫೆಲಾ ಹುಡುಕುತ್ತ ಹೊರಟಳು. ಇವಳನ್ನು ಹಿಡಿಯಲಾಯಿತು, ಬಂಧಿಸಲಾಯಿತು, ಕೋಳ ತೊಡಿಸಲಾಯಿತು. ಕತ್ತಲ ಸೆರೆಮನೆಗೆ ತಳ್ಳಲಾಯಿತು. ವಯಸ್ಸಾದ ಹೆಂಗಸೊಬ್ಬಳು ಇವಳಿಗೆ ಒಂದು ತುಣುಕು ಕರಿಬ್ರೆಡ್‌ನೊಂದಿಗೆ ಒಂದು ಜಗ್‌ನಲ್ಲಿ ನೀರು ತಂದಳು. ಆದರೆ ಫೆಲಾ ಕುಡಿಯತೊಡಗಿದಾಗ ದ್ರವ ವಿಷದಂತೆ ಸುಡಲಾರಂಭಿಸಿತು.

ಮರುದಿನ ಫೆಲಾ ಬೆಳಿಗ್ಗೆ ಒಂಬತ್ತು ಗಂಟೆಗೆ ಎಚ್ಚರಗೊಂಡಳು. ಕೆಳಗಿನ ಅಂಗಳದಲ್ಲಿ ಚಿಲ್ಲರೆ ಮಾರಾಟಗಾರರು ಆಗಲೇ ಚೆರಿ, ಪಿಚ್ಚೀಸು ಹಣ್ಣುಗಳು, ಹೊಗೆಯಾಡುವ ಹೈರಿಂಗ್ ಮೀನುಗಳು ಹಾಗೂ ತಾಜಾ ದುಂಡು ಬ್ರೆಡ್‌ಗಳ ಮಾರಾಟಕ್ಕೆ ಇಳಿದಿದ್ದರು. ತೆರೆದ ಕಿಟಕಿಯಿಂದ ಕೊಳೆ, ಹಣ್ಣು, ಅಂಗಳದ ವಾಸನೆಗಳೆಲ್ಲಾ ಬರುತ್ತಿದ್ದವು. ಫೆಲಾ ಹಾಸಿಗೆಯಿಂದ ಹೊರಗೆ ಹಾರಿದಳು. ಒಂಬತ್ತರಿಂದ ನಾಲ್ಕು ಗಂಟೆಯವರೆಗೆ - ಏಳು ಗಂಟೆಗಳು ! ಏಳು ಗಂಟೆಗಳಲ್ಲಿ ಇವಳು ಎಲ್ಲವನ್ನೂ ಮಾಡಬೇಕು. ಆದಂ ಪಷೋಲ್‌ಸ್ಕಿಯನ್ನು ಭೇಟಿಯಾಗಲು ಇವಳು ತನ್ನನ್ನು ತಾನು ಸಭ್ಯ ಮಹಿಳೆಯಾಗಿಸಿಕೊಳ್ಳಬೇಕು - ಶುಚಿಯಾಗಬೇಕು, ಸ್ನಾನ ಮಾಡಬೇಕು, ತಲೆ ಬಾಚಿಕೊಳ್ಳಬೇಕು, ಜೊತೆಗೆ ಇವಳ ತುಟಿಗಳಲ್ಲಿ ಒಂದು ನಗುವೂ ಇರಬೇಕು, ಒಂದು ಉಡುಗೊರೆ. ಇವಳು ಎಂಥ ಉಡುಗೊರೆಯನ್ನು ತೆಗೆದುಕೊಳ್ಳಬೇಕು ? ಆದರೆ ಬೇಡ, ಒಬ್ಬ ಜಂಟಲ್‌ಮನ್‌ಗೆ ಮಹಿಳೆಯೊಬ್ಬಳು ಮೊದಲ ಭೇಟಿಯಲ್ಲಿಯೇ ಉಡುಗೊರೆಯೊಂದನ್ನು ಒಯ್ಯುವುದು ಸರಿಯಾದುದಲ್ಲ. ಶಿಷ್ಟಾಚಾರ ಇದಕ್ಕೆ ವಿರುದ್ಧವಾದದ್ದು. ಮಹಿಳೆಯೊಬ್ಬಳು ಒಬ್ಬ ದೇವದೂತನೊಡನೆ ಅಪಾಯಿಂಟ್‌ಮೆಂಟ್ ಪಡೆದಾಗ ಅಂತಸ್ತನ್ನು ಇರಿಸಿಕೊಳ್ಳಬೇಕು.

ಆಚೆಯ ಕೋಣೆಯಲ್ಲಿ ಇವಳ ತಂದೆ ಇವಳನ್ನು ಬಯ್ಯುತ್ತಿದ್ದ. ಆದರೆ ಯಾಕೆ ಎಂದು ಇವಳಿಗೆ ತಿಳಿಯದಂತಿತ್ತು. ಇವಳು ರೊಯ್ಯನೆ ಅವನತ್ತ ನುಗ್ಗಿದಳು. "ಅಪ್ಪ, ನಾನು ನಿನ್ನನ್ನ ಪ್ರೀತಿಸ್ತೀನಿ ಅಂತ ನಿನಗೆ ಗೊತ್ತು. ಜಗತ್ತಿನೊಳಗೆ ಈ ಸ್ಥಾನ ಪಡೆದುಕೊಳ್ಳೋ ಇನ್ನೊಬ್ಬ ಮನುಷ್ಯನೇ ಇಲ್ಲ" ಇವಳು ಇವನ ಗಡ್ಡವನ್ನು ಹಿಡಿದಳು, ನೇವರಿಸುತ್ತ ಎಳೆದಳು, ತಾನು ಚಿಕ್ಕಹುಡುಗಿಯಾಗಿದ್ದಾಗಿನಂತೆ ಮುದ್ದಿಟ್ಟಳು. ಅಡುಗೆ ಕೋಣೆಯತ್ತ ನಡೆಯುತ್ತ ಹೊರಟ ಇವಳಿಗೆ ಇವನು ಕರೆಯುತ್ತಿರುವುದು ಕೇಳಿಸಿತು. "ಹುಚ್ಚು ಹುಚ್ಚಿ ! ಹುಚ್ಚು ಹುಡುಗಿ" ಇವಳು ಹೊರಳಿ ನಿಂತಳು. "ನೀನು ನನ್ನನ್ನ ಕೊಂದರೂ ಸರಿ. ನಾನು ಮಾತ್ರ ನಿನ್ನನ್ನ ಹಿಂಗೇ ಪೂಜಿಸ್ತೀನಿ" ಮಾಮೂಲಿನಂತೆ

ಇವಳ ತಾಯಿ ಇವಳ ಮೇಲೆ ದೂರಲು ಧಾಳಿಗಿಳಿದಳು. 'ಇವಳು ಯಾಕೆ ಇಷ್ಟು ಹೊತ್ತಿನತನಕ ಮಲಗತಾಳೆ ? ಇವಳು ಯಾಕೆ ಕೆಲಸ ಹುಡುಕೋಕೆ ಹೊರಗೆ ಹೋಗೋದಿಲ್ಲ ? ಇವಳು ಯಾಕೆ ನಿನ್ನೆ ರಾತ್ರಿ ಪಾತ್ರೆಗಳನ್ನ ತೊಳೆದಿಲ್ಲ ?' ಈ ಎಲ್ಲವಕ್ಕೂ ಫೆಲಾ ಒಂದೇ ಉತ್ತರವನ್ನಿತ್ತಳು. "ನಿನಗೆ ನಾನು ಇಷ್ಟವಿಲ್ಲದಿದ್ದರೆ ನೀನು ಇನ್ನೊಬ್ಬ ಮಗಳನ್ನು ಹುಡುಕಿಕೋ. ನಾನು ಮಾತ್ರ ನಿನ್ನನ್ನೇ ಬಯಸ್ತೀನಿ."

ತನ್ನ ತಾಯಿಗೆ ತೆಕ್ಕೆ ಬಿದ್ದು ಅಪ್ಪಿದ ಇವಳು ಅವಳ ಕೆನ್ನೆಗಳಿಗೆ, ಅವಳ ಮೂಗಿಗೆ, ಅವಳ ಹಣೆಗೆ ಕೊನೆಗೆ ಅವಳ ವಿಗ್‌ಗೂ ಮುದ್ದಿಟ್ಟಳು.

"ನಾನು ದೇವರನ್ನ ಪ್ರೀತಿಸ್ತಿರೋ ಹಾಗಿದ್ದರೆ, ಈ ಹುಡುಗಿ ತನ್ನ ಬುದ್ಧಿ ಕಳಕೊಂಡಿದಾಳೆ."

"ಹೌದು, ಹೌದು ಅಮ್ಮ. ನಿಮ್ಮ ಮಗಳು ಹುಚ್ಚಿ. ನಾನು ತುಂಬ ಸಂತೋಷವಾಗಿದೀನಿ. ಸಾವು ಬಂದರೂ ಖುಷಿಯಾಗತೀನಿ."

"ನಿನ್ನ ವೈರಿಗಳು ಇನ್ನೂ ಒಂದಿಷ್ಟು ಮಾತಾಡಿಕೊಳ್ಳೊ ಹಾಗೆ ಆಯ್ತು."

ಫೆಲಾ ಊಟ ಮಾಡಿದಳು. ಏನನ್ನು ಊಟ ಮಾಡುತ್ತಿದ್ದೇನೆ ಎನ್ನುವುದನ್ನೇ ತಿಳಿಯದಂತೆ ಇವಳು ತನ್ನ ಟೀಗೆ ಉಪ್ಪನ್ನು ಹಾಕಿಕೊಂಡಳು, ಹಾಗೂ ಇದನ್ನು ಚಿಕ್ಕಸ್ಪೂನ್‌ಗೆ ಬದಲಾಗಿ ಫೋರ್ಕ್‌ನಿಂದ ತಿರುವಿಕೊಂಡಳು. ಮೇಲೆ ಎದ್ದ ನಂತರ ಅಡಿಗೆ ಕೋಣೆಯ ಕಿಟಕಿಯಿಂದ ತೋಳುಗಳನ್ನು ಹೊರಗೆ ಚಾಚಿದಳು. ಈ ಕಿಟಕಿಯ ಹತ್ತಿರದಲ್ಲೇ ನಿಂತಳು. ಹೊರ ಬಾಗಿಲಿನಲ್ಲಿ ಸೂರ್ಯ ಹೊಳೆಯುತ್ತಿದ್ದ, ಹಕ್ಕಿಗಳು ಕಿಚಗುಡುತ್ತಿದ್ದವು. ಮೋಡಿಗಾರರು ಅಂಗಳದಲ್ಲಿ ಆಟಗಳನ್ನು ತೋರಿಸುತ್ತಿದ್ದರು. ಒಬ್ಬ ಮನುಷ್ಯ ಕೋಡಂಗಿಯಂತೆ ಉಡುಪು ತೊಟ್ಟು ಒಂದು ಪಂಜಿನಿಂದ ಉರಿಯನ್ನು ನುಂಗುತ್ತಿದ್ದ, ಒಂದು ಲೋಟದ ನೀರನ್ನು ಕಬ್ಬಿಣದ ಬಳೆಯೊಂದರ ಸುತ್ತ ಗರಗರ ತಿರುವುತ್ತಿದ್ದ. ತಲೆ ಕೂದಲು ಕತ್ತರಿಸಿದ ವೆಲ್ವೆಟ್ ಪೈಜಾಮ ತೊಟ್ಟ ಹುಡುಗಿಯೊಬ್ಬಳು ಇವನ ಹಿಂದೆ ಕೆಳಗೆ ಮಲಗಿ ತನ್ನ ಕಾಲಿನ ಪಾದಗಳ ಮೇಲೆ ಪೀಪಾಯಿಯೊಂದನ್ನು ಉರುಳಿಸುತ್ತಿದ್ದಳು. "ಅಯ್ಯೋ ಅಮ್ಮಾ ಎಷ್ಟು ಚೆನ್ನಾಗಿದೆ, ಹಿಂಗೆ ಬದುಕೋದು" ಫೆಲಾ ಬಡಬಡಿಸಿದಳು. "ನಾನು ಯಾಕೆ ತುಂಬ ಸಂತೋಷವಾಗಿದೀನಿ ? ಓಹ್ ಯಾಕೆ ನಾನು ತುಂಬ ಸಂತೋಷವಾಗಿದೀನಿ. ಕಿಟಕಿಯಿಂದ ಹೊರಗೆ ಬೇಕಾದರೂ

ಹಾರತೀನಿ!" ಫೆಲಾಳಿಗೆ ತನ್ನ ತಾಯಿ ಗುನುಗುತ್ತಿರುವುದು ಕೇಳಿಸಿತು. "ನೀನು ಹುಚ್ಚಿಯಾಗಿದೀಯೋ ಅಥವಾ ನಿನ್ನನ್ನ ನೀನು ಹುಚ್ಚಿಯಾಗಿ ಮಾಡಿಕೊಳ್ಳತಿದೀಯೋ."

"ನಾನು ಪ್ರಯತ್ನಿಸ್ತಾ ಇಲ್ಲ ಅಮ್ಮ, ಇಲ್ಲಮ್ಮ, ನಿಜ ಹೇಳಬೇಕಾ. ನೀನು ಅಪ್ಪನ್ನ ಯಾವಾಗಲಾದರೂ ಪ್ರೀತಿಸಿದ್ದೆಯಾ ? ಅಂದರೆ, ನಾನು ಹೇಳತಿರೋದು ಬೆಂಕಿಯಂಗೆ ಸುಡುತ್ತಲ್ಲ ಆ ಥರದ ಒಂದು ಪ್ರೀತಿ."

"ನಾನು ಬೇರೆ ಯಾರನ್ನ ಪ್ರೀತಿಸಲಿ ? ಚಿಮಣಿ ಕೊಳವೇನಾ ? ಆದರೆ ಈಗ ಅದೆಲ್ಲ ಮುಗಿದಿರೋ ಅಂಥದು."

"ಈಗಲೂ ಎಲ್ಲ ಚೆನ್ನಾಗಿಯೇ ಇದೆ ಕಣಮ್ಮ. ನೀನು ಬಹಳ ಖುಷಿಪಡತೀಯ."

"ಯಾವಾಗ ? ಸದ್ಯದಲ್ಲಂತೂ ಅಂಥ ಯಾವುದೂ ಇಲ್ಲ."

೩

ಪ್ರತಿಯೊಂದೂ ಆರಾಮವಾಗಿ ನಡೆಯುತ್ತಾ ಫೆಲಾಳಿಗೆ ನಗುವಂತಾಯಿತು. ಇದೆಲ್ಲವೂ ಹೊಸತಾಗಿತ್ತು. ಸುಮಾರು ವರ್ಷಗಳಿಂದಲೂ ಇವಳು ಚಿಂತೆ ಮಾಡುತ್ತಿದ್ದಳು. ಈಗ ಇದ್ದಕ್ಕಿದ್ದಂತೆ ಕ್ರಿಯಾಶೀಲವಾಗುವ ದಿನವೊಂದು ಬಂದ್ಬಿಟ್ಟಿತ್ತು. ಇವಳು ಒಂದು ಗಿರವಿ ಅಂಗಡಿಗೆ ಹೋದಳು, ತನ್ನ ತಾಯಿಯ ಸರವನ್ನು ನೂರಾನಲವತ್ತು ಜೋಲ್ಟಿಗಳಿಗೆ ಗಿರವಿಗಿಟ್ಟಳು. ತನಗಾಗಿ ಇವಳು ಹೊಸ ಉಡುಗೆ, ಹ್ಯಾಟ್, ಷೂಗಳು, ಅಂಡರ್‌ವೇರ್‌ಗಳನ್ನು ಕೊಳ್ಳಬೇಕು ಅಂದುಕೊಂಡಿದ್ದ ಮರ್‌ಜಲ್‌ಕೋವ್‌ಸ್ಕಿ ಬೀದಿಗೆ ಒಂದು ರಿಕ್ಷಾವನ್ನು ಹಿಡಿದಳು. ಸ್ನಾನಗೃಹವೊಂದಕ್ಕೆ ನಡೆದಳು, ಸ್ನಾನ ಮಾಡಿದಳು. ಸ್ವರ್ಗದಲ್ಲಿ ದೇವರಿದ್ದಾನೆ, ಹಣವೊಂದಿದ್ದರೆ ಏಳು ಗಂಟೆಗಳಲ್ಲಿ ಏನೆಲ್ಲ ನಡೆಯುತ್ತದೆ ಎನ್ನುವುದು ಸೋಜಿಗದಂತಿತ್ತು. ಕೆಫೆ ಊಲೈತ್ ಬಣ್ಣದ ಹೊಸ ಉಡುಗೆಯನ್ನು ತೊಟ್ಟ ಫೆಲಾ ಗುರುತು ಸಿಗದಂತಾದಳು. ಕಂದು ರಿಬ್ಬನ್‌ನಿಂದ ಟ್ರಿಮ್ ಮಾಡಿದ ಸ್ಟ್ರಾಹ್ಯಾಟ್ ಇವಳನ್ನು ರೂಪಗಾರ್ತಿಯಾದ ಬೆಡಗಿನ ಹೆಂಗಸನ್ನಾಗಿಸಿತ್ತು. ಹೊಸ ಷೂಗಳು ಬಿಗಿಯಾಗಿದ್ದವು. ಆದರೆ ಇವುಗಳ ಹೈಹೀಲ್ಡ್‌ಗಳು ಮತ್ತು ಮೊನಚಿನ ತುದಿಗಳು ನೋಟಕ್ಕೆ ಸೊಗಸಾಗಿದ್ದವು. ಕುಪ್ಪಸ ಬಿಗಿಯಾಗಿತ್ತು. ಆದರೆ

ಇದು ಇವಳ ಆಕೃತಿಯನ್ನು ಸ್ಥಿರವಾಗಿಸಿತ್ತು, ಇವಳನ್ನು ತೇಲುತ್ತಿರುವವಳಂತೆ ಮಾಡಿತ್ತು. ಬಿಸಿ ಸ್ನಾನ ಎಲ್ಲ ತುರಿಕೆ ಮತ್ತು ವಾಸನೆಗಳನ್ನು ಹೊರಗೆ ತೆಗೆದಿತ್ತು. ಫೆಲಾ ವಸಂತ ದಲ್ಲಿ ಇರುವವಳಂತೆ ನಡೆಯುತ್ತಿದ್ದಳು. ಇವಳ ಹೃದಯ ಇವಳ ಎಡಮೊಲೆಯ ಹಿಂದೆ ಒಂದು ಹಕ್ಕಿಯಂತೆ ಹಾರಾಡುತ್ತಿತ್ತು. ಒಂದು ಕಾಫಿಹೌಸ್‌ಗೆ ಹೋದ ಇವಳು ಒಂದು ಕಾಫಿಗೆ ಆರ್ಡರ್ ಮಾಡಿದಳು. ಇದಕ್ಕೆ ಇಲ್ಲಿ ಬಿಲ್ ಕೊಟ್ಟ ಮೇಲೆ ಇವಳ ಹತ್ತಿರ ನೂರಾನಲವತ್ತು ಜೋಲ್ಟಿಗಳಲ್ಲಿ ಒಂದೇ ಒಂದು ಜೋಲ್ಟಿ ಉಳಿಯುವಂತಿತ್ತು. ಈ ಒಂದು ಜೋಲ್ಟಿ ಇವಳು ಭೇಟಿಗೆ ಹೋಗಬೇಕಿರುವಲ್ಲಿಗೆ ರಿಕ್ಷಾಕ್ಕೆ ಕೊಡಲು ಬೇಕಾಗ್ತಿತ್ತು. ಫೆಲಾ ಪಿಕ್ಚರ್ ಮ್ಯಾಗಜಿನ್ ತೆರೆದಳು. ವೈಟರ್ ಕೈ ನೀಡಿ ಇವಳಿಗೆ ನೆರವಾದ, ಇವಳು ಓದಲು ಯತ್ನಿಸಿದಳು. ಆದರೆ ಇವಳಿಗೆ ಅಕ್ಷರಗಳೇ ಅರ್ಥವಾಗಲಿಲ್ಲ ; ಚಿತ್ರಗಳಿಗೂ ಸಹ ಇವಳು ಸ್ಪಷ್ಟವಾಗಿ ದೃಷ್ಟಿಯನ್ನಿಡಲು ಸಾಧ್ಯವಾಗಲಿಲ್ಲ. ಒಳ್ಳೆಯದು, ಸಂತಸದ ಒಂದು ದಿನವೇ ಸಾಕು. ಇವಳು ತನ್ನಲ್ಲಿಯೇ ಹೇಳಿಕೊಂಡಳು. ಒಂದೆರಡು ನಿಮಿಷಗಳಿಗೂ ಇವಳು ತನ್ನ ರಿಸ್ಟ್‌ವಾಚ್ ನೋಡಿಕೊಳ್ಳುತ್ತಿದ್ದಳು. ಈಗಲೇ ಅಲ್ಲಿಗೆ ಹೋಗುವುದು ಬೇಗ ಹೋದಂತಾಗುತ್ತದೆ. ಆದರೆ ತುಂಬ ತಡವಾಗಿ ಹೋಗುವುದು ಕೂಡಾ ಸರಿಯಾದುದಲ್ಲ. ಅವನು ಇವಳಿಗಾಗಿ ಒಂದು ಅಥವಾ ಎರಡು ನಿಮಿಷ ಮಾತ್ರ ಕಾಯುವಂತೆ ಇವಳು ಸಮಯವನ್ನು ಹೊಂದಿಸುತ್ತಿದ್ದಳು. ಇದೆಲ್ಲವೂ ಅವನಿಗೆ ಒಂದು ಜೋಕ್‌ನ ಹೊರತು ಬೇರೇನೂ ಅಲ್ಲ ಎನ್ನುವಂತೆ ಆಗುತ್ತದೆಯೇನೋ. ಪೊಲೀಸ್‌ನವರು ಕೂಡಾ ಇದನ್ನು ಗಮನಿಸಬಹುದು ಮತ್ತು ಇವಳಿಗಾಗಿ ಕಾಯಬಹುದು. ಇವಳ ಎದುರಿಗೆ ನಗಲು ಅವನು ಒಂದಿಷ್ಟು ಆಫೀಸರ್‌ಗಳನ್ನು ತನ್ನ ಜೊತೆಯಲ್ಲಿ ಕರೆದು ತರಬಹುದು. ಹೀಗಲ್ಲದಿದ್ದರೆ ಹೂವುಗಳೊಂದಿಗೂ ಬರಬಹುದು. ಏನು ಬೇಕಾದರೂ ಸಾಧ್ಯವಿದೆ. ಈ ದಿನ ಇವಳ ಹಣೆಯಬರಹದ ದಿನ. ಇವಳು ಇಲ್ಲಿಯೇ ಕಣ್ಣು ಪಿಳುಕಿಸುತ್ತಾ ಕುಳಿತಳು. ಥಟ್ಟನೆ ವಾಚ್ ನೋಡಿಕೊಂಡಳು. ಆಗಲೇ ತಡವಾಗಿದೆ. ಆತುರದಲ್ಲಿ ಬಿಲ್ ಕೊಟ್ಟು ಹೊರಗೆ ನಡೆದಳು. ಬಿಸಿಲಿನಿಂದ ಕೂಡಿದ್ದ ಈ ದಿನ ಈಗಷ್ಟೇ ಅದನ್ನು ಕಳೆದುಕೊಂಡಿತ್ತು. ಈಗ ಮಳೆ ಬರಬಹುದೇನೋ ಎನ್ನುವಂತಿತ್ತು. ಹಕ್ಕಿಗಳು ಸೂರುಗಳ ಮೇಲೆ ಹಾರಾಡುತ್ತಿದ್ದವು, ಕೂಗಿಡುತ್ತಿದ್ದವು. ಒಂದು ರಿಕ್ಷಾ ಬಂದಿತು. ದೇವರ ದಯೆ, ಫೆಲಾ ಇದರೊಳಗೆ ಹೊಕ್ಕಳು, ಒಂದೇ ಉಸಿರಿಗೆ ಹೇಳಿದಳು "ಮರ್ ಜಲ್ ಕೋವ್‌ಸ್ಕಿ ಹಾಗೂ ವ್ರಪೋಲ್ನ ಕಾರ್ನರ್."

ರಿಕ್ಷಾದವನು ವಾಹನವನ್ನು ತಿರುಗಿಸಿದ. ಬಿಲ್ಡಿಂಗ್‌ಗಳು, ಕಲ್ಲುಹಾಸು,

ಪಾದಾಚಾರಿಗಳ ನಡುವೆ ಸಾಗುತ್ತಿರುವಾಗ ಫೆಲಾ ಹಿಂದಕ್ಕೆ ಒರಗಿದಳು. ಇವಳ ತಲೆಯೊಳಗೆ ಕಾಫಿಯ ದ್ರವ ಏರಿತು. ಇವಳಿಗೆ ಆಗಲೇ ತಡವಾಗಿದೆ. ಅವನು ಇವಳಿಗಾಗಿ ಒಂದು ನಿಮಿಷವಷ್ಟೇ ಅಲ್ಲ ಸುಮಾರು ಐದು ನಿಮಿಷ ಕಾದಿದ್ದಾನೆ. ಒಳ್ಳೆಯದು, ಅವನೊಬ್ಬ ಪುರುಷ. ನಾನೋರ್ವ ಮಹಿಳೆ. ಅವನು ಕಾಯಲಿ. ಇವಳು ಕಣ್ಣೀರು ಅಥವಾ ನಗುವಿನ ಸಮೀಪದಲ್ಲಿದ್ದಳು. ಎಂತಹ ಸಾಹಸಕಾರ್ಯ ! ಇವಳ ತಾಯಿ ಅವಳ ಸರ ಕಾಣೆಯಾಗಿರುವುದನ್ನು ನೋಡಿರಬಹುದೇನೋ. ಅವಳು ಪೊಲೀಸರ ಗಮನಕ್ಕೂ ತರಬಹುದೇನೋ. ರಿಕ್ಷಾದವನು ಒಂದು ಜೋಲ್ಟಿಗಿಂತಲೂ ಹೆಚ್ಚಿಗೆ ಕೇಳುತ್ತಾನೆಯೇ ? ಆಮೇಲೆ ಇವಳು ಏನು ಮಾಡಬೇಕು ? - ತನ್ನನ್ನು ಜೀವಂತವಾಗಿಯೇ ಹುಗಿಯಲಿ ! ಸ್ವರ್ಗದಲ್ಲಿ ದೇವರಿದ್ದಾನೆ, ಏನೀಗ. ಟ್ರಾಲಿಕಾರ್‌ಗಳ ಉದ್ದ ಸಾಲು ಬೀದಿಯನ್ನು ಬ್ಲಾಕ್ ಮಾಡಿದೆ. ಫೈರ್ ವ್ಯಾಗನ್‌ಗಳು ಟ್ರಾಫಿಕ್ಕನ್ನೆಲ್ಲ ತಡೆದಿವೆ. ಆಂಬುಲೆನ್ಸ್‌ನ ಸೈರನ್ ಕೂಗಿಡುತ್ತಿದೆ. ಎಲ್ಲೋ ಬೆಂಕಿ ಇರುವಂತಿದೆ ? ಆದರೆ ಎಲ್ಲಿ ? ದೊಡ್ಡದಾಗಿ ಗುಂಪು ನೆರೆಯುತ್ತಿದೆ. ರಿಕ್ಷಾದವನು ಉಣ್ಣೆಬಟ್ಟೆಯ ತಲೆಟೊಪ್ಪಿಗೆಯೊಂದಿಗೆ ಹಿಂದೆ ಹೊರಳಿದ.

"ಮೇಡಂ, ನೀವು ಆತುರದಲ್ಲಿ ಇದ್ದರೆ ಇಲ್ಲಿಂದ ಹೀಗೆಯೇ ಹೋಗಿ. ವೃಪೋಲ್ನ ಬೀದಿಗೆ ಇಲ್ಲಿಂದ ಬಹಳ ದೂರ ಇಲ್ಲ."

ಫೆಲಾ ಇವನಿಗೆ ಜೋಲ್ಟಿಯನ್ನು ಕೊಟ್ಟು ಕೆಳಗಿಳಿದಳು. ಇವಳು ಆಗಲೇ ತನ್ನ ಉಡುಗೆಯ ಮೇಲೆ ಕಣ್ಣೀರು ಹನಿಸಿದ್ದಳು. ಕಬ್ಬಿಣದ ಮೆಟ್ಟಿಲ ಮೇಲೆ ಹತ್ತಿ ಜನಜಂಗುಳಿಯೊಳಗೆ ತನ್ನ ನಡಿಗೆಯನ್ನು ವೇಗವಾಗಿಸುತ್ತ ವ್ರಪೋಲ್ನ ಬೀದಿಯತ್ತ ಚುರುಕಾಗಿ ಸಾಗಿದಳು. ತನ್ನ ಹೈಹೀಲ್ಡ್ ಷೂಗಳಲ್ಲಿ ಇವಳು ಜಾರುತ್ತಿದ್ದಳು, ಬೀಳುವಂತಾಗುತ್ತಿದ್ದಳು. ನಾನು ಬಯಸುತ್ತಿದ್ದುದು ಅದೇ ಕೆಸರಿನ ನೆಲ. ಇವಳು ಯೋಚಿಸಿದಳು. ಆದಂ ಪಷೋಲ್‌ಸ್ಕಿ ಯೂನಿಫಾರಂ ಇಲ್ಲದೆ ಕಾರ್ನರ್‌ನಲ್ಲಿ ನಿಂತಿದ್ದರು. ಸರಳ ಉಡುಗೆಯಲ್ಲಿ ಇರುವ ಪ್ರಾಯದ ಮನುಷ್ಯ. ಗೌರವರ್ಣದ ಇವನ ಕೂದಲುಗಳನ್ನು ಬ್ರಷ್‌ನಲ್ಲಿ ಕತ್ತರಿಸಲಾಗಿತ್ತು. ಇವನು ಅವನೇ ಏನು ? ಫೆಲಾಳನ್ನು ಕಂಡ ಅವನು ನಕ್ಕು ಮ್ಯಾಗಜಿನ್ ಬೀಸಿದ. ತಕ್ಷಣ ಇವಳತ್ತ ಬಂದು ಇವಳ ಕೈಹಿಡಿದುಕೊಂಡ. ಗ್ಲೌಸ್ ಮೇಲೆ ಮುಂಗೈಗೆ ಚಾತುರ್ಯದಿಂದ ಮುದ್ದಿಟ್ಟ. ಇವಳು ಹಳೆ ಪರಿಚಯದವಳು ಎಂಬಂತೆ ಸ್ವಾಗತವಿತ್ತ.

"ನೀನು ತಡಮಾಡಿದೆ" ಅವನು ಹೇಳಿದ. "ಆದರೆ ಪ್ರೇಮಜೋಡಿಗಳಲ್ಲಿ ಇದು ವಿಶೇಷಾಧಿಕಾರದ್ದು."

"ಅಲ್ಲಿ ಬೆಂಕಿ ಹತ್ತಿತ್ತು. ಎಲ್ಲೂ ರಿಕ್ಷಾ ಬರೋಕೇ ಸಾಧ್ಯವಾಗಲಿಲ್ಲ."

"ನನ್ನ ಜೊತೆ ಬಾ, ಪ್ಲೀಸ್" ಇವನು ಇವಳನ್ನು ಒಂದು ಗೇಟ್‌ನ ಒಳಗೆ ಕರೆದೊಯ್ದು ಒಂದು ಕೀಲಿಯಿಂದ ಗಾಜಿನ ಬಾಗಿಲ ಮುಖ್ಯದ್ವಾರವನ್ನು ತೆರೆದ. ಇಬ್ಬರೂ ಮರದ ಎಲಿವೇಟರೊಂದನ್ನು ಪ್ರವೇಶಿಸಿದರು. ಇದು ಮೇಲೇರಿದಂತೆ ಎಂದೂ ಎಲಿವೇಟರ್ ಹತ್ತದಂತಿದ್ದ ಫೆಲಾಳಿಗೆ ಮೆದುಳಿನೊಳಗೆ ಗಿರಗಿರವೆನ್ನಿಸಿತು. ಒಬ್ಬ ಗಂಡಸಿನೊಡನೆ ಹುಡುಗಿಯೊಬ್ಬಳು ಈತನ ಅಪಾರ್ಟ್‌ಮೆಂಟ್‌ಗೆ ಹೋಗಬಾರದು ಎನ್ನುವುದು ಇವಳಿಗೆ ಚೆನ್ನಾಗಿಯೇ ತಿಳಿದಿತ್ತು. ಆದರೆ ಇವಳಿಗೆ ಏನನ್ನು ಹೇಳಲೂ ಇವನು ಅವಕಾಶವೀಯಲಿಲ್ಲ. ಇವಳ ಹೃದಯ ಬಡಿದುಕೊಳ್ಳುತ್ತಿತ್ತು. ; ಇವಳು ಒಂದು ಪದವನ್ನೂ ಉಸುರಲಾಗಲಿಲ್ಲ. ಸಂದರ್ಭ ಇವಳಿಗೆ ತಲೆ ಸುತ್ತಿಸುತ್ತಿತ್ತು. ಸ್ವರ್ಗದಲ್ಲಿ ದೇವರಿದ್ದಾನೆ, ನನ್ನನ್ನು ಮೂರ್ಖೆ ಹೋಗಿಸಬೇಡ, ಮೊರೆಯಿಟ್ಟಳು. ಆದಂ ಪಷೋಲ್‌ಸ್ಕಿ ಪೈಂಟಿಂಗ್‌ಗಳಿರುವ ಒಂದು ಕಾರಿಡಾರ್‌ನ ಬಾಗಿಲು ತೆರೆದ. ಒಂದು ಹ್ಯಾಂಗರ್‌ನಲ್ಲಿ ಜನರಲ್ ಅವರ ಕೋಟ್, ಜನರಲ್ ಅವರ ಕ್ಯಾಪ್ ಹಾಗೂ ಕತ್ತಿಯೊಂದು ತೂಗಿಕೊಂಡಿತ್ತು. ಒಂದು ಹೂಜಿಯಲ್ಲಿ ಹೂವುಗಳು ನಿಂತಿದ್ದವು. ಒಂದು ಅಕ್ವೇರಿಯಂನಲ್ಲಿ ಬಂಗಾರ ಮೀನುಗಳು ಈಜುತ್ತಿದ್ದವು.

ಇವರು ಪ್ರವೇಶಿಸಿದ್ದ ಈ ಕೋಣೆ ಒಂದು ಮ್ಯೂಸಿಯಂನಂತೆ ಇತ್ತು. ಪೋಲಿಷ್ ಹೀರೋಗಳ ಭಾವಚಿತ್ರಗಳು ಗೋಡೆಗಳಲ್ಲಿ ತುಂಬಿಕೊಂಡಿದ್ದವು. ಇಲ್ಲಿ ಮೆಡಲ್ ಗಳು, ಪ್ರಶಸ್ತಿಗಳು ಹಾಗೂ ಎಲ್ಲ ರೀತಿಯ ದೃಷ್ಟಾಂತಗಳಿಗೂ ಉದಾಹರಣೆಗಳಿದ್ದವು. ಗನ್‌ಗಳು, ಪಿಸ್ತೂಲ್‌ಗಳು, ಭರ್ಜಿಗಳೊಂದಿಗೆ ಪ್ರಾಣಿಗಳ ತಲೆಗಳಿಂದ ಒಂದು ಗೋಡೆ ತುಂಬಿಕೊಂಡಿತ್ತು. ಕೋಣೆಯಲ್ಲಿ ಚರ್ಮ ಮತ್ತು ಪೌರುಷದ ವಾಸನೆ ತುಂಬಿಕೊಂಡಿತ್ತು. ಫೆಲಾಳಿಗೆ ಆದಂ ಪಷೋಲ್‌ಸ್ಕಿ ಕೂರಲು ಹೇಳಿದ, ಇವಳು ಇವನಿಗೆ ಥ್ಯಾಂಕ್ಸ್ ಹೇಳಿದಳು. ಪಾನೀಯಗಳ ಕಪಾಟನ್ನು ತೆರೆದ ಇವನು ಎರಡು ಗ್ಲಾಸ್‌ಗಳೊಂದಿಗೆ ಕೆಂಪು ಪಾನೀಯವೊಂದನ್ನು ಹೊರಗೆ ತೆಗೆದ. "ನಿನ್ನ ಪತ್ರದಲ್ಲಿ ನೀನು ನೋಡೋಕೆ ಚೆನ್ನಾಗಿ ಇರದವಳು ಅಂತ ಬರೆದಿದ್ದೆ." ಇವನು ಹೇಳಿದ. "ಆದರೆ ನೀನು ಸುಂದರವಾಗಿಯೇ ಇದೀಯ."

"ಜನರಲ್ ಅವರು ನನ್ನನ್ನ ಹಾಸ್ಯ ಮಾಡತಿದಾರೆ."

"ನನ್ನನ್ನ ಜನರಲ್ ಅಂತ ಕರೆಯಬೇಡ. ನಾನು ಆದಂ, ನೀನು ಫೆಲಾ" ಇವನ ದನಿ ಆಪ್ತವಾಗಿತ್ತು. "ಇದು ನಿನ್ನ ಆರೋಗ್ಯಕ್ಕಾಗಿ". ಇವನು ತನ್ನ ಗ್ಲಾಸನ್ನು ಇವಳ ಗ್ಲಾಸ್‌ನ ಎದುರು ಸೋಕಿಸಿ ನಕ್ಕ. ಈ ನಗು ಪೋಲೆಂಡ್‌ನಲ್ಲಷ್ಟೇ ಅಲ್ಲ ? ಇಡೀ ಜಗತ್ತಿಗೇ ಪರಿಚಿತವಾದುದಾಗಿತ್ತು. ಇವನಿಗೆ ನಲವತ್ತೆರಡು ವರ್ಷ. ಆದರೆ ಫೆಲಾಳಿಗೆ ಇವನು ಇಪ್ಪತ್ಮೂರಕ್ಕೂ ಹೆಚ್ಚಿನವನಲ್ಲ ಎಂಬಂತೆ ಕಾಣುತ್ತಿದ್ದ. ಪಾನೀಯ ತೀಕ್ಷ್ಣವಾಗಿತ್ತು. ಇವಳ ನರಗಳಲ್ಲಿ ಮಾಧುರ್ಯವೊಂದು ಹರಿಯಿತು. ಹಬೆ ಇವಳ ಮೂಗನ್ನು ಆಕರ್ಷಕವಾಗಿಸಿತು. ಕಂಗಳು ಕಣ್ಣೀರಿನಿಂದ ತುಂಬಿದವು. "ಹೇಗೆ ಕುಡಿಯಬೇಕು ಅಂತ ನಿನಗೆ ಗೊತ್ತಿಲ್ಲ" ಪಷೋಲ್‌ಸ್ಕಿ ಆಕ್ಷೇಪಿಸಿದ. ಇವಳಿಗೆ ಒಂದು ಚಾಕ್ ಲೇಟನ್ನು ಕೊಟ್ಟ. ಇವಳ ಗ್ಲಾಸನ್ನು ಪುನಃ ತುಂಬಿಸಿ ತನ್ನ ರಿಸ್ಟ್‌ವಾಚನ್ನು ಗಮನಿಸಿದ. ಪಕ್ಕದ ಕೋಣೆಯಲ್ಲಿ ಟೆಲಿಫೋನ್ ಟ್ರಿಂಗುಟ್ಟಿತು ; ತಕ್ಷಣ ಇವನು ಕರೆಯನ್ನು ಎತ್ತಿದ. "ಎಲ್ಲರೂ ನನ್ನನ್ನು ಕರೆಯುತ್ತಾರೆ" ಇವನು ಆಕ್ಷೇಪ ತೋರುತ್ತ ಫೆಲಾಳೊಂದಿಗೆ ಮತ್ತೆ ಬೆರೆತ. "ಎಂಥ ಬೇಸರ."

"ಜನರಲ್ ಅವರಿಗೆ ಟೈಂ ಇಲ್ಲವೇನೋ ?" ಫೆಲಾ ಹೇಳಿದಳು.

"ನೋಡೋಕೆ ಚೆನ್ನಾಗಿ ಇರೋ ಹೆಂಗಸರಿಗೆ ನನ್ನಲ್ಲಿ ಯಾವಾಗಲೂ ಟೈಮ್ ಇದೆ", ಇವನು ಉತ್ತರಿಸಿದ.

ಫೆಲಾಳ ಕಣ್ಣುಗಳಲ್ಲಿ ದೃಷ್ಟಿಯನ್ನು ಇರಿಸಿದ ಪಷೋಲ್‌ಸ್ಕಿ ಭಾಗ್ಯಶಾಲಿಯಂತೆ ಮಾತಿಗೆ ಆರಂಭಿಸಿದ. "ನೀನು ಹೇಗೆ ಪ್ರೀತಿಸಬೇಕು ಅನ್ನೋದು ಗೊತ್ತಿಲ್ಲದ ಹುಡುಗಿ. ಬುಡಕಟ್ಟಿನವರ ಬಗ್ಗೆ 'ಪ್ರೀತಿಸಿದಾಗ ಸಾಯುತ್ತಾರೆ ಅವರು' ಅಂದಿರೋ ಟೈನಿ ಕವಿಯ ಕವಿತೆ ಸಾಲುಗಳನ್ನ ನೀನು ನನ್ನಲ್ಲಿ ನೆನಪಿಗೆ ತರ್‍ತಿದೀಯ. ನೀನು ನನ್ನ ಕವಿತೆಗಳಲ್ಲಿ ಏನನ್ನ ಕಂಡೆ ? ಕೆಲವು ಸಲ ನನಗೆ ಇವು ಕೆಲಸಕ್ಕೆ ಬಾರದವು ಅನ್ನಿಸುತ್ತೆ. ನೀನು ಯಹೂದಿ. ಆದರೆ ಬೇರೆ ಯಹೂದಿ ಹುಡುಗಿಯರಿಗಿಂತ ನೀನು ಪೂರ್ತಿ ಭಿನ್ನಳಾಗಿದೀಯ, ಪೂರ್ತಿ ಭಿನ್ನಳಾಗಿದೀಯ. ಅವರೆಲ್ಲ ವಾಸ್ತವಿಗಳು, ಸ್ವಾರ್ಥಕೂಲಿಗಳು. ಆದರೆ ನೀನು ಅದ್ಭುತವಾದವಳು, ಒಬ್ಬ ಕನಸುಗಾರ್ತಿ. ನೀನು ಪೂರ್ಣವಾಗಿ

ನಿನ್ನ ಭ್ರಾಮಕತೆಯಲ್ಲಿ ಬದುಕತಿದೀಯ. ಪ್ರಾಚೀನ ಹಿರಿಯರ ಘನತೆ ನಿನ್ನ ಒಳಗಿದೆ. ನೀನೊಬ್ಬಳು ಪ್ರಾಚೀನ ಸುಂದರಿ. ನಿನ್ನ ಹಿರಿ ಮುತ್ತಜ್ಜಿಯರಲ್ಲಿ ಯಾರೋ ಒಬ್ಬರು ಸಾಲೋಮನ್ ದೊರೆಯ ಅಂತಃಪುರದಲ್ಲಿ ಕುಳಿತಿರೋ ಸಾಧ್ಯತೆ ಇದೆ.... ನಮ್ಮ ಪೂರ್ವಜರ ಬಗ್ಗೆ ನಮಗೆ ತಿಳಿದಿರೋದು ಎಷ್ಟು ? ಸ್ಲಾವ್ ಭಾಷಿಕರಾದ ನಾವು ಯೌವ್ವನಿಗರು, ಈಗ ತಾನೆ ಕಾಡಿನಿಂದ ಹೊರಗೆ ಬಂದಿದೀವಿ. ನೀನು ಇನ್ನೂ ಹಳೆ ತಲೆಮಾರಿನಲ್ಲಿಯೇ ಇದೀಯ. ಆದ್ದರಿಂದಲೇ ನಮ್ಮ ಮಧ್ಯೆ ಶಾಂತಿ ಅನ್ನೋದು ಇಲ್ಲದ ಹಾಗಾಗಿದೆ. ನಾವು ಯಾವಾಗ ಪ್ರೀತಿಸ್ತೀವೋ ಆವಾಗ ಬಿಟ್ಟು ನಮ್ಮ ಗಡಿಗಳೆಲ್ಲ ಕಾಣದ ಹಾಗೆ ಆಗಿವೆ. ಆಮೇಲೆ ನಾವು ಹೂಳೋಕೆ, ಸುರಿಯೋಕೆ ಬಯಸ ತೀವಿ. ಯಾರಾದರೂ ಹೇಳಬಹುದು, ನಮ್ಮ ವೈನ್ ನಿಮ್ಮ ಚರ್ಮದಲ್ಲಿ ಇದೆ ಅಂತ. ಬಾ, ನಾನು ಬಹಳ ಹೊತ್ತು ಕಾಯೋಕೆ ಆಗಲ್ಲ. ನಾನು ನಿನಗೆ ಚುಂಬನ ನೀಡಬೇಕು."

"ಜನರಲ್ ದೊಡ್ಡವರು."

"ಏನೂ ಹೇಳಬೇಡ. ನೀನು ನನ್ನವಳು."

ಇವನು ತನ್ನ ಕುರ್ಚಿಯಿಂದ ಎದ್ದು ಬಂದ. ಇವಳಿಗೆ ಚುಂಬನವನ್ನಿತ್ತ, ಇವಳ ತುಟಿ ಮೇಲೆ ತುಟಿ ಒತ್ತಿದ. ಇವಳು ಮುದುಡಿಕೊಂಡಳು. ತನ್ನ ಮೊಳಕಾಲುಗಳನ್ನು ಮೇಲೆ ಸೆಳೆದುಕೊಂಡಳು. ಇವನು ಇವಳನ್ನು ಅರ್ಧ ಎತ್ತಿಕೊಂಡಂತೆ, ಅರ್ಧ ನಡೆಸುತ್ತಿರುವಂತೆ ಪಕ್ಕದ ಕೋಣೆಗೆ ಕರೆದೊಯ್ದ. ಫೆಲಾ ವಿರೋಧಿಸಲು ಯತ್ನಿಸಿದಳು. ಆದರೆ ಷಮೋಲ್‌ಸ್ಕಿ ಪ್ರಾಣಿಯಾಗಿದ್ದ. ಇವಳ ಹ್ಯಾಟನ್ನು ತೆಗೆದು ಎಸೆದ. ಇವಳನ್ನು ಹಾಸಿಗೆಯ ಮೇಲೆ ತಳ್ಳಿದ. ಇವಳ ಉಡುಪುಗಳೊಂದಿಗೆ ಕಿತ್ತಾಡಿದ. ಇವಳು ಕೂಗಿ ಕೊಳ್ಳಲು ಯತ್ನಿಸಿದಳು. ಆದರೆ ಇವನು ಇವಳ ಬಾಯಿಯ ಮೇಲೆ ತನ್ನ ಮುಂಗೈ ಯನ್ನು ಮುಚ್ಚಿದ್ದ. ಎಲ್ಲವೂ ಸ್ವಲ್ಪದರಲ್ಲಿಯೇ ಲಜ್ಜೆ ಇಲ್ಲದಂತೆ ಇವಳು ಎಂದೂ ಊಹಿಸಿರದ ಕ್ರೌರ್ಯದಲ್ಲಿ ಘಟಿಸಿತು. ಇವನು ಶೃಂಗಾರ ವಸ್ತ್ರಗಳ ದಾರಗಳನ್ನು ಹಿಡಿದು ಎಳೆದ. ಬೆಡ್‌ರೂಂ ಕತ್ತಲುಗವಿಯಿತು. ಇವನು ತನ್ನನ್ನು ತಾನು ಇವಳ ಮೇಲೆ ಎಸೆದುಕೊಂಡ.

"ಸೂಳೆಯೇ ! ಯಹೂದಿ ಹಾದರಗಿತ್ತಿಯೇ !"

೪

ಟೆಲಿಫೋನ್ ಟ್ರಂಗುಟ್ಟಿತು. ಟ್ರಂಗುಡುತ್ತಲೇ ಇತ್ತು. ಪಷೋಲ್‌ಸ್ಕಿ ಅರೆನಗ್ನ ವಾಗಿ ಫೆಲಾಳಿಂದ ಮೇಲೆ ಎದ್ದ, ರಿಸೀವರ್ ಎತ್ತಿಕೊಂಡ. ಇದು ಒಬ್ಬ ಹೆಂಗಸಾಗಿದ್ದಳು, ಇವನು ಅವಳೊಂದಿಗೆ ಜಗಳವಾಡಿದ. ಕೊನೆಯಲ್ಲಿ ಕೂಗಿದ "ಮಿಂಚು, ಚಳಿ. ಕಾಲರಾ ಬಡಕೊಂಡಿದೆ ನಿನಗೆ !" ಫೋನ್ ಮತ್ತೆ ಬಾರಿಸಿತು. ಮತ್ತೆ ಅದೇ ಹೆಂಗಸು. ಏಕೆಂದರೆ ಪಷೋಲ್‌ಸ್ಕಿ ರಿಸೀವರ್ ಅನ್ನು ದಡಕ್ಕನೆ ಕೆಳಗಿರಿಸಿದ್ದ. ಇವನ ಒಳ ಚಡ್ಡಿಗೆ ರಕ್ತದ ಕಲೆಯಾಗಿತ್ತು. ಫೆಲಾಳಲ್ಲಿ ರಕ್ತ ಹರಿಯುತ್ತಿತ್ತು. ಈಗಲೂ ಇವಳು ರಕ್ತ ಸುರಿಸುತ್ತಿರುವಂತೆಯೇ ಇತ್ತು. ಇಲ್ಲಿ ಹಾಸಿಗೆಯ ಮೇಲೆ ಮತ್ತು ಕಾರ್ಪೆಟ್ ಮೇಲೆಯೂ ರಕ್ತವಿತ್ತು.

"ನಾನು ಬಹಳ ಕನ್ಯೆಯರನ್ನ ಪಡೆದಿದ್ದೆ. ಆದರೆ ಯಾರೂ ನಿನ್ನಷ್ಟು ಸುರಿಸಿರಲಿಲ್ಲ" ಪಷೋಲ್‌ಸ್ಕಿ ಹೇಳಿದ.

ಇವನು ಫೆಲಾಳನ್ನು ಚುಂಬಿಸಿದ, ಗದರಿದ. ಕ್ಷಣಾರ್ಧದಲ್ಲಿಯೇ ಇವನು ಇವಳಿಗೆ ಹೇಳಿದ. ಜನರಲ್ ಸ್ಟಾಫ್‌ನಿಂದ ಪ್ರತಿನಿಧಿಗಳು ಬರಲಿದ್ದು ಇವನು ಅವರನ್ನು ಬರಮಾಡಿಕೊಳ್ಳಬೇಕಿದೆ. ಒದ್ದೆಯಾಗಿದ್ದ ತನ್ನ ಅಂಡರ್‌ವೇರನ್ನು ತೆಗೆದುಕೊಂಡ ಇವನು ಅದನ್ನು ಫ್ಲೋರ್‌ನ ಮೇಲೆ ಎಸೆದ. ಬಾಗಿಲ ಗಂಟೆ ಬಾರಿಸಿತು. ಪಷೋಲ್‌ಸ್ಕಿ ಬಾಗಿಲನ್ನು ಅರ್ಧ ತೆರೆದ. ಒಂದು ಟೆಲಿಗ್ರಾಂ ಸ್ವೀಕರಿಸಿದ. ಒಂದಿಷ್ಟು ಶುಚಿಯಾಗಿಸಿ ಕೊಳ್ಳಲು ಬಾತ್‌ರೂಮಿಗೆ ಹೋದ. ಆದರೆ ಫೋನ್ ಬಾರಿಸಿತು. ಇವನು ತನ್ನ ಮಾನವನ್ನು ಮುಚ್ಚಿಕೊಳ್ಳದಂತೆಯೇ ಹೊರಳಿ ಬಂದ.

ಫೆಲಾ ಅಳುತ್ತಿದ್ದಳು. ಪಷೋಲ್‌ಸ್ಕಿ ಕೂಗಿದ. "ಸಾಕು, ಹೆಣ್ಣಾಗಿ ಅಳಬೇಡ. ಯುದ್ಧಭೂಮೀಲಿ ನಾವು ಇದಕ್ಕೂ ಬಹಳ ರಕ್ತ ಕಳಕೊಳ್ಳುತೀವಿ. ನಾನು ಒಂದು ಸಲ ಕಾಗೆಗಳು ನನ್ನ ಕಣ್ಣು ಕುಕ್ಕೋಕೆ ಕಾಯುತ್ತಿದ್ದಾಗ ಒಂದು ನರಿ ಬಿಲದಲ್ಲಿ ಮಲಗಿದೀನಿ." ಅವಳಿಗೆ ಅವಳ ಉಡುಪುಗಳನ್ನು ಕೊಟ್ಟ. ಕಪಾಟಿನೊಳಗೆ ತೂಗು ಹಾಕಿದ್ದ ಬೇರೆ ಒಂದನ್ನೂ ಕೂಡ ಇವಳಿಗಾಗಿ ತಂದ. ಆದರೆ ಫೆಲಾ ತೊಡಲು ಇದು ತುಂಬ ದೊಡ್ಡ ದಾಗಿತ್ತು. ಇವನು ಒಂದು ಸೂಜಿ ಮತ್ತು ದಾರಕ್ಕಾಗಿ ಹುಡುಕಿದ. ಆದರೆ ಮತ್ತೆ ಟೆಲಿಫೋನ್ ಬಾರಿಸಿತು. ಇದನ್ನು ಮೇಲೆತ್ತಿಕೊಂಡ ಇವನು ಇವಳತ್ತ ಹೊರಳಿದ.

"ನೀನು ಬೇಗ ಇಲ್ಲಿಂದ ಹೊರಗೆ ಹೋಗಬೇಕು."

"ದಯವಿಟ್ಟು ನನ್ನನ್ನ ಒಂದೈದು ನಿಮಿಷ ರೂಮಿನಲ್ಲಿಯೇ ಬಿಡಿ", ಇವಳು ಉತ್ತರಿಸಿದಳು.

"ನೀನು ಅವರ ಮುಂದೆ ನನ್ನ ಮರ್ಯಾದೆ ಕಳೆಯಬೇಡ."

"ದಯವಿಟ್ಟು ಬೇಡಿಕೊಳ್ಳತೀನಿ."

ಇವನು ಹೊರಗೆ ಹೋದ. ಇವಳು ತನ್ನನ್ನು ನೇರವಾಗಿಸಿಕೊಂಡು ಮೇಲೆ ಎದ್ದಳು. ಇವಳ ಉಡುಗೆಗಳು ಹರಿದಿದ್ದವು, ಕಲೆಯಾಗಿದ್ದವು. ಇವಳ ಅಂಡರ್‌ವೇರ್ ಬಳಸಲಾಗದಂತಿತ್ತು. ಇದನ್ನು ಇವಳು ತನ್ನ ವ್ಯಾನಿಟಿ ಬ್ಯಾಗ್‌ನಲ್ಲಿ ತುರುಕಿಕೊಂಡಳು. ಕುಪ್ಪಸವನ್ನು ಹೊರಳಿ ತೊಡಲೆತ್ನಿಸಿದಳು. ಆದರೆ ಸಾಧ್ಯವಾಗಲಿಲ್ಲ. ಬಾಗಿಲ ಸದ್ದಿನ ಸೂಚನೆ ನೀಡದಂತೆಯೇ ಷಪೋಲ್‌ಸ್ಕಿ ರೂಮಿನೊಳಗೆ ಪ್ರವೇಶಿಸಿದ. ಆಗಲೇ ಡ್ರೆಸ್ ಮಾಡಿಕೊಂಡಿದ್ದ. ಇವನ ಬಾಯಿಯ ಅಂಚಿನಲ್ಲಿ ಒಂದು ಸಿಗರೇಟ್ ತೂಗಿಕೊಂಡಿತ್ತು. ಅವನು ಇವಳಿಗೆ ಕೂಗಿ ಹೇಳಿದ. "ದುರಂತ ನಾಯಕಿ ಹಾಗೆ ನಟಿಸಬೇಡ. ನೀನು ಒಬ್ಬ ಗಂಡಸನ್ನ ಹುಡುಕಿಕೋ ಅಷ್ಟೇ, ಬಸ್ತಾ!" ಗಂಡ ಎಂಬ ಪದ ಕೇಳಿದೊಡನೆ ಫೆಲಾ ಅಳಲಾರಂಭಿಸಿದಳು. ತನ್ನದೇ ಎನ್ನಲಾಗದ ಧ್ವನಿಯಲ್ಲಿ ಚೀರಿದಳು "ನನ್ನನ್ನು ತಳ್ಳಬೇಡಿ, ನಾನು ನಾಯಿಯಲ್ಲ."

"ಜನರಲ್‌ಗಳು ನಿನ್ನನ್ನ ಇಲ್ಲಿ ನೋಡೋಕೆ ಅವಕಾಶ ಕೊಡೋಲ್ಲ."

ಇವನು ಇವಳನ್ನು ಬಲವಂತವಾಗಿ ಇವಳ ಕುಪ್ಪಸದೊಳಗೆ ತೂರಿಸಿದ. ಇವಳ ಉಡುಗೆಗೆ ಸೇಫ್ಟಿ ಪಿನ್ ಒಂದನ್ನು ಹುಡುಕಿದ. ತನ್ನ ಟ್ರೌಸರ್ ಜೇಬಿಗೆ ಕೈ ತೂರಿಸಿ ಬ್ಯಾಂಕ್ ನೋಟುಗಳ ಕಂತೆಯೊಂದನ್ನು ಹೊರಗೆ ತೆಗೆದ. ಫೆಲಾ ತನ್ನ ಕೂದಲುಗಳನ್ನು ಹಿಡಿದುಕೊಂಡಳು. ಹಣವನ್ನು ತಿರಸ್ಕರಿಸಿದಳು.

"ನಾವು ಮತ್ತೆ ಭೇಟಿಯಾಗೋಣ" ಇವನು ಹೇಳಿದ. "ನಾನು ನಿನ್ನನ್ನ ಪ್ರೀತಿಸತೀನಿ. ಆದರೆ ನೀನು ಈಗ ಹೋಗಬೇಕು. ಹೋಗದಿದ್ದರೆ ನಾನು ತಳ್ಳತೀನಿ."

"ನಾನು ಬೀದೀಲಿ ಹೀಗೆ ಹ್ಯಾಗೆ ಹೋಗಲಿ?"

"ಒಂದು ಟ್ಯಾಕ್ಸಿ ತಗೋ, ಹೋಟೆಲ್‌ಗೆ ಹೋಗು."

"ಅವರು ನನ್ನನ್ನ ಒಳಗೆ ಸೇರಿಸೋದಿಲ್ಲ, ಕತ್ತಲಾಗೋತನಕವಾದರೂ ನನ್ನನ್ನ ಕಾಯೋಕೆ ಬಿಡಿ."

"ಪಿಲ್ಸುಡ್‌ಸ್ಕಿ ಅವರೇ ಇಲ್ಲಿಗೆ ಬರತಿದಾರೆ !"

ಇವಳನ್ನು ತೋಳಿನಲ್ಲಿ ಎತ್ತಿಕೊಂಡ ಇವನು ಕಾರಿಡಾರ್‌ನ ಉದ್ದಕ್ಕೂ ಇವಳನ್ನು ಕರೆದು ತಂದ. ಹೀಗೆ ಕರೆತರುವಾಗ ಇವಳ ಕೈ ಹಾಗೂ ಮುಖವನ್ನು ಮುದ್ದಿಸಿದ. ಇವಳಿಗೆ ಇವನು ತನ್ನ ಕರ್ಚೀಫ್ ಕೊಟ್ಟ. ಬಾಗಿಲನ್ನು ತೆರೆದ ಇವನು ಇವಳನ್ನು ಕೊನೆಯದಾಗಿ ತಳ್ಳಿದ. ಇವಳ ಕುತ್ತಿಗೆಯ ಮೇಲೆ ಮುತ್ತಿಟ್ಟ. ಆಮೇಲೆ ಇವನು ಇವಳಿಗೆ ಹೇಳಿದ, "ನಾನು ನಿನ್ನನ್ನ ಯಾವಾಗಲೂ ನೆನಪಿನಲ್ಲಿ ಇಟ್ಟು ಕೊಳ್ಳತೀನಿ" ದಪ್ಪನೆ ಬಾಗಿಲನ್ನು ಮುಚ್ಚಿದ.

ಫೆಲಾ ಮೆಟ್ಟಿಲುಗಳ ಮೇಲೆ ಕೆಳಗಿಳಿದಳು. ಮಾರ್ಬಲ್ ಮೇಲೆ ರಕ್ತ ತೊಟ್ಟಿಡುತ್ತಿತ್ತು, ಮಧ್ಯದ ಕಾರ್ಪೆಟ್ ಹಾಸಿನ ಮೇಲೆಯೂ ಕಲೆ ಮೂಡುತ್ತಿದ್ದವು. ಕರ್ಚೀಫನ್ನು ಮುದುಡಿದ ಇವಳು ಇದನ್ನು ತೆರೆದ ಗಾಯಕ್ಕೆ ತಳ್ಳಿಕೊಂಡಳು. ನಿಲ್ಲಿಸಲಾಗದಂತೆ ಇವಳು ಅಳುತ್ತಲೇ ಇದ್ದಳು. ಗೇಟ್‌ನಿಂದ ಹೊರಗೆ ಬಂದವಳು ತನ್ನ ಮನೆಗೆ ಯಾವ ಕಡೆ ಹೋಗಬೇಕೆಂದು ತಿಳಿಯದಂತೆ ಸುತ್ತಲೂ ನೋಡಿದಳು. ಮಬ್ಬಿನಲ್ಲಿ ಸಾಲುಮರಗಳ ಮರ್ಜಲ್‌ಕೋವ್‌ಸ್ಕಿ ಇಕ್ಕೆಡೆಯ ಬೀದಿ ಮಸಕಾಗಿತ್ತು, ಕಲ್ಲು ಹಾಸಿನ ದಾರಿ ಏರುಪೇರಾಗಿರುವಂತೆ ಕಾಣಿಸುತ್ತಿತ್ತು. ಸಿನಿಮಾ ಟಾಕೀಸ್‌ಗಳಿಂದ, ಅಂಗಡಿಗಳಿಂದ, ಎಕ್ಸಿಬಿಷನ್‌ಗಳಿಂದ ಜನಜಂಗುಳಿ ಸಾಲುಗಟ್ಟುತ್ತಿರುವಂತೆ ಹೊರಗೆ ಬರುತ್ತಿತ್ತು. ಟ್ರಾಂಬೆಲ್ ಗ್ರಿಂಗ್ರಿಂ ಗುಡುತ್ತಿದ್ದವು, ಆಟೋಗಳು ಪೀಪೀಂ ಸದ್ದಿಡುತ್ತಿದ್ದವು. ನ್ಯೂಸ್‌ಪೇಪರ್ ಮಾರಾಟದ ಹುಡುಗರು ಹೆಡ್‌ಲೈನ್‌ಗಳನ್ನು ಕೂಗಿಡುತ್ತಿದ್ದರು. ಸ್ವರ್ಗದಲ್ಲಿರುವ ದೈವವೇ, ಈ ದಿನ ಹೇಗೆ ಕೊನೆಯಾಯಿತು ! ಫೆಲಾ ಕುರುಡಿಯಂತೆ ನಡೆಯಲಾರಂಭಿಸಿದ್ದಳು. ನಗರದ ನಡುವಿನ ಮನೆಗೆ ಯಾವೆಡೆಯಿಂದ ಹೋಗಿ ಸೇರಬೇಕು ; ಉಪನಗರವಾದ ಮೊಕೊಸೋವ್‌ಗೆ ಹೋಗುತ್ತಿದ್ದೆನೆಯೇ ಎನ್ನುವುದನ್ನೆಲ್ಲ ಅರಿಯದಂತೆ ನಡೆಯುತ್ತಿದ್ದಳು. ಟ್ರಾಲಿಗೆಂದು ನನ್ನಲ್ಲಿ ಹದಿನೈದು ಗ್ರೋಷನ್‌ಗಳನ್ನಾದರೂ ಇರಿಸಿಕೊಂಡಿದ್ದರೆ ? ಇವಳು ಯೋಚಿಸಿದಳು. ಜನ ಇವಳತ್ತ ನೋಡುತ್ತಿದ್ದರು. ಆದರೆ ಇವಳು ದೃಷ್ಟಿಯನ್ನು ಕೆಳಹರಿಸಿದ್ದಳು, ಕಲ್ಲುಹಾಸಿನ ಮೇಲೆಯೇ ನೆಟ್ಟುಕೊಂಡಿದ್ದಳು. ಇವಳ ಹಿಂಬದಿಯಲ್ಲಿ ಯಾರೋ ಇವಳನ್ನು ಕರೆದಂತಾಯಿತು.

ಒಬ್ಬ ಹೆಂಗಸು ನಗುತ್ತಿರುವಂತಾಯಿತು. ಇವಳಿಗೆ ಪೊಲೀಸ್‌ನವನ ವಿಷಲ್ ಕೇಳಿಸಿತು. ತನ್ನನ್ನು ಅರೆಸ್ಟ್ ಮಾಡುವರೇನೋ ಎಂಬಂತೆ ಭಯವಾಯಿತು. ಇವಳು ಜರುಸಲೇಮ್ ಮಾರ್ಗವನ್ನು ತಲುಪಿದಳು. ಸರಿಯಾದ ದಾರಿಯಲ್ಲಂತೂ ನಡೆಯುತ್ತಿದ್ದಾಳೆ. ಇವಳು ಬೆಂಚಿನಲ್ಲಿ ಕೂರಬಯಸಿದಳು. ಆದರೆ ಎಲ್ಲ ಜಾಗಗಳೂ ತುಂಬಿದ್ದವು. ಗಾಯ ಉರಿಯುತ್ತಿತ್ತು. ಕರ್ಚೀಫ್ ಕೆಳಗೆ ಜಾರುತ್ತಿರುವಂತೆ, ಹೊರಗೆ ಉದುರಿ ಬೀಳುತ್ತಿರುವಂತೆ ಇತ್ತು. ಸೇಫ್ಟಿ ಪಿನ್ ಕಿತ್ತು ಹೊರಗೆ ಬಂದು ಇವಳ ತೊಡೆಗೆ ಚುಚ್ಚುತ್ತಿತ್ತು. ಬಿಗಿ ಷೂಗಳಿಂದ ಇವಳ ಪಾದಗಳು ನೋಯುತ್ತಿದ್ದವು, ಹೈಹೀಲ್ಸ್‌ಗಳು ಇವಳ ತೋಲನವನ್ನು ಹಿಡಿಯಲಾಗದಂತೆ ಹೊರಳುತ್ತಿದ್ದವು. ಥಟ್ಟನೆ ಇವಳು ಜಾರಿದಳು, ಉರುಳಿಬಿದ್ದಳು. ಹೀಗೆಯೇ ನಿಶ್ಚಲಳಾದಳು. ಇವಳ ಕಾಲುಚೀಲಗಳು ಕೆಳಗೆ ಬಂದಿದ್ದವು. ಬಟ್ಟೆಗಳಲ್ಲಿನ ಹೊಲಿಗೆಗಳು ಆಳಿದುಕೊಳ್ಳುತ್ತಿದ್ದವು. ಕಲೆಗಟ್ಟಿದ್ದ ಅಂಡರ್‌ವೇರನ್ನು ಹೊರಗೆ ತೋರಿಸುತ್ತಿದ್ದ ತನ್ನ ವ್ಯಾನಿಟಿ ಬ್ಯಾಗನ್ನೂ ಇವಳು ಮುಚ್ಚಲಿಲ್ಲ. ನಾನು ವಿಷವನ್ನೇನಾದರೂ ನನ್ನಲ್ಲಿ ಇರಿಸಿಕೊಂಡಿದ್ದರೆ - ದಿಟವಾಗಿಯೂ ನಾನು ಇಲ್ಲಿಯೇ ಸಾಯುವಂತಾಗಿದ್ದರೆ, ಇದೇ ಈ ಜಾಗದಲ್ಲಿಯೇ ! ಇವಳು ಮುಂದೆ ಹೊರಟಳು. ಇವಳು ಮನೆಯನ್ನು ಮುಟ್ಟಲೇಬೇಕು.

ಕತ್ತಲಾಯಿತು, ದೇವರೇ ! ಬೀದಿ ದೀಪಗಳು ಹೊತ್ತಲಾರಂಭಿಸಿದವು. ಫೆಲಾ ಅರೆಗುರುಡಿಯಂತೆ ನಡೆಯುತ್ತಿದ್ದಳು. ಮುಖ್ಯವಾದ ವಿಷಯವಾಗಿದ್ದುದು ಎಂದರೆ ಕೆಳಗೆ ಬೀಳದಂತೆ ಇರುವುದು. ಕೊನೆಗೂ ಇವಳು ಹೋಲಿ ಕ್ರಾಸ್ ಬೀದಿಯನ್ನು ತಲುಪಿದಳು. ಇವಳು ವಾಸವಿದ್ದ ಪನ್‌ಸ್ಕ ಬೀದಿಯೆಡೆಗೆ ಹೊರಳಿದಳು. ಅವ್ವನಿಗೆ ನಾನು ಏನು ಹೇಳಲಿ ? ನಾನು ಏನನ್ನು ಹೇಳಬಹುದು ? ಇದೊಂದು ಅಪಮಾನದ್ದು. ಫೆಲಾ ದೇವರನ್ನು ಪ್ರಾರ್ಥಿಸಬೇಕೆಂದುಕೊಂಡಳು. ಆದರೆ ಏಕೆ ? ದೇವರೂ ಕೂಡ ಇವಳಿಗೆ ಹೆಚ್ಚಿನದಾಗೇನೂ ನೆರವೀಯಲಿಲ್ಲ. ಇವಳು ಷಟರ್ ಮುಚ್ಚಿರುವ ಒಂದು ಅಂಗಡಿಯನ್ನು ಕಂಡಳು, ಅಲ್ಲಿಯೇ ಮೆಟ್ಟಿಲ ಮೇಲೆ ಕುಳಿತಳು. ತನ್ನ ಕಾಲುಗಳಿಗೆ ಏನಾಗಿದೆ ಎನ್ನುವುದನ್ನು ನೋಡಿಕೊಂಡಳು. ಹಿಮ್ಮಡಿಯ ಚರ್ಮ ಕಿತ್ತು ಬಂದಿತ್ತು, ಕಾಲುಚೀಲ ರಕ್ತದಿಂದ ನೆನೆದಿತ್ತು. ಇವಳು ಒಂದು ಪೇಪರ್ ಹಾಳೆಗಾಗಿ ಹುಡುಕಿದಳು. ಆದರೆ ಒಂದೂ ಕಾಣಲಿಲ್ಲ. ಕುಡುಕನೊಬ್ಬ ವಾರೆಗಣ್ಣಿನ ನೋಟದಲ್ಲಿ ನೋಡುತ್ತ ಇವಳ ಮೇಲೆಯೇ ಬೀಳುತ್ತಿರುವವನಂತೆ ತೂರಾಡುತ್ತ ಇವಳ ಮುಂದೆ ಬಂದ. ಸರ್ರನೆ ಮೇಲೆದ್ದಳು, ಜೋರಾಗಿ ಹೊರಟಳು. ಪನ್‌ಸ್ಕ ಬೀದಿಗೆ ಬಂದಳು. ಗ್ಯಾಸ್‌ದೀಪಗಳು

ಉರಿಯುತ್ತಿದ್ದವು. ಅರೆಗತ್ತಲಿನಲ್ಲಿ ಮಕ್ಕಳು ಆಟವಾಡುತ್ತಿದ್ದವು. ಇಲ್ಲಿಯೇ ಹುಟ್ಟಿ ಬೆಳೆದಿದ್ದ ಇವಳಿಗೆ ಈ ಬೀದಿ ಹೊಸದಾಗಿ ಕಾಣುತ್ತಿತ್ತು. ಫೆಲಾ ತಾನು ವಾಸವಿದ್ದ ಕಟ್ಟಡದತ್ತ ಬಂದಳು. ಅಂಗಳಕ್ಕೆ ಹೊರಳಿದಳು. ಮೆಟ್ಟಿಲುಗಳನ್ನು ಹತ್ತಲಾರಂಭಿಸಿದಳು. ಇವಳನ್ನು ಯಾರೊಬ್ಬರೂ ತಡೆಯಲಿಲ್ಲ ! ಸಣ್ಣಗ್ಯಾಸ್ ದೀಪವೊಂದು ಮಸಕು ಬೆಳಕನ್ನು ಹರಡಿತ್ತು. ಫೆಲಾ ಒಂದೊಂದೇ ಮೆಟ್ಟಿಲನ್ನು ಹತ್ತುತ್ತಿದ್ದಳು. ತಾನು ಹೇಗೆ ಬಿಸಿ ಕಳೆದುಕೊಂಡಿದ್ದೇನೆ ಎನ್ನುವುದು ಈಗ ತಿಳಿಯಲಾರಂಭಿಸಿತು. ಇವಳ ಮೊಳಕಾಲು ಗಳು ಅದುರುತ್ತಿದ್ದವು. ಮೆಟ್ಟಿಲುಗಳ ಬದಿಯ ಪಟ್ಟಿಯನ್ನು ಹಿಡಿದುಕೊಂಡಳು. ತನ್ನೊಂದಿಗೆ ಕೀಲಿಯನ್ನು ಒಯ್ದಿದ್ದರೆ ಇವಳು ತಾನಾಗಿಯೇ ಒಳಗೆ ಹೋಗಬಹುದಿತ್ತು ಮತ್ತು ನೇರವಾಗಿ ಬಚ್ಚಲಿಗೂ ಹೋಗಬಹುದಿತ್ತು. ಈಗ ಬಾಗಿಲು ಬಡಿಯಬೇಕು. ಇವಳ ಅಮ್ಮ ಎಲ್ಲವನ್ನೂ ತಕ್ಷಣವೇ ತಿಳಿದುಕೊಳ್ಳುತ್ತಾಳೆ.

ಅದ್ಭುತವೆಂಬಂತೆ ಬಾಗಿಲು ತೆರೆದೇ ಇದೆ. ನಡುಮನೆ ಮತ್ತು ಅಡುಗೆಕೋಣೆ ಗಳು ಕತ್ತಲಿನಲ್ಲಿವೆ. ಯಾರಾದರೂ ಬಾಗಿಲು ಮುರಿದಿದ್ದಾರೆಯೇ ? ಆದರೆ ಇಲ್ಲ. ಇವಳ ತಾಯಿ ಬಾಗಿಲು ತೆರೆದು ಹೊರಗೆ ಹೋಗಿದ್ದಾಳೆ. ಅಪ್ಪ ಆಚೆಯ ಕೋಣೆಯಲ್ಲಿ ಪೂರ್ವ ಬಾಗಿಲಿನತ್ತ ನಿಂತು ಬಾಗುತ್ತ ಸಂಜೆಯ ಪ್ರಾರ್ಥನೆ ಮಾಡುತ್ತಿರುವುದನ್ನು ಫೆಲಾ ಕಂಡಳು. ಬಿರುಸಾಗಿ ಬಚ್ಚಲಿಗೆ ಹೋದಳು. ಚಿಲಕ ಹಾಕಿಕೊಂಡ ನಂತರ ತಾನು ಕಳೆದು ಹೋಗಿರದಂತೆ ಇಲ್ಲಿಯೇ ಇದ್ದೆ ಎನ್ನಬಹುದು ಅನ್ನಿಸಿತು. ಇವಳು ಹೊರಗೆ ಹೋಗಬೇಕಿತ್ತು, ಬೇರೆ ಉಡುಪುಗಳನ್ನು ತೆಗೆದುಕೊಳ್ಳಬೇಕಿತ್ತು, ಕರೆಯಾಗಿರುವ ಅಂಡರ್ ವೇರನ್ನು ಬಚ್ಚಿಡಬೇಕಿತ್ತು. ಇವಳ ಅಮ್ಮ ಯಾವ ಕ್ಷಣದಲ್ಲಾದರೂ ಹೊರಳಿ ಬರಬಹುದು. ಅವಳು ಇಲ್ಲಿಯೇ ನೆರೆಯವರ ಹತ್ತಿರಕ್ಕೆ ಹೋಗಿರಬಹುದು. ಆದ್ದ ರಿಂದಲೇ ಬಾಗಿಲನ್ನು ತೆರೆದು ಹೋಗಿದ್ದಾಳೆ. ಫೆಲಾಳಿಗೆ ವಾಕರಿಕೆ ಬರುವಂತಾಯಿತು. ಹೊಟ್ಟೆ ಹೊಯ್ದಾಡುತ್ತಿತ್ತು, ಇವಳು ಮೂತ್ರ ಮಾಡಬೇಕಿತ್ತು. ಕರ್ಚೀಫ್ ಉದುರಿ ಹೋಗಿತ್ತು. ಬಿಸಿರಕ್ತ ಇವಳ ಒಳತೊಡೆಗಳನ್ನು ನೆನೆಸುತ್ತಿತ್ತು, ಫ್ಲೋರ್ ಮೇಲೆಯೂ ಸೋರಿ ಹರಿಯುತ್ತಿತ್ತು. ಮೊಂಬತ್ತಿ ಹಚ್ಚಲು ಇವಳಲ್ಲಿ ಬೆಂಕಿಪೊಟ್ಟಣವಿರಲಿಲ್ಲ. ಎದ್ದು ನಿಂತಳು, ವಾಂತಿ ಮಾಡಿಕೊಂಡಳು. ಇವಳ ಮುಂದೆ ಬೆಂಕಿಯ ಚಕ್ರಗಳು ಗರಗರನೆ ತಿರುಗಿದವು. ಇವಳ ನರಪಂಜರದೊಳಗೆ ದೀಪವೊಂದು ಪ್ರಜ್ವಲಿಸಿತು. ಫೆಲಾ ತನ್ನ ಕೈಗಳನ್ನು ಷೆಲ್ಫಿನಲ್ಲಿ ಇರಿಸಿ ಪೇಪರ್ ಸುರುಳಿಗಾಗಿ ತಡಕಿದಳು, ಒಂದು

ಕತ್ತರಿ ಸಿಕ್ಕಿತು. ತಕ್ಷಣ ಇವಳಿಗೆ ತಾನು ಏನು ಮಾಡಿಕೊಳ್ಳಬೇಕೆಂದು ತಿಳಿಯಿತು : ತನ್ನ ನರಗಳನ್ನು ಕತ್ತರಿಸಿಕೊಳ್ಳಬೇಕು. ದೇವರೇ ಈ ಉಪಕರಣವನ್ನು ಇವಳಿಗಾಗಿ ಇಲ್ಲಿ ಇರಿಸಿದ್ದಾನೆ. ಫೆಲಾ ಥರಗುಟ್ಟಿದಳು. ಇವಳಿಗೆ ಇದು ಅಂತ್ಯ ಎಂದು ತಿಳಿದಿತ್ತು. ಇದನ್ನು ಇವಳು ಈ ಹಿಂದೆಯೇ ಕನಸಿನಲ್ಲಿಯೋ ಅಥವಾ ಎಚ್ಚರದಲ್ಲಿಯೋ ಕಂಡಿದ್ದಳು. ಯಾವಾಗ ಎಂದು ನೆನಪಾಗಲಿಲ್ಲ.

ಫೆಲಾ ಪ್ರಾರ್ಥನೆಯೊಂದನ್ನು ಹೇಳಲಿಚ್ಛಿಸಿದಳು. ಬೈಬಲ್‌ನಿಂದ ಕೆಲವು ಪದಗಳನ್ನು, ಅಥವಾ ಇವಳಿನ್ನೂ ಚಿಕ್ಕವಳಾಗಿದ್ದಾಗ ಅಮ್ಮನೊಂದಿಗೆ ಓದುತ್ತಿದ್ದ ಯಾವುದನ್ನಾದರೂ ಹೇಳಬೇಕು ಅಂದುಕೊಂಡಳು. ಆದರೆ ಒಂದೂ ನೆನಪಾಗಲಿಲ್ಲ. "ದೇವರು ನನ್ನ ಆತ್ಮದ ಮೇಲೆ ದಯೆ ಇರಿಸಿದ್ದಾನೆ" ಗುನಗಿದಳು. ಟಾಯ್‌ಲೆಟ್ ಬಟ್ಟಲ ಮೇಲೆ ಕುಳಿತವಳು ತನ್ನ ಅಂಗೈನ ಮೇಲೆ ಇದೊಂದು ಬಟ್ಟೆ ಎಂಬಂತೆ ಕತ್ತರಿಸಿದಳು. ಥಟ್ಟನೆ ಎರಡನೆ ಜಾಗದಲ್ಲೂ ಕತ್ತರಿಸಿದಳು, ಮೂರನೆಯದೂ. ನಿಜಕ್ಕೂ ಇದು ಇವಳಿಗೆ ನೋವು ಎನಿಸಲಿಲ್ಲ. ದೇವರೇ, ನಾನು ಜೀವಂತ ಇರುವುದನ್ನು ಇನ್ನು ಯಾರೂ ನೋಡುವುದಿಲ್ಲ.

ಟಾಯ್‌ಲೆಟ್ ಬಟ್ಟಲ ಮೇಲೆ ಕುಳಿತಿದ್ದ ಫೆಲಾ ತನ್ನ ತಲೆಯನ್ನು ಗೋಡೆಯತ್ತ ವಾಲಿಸಿದಳು. ಸಾವಿಗೆ ಸಿದ್ಧಳಾದಳು. ತನ್ನ ಅಂಗೈಯಲ್ಲಿ ರಕ್ತ ಹರಿಯುತ್ತಿರುವುದು ಇವಳ ಅನುಭವಕ್ಕೆ ನಿಲುಕುತ್ತಿತ್ತು. ಇವಳು ಕೆಳಗೂ ರಕ್ತ ಹರಿಸುತ್ತಿದ್ದಳು. ಇವಳಿಗೆ ಪ್ರಜ್ಞೆ ಅಳಿಯುತ್ತಿರುವಂತಾಯಿತು, ಬವಳಿ ಬರುವಂತಾಯಿತು. ಇವಳ ಕಿವಿಗಳಲ್ಲಿ ಗಂಟೆಗಳು ಬಾರಿಸಿಕೊಂಡವು. ಇವಳ ಕಣ್ಣುಗಳ ಮುಂದೆ ಬಣ್ಣಗಳು ಹರಿದುಕ್ಕಿದವು. ಇವಳು ಇಲ್ಲಿದ್ದರೂ ಮತ್ತೆಲ್ಲಿಯೋ ಕೂಡ ಇದ್ದಳು. ಭಯ ಹಾರಿ ಹೋಗಿತ್ತು. ಏನೋ ಒಂದು ಹಿಗ್ಗಿಕೊಳ್ಳುತ್ತಿರುವಂತೆ ಮತ್ತು ಬೆಳೆದುಕೊಳ್ಳುತ್ತಿರುವಂತೆ ಕಾಣಿಸುತ್ತಿತ್ತು - ಈ ಜಗತ್ತಿನದಲ್ಲದ ಒಂದು ವಸ್ತು. ಒಂದು ಕಪ್ಪೆ, ಶ್ವಾಸ, ಒಂದು ಆಮೆಗಿಂತಲೂ ಬೇರೆಯಾದದ್ದು ಎಂದು ಇವಳು ಹೇಳದಾಗಿದ್ದಳು..... ಎಲ್ಲಿಂದಲೋ ಒಂದು ಗುಂಪು ಹತ್ತಿರವಾಗುತ್ತಿತ್ತು. ಡ್ರಂ ಬಡಿತದ ಹೊಡೆತಗಳು ತಾಳಗೈಯುತ್ತಿದ್ದವು. ಆನಂತರ ಒಂದು ದೊಡ್ಡ ಸದ್ದು, ಜೋರಾದ ಕೂಗು ಸಮೀಪವಾಯಿತು.

ಬಾಗಿಲು ಬಲವಂತವಾಗಿ ತೆರೆಯಿತು. ಫೆಲಾಳ ಅಪ್ಪ ಚೀರಿದ ; ಇವಳ ಅಮ್ಮ ಗೋಳಿಟ್ಟಳು. ನೆರೆಯವರು ಓಡೋಡಿ ಬಂದರು. ಇವರು ಫೆಲಾಳನ್ನು

ಹೊರಗೆ ಎತ್ತಿದರು, ಮೇಲೆತ್ತಿಕೊಂಡರು, ಹೊರಗೆ ಎತ್ತಿ ತಂದು ಇವಳ ಕೈಗೆ ಟವಲನ್ನು ಸುತ್ತಿದರು, ಯಾರೋ ಒಬ್ಬರು ಡಾಕ್ಟರನ್ನು ಕರೆತರಲು ಓಡಿದರು. ತನ್ನ ಜನರೆಲ್ಲ ಕೂಗಿಟ್ಟು ಅಳುತ್ತಿದ್ದರೆ, ತಮ್ಮ ಕೈಗಳನ್ನು ಬೀಸಾಡಿ ಗುದ್ದಿಕೊಳ್ಳುತ್ತಿದ್ದರೆ, ಪರೀಕ್ಷಿಸಲು ಮೇಲೆ ಬಾಗುತ್ತಿದ್ದರೆ ಫೆಲಾ ಸೋಫಾದ ಮೇಲೆ ಮಲಗಿದ್ದಳು. ಹೊಸ ಮನುಷ್ಯನೊಬ್ಬ ಇವಳ ಉಡುಗೆ ಕಳಚಿದ. ಇವಳಿಗೆ ಹೊದಿಸಿದ್ದನ್ನು ತೆಗೆದ. ನನಗೆ ನಾಚಿಕೆಯೇನಿಲ್ಲ, ಫೆಲಾ ಯೋಚಿಸಿದಳು. ಆದರೆ ನಾನು ಸಂತೋಷವಾಗಿ ಸಾಯತೀನಿ. ನಾನು ಅವನನ್ನ ಕ್ಷಮಿಸ್ತೀನಿ, ನಾನು ಕ್ಷಮಿಸ್ತೀನಿ. ಇವಳು ಒಂದು ಕಣ್ಣು ತೆರೆದಳು, ಸೈನಿಕನೊಬ್ಬ ರಕ್ತದಂತೆ ಕೆಂಪಿರುವ ಗುಲಾಬಿಗಳ ಬಕೆಯೊಂದಿಗೆ ಪ್ರವೇಶಿಸುತ್ತಿರುವುದನ್ನು ಕಂಡಳು. ಅವನ ಸೇಡು ಅತಿಯಾಯಿತು. ಫೆಲಾಳ ಶಕ್ತಿ ಕಿರುಗುಟ್ಟಿತು. ಇವನು ಮೃತ್ಯು ದೇವತೆಯ ದೂತನೇ ?

ಇವಳ ತಾಯಿ ಹೇಳುತ್ತಿದ್ದುದನ್ನು ಕೇಳಿಸಿಕೊಂಡಳು. "ಯಾರು ನೀನು ? ಏನು ಬೇಕು ನಿನಗೆ ? ಇದು ನಮಗಲ್ಲ."

ಸೈನಿಕ ಹೇಳಿದ : "ಜನರಲ್ ಅವರಿಂದ ಪ್ರೀತಿಯ ಫೆಲಾಳಿಗೆ ಶುಭಾಶಯಗಳು".

●

ಮತ್ತೆ ಮುಖಾಬಿಲೆ

ಟೆಲಿಫೋನ್ ಟ್ರಂಗುಟ್ಟಿತು. ಡಾ. ಮ್ಯಾಕ್ಸ್‌ಗೆ ಗ್ರೈತ್ಜೆರ್ ಎಚ್ಚರಗೊಂಡರು. ನೈಟ್ ಟೇಬಲ್ ಮೇಲಿನ ಗಡಿಯಾರ ಎಂಟು ಗಂಟೆಗೆ ಹದಿನೈದು ನಿಮಿಷಗಳಿರುವುದನ್ನು ತೋರಿಸಿತು. "ಇಷ್ಟು ಬೇಗ ಯಾರು ಫೋನ್ ಮಾಡ್ತಾರೆ?" ಗೊಣಗಿದರು. ರಿಸೀವರ್ ಎತ್ತಿ ಹಿಡಿದರು. ಹೆಂಗಸೊಬ್ಬಳ ದನಿ ಹೇಳಿತು, "ಡಾ. ಮ್ಯಾಕ್ ಗ್ರೈತ್ಜೆರ್, ಇಷ್ಟೊತ್ತಿನಲ್ಲಿ ನಿಮಗೆ ಫೋನ್ ಮಾಡತಿರೋದಕ್ಕೆ ಕ್ಷಮಿಸಿ. ಒಂದು ಕಾಲದಲ್ಲಿ ನಿಮಗೆ ಆತ್ಮೀಯಳಾಗಿದ್ದ ಹೆಂಗಸೊಬ್ಬಳು ತೀರಿಕೊಂಡಳು. ಲೀಜ ನೆಸ್ಲ್‌ಲಿಂಗ್."

"ದೇವರೇ!"

"ಶವಸಂಸ್ಕಾರ ಇವತ್ತು ಹನ್ನೊಂದಕ್ಕೆ. ಈ ವಿಷಯ ನಿಮಗೆ ತಿಳಿಯಲಿ ಅನ್ನಿಸ್ತು ನನಗೆ."

"ನೀವು ಹೇಳತಿರೋದು ಸರಿ. ಥ್ಯಾಂಕ್ಸ್, ಥ್ಯಾಂಕ್ ಯೂ. ಲೀಜ ನೆಸ್ಲ್‌ಲಿಂಗ್ ನನ್ನ ಜೀವನದಲ್ಲಿ ಮುಖ್ಯ ಪಾತ್ರ ವಹಿಸಿದಾಳೆ. ನಾನೀಗ ಮಾತಾಡತಿರೋದು ಯಾರ ಹತ್ತಿರ ಅಂತ ಕೇಳಬಹುದೇ ನಿಮ್ಮನ್ನ ?"

"ಪರವಾಗಿಲ್ಲ ಬಿಡಿ. ನೀವಿಬ್ಬರೂ ಬೇರೆ ಆದ ಮೇಲೆ ಲೀಜ ಮತ್ತು ನಾನು ಗೆಳತಿಯರಾಗಿದ್ದೆವು. ಸಂಸ್ಕಾರ ಗುತ್ತೆಸ್ಟಾಲ್ಟ್ ಸ್ಮಶಾನದಲ್ಲಿ ನಡೆಯುತ್ತೆ. ನಿಮಗೆ ಅಲ್ಲಿನ ಅಡ್ರೆಸ್ ಗೊತ್ತಿದೆಯಾ?"

"ಗೊತ್ತಿದೆ. ಥ್ಯಾಂಕ್ ಯೂ."

ಹೆಂಗಸು ರಿಸೀವರ್ ಇರಿಸಿದಳು.

ಡಾ. ಗ್ರೈತ್ಜೆರ್ ಸ್ವಲ್ಪ ಹೊತ್ತು ಮಲಗಿಯೇ ಇದ್ದರು. ಲೀಜ ಕೂಡ ಹೊರಟುಹೋದಳು. ಇಬ್ಬರೂ ಬೇರೆಯಾಗಿ ಹನ್ನೆರಡು ವರ್ಷ ಕಳೆದವು. ಇವರ ಮೇಲೆ ಅವಳಲ್ಲಿ ತುಂಬ ಪ್ರೀತಿಯಿತ್ತು. ಇಬ್ಬರ ಸಂಬಂಧ ಹದಿನೈದು ವರ್ಷಗಳಲ್ಲಿ ಕೊನೆಯಾಯಿತು. ಇಲ್ಲ, ಹದಿನೈದಲ್ಲ ; ಹದಿಮೂರು. ಕೊನೆಯ ಎರಡು ವರ್ಷಗಳು ಸಾಕಷ್ಟು ತಪ್ಪು ತಿಳಿವಳಿಕೆಗಳಿಂದ ಗೊಂದಲಮಯವಾಗಿದ್ದವು. ತುಂಬ ಕೆಟ್ಟತನದ

ಆಗಿನ ಮಾತುಗಳನ್ನೆಲ್ಲ ವಿವರಿಸಲಾಗುವುದಿಲ್ಲ. ಈ ಕೆಟ್ಟತನವೇ ಪ್ರಬಲವಾಗಿ ಈ ಪ್ರೇಮವನ್ನು ಪೂರ್ತಿಯಾಗಿ ಒಡೆಯಿತು. ಡಾ. ಗ್ರ್ಯೆತ್ಜರ್ ಮತ್ತು ಲೀಜ ನೆಸ್ಟ್‌ಲಿಂಗ್ ಮತ್ತೆ ಭೇಟಿಯಾಗಲಿಲ್ಲ. ಒಬ್ಬರಿಗೊಬ್ಬರು ಪತ್ರವನ್ನೂ ಬರೆಯಲಿಲ್ಲ. ಇವಳ ಸ್ನೇಹಿತೆಯೊಬ್ಬಳಿಂದ ಇವಳು ನಾಟಕ ನಿರ್ದೇಶಕನೊಬ್ಬನ ಜೊತೆ ಸಂಪರ್ಕ ಇರಿಸಿಕೊಂಡಿದ್ದಾಳೆ ಅನ್ನುವುದು ಇವರಿಗೆ ತಿಳಿದಿತ್ತು. ಇವಳ ಬಗ್ಗೆ ಇವರು ಕೇಳಿದ್ದು ಇದೊಂದು ವಿಷಯವನ್ನು ಮಾತ್ರ. ಈಗಲೂ ಲೀಜ ನೆಸ್ಟ್‌ಲಿಂಗ್ ನ್ಯೂಯಾರ್ಕ್‌ನಲ್ಲಿಯೇ ಇದ್ದಾಳೆ ಎನ್ನುವುದು ಇವರಿಗೆ ಗೊತ್ತಿರಲಿಲ್ಲ.

ಕೆಟ್ಟ ಸುದ್ದಿಯನ್ನು ಕೇಳಿ ಇವತ್ತು ಬೆಳಿಗ್ಗೆ ಡಾ. ಗ್ರ್ಯೆತ್ಜರ್ ತುಂಬ ಇಕ್ಕಟ್ಟಿಗೆ ಸಿಲುಕಿದರು. ಹೇಗೆ ಬಟ್ಟೆಯುಡಬೇಕು. ಸಂಸ್ಕಾರದ ಸ್ಥಳಕ್ಕೆ ಹೇಗೆ ಹೋಗಿ ತಲುಪಬೇಕು ಅನ್ನುವುದನ್ನು ನೆನಪಿಸಿಕೊಳ್ಳಲಾಗಲಿಲ್ಲ. ಇವರು ಅಲ್ಲಿಗೆ ಹೋಗಿ ತಲುಪಿದಾಗ ಇವರು ಹಾದುಹೋದ ರಸ್ತೆಬದಿಯ ಗಡಿಯಾರ ಒಂಬತ್ತು ಗಂಟೆಗೆ ಇಪ್ಪತ್ತೈದು ನಿಮಿಷಗಳಿರುವುದನ್ನು ತೋರಿಸುತ್ತಿತ್ತು. ಇವರು ಬಾಗಿಲು ತಳ್ಳಿದರು. ಸ್ವಾಗತಕಾರ ಇವರಿಗೆ ತುಂಬ ಬೇಗ ಬಂದಿದ್ದೀರಿ ಎಂದ. ಸಂಸ್ಕಾರ ಕ್ರಿಯೆ ಹನ್ನೊಂದರವರೆಗೂ ನಡೆಯುವುದಿಲ್ಲ.

"ನಾನು ಈಗ ಅವಳನ್ನ ನೋಡೋಕೆ ಸಾಧ್ಯವಿದೆಯಾ?" ಮ್ಯಾಕ್ಸ್ ಗ್ರ್ಯೆತ್ಜರ್ ಹೇಳಿದರು. "ನಾನು ಅವಳಿಗೆ ತುಂಬ ಹತ್ತಿರದ ಸ್ನೇಹಿತ. ಮತ್ತೆ...."

"ಅವಳನ್ನ ರೆಡಿ ಮಾಡಿದಾರೋ "ಇಲ್ಲವೋ ಕೇಳತೀನಿ" ಬಾಗಿಲ ಹಿಂದೆ ಹುಡುಗಿಯೊಬ್ಬಳು ಕಾಣಿಸಿದಳು.

ಅವಳು ಎಂದರೆ ಏನೆಂದು ಡಾ. ಮ್ಯಾಕ್ಸ್‌ಗ್ರ್ಯೆತ್ಜರ್ ಅರ್ಥ ಮಾಡಿಕೊಂಡರು. ಸತ್ತವರನ್ನು ಅವರ ಕುಟುಂಬದವರು ಮತ್ತು ಅಂತ್ಯ ಸಂಸ್ಕಾರಕ್ಕೆ ಬರುವವರಿಗೆ ತೋರಿಸುವ ಮೊದಲು ಸರಿಯಾಗಿ ಜೋಡಿಸುತ್ತಾರೆ.

ಹುಡುಗಿ ಒಂದು ಕ್ಷಣದಲ್ಲೇ ಹೊರಳಿ ಬಂದು ಹೇಳಿದಳು. "ಎಲ್ಲ ಮುಗಿದಿದೆ. ನಾಲ್ಕನೇ ಮಹಡಿ. ಮೂರನೇ ರೂಮು."

ಕರಿ ಉಡುಪಿನ ಮನುಷ್ಯನೊಬ್ಬ ಇವರನ್ನು ಎಲಿವೇಟರ್‌ನಲ್ಲಿ ಮೇಲೆ ಕರೆದೊಯ್ದು ಮೂರನೇ ರೂಮಿನ ಬಾಗಿಲು ತೆರೆದ. ಶವಪೆಟ್ಟಿಗೆಯಲ್ಲಿ ಲೀಜ ತನ್ನ ಭುಜಗಳನ್ನು ತೆರೆದುಕೊಂಡು ಮಲಗಿದ್ದಳು. ಅವಳ ಮುಖವನ್ನು ತೆಳು ಪರದೆಯಿಂದ

ಮುಚ್ಚಿತ್ತು. ಇವರು ಅವಳನ್ನು ಗುರುತಿಸಿದರು. ಏಕೆಂದರೆ ಅವಳ ಗುರುತು ಇವರಿಗೆ ತಿಳಿದಿತ್ತು. ಅವಳ ಕಪ್ಪುಗೂದಲು ಬಾಚದೆ ಕಳೆಗುಂದಿದ್ದವು. ಕೆನ್ನೆ ಕೆಂಪಾಗಿದ್ದವು. ಮುಚ್ಚಿಕೊಂಡಿದ್ದ ಅವಳ ಕಣ್ಣುಗಳ ಸುತ್ತಲಿನ ಗೆರೆಗಳು ಮೇಕಪ್‌ನಲ್ಲಿ ಮರೆಯಾಗಿದ್ದವು. ಕೆಂಪು ತುಟಿಗಳ ಮೇಲೆ ನಗುವಿನ ಸುಳಿವಿತ್ತು. ನಗುವನ್ನು ಹೇಗೆ ಮೂಡಿಸಿದ್ದಾರೆ ಅವರು? ಮ್ಯಾಕ್ಸ್‌ಗ್ರೈತ್ಜರ್ ಆಶ್ಚರ್ಯಗೊಂಡರು. ಒಂದು ಕಾಲದಲ್ಲಿ ಲೀಜ ಇವರಿಗೆ ಯಾಂತ್ರಿಕ ಮನುಷ್ಯಳಾಗಿ ಕಂಡಿದ್ದಳು. ಭಾವನೆಗಳಿಲ್ಲದ ಯಂತ್ರಮಾನವನಂತೆ. ಆನಂತರ ಆ ಗಡಸು ಅಳಿದಿದೆ. ಆದರೆ ಈಗ ಇದು ಹೊಸದಾದರೂ ದಿಟವಾಗಿದೆ. ಇವರಿಗೆ ದುಃಖವಾಗಲೂ ಇಲ್ಲ, ಶೋಕಿಸಲೂ ಇಲ್ಲ.

ಬಾಗಿಲು ತೆರೆದುಕೊಂಡಿತು. ಲೀಜಳನ್ನು ಹೋಲುವ ಮಂಕು ಕವಿದಂತಿರುವ ಒಬ್ಬ ಹೆಂಗಸು ಒಳಗೆ ಬಂದಳು. "ಇವಳು ಅವಳ ತಂಗಿ ಬೆಲ್ಲ". ಮ್ಯಾಕ್ಸ್ ಗ್ರೈತ್ಜರ್ ತಮ್ಮಲ್ಲಿಯೇ ಹೇಳಿಕೊಂಡರು. ಕ್ಯಾಲಿಫೋರ್ನಿಯಾದಲ್ಲಿ ವಾಸಿಸುತ್ತಿರುವ ತನ್ನ ಕಿರಿ ತಂಗಿಯ ಬಗ್ಗೆ ಲೀಜ ಸ್ವಲ್ಪ ವಿಷಯ ತಿಳಿಸಿದ್ದಳು. ಆದರೆ ಅವಳನ್ನು ಇವರು ಯಾವಾಗಲೂ ಭೇಟಿಯಾಗಿರಲಿಲ್ಲ. ಅವಳು ಶವಪೆಟ್ಟಿಗೆಯ ಬಳಿ ಹೋಗಲು ಇವರು ಬದಿಗೆ ಸರಿದರು. ತನ್ನ ದುಃಖವನ್ನು ಹೊರಹಾಕಿಕೊಂಡಾಗ ಅವಳನ್ನು ಹಿಡಿದು ಸಂಭಾಳಿಸಬೇಕು ಅಂದುಕೊಂಡರು. ಅವಳು ವಿಶೇಷವಾದ ಭಾವೋದ್ರೇಕವನ್ನು ತೋರಿಸಿಕೊಳ್ಳಲಿಲ್ಲ. ಅವಳನ್ನು ಆಕೆಯ ಅಕ್ಕನೊಂದಿಗೆ ಬಿಟ್ಟುಹೋಗಬೇಕು ಅಂದುಕೊಂಡರು. ಆದರೆ ಸ್ವಂತ ಅಕ್ಕನಾದರೂ ಹೆಣದೊಂದಿಗೆ ಇರಲು ಅವಳು ಹೆದರಿದಂತೆ ಕಂಡಿತು.

ಒಂದೆರಡು ಕ್ಷಣ ಉರುಳುವಷ್ಟರಲ್ಲಿ ಹಿಂದೆ ಹೊರಳಿದ ಅವಳು ಹೇಳಿದಳು, "ಹೌದು, ಇವಳು ಅವಳೇ."

"ನೀನು ಕ್ಯಾಲಿಫೋರ್ನಿಯಾದಿಂದ ಬಂದಿದೀಯಾ ಅನ್ನಿಸುತ್ತೆ" ಮ್ಯಾಕ್ಸ್ ಗ್ರೈತ್ಜರ್ ಹೇಳಿದರು. ಏನಾದರೂ ಹೇಳಬೇಕು ಎಂಬಂತೆ.

"ಕ್ಯಾಲಿಫೋರ್ನಿಯಾದಿಂದ?"

"ನಿನ್ನ ಅಕ್ಕ ಒಂದು ಕಾಲದಲ್ಲಿ ನನಗೆ ತುಂಬ ಆತ್ಮೀಯಳಾಗಿದ್ದಳು. ಅವಳು ನಿನ್ನ ಬಗ್ಗೆ ಸ್ವಲ್ಪಮಟ್ಟಿಗೆ ತಿಳಿಸಿದ್ದಳು. ನನ್ನ ಹೆಸರು ಮ್ಯಾಕ್ಸ್‌ಗ್ರೈತ್ಜರ್."

ಹೆಂಗಸು ಮೌನವಾಗಿ ನಿಂತಳು. ಇವರ ಮಾತನ್ನು ತನ್ನಲ್ಲಿಯೇ ಯೋಚಿಸಿ

ದಂತೆ ತೋರಿಕೊಂಡು ಕೊನೆಯಲ್ಲಿ ಹೇಳಿದಳು. "ನೀವು ತಪ್ಪು ತಿಳಕೊಂಡಿದೀರಿ."

"ತಪ್ಪು ತಿಳಿದಿದೀನಿ? ನೀನು ಅವಳ ತಂಗಿ ಬೆಲ್ಲ ಅಲ್ಲವೇ?"

"ಮ್ಯಾಕ್ಸ್‌ಗ್ರೈತ್ಜೆರ್ ಸತ್ತಿರೋದು ನಿಮಗೆ ಗೊತ್ತಿಲ್ಲವೇ? ಪೇಪರಲ್ಲಿ ಅವರಿಗೆ ಸಂತಾಪ ಸೂಚನೆ ಬಂದಿದೆ."

ಮ್ಯಾಕ್ಸ್‌ಗ್ರೈತ್ಜೆರ್ ನಗಲೆತ್ನಿಸಿದರು. "ಪ್ರಾಯಶಃ ಬೇರೊಬ್ಬ ಮ್ಯಾಕ್ಸ್ ಗ್ರೈತ್ಜೆರ್ ಇರಬಹುದು" ಆ ಹೊತ್ತಿನಲ್ಲಿ ಅವರು ಈ ಮಾತನ್ನು ತಮ್ಮಲ್ಲಿಯೇ ಗೊಣಗಿಕೊಂಡರು. ಸತ್ಯವನ್ನು ಗ್ರಹಿಸಿದರು : ಅವರು ಮತ್ತು ಲೀಜ ಇಬ್ಬರೂ ಸತ್ತಿದ್ದಾರೆ. ಅವರಿಗೀಗ ತಾವಿನ್ನೂ ಬದುಕಿಯೇ ಇಲ್ಲ ಎನ್ನುವುದನ್ನು ತಿಳಿದು ಒಳಗೇ ಕಂಪನವೊಂದು ಹರಿಯಿತು. ತಾವು ಒಂದು ಕಾಲದಲ್ಲಿ ಪ್ರೀತಿಸುತ್ತಿದ್ದವರ ಸಾವು, ಬದುಕಿನ ಬೇರೊಂದು ಕಡೆಯಲ್ಲಿ ಮಾತ್ರ ಭೇದವಿಲ್ಲದಂತಿರುತ್ತದೆ ಎನ್ನುವುದನ್ನು ಅವರು ಒಪ್ಪಬಲ್ಲರು. ಆತ್ಮದ ಅಮರತ್ವ ಅವರಿಗೆ ಅನುಭವವಾಗಲಾರಂಭಿಸಿತ್ತು. ಅವರಿಗೆ ಆಶ್ಚರ್ಯವಾಯಿತು. ಸಾಧ್ಯವಾಗುವಂತಿದ್ದರೆ ಅವರು ಈಗ ನಗುತ್ತಿದ್ದರು. ಆದರೆ ಶರೀರದ ಭ್ರಮಾತ್ಮಕ ಭಾವ ಅಳಿದುಹೋಗಿದೆ. ಅವರು ಮತ್ತು ಲೀಜ ಹೆಚ್ಚು ಕಾಲ ರೂಪದ ಇರುವಿಕೆಯನ್ನು ಇರಿಸಿಕೊಂಡಿರಲಿಲ್ಲ. ಹೀಗಿದ್ದರೂ ಅವರಿಬ್ಬರೂ ಅಲ್ಲಿದ್ದರು. ಅವರು ದನಿ ಇಲ್ಲದೆ ಕೇಳಿದರು. "ಇದು ಸಾಧ್ಯವೇ?"

ಲೀಜ ತನ್ನ ಆಕರ್ಷಣೀಯ ಶೈಲಿಯಲ್ಲಿ ಹೇಳಿದ್ದು ಕೇಳಿತು. "ಹೀಗೆ ಇರಬಹುದಾದರೆ ಇದೇ ಸಾಧ್ಯವಿದೆ". ಅವಳು ಮಾತು ಮುಂದುವರಿಸಿದಳು. "ನಿಮ್ಮ ಶರೀರವೂ ಇಲ್ಲಿ ಮಲಗಿದೆ ಅನ್ನೋ ವಿಷಯವನ್ನು ನಿಮಗೆ ತಿಳಿಸಬೇಕಿದೆ?"

"ಇದೆಲ್ಲ ಹೇಗೆ ನಡೆಯಿತು ? ನಿನ್ನೆ ರಾತ್ರಿ ನಾನು ಆರೋಗ್ಯವಂತ ಮನುಷ್ಯನಾಗಿಯೇ ಮಲಗಿದ್ದೆ?"

"ಅದು ನಿನ್ನೆ ರಾತ್ರಿಯಲ್ಲ, ನೀವು ಆರೋಗ್ಯದಿಂದ ಇರಲಿಲ್ಲ. ಒಂದು ತರದ ವಿಸ್ಮರಣೆ ನಡೆದು ನಾವು ಹೀಗೆ ಕೂಡೋ ಹಾಗಾಗಿದೆ. ನನಗೆ ಇದು ಒಂದು ದಿನ ಮೊದಲು ನಡೆಯಿತು. ಆದರಿಂದಲೇ."

"ನನಗೆ ಹಾರ್ಟ್ ಅಟಾಕ್ ಆಯಿತೇ?"

"ಸ್ವಲ್ಪಮಟ್ಟಿಗೆ."

"ನಿನಗೆ ಏನು ನಡೀತು" ಅವರು ಕೇಳಿದರು.

"ನನಗೆ ಎಲ್ಲವೂ ತುಂಬ ಕಾಲವನ್ನು ತಗೊಳ್ತು. ಹೇಗಾದರೂ ಇರಲಿ, ನನಗೆ ಯಾಕೆ ಹೀಗೆಲ್ಲ ಕೇಳತಿದೀರಿ?" ಅವಳು ಕೇಳಿದಳು.

"ನಾನು ಹಾಸಿಗೇಲಿ ಮಲಗಿದ್ದೆ ಅಂತ ನೆನಪಾಗತಿದೆ. ಎಂಟು ಗಂಟೆಗೆ ಹದಿನೈದು ನಿಮಿಷ ಇತ್ತು. ಟೆಲಿಫೋನ್ ಬೆಲ್ ಮಾಡಿತು. ಒಬ್ಬ ಹೆಂಗಸು ನಿನ್ನ ಬಗ್ಗೆ ಹೇಳಿದಳು. ಅವಳು ತನ್ನ ಹೆಸರು ಹೇಳಲಿಲ್ಲ."

"ಎಂಟು ಗಂಟೆಗೆ ಹದಿನೈದು ನಿಮಿಷ ಇದ್ದಾಗ ನಿಮ್ಮ ಶರೀರ ಆಗಲೇ ಇಲ್ಲಿ ಇತ್ತು. ನಿಮ್ಮನ್ನ ನೋಡೋಕೆ ಹೋಗತೀರೇನು ನೀವು ? ನಾನೇ ತೋರಿಸತೀನಿ ನಿಮಗೆ. ನೀವು ಐದನೇ ನಂಬರಿನಲ್ಲಿ ಇದೀರಿ. ಅವರೆಲ್ಲ ನಿಮಗೆ ಕ್ರಸವೆತ್ಸ್ ಹೇಳತಿದಾರೆ."

ಅವರು ಸುಮಾರು ವರ್ಷಗಳಿಂದ ಯಾರಿಗೂ ಕ್ರಸವೆತ್ಸ್ ಹೇಳುವುದನ್ನು ಕೇಳಿರಲಿಲ್ಲ. ಇದರ ಅರ್ಥ ಒಬ್ಬ ಸುಂದರ ಮನುಷ್ಯ. ಲೀಜ ರಷ್ಯಾದಲ್ಲಿ ಹುಟ್ಟಿದವಳು. ಅಂಥವಳು ಈ ಪದವನ್ನು ಹೇಳುತ್ತಿದ್ದಾಳೆ.

"ಇಲ್ಲ, ನನಗೆ ಅಂಥ ಆಸಕ್ತಿಯೇನೂ ಇಲ್ಲ."

ಚರ್ಚ್‌ನಲ್ಲಿ ಮೌನ ನೆಲೆಸಿತ್ತು. ನೀಟಾಗಿ ಶೇವ್ ಮಾಡಿಕೊಂಡಿದ್ದ, ಗುಂಗುರ ಗೂದಲಿನ, ಬೆಡಗಿನ ಟೈ ಕಟ್ಟಿದ್ದ ರಬಾಯಿಯೊಬ್ಬ ಲೀಜಳ ಬಗೆಗೆ ಮಾತಾಡಲು ಪ್ರಾರಂಭಿಸಿದ್ದ. "ಇವಳು ತುಂಬ ಒಳ್ಳೆಯ ಬುದ್ಧಿವಂತ ಹೆಂಗಸಾಗಿದ್ದಳು". ಅವನು ಹೇಳುತ್ತಿದ್ದ. "ಅಮೆರಿಕಾಗೆ ಬಂದಾಗ ಇವಳು ಇಡೀ ದಿನ ಒಂದು ಅಂಗಡೀಲಿ ಕೆಲಸ ಮಾಡುತ್ತಿದ್ದಳು. ರಾತ್ರಿ ಕಾಲೇಜಿಗೆ ಹಾಜರಾಗುತ್ತಿದ್ದಳು. ಮೊದಲ ದರ್ಜೇಲಿ ಪದವಿ ಪಡೆದಿದ್ದಳು. ಇವಳ ಅದೃಷ್ಟ ಕೆಟ್ಟದಾಗಿತ್ತು. ತನ್ನ ಜೀವನದಲ್ಲಿ ಇವಳು ಕೆಲವು ವಿಷಯಗಳಲ್ಲಿ ಎಡವಿದಳು. ಆದರೂ ಇವಳು ಔನ್ನತ್ಯ ಉಳಿಸಿಕೊಂಡವಳಾಗಿದ್ದಳು."

"ನಾನು ಈ ಮನುಷ್ಯನ್ನ ಯಾವಾಗಲೂ ಭೇಟಿಯಾಗಿಲ್ಲ. ನನ್ನ ಬಗ್ಗೆ ಇವನಿಗೆ ಹೇಗೆ ಗೊತ್ತಿದೆ?" ಲೀಜ ಕೇಳಿದಳು.

"ನಿನ್ನ ಸಂಬಂಧಿಕರು ಇವನಿಗೆ ದುಡ್ಡುಕೊಟ್ಟು ಕರಕೊಂಡು ಬಂದಿ

ದ್ದಾರೆ. ಅವರೇ ಇವನಿಗೆ ಈ ವಿಷಯಗಳನ್ನ ತಿಳಿಸಿದ್ದಾರೆ" ಗ್ರ್ಯುತ್ವರ್ ಹೇಳಿದರು.

"ಇಂಥ ಹಣದ ಉಪಚಾರಕ್ಕೆ ಬರೋ ಶುಭಾಶಯಗಳನ್ನು ನಾನು ದ್ವೇಷಿಸುತೀನಿ."

"ಮೊದಲ ಸಾಲಿನ ಬೆಂಚಿನಲ್ಲಿರೋ ಆ ಬಿಳಿ ಚರ್ಮದವರು ಯಾರು?" ಮ್ಯಾಕ್ಸ್ ಗ್ರ್ಯುತ್ವರ್ ಕೇಳಿದರು. ಲೀಜ ಒಂದು ಥರದ ನಗುವನ್ನು ಸೂಸಿದಳು. "ನನ್ನ ಗಂಡನಾಗಿದ್ದವರು."

"ನೀನು ಮದುವೆಯಾಗಿದ್ದೆಯಾ? ನಿನಗೆ ಲವರ್ ಇದಾನೆ ಅಂತ ಕೇಳಿದ್ದೆ, ಅಷ್ಟೇ."

"ನಾನು ಎಲ್ಲದಕ್ಕೂ ಪ್ರಯತ್ನಿಸಿದೆ. ಸಫಲಳಾಗತೀನೋ ಇಲ್ಲವೋ ಅಂತ ನೋಡತಿರಲಿಲ್ಲ."

"ನೀನು ಎಲ್ಲಿಗೆ ಹೋಗಬೇಕು ಅಂದುಕೊಂಡಿದೀಯಾ?" ಮ್ಯಾಕ್ಸ್ ಗ್ರ್ಯುತ್ವರ್ ಕೇಳಿದರು.

"ನಿಮ್ಮ ಸಂಸ್ಕಾರಕ್ಕೆ."

"ಖಂಡಿತವಾಗಿಯೂ ಅಲ್ಲಿಗಲ್ಲ"

"ಹೀಗೆ ಇರೋದು ಎಂಥ ಸ್ಥಿತಿ?" ಲೀಜ ಕೇಳಿದಳು. "ನಾನು ಎಲ್ಲದನ್ನೂ ನೋಡತಿದೀನಿ. ಎಲ್ಲರನ್ನೂ ಗುರುತಿಸತಿದೀನಿ. ಅಲ್ಲಿ ನನ್ನ ಚಿಕ್ಕಮ್ಮ ರೈಜ ಇದಾರೆ. ಅವರ ಹಿಂದೆ ನನ್ನ ಚಿಕ್ಕಪ್ಪನ ಮಗಳು ಬೆಕೆ ಇದಾಳೆ. ಅವಳನ್ನ ಒಂದು ಸಲ ನಿಮಗೆ ಪರಿಚಯ ಮಾಡಿಸಿದ್ದೆ."

"ಹೌದು, ನಿಜ."

"ಚರ್ಚ್ ಅರ್ಧ ಖಾಲಿಯಾಗಿದೆ. ಇಂಥ ಸಂದರ್ಭಗಳಲ್ಲಿ ನಾನೂ ಇವರ ಹಾಗೆಯೇ ನಟಿಸಿದೀನಿ. ನಿಮಗೆ ಖಂಡಿತವಾಗಿಯೂ ಚರ್ಚ್ ಭರ್ತಿಯಾಗಿರುತ್ತೆ. ಇಲ್ಲೇ ಕಾದಿದ್ದು ನೋಡಬೇಕು ಅಂತಿರೇನು?"

"ನನಗೆ ಸ್ವಲ್ಪವೂ ಆಸಕ್ತಿ ಉಳಿದಿಲ್ಲ."

ರಬಾಯಿ ತನ್ನ ಪ್ರಶಂಸೆಯ ಮಾತುಗಳನ್ನು ಕೊನೆಗೊಳಿಸಿದ. ಸಿನಗಾಗ್‌ನ

ಹಾಡುಗಾರನೊಬ್ಬ ಸ್ತೋತ್ರ ಗೀತೆಯ ಪಠಣಕ್ಕೆ ಆರಂಭಿಸಿದ. "ದೇವರ ಆಶೀರ್ವಾದ ಸಂಪೂರ್ಣವಾಗಿದೆ". ಅವನ ಪಠಣ ಅಳುವಿಗಿಂತಲೂ ಮಿಗಿಲಾಗಿತ್ತು. "ನನ್ನ ಸ್ವಂತ ತಂದೆಯೂ ಹೀಗೆ ಗೋಳಿಡುತ್ತಿರಲಿಲ್ಲ."

"ಕಣ್ಣೀರಿಡು."

"ನಾನು ತುಂಬ ಇಟ್ಟುಬಿಟ್ಟದೀನಿ" ಲೀಜ ಹೇಳಿದಳು. "ನಡೀರಿ ಹೋಗೋಣ". ಬೀದಿಯಲ್ಲಿ ಸಾಗುವ ಅಂತ್ಯಯಾತ್ರೆಯ ಮೇಲೆ ಇವರು ತೇಲಿ ಹೊರಟರು. ಶವಪೆಟ್ಟಿಗೆಯ ಹಿಂದೆ ಆರು ಜನ ಹೆಣ ಹೊರುವವರು ಸಾಲುಗಟ್ಟಿದ್ದರು. ಒಬ್ಬ ಹಾಸ್ಯಗಾರ ಬಾಳೆ ಹಣ್ಣೊಂದನ್ನು ತಿನ್ನುತ್ತಿದ್ದ.

"ಅವರು ಸಾವು ಅಂತ ಕರಿಯೋದು ಇದೇನಾ?" ಲೀಜ ಕೇಳಿದಳು. "ಇದು ಅದೇ ನಗರ. ಅದೇ ಬೀದಿಗಳು. ಅದೇ ಅಂಗಡಿಗಳು, ನಾನು ಸಹ ಅವಳೇ."

"ಹೌದು, ಆದರೆ ಶರೀರ ಇಲ್ಲದಂತಿರೋಳು."

"ಹಾಗಿದ್ದ ಮೇಲೆ ನಾನು ಏನು ? ಒಂದು ಆತ್ಮ?"

"ಖಂಡಿತವಾಗಿಯೂ, ನಿನಗೆ ಏನು ಹೇಳಬೇಕೋ ನನಗೆ ತಿಳೀತಿಲ್ಲ" ಮ್ಯಾಕ್ಸ್ ಗ್ರ್ಯೆತ್ಜರ್ ಹೇಳಿದರು.

"ನಿನಗೆ ಹಸಿವಿನ ಅನುಭವವಾಗತಿದೆಯೇನು?"

"ಹಸಿವು? ಇಲ್ಲ."

"ಬಾಯಾರಿಕೆ?"

"ಇಲ್ಲ, ಇಲ್ಲ, ಇದಕ್ಕೆಲ್ಲ ನಾನು ಏನು ಅಂತ ಕರಿಯಲಿ?"

"ನಂಬೋಕೆ ಸಾಧ್ಯವಾಗದಂಥಾದ್ದು, ಅಸಂಗತವಾದದ್ದು, ಕೆಟ್ಟ ಮೂಢನಂಬಿಕೆ ಅನ್ನೋವೂ ಸತ್ಯವನ್ನ ತೆರೆದು ತೋರಿಸುತ್ತವೆ " ಮ್ಯಾಕ್ಸ್‌ಗ್ರ್ಯೆತ್ಜರ್ ಹೇಳಿದರು.

"ಇಲ್ಲಿ ನಾವು ನರಕ ಅಥವಾ ಸ್ವರ್ಗವನ್ನು ಹುಡುಕಬಹುದು."

"ಈ ಹಂತದಲ್ಲಿ ಯಾವುದು ಬೇಕಾದರೂ ಸಾಧ್ಯವಿದೆ."

"ಅಂತ್ಯಸಂಸ್ಕಾರವಾದ ಮೇಲೆ ನ್ಯಾಯಾಲಯದಲ್ಲಿ ನಮ್ಮ ಕಾರ್ಯಗಳ ಫಲಾಫಲಗಳನ್ನು ಕೇಳಿಕೊಳ್ಳಬಹುದಲ್ಲವೇ?"

"ಇದನ್ನೂ ಸಹ ಕೇಳಬಹುದು."

"ಈಗ ನಾವು ಹೀಗೆ ಒಟ್ಟಿಗೆ ಇರೋ ಅಂಥದು ಹೇಗೆ ಸಾಧ್ಯವಾಯಿತು?"

"ದಯವಿಟ್ಟು ಹೆಚ್ಚು ಪ್ರಶ್ನೆಗಳನ್ನು ಕೇಳಬೇಡ. ನಿನಗೆ ಗೊತ್ತಿರೋ ಅಷ್ಟೆ ನನಗೆ ಗೊತ್ತಿರೋದು."

"ಇದರರ್ಥ. ನೀನು ಓದತಿದ್ದ, ಬರೆಯತಿದ್ದ ತತ್ವಶಾಸ್ತ್ರದ ಎಲ್ಲ ಕೃತಿಗಳೂ ಒಂದು ದೊಡ್ಡ ಸೊನ್ನೆ ಅಂತಲೇ."

"ಅದಕ್ಕಿಂತಲೂ ಕೀಳು - ಅವು ಬರೀ ನಾನ್‌ಸೆನ್ಸ್‌ಗಳು."

ಇಷ್ಟು ಹೊತ್ತಿಗೆ ನಾಲ್ಕು ಆಳುಗಳು ಶವಪೆಟ್ಟಿಗೆಯನ್ನು ಹೊತ್ತೊಯ್ದು ಲೀಜಳ ದೇಹವನ್ನು ಹಿಡಿಯಲು ನೆರವಾದರು. ಮೇಲಂಚಿನಲ್ಲಿ ಒಂದು ಹಾರವಿತ್ತು. ಬಂಗಾರದ ಅಕ್ಷರಗಳ ಹಾರ.

"ಮರೆಯಲಾಗದ ಲೀಜ ಪ್ರೀತಿಯ ನೆನಪಿನಲ್ಲಿದ್ದಾಳೆ."

"ಯಾರ ಹಾರ ಇದು?" ಲೀಜ ಕೇಳಿದಳು. ನಂತರ ತಾನೇ ಹೇಳಿಕೊಂಡಳು. "ಅವನು ಇದಕ್ಕೆ ಮಾತ್ರ ಮುಳ್ಳಾಗಿರಲಿಲ್ಲ."

"ಅವರ ಜೊತೇಲಿ ನೀನು ಸ್ಮಶಾನಕ್ಕೆ ಹೋಗಬೇಕು ಅಂದುಕೊಂಡಿದಿಯೇನು?" ಮ್ಯಾಕ್ಸ್ ಗ್ರ್ಯೆತ್ಜರ್ ಕೇಳಿದರು.

"ಇಲ್ಲ, ಯಾಕೆ ಹೋಗಬೇಕು ? ಆ ಅಳುಬುರುಕ ಹಾಡುಗಾರ ಆಮೇಲೆ ನನಗೆ ಅಳತಾ ಕಡ್ಡಿಷ್ ಹೇಳೋಕೆ ನಿಲ್ಲತಾನೆ."

"ನೀನು ಏನು ಮಾಡಬೇಕು ಅಂತಿದೀಯ?"

ಲೀಜ ತನ್ನಲ್ಲಿಯೇ ಆಲಿಸಿಕೊಂಡಳು. ಅವಳಿಗೆ ಏನೂ ಬೇಕಿರಲಿಲ್ಲ. ಎಂಥ ಅಸಾಮಾನ್ಯ ಅವಸ್ಥೆ. ಒಂದು ಸಣ್ಣ ಬಯಕೆಯೂ ಇಲ್ಲ. ಅವಳ ನೆನಪಿನಲ್ಲಿರುವಂತೆ ವರುಷಗಳುದ್ದಕ್ಕೂ ಅವಳ ಆಸ್ತಿ, ಅವಳ ಗಳಿಕೆ, ಅವಳ ಹೆದರಿಕೆಗಳು ಅವಳನ್ನು

ಮೇಲೇಳದಂತೆ ಕಾಡುತ್ತಿದ್ದವು. ಅವಳ ಕನಸುಗಳು ಸಂಪೂರ್ಣವಾದ ನಿರಾಶೆ, ಸಂತೋಷ ಮತ್ತು ಬರಡುತನಗಳಿಂದ ತುಂಬಿದ್ದವು. ಒಂದಕ್ಕಿಂತಲೂ ಮತ್ತೊಂದು ವಿಚಿತ್ರ ವಾಗಿರುತ್ತಿದ್ದುವು. ಕೊನೆ ದಿನ ಅವಳು ಭಯಗೊಂಡಿದ್ದಳು. ಎಲ್ಲವೂ ಅಳಿಯುತ್ತ ಸ್ಮಶಾನದ ಕಾರ್ಗತ್ತಲು ಆರಂಭವಾಗಿತ್ತು. ಆದರೆ ಇಲ್ಲಿ ಅವಳು ಗತಿಸಿರುವುದನ್ನೆಲ್ಲ ನೆನಪಿಸಿಕೊಳ್ಳುತ್ತಿದ್ದಾಳೆ, ಮತ್ತು ಅವಳೊಡನೆ ಮತ್ತೆ ಮ್ಯಾಕ್ಸ್‌ಗ್ರ್ಯೆತ್ಜರ್ ಇದ್ದಾರೆ. ಅವಳು ಹೇಳಿದಳು. "ಅಂತ್ಯಕಾಲ ತುಂಬ ನಾಟಕೀಯವಾಗಿ ನಡೆಯಿತು ಅಂತ ಕಲ್ಪಿಸಿಕೊಳ್ಳುತಿದೀನಿ."

"ನನಗೆ ಇದು ಕೊನೆ ಅಂತ ನಂಬಿಕೆಯಾಗತಿಲ್ಲ." ಅವರು ಹೇಳಿದರು. "ಬೇರೆಯಾಗಿದ್ದ ಎರಡರ ನಡುವೆ ಪರಿವರ್ತನೆಯಾಗಿದೆ ಅನ್ನಿಸುತ್ತೆ."

"ಹಾಗಿದ್ದ ಮೇಲೆ ಇದು ಯಾವ ಕಾಲಕ್ಕೆ ಕೊನೆಯಾಗುತ್ತೆ?"

"ಇಲ್ಲಿ ಕಾಲ ಮಹತ್ವದ್ದಲ್ಲ, ಕಾಲದ ಅವಧಿ ಅನ್ನೋದು ಅರ್ಥವಿಲ್ಲದ್ದು."

"ಒಳ್ಳೆಯದಾಯಿತು. ನೀವು ಅದೇ ನಿಮ್ಮ ಗೊಂದಲ, ಅನುಮಾನಗಳಲ್ಲಿದೀರಿ. ನಾವು ಇಲ್ಲಿ ಹೀಗೆಯೇ ಇದ್ದರೆ ನಿಮಗೆ ಶೋಕಪಡೋವರನ್ನ ನೋಡದ ಹಾಗೆ ಇರೋಕಾಗೋಲ್ಲ" ಲೀಜ ಹೇಳಿದಳು. "ನಾವು ಎಲ್ಲಿಗೆ ಹೋಗೋಣ."

"ನೀನೇ ದಾರಿ ತೋರ್‍ಸಿಸು."

ಮ್ಯಾಕ್ಸ್ ಗ್ರ್ಯೆತ್ಜರ್ ಅವಳ ಸೂಕ್ಷ್ಮಕೈಯನ್ನು ಹಿಡಿದರು. ಅವರಿಬ್ಬರೂ ಯಾವ ಉದ್ದೇಶವೂ ಇಲ್ಲದೆ, ಯಾವ ಗೊತ್ತುಗುರಿಯೂ ಇಲ್ಲದೆ ಮೇಲೇರ ಲಾರಂಭಿಸಿದರು, ತಮ್ಮನ್ನು ವಿಮಾನವಾಗಿ ಮಾಡಿರಬಹುದೆಂಬಂತೆ. ಅವರಿಬ್ಬರೂ ಕೆಳಗೆ ಭೂಮಿಯತ್ತ ನೋಡಿದರು. ನಗರಗಳು, ನದಿಗಳು, ಬಯಲುಗಳು, ಕೆರೆಗಳೆಲ್ಲ ಕಂಡವು - ಎಲ್ಲವನ್ನೂ ನೋಡುತ್ತಿದ್ದರು. ಆದರೆ ಅವರಿಗೆ ಮನುಷ್ಯರು ಕಾಣಲಿಲ್ಲ.

"ನೀವು ಏನಾದರೂ ಹೇಳತೀರೇನು?" ಲೀಜ ಕೇಳಿದಳು.

ಮ್ಯಾಕ್ಸ್ ಗ್ರ್ಯೆತ್ಜರ್ ಉತ್ತರಿಸಿದರು. "ನನ್ನ ಎಲ್ಲ ಗೊಂದಲಗಳಲ್ಲಿ ಅಮರತ್ವವೇ ದೊಡ್ಡದು."

●

ಕೊಕ್ಕೋಕ್ಕೋ

ಕೊಕ್ಕೋ ಕ್ಕೋ ! ನಿಮ್ಮ ಭಾಷೆಯಲ್ಲಿ ಇದರ ಅರ್ಥ ಗುಡ್‌ಮಾರ್ನಿಂಗ್, ಏಳುವ ಹೊತ್ತು. ಪಿಂಚೋವ್‌ನಲ್ಲಿ ಬೆಳಗಾಗುತ್ತಿರುತ್ತಿದೆ. ಏನು ಜನಗಳು ನೀವು, ಎಷ್ಟೊಂದು ಪದಗಳನ್ನು ಬಳಸುತ್ತೀರಿ ! ಕೋಳಿಗಳಾದ ನಮಗೆ ಕೊಕ್ಕೋ ಕ್ಕೋ ಎಲ್ಲವನ್ನೂ ಹೇಳುತ್ತದೆ. ಎಷ್ಟೆಲ್ಲಾ ಅರ್ಥಗಳಿದೆ ಇದರಲ್ಲಿ ! ಇದು ದನಿ, ಉಚ್ಚಾರ, ಇಂಪು ಎಲ್ಲವನ್ನೂ ಒಳಗೊಂಡಿರುತ್ತದೆ.

ನಾನು ಚಕ್ರವರ್ತಿ ಸಾಲೋಮನ್‌ನ ಕುರ್ಚಿಯಲ್ಲಿ ಕೂರುತ್ತಿದ್ದ ಹುಂಜದ ಮರಿಮಗ. ನನಗೆ ಭಾಷೆಗಳು ಗೊತ್ತಿವೆ. ಆದ್ದರಿಂದಲೇ ಒಂದು ಕೊಕ್ಕೋಕ್ಕೋ ಎನ್ನುವುದು ನೂರು ಪದಗಳಿಗಿಂತ ಮಿಗಿಲಾದದ್ದು ಎಂದು ನಿಮಗೆ ಹೇಳುತ್ತಿದ್ದೇನೆ. ಇದು ದನಿಯಷ್ಟೇ ಅಲ್ಲ, ಜೊತೆಯಲ್ಲಿಯೇ ರೆಕ್ಕೆಗಳನ್ನು ಅಗಲಿಸಿ, ಜುಟ್ಟು ನಿಗುರಿಸಿ, ಕಣ್ಣು ಹೊರಳಿಸುತ್ತಾ ಕತ್ತಿನ ಗರಿಗಳನ್ನು ಕೊಡವಿಕೊಳ್ಳುವ ವಿಷಯವೂ ಹೌದು.

ನೀವು ಪ್ರಾಂತೀಯ ಭಾಷೆ ಎನ್ನುವುದನ್ನು ನಮ್ಮಲ್ಲಿ ಈಗಲೂ ಉಳಿಸಿಕೊಂಡಿದ್ದೇವೆ. ಲಿಟ್ವಕ್‌ನ ಹುಂಜಗಳು ಕೊಕೆರಿಕೋ ಎಂದು ಕೂಗುತ್ತವೆ. ಪೋಲಿಷ್‌ನ ಹುಂಜಗಳು ಕೊಕೆರಿಕೇ ಎಂದು ಕೂಗುತ್ತವೆ. ಮತ್ತೆ ಕೆಲವು ಕಡೆ ಕೊಕೆರಿಕ್ಕೋ ಎನ್ನುವುದು ಈಗಲೂ ಬಳಕೆಯಲ್ಲಿದೆ. ಪ್ರತಿಯೊಂದು ಶೈಲಿಯೂ ಹುಂಜಗಳ ಪರಂಪರಾಗತ ಬಳುವಳಿಯಾಗಿದೆ. ಒಂದೇ ಕೋಳಿ ಒಂದು ಸಲ ಕೂಗಿದಂತೆ ಮತ್ತೊಮ್ಮೆ ಕೂಗಲಾರದು. ನಿಮ್ಮ ಸೂಕ್ಷ್ಮ ಕಿವಿಗೆ ಸ್ವಲ್ಪವಾದರೂ ವ್ಯತ್ಯಾಸವಿರುವುದು ಕೇಳಿರುತ್ತದೆ.

ನನ್ನ ತಾಯಿಯ ಕಡೆಯಿಂದ ನನ್ನಲ್ಲಿ ಪ್ರಾಚೀನ ಜ್ಯೋತಿಷಿಯಾದ ವನಕುಕ್ಕುಟನ ರಕ್ತವಿದೆ. ನೀವು ನನ್ನನ್ನು ಕತ್ತಲಿನ ಪಂಜರದಲ್ಲಿ ಇರಿಸಿದರೂ, ಹುಂಜಗಳ ಕೂಗು ಮತ್ತು ಹೆಂಗೋಳಿಗಳ ಕ್ಲುಕ್ಲುಕ್ಕನ್ನು ಕೇಳಿ ಹಗಲಿದೆಯೋ, ರಾತ್ರಿಯಾಗಿದೆಯೋ; ಚಳಿಯಾಗಿದೆಯೋ, ಮೋಡ ಕವಿದಿದೆಯೋ; ತಂಪಿದೆಯೋ, ಸೆಕೆಯಿದೆಯೋ; ಮಳೆ ಬರುತ್ತಿದೆಯೋ, ಹಿಮ ಸುರಿಯುತ್ತಿದೆಯೋ ಅಥವಾ ಆಲಿಕಲ್ಲು ಬೀಳುತ್ತಿವೆಯೋ ಅನ್ನುವುದನ್ನೆಲ್ಲ ಹೇಳುತ್ತೇನೆ. ನನ್ನ ಕಿವಿ ಹುಣ್ಣಿಮೆ, ಸಪ್ತಮಿ, ಅಮಾವಾಸ್ಯೆಗಳನ್ನೂ ನನಗೆ ಹೇಳುತ್ತದೆ. ನಾನು ಸೂರ್ಯಗ್ರಹಣವನ್ನು ಕೂಡ ಹೇಳಬಲ್ಲೆ. ನಿಮಗೆ

ಗೊತ್ತಿಲ್ಲದ ಸಾವಿರಾರು ವಿಷಯಗಳು ನನಗೆ ತಿಳಿದಿವೆ. ನೀವು ತುಂಬಾ ಮಾತನಾಡುತ್ತೀರಿ. ನಿಮ್ಮ ಮಾತುಗಳಲ್ಲಿಯೇ ನೀವು ಮುಳುಗಿಕೊಳ್ಳುತ್ತೀರಿ. ಎಲ್ಲಾ ಸತ್ಯಗಳೂ ಒಂದು ಸತ್ಯದ ಕೆಳಗೆ ಅಡಗುತ್ತವೆ : ಕೊಕ್ಕೋ ಕ್ಕೋ.

ನಾನು ನಿನ್ನೆ ಹುಟ್ಟಿದವನಲ್ಲ. ನನ್ನ ಕಣ್ಣೆದುರಿಗೆ ಹುಂಜ ಮತ್ತು ಹೆಂಗೋಳಿಗಳ ಒಂದು ಜಗತ್ತೇ ಸರಿದು ಹೋಗಿದೆ. ಬೀಜ ಹೊಡೆದ ಶಕ್ತಿಹೀನ ಹುಂಜವೊಂದನ್ನೂ ನಾನು ನೋಡಿದ್ದೇನೆ. ಕೊನೆಗೆ ಯಾವುದು ಒಳ್ಳೆಯದು ಎಂಬುದನ್ನೂ ತಿಳಿದಿದ್ದೇನೆ, ಸಾವು. ಒಂದು ವೇಳೆ ನನ್ನನ್ನು ಅವರು ಯೋಮ್‌ಕಿಪ್ಪುರ್‌ಗೆ ಅರ್ಪಿಸಲಿ, ಪಸ್ಕ ಹಬ್ಬಕ್ಕೆ ಹರಕೆಯಿಡಲಿ, ಸುಕ್ಕೋತ್ ಅಥವಾ ಸಬ್ಬತ್‌ವರೆಗೆ ಮೋಸೆಸ್‌ನ ಕೆಂಪು ಸಮುದ್ರದ ಹಾಡಿನವರೆಗೆ ಕಾಯ್ದಿರಿಸಲಿ, ಕಟುಕ ಕಾಯುತ್ತಾನೆ, ಕತ್ತಿ ಹರಿತವಾಗಿರುತ್ತದೆ. ಎಲ್ಲವೂ ಸಿದ್ಧವಾಗಿರುತ್ತದೆ : ನೆನೆಹಾಕಲು ಬೋಗುಣಿ, ಕೆತ್ತಲು ಮಣೆ, ಬೇಯಿಸಲು ಪಾತ್ರೆ ಅಥವಾ ಹುರಿದು ಬೇಯಿಸಲು ಒಲೆಕುಂಡ.

ಕಸದ ಬುಟ್ಟಿಯಲ್ಲಿ ನಮ್ಮ ತಲೆ ಮತ್ತು ಕರುಳುಗಳು ತುಂಬಿರುತ್ತವೆ. ಒಳ್ಳೆಯದೆನ್ನುವುದು ಏನೂ ಇಲ್ಲ. ಮನೆ ಯಜಮಾನಿ ನಮ್ಮ ರೆಕ್ಕೆ ಪುಕ್ಕಗಳನ್ನು ಕಸಬರಿಕೆಯಲ್ಲಿ ಗುಡಿಸಿ ಒಯ್ಯುತ್ತಾಳೆ. ಒಂದು ವೇಳೆ ನಾನೇನಾದರೂ ಕಟುಕನ ಕತ್ತಿಯಿಂದ ತಪ್ಪಿಸಿಕೊಳ್ಳುವ ಸಂಭವವಿದ್ದರೂ ಅದು ಕೊನೆಯವರೆಗೂ ಉಳಿಯುವುದಿಲ್ಲ. ನನ್ನ ಉಗುರಿನಿಂದ ಸಾಯಬಹುದು, ನಾಲಿಗೆ ರೋಗ ಬರಬಹುದು, ನಿಮಗೆ ಬರದಂತಿರುವ ಸಿಡುಬುರೋಗ ನನ್ನ ತಟ್ಟೆಯಲ್ಲಿರಬಹುದು. ಒಂದು ತಂತಿಯ ಕೆಳಗೆ ಸಿಕ್ಕಬಹುದು. ಒಂದು ಕಲ್ಲು, ಒಂದು ಸೂಜಿ, ಒಂದು ಸಣ್ಣ ಹಾವು. ಪ್ರತಿಯೊಂದು ಕೋಳಿಯೂ ಬೋಗುಣಿಯಲ್ಲಿ ಕೊನೆಗಾಣುತ್ತದೆ.

ಆಮೇಲೆ ಏನು ? ಕೊಕ್ಕೋಕ್ಕೋ ಎಲ್ಲ ಪ್ರಶ್ನೆಗಳನ್ನೂ ಇಲ್ಲವಾಗಿಸುತ್ತದೆ, ಎಲ್ಲಾ ಒಗಟುಗಳನ್ನೂ ಒಡೆಯುತ್ತದೆ. ಹುಂಜ ಸಾಯಬಹುದು, ಕೊಕ್ಕೋಕ್ಕೋ ಅಲ್ಲ. ನಾವು ಆದಂನಿಗಿಂತಲೂ ಮೊದಲೇ ಕೂಗಿದ್ದೇವೆ. ದೇವರು ಸಮ್ಮತಿಸಿದ್ದಾನೆ. ಕಟುಕರೆಲ್ಲ ಹೋದ ನಂತರವೂ, ಕೋಳಿಬಾಕರು ಕೆಳಗಡೆ ಇರಿಸಿದರೂ ನಾವು ಕೂಗುತ್ತಾ ಹೋಗುತ್ತೇವೆ. ಹುಂಜ ಅಂದರೇನು, ಹೆಂಗೋಳಿ ಅಂದರೇನು? ಮೊಟ್ಟೆ ಇಡುವ ಜಾಗ ಮತ್ತು ಕೊಕ್ಕೋಕ್ಕೋ ಬಿಟ್ಟು ಬೇರೆ ಏನೂ ಅಲ್ಲ. ಜಗತ್ತಿನಲ್ಲಿ ಯಾವ ಕಟುಕನೂ ಇದನ್ನು ನಿರ್ನಾಮ ಮಾಡಲು ಆಗುವುದಿಲ್ಲ.

ಅಲ್ಲಿ ಸ್ವರ್ಗದ ಹುಂಜವೊಂದು ಜೀವಿಸುತ್ತಿದೆ - ಅದರ ಕಲ್ಪನೆ ನಮ್ಮದೇ ; ಅಲ್ಲಿ ಸ್ವರ್ಗದ ಕೊಕ್ಕೋಕ್ಕೋ ಇದೆ. ಮೇಲಿರುವ ಆ ಹುಂಜಕ್ಕೆ ನಮ್ಮ ಶ್ವಾಸನಾಳದ ಮೂಲಕ ಆ ಕೂಗು ಹಾದು ಹೋಗುತ್ತದೆ. ಅವನು ನಮ್ಮ ಮೂಲಕ ನಡುರಾತ್ರಿಯ ಲೀಲೆಗಳನ್ನು ಆಡುತ್ತಾನೆ. ಬೆಳಗಿನ ನಕ್ಷತ್ರಗಳು ಒಂದಕ್ಕೊಂದು ಹಾಡಿಕೊಳ್ಳುತ್ತಿರುವಾಗ ನಮ್ಮ ಮೂಲಕ ಪ್ರಾರ್ಥನೆಗೆ ಏಳುತ್ತಾನೆ. ನಿಮ್ಮ ತಲೆಗಳನ್ನು ಕಬಾಲಾದ ಕಿಂಡಿಯಲ್ಲಿ ಇರಿಸಿಕೊಂಡಿರುವ ಜನ ನೀವು. ನಮಗೆ ನಮ್ಮ ಮೂಳೆಗಳೊಳಗಿನ ಸತ್ವದಲ್ಲೇ ಕಬಾಲಾ ಇದೆ. ಕೊಕ್ಕೋಕ್ಕೋ ಅಂದರೇನು ? ಒಂದು ಮಹೇಂದ್ರ ಜಾಲದ ಹೆಸರು.

ನಾನು ರಹಸ್ಯಗಳನ್ನು ಒಡೆದು ಹೇಳಬಲ್ಲೆ. ಆದರೆ ನಾನು ಯಾರ ಜೊತೆ ಮಾತನಾಡುತ್ತಿದ್ದೇನೆ? ಕಿವುಡು ಕಿವಿಗಳಿಗೆ. ನಿಮ್ಮ ಪುರಾತನಿಗಳು ಕೊಕ್ಕೋಕ್ಕೋ ರಹಸ್ಯವನ್ನು ಎಂದಿಗೂ ಕಂಡುಕೊಳ್ಳಲಿಲ್ಲ. ನಿಮಗೂ ಅವರಷ್ಟೇ ಸ್ವಲ್ಪ ಮಾತ್ರ ತಿಳಿದಿದೆ. ಕೆಲವು ದೇಶಗಳಲ್ಲಿ ಮಿಷಿನ್‌ಗಳು ಸಾವಿರಾರು ಕೋಳಿ ಮರಿಗಳನ್ನು ಷೆಲ್ಫ್‌ಗಳ ತುಂಬ ಸೃಷ್ಟಿಸಿ ನಿಲ್ಲಿಸುತ್ತವೆ ಎಂದು ಹೇಳುತ್ತಾರೆ. ಆದರೆ ಕಟುಕನ ಮನೆ ನಮ್ಮ ಮಾರ್ಕೆಟ್‌ಗಿಂತಲೂ ದೊಡ್ಡದು. ಒಬ್ಬ ಎಳೆ ಕಟುಕನ ಕತ್ತಿ, ಒಂದು ಏಟು, ಒಂದು ಸೀಳು. ತೊಟ್ಟಿಗಳು ರಕ್ತದಿಂದ ತುಂಬುತ್ತವೆ. ಗರಿಗಳು ಹಾರಾಡುತ್ತವೆ. ಪ್ರತಿಯೊಂದು ಕ್ಷಣವೂ ಸಾವಿರ ಕೋಳಿಗಳು ತಮ್ಮ ಆತ್ಮಗಳನ್ನು ಕೊಡುತ್ತವೆ. ಹೀಗೆ, ಈ ರೀತಿಯಲ್ಲಿ ಮುಗಿಸಲಾದೀತೆ ?

ಈಗಲೂ ಕೂಡ, ನಾನು ಮಾತಾಡುತ್ತಿರುವಾಗಲೂ, ನನ್ನ ರೆಕ್ಕೆಯ ಕೆಳಗೆ ತುರಿಕೆಯಾಗುತ್ತಿದೆ. ಮೇಲೆ ಎತ್ತಿ ಹಿಡಿದುಕೊಳ್ಳಬೇಕು ಅನ್ನಿಸುತ್ತಿದೆ. ಆದರೆ ನನ್ನಿಂದ ಸಾಧ್ಯವಾಗುತ್ತಿಲ್ಲ. ಗಂಟಲು ಊಗುತ್ತಿದೆ ; ನಾಲಿಗೆ ಅದುರುತ್ತಿದೆ, ಕೊಕ್ಕು ಕಂಪಿಸುತ್ತಿದೆ. ಜುಟ್ಟು ಉರಿಯುತ್ತಿದೆ. ಗರಿಗರಿಯ ಕೂದಲೂ ನಡುಗುತ್ತಿವೆ. ಆದರೂ ಹೊರಗೆ ಬಂದೇ ಬರುತ್ತದೆ ! ಕೊಕ್ಕೋಕ್ಕೋ !

೨

ಹೆಂಗೋಳಿಗಳ ಬಗ್ಗೆ ನೀವು ಸರಳವಾಗಿ ಏನು ಹೇಳುತ್ತೀರಿ ? ಅದನ್ನು ಲಘುವಾಗಿ ತೆಗೆದುಕೊಳ್ಳಿ. ನಾನು ಪ್ರಾಯದ ಹುಂಜವಾಗಿದ್ದಾಗ ನನಗೂ ಹೆಂಗೋಳಿಗೂ

ವ್ಯತ್ಯಾಸವೇನಿರಲಿಲ್ಲ. ಹೆಂಗೋಳಿ ಅಂದರೇನು ? ಜುಟ್ಟಿಲ್ಲ, ಹಿಮ್ಮಡಿಗಳಿಲ್ಲ, ಕೊರಳಲ್ಲಿ ಬಾಲ ವಿಲ್ಲ, ಉಗುರಲ್ಲಿ ಶಕ್ತಿಯಿಲ್ಲ, ತನ್ನ ಕೇಕೆಯನ್ನು ಕೆಲವು ವರ್ಷಗಳಲ್ಲಿಯೇ ಕಳೆದು ಕೊಳ್ಳುತ್ತಾಳೆ, ಮೊಟ್ಟೆಗಳನ್ನಿಡುತ್ತಾಳೆ, ಮರಿಗಳನ್ನು ಸೃಷ್ಟಿಸುತ್ತಾಳೆ. ನೀವು - ಏನು ಕರೆಯುತ್ತೀರೋ ಇದಕ್ಕೆ - ಹೊಲಸಿನಲ್ಲಿ ಮೈ ಉಜ್ಜಿಕೊಳ್ಳುತ್ತಾಳೆ. ಭಕ್ತಿಯ ಗಾಳಿಯನ್ನು ತುಂಬಿಕೊಳ್ಳುತ್ತಾಳೆ.

ನನ್ನ ಎಳೆತನದಲ್ಲಿಯೇ ನಾನು ಹೆಂಗೋಳಿಗಳ ಬೂಟಾಟಿಕೆಯನ್ನು ನೋಡ ಲಾರಂಭಿಸಿದೆ. ಬಲವಾದ ಪ್ರತಿಯೊಂದು ಹೊಡೆತಕ್ಕೂ ತಮ್ಮ ತಲೆ ತಗ್ಗಿಸುತ್ತವೆ. ಶಕ್ತಿಯಿರುವ ಹೆಂಗೋಳಿ ತಮ್ಮ ಅಂಗಳದಲ್ಲಿ ತಮ್ಮತಮ್ಮವನ್ನೇ ಹಿಡಿಯುತ್ತದೆ. ಒಂದು ಗಾಳಿಮಾತನ್ನು ಕೇಳಿದರೂ ಸಿಟ್ಟು ಬರುತ್ತದೆ. ಇವು ನಾಲಿಗೆಯನ್ನು ಸುಮ್ಮನಿರಿಸಿ ಕೊಳ್ಳುವುದೇ ಇಲ್ಲ. ಕ್ಲುಕ್-ಕ್ಲುಕ್, ಕ್ಲುಕ್-ಕ್ಲುಕ್. ನನ್ನ ಕಾನೂನು ಏನೆಂದರೆ ; ಮರಿಗಳ ಜೊತೆ ತುಂಬ ಮಾತಾಡಬೇಡ. ಇವುಗಳ ಜೊತೆ ನೀವು ತುಂಬಾ ಹೊತ್ತು ಇರಲು ಸಾಧ್ಯವಾಗುವುದಿಲ್ಲ ಎನ್ನುವುದು ನಿಜ. ಎಲ್ಲರಿಗೂ ತಾಯಿ ಇರುತ್ತಾಳೆ. ಆದರೆ ಏನಾಗುತ್ತದೆ ಇದರಿಂದ ? ನೀವು ಸದಾಕಾಲ ಮೊಟ್ಟೆಗೂಡಿನ ಹತ್ತಿರವೇ ಇರಲಾರಿರಿ.

ಪ್ರಾಯದ ಹುಂಜಗಳಿಗೆ ಒಂದು ರೀತಿಯ ಅಹಂಭಾವವಿರುತ್ತದೆ. ಇದು ಯಾವ ರೀತಿಯದು ಎಂಬುದನ್ನು ನನ್ನ ವಯಸ್ಸಿನಲ್ಲಿ ನಾನೂ ಕಂಡುಕೊಂಡಿದ್ದೇನೆ. ಭೂಮಿಯ ಎಲ್ಲಾ ಕಡೆಯೂ, ಸ್ವರ್ಗದ ಎಲ್ಲ ಭಾಗದಲ್ಲೂ ಗಂಡು-ಹೆಣ್ಣುಗಳಿವೆ. ಎಲ್ಲವೂ ಜೋಡಿಯೇ. ನೊಣದಿಂದ ಆನೆಯವರೆಗೆ, ಹುಂಜದಿಂದ ಸಾಮಾನ್ಯ ಕೋಳಿಯವರೆಗೆ. ಕ್ಲುಕ್-ಕ್ಲುಕ್ ಎನ್ನುವುದು ಕೊಕ್ಕೋಕ್ಕೋೀವಿನ ಹಾಗಲ್ಲ ಅನ್ನುವುದು ನಿಜ. ಆದರೂ ಹೆಂಗೋಳಿಗಳು ಅದನ್ನೇ ಸೀನುತ್ತವೆ.

ನೀವು ತತ್ವಜ್ಞಾನಿಗಳು ಎನ್ನುವವರು ಮಾತಾಡಲು ತುಂಬ ಇಷ್ಟಪಡುತ್ತಾರೆ : ಯಾವುದು ಮೊದಲು ಬಂದದ್ದು, ಕೋಳಿಯೋ ಅಥವಾ ಮೊಟ್ಟೆಯೋ. ಹರಟೆಮಲ್ಲ ಕೋಳಿಗಳೂ ಕೊನೆಯಿಲ್ಲದಂತೆ ವಾದ ಮಾಡುತ್ತವೆ : ಯಾವುದು ಮೊದಲು ಬಂದದ್ದು, ಕೊಕ್ಕೋಕ್ಕೋೀ ಅಥವಾ ಕ್ಲುಕ್ - ಕ್ಲುಕ್ ? ಆದರೆ ಇವೆಲ್ಲ ಬರಿಯ ವಟವಟದ ಮಾತುಗಳು. ನನ್ನ ಅಭಿಪ್ರಾಯ - ಏನೆಂದರೆ, ಮೊಟ್ಟಮೊದಲಿನ ಮೊಟ್ಟೆಯಿಲ್ಲ ಮತ್ತು ಮೊಟ್ಟೆಗೆ ಕೊನೆಗಾಲವೂ ಇಲ್ಲ. ಮೊದಲೇ ಕೊನೆ, ಕೊನೆಯೇ ಮೊದಲು. ಅರ್ಥವಾಗಲಿಲ್ಲವೇ ? ಉತ್ತರ : ಕೊಕ್ಕೋಕ್ಕೋೀ.

ನನಗೆ ಐವರು ಹೆಂಡಂದಿರು. ಪ್ರತಿಯೊಬ್ಬಳಿಗೂ ತನ್ನದೇ ಆದ ಕತೆಯಿದೆ. ಕಾರಾ ಮಹಾರಾಣಿ. ಇವಳ ವಂಶಾವಳಿಯನ್ನು ನನ್ನಿಂದ ಹೇಳಲು ಸಾಧ್ಯವಾಗುವುದಿಲ್ಲ. ದಪ್ಪಗಿದ್ದಾಳೆ. ಆರಾಮವಾಗಿ ನಡೆಯುತ್ತಾಳೆ. ಬಂಗಾರದಂತೆ ಹೊಳೆವ ಕಣ್ಣುಗಳು, ಪರಿಶುದ್ಧವಾದ ಹೃದಯ ಉಳ್ಳವಳು. ಬೇರೆ ಹೆಂಗೋಳಿಗಳ ಜೊತೆ ಕುಡಿಯುವಂಥವಳಲ್ಲ. ಯಜಮಾನಿತಿ ಕೈ ತುಂಬ ತುಂಬಿಕೊಂಡಿರುವ ಕಾಳುಗಳನ್ನು ಚೆಲ್ಲಿದಾಗ ಹೆಕ್ಕಿಕೊಳ್ಳಲೆಂದು ದೊಂಬಿಕೋರರು ಓಡುತ್ತ ಹೋದರೆ, ಕಾರಾ ಶಾಂತಳಾಗಿ - ಕಾಳು ಸಿಗುತ್ತವೆ ಎಂಬ ವಿಶ್ವಾಸದಿಂದಲೇ ಹೋಗುತ್ತಾಳೆ. ಇವಳು ತಲುಪುವ ಹೊತ್ತಿಗೆ ಕಾಳುಗಳು ಚೆದುರಿಕೊಂಡಿರುತ್ತವೆ. ಕಾರಾ ತನಗೆ ಒಳ್ಳೆಯವನ್ನೇ ಆಯ್ದುಕೊಳ್ಳುತ್ತಾಳೆ. ಬೇರೆ ಕೋಳಿಗಳತ್ತ ನೋಡುವುದಿಲ್ಲ. ಕಿತ್ತಾಡುವವರಿಂದ ದೂರ ಇರುತ್ತಾಳೆ. ಆದರೆ ತನ್ನ ಎದುರಾಳಿಗಳಿಗೆ ಮುಂಗೊಕ್ಕಿನಿಂದ ತಿವಿಯುವುದರಲ್ಲಿ ಹಿಂಜರಿಯುವುದಿಲ್ಲ. ತನ್ನ ಗಂಭೀರತೆಯನ್ನು ಉಳಿಸಿಕೊಳ್ಳುತ್ತಲೇ ಅವಿವೇಕಿ ಹೆಂಗೋಳಿಗಳ ಜೊತೆ ವರ್ತಿಸುತ್ತಾಳೆ. ಬೇರೆ ಎಲ್ಲರಿಗಿಂತ ಕಡಿಮೆ ಕ್ಲುಕ್‌ಗುಡುತ್ತಾಳೆ. ಚೆನ್ನಾಗಿರುವ ಬೆಳ್ಳನೆಯ ಮೊಟ್ಟೆಗಳನ್ನು ಎಲ್ಲರಿಗಿಂತ ಹೆಚ್ಚು ಸಂಖ್ಯೆಯಲ್ಲಿ ಇಡುತ್ತಾಳೆ.

ನನ್ನಲ್ಲಿ ಇವಳ ಬಗ್ಗೆ ಅತಿಯಾದ ಮೋಹವಿಲ್ಲ, ನನ್ನ ಮೇಲೆ ಇವಳಿಗೂ ಅಷ್ಟೇ. ಆದರೆ ನಾನು ಇವಳಿಂದ ಬೇರೆ ಎಲ್ಲರಿಗಿಂತ ಹೆಚ್ಚು ಮರಿಗಳನ್ನು ಪಡೆದಿದ್ದೇನೆ. ಪ್ರತಿ ವರ್ಷ ಎರಡು ಡಜನ್ ಮೊಟ್ಟೆಯಿಡುತ್ತಾಳೆ. ಯಾರಿಂದಲೂ ದೂರು ಬರುವುದಿಲ್ಲ. ಹೆಂಗೋಳಿಯಿದ್ದರೆ ಇಂಥವಳಿರಬೇಕು ಅನ್ನುತ್ತಾರೆ. ಇವಳು ಸತ್ತು ಬಿದ್ದಾಗ ಅವರೆಲ್ಲ ಸೊಗಸಾದ ಸೂಪ್ ಮಾಡುತ್ತಾರೆ. ಸಾವಿನಲ್ಲಿ ಇಂಥ ವಿಷಯವಿದೆ ಅನ್ನುವುದು ಇವಳಿಗೆ ತಿಳಿದಿರುವಂತಿಲ್ಲ. ಏಕೆಂದರೆ ತನ್ನ ತಂಗಿಯರೊಡನೆ ತಂತಿಯ ಮೇಲೆ ಆಟವಾಡುವುದನ್ನು ತುಂಬ ಇಷ್ಟಪಡುತ್ತಾಳೆ, ಇವಳೇ ಕಾರಾ.

ಹಿಪ್ ಇದಕ್ಕೆ ತೀರ ತದ್ವಿರುದ್ಧವಾದವಳು : ಕೆಂಪು, ತೆಳ್ಳಗಿದ್ದಾಳೆ. ಗೂಬೆಯಂತೆ ಕೀರಲು ದನಿ, ಜಿಗುಟು ಸ್ವಭಾವ, ಅಸೂಯೆಗಾರ್ತಿ. ಉರಿಮೋರೆಯ ವ್ಯಾಮೋಹಿ. ಎಲ್ಲ ಹೆಂಗೋಳಿಗಳನ್ನೂ ಹಿಡಿಯುವಂಥವಳು. ಆದರೆ ನನ್ನನ್ನು ಮಾತ್ರ ಅತಿಯಾಗಿ - ಸಿಟ್ಟಿನಿಂದ - ಪ್ರೀತಿಸಿದವಳು. ನನ್ನನ್ನು ಕಂಡರೆ ಓಡಿ ಬಂದು ಕೆಳಗೆ ಕುಳಿತು ಗುರು ಗುಟ್ಟಿ ರೆಕ್ಕೆ ಅಗಲಿಸುವಂಥವಳು. ನಿಮ್ಮ ಭಾಷೆಯಲ್ಲಿ ಇವಳನ್ನು ನೀವು ಅತಿಕಾಮಿ ಎನ್ನುತ್ತೀರೇನೋ. ಆದರೆ ನಾನಿವಳಿಗೆ ಎಲ್ಲವನ್ನೂ ಕೊಡುತ್ತ ಬಂದಿರುವಂಥವನು -

ಪ್ರತಿಯೊಂದು ಮೂಳೆಯೂ ಬಾಣವಾಗಿರುವಂತೆ - ನನ್ನ ಎಲ್ಲವನ್ನೂ ಕಸಿದುಕೊಳ್ಳುತ್ತ ಬಂದವಳು. ಇವಳ ಮೊಟ್ಟೆಗಳು ರಕ್ತದ ಮಚ್ಚೆಯಿದ್ದರೂ ಶುಭ್ರವಾದವು. ನನಗೆ ಗೊತ್ತಿರುವಂತೆ ಎಲ್ಲ ಹೊತ್ತಿನಲ್ಲೂ ಜಗಳ ಆಡುತ್ತಿರುವಂಥವಳು. ಸುತ್ತ ಅಂಗಳ ದಲ್ಲೆಲ್ಲ ಓಡಾಡುತ್ತಿದ್ದವಳು. ದೂರಿನ ಮೇಲೆ ದೂರು : ಇವಳು ನನ್ನನ್ನು ಹಿಡಿದು ಕೊಂಡಳು. ಅವಳು ನನಗೆ ಹೊಡೆದಳು. ಇನ್ನೊಬ್ಬಳು ಕೆಳತಳ್ಳಿ ಬೀಳಿಸಿದಳು. ಮತ್ತೊಬ್ಬಳು ಮೂತಿಯ ಕೆಳಕ್ಕೆ ಪರಚಿದಳು. ಮೊಟ್ಟೆಗಳನ್ನಿಟ್ಟಿರುತ್ತಾಳೆ, ಎಲ್ಲಿ ಇಟ್ಟೆ ಅನ್ನುವುದನ್ನೇ ಮರೆತಿರುತ್ತಾಳೆ. ಹಾರಲು ಯತ್ನಿಸಿರುತ್ತಾಳೆ, ಒಂದು ಕಾಲು ಮುರಿದುಕೊಂಡಿರುತ್ತಾಳೆ. ಮರದ ಮೇಲಿದ್ದವಳು ತಕ್ಷಣದಲ್ಲೇ ಜಂತೆಯ ಮೇಲಿರುತ್ತಾಳೆ. ರಾತ್ರಿ ಗೂಡಿನೊಳಗೆ ಕಣ್ಣು ಮುಚ್ಚದವಳು, ಚಡಪಡಿಕೆ, ಹರಟೆ. ಇವಳ ಜಾಗ ಯಾವುದು ಎಂದು ತಿಳಿಯುತ್ತಲೇ ಇರಲಿಲ್ಲ. ತೀಟೆ ಹತ್ತಿದ ಸೂಳೆ. ಇವಳನ್ನು ಅವರು ತುಂಬ ಹಿಂದೆಯೇ - ಬಡಕಲಾಗಿದ್ದಾಗಲೇ - ಕೊಂದರು. ತನ್ನನ್ನು ತಾನೇ ಕೊಂದು ಕೊಂಡಳು - ಮತ್ತೇತಕ್ಕೆ ? ಇವಳು ತಿಪ್.

ಚಿಪ್ ಪೂರ್ತಿ ಬೆಳ್ಳನೆಯವಳು. ಹೆಂಗೋಳಿಗಳ ಸಣ್ಣತನಗಳೆಲ್ಲ ಇಲ್ಲದವಳು. ಬಿಸಿಲಿನಂತೆ ಹೊಳೆಯುವವಳು. ಬಾತುಕೋಳಿಯಂತೆ ಕಾಣುವವಳು. ಜಗಳ ಕಂಡರೆ ಬೆಂಕಿ ಕಂಡಂತೆ ದೂರ ಹೋಗುವವಳು. ಸಣ್ಣ ಜಗಳವಾದರೂ ಮಲಗದವಳು. ನನ್ನನ್ನು ಪತಿವ್ರತೆಯಾಗಿ ಪ್ರೀತಿಸಿದವಳು. ನನ್ನನ್ನಿವಳು ಹೆಂಗೋಳಿಗಳ ಬೇಟೆಗಾರ ಎಂದು ತೀರ್ಮಾನಿಸಿದವಳು. ಆದರೆ ತನಗಾಗಿ ಎಲ್ಲವನ್ನೂ ತೆಗೆದಿರಿಸಿಕೊಳ್ಳು ತ್ತಿದ್ದಂಥವಳು. ಮೆಲುದನಿಯಲ್ಲಿ ಕ್ಲುಕ್‌ಗುಡುತ್ತಿದ್ದವಳು. ಪ್ರತಿದಿನವೂ ಮೈ ತುಂಬಿಕೊಂಡೇ ಏಳುತ್ತಿದ್ದವಳು.

ಇವಳು ಮೊಟ್ಟೆಗಳ ಮೇಲೆ ಕೂರಲು ಬಯಸಿದರೆ ಅವುಗಳ ಮೇಲೆ ಬೇರೆ ಯಾರೂ ಕೂತಿರಬಾರದು. ಬಿಳಿ ಕಲ್ಲೊಂದು ಕುಳಿತಂತೆ ಕೂರುವವಳು. ತುಂಬ ಹೊಳೆಯುವಂಥವಳೇನಲ್ಲ. ಒಂದು ದಿನ ಬಾತುಕೋಳಿಯ ಮೂರು ಮೊಟ್ಟೆ ಗಳನ್ನು ತಂದಳು. ನೀರಿಗಿಳಿದು ತೇಲುವಂತಾದ ದಿನಗಳವರೆಗೂ ಈ ಬಾತುಕೋಳಿ ಮರಿಗಳನ್ನು ಕೋಳಿಮರಿಗಳು ಎಂದೇ ತಿಳಿದಿದ್ದಳು. ಆದರೆ ಅವು ತೇಲಲು ಆರಂಭಿಸಿದಾಗ ಅವನ್ನು ಹಿಡಿಯಲು ಕೆರೆಗೆ ಧುಮುಕಿ ಸಾವಪ್ಪಿದಳು. ದಡದಲ್ಲಿ ಸಿಕ್ಕಿದ್ದಳು. ಇವಳ ತಾಯಿಯ ಹೃದಯ ಒಡೆದು ಹೋಗುವಂತಿತ್ತು. ಚಿಪ್ ಎಂಥ ಮೂರ್ಖಳು

ಎಂದು ವಿವರಿಸಲು ಯತ್ನಿಸಿದೆ. ಆದರೆ ಇವಳ ಜಗಳಗಂಟಿ ತಾಯಿಯ ಜೊತೆ ಮಾತಾಡಲಾಗಲಿಲ್ಲ.

ಚಿಪ್ ಕೆಲವು ಅಪರೂಪದ ಕಾರಣಗಳಿಗಾಗಿ ತಿಪ್‌ಳನ್ನು ಪ್ರೀತಿಸುತ್ತಿದ್ದಳು. ತಿಪ್ ಬಯಸಿದ್ದನ್ನೆಲ್ಲ ಮಾಡುತ್ತಿದ್ದಳು. ಆದರೆ ತಿಪ್ ಇವಳಿಗೆ ರಕ್ತವೈರಿ. ಚಿಪ್‌ಳ ಜಾಗದಲ್ಲಿ ಯಾರು ಕುಳಿತರೂ ಪರಚುತ್ತಿದ್ದಳು. ಆದರೆ ಚಿಪ್ ಏನೂ ನಡೆದಿಲ್ಲ ಅನ್ನುವಂತೆ ತಿಪ್‌ಳನ್ನು ಮಾತಾಡಿಸುತ್ತಿದ್ದಳು. ಸ್ವರ್ಗದಿಂದ ಬರುವ ಮರಿಗಳನ್ನು ತುಂಬು ಅಂತಃಕರಣದಿಂದ ನೋಡುತ್ತಿದಳು. ಇವಳು ಚಿಪ್.

ಪ್ರಿ-ಪ್ರಿ ಇದುವರೆಗೆ ನಾನು ನೋಡಿರುವವರಲ್ಲೆಲ್ಲ ಕುಳ್ಳ ಹೆಂಗೋಳಿ. ಹೆಂಗೋಳಿಯೊಂದನ್ನು ಪಡೆಯಬೇಕಾದರೆ ಇವಳಂತಿರಬೇಕು ; ಇದ್ದಲಿನಷ್ಟು ಕಪ್ಪು, ಕಟ್ಟಿಗೆಯಷ್ಟು ತೆಳ್ಳಗೆ. ಕಳ್ಳಿ, ಹರಟೆಮಲ್ಲಿ, ಲೋಭಿ. ಮೊದಲ ಗಂಡನ ಜೊತೆ ಜಗಳವಾಡಿ ಒಂದು ಕಣ್ಣು ಕುರುಡಾಗಿಸಿಕೊಂಡಿರುವವಳು. ತಿಪ್ಪೆ ಮೇಲಿರುವುದೇ ಇವಳಿಗೆ ಯೋಗ್ಯವಾದುದು. ಬಲವಾಗಿರುವ ಹುಂಜಗಳು ಇವಳನ್ನು ಎತ್ತಿ ಒಯ್ಯುತ್ತವೆ. ಬೇರೆ ಗೂಡುಗಳ ಒಳಕ್ಕೆ ಸುಲಭವಾಗಿ ಜಾರಿಕೊಳ್ಳುತ್ತಾಳೆ. ಗ್ಯಾರೇಜಿನಲ್ಲಿ ಇರುವುದನ್ನೆಲ್ಲ ಹುಡುಕಾಡುತ್ತಾಳೆ. ಹುಂಜದ ಜುಟ್ಟನ್ನು ಹೊಂದಿದ್ದಾಳೆ, ದನಿಯೂ ಹುಂಜದಂತಿದೆ. ಹುಣ್ಣಿಮೆ ರಾತ್ರಿಯಲ್ಲಿ ಮೈಯೊಳಗೆ ದೆವ್ವ ಹೊಕ್ಕಿರುವಂತೆ ಕೂಗುತ್ತಾಳೆ.

ತಾನು ಇಡುವ ಮೊಟ್ಟೆಗಳನ್ನೇ ಇವಳು ಗಬಗಬ ತಿನ್ನುತ್ತಾಳೆ, ಇಲ್ಲವೇ ಸಣ್ಣತನದಲ್ಲಿ ಸೀಳಿ ಒಡೆಯುತ್ತಾಳೆ. ನಾನು ಇವಳನ್ನು ದ್ವೇಷಿಸುತ್ತೇನೆ. ಕರಿ ತಾಯಿಯ ಕರಿಮಗಳು. ಈ ಕೊಳಕಿ ಎಷ್ಟೊಂದು ಸಲ ಆಣೆ-ಭಾಷೆಗಳನ್ನಿರಿಸಿದ್ದಾಳೆ. ಆದರೆ ತನಗೆ ಬೇಕು ಅನ್ನಿಸಿದಾಗೆಲ್ಲ ಬರುತ್ತಾಳೆ, ಹೊಗಳಲು ಆರಂಭಿಸುತ್ತಾಳೆ. ಆಸೆ ತೋರಿಸುತ್ತಾಳೆ. ನನ್ನ ಕಣ್ಣಲ್ಲಿ ಕಣ್ಣಿಡುತ್ತಾಳೆ, ಭಿಕ್ಷುಕಳಂತೆ.

ನನ್ನಲ್ಲಿ ಹೊಡೆದು ಬಡಿಯುವ ಸ್ವಭಾವವಿಲ್ಲ. ಆದರೆ ಪ್ರಿ-ಪ್ರಿ ನನ್ನ ಮೇಲೆ ಕೆಟ್ಟ ಪರಿಣಾಮ ಬೀರುತ್ತಾಳೆ. ಇವಳ ತಲೆ ಗರಿಗಳನ್ನು ಹಿಡಿದು ಅಂಗಳದಲ್ಲೆಲ್ಲ ಎಳೆದಾಡುತ್ತೇನೆ. ನನ್ನ ಉಳಿದ ಹೆಂಡತಿಯರು ಈ ಮಾರಿಯಿಂದ ನನ್ನನ್ನು ದೂರವಿರಿಸುತ್ತಾರೆ. ನನ್ನ ಮಹಾರಾಣಿ ಎಷ್ಟೋ ಸಲ ಇವಳನ್ನು ಕಟುಕನಿಗೆ ಹಿಡಿದುಕೊಡಲು ಯತ್ನಿಸಿದ್ದಾಳೆ. ಆದರೆ ಹೀಗೆ ಹಿಡಿದುಕೊಡಬೇಕು ಎನ್ನುವಾಗಲೇ

ಇವಳು ಗೂಡಿನಲ್ಲಿರುವುದಿಲ್ಲ. ಹಾರಿಗ್ಯಾಲಿ. ನಾಯಿ ಜಾತಿಯ ಹೆಂಗೋಳಿ. ಇವಳೇ ಪ್ರಿ-ಪ್ರಿ.

ಕ್ಲುಕೆಲೆ ನನ್ನ ಚಿಕ್ಕ ಮಗಳು. ಇವಳ ತಾಯಿ ಕಾರಾ. ಒಬ್ಬ ತಂದೆ ತನ್ನ ಮಗಳನ್ನೇ ಯಾವಾಗಲಾದರೂ ಹೆಂಡತಿಯಾಗಿಸಿಕೊಂಡಿದ್ದಾನೆ ಎಂಬ ಗಾಳಿಮಾತನ್ನು ನಾನಿನ್ನೂ ಕೇಳಿಲ್ಲ. ಇವಳನ್ನು ನೋಡಿದಾಗಲೆಲ್ಲ ನನ್ನ ಕಣ್ಣುಗಳನ್ನು ನಾನೇ ನಂಬಲಾಗುವುದಿಲ್ಲ. ಇವಳು ಯಾವಾಗ ಹುಟ್ಟಿದಳು ? ಮೊನ್ನೆ ತಾನೆ ಮೊಟ್ಟೆಯಿಂದ ಹೊರಗೆ ಬಂದಂತಿದೆ. ಸುತ್ತ ಕವಿದುಕೊಂಡಿದ್ದ ಗಟ್ಟಿ ಚಿಪ್ಪನ್ನು ಒಡೆದುಕೊಂಡು ಕೆಳಗೆ ಧುಮುಕಿದ್ದವಳು. ಆದರೆ ಈಗಲೇ ವೈಯಾರ ತೋರುತ್ತಿದ್ದಾಳೆ. ಹೆಂಗೋಳಿಗಳ ತಂತ್ರಗಳನ್ನೆಲ್ಲ ತಿಳಿಯುತ್ತಿದ್ದಾಳೆ. ಪುಟ್ಟ-ಪುಟ್ಟ ಮೊಟ್ಟೆಯಿಡುತ್ತಿದ್ದಾಳೆ. ಇಷ್ಟರಲ್ಲಿಯೇ ನಾನು ನನ್ನ ಮೊಮ್ಮಕ್ಕಳಿಗೆ ತಂದೆಯಾಗಲಿದ್ದೇನೆ.

ನಾನು ಇವಳನ್ನು ತುಂಬ ಪ್ರೀತಿಸುತ್ತೇನೆ. ಆದರೆ ಇವಳು ತನ್ನ ಹೃದಯವನ್ನು ಬೇರೆ ಹುಂಜಕ್ಕೆ ಕೊಟ್ಟಿದ್ದಾಳೆ ಎನಿಸುತ್ತದೆ. ಪಕ್ಕದ ಗೂಡಿನ ಸೊಟ್ಟಗಣ್ಣಿನ ಮೂರ್ಖ ಹುಂಜವಿರಬೇಕು. ಆ ಮುಸುರೆತಿರುಕನಲ್ಲಿ ಇವಳು ಏನು ಕಂಡಳೋ ನನಗಂತೂ ತಿಳಿಯುತ್ತಿಲ್ಲ. ಒಂದು ಹುಂಜನಲ್ಲಿ ಹೆಂಗೋಳಿಯೊಬ್ಬಳು ಏನನ್ನು ಕಂಡಳು ಅನ್ನುವುದು ಹುಂಜವೊಂದಕ್ಕೆ ಹೇಗೆ ಗೊತ್ತಾಗಬೇಕು ? ಇವಳ ತಲೆ ಗರಿ ತುಂಬಿದ ಕೊರಳಬಾಲದಿಂದ ಮಾಟವಾಗಿ ಹೊರಳುತ್ತದೆ. ಜುಟ್ಟಿನಲ್ಲಿ ಮೊನಚಿದೆ. ಹಿಮ್ಮಡಿಗಳಲ್ಲಿ ಮುಳ್ಳುಗಳಿವೆ. ಅವನು ಮರಳದಾರಿಯಲ್ಲಿ ಕಾಲಿನಿಂದ ಧೂಳು ಹಾರಿಸುತ್ತ ತಂತ್ರಹೂಡಿ ಕರೆಯುತ್ತಿರ ಬಹುದು.

ಇವಳಿಗೆ ನಾನು ಒಳ್ಳೆಯವನಾಗಿಯೇ ಇದ್ದೇನೆ. ಆದರೆ ಇವಳು ಮೆಚ್ಚುತ್ತಿಲ್ಲ. ನಾನು ಇವಳಿಗೆ ಬುದ್ಧಿಮಾತು ಹೇಳುತ್ತೇನೆ. ಆದರೆ ಇವಳು ಕೇಳುವುದೇ ಇಲ್ಲ. ನನ್ನ ಕಣ್ಣೊಳಗಿನ ಗುಡ್ಡೆಯನ್ನು ಕಾಯುವಂತೆ ನೋಡಿಕೊಳ್ಳುತ್ತೇನೆ. ಆದರೆ ಇವಳು ಈಗಲೇ ಕೆಣಕಲು ನೋಡುತ್ತಾಳೆ..... ಹೊಸ ಪೀಳಿಗೆ ಪೂರ್ತಿಯಾಗಿ ಕೆಡುತ್ತಿದೆ. ಆದರೆ ನಾನೇನು ಮಾಡಲಿ ? ನಾನು ಬಯಸುವುದು ಒಂದೇ ಬಯಕೆ : ಎಲ್ಲಿಯವರೆಗೆ ನಾನು ಬದುಕಿರುತ್ತೇನೆಯೋ ಅಲ್ಲಿಯವರೆಗೂ ಇವಳು ನನ್ನವಳಾಗಿರಬೇಕು. ಮುಂದಿನದು ನನ್ನದಲ್ಲ.

ಕಬಾಲಾದಲ್ಲಿ ನಿಮ್ಮ ತಿಳಿವಳಿಕಸ್ಥರು ಕೊಕ್ಕೋಕ್ಕೋ ಎನ್ನುವುದು ಬರಿಯ ನಂಬಿಕೆಯನ್ನೇ ಆಧರಿಸಿದೆ ಎಂದು ತಿಳಿದಿದ್ದಾರೆ. ಯಾವ ಕಾರಣದಿಂದ, ತರ್ಕವೇ ? ಆದರೆ ನಂಬಿಕೆಯೂ ಬೇರೆ ಬೇರೆ ರೀತಿಯಲ್ಲಿ ಇರುತ್ತದೆ. ಒಂದು ಹುಂಜದ ಸಣ್ಣ ನಂಬಿಕೆಯೂ ಹೊರಗೆ ಬರುತ್ತದೆ, ಅದೂ ಕುಗ್ಗಿಕೊಳ್ಳುತ್ತದೆ, ಅದರ ರೆಕ್ಕೆಗಳು ಮುದುರಿಕೊಳ್ಳುತ್ತವೆ, ಜುಟ್ಟು ಬಿಳಿಚಿಕೊಳ್ಳುತ್ತದೆ, ಕಣ್ಣುಗಳು ಮಂಜುಗಟ್ಟುತ್ತವೆ, ಅದರ ಕೂಗು ಗಂಟಲಲ್ಲೇ ಕಟ್ಟಿಕೊಳ್ಳುತ್ತದೆ. ಯಾಕೆ ಕೂಗಬೇಕು ? ಯಾರಿಗಾಗಿ ಮತ್ತು ಎಲ್ಲಿಯವರೆಗೆ ? ಯಾರಾದರೂ ಸಮಯದ ಬಗ್ಗೆ ಯೋಚಿಸಿದರೆ ಅದು ಒಳ್ಳೆಯದಲ್ಲ. ಈಗ ಬೇಕಿದ್ದರೂ ಹುಂಜ ಅಳುತ್ತದೆ. ಹೌದು, ಹುಂಜಗಳು ಅಳಲು ತ್ರಾಣವಿರಿಸಿಕೊಂಡಿವೆ. ಯೋಮ್‌ಕಿಪ್ಪರ್‌ನ ಹಿಂದಿನ ರಾತ್ರಿಯಲ್ಲಿ ನೀವೆಲ್ಲ ನಡುರಾತ್ರಿಯ ಪ್ರಾರ್ಥನೆಗಳನ್ನು ಹಾಡುತ್ತಿರುವಾಗ ಹುಂಜಗಳ ಕೂಗನ್ನು ಸ್ವಲ್ಪವಾದರೂ ಕೇಳಿ. ನಿಮ್ಮ ಮಾನವ ಕಿವಿಗಳಿಗೆ ನಮ್ಮ ಅಳು ಕೇಳಿತೆಂದರೆ ನೀವೆಲ್ಲ ಕತ್ತರಿಸುವ ನಿಮ್ಮ ಕತ್ತಿಗಳನ್ನು ಬಿಸಾಡುತ್ತೀರಿ.

ಆದರೆ ಒಂದು ಸಲ ಏನು ನಡೆಯಿತು ಅನ್ನುವುದನ್ನು ನಿಮಗೆ ಹೇಳುತ್ತೇನೆ.

ರಾತ್ರಿಯ ಕತ್ತಲು, ಕೋಳಿಗಳು ತೂಕಡಿಸುತ್ತಿದ್ದವು ಅಥವಾ ತೂಕಡಿಕೆಯ ನೆವದಲ್ಲಿ ಇದ್ದವು. ಯೋಮ್‌ಕಿಪ್ಪರ್‌ಗೆ ಕೋಳಿಗಳನ್ನು ಆಹುತಿ ಕೊಡುವ ಹತ್ತು ದಿನ ಮೊದಲು ಪಶ್ಚಾತ್ತಾಪ ಪಡುತ್ತಿದ್ದ ಸಮಯ. ಇಡೀ ದಿನ ಅತಿಯಾದ ಕಾವು. ರಾತ್ರಿಯ ಆಕಾಶ ಮೋಡಗಳಿಂದ ತುಂಬಿತ್ತು. ಮೇಲೆ ಬೆಳ್ಳಿ ಚಂದ್ರನಿದ್ದ. ಗಾಳಿ ಬಿಸಿಯಾಗಿತ್ತು. ಬಾತುಕೋಳಿಗಳ ಕೆರೆಯಲ್ಲಿ ಕೆಸರಿನ ತೇವವಿತ್ತು. ಬೆಳಕಿತ್ತು, ಆದರೆ ತಂಪಿರಲಿಲ್ಲ, ಮಳೆಯಿರಲಿಲ್ಲ. ಜನ ಬಾಗಿಲುಗಳನ್ನು ಮುಚ್ಚಿಕೊಂಡು ತಮ್ಮ ಗರಿ ತುಂಬಿದ ಹಾಸಿಗೆಗಳಲ್ಲಿ ಗೊರಕೆಯಲ್ಲಿದ್ದರು. ಹುಲ್ಲು ಕೂಡ ನಿಶ್ಚಲವಾಗಿತ್ತು ; ಸೇಬಿನ ಮರದಲ್ಲಿನ ಎಲೆಗಳೂ ಅಲುಗದಂತಿದ್ದವು. ಮಿಡತೆಗಳು ನಿದ್ದೆ ಹೋಗಿದ್ದವು. ಜಪ್ಪಾನಲ್ಲಿದ್ದ ಕೋಳಿಗಳು ದನಿ ಇಲ್ಲದಂತಿದ್ದವು. ಮಣ್ಣುಗುಡ್ಡೆಯೊಳಗಿನ ಜೀರ್ದುಂಬಿಗಳೂ ಆರಾಮವಾಗಿದ್ದವು.

ಎಲ್ಲವೂ ಮೌನದಲ್ಲಿತ್ತು. ಪ್ರತಿಯೊಂದೂ ತನ್ನ ಉಸಿರಾಟದಲ್ಲಿತ್ತು. ಜಗತ್ತು ಕಟ್ಟಕಡೆಯ ಪ್ರಶ್ನೆಯನ್ನು ಕೇಳಿ ಉತ್ತರಕ್ಕಾಗಿ ಕಾಯುತ್ತಿತ್ತು. ಹೌದು ಅಥವಾ ಇಲ್ಲ. ಈ ರೀತಿ ಅಥವಾ ಬೇರೆ ರೀತಿಯಲ್ಲಿ. ವಿಷಯಗಳು ಹೀಗೆಯೇ ಮುಂದುವರಿಯುವುದಿಲ್ಲ.

ಸರಿಯಾದ ಉತ್ತರ ಬಾರದಿದ್ದರೆ ಸೃಷ್ಟಿಕ್ರಿಯೆ ಅನಾದಿಯ ಪಂಚಭೂತಗಳತ್ತ ಹೊರಳುತ್ತದೆ. ನಾನು ಅಲುಗಾಡಲಿಲ್ಲ. ನನ್ನ ಹೃದಯ ಬಡಿಯಲಿಲ್ಲ. ರಕ್ತ ಚಲಿಸಲಿಲ್ಲ. ಯಾವುದೂ ಚಲಿಸಲಿಲ್ಲ. ಆಗ ಮಧ್ಯರಾತ್ರಿ. ಆದರೆ ನಾನು ಕೂಗಲು ಅವಸರಪಡಲಿಲ್ಲ. ಅಂತ್ಯಕಾಲ ಸನ್ನಿಹಿತವಾಯಿತೇ?

ತಕ್ಷಣ ಎಲ್ಲಿಂದಲೋ ರೆಕ್ಕೆಗಳ ಹೊಡೆತವೊಂದು ಕೈ ಹತ್ತಿರದಲ್ಲೇ ಬಡಿಯಿತು: ಕೊಕ್ಕೋಕ್ಕೋ ! ನಾನು ಥರಗುಟ್ಟಿದೆ. ಮೈಯೆಲ್ಲ ಕಿವಿಯಾಯಿತು. ಇದು ತುಂಬ ಹಳೆಯ ಕೊಕ್ಕೋಕ್ಕೋ. ಆದರೆ ಹೊಸ ಅರ್ಥದಲ್ಲಿತ್ತು. ಅಲ್ಲ, ಹೊಸದಲ್ಲ, ಹೊಚ್ಚಹೊಸದು. ಹೊಸ ಶೈಲಿಯದು. ಬೇರೆಡೆಯಿಂದ ಕೇಳಿ ಬರುತ್ತಿರುವಂಥದು, ಬೇರೊಂದು ಇಂಪಿನದು. ಇದನ್ನು ಯಾರು ಕೂಗುತ್ತಿದ್ದಾರೆ ಅನ್ನುವುದು ತಿಳಿಯಲಿಲ್ಲ. ಆದರೆ ತಕ್ಷಣ ಎಲ್ಲವೂ ಬೆಳಕಾಯಿತು. ನನಗೆ ಪ್ರಾಯ ಹೊರಳಿ ಬಂದಿತ್ತು. ಇದು ಸಾಧ್ಯವೇ ? ನನಗೆ ನಾನೇ ಕೇಳಿಕೊಂಡೆ. ಲಕ್ಷಾಂತರ ತಲೆಮಾರಿನ ಕೋಳಿಗಳು ಕೂಗಿವೆ, ಆದರೆ ಇದುವರೆಗೆ ಯಾವುದೂ ಹೀಗೆ ಕೂಗಿಲ್ಲ. ಇದು ನನ್ನ ನೆತ್ತಿಯ ಬಾಗಿಲು ತೆರೆಯಿತು. ಹೃದಯದಲ್ಲಿ ಹರ್ಷವನ್ನು ತುಂಬಿತು. ಉಲ್ಲಾಸ, ನಂಬಿಕೆಗಳನ್ನು ಉಕ್ಕಿಹರಿಸಿತು. ನಿಜವಾಗಿಯೂ ಇದು ಸಾಧ್ಯವೇ ? ನಾನು ಕೇಳಿಕೊಂಡೆ. ನಾನೊಬ್ಬ ಮೂರ್ಖ, ಅನುಮಾನಪಟ್ಟೆ ! ಪೆಚ್ಚು ಮತ್ತು ಸಂತೋಷ ಎರಡನ್ನೂ ಅನುಭವಿಸಿದೆ. ನಾನೂ ಸಹ ಕೂಗಬೇಕು ಅಂದುಕೊಂಡೆ, ಆದರೆ ಅಂಜಿದೆ. ಅವನಿಗೆ ಮತ್ತೇನನ್ನು ಕೂಗಿ ಹೇಳಲಿ ? ತಿಪ್ ಎಚ್ಚರಗೊಂಡು ಕೇಳಿದಳು, 'ಏನದು?'

'ಒಂದು ಹೊಸ ಕೂಗು, ಹೊಸ ಪದ' ನಾನು ಹೇಳಿದೆ. 'ಕೋಳಿಗಳೇ ಆಶೀರ್ವಾದ ಮಾಡಿಸಿಕೊಳ್ಳಲು ಜತೆಯಲ್ಲಿ ಬನ್ನಿ. ನಾವು ವ್ಯರ್ಥವಾದ ಬದುಕನ್ನು ಬದುಕುತ್ತಿಲ್ಲ.

'ಯಾರವನು, ಎಲ್ಲಿದ್ದಾನೆ?' ತಿಪ್ ಕೇಳಿದಳು.

'ಅವನು ಯಾರೆಂದು ಬೇರೆಯಾಗಿಸಲು ಯಾವ ವ್ಯತ್ಯಾಸವಿದೆ ? ಕೂಗಿನಲ್ಲಿಯೇ ಶಕ್ತಿಯಿದೆ, ಹುಂಜದಲ್ಲಿ ಅಲ್ಲ'.

'ಈಗಲೂ.'

ನಾನು ಅವಳಿಗೆ ಉತ್ತರ ನೀಡಲಿಲ್ಲ. ನನ್ನ ಕಣ್ಣುಗಳನ್ನು ಮುಚ್ಚಿಕೊಂಡೆ.

ಕೂಗುವುದು ನಿಂತಿತು. ಆದರೆ ಅದರ ಪ್ರತಿಧ್ವನಿ ಮರಗಳಿಂದ, ಮನೆಗಳಿಂದ, ಚಿಮಣಿಗಳಿಂದ, ಹಕ್ಕಿ ಗೂಡುಗಳಿಂದ ಮೌನದಲ್ಲಿಯೂ ಕೇಳಿ ಬರುತ್ತಲೇ ಇತ್ತು. ಪಿಟೀಲುವಾದನದಂತೆ, ಗಂಟೆ ಮೊಳಗಿನಂತೆ, ಟಗರಿನ ಗುಟುರಿನಂತೆ ಮಾರ್ದನಿಸುತ್ತಲೇ ಇತ್ತು. ಹಾಡುತ್ತಲೇ ಇತ್ತು. ಹಾಡುವುದನ್ನು ನಿಲ್ಲಿಸಲಿಲ್ಲ.

ಗೂಡಿನಲ್ಲಿ ಮೇಲೆದ್ದ ನಾಯಿ ಒಂದು ಸಲ ಬೊಗುಳಿತು. ರೊಪ್ಪದಲ್ಲಿ ಹಂದಿ ಕಿರುಗುಟ್ಟಿತು. ಕೊಟ್ಟಿಗೆಯಲ್ಲಿ ಕುದುರೆ ಕೆನೆಯಿತು. ಆಕಾಶದಲ್ಲಿ ಮೋಡಗಳು ಭಾಗವಾದವು. ಚಂದ್ರ ಹೊಳೆಯಲು ಆರಂಭಿಸಿದ. ಬೆಳ್ಳನೆಯ ಬಿಳುಪು. ನಾನು ಒಂದು ಕ್ಷಣ ಯೋಚಿಸಿದೆ : ಯಾರಿಗೆ ತಿಳಿದಿದೆ ? ನಾನು ಮಾತ್ರ ಕಲ್ಪಿಸಿಕೊಳ್ಳಬಲ್ಲೆ. ಹೆಂಗೋಳಿಗಳೂ ಈ ಮಾತನ್ನೇ ಕೇಳಿದವು ನಿಜ, ಅರೆ, ಇದು ಬರಿಯ ಕನಸಾಗಿದ್ದರೆ. ಬರಿಯ ಗಾಳಿಯಾಗಿದ್ದರೆ. ನರಿಯ ಕೂಗಾಗಿದ್ದರೆ. ಮೋಸದ ದನಿಯಾಗಿದ್ದರೆ. ಒಬ್ಬ ಬೇಟೆಗಾರನ ಕರೆ ಅಥವಾ ಕುಡುಕನ ಕೂಗು.

ಈಗಲೂ ಸಹ ಕೋಳಿಗಳು ಈ ಮಹೇಂದ್ರಜಾಲಕ್ಕೇ ನಿರೀಕ್ಷಿಸುತ್ತಿವೆ. ಈಗಲೂ ಅವರಿಗೆ ಇದು ಹೇಗೆ ನಡೆಯಿತು ಎಂದು ನಂಬಲು ಆಗುತ್ತಿಲ್ಲ. ಮಾಮೂಲಿನಂತೆ ಇದಕ್ಕೆ ಬೇರೆ ಹುಂಜಗಳು ಉತ್ತರ ಕೊಡಬಹುದು ಎಂದು ನಿರೀಕ್ಷಿಸಿದೆ. ಆದರೆ ಯಾವ ಸದ್ದೂ ಕೇಳಲಿಲ್ಲ. ನನ್ನೊಬ್ಬನನ್ನು ಬಿಟ್ಟು ಎಲ್ಲ ಹುಂಜಗಳೂ ಕೊಲೆಯಾಗಿವೆಯೆ ? ಒಂದು ವೇಳೆ ನಾನೂ ಕೂಡ ಕೊಲೆಯಾಗಿದ್ದು ಈ ಕೂಗನ್ನು ಕತ್ತರಿಸಿರುವ ನನ್ನ ಅರೆತಲೆಯಿಂದ ಕನಸಿನಲ್ಲಿ ಕೇಳುತ್ತಿದ್ದೇನೆಯೇ ? ಈ ನಿಶ್ಚಲತೆ ಈ ಜಗತ್ತಿನದಲ್ಲ. ನನ್ನ ಕೊಕ್ಕನ್ನು ನನ್ನ ಗರಿಗಳೊಳಗೆ ಇರಿಸಿ ನನ್ನ ಚರ್ಮವನ್ನು ಚುಚ್ಚಿ ನೋಡಿಕೊಂಡೆ. ಕತ್ತರಿಸಿದೆಯೇ ಎಂದು, ತಕ್ಷಣ ಕೊಕ್ಕೋಕ್ಕೋಽ ! ಇದು ಅದೇ ಹುಂಜ. ಅದೇ ಕೂಗು, ಇಲ್ಲ, ಅದೇ ರೀತಿಯಲ್ಲಿಲ್ಲ, ಆಗಲೇ ಬೇರೆಯಾಗಿದೆ : ಆತ್ಮದಲ್ಲಿ ತುಂಬಿರುವ ನಂಬಿಕೆಗೆ ಚೈತನ್ಯ ಇಡುವಂತಿದೆ ; ಹುಂಜವೊಂದರ ಹೃದಯದಿಂದ ಮಾಧುರ್ಯವನ್ನು ಮೇಲಿನೆತ್ತರಕ್ಕೆ ಉಕ್ಕಿ ಹರಿಸುವಂತಿದೆ, ಎಲ್ಲಿ ಯಾವ ಕಾಲಕ್ಕೂ ಹದ್ದುಗಳು ಹಾರಾಡುವುದಿಲ್ಲವೋ ಅಷ್ಟು ಎತ್ತರಕ್ಕೆ; ಎಲ್ಲ ಶಿಖರಗಳಿಗಿಂತಲೂ ಮೇಲಿನ ಎತ್ತರಕ್ಕೆ. ಮೋಡಗಳಿಗಿಂತಲೂ ಮೇಲಕ್ಕೆ. ನಕ್ಷತ್ರಗಳನ್ನು ಆವರಿಸುವ ಕತ್ತಲಿಗಿಂತಲೂ ಮೇಲಿನ ಬೆಳಕಿನ ಎತ್ತರಕ್ಕೆ.

ಆ ರಾತ್ರಿ ನನಗೆ ಅರಿವು ಮೂಡಿದ ತಿಳಿವಾಯಿತು. ನಾನು ರಹಸ್ಯಗಳನ್ನು

ಒಡೆದು ಹೇಳುವುದಿಲ್ಲ -ನನ್ನ ನಾಲಿಗೆ ಬಿಗಿದುಕೊಳ್ಳುತ್ತದೆ -ಆದರೆ ಆ ಕೊಕ್ಕೋಕ್ಕೋೀ ಎಲ್ಲ ತಪ್ಪುಗಳನ್ನೂ ಸರಿಪಡಿಸಿತು. ಎಲ್ಲ ಪಾಪಗಳನ್ನೂ ಮಾಫಿ ಮಾಡಿತು. ಹುಂಜಗಳನ್ನೆಲ್ಲ ನೆಟ್ಟಗಾಗಿಸಿತು. ಎಲ್ಲವೂ ಕೊಕ್ಕೋಕ್ಕೋೀ ; ಕಟುಕ ಮತ್ತು ಬೊಗುಣಿ ; ಕತ್ತಿ ಮತ್ತು ಗಂಟಲು ; ಗರಿಗಳು ಮತ್ತು ಕೀಳುವವನು ; ನರಗಳಲ್ಲಿನ ರಕ್ತ ಮತ್ತು ಕಾಲುವೆಯಲ್ಲಿನ ರಕ್ತ. ಕೂಗು ಹುಂಜವೇ, ಪ್ರಶ್ನೆಗಳನ್ನು ಕೇಳಬೇಡ. ನಾವು ಎಲ್ಲವನ್ನೂ ಒಪ್ಪಿಕೊಳ್ಳುತ್ತೇವೆ : ಹುಂಜದ ಕೂಗು, ಹೆಂಗೋಳಿಯ ಕ್ಲುಕ್ಲುಕ್, ಸೃಷ್ಟಿಗೊಳ್ಳಲಿರುವ ಮೊಟ್ಟೆ, ತಿನ್ನಲಿರುವ ಮೊಟ್ಟೆ, ಮುಂದೆ ನಡೆದಾಡುವಂತಾಗುವ ಮೊಟ್ಟೆ, ತನ್ನೊಳಗೆ ರಕ್ತದ ಮಚ್ಚೆ ಇರಿಸಿಕೊಂಡಿರುವ ಮೊಟ್ಟೆ.

ಹುಂಜವೇ ಹಾಡು, ದೇವರನ್ನು ಸ್ತುತಿಸು. ನಿನ್ನ ಹೆಂಗೋಳಿಗಳನ್ನು ಪ್ರೀತಿಸು. ಬೇರೆ ಕೋಳಿಗಳು ನಿನ್ನ ಮೇಲೆ ತಾವಾಗಿಯೇ ಬೀಳುವವರೆಗೂ ಕಾದಾಟಕ್ಕೆ ಇಳಿಯ ಬೇಡ. ನಿನ್ನ ಕಾಳನ್ನು ತಿನ್ನು. ನಿನ್ನ ನೀರನ್ನು ಕುಡಿ. ಶಿಖರದ ತುದಿಯಲ್ಲಿ ನಿಂತು ಜಗತ್ತಿಗೆಲ್ಲ ಕೇಳುವಂತೆ ಕೂಗು - ನಾಲ್ಕು ಮೂಲೆಗಳಿವೆ - ನಿನ್ನ ಕೂಗಿಗಾಗಿ ಕಾಯುತ್ತಿವೆ. ನೀನು ಕೂಗದಿದ್ದರೆ ಏನೋ ತಪ್ಪಿ ಹೋಗುತ್ತದೆ. ನಿನಗೆ ಅರ್ಥವಾಗ ಲಿಲ್ಲವೇ ? ದೇವರಿಗೆ ತಿಳಿದಿದೆ. ನಿನಗೂ ತಿಳಿಯುತ್ತದೆ. ನೀನು ಹಿಂದಿನ ಅನಾದಿಕಾಲ ವನ್ನು ಪಡೆದಿದ್ದೀಯ. ನಿನ್ನ ನಂತರ ಅನಂತಕಾಲವಿದೆ. ನೀನು ಸಾಕಷ್ಟು ಕಾಲ ಜೀವಿಸುತ್ತ ಹೋಗುವೆ. ನಿನಗಾಗಿ ಯಾವ ಹೊಸದು ಕಾದುಕೊಂಡಿದೆಯೋ, ಸಾವಿನಲ್ಲಿ ಸಂತೋಷ ಪಡು. ಆದರೆ ಅದಾಗಿಯೇ ಬರಲಿ, ಎಲ್ಲಿಯವರೆಗೆ ಜೀವಿಸಿರುತ್ತೇವೆಯೋ ಅಲ್ಲಿಯವರೆಗೂ ಬದುಕು.

ಇಡೀ ರಾತ್ರಿ ಆ ಹುಂಜ ಕೂಗುತ್ತಲೇ ಇತ್ತು. ಯಾವ ಹುಂಜವೂ ಉತ್ತರ ಕೊಡಲಿಲ್ಲ. ಜೊತೆಗೂಡುವವರಿಲ್ಲದೆ ಅದು ಪೇಚಾಡಿಕೊಂಡಿರಬೇಕು. ದಿನ ಸರಿ ಯುತ್ತಿರುವಾಗ, ಪೂರ್ವದಲ್ಲಿ ಕೆಂಪು ಹರಡಲು ಆರಂಭಿಸಿದಾಗ ಅದು ತನ್ನ ಕೊನೆಯ ಕೂಗನ್ನು ಕೂಗಿತು - ಗಟ್ಟಿಯಾಗಿ, ಪ್ರೀತಿಯಿಂದ ದೈವೀಕವಾಗಿ.

ಮರುದಿನ ಪಕ್ಕದ ಗೂಡುಗಳಲ್ಲಿನ ಹುಂಜಗಳ ನಡುವೆ ಗರಿಗಳಿದ್ದವು. ಅವರ ಜುಟ್ಟು ಮತ್ತು ಕಂಗಳಲ್ಲಿ ಹೊಸತನವಿತ್ತು. ಏನನ್ನೂ ಕೇಳಲಿಲ್ಲ ಅಂದರು. ಮತ್ತೆ ಕೆಲವು ಏನನ್ನೋ ಕೇಳಿದೆವು. ಆದರೆ ಅದು ಹುಂಜವಲ್ಲ ಅಂದರು. ಹೆಂಗೋಳಿ ಗಳಂತೆ ಎಲ್ಲರಿಗೂ ಏನೂ ಜ್ಞಾಪಕದಲ್ಲಿ ಇರುವುದಿಲ್ಲ. ಕೋಳಿಗಳು ಸತ್ಯವನ್ನು ಯಾಕೆ

ಮರೆಮಾಚುತ್ತವೆ ? ಇವರಿಗೆ ಸತ್ಯದ ಮೇಲಿನ ಹೆದರಿಕೆ ಕತ್ತಿಗಿಂತಲೂ ಮಿಗಿಲಾದದ್ದು. ಇದು ಒಂದು ರೀತಿಯಲ್ಲಿ ಒಗಟಾಗಿದೆ.

ಆದರೆ ಆ ಹುಂಜ ಕೂಗಿದ ಮೇಲೆ - ಅದರ ಹೆಸರು ಪವಿತ್ರವಾದುದೇ - ನನಗೆ ಕೇಳುವುದರಲ್ಲಿ ಮತ್ತು ನೆನಪು ಮಾಡಿಕೊಳ್ಳುವುದರಲ್ಲಿ ಒಂದು ರೀತಿಯ ವಿಶೇಷತೆ ಲಭಿಸಿದೆ. ನಾನು ಆ ಪದವನ್ನು ಹರಡಲು ಇಚ್ಛಿಸುತ್ತೇನೆ. ನಾಳೆ ಯೋಮ್‌ಕಿಪ್ಪುರ್‌ನ ಹಿಂದಿನ ದಿನ. ನಂಬಿಕೆ ಇರುವವರಿಗೆ ಸಂತಸದ ದಿನ. ಕಣ್ಣಿನಿಂದ ನೋಡುವ ಕಿವಿಯಿಂದ ಕೇಳುವ ಸಮಯ ಎಲ್ಲರಿಗೂ ಒದಗಿ ಬಂದಿದೆ. ಮೇಲಿರುವ ಹುಂಜದ ಕೊಕ್ಕೋಕ್ಕೋ ಸ್ವರ್ಗ ಮತ್ತು ಭೂಮಿಯನ್ನು ಸುತ್ತಿಕೊಳ್ಳಲಿದೆ.

ಕೊಕ್ಕೋಕ್ಕೋ !

ತೈಬೆಲೆ ಮತ್ತು ಅವಳ ದೆವ್ವ

ಲುಬ್ಲಿನ್‌ನಿಂದ ಅಷ್ಟೇನೂ ದೂರವಿಲ್ಲದ ಲಷ್ನಿಕ್ ಪೇಟೆಯಲ್ಲಿ ಒಬ್ಬಾತ ತನ್ನ ಹೆಂಡತಿಯೊಡನೆ ವಾಸವಾಗಿದ್ದ. ಅವನ ಹೆಸರು ಚೈಮ್ ನೋಸೆನ್. ಇವನ ಹೆಂಡತಿಯ ಹೆಸರು ತೈಬೆಲೆ. ಇವರಿಗೆ ಮಕ್ಕಳಿರಲಿಲ್ಲ. ಮದುವೆ ಆದಾಗಿನಿಂದಲೂ ತೈಬೆಲೆ ಬಂಜೆಯಾಗಿರಲಿಲ್ಲ. ಒಬ್ಬ ಮಗ ಮತ್ತು ಇಬ್ಬರು ಹೆಣ್ಣು ಮಕ್ಕಳನ್ನು ಹೆತ್ತಿದ್ದಳು. ಆದರೆ ಈ ಮೂರು ಮಕ್ಕಳೂ ಬಾಲ್ಯದಲ್ಲಿಯೇ ಸತ್ತಿದ್ದವು. ಒಂದು ನಾಯಿಕೆಮ್ಮಿನಿಂದ, ಇನ್ನೊಂದು ಸಿಡುಬಿನಿಂದ, ಮತ್ತೊಂದು ಗಳಗಂಡ ರೋಗದಿಂದ. ಇದಾದ ಮೇಲೆ ತೈಬೆಲೆಗೆ ಮತ್ತೆ ಗರ್ಭ ನಿಲ್ಲಲಿಲ್ಲ. ಹರಕೆ, ಪ್ರಾರ್ಥನೆ, ಗಿಡಮೂಲಿಕೆಗಳೂ ನೆರವಿಗೆ ಬಂದಿರಲಿಲ್ಲ. ಈ ಚಿಂತೆಯಲ್ಲಿ ಮುಳುಗಿದ ಚೈಮ್ ನೋಸೆನ್ ಲೌಕಿಕ ವ್ಯವಹಾರಗಳಿಂದ ದೂರ ಇರಲಾರಂಭಿಸಿದ. ತನ್ನ ಹೆಂಡತಿಯಿಂದಲೂ ಬೇರೆಯಾಗಿ ಇರತೊಡಗಿದ. ಮಾಂಸ ತಿನ್ನುವುದನ್ನು ನಿಲ್ಲಿಸಿದ. ಮನೆಯಲ್ಲಿ ಹೆಚ್ಚು ಕಾಲ ಮಲಗುತ್ತಿರಲಿಲ್ಲ. ಸಿನಗಾಗ್‌ನೊಳಗೆ ಪ್ರಾರ್ಥನೆಯ ಬೆಂಚಿನಲ್ಲಿಯೇ ಕಾಲ ನೂಕತೊಡಗಿದ. ತೈಬೆಲೆ ತನ್ನ ತಂದೆತಾಯಿಯರಿಂದ ಬಳುವಳಿ ಪಡೆದ ಒಂದು ಅಂಗಡಿ ಇರಿಸಿಕೊಂಡಿದ್ದಳು. ಇಡೀ ದಿನ ಇವಳು ಇಲ್ಲಿಯೇ ಕೂರುತ್ತಿದ್ದಳು. ಇವಳ ಬಲಗೈ ಗಜಪಟ್ಟಿಯನ್ನು ಹಿಡಿದಿದ್ದರೆ ಎಡಗೈ ದೊಡ್ಡ ಕತ್ತರಿ ಹಿಡಿದಿರುತ್ತಿತ್ತು. ಎದುರಿನಲ್ಲಿ ಯಿದ್ದಿಷ್ ಭಾಷೆಯ ಒಂದು ಪ್ರಾರ್ಥನಾ ಪುಸ್ತಕವಿರುತ್ತಿತ್ತು. ಚೈಮ್ ನೋಸೆನ್‌ನದು ತೆಳ್ಳನೆಯ ಉದ್ದ ಶರೀರ, ಕಪ್ಪು ಕಣ್ಣುಗಳು. ಸಣ್ಣ ಗಡ್ಡವೂ ಇತ್ತು. ಸಿಡುಕುಮೋರೆ. ಕೆಲವು ಸಂದರ್ಭಗಳಲ್ಲಿ ಮೌನ ಮನುಷ್ಯನಾಗಿರುತ್ತಿದ್ದ. ತೈಬೆಲೆ ಕುಳ್ಳಗೆ ಅಂದವಾಗಿದ್ದಳು. ದುಂಡು ಮುಖ, ನೀಲಿ ಕಣ್ಣುಗಳು. ಹೀಗಿದ್ದರೂ ಇವಳನ್ನು ದೇಹಶಕ್ತಿ ಶಿಕ್ಷಿಸಿತ್ತು. ಈಗಲೂ ಇವಳು ಸುಲಭವಾಗಿ ನಗು ಬೀರುತ್ತಿದ್ದಳು. ಕೆನ್ನೆಗಳಲ್ಲಿ ಮೊಡವೆ ಆಟವಾಡುತ್ತಿದ್ದವು. ಅಡಿಗೆ ಮಾಡಲು ಈಗಲೂ ಇವಳ ನೆರವಿಗೆ ಬೇರೆಯವರು ಬೇಕಿರಲಿಲ್ಲ. ಸ್ಟವ್ ಹಚ್ಚುತ್ತಾಳೆ, ಪ್ರತಿದಿನ ತನಗೆ ಸೂಪ್ ಅಥವಾ ಗಂಜಿ ಮಾಡಿಕೊಳ್ಳುತ್ತಾಳೆ. ಈ ಎಲ್ಲ ಕೆಲಸಗಳ ನಡುವೆಯೂ ಕಾಲುಚೀಲಗಳನ್ನು ಹೆಣೆಯುತ್ತಾಳೆ. ಚಡ್ಡಿಗಳನ್ನು ಹೆಣೆಯುತ್ತಾಳೆ ಅಥವಾ ಬಟ್ಟೆಯ ಮೇಲೆ ಏನಾದರೊಂದು ಚಿತ್ರ ಬಿಡಿಸುತ್ತಾಳೆ. ದುಃಖವನ್ನು ತಬ್ಬಿ ತನ್ನ ಪಾಡನ್ನು ಹಳಿದುಕೊಳ್ಳುವುದು ಇವಳ ಸ್ವಭಾವವಾಗಿರಲಿಲ್ಲ.

ಒಂದು ದಿನ ಚೈಮ್ ನೋಸೆನ್ ತನ್ನ ಪ್ರಾರ್ಥನೆಯ ಶಾಲು ಮತ್ತು ಚರ್ಮದ ಚೀಲದೊಂದಿಗೆ ಒಂದು ನಿಕ್ಕರನ್ನೂ, ಒಂದಿಷ್ಟು ಬ್ರೆಡ್ಡಿನ ತುಣುಕುಗಳನ್ನೂ ಒಂದು ಚೀಲದಲ್ಲಿ ತುರುಕಿಕೊಂಡು ಮನೆಯಿಂದ ಹೊರಟ. ನೆರೆಹೊರೆಯವರು ಎಲ್ಲಿಗೆ ಹೋಗುತ್ತಿದ್ದೀಯ ಎಂದು ಕೇಳಿದರು. ಇವನು ಉತ್ತರಿಸಿದ್ದು, "ನನ್ನ ಕಣ್ಣುಗಳು ನನ್ನನ್ನ ಎಲ್ಲಿಗೆ ಕರೆದುಕೊಂಡು ಹೋಗುತ್ತವೋ ಅಲ್ಲಿಗೆ."

ಜನ ಇದನ್ನು ತೈಬೆಲೆಗೆ ಹೇಳಿ ಅವಳ ಗಂಡ ಆಕೆಯನ್ನು ಬಿಟ್ಟುಹೋದ ಎಂದು ತಿಳಿಸುವ ಹೊತ್ತಿಗೆ ತಡವಾಗಿತ್ತು. ಅವನನ್ನು ತಡೆಯಲು ಅವಳಿಂದ ಸಾಧ್ಯವಾಗ ಲಿಲ್ಲ. ಅವನು ಆಗಲೇ ನದಿ ದಾಟಿ ಆಚೆಯಲ್ಲಿದ್ದ. ಲುಬ್ಲಿನ್‌ಗೆ ಹೋಗುತ್ತಿದ್ದ ಒಂದು ಗಾಡಿಯನ್ನು ಹತ್ತಿದನೆಂದೂ ತಿಳಿದಿತ್ತು. ಗಂಡನನ್ನು ಕರೆತರಲು ತೈಬೆಲೆ ಒಬ್ಬ ಆಳನ್ನು ಕಳಿಸಿದಳು. ಆದರೆ ಈ ಆಳಾಗಲೀ, ಇವಳ ಗಂಡನಾಗಲೀ ಮತ್ತೆ ಕಣ್ಣಿಗೆ ಬೀಳಲೇ ಇಲ್ಲ. ಮೂವತ್ಮೂರನೆಯ ವಯಸ್ಸಿಗೇ ತೈಬೆಲೆ ಗಂಡ ಬಿಟ್ಟ ಹೆಂಡತಿಯಾಗಿದ್ದಳು.

ಸ್ವಲ್ಪ ಕಾಲದ ಹುಡುಕಾಟದ ನಂತರ ಇವಳು ಗಂಡನ ಮೇಲೆ ಹೆಚ್ಚಿನ ಆಸೆಯನ್ನೇನೂ ಇರಿಸಿಕೊಳ್ಳಬೇಕಿಲ್ಲ ಅಂದುಕೊಂಡಳು. ಹೆತ್ತ ಮಕ್ಕಳು ಮತ್ತು ಗಂಡ ಎಲ್ಲರನ್ನೂ ದೇವರು ತನ್ನ ಬಳಿಗೆ ಕರೆದುಕೊಂಡ ಎಂದು ತಿಳಿದಳು. ಇವಳು ಮತ್ತೆ ಮದುವೆಯಾಗಲಿಲ್ಲ. ಒಬ್ಬೊಂಟಿಯಾಗಿಯೇ ಬದುಕಿದಳು. ತನ್ನ ಮನೆ, ತನ್ನ ಅಂಗಡಿ ಮತ್ತು ತನ್ನ ಕೆಲಸಕಾರ್ಯಗಳು ಎಂದು ಅಷ್ಟರಲ್ಲಿಯೇ ಇರುತ್ತಿದ್ದಳು. ಪೇಟೆಯ ಜನ ಇವಳ ಬಗ್ಗೆ ಕನಿಕರ ತೋರುತ್ತಿದ್ದರು. ಶಾಂತ ಸ್ವಭಾವದ ಇವಳು ಅನುಕಂಪದ ಹೃದಯ ಉಳ್ಳವಳಾಗಿದ್ದಳು. ತನ್ನ ವ್ಯಾಪಾರದಲ್ಲಿ ಪ್ರಾಮಾಣಿಕಳಾಗಿದ್ದಳು. ಇಂಥ ದುರದೃಷ್ಟಗಳನ್ನೆಲ್ಲ ಇವಳು ಹೇಗೆ ಅನುಭವಿಸುತ್ತಾಳೆ ಎಂದು ಪ್ರತಿಯೊಬ್ಬರೂ ಕೇಳುತ್ತಿದ್ದರು. ಆದರೆ ದೈವದ ಆಟ ಮನುಷ್ಯನಿಗೆ ತಿಳಿಯದಂಥದ್ದು.

ಪೇಟೆಯ ಹಿರಿಯ ಹೆಂಗಸರಲ್ಲಿ ತೈಬೆಲೆಗೆ ಬಾಲ್ಯದಿಂದಲೂ ಪರಿಚಯವಿದ್ದ ಹಲವಾರು ಗೆಳೆಕಾರ್ತಿಯರಿದ್ದರು. ಈ ಹೆಂಗಸರು ಹಗಲಿಡೀ ತಮ್ಮ ಪಾತ್ರೆಪರಡಿ ಆ ಈ ಕೆಲಸಗಳಿಂದು ಬಿಡುವಿಲ್ಲದಂತೆ ಇರುತ್ತಿದ್ದರು. ಆದರೆ ಸಂಜೆ ಹೊತ್ತಿನಲ್ಲಿ ಈ ಎಲ್ಲ ಗೆಳೆಕಾರ್ತಿಯರೂ ಮಾತುಕತೆಗೆಂದು ಒಟ್ಟುಗೂಡುತ್ತಿದ್ದರು. ಬೇಸಿಗೆಯಲ್ಲಿ ಮನೆ ಹೊರಗಿನ ಬೆಂಚುಗಳಲ್ಲಿ ಕೂರುತ್ತಿದ್ದ ಇವರು ಗಾಳಿಮಾತಿನ ಸುದ್ದಿಗಳನ್ನೆಲ್ಲ ಒಬ್ಬರಿಗೊಬ್ಬರು ಹೇಳುತ್ತಿದ್ದರು.

ಪೇಟೆಯಲ್ಲಿ ಈಜಿಪ್ಟ್‌ನಂಥ ಕತ್ತಲು ಕವಿದ ಬೇಸಿಗೆಯ ಒಂದು ಸಂಜೆ ಹೊತ್ತಿನಲ್ಲಿ ತನ್ನ ಗೆಣೆಕಾರ್ತಿಯರೊಡನೆ ಕೂತಿದ್ದ ತೈಬೆಲೆ ತನ್ನ ಅಂಗಡಿ ಬದಿಯ ಚಿಲ್ಲರೆ ಅಂಗಡಿಯವನಿಂದ ಪಡೆದ ಪುಸ್ತಕದಲ್ಲಿ ತಾನು ಓದಿದ್ದ ಕತೆಯೊಂದನ್ನು ಹೇಳಲಾರಂಭಿಸಿದ್ದಳು. ಈ ಕತೆ ಪ್ರಾಯದ ಯಹೂದಿ ಹೆಂಗಸೊಬ್ಬಳನ್ನು ದೆವ್ವವೊಂದು ಬಲವಂತವಾಗಿ ಅನುಭವಿಸುತ್ತ ಇವಳ ಜೊತೆಯಲ್ಲಿ ಗಂಡಹೆಂಡಿರ ದಾಂಪತ್ಯ ಬಾಳನ್ನು ಬದುಕಿದ ಕತೆ. ತೈಬೆಲೆ ಈ ಕತೆಯನ್ನು ಪೂರ್ಣ ವಿವರಗಳೊಂದಿಗೆ ಹೇಳಿದಳು : ಆ ಹೆಂಗಸು ದೆವ್ವದೊಡನೆ ಎಡಬಿಡಂಗಿಯಾಗಿ ಕೂಡುತ್ತಿದ್ದಳು, ಕೈಗೆ ಕೈ ಕೂಡಿಸುತ್ತಿದ್ದಳು. ಆ ಕೆಟ್ಟದರ ಮೂತಿಗೆ ಮೂತಿ ಇಡುತ್ತಿದ್ದಳು. ಒಂದು ಥರದ ಭಯದಿಂದ ಬರುವ ನಗುವನ್ನೂ ನಗುತ್ತಿದ್ದಳು.

ಒಬ್ಬಳು ಕೇಳಿದಳು : "ಯಂತ್ರಪಂತ್ರ ಕಟ್ಟಿಕೊಂಡು ಅದನ್ನ ದೂರಕ್ಕೆ ಯಾಕೆ ಓಡಿಸಲಿಲ್ಲ ಅವಳು ? "

"ಯಂತ್ರ ಕಟ್ಟಿಕೊಂಡರೆ ಎಲ್ಲ ದೆವ್ವಗಳೂ ದೂರ ಹೋಗೋಲ್ಲ" ತೈಬೆಲೆ ಉತ್ತರಿಸಿದಳು.

"ಯಾರಾದರೂ ದೊಡ್ಡ ರಬಾಯಿಗಳ ಹತ್ತಿರಕ್ಕೆ ಹೋಗಿಬರಬಹುದಿತ್ತಲ್ಲವಾ?"

"ತಾನು ಅವಳ ಜೊತೇಲಿ ಇರೋದನ್ನ ಯಾರ ಹತ್ತಿರವೂ ಹೇಳದೆ ಗುಟ್ಟಾಗಿಟ್ಟುಕೊಂಡಿರಬೇಕು ಅಂತ ಆ ದೆವ್ವ ಅವಳನ್ನ ಹೆದರಿಸಿತ್ತು."

"ನನ್ನ ಮೇಲೆ ಆಣೆ. ದೇವರು ನಮ್ಮನ್ನೆಲ್ಲ ಕಾಪಾಡ್ತಾನೆ. ಇಂಥ ವಿಷಯಗಳು ಯಾರಿಗೂ ಗೊತ್ತಿರೋದಿಲ್ಲ !" ಒಬ್ಬ ಹೆಂಗಸು ಜೋರಾಗಿ ಹೇಳಿದಳು.

"ನನಗೀಗ ಒಬ್ಬಳಿಗೇ ಮನೆಗೆ ಹೋಗೋಕೆ ಹೆದರಿಕೆಯಾಗುತ್ತೆ" ಇನ್ನೊಬ್ಬಳು ಹೇಳಿದಳು.

"ನಿನ್ನ ಜೊತೇಲಿ ನಾನು ಬರತೀನಿ." ಮೂರನೆಯವಳು ಧೈರ್ಯವಿತ್ತಳು.

ಇವರು ಹೀಗೆ ಮಾತುಕತೆ ಆಡಿಕೊಳ್ಳುತ್ತಿರುವಾಗ ಅಲ್ಖೋನೋನ್ ಎಂಬ ಸ್ಕೂಲ್ ಮೇಷ್ಟ್ರ ಜವಾನ, ಒಂದು ಕಾಲದಲ್ಲಿ ಮದುವೆ ಸಮಾರಂಭಗಳಲ್ಲಿ ಹಾಸ್ಯಗಾರನಾಗಿದ್ದವನು, ಪಕ್ಕದ ಹಾದಿಯಲ್ಲಿ ನಡೆದುಹೋಗುತ್ತಿದ್ದ. ಅಲ್ಖೋನೋನ್

ವಿಧುರನಾಗಿ ಐದು ವರ್ಷಗಳಾಗಿತ್ತು. ಹಳೆ ಹಾಸ್ಯಗಾರಿಕೆಯನ್ನು ಮತ್ತೆ ಆರಂಭಿಸಿ ಸುಮಾರಾಗಿ ಹಣ ಗಳಿಸ್ತುತ್ತಿದ್ದ. ಇವನು ಅರೆಹುಚ್ಚನಂತಿದ್ದ. ನಡೆಯುವಾಗ ಇವನ ಹೆಜ್ಜೆಗಳು ಸದ್ದು ಮಾಡುತ್ತಿರಲಿಲ್ಲ. ಏಕೆಂದರೆ ಇವನ ಷೂಗಳ ಕೆಳಚರ್ಮ ಪೂರ್ತಿ ಸವೆದು ಹೋಗಿದ್ದರಿಂದ ಬರಿಗಾಲಿನಲ್ಲಿಯೇ ನಡೆಯುತ್ತಿದ್ದ. ತೈಬೆಲೆ ಕತೆ ಹೇಳಲು ಆರಂಭಿಸಿದಾಗ ಇವನು ಕೇಳಲೆಂದು ನಿಂತ. ಕತ್ತಲು ದಟ್ಟವಾಗಿದ್ದು ಹೆಂಗಸರು ಕತೆ ಕೇಳುವುದರಲ್ಲಿ ತಲ್ಲೀನರಾಗಿದ್ದುದರಿಂದ ಅವರಿಗೆ ಇವನು ಕಂಡಿರಲಿಲ್ಲ. ಈ ಅಲ್ಕೋನೋನ್ ಒಂದು ತೆರನ ಲಂಪಟ ಮನುಷ್ಯ. ಭಾರಿ ಕುಯುಕ್ತಿಗಳನ್ನು ಹೂಡುತ್ತಿದ್ದವನು. ಇಂಥವನು ಸಂಚುಗಾರಿಕೆಯ ಕೀಟಲೆಯಲ್ಲಿ ಒಂದು ಹಂಚಿಕೆ ಹೂಡಿಕೊಂಡ.

ಹೆಂಗಸರೆಲ್ಲ ಹೋದ ಮೇಲೆ ಅಲ್ಕೋನೋನ್ ತೈಬೆಲೆಯ ಮನೆಯಂಗಳದಲ್ಲಿ ಅಡಗಿಕೊಂಡ. ಮರದ ಹಿಂದೆ ನಿಂತು ಕಿಟಕಿಯಲ್ಲಿ ಹಣಕಿ ನೋಡಿದ. ತೈಬೆಲೆ ಹಾಸಿಗೆಯಲ್ಲಿ ಮಲಗಿ ಮೋಂಬತ್ತಿಯನ್ನು ಆರಿಸಿದ ಮೇಲೆ ಮನೆಯೊಳಗೆ ಹೊಕ್ಕ. ತೈಬೆಲೆ ಬಾಗಿಲಿಗೆ ಅಗಳಿ ಹಾಕುತ್ತಿರಲಿಲ್ಲ. ಆ ಪೇಟೆಯಲ್ಲಿ ಕಳ್ಳರ ಹೆಸರೇ ಇರಲಿಲ್ಲ. ನಡುಮನೆಯಲ್ಲಿ ತನ್ನ ಹರಕು ದೊಗಳೆಅಂಗಿ, ಬನೀನು, ಟ್ರೌಸರ್‌ಗಳನ್ನು ಕಳಚಿದ ಅಲ್ಕೋನೋನ್ ತನ್ನ ತಾಯಿ ತನ್ನನ್ನು ಹೆತ್ತಾಗ ಇದ್ದಂತೆ ಬೆತ್ತಲೆಯಾದ. ನಂತರ ತುದಿಗಾಲಲ್ಲಿ ತೈಬೆಲೆಯ ಹಾಸಿಗೆ ಬಳಿ ಹೋದ. ಆಗಲೇ ನಿದ್ದೆಯ ಮಂಪರಿನಲ್ಲಿದ್ದ ತೈಬೆಲೆ ಥಟ್ಟನೆ ಕಣ್ಬಿಟ್ಟು ಕತ್ತಲಲ್ಲಿ ಕಪ್ಪಾಗಿದ್ದ ಆಕಾರವನ್ನು ಕಂಡಳು. ಒಂದಿಷ್ಟೂ ಸದ್ದಿಲ್ಲದಿರುವುದನ್ನು ಕಂಡೇ ಅವಳಿಗೆ ಹೆದರಿಕೆಯಾಗಿತ್ತು.

"ಯಾರದು?" ಭಯದಿಂದ ಕಂಪಿಸುತ್ತಲೇ ಕೇಳಿದಳು.

ಅಲ್ಕೋನೋನ್ ಹುಸಿ ದನಿಯಲ್ಲಿ ಉತ್ತರಿಸಿದ : "ಕೂಗಬೇಡ ತೈಬೆಲೆ, ನೀನು ಕೂಗಿಕೊಂಡರೆ ನಾನು ನಿನ್ನನ್ನು ನಾಶ ಮಾಡಿಬಿಡತೀನಿ. ನಾನು ಹುರ್ಮಿಜ ದೆವ್ವ. ಕತ್ತಲು, ಮಳೆ, ಕಲ್ಲುಮಳೆ, ಚಳಿ, ಕಾಡುಪ್ರಾಣಿಗಳು ಎಲ್ಲವನ್ನೂ ಆಳೋ ಅಂಥವನು. ಇವತ್ತು ಸಾಯಂಕಾಲ ನೀನು ಕತೆ ಹೇಳಿದ ಮದುವೆಯಾದ ಪ್ರಾಯದ ಹೆಂಗಸಿನ ಜೊತೆ ಇದ್ದ ಕೆಟ್ಟ ಶಕ್ತಿ ನಾನು. ಈ ಕತೇನ ನೀನು ಎಷ್ಟು ಚೆನ್ನಾಗಿ ಹೇಳಿದೆ ! ನಿನ್ನ ಮಾತುಗಳನ್ನ ನಾನು ಪಾತಾಳದಿಂದ ಕೇಳಿಸಿಕೊಂಡೆ. ನಿನ್ನ ಮೈ ಜೊತೆ ಕೂಡೋ ಆಸೇಲಿ ಬಂದಿದೀನಿ. ನೀನೇನಾದರೂ ಇದನ್ನ ವಿರೋಧಿಸಿದೆ ಅಂದರೆ ನನ್ನನ್ನ ವಿರೋಧಿಸಿರೋರನ್ನ ಎಳಕೊಂಡು ಹೋಗಿರೋ ಹಾಗೆ ಕತ್ತಲು ಬೆಟ್ಟಗಳ

ಆಚೆಗೆ ಎಳೆದೊಯ್ಯುತೀನಿ - ಸ್ಯೆರ್ ಬೆಟ್ಟದ ಹತ್ತಿರಕ್ಕೆ. ಮನುಷ್ಯರು ನಡಕೊಂಡು ಹೋಗೋಕೆ ಗೊತ್ತಿಲ್ಲದ ಜಾಗಕ್ಕೆ; ಪ್ರಾಣಿಗಳು ನಡೆಯೋಕೆ ಹೆದರೋ ಕಡೆಗೆ. ಅಲ್ಲಿ ಭೂಮಿಯೆಲ್ಲ ಕಬ್ಬಿಣ, ಆಕಾಶವೆಲ್ಲ ತಾಮ್ರ, ಆಮೇಲೆ ನಾನು ಅಲ್ಲಿ ಕತ್ತಿಗಳ ಮೇಲೆ ಉರುಳಿಸಿಬಿಡ್ತೀನಿ, ಬೆಂಕಿ ಮೇಲೆ ಉರುಳಿಸತೀನಿ, ಕೊಳಕು ಮಂಡಳದ ಹಾವು-ಚೇಳು ಗಳ ಮೇಲೆಯೂ ಉರುಳಿಸತೀನಿ, ಮೈಯೊಳಗಿನ ಎಲ್ಲ ಮೂಳೆಗಳೂ ಬೂದಿಯಾಗಿ ತಮ್ಮ ಗುರುತನ್ನ ಪೂರ್ತಿಯಾಗಿ ಕಳೆದುಕೊಳ್ಳೋತನಕ ಶಿಕ್ಷೆ ಕೊಡತೀನಿ. ಆದರೆ ನೀನು ವಿರೋಧಿಸದೆ ಒಪ್ಪಿಕೊಂಡರೆ ನಿನ್ನ ತಲೆ ಮೇಲಿನ ಒಂದು ಕೂದಲೂ ಸಹ ಕೊಂಕೋದಿಲ್ಲ. ನಿನ್ನನ್ನ ನಾನು ಎಲ್ಲದರ ಕೆಳಗೂ ಚೆನ್ನಾಗಿ ಕಳಿಸಿಕೊಡತೀನಿ...."

ಈ ಮಾತುಗಳನ್ನು ಕೇಳುವಾಗ ತೈಬೆಲೆ ಮೂರ್ಛೆ ಹೋಗಿರುವಂತೆ ಮಲಗಿದ್ದಳು. ಅವಳ ಹೃದಯ ಜೋರಾಗಿ ಹೊಡೆದುಕೊಂಡು ನಿಲ್ಲುವಂತಾಗಿತ್ತು. ತನ್ನ ಕೊನೆಗಾಲ ಹತ್ತಿರವಾಯಿತು ಎಂದು ಯೋಚಿಸಿದ್ದಳು. ಒಂದು ಕ್ಷಣದ ನಂತರ ತನ್ನನ್ನು ತಾನು ಸಂಭಾಳಿಸಿಕೊಂಡು ತೊದಲಿ ಕೇಳಿದಳು :

"ನನ್ನಿಂದ ಏನಾಗಬೇಕು ನಿನಗೆ ? ನಾನು ಮದುವೆಯಾದ ಹೆಂಗಸು ?"

"ನಿನ್ನ ಗಂಡ ಸತ್ತುಹೋದ. ನಾನು ಅವನ ಹೆಣದ ಮೆರವಣಿಗೇಲಿ ಹೋಗಿ ಬಂದೆ" ಮೇಷ್ಟ್ರ ಜವಾನನ ಪೊಳ್ಳು ದನಿ ಹೊರಬಂದಿತು. "ರಬಾಯಿಗಳ ಹತ್ತಿರ ಹೋಗಿ ನೀನು ಮತ್ತೆ ಮದುವೆಯಾಗೋಕೆ ಅವರಿಂದ ಒಪ್ಪಿಗೆ ಪಡೆದಿಲ್ಲ ಅನ್ನೋದು ನಿಜ. ರಬಾಯಿಗಳು ನನ್ನ ಮೇಲೆ ಕರುಣೆ ತೋರಿಸೋದಿಲ್ಲ. ಆದರೂ ರಬಾಯಿಗಳ ಕೋಣೆಗೆ ಹೋಗೋಕೆ ನನಗೆ ಹೆದರಿಕೆಯೇನಿಲ್ಲ - ನನಗೆ ಭಯವಾಗೋದು ಅಲ್ಲಿ ಸುರಳಿ ಸುತ್ತಿ ಇಟ್ಟಿರೋ ಧರ್ಮಗ್ರಂಥಗಳನ್ನ ಕಂಡಾಗ. ನಾನು ನಿನಗೆ ಸುಳ್ಳು ಹೇಳು ತ್ತಿಲ್ಲ. ನಿನ್ನ ಗಂಡ ಸತ್ತದ್ದು ಮಾರಿ ರೋಗದಿಂದ. ಅವನ ಮೂಗಿನಲ್ಲಿ ಆಗಲೇ ವಾಸನೆ ಹೊರಡತಿತ್ತು. ಅವನಿನ್ನೂ ಬದುಕಿದ್ದರೆ ನಾನು ನಿನ್ನ ಹತ್ತರ ಸುಳ್ಳು ಹೇಳಿ ನಂಬಿಸೋ ಅಂಥದೇನೂ ಇರಲಿಲ್ಲ. ಷುಲ್ಷನ್ ಆರೂಹ್ ನಮಗೆ ಸಂಬಂಧಪಡೋ ಅಂಥದಲ್ಲ."

ಮೇಷ್ಟ್ರ ಜವಾನ, ಹುರ್ಮಿಜ ಹೀಗೆಯೇ ನಂಬಿಸುತ್ತ ಹೋದ - ಒಂದಿಷ್ಟು ಸವಿಮಾತು, ಮತ್ತೊಂದಿಷ್ಟು ಭಯದೊಂದಿಗೆ. ಇವನು ಹಲವಾರು ದೆವ್ವಗಳು ಮತ್ತು ಸುಂದರಿಯರ ಹೆಸರುಗಳನ್ನೂ ಉಚ್ಚರಿಸಿದ. ಬೇತಾಳಗಳು ಮತ್ತು ದುಷ್ಟ ಪ್ರಾಣಿಗಳ

ಹೆಸರುಗಳನ್ನೂ ಹೇಳಿದ. ದೆವ್ವಗಳ ಚಕ್ರವರ್ತಿಯಾದ ಅಸ್ಮೋಡ್ಯೂಸ್ ತನ್ನ ದಾಯಾದಿ ಚಿಕ್ಕಪ್ಪ ಎಂಬ ಸುಳ್ಳು ನುಡಿದ. ದುಷ್ಟಶಕ್ತಿಗಳಿಗೆಲ್ಲ ಮಹಾರಾಣಿಯಾದ ಲಲಿತ್‌ಳು ತನಗಾಗಿ ಒಂಟಿಗಾಲಿನಲ್ಲಿ ಕುಣಿದು ನರ್ತಿಸುತ್ತಾಳೆ, ಕೆಲವು ವಿಷಯಗಳಿಗೆ ನನ್ನನ್ನು ಬೇಡಿ ಕಾಡುತ್ತಾಳೆ ಎಂದೂ ಹೇಳಿದ. ಬಾಣಂತಿಯರ ತೊಟ್ಟಿಲುಗಳಿಂದ ಕೂಸು ಗಳನ್ನು ಕದಿಯುವ ಹೆಣ್ಣು ದೆವ್ವವಾದ ಷಿಬ್‌ಥ ತನಗಾಗಿ ನರಕದಲ್ಲಿ ಬ್ರೆಡ್ ಬೇಯಿಸು ತ್ತಾಳೆ, ಹೆಚ್ಚಾಗಿ ಮಿಕ್ಕದ್ದನ್ನು ದೊಡ್ಡ ಮಾಟಗಾರರು ಮತ್ತು ದಪ್ಪ ನಾಯಿಗಳಿಗೆ ಎಸೆಯುತ್ತಾಳೆ... ಹೀಗೆಯೇ ಇವನು ಸುಳ್ಳಿನ ಕಂತೆ ಹೆಣೆಯುತ್ತಾ ಹೋದ. ಕೊನೆಯಲ್ಲಿ ತನ್ನ ಕೊನೆಗಾಲ ಬಂದಿತೇನೋ ಎಂದು ತೈಬೆಲೆ ನಗಲು ಯತ್ನಿಸಿದಳು. ಹುರ್ಮಿಜ ಬಹಳ ಕಾಲದಿಂದಲೂ ತೈಬೆಲೆಯನ್ನು ಪ್ರೀತಿಸುತ್ತಿದ್ದುದಾಗಿ ಆಣೆಯಿಟ್ಟ. ತನ್ನ ಉಡುಪು ಗಳೊಳಗೆ, ಶಾಲುಗಳೊಳಗೆ ಬೆಚ್ಚನೆಯ ಕಾಲಿರಿಸಿಕೊಂಡು ಉರುಳಿದ್ದ ವರುಷವನ್ನೂ ಇದರ ಹಿಂದಿನ ವರುಷವನ್ನೂ ಇವಳು ಕಳೆದದ್ದು ತನಗೆ ತಿಳಿದಿದೆ ಎಂದ. ಹಿಟ್ಟು ನಾದುತ್ತಿರುವಾಗ, ಸಬ್ಬತ್ ಊಟಕ್ಕೆ ತಯಾರಿ ನಡೆಸುತ್ತಿದ್ದಾಗ, ಸ್ನಾನ ಮಾಡುತ್ತಿ ದ್ದಾಗ, ಮನೆ ಹೊರಗಿನ ಅಂಗಳದಲ್ಲಿ ಇರುತ್ತಿದ್ದಾಗಲೆಲ್ಲ ಇವಳು ಯೋಚಿಸುತ್ತಿದ್ದ ಎಲ್ಲವೂ ತಿಳಿದಿದೆ ಎಂದ. ಮುಂಜಾನೆ ಎದ್ದಾಗ ಅವಳ ಮೊಲೆಗಳ ಮೇಲೆ ನೀಲಿ ಅಥವ ಕಪ್ಪು ಚುಕ್ಕೆ ಗುರುತು ಇರುತ್ತಿದ್ದುದನ್ನೂ ಹೇಳಿದ. ತೈಬೆಲೆ ಅದು ಪಿಶಾಚಿ ಮೂಡಿಸುತ್ತಿದ್ದ ಗುರುತು ಎಂದು ಯೋಚಿಸಿದಳು. ಆದರು ಹುರ್ಮಿಜ ಅದು ತನ್ನ ತುಟಿಯಿಂದ ಮುತ್ತಿಟ್ಟು ಉಳಿಸುತ್ತಿದ್ದ ಗುರುತು ಎಂದ.

ಸ್ವಲ್ಪ ಹೊತ್ತಿನ ನಂತರ ದೆವ್ವ ತೈಬೆಲೆಯ ಹಾಸಿಗೆಗೆ ಹೋಗಿ ಅವಳ ಮೇಲೆ ಆಸೆ ತೋರಿಸಿತು. ಅವನು ವಾರಕ್ಕೆ ಎರಡು ಸಲ ಅವಳ ಹತ್ತಿರಕ್ಕೆ ಬರುವುದಾಗಿ ಹೇಳಿದ. ಬುಧವಾರ ಮತ್ತು ಸಬ್ಬತ್ ರಾತ್ರಿಗಳಲ್ಲಿ. ಇಂಥ ರಾತ್ರಿಗಳಲ್ಲಿಯೇ ಅಪವಿತ್ರರು ಜಗತ್ತಿನಲ್ಲಿ ಬಯಲಿಗೆ-ಬಂದಿರುತ್ತಾರೆ. ಅವನು ಅವಳಿಗೆ ಎಚ್ಚರ ಹೇಳಿದ. ಯಾವಾಗಲೇ ಆಗಲಿ ಇದನ್ನೆಲ್ಲ ಯಾರೊಂದಿಗೂ ಹೇಳಬಾರದು. ರಹಸ್ಯವನ್ನು ಬಯಲು ಮಾಡಿದರೆ ಅವಳಿಗೆ ನೀಡಲಿರುವ ಶಿಕ್ಷೆಗಳನ್ನೂ ಹೇಳಿದ : ಅವಳ ನೆತ್ತಿಗೂದಲುಗಳನ್ನೆಲ್ಲ ಕಿತ್ತು ಹಾಕುವುದು, ಕಣ್ಣುಗಳನ್ನು ಕೀಳುವುದು, ಹೊಕ್ಕುಳಿನಿಂದ ಕರುಳ ಬಳ್ಳಿಯನ್ನು ಬಗೆದುಹಾಕುವುದು ; ಬ್ರೆಡ್ ಗೊಬ್ಬರವಾಗಿರುವ, ನೀರು ರಕ್ತವಾಗಿರುವ ಮರಳುಗಾಡಿಗೆ ಎಸೆಯುವುದು.... ಹೀಗೆಲ್ಲ ಹೇಳಿದ. ಅಲ್ಲಿ ಜುಲ್ಮವೇಥ್‌ಳ

ಅಳು ಹಗಲು ರಾತ್ರಿಯೆಲ್ಲಾ ಕೇಳಿಸುತ್ತದೆ. ತನ್ನ ತಾಯಿಯಿಂದ ಪಡೆದಿರುವ ಮೂಳೆಗಳು ತನ್ನಲ್ಲಿ ಇರುವಷ್ಟು ಕಾಲದವರೆಗೂ ತೈಬೆಲೆ ರಹಸ್ಯವನ್ನು ತನ್ನೊಳಗೇ ಇರಿಸಿಕೊಳ್ಳಬೇಕು ಎನ್ನುವುದನ್ನು ಒತ್ತಿ ಹೇಳಿದ. ತೈಬೆಲೆಗೆ ತಪ್ಪಿಸಿಕೊಳ್ಳಲು ಯಾವ ದಾರಿಯೂ ಕಾಣ ದಂತಾಯಿತು. ತನ್ನ ಕೈಯನ್ನು ಅವನ ತೊಡೆಯಲ್ಲಿರಿಸಿ ಆಣೆಯಿಟ್ಟಳು. ವಿಲಕ್ಷಣವಾದ ಎಲ್ಲದಕ್ಕೂ ಸಮ್ಮತಿಸಿದಳು.

ಅವಳ ಬಳಿಯಿಂದ ಹೊರಡುವ ಮೊದಲು ಹುರ್ಮಿಜ ತೈಬೆಲೆಗೆ ದೀರ್ಘ ಚುಂಬನವಿಟ್ಟ - ಮನುಷ್ಯ ಚುಂಬನವಲ್ಲ ದೆವ್ವದ್ದು ಎನ್ನುವಂತೆ. ಅವನ ಚುಂಬನವನ್ನು ಮರಳಿ ನೀಡಿದ ತೈಬೆಲೆ ತನ್ನ ಕಣ್ಣೀರಿನಿಂದ ಅವನ ಎದೆಯನ್ನು ತೋಯಿಸಿದಳು. ಅವನು ದೆವ್ವದ ಶಕ್ತಿಯುಳ್ಳವನಾದರೂ ಅವಳ ಮೇಲೆ ಕರುಣೆ ತೋರಿಸಿದ್ದ.

ಹುರ್ಮಿಜ ಹೊರಟುಹೋದ ಮೇಲೆ ತೈಬೆಲೆ ತಲೆದಿಂಬಿನಲ್ಲಿ ಮುಖ ಇರಿಸಿಕೊಂಡು ಸೂರ್ಯ ಹುಟ್ಟುವವರೆಗೂ ಬಿಕ್ಕಳಿಸಿ ಅತ್ತಳು.

ಪ್ರತಿ ಬುಧವಾರ ಮತ್ತು ಸಬ್ಬತ್ ರಾತ್ರಿಗಳಲ್ಲಿ ಹುರ್ಮಿಜ ಬರಲಾರಂಭಿಸಿದ. ತೈಬೆಲೆಗೆ ತಾನು ಗರ್ಭಧರಿಸಿ ಕುರೂಪದ ರೆಕ್ಕೆ ಬಾಲಗಳಿರುವ ರಾಕ್ಷಸ ಮರಿಗೂಸಿನಂಥ ಮಗುವನ್ನು ಹೆರುತ್ತೇನೇನೋ ಎಂದು ಭಯವಾಗಿತ್ತು. ಆದರೆ ಅವಳಿಗೆ ಅಪಮಾನ ವಾಗುವಂಥದನ್ನು ತಡೆಯುವುದಾಗಿ ಹುರ್ಮಿಜ ಭರವಸೆ ನೀಡಿದ.

ಹೇಳುತ್ತಿರುವುದು ಹೀಗೆಯೇ ಸಾಗುತ್ತಿರುವುದರಿಂದ ದೇವರು ಇಂಥವುಗಳಿಂದ ನಮ್ಮನ್ನು ರಕ್ಷಿಸುತ್ತಿರಲಿ. ತೈಬೆಲೆ ಹೀಗೆ ಅವನ ಜೊತೆಯಲ್ಲಿರುತ್ತಿದ್ದಳು. ಮೊದಲು ತನ್ನ ಬಳಿ ಬರುವ ಈ ಇರುಳಿನ ಭೇಟಿಗಾರನ ಬಗ್ಗೆ ತೈಬೆಲೆ ಭಯಗೊಂಡಿದ್ದಳು. ತನಗೆ ಕೆಡಕಾಗುವಂತೆ ಉಪದ್ರವಗಳನ್ನು ನೀಡಬಹುದು, ಕುದಿಯುವ ನೀರಿನಲ್ಲಿ ಹಾಕಬಹುದು, ಜಡೆ ಕೀಳಬಹುದು, ನಾಯಿಯಂತೆ ಬೇಯಿಸಬಹುದು ಅಥವಾ ಮೂತ್ರ ಹೊಯ್ಯಬಹುದು ಅಂದುಕೊಂಡಿದ್ದಳು ; ತನಗೆ ಅಪಮಾನವಾಗುವಂಥದನ್ನೆಲ್ಲಾ ಮಾಡಬಹುದು ಎಂದುಕೊಂಡಿದ್ದಳು. ಆದರೆ ಹುರ್ಮಿಜ ಇವಳನ್ನು ಹೊಡೆದಿರಲಿಲ್ಲ, ಪರಚಿರಲಿಲ್ಲ, ಇವಳ ಮೇಲೆ ಉಗಿದಿರಲಿಲ್ಲ. ಇದಕ್ಕೆ ಬದಲಾಗಿ ಇವಳ ಮೇಲೆ ಅಕ್ಕರೆ ತೋರಿ ಚೇಷ್ಟೆಯ ಆಟಗಳನ್ನಾಡುತ್ತ ಇವಳಿಗಾಗಿ ಹುಡುಗಾಟದ ಹಾಡುಗಳನ್ನು ಗುನುಗುತ್ತಿದ್ದ. ಕೆಲವು ಸಲ ಇವಳೊಂದಿಗೆ ದೆವ್ವಗಳ ಕೆಟ್ಟ ನಡತೆಯ ಕುಚೇಷ್ಟೆಗಳನ್ನೆಲ್ಲ

ತೋರಿಕೊಳ್ಳುತ್ತ ವಿಲಕ್ಷಣವಾಗಿ ವರ್ತಿಸುತ್ತಿದ್ದ. ಅವಳು ನಗುವಂತೆ ಬಲವಂತ ಮಾಡುತ್ತಿದ್ದ. ಇವಳ ಕಿವಿಗಳನ್ನು ಹಿಡಿದು ಎಳೆದಾಡುತ್ತ ಪಕ್ಕೆಗಳಿಗೆ ಪ್ರೀತಿಯ ಹೊಡೆತ ಗಳನ್ನು ಗುದ್ದುತ್ತಿದ್ದ. ಕೂದಲುಗಳನ್ನು ಟೋಪಿಯೊಳಗೆ ಇರಿಸಿಕೊಳ್ಳಲು ಹೇಳುತ್ತಿದ್ದ. ಹುರ್ಮಿಜ ತಾನು ಜಡೆ ಹೆಣೆಯುತ್ತೇನೆ ಎನ್ನುತ್ತಿದ್ದ. ಯಂತ್ರ-ಮಂತ್ರಗಳ ವಿಷಯ ವಾಗಿಯೂ ಇವಳಿಗೆ ಹೇಳುತ್ತಿದ್ದ. ರಾತ್ರಿ ಕಾಲದ ತನ್ನ ಉಸಿರಾಟದ ಬಗೆಗೂ ತಿಳಿಸಿ ಹೇಳಿದ. ಪಾಳು ಮನೆಗಳಲ್ಲಿ, ಬಯಲಿನಲ್ಲಿ, ಪೊಟರೆಗಳಲ್ಲಿ ಅಡಗಿ ದೆವ್ವಗಳು ಹಾರಾಡುವುದನ್ನು ಹೇಳಿದ. ಸೋದೋಮ್ ಜೌಗು ನೆಲದಲ್ಲಿ ಅವಿತುಕೊಳ್ಳುವುದನ್ನೂ, ಹಿಮಸಮುದ್ರದ ಶಿಲಾ ನದಿಗಳಲ್ಲಿ ಅಡಗಿಕೊಳ್ಳುವುದನ್ನೂ ತಿಳಿಸಿದ. ತನಗೆ ಬೇರೆ ಹೆಂಡತಿಯರು ಇರುವುದನ್ನು ಇವನು ಅಲ್ಲಗಳೆಯಲಿಲ್ಲ. ಆದರೆ ಅವರೆಲ್ಲ ಹೆಣ್ಣು ದೆವ್ವ ಗಳು, ತೈಬೆಲೆಯೊಬ್ಬಳೇ ಮಾನವ ಲೋಕದ ತನ್ನ ಹೆಂಡತಿ ಎಂದ. ತೈಬೆಲೆ ಹೆಂಡಂದಿರ ಹೆಸರುಗಳನ್ನು ಕೇಳಿದಾಗ ಇವನು ಎಣಿಕೆ ಹಾಕುತ್ತಾ ಹೇಳಿದ : 'ನಾಮಾ, ಮಷಲತ್, ಅಘ್, ಷುಲ್ದ, ಜುಷ, ನಷ್ಕ ಮತ್ತು ಚೈಮಾ. ಏಳು ಜನರೂ ಒಟ್ಟಿಗೇ ಇದ್ದಾರೆ.'

ನಾಮಾ ಇದ್ದಲಿನಷ್ಟು ಕಪ್ಪು. ಉರಿಗೋಪದವಳು. ಇವನೊಡನೆ ಜಗಳ ಕಾದಾಗ ವಿಷ ಕಾರುತ್ತಾಳೆ, ಬೆಂಕಿ ಉಗುಳುತ್ತಾಳೆ ಮತ್ತು ಮೂಗಿನಲ್ಲಿ ಹೊಗೆಯುಸಿರುಬಿಡುತ್ತಾಳೆ.

ಮಷಲತ್ ಜಿಗಣೆಯಂಥ ಮುಖದವಳು. ತಾನು ಮುಟ್ಟಬೇಕಿರುವುದನ್ನೆಲ್ಲ ನಾಲಿಗೆಯಿಂದ ಮುಟ್ಟಿ ಗುರುತು ಮೂಡಿಸುತ್ತಾಳೆ.

ಅಘ್ ಸಿಂಗಾರ ಮಾಡಿಕೊಳ್ಳಲು ಇಷ್ಟಪಡುವಂಥವಳು. ಬೆಳ್ಳಿ, ಪಚ್ಚೆ, ವಜ್ರ ಗಳಿಂದ ಶೃಂಗಾರ ಮಾಡಿಕೊಳ್ಳುತ್ತಾಳೆ. ಇವಳ ಹೆರಳು ಬಂಗಾರದ ಎಳೆಗಳಿಂದ ಕೂಡಿದೆ. ಕಾಲುಗಳಿಗೆ ಗಂಟೆ ಕಟ್ಟಿಕೊಂಡು ಸೊಂಟದಲ್ಲಿ ಗೆಜ್ಜೆಸರ ಬಿಗಿದುಕೊಂಡಿದ್ದಾಳೆ. ಇವಳು ನರ್ತಿಸಿದಾಗ ಹೆಜ್ಜೆಗಳ ಮೊರೆತ ಮರುಭೂಮಿಯಲ್ಲೆಲ್ಲ ಉಲಿಯುತ್ತ ತುಂಬಿಕೊಳ್ಳುತ್ತದೆ.

ಷುಲ್ದ ಬೆಕ್ಕಿನ ಆಕಾರದವಳು. ಮಾತಾಡುವುದಕ್ಕೆ ಬದಲಾಗಿ ಇವಳು ಮಿಯಾಂವ್ ಗುಡುತ್ತಾಳೆ. ಕಣ್ಣುಗಳು ಬಾತುಕೋಳಿಯ ಕಣ್ಣುಗಳಂತೆ ಹಸಿರಾಗಿವೆ. ಹುರ್ಮಿಜ ಇವ ಳೊಡನೆ ತೆಕ್ಕೆಯಲ್ಲಿ ಕೂಡಿದ್ದಾಗಲೂ ಇವಳು ಕರಡಿಯ ಕರುಳನ್ನು ಜಗಿಯುತ್ತಿರುತ್ತಾಳೆ.

ಜುಷ ಮದುವಣಗಿತ್ತಿಯರ ಶತ್ರು. ಅವರನ್ನು ಕದ್ದು ತರುವುದರಲ್ಲಿ ಇವಳು ತುಂಬ ಶಕ್ತಿಯುಳ್ಳವಳು. ಮೊದಲ ಶಾಸ್ತ್ರದ ಏಳು ದಿನಗಳ ರಾತ್ರಿಯ ಅವಧಿಯಲ್ಲಿ

ಯಾವುದೇ ಮದುವಣಗಿತ್ತಿ ರಾತ್ರಿ ಹೊತ್ತಿನಲ್ಲಿ ಒಬ್ಬಳೇ ಹೊರಗೆ ಬಂದರೆ ಜುಷ ಅವರ ಮುಂದೆ ಕುಣಿಯಲು ಆರಂಭಿಸುತ್ತಾಳೆ. ಆ ಮದುವಣಗಿತ್ತಿ ಮಾತು ಕಳೆದುಕೊಳ್ಳುತ್ತಾಳೆ. ಜುಷ ಅವಳನ್ನು ಎಳೆದೊಯ್ಯುತ್ತಾಳೆ.

ನಷ್ಕ್ ತುಂಬ ಅಸೂಯೆಗಾರ್ತಿ. ಬೇರೆ ದೆವ್ವಗಳಿಗೆ ದ್ರೋಹ ಬಗೆಯುವುದರಲ್ಲಿಯೇ ಮುಳುಗಿರುತ್ತಾಳೆ. ತನ್ನ ಹೃದಯಕ್ಕೆ ಪ್ರಿಯ ಎನಿಸುವ ಅಸಹ್ಯದ ಮಾತುಗಳನ್ನು ಗೊಣಗಿಕೊಳ್ಳುತ್ತಿರುತ್ತಾಳೆ.

ಚೈಮಾ ತನ್ನ ಹೆಸರಿಗೆ ವಿರುದ್ಧವಾಗಿರುವ ಸಮಾಧಾನ ಸ್ವಭಾವದವಳು. ನಾಮಾ ಉರಿಮೋರೆಯಾಗಿರುವುದಕ್ಕೆ ಇವಳು ತೀರ ಭಿನ್ನವಾಗಿರುವುದು ನಿಜ. ಚೈಮಾ ಕೋಪವೇ ಇಲ್ಲದ ಹೆಣ್ಣು ದೆವ್ವ. ಇವಳು ಯಾವಾಗಲೂ ದಾನಧರ್ಮಗಳಂಥವನ್ನು ಮಾಡುತ್ತಿರುತ್ತಾಳೆ. ಹೆಂಗಸರು ಕಾಯಿಲೆಬಿದ್ದಾಗ ಅವರ ನೆರವಿಗೆ ಹೋಗುತ್ತಾಳೆ. ಬಡವರ ಮನೆಗಳಿಗೆ ಬ್ರೆಡ್ ಒಯ್ದು ಕೊಡುತ್ತಾಳೆ.

ಹುರ್ಮಿಜ ತನ್ನ ಹೆಂಡತಿಯರ ಬಗೆಗೆ ವಿವರಣೆ ನೀಡಿ ಇವರನ್ನೆಲ್ಲ ಹೇಗೆ ಸಂಭಾಳಿಸಿಕೊಂಡು ಹೋಗುತ್ತೇನೆ ಎನ್ನುವುದನ್ನು ತೈಬೆಲೆಗೆ ಹೇಳಿದ. ಸೂರುಗಳಲ್ಲಿ ಹಗ್ಗಗಳ ಮೇಲೆ ಇವರೊಂದಿಗೆ ಎಲ್ಲ ರೀತಿಯ ಆಟವಾಡುವುದನ್ನು ತಿಳಿಸಿದ. ಸಾಮಾನ್ಯವಾಗಿ ಹೆಂಗಸೊಬ್ಬಳಿಗೆ ಒಬ್ಬ ಗಂಡಸು ಬೇರೆ ಹೆಂಗಸರ ಬಗೆಗೆ ಹೇಳಲಾರಂಭಿಸಿದರೆ ದ್ವೇಷಗೊಳ್ಳುತ್ತಾರೆ. ಆದರೆ ಮನುಷ್ಯಳಾದವಳು ಹೆಣ್ಣು ದೆವ್ವಗಳ ಮೇಲೆ ಹೇಗೆ ದ್ವೇಷಗೊಳ್ಳುತ್ತಾಳೆ? ವಿಷಯ ಹೀಗಿದ್ದುದರಿಂದ ಹುರ್ಮಿಜನ ಕತೆಗಳು ತೈಬೆಲೆಯನ್ನು ಚಕಿತಗೊಳಿಸಿದವು. ಇವಳು ಅವನೊಂದಿಗೆ ಪ್ರಶ್ನೆಗಳನ್ನು ಕೇಳುವ ಆಟದಲ್ಲಿ ಮುಳುಗಿದ್ದಳು. ಕೆಲವು ವೇಳೆಗಳಲ್ಲಿ ಯಾರಿಂದಲೂ ನಂಬಲಾಗದಂಥ ಸಂಗತಿಗಳನ್ನು ಹೇಳುತ್ತಿದ್ದ - ದೇವರುಗಳನ್ನು ಕುರಿತು, ಅವನ ಸುಂದರಿಯರು ಮತ್ತು ರೆಕ್ಕೆಯುಳ್ಳ ಅಪ್ಸರೆಯರು, ಸ್ವರ್ಗಲೋಕದಲ್ಲಿನ ತನ್ನ ಸಾಹಸಗಳು, ಏಳು ಸ್ವರ್ಗಗಳು.... ಇಂಥವನ್ನೆಲ್ಲ ಹೇಳುತ್ತಿದ್ದ. ಪಾಪಿಗಳಾದ ಹೆಂಗಸರು ಮತ್ತು ಗಂಡಸರಿಗೆ ನರಕದಲ್ಲಿ ಹೇಗೆ ಶಿಕ್ಷೆ ನೀಡುತ್ತಾರೆ ; ಕೊಡಾಯಿಗಳಲ್ಲಿ ಇವರನ್ನು ಹಾಕಿ ತಿರುವುತ್ತಾರೆ, ಬೆಂಕಿಯಿಟ್ಟು ಬೇಯಿಸುತ್ತಾರೆ, ಮಂಜಿನ ಮೇಲೆ ಎಸೆದು ಉಗುರುಗಳಿಂದ ಪರಚುತ್ತ ಉರುಳಿಸುತ್ತಾರೆ, ಕಪ್ಪನೆಯ ರಾಕ್ಷಸಿಯರು ಇವರ ದೇಹಗಳಿಗೆ ಕೆಂಪಾಗಿ ಕಾದಿರುವ ಸಲಾಕೆಗಳಿಂದ ಹೊಡೆಯುತ್ತಾರೆ.

ನರಕದಲ್ಲಿ ತುಂಬ ದೊಡ್ಡ ಶಿಕ್ಷೆಯೆಂದರೆ ಕಚಗುಳಿ ಇಡುವುದು ಎಂದು ಹುರ್ಮಿಜ ಹೇಳಿದ. ಲೆಕ್ಶಿಷ್ ಎಂಬ ತುಂಬ ಸಣ್ಣ ಮರಿದೆವ್ವವೊಂದು ನರಕದಲ್ಲಿ ಕಂಕುಳ ಸಂದಿ ಅಥವಾ ಪಕ್ಕೆಗಳಿಗೆ ಕಚಗುಳಿ ಇಟ್ಟಾಗ, ಈ ನಗುವಿನ ಅಲೆ ಮಡಗಾಸ್ಕರ್ ದ್ವೀಪದಷ್ಟು ಉದ್ದಕ್ಕೂ ಮೊರೆದು ಕೇಳುತ್ತದೆ.

ಹೀಗೆ ಹುರ್ಮಿಜ ಇಡೀ ರಾತ್ರಿ ತೈಬೆಲೆಯನ್ನು ಸಂತೋಷಗೊಳಿಸುತ್ತಿದ್ದ. ಅವನು ಹೋದ ಮೇಲೆ ತೈಬೆಲೆಗೆ ಇದೆಲ್ಲ ಎಷ್ಟು ಬೇಗ ಉರುಳಿಹೋಯಿತು ಎನ್ನಿಸುತ್ತಿತ್ತು. ಬೇಸಿಗೆಯ ರಾತ್ರಿಗಳು ಚಿಕ್ಕದಾಗಿರುತ್ತಿದ್ದವು. ಕೋಳಿ ಕೂಗುವ ಮುನ್ನವೇ ಹುರ್ಮಿಜ ಹೋಗುತ್ತಿದ್ದ. ಚಳಿಗಾಲದ ರಾತ್ರಿಗಳೂ ಅಷ್ಟು ದೀರ್ಘವಾಗಿರುತ್ತಿರಲಿಲ್ಲ. ಸತ್ಯಸಂಗತಿ ಯೆಂದರೆ ಹುರ್ಮಿಜನನ್ನು ತೈಬೆಲೆ ಪ್ರೀತಿಸತೊಡಗಿದ್ದಳು. ಹೆಂಗಸೊಬ್ಬಳು ದೆವ್ವವೊಂದನ್ನು ಪ್ರೀತಿಸಲಾರಳೆಂದು ತಿಳಿದಿದ್ದೂ ಅವನೊಂದಿಗೆ ರಾತ್ರಿಗಳನ್ನು ಕಳೆಯುತ್ತಿದ್ದಳು.

ಅಲ್ಖೋನೋನ್ ಹೆಂಡತಿ ಸತ್ತ ವಿಧುರನಾಗಿ ಸುಮಾರು ವರ್ಷಗಳಾಗಿತ್ತು. ಮದುವೆ ದಲ್ಲಾಳಿಗಳು ಇವನಿಗೆ ಮದುವೆಯಾಗಲು ಒತ್ತಾಯಿಸುತ್ತಿದ್ದರು. ಇವನಿಗೆ ತೋರಿಸುತ್ತಿದ್ದ ಮದುವೆ ಹೆಣ್ಣುಗಳು ವಿಧವೆಯರು ಮತ್ತು ವಿಚ್ಛೇದನ ಪಡೆದವರಾಗಿರುತ್ತಿದ್ದರು. ಜವಾನಿಕೆ ಕೆಲಸದಿಂದ ಇವನಿಗೆ ಬರುತ್ತಿದ್ದ ಆದಾಯ ಅಲ್ಪದ್ದಾಗಿತ್ತು. ಇದರ ಜೊತೆಗೆ ತನ್ನ ಹಳೆ ಹಾಸ್ಯಗಾರ ವೃತ್ತಿಯನ್ನು ಮಾಡಲಾರಂಭಿಸಿ ಸಾಕಷ್ಟು ಗಳಿಸುವಂತಾಗಿದ್ದ. ಹಲವಾರು ಸಂಬಂಧಗಳು ಕೂಡುವಂತಿದ್ದರೂ ಅಲ್ಖೋನೋನ್ ಅವನ್ನೆಲ್ಲ ತಿರಸ್ಕರಿಸಿದ್ದ ; ಒಬ್ಬ ಹೆಂಗಸು ಕುರೂಪಿ, ಮತ್ತೊಬ್ಬಳು ಒಡಕು ನಾಲಿಗೆಯವಳು ; ಇನ್ನೊಬ್ಬಳು ಸ್ವಚ್ಛತೆ ಗೊತ್ತಿಲ್ಲದ ಕೊಳಕಿ ; ಹೀಗೆ. ದಲ್ಲಾಳಿಗಳು ಆಶ್ಚರ್ಯಗೊಳ್ಳುತ್ತಿದ್ದರು. ವಾರಕ್ಕೆ ಒಂಬತ್ತು ಗ್ರೋಷನ್ ಹಣ ಗಳಿಸುವ ಮೇಷ್ಟ್ರ ಜವಾನನಿಗೆ ಸರಿ ಹೊಂದುವ ಹೆಣ್ಣನ್ನು ಎಲ್ಲಿಂದ ಹೊಂದಿಸುವುದು ! ಒಬ್ಬ ಮನುಷ್ಯ ಒಂಟಿ ಬಾಳನ್ನು ಎಷ್ಟು ಕಾಲದವರೆಗೆ ಬದುಕಬಲ್ಲ ? ಆದರೆ ಮದುವೆ ಮಂಟಪಕ್ಕೆ ಯಾರನ್ನೂ ಬಲವಂತವಾಗಿ ಎಳೆದೊಯ್ಯಲಾಗುವುದಿಲ್ಲ.

ಅಲ್ಖೋನೋನ್ ಪೇಟೆಯಲ್ಲೆಲ್ಲಾ ಕೋಲು ಕುಟ್ಟುತ್ತಾ ಓಡಾಡುತ್ತಿದ್ದ. ಇವನದು ತೆಳ್ಳನೆಯ ನೀಳಕಾಯ, ಹುಣ್ಣು ಶರೀರ, ಕೆಂಪನೆಯ ಸಿಕ್ಕು ಗಡ್ಡ. ಸುಕ್ಕುಗಟ್ಟಿದ ಅಂಗಿ ತೊಟ್ಟಿರುತ್ತಿದ್ದ. ಆದಂಳ ಸೇಬು ಮೇಲೆ ಕೆಳಗೆ ಹಾರಾಡುತ್ತಿತ್ತು !

ಮದುವೆ ಕಾರ್ಯಗಳಲ್ಲಿ ಇವನು ಹಾಸ್ಯವೇಷ ಹಾಕಲಾರಂಭಿಸಿದ ಮೇಲೆ ರೆಬ್ ಜೆಕೆಲೆ ಸಾಯುವುದನ್ನೇ ನಿರೀಕ್ಷಿಸುತ್ತಿದ್ದ. ಅವನಿಗೆ ಸಿಗುವ ಅವಕಾಶಗಳೆಲ್ಲ ತನ್ನ ಪಾಲಾಗುತ್ತವೆ ಎಂದು. ಆದರೆ ರೆಬ್ ಜೆಕೆಲೆ ಸಾಯಲು ಆತುರ ಉಳ್ಳವನಾಗಿರಲಿಲ್ಲ. ಈಗಲೂ ಅವನು ಮದುವೆ ಕಾರ್ಯಗಳಲ್ಲಿ ದಣಿಯದಂತೆ ಕುಣಿಯುತ್ತ ಹಾಡುತ್ತಿದ್ದ. ತನ್ನ ಪ್ರಾಯದಲ್ಲಿದ್ದಾಗ ಕುಣಿದು ಹಾಡುತ್ತಿದ್ದಂತೆ ಅಲ್ಕೋನೋನ್ ಹೊಸದಾಗಿ ಕಲಿಯುವ ಹುಡುಗರಿಗೆ ಕುಣಿತ ಮತ್ತು ಹಾಡುಗಳನ್ನು ಹೇಳಿಕೊಡುವ ಯತ್ನವನ್ನೂ ತೋರಿದ. ಆದರೆ ಯಾವ ಮನೆಯವರೂ ತಮ್ಮ ಮಕ್ಕಳನ್ನು ಇವನ ಬಳಿಗೆ ಕಳಿಸಲಿಲ್ಲ. ಬೆಳಿಗ್ಗೆ ಮತ್ತು ಸಾಯಂಕಾಲ ಮಕ್ಕಳನ್ನು ಚೆದರ್‌ಗೆ ಕರೆದೊಯ್ದು ಮರಳಿ ಕರೆತರುತ್ತಿದ್ದ. ಹಗಲು ಹೊತ್ತಿನಲ್ಲಿ ರೆಬ್ ಇಷಲ್ ಮೇಷ್ಟ್ರ ಸ್ಕೂಲಿನ ಅಂಗಳದಲ್ಲಿ ಮರಗಟ್ಟುಗಳನ್ನು ಕುಟುಕುತ್ತ ಕೂರುತ್ತಿದ್ದ. ವರ್ಷಕ್ಕೊಂದು ಸಲ ಅಲಂಕರಣದ ಕಾಗದಗಳನ್ನು ಕತ್ತರಿಸುತ್ತಿದ್ದ. ತೈಬೆಲೆಯ ಅಂಗಡಿಗೆ ಸಮೀಪದಲ್ಲಿಯೇ ಒಂದು ಬಾವಿಯಿತ್ತು. ಅಲ್ಕೋನೋನ್ ದಿನದಲ್ಲಿ ಸುಮಾರು ಸಲ ಇಲ್ಲಿಗೆ ಬರುತ್ತಿದ್ದ. ಹೂಜಿಯಲ್ಲಿ ನೀರು ತುಂಬಿ ಒಯ್ಯಲು ಅಥವಾ ನೀರು ಕುಡಿಯಲು. ಇಂಥ ಹೊತ್ತಿನಲ್ಲಿ ಕೆಂಪುಗಡ್ಡದ ಮೇಲೆ ನೀರು ಚೆಲ್ಲಿ ಕೊಳ್ಳುತ್ತಿದ್ದ. ಈ ಸಂದರ್ಭಗಳಲ್ಲಿ ತೈಬೆಲೆಯತ್ತ ತೀಕ್ಷ್ಣ ನೋಟವನ್ನೂ ಬೀರುತ್ತಿದ್ದ. ಇವನನ್ನು ಕಂಡು ತೈಬೆಲೆ ಕನಿಕರ ಪಡುತ್ತಿದ್ದಳು. ಈ ಮನುಷ್ಯ ಇಷ್ಟೊಂದು ಸಲ ಯಾಕೆ ಓಡಾಡುತ್ತಾನೆ ! ಆದರೆ ಪ್ರತಿ ಸಲವೂ ಅಲ್ಕೋನೋನ್ ಹೇಳಿಕೊಳ್ಳುತ್ತಿದ್ದ : "ಆಣೆ ಇಟ್ಟದ್ದೀಯ ತೈಬೆಲೆ. ಸತ್ಯ ಏನು ಅನ್ನೋದು ನಿನಗೆ ಗೊತ್ತಿದ್ದರೆ....!"

ಅಲ್ಕೋನೋನ್ ಒಂದು ಮಹಡಿ-ಗೋಪುರ ಕೋಣೆಯಲ್ಲಿ ವಾಸವಾಗಿದ್ದ. ಅರೆಗುರುಡಾದ ಕಿವುಡು ಮುದುಕಿಯ ಮನೆಯ ಮೇಲೆ ಈ ಕೋಣೆಯಿತ್ತು. ಇವನು ಬೇರೆ ಯಹೂದಿಗಳಂತೆ ಪ್ರಾರ್ಥನೆಗೆಂದು ಸಿನಗಾಗ್‌ಗೆ ಹೋಗದಿದ್ದರೂ ಜೋರಾಗಿ ಬೈಯುತ್ತಿರಲಿಲ್ಲ. ಮಕ್ಕಳನ್ನು ಮನೆಗಳಿಗೆ ತಲುಪಿಸಿ ಬಂದ ಮೇಲೆ ಅಲ್ಕೋನೋನ್ ಮಬ್ಬು ಸಂಜೆಯಲ್ಲಿಯೇ ಪ್ರಾರ್ಥನೆಗಳನ್ನು ಉಸುರಿ ಹಾಸಿಗೆಗೆ ಹೋಗುತ್ತಿದ್ದ. ಕೆಲವು ಸಲ ಈ ಮುದುಕಿಗೆ ಅಲ್ಕೋನೋನ್ ನಡುರಾತ್ರಿಯಲ್ಲಿ ಎದ್ದು ಎಲ್ಲಿಗೋ ಹೋಗುತ್ತಾನೆ ಅನಿಸುತ್ತಿತ್ತು. ರಾತ್ರಿ ಎಲ್ಲಿಗೆ ಹೋಗುತ್ತೀಯಾ ? ಎಂದು ಇವನನ್ನು ಕೇಳಿದ್ದಳು. ಅಲ್ಕೋನೋನ್ ನೀನು ಕನಸು ಕಂಡಿದ್ದೀಯ ಎಂದಿದ್ದ. ಸಂಜೆಯ ಹೊತ್ತಿನಲ್ಲಿ ಬೆಂಚುಗಳಲ್ಲಿ ಕೂರುತ್ತಿದ್ದ ಹೆಂಗಸರು ಹೆಣಿಗೆ ಹಾಕುತ್ತ ಗಾಳಿ ಸುದ್ದಿಗಳನ್ನೆಲ್ಲ

ಮಾತನಾಡುತ್ತಿದ್ದರು. ಇವರು ನಡುರಾತ್ರಿಯಲ್ಲಿ ಅಲ್ಫೋನೋನ್ ತೋಳವಾಗಿ ಮಾರ್ಪಡುತ್ತಾನೆ ಎಂಬ ಸುದ್ದಿಯನ್ನು ಹಬ್ಬಿಸಿದರು. ಕೆಲವು ಹೆಂಗಸರು ಇವನು ಯಾವುದೋ ಹೆಂಗಸಿನೊಂದಿಗೆ ಭೇಟಿಯಾಗಿ ಅವಳನ್ನು ಕೂಡಲು ಹೋಗುತ್ತಾನೆ ಎಂದರು. ಹಾಗಿಲ್ಲವೆಂದ ಮೇಲೆ ಒಬ್ಬ ಮನುಷ್ಯ ಹೆಂಡತಿಯಿಲ್ಲದೆ ಇಷ್ಟು ವರ್ಷಗಳ ಕಾಲ ಹೇಗಿರುತ್ತಾನೆ ? ದಿನಗಳೆದಂತೆ ಶ್ರೀಮಂತರು ತಮ್ಮ ಮಕ್ಕಳನ್ನು ಇವನ ಜೊತೆ ಕಳಿಸುವುದನ್ನು ಬಿಟ್ಟರು. ಇವನು ಬಡವರ ಮಕ್ಕಳನ್ನಷ್ಟೇ ಕರೆದೊಯ್ಯುತ್ತಿದ್ದ. ಹೀಗಾಗಿ ಒಂದು ಚಮಚೆಯಷ್ಟು ಆಹಾರ ಸೇವಿಸುತ್ತಿದ್ದ. ಒಣ ಬ್ರೆಡ್ ತಿನ್ನುತ್ತಿದ್ದ.

ಬರಬರುತ್ತ ಅಲ್ಫೋನೋನ್ ತೆಳ್ಳಗೆ ಒಣಗಿಕೊಳ್ಳುತ್ತಿರುವಂತಾದ. ಆದರೆ ಕಾಲುಗಳು ಮಾತ್ರ ಮೊದಲಿನಂತೆಯೇ ಪುಟಿಯುತ್ತಿದ್ದವು. ತೆಳ್ಳನೆಯ ಕಾಲುಗಳಲ್ಲಿ ಮರಗಾಲುಗಳನ್ನು ಕಟ್ಟಿಕೊಂಡಿರುವಂತೆ ನಡೆದಾಡುತ್ತಿದ್ದ. ಬಾವಿಗೆ ಬರುವಾಗಲೆಲ್ಲ ಇವನು ಬಾಯಾರಿಕೆಯಿಂದ ಬಳಲಿರುತ್ತಿದ್ದ. ಒಂದು ದಿನ ಇವನನ್ನು ಸಮೀಪದಲ್ಲಿಯೇ ನೋಡಿದ ತೈಬೆಲೆ ಕೊಳೆಗಟ್ಟಿಕೊಂಡು ಚಿಂದಿಯಂತಿದ್ದ ಇವನ ಅಂಗಿಯನ್ನು ಕಂಡು ಅಂಗಡಿಗೆ ಕರೆದಳು. ಇವಳು ದಿಟ್ಟಿಸುವುದನ್ನು ನೋಡಿಯೇ ಅಲ್ಫೋನೋನ್ ಬೆಳಚಿಕೊಂಡಿದ್ದ.

"ನಿನ್ನ ಅಂಗಿ ಹರಿದಿರೋದು ಕಾಣಿಸ್ತಿದೆ ನನಗೆ", ತೈಬೆಲೆ ಹೇಳಿದಳು. "ನಿನಗೆ ಬಟ್ಟೆ ಬೇಕು ಅಂದರೆ ಒಂದಿಷ್ಟು ಗಜ ಬಟ್ಟೇನ ಸಾಲ ಕೊಡತೀನಿ. ವಾರಕ್ಕೆ ಐದು ಪೆನ್ನಿಯಂಗೆ ನಿಧಾನವಾಗಿ ದುಡ್ಡು ಕೊಡು."

"ಬೇಡ."

"ಯಾಕೆ ಬೇಡ?" ತೈಬೆಲೆ ಆಶ್ಚರ್ಯದಿಂದ ಕೇಳಿದಳು. "ನಾನೇನು ನಿನ್ನ ಕೊರಳ ಪಟ್ಟಿ ಹಿಡಕೊಂಡು ಸಾಲ ಕೊಡು ಅಂತ ಎಳೆದಾಡಿ ಪೀಡಿಸೋದಿಲ್ಲ. ನೀನು ಸಾಯೋ ಹೊತ್ತಲ್ಲಿ ರಬಾಯಿಗಳ ಹಿಂದೆ ನಿಂತು ನನ್ನ ಸಾಲ ಕೊಟ್ಟು ಸಾಯಿ ಅನ್ನೋಲ್ಲ. ನಿನಗೆ ಯಾವಾಗ ಸಾಧ್ಯವಾಗುತ್ತೋ ಆವಾಗ ಕೊಡು."

"ಬೇಡ."

ತನ್ನ ದನಿಯನ್ನು ಅವಳು ಗುರುತಿಸಬಹುದು ಎಂಬ ಭಯದಿಂದ ಅಲ್ಫೋನೆನ್ ತಕ್ಷಣ ಅಂಗಡಿಯಿಂದ ಹೊರಗೆ ಬಂದ.

ಬೇಸಿಗೆಯಲ್ಲಿ ನಡುರಾತ್ರಿ ಹೊತ್ತಿನಲ್ಲಿ ತೈಬೆಲೆಯ ಹತ್ತಿರಕ್ಕೆ ಭೇಟಿಯೀಯುವುದು ಸುಲಭವಾಗಿತ್ತು. ಅಲ್ಕೋನೋನ್ ಹಿಂಬದಿಯ ದಾರಿಗಳಲ್ಲಿ ತನ್ನ ಅಂಗಿಯನ್ನು ಎತ್ತಿಕೊಂಡು ಅರೆಬತ್ತಲೆ ದೇಹದಲ್ಲಿ ಬರುತ್ತಿದ್ದ. ಚಳಿಗಾಲದಲ್ಲಿ ತೈಬೆಲೆಯ ನಡುಮನೆಯೊಳಗೆ ಬಟ್ಟೆ ಕಳಚಿ ಬಟ್ಟೆ ತೊಡುವುದು ನೋವನ್ನು ಹೆಚ್ಚಿಸುತ್ತಿತ್ತು. ಆದರೆ ಎಲ್ಲದಕ್ಕಿಂತಲೂ ಕೆಟ್ಟದಾಗಿರುತ್ತಿದ್ದುದು ಮಂಜು ಸುರಿಯುತ್ತಿದ್ದ ರಾತ್ರಿಗಳು. ತೈಬೆಲೆ ಅಥವಾ ನೆರೆಹೊರೆಯ ಯಾರಾದರೂ ಹೆಜ್ಜೆ ಗುರುತುಗಳನ್ನು ಗಮನಿಸಿ ನೋಡಿಯಾರು ಎಂದು ಅಲ್ಕೋನೋನ್‌ಗೆ ಭಯವಾಗುತ್ತಿತ್ತು. ಶೀತದಿಂದ ಕೆಮ್ಮಲು ಆರಂಭಿಸುತ್ತಿದ್ದ. ಒಂದು ರಾತ್ರಿ ತೈಬೆಲೆಯ ಹಾಸಿಗೆಗೆ ಹೋದಾಗ ಇವನ ಹಲ್ಲುಗಳು ಅದುರುತ್ತಿದ್ದವು. ಬಹಳ ಹೊತ್ತಿನಿಂದ ಇವನು ಮೈ ಬಿಸಿ ಮಾಡಿಕೊಂಡಿರಲಿಲ್ಲ. ತಾನು ಅವಳಿಗೆ ಮೋಸ ಮಾಡುತ್ತಿರುವುದನ್ನು ಅವಳು ಕಂಡುಬಿಡುತ್ತಾಳೇನೋ ಎಂದು ಹೆದರಿದ್ದ. ಯಾವುದೋ ನೆಪಗಳ ವಿವರಣೆಗಳನ್ನು ನೀಡುತ್ತ ಅವಳ ಕ್ಷಮೆ ಯಾಚಿಸುತ್ತಿದ್ದ. ಆದರೆ ತೈಬೆಲೆ ಈ ಯಾವುದನ್ನೂ ಹೆಚ್ಚು ಪರೀಕ್ಷಿಸುತ್ತಿರಲಿಲ್ಲ, ತನಿಖೆಯನ್ನೂ ಮಾಡುತ್ತಿರಲಿಲ್ಲ. ದೆವ್ವಕ್ಕೂ ಮನುಷ್ಯರಂತೆ ಹಲವಾರು ಚಟಗಳಿದ್ದು, ದೌರ್ಬಲ್ಯಗಳೂ ಇರುತ್ತವೆ ಎನ್ನುವುದನ್ನು ತಿಳಿದಂತಿದ್ದಳು. ಹುರ್ಮಿಜ ಬೆವರುತ್ತಿದ್ದ, ಸೀನುತ್ತಿದ್ದ, ಬಿಕ್ಕಳಿಸುತ್ತಿದ್ದ, ಆಕಳಿಸುತ್ತಿದ್ದ. ಇವನ ಉಸಿರು ಕೆಲವು ಸಲ ಈರುಳ್ಳಿ ವಾಸನೆಯಾಗಿಯೂ, ಕೆಲವು ಸಲ ಬೆಳ್ಳುಳ್ಳಿಯದಾಗಿಯೂ ಇರುತ್ತಿತ್ತು. ಇವನ ದೇಹವೂ ಅವಳ ಗಂಡನ ದೇಹದಂತೆ ಮೂಳೆ ಮತ್ತು ಕೂದಲುಗಳಿಂದ ಆದಂಳ ಸೇಬು ಮತ್ತು ಹೊಕ್ಕಳುಗಳಿಂದ ಅವಳಿಗೆ ಒರಗಿರುತ್ತಿತ್ತು. ಕೆಲವು ಸಮಯಗಳಲ್ಲಿ ಹುರ್ಮಿಜ ತಮಾಷೆಯ ಮನೋಭಾವದಲ್ಲಿರುತ್ತಿದ್ದ. ಉಳಿದ ವೇಳೆಗಳಲ್ಲಿ ನಿಟ್ಟುಸಿರುಗರೆಯುತ್ತಿದ್ದ. ಅವನ ಕಾಲುಗಳು ಬಾತುಕೋಳಿ ಕಾಲುಗಳಂತಿದ್ದೂ, ಮನುಷ್ಯರ ಪಾದಗಳಂತಿದ್ದು ಉಗುರುಗಳು ಮತ್ತು ಬೆರಳಿನ ಸಂದುಗಳಲ್ಲಿನ ಹಿಮದ ಹುಣ್ಣುಗಳಿಂದ ಕೂಡಿರುತ್ತಿದ್ದವು. ಒಂದು ಸಲ ತೈಬೆಲೆ ಈ ವಿಷಯಗಳನ್ನು ಕುರಿತು ಕೇಳಿದಳು, ಹುರ್ಮಿಜ ವಿವರಣೆ ನೀಡಿದ :

"ನಮ್ಮಂಥವರು ಮನುಷ್ಯರೊಳಗಿನ ಹೆಂಗಸರ ಸಂಬಂಧ ಪಡೆದಾಗ ಮನುಷ್ಯರ ಆಕಾರ ಪಡೀತೀವಿ. ಇಲ್ಲ ಅಂದರೆ ನಾವು ಸಂಬಂಧ ಪಡೆದಿರೋ ಹೆಂಗಸು ಸಾಯುತಾಳೆ, ಇಲ್ಲ ವಿಕಾರ ರೂಪವಾಗಿ ಬದಲಾಗತಾಳೆ."

ಹೌದು. ತೈಬೆಲೆ ಇವನನ್ನು ಪ್ರೀತಿಸುತ್ತಿದ್ದಳು. ತನ್ನನ್ನು ಇವನು ಹೀಗೆ

ಬಳಸಿಕೊಳ್ಳುವುದನ್ನು ಇಷ್ಟಪಡುತ್ತಿದ್ದಳು. ಇವನ ಮಾಟಗಾರಿಕೆ ಮತ್ತು ಮಂತ್ರಗಳಿಗೆ ಬಹಳ ಕಾಲ ಭಯ ಉಳಿಸಿಕೊಂಡಿರಲಿಲ್ಲ. ಇವನ ಕತೆಗಳೆಲ್ಲ ನಂಬಲಾಗದಂತಿದ್ದವು. ಆದರೆ ತೈಬೆಲೆ ಇವುಗಳೊಂದಿಗೆ ಎಂಥೆಂಥದೋ ಸಂಬಂಧ ಕಲ್ಪಿಸಿಕೊಳ್ಳುತ್ತಿದ್ದಳು. ಈ ಎಲ್ಲ ಸುಳ್ಳುಗಳಲ್ಲಿ ಅವಳ ನೆನಪಿನಲ್ಲಿ ಉಳಿದುಕೊಳ್ಳುತ್ತಿದ್ದುದೂ ಸ್ವಲ್ಪ ಮಾತ್ರ. ಮೊದಲು ದೆವ್ವಗಳು ಸಾವಿಲ್ಲದವು ಎಂದಿದ್ದ. ಆದರೆ ಒಂದು ದಿನ ಕೇಳಿದ :

"ನಾನು ಸತ್ತ ಮೇಲೆ ನೀನು ಏನು ಮಾಡತೀಯ ?"

"ದೆವ್ವಗಳು ಸಾಯೋದಿಲ್ಲವಲ್ಲ?"

"ಅವು ಕೆಳಗಿನ ಪಾತಾಳಲೋಕಕ್ಕೆ ಹೋಗುತ್ವೆ."

ಚಳಿಗಾಲದಲ್ಲಿ ಪೇಟೆಗೆ ಮಾರಿರೋಗ ಬಂದಿತು. ನದಿಯ ಮೇಲಿನಿಂದ, ಮರಗಿಡಗಳಿಂದ ಕೆಟ್ಟ ಗಾಳಿ ಬೀಸಿ, ಮಕ್ಕಳನ್ನಷ್ಟೇ ಅಲ್ಲದೆ ದೊಡ್ಡವರನ್ನೂ ರೋಗ ಬಲಿ ತೆಗೆದುಕೊಳ್ಳಲಾರಂಭಿಸಿತು. ಮಳೆ ಸುರಿದು ಆಲಿಕಲ್ಲುಗಳು ಉದುರಿದವು. ನೆರೆಯಿಂದ ನದಿ ತುಂಬಿಕೊಂಡಿತು. ಅಲೆಗಳು ಗಾಳಿಯಂತ್ರದ ಮೇಲಕ್ಕೇರಿ ನಿಂತಿದ್ದವು. ಬುಧವಾರ ರಾತ್ರಿ ಹುರ್ಮಿಜ ಹಾಸಿಗೆಗೆ ಬಂದಾಗ ಅವನು ಬಿಸಿಯಾಗಿ ಸುಡುತ್ತಿರುವುದನ್ನು ತೈಬೆಲೆ ಗಮನಿಸಿದ್ದಳು. ಆದರೆ ಅವನ ಕಾಲುಗಳು ತಣ್ಣಗಿದ್ದವು. ಅವನು ನರಳುತ್ತ ನಡುಗುತ್ತಿದ್ದ. ಆದರೂ ತನ್ನ ಹೆಣ್ಣು ದೆವ್ವಗಳ ಬಗ್ಗೆ ಹೇಳುತ್ತ ಅವಳನ್ನು ತಮಾಷೆಯಲ್ಲಿ ಮುಳುಗಿಸಲು ಯತ್ನಿಸಿದ. ಆ ದೆವ್ವಗಳು ಪ್ರಾಯದ ಮನುಷ್ಯರೊಡನೆ ಹೇಗೆ ನಡೆದುಕೊಳ್ಳುತ್ತವೆ, ಬೇರೆ ದೆವ್ವಗಳೊಂದಿಗೆ ಅವೆಲ್ಲ ಹೇಗೆ ಸುತ್ತುಗಟ್ಟಿಕೊಳ್ಳುತ್ತವೆ. ಪವಿತ್ರ ಸ್ನಾನಗೃಹಗಳನ್ನು ಹೊಕ್ಕು ನೀರನ್ನು ಹೇಗೆ ಚೆಲ್ಲಾಡುತ್ತಾರೆ, ಮುದುಕರ ಗಡ್ಡಗಳನ್ನು ಹೇಗೆ ಗಂಟು ಹಾಕುತ್ತಾರೆ.... ಆದರೆ ಅವಳನ್ನು ಕೂಡಲಾಗದೆ ನಿತ್ರಾಣನಾಗಿದ್ದ. ಅಂಥ ಸ್ಥಿತಿಯಲ್ಲಿ ಅವನನ್ನು ತೈಬೆಲೆ ಇದುವರೆಗೂ ಕಂಡಿರಲಿಲ್ಲ. ಅವಳ ಹೃದಯ ಅವಳಿಗೆ ಮೋಸಗೊಳಿಸಿತು. ಅವಳು ಕೇಳಿದಳು :

"ಒಂದಿಷ್ಟು ರಾಸ್ಬೆರಿ ಹಣ್ಣುಗಳ ಜೊತೆ ಹಾಲು ತಂದು ಕೊಡಲಾ?"

ಹುರ್ಮಿಜ ಉತ್ತರಿಸಿದ : "ಅಂಥ ತಿನಿಸು ನಮ್ಮಂಥವರಿಗಲ್ಲ."

"ಕಾಯಿಲೆಯಾದರೆ ನೀವು ಏನು ಮಾಡಿಕೊಳ್ಳುತ್ತೀರಿ?"

"ಮೈನೆಲ್ಲ ಪರಚಿ ಕೆರೆದುಕೊಳ್ಳುತೀವಿ...."

ಇದಾದ ಮೇಲೆ ಇವನು ಸ್ವಲ್ಪ ಮಾತ್ರ ಮಾತಾಡಿದ. ತೈಬೆಲೆಗೆ ಮುತ್ತಿಟ್ಟಾಗ ಅವನ ಉಸಿರನಲ್ಲಿ ವಾಸನೆ ಹೊರಡುತ್ತಿತ್ತು. ಅವಳೊಂದಿಗೆ ಕೋಳಿ ಕೂಗುವವರೆಗೂ ಇರುತ್ತಿದ್ದ ಅವನು ಅಂದು ತುಸು ಮುಂಚೆಯೇ ಅವಳನ್ನು ಬಿಟ್ಟು ಹೊರಟ. ತೈಬೆಲೆ ಮೌನವಾಗಿ ಮಲಗಿದ್ದಳು. ನಡುಮನೆಯಲ್ಲಿನ ಅವನ ಸದ್ದುಗಳನೆಲ್ಲ ಆಲಿಸಿದಳು. ಅವನು ಕಿಟಕಿಯಿಂದ ಹಾರಿಹೋಗುತ್ತಾನೆ ಎಂದುಕೊಂಡಳು. ಆದರೆ ಅದನ್ನು ಮುಚ್ಚಿ ಭದ್ರಗೊಳಿಸಿತ್ತು. ಬಾಗಿಲು ಕಿರುಗುಟ್ಟಿದ ಸದ್ದು ಕೇಳಿಸಿತು. ದೆವ್ವಗಳಿಗಾಗಿ ಪ್ರಾರ್ಥಿಸುವುದು ಪಾಪ, ಇಂಥದನ್ನು ನೆನಪು ಮಾಡಿಕೊಳ್ಳುವುದೂ ಕೆಟ್ಟದು ಎಂದು ತಿಳಿದಿದ್ದರೂ ದೇವರಲ್ಲಿ ಹುರ್ಮಿಜನಿಗಾಗಿ ಇವಳು ಪ್ರಾರ್ಥಿಸಿದಳು.

ಅವಳು ನರಳುತ್ತ ಅತ್ತಳು. "ಬೇಕಾದಷ್ಟು ದೆವ್ವಗಳು ಇವೆ. ಇದೊಂದು ದೆವ್ವವನ್ನ ಉಳಿಸು...."

ಮುಂದಿನ ಸಬ್ಬತ್‌ನಲ್ಲಿ ತೈಬೆಲೆ ಬೆಳಗಿನವರೆಗೂ ಹುರ್ಮಿಜನಿಗಾಗಿ ವ್ಯರ್ಥ ವಾಗಿ ಕಾದಳು. ತನ್ನೊಳಗೇ ಅವನನ್ನು ಕರೆಯುತ್ತ ಅವನು ಹೇಳಿಕೊಟ್ಟಿದ್ದ ಮಂತ್ರ ಗಳನ್ನೆಲ್ಲ ಉಚ್ಚರಿಸುತ್ತ ಅವನ ಬರವನ್ನು ನಿರೀಕ್ಷಿಸಿದಳು. ಆದರೆ ನಡುಮನೆ ಮೌನವಾಗಿತ್ತು. ತೈಬೆಲೆ ನಿಸ್ತೇಜಳಾಗಿ ಮಲಗಿದ್ದಳು. ಹುರ್ಮಿಜ ಒಂದು ಸಲ ಜಂಬ ಕೊಚ್ಚಿಕೊಳ್ಳುತ್ತ ತುಬುಲ್-ಕೈನ್ ಮತ್ತು ಎನೋಷ್‌ರ ಮುಂದೆ ನರ್ತನಗೈದುದನ್ನು ಹೇಳಿದ್ದ. ನೋವಾ ಅರಮನೆಯ ತುದಿಯಲ್ಲಿ ಕುಳಿತಿದ್ದಾಗ, ಲೋತ್‌ಳ ಹೆಂಡತಿಯ ಮೂಗಿನ ಮೇಲೆ ಹಿಕ್ಕೆಯಿಟ್ಟುದಾಗಿ, ಹಷ್ಯೂರಸ್‌ನ ಗಡ್ಡವನ್ನು ಹಿಡಿದು ಎಳೆದದ್ದ ನ್ನೆಲ್ಲ ಹೇಳಿದ್ದ.

ಸುಮಾರು ವರ್ಷಗಳಾದ ಮೇಲೆ ತಾನು ಮತ್ತೆ ಮರುಹುಟ್ಟು ಪಡೆದು ರಾಜ ನಾಗುವುದಾಗಿಯೂ, ಆ ಹುರ್ಮಿಜನು ಇವಳನ್ನು ಚಿತ್ರಮ್ ತಷೀಭ್‌ಳ ನೆರವಿನಿಂದ ಬಷೇಮನ್ ಅರಮನೆಗೆ, ಈಸ್ಕಾಳ ಹೆಂಡತಿಯ ಬಳಿಗೆ ಕರೆದೊಯ್ಯುವುದಾಗಿಯೂ ಹೇಳಿದ್ದ. ಆದರೆ ಅವನೀಗ ಎಲ್ಲೋ ಒಂದೆಡೆ ಕಾಯಿಲೆಯಿಂದ ಮಲಗಿರಬಹುದು. ನಿಸ್ಸಹಾಯಕ ದೆವ್ವ. ತಂದೆ-ತಾಯಿಗಳಿಲ್ಲದ ಒಂಟಿ ಅನಾಥ ದೆವ್ವ, ತನ್ನನ್ನು ಕಾಳಜಿ ಯಿಂದ ನೋಡಿಕೊಳ್ಳುವ ಹೆಂಡತಿಯಿಲ್ಲದ್ದು. ಕಳೆದ ಸಲ ಬಂದಾಗ ಅವನ ಉಸಿರು

ಹೇಗೆ ಏರಿಳಿಯುತ್ತಿತ್ತು ಅನ್ನುವುದು ತೈಬೆಲೆಗೆ ನೆನಪಾಯಿತು. ಮೂಗು ಉಜ್ಜಿಕೊಂಡಾಗ ಅವನ ಕಿವಿಯಲ್ಲಿ ಸಿಳ್ಳಿನ ದನಿ ಹೊರ ಬಂದಿತ್ತು. ಭಾನುವಾರದಿಂದ ಬುಧವಾರದವರೆಗೂ ತೈಬೆಲೆ ಒಂದೇ ರೀತಿಯ ಕನಸನ್ನು ಕಂಡಳು. ಬುಧವಾರ ರಾತ್ರಿ ಗಡಿಯಾರ ನಡುರಾತ್ರಿಯನ್ನು ಬಾರಿಸಿದಾಗ ಆಸೆಯಿಂದ ನಿರೀಕ್ಷಿಸಿದಳು. ಆದರೆ ರಾತ್ರಿ ಉರುಳಿತ್ತು. ಹುರ್ಮಿಜ ಬರಲಿಲ್ಲ. ತೈಬೆಲೆ ಮುಖವನ್ನು ಗೋಡೆಯತ್ತ ಹೊರಳಿಸಿದಳು.

ಹಗಲು ಆರಂಭವಾಯಿತು. ಆದರೂ ಕತ್ತಲು ಸಂಜೆಯಂತಿತ್ತು. ಹೊಳೆಯುವ ಶುಭ್ರಹಿಮ ಆಕಾಶದಿಂದ ಉದುರುತ್ತಿತ್ತು. ಚಿಮಣಿಗಳಿಂದ ಹೊಗೆ ಮೇಲೇಳುತ್ತಿರಲಿಲ್ಲ, ಸೂರಿನ ಹಾಸುಗಳ ಮೇಲೆ ಹರಡಿಕೊಳ್ಳುತ್ತಿತ್ತು. ಕಾಗೆಗಳು ಜೋರಾಗಿ ಕಿರುಚುತ್ತಿದ್ದವು. ನಾಯಿಗಳು ಊಳಿಡುತ್ತಿದ್ದವು. ದುಃಖದಿಂದ ರಾತ್ರಿಯನ್ನು ಕಳೆದಿದ್ದ ತೈಬೆಲೆಗೆ ಅಂಗಡಿಗೆ ಹೋಗುವ ಚೈತನ್ಯವಿರಲಿಲ್ಲ. ಆದರೂ ಅವಳು ಬಟ್ಟೆಯುಟ್ಟುಕೊಂಡು ಹೊರಗೆ ಬಂದಳು. ಅವಳ ದೃಷ್ಟಿಗೆ ನಾಲ್ವರು ಜೋಲುಮೋರೆಯವರು ಒಂದು ಸ್ಟ್ರೆಚರನ್ನು ಹೊತ್ತು ಒಯ್ಯುತ್ತಿರುವುದು ಕಂಡಿತು. ಮಂಜು ಮುಸುಕಿ ಮುಚ್ಚಿಕೊಂಡಿದ್ದ ಹೆಣದ ಹಿಂಗಾಲುಗಳು ನೀಲಿಗಟ್ಟಿಕೊಂಡು ಹೊರಗೆ ಕಾಣುತ್ತಿದ್ದವು. ಸತ್ತಿದ್ದವನ ಹಿಂದೆ ಸಿನಗಾಗ್ ಗಂಟೆ ಬಾರಿಸುವವನು ಮಾತ್ರ ಇದ್ದ. ಸತ್ತಿರುವವರು ಯಾರು ಎಂದು ಕೇಳಿದ ತೈಬೆಲೆಗೆ ಗಂಟೆ ಬಾರಿಸುತ್ತಿದ್ದವನು ಹೇಳಿದ :

"ಅಲ್ಕೋನೋನ್, ಮೇಷ್ಟ್ರ ಜವಾನ."

ತೈಬೆಲೆಯಲ್ಲಿ ದೊಡ್ಡ ಯೋಚನೆಯೊಂದು ಹಾದುಹೋಯಿತು - ನಿಸ್ಸಹಾಯಕ ಮನುಷ್ಯ, ಒಂಟಿಯಾಗಿ ಬದುಕಿ, ಒಂಟಿಯಾಗಿ ಸತ್ತು ಕೊನೆ ಪಯಣ ಕೈಗೊಂಡಿರುವಂಥವನು. ಇವತ್ತು ಅಂಗಡಿಗೆ ಯಾರು ಬರುತ್ತಾರೆ ? ವ್ಯಾಪಾರವಾಗಬಹುದು ಎಂದು ಕಾಳಜಿಯನ್ನೇಕೆ ತೋರಬೇಕಿದೆ ? ತೈಬೆಲೆ ಎಲ್ಲವನ್ನೂ ಕಳೆದುಕೊಂಡಿದ್ದಾಳೆ. ಹೀಗಿದ್ದೂ ಅವಳು ಒಳ್ಳೆ ಕಾರ್ಯಗಳನ್ನು ಮಾಡುತ್ತಿದ್ದಾಳೆ. ಉದ್ದನೆ ರಸ್ತೆಯಲ್ಲಿ ಅವಳು ಸತ್ತವನ ಹಿಂದೆ ಸ್ಮಶಾನದವರೆಗೂ ಹೋದಳು. ಅಲ್ಲಿ ಸ್ಮಶಾನ ಕಾಯುವವನು ಹಿಮ ಸುರಿದ ನೆಲದಲ್ಲಿ ಗುಂಡಿ ತೋಡುವವರೆಗೂ ಕಾದಳು. ಅವರು ಅಲ್ಕೋನೋನ್‌ನನ್ನು ಪ್ರಾರ್ಥನೆಯ ಶಾಲಿನಲ್ಲಿ ಸುತ್ತಿದ್ದರು. ಒಂದು ಕೋಲನ್ನು ಬದಿಯಲ್ಲಿರಿಸಿದರು, ಕಣ್ಣುಗಳನ್ನು ಮುಚ್ಚಿದರು. ದೇವಲೋಕದಿಂದ ಬರುವ ದೇವದೂತ ಇವನನ್ನು ಕರೆದೊಯ್ಯಲು ಅನುವಾಗುವಂತೆ ಬೆರಳುಗಳನ್ನು ಸಜ್ಜುಗೊಳಿಸಿ ಹೊಂದಿಸಿದರು. ನಂತರ

ಸಮಾಧಿಯಲ್ಲಿರಿಸಿ ಮುಚ್ಚಿದರು. ಸ್ಮಶಾನ ಕಾಯುವವನು ಕಡ್ಡಿಷ್ ಉಚ್ಚರಿಸಿದ. ತೈಬೆಲೆಗೆ ಅಳುವಿನ ಬಿಕ್ಕೊಂದು ಹೊರಬಂದಿತು. ಈ ಆಲ್ಕೋನೋನ್ ಒಂಟಿ ಬಾಳನ್ನು ಬದುಕಿರುವಂತೆ ತಾನೂ ಒಂಟಿ ಬಾಳನ್ನು ಬದುಕಿದ್ದೇನೆ. ತನ್ನಂತೆಯೇ ಇವನೂ ಏನನ್ನೂ ಉಳಿಸಿಲ್ಲ. ಹೌದು ಆಲ್ಕೋನೋನ್ ಕೊನೆಗೂ ತನ್ನ ನರ್ತನಗೈದ. ಹುರ್ಮಿಜ ಹೇಳುತ್ತಿದ್ದ ಕತೆಗಳಲ್ಲಿ ಸತ್ತವರು ನೇರವಾಗಿ ಸ್ವರ್ಗಕ್ಕೆ ಹೋಗುವುದಿಲ್ಲ ಅನ್ನುವುದು ತೈಬೆಲೆಗೆ ತಿಳಿದಿತ್ತು. ಪ್ರತಿಯೊಂದು ಪಾಪವೂ ಒಂದು ದೆವ್ವವನ್ನು ಸೃಷ್ಟಿಸುತ್ತದೆ. ಈ ದೆವ್ವಗಳು ತಮ್ಮ ಸಾವಿನ ನಂತರ ಮನುಷ್ಯರ ಮಕ್ಕಳಾಗುತ್ತವೆ. ಅವು ತಮ್ಮ ಪಾಲು ಕೇಳಲು ಬರುತ್ತವೆ. ಸತ್ತಿರುವ ತಮ್ಮ ತಂದೆಯವರನ್ನು ಕರೆಯುತ್ತಿರುತ್ತವೆ. ಕಾಡುಗಳಲ್ಲಿಯೇ ಉರುಳಾಡುತ್ತಿರುತ್ತವೆ. ತಮ್ಮ ಶಿಕ್ಷೆಯ ಅವಧಿ ಪೂರ್ಣವಾಗುವವರೆಗೂ ಅರಣ್ಯದಲ್ಲಿಯೇ ಇರುತ್ತವೆ ಮತ್ತು ಅವನು ನರಕದಲ್ಲಿ ಶುದ್ಧವಾಗಲು ಸಿದ್ಧನಾಗಿರುತ್ತಾನೆ.

ಇದಾದ ನಂತರ ತೈಬೆಲೆ ಏಕಾಂಗಿಯಾಗುತ್ತ ಬಂದಳು. ಎರಡು ಥರದ ಒಂಟಿತನವನ್ನು ಅನುಭವಿಸಿದಳು - ವಿರಕ್ತಿ ಮತ್ತು ದೆವ್ವದಿಂದ. ಅವಳು ಬೇಗ ಮುಪ್ಪಾದಳು. ಅವಳು ಹೇಳುವಂಥದ್ದು ಏನೂ ಉಳಿದಿರಲಿಲ್ಲ. ನಡೆದು ಹೋಗಿರುವ ರಹಸ್ಯವನ್ನು ಯಾರೊಂದಿಗೂ ಹೇಳಲಾರಳು. ಹೇಳಿದರೂ ಯಾರೂ ನಂಬಲಾರರು. ಹೃದಯಕ್ಕೆ ತಿಳಿದಿರುವ ರಹಸ್ಯಗಳನ್ನು ತುಟಿಗಳು ಉಚ್ಚರಿಸಲಾರವು. ಇವುಗಳನ್ನು ಸಮಾಧಿಯೊಳಕ್ಕೂ ಉಳಿಸಿ ಒಯ್ಯುತ್ತಾರೆ. ಉದ್ದನೆಯ ತೆಳು ಮರಗಳು ಅಲ್ಲಿ ಇವರೊಂದಿಗೆ ಪಿಸುಗುಡುತ್ತವೆ. ಇವರೊಂದಿಗೆ ಕಲ್ಲುಗಳು ಕಾಗುಡುತ್ತವೆ. ಸಮಾಧಿಯ ಕಲ್ಲುಗಳು ಇವರ ಜೊತೆ ಮೌನವಾಗಿ ಕಲ್ಲುಗಳ ಭಾಷೆಯಲ್ಲಿ ಸಂಭಾಷಿಸುತ್ತವೆ. ಸತ್ತವರು ಒಂದು ದಿನ ಮೇಲೆ ಏಳುತ್ತಾರೆ. ಆದರೆ ಅವರ ರಹಸ್ಯಗಳು ಸರ್ವಶಕ್ತನಲ್ಲಿ ನೆಲೆಯಾಗಿರುತ್ತವೆ, ಮತ್ತು ಅವನ ತೀರ್ಪು ಎಲ್ಲ ತಲೆಮಾರುಗಳವರೆಗೂ ಸಾಗುತ್ತದೆ.

ಎತ್ತರ ಮತ್ತು ಗಿಡ್ಡ

ನೀವು ಹೇಳುತ್ತೀರಿ - ಎತ್ತರ, ಗಿಡ್ಡ. ಇದರಲ್ಲಿ ಏನು ವ್ಯತ್ಯಾಸವಿದೆ ? ಮನುಷ್ಯ ಒಂದು ಗಜಪಟ್ಟಿಯಿಂದ ಅಳೆಯುವಂಥವನಲ್ಲ. ಮುಖ್ಯವಾದ ಅಂಗ ಎಂದರೆ ತಲೆ, ಪಾದಗಳಲ್ಲ. ಹೀಗಿದ್ದೂ ಯಾವುದೇ ಒಬ್ಬ ವ್ಯಕ್ತಿ ಮೂರ್ಖತನದ ಕೆಲವೊಂದು ಅಭಿಪ್ರಾಯಗಳನ್ನು ತನ್ನಲ್ಲಿ ಇರಿಸಿಕೊಂಡಿದ್ದರೆ ಇದು ಎಲ್ಲಿಗೆ ಹೋಗಿ ತಲುಪುತ್ತದೆ ಎನ್ನುವುದನ್ನು ನಿಮ್ಮಿಂದ ತಿಳಿಯಲು ಸಾಧ್ಯವಾಗುವುದಿಲ್ಲ. ಇರಲಿ, ನಾನು ನಿಮಗೊಂದು ಕತೆ ಹೇಳುತ್ತೇನೆ. ನಮ್ಮ ಪೇಟೆಯಲ್ಲಿ ಗಂಡಹೆಂಡಿರ ಒಂದು ಜೋಡಿಯಿತ್ತು. ಗಂಡನನ್ನು ಗಿಡ್ಡಮೋತಿ ಹಾಗೂ ಹೆಂಡತಿಯನ್ನು ಮೋತಿಷ ಎಂದು ಕೂಗುತ್ತಿದ್ದರು. ಇವಳ ನಿಜವಾದ ಹೆಸರನ್ನು ಯಾರೂ ಬಳಸುತ್ತಲೆ ಇರಲಿಲ್ಲ. ಇವನು ತೀರಾ ಗಿಡ್ಡನಲ್ಲ. ಚಿಲ್ಟಾರಿಗಿಂತ ಸ್ವಲ್ಪ ದೊಡ್ಡವನು. ತಮಾಷೆಗಾರರು - ನಮ್ಮ ಪೇಟೆಯ ಸುತ್ತಮುತ್ತಿನಲ್ಲಿ ಇಂಥವರು ತುಂಬಾ ಜನರಿದ್ದರು - ಬಡತನದ ಕಾರಣಕ್ಕೆ ತಮ್ಮನ್ನು ತಾವೇ ಹಾಸ್ಯಕ್ಕೀಡುಮಾಡಿಕೊಳ್ಳುತ್ತಿದ್ದರು. ಚೆದರ್‌ನಲ್ಲಿ ಚಿಕ್ಕ ಹುಡುಗರಿಗೆ ಪಾಠ ಹೇಳಿಕೊಡುವ ಉಪಾಧ್ಯಾಯರಾದ ರೆಬ್ ಬೆರಿಷ್ ಅವರ ಜವಾನ ಈ ಮೋತಿಯನ್ನು ಹುಡುಗರ ಜೊತೆ ಕೈ ಹಿಡಿದು ಎಳೆದೊಯ್ಯುತ್ತಾನೆ ಎನ್ನುತ್ತಿದ್ದರು ಈ ತಮಾಷೆಗಾರರು. ಸಿಂಷತೋರಾದ ದಿನಗಳಲ್ಲಿ ಕುಡಿದು ಮತ್ತೇರಿದ ಗಂಡಸರು ಚಿಕ್ಕ ಹುಡುಗರ ಜೊತೆ ಈ ಮೋತಿಯೂ ತೋರಾ ಓದಲಿ ಎಂದು ಕರೆಯುತ್ತಿದ್ದರು. ಕೆಲವರು ಇವನಿಗೆ ರಜಾಬಾವುಟವನ್ನೂ ಹಿಡಿದುಕೊಳ್ಳಲು ಕೊಡುತ್ತಿದ್ದರು - ಬಾವುಟದ ಕೋಲಿನ ಮೇಲೆ ಮೇಣದ ಬತ್ತಿಗಳನ್ನಿರಿಸಿ ಜೊತೆಯಲ್ಲಿ ಸೇಬನ್ನೂ ಇಟ್ಟು ! ಹೆಂಗಸೊಬ್ಬಳು ಮಗುವೊಂದನ್ನು ಹೆತ್ತರೆ ಎಳೆಗೂಸಿಗೆ ದುಷ್ಟಶಕ್ತಿಗಳ ಕಾಟ ತಟ್ಟದಂತೆ ಇರಲಿ ಎಂದು ತೊಟ್ಟಿಲ ಪ್ರಾರ್ಥನೆ ಮಾಡಲು ಬರುವ ಹುಡುಗರ ಜೊತೆಗೆ ಮೋತಿಯನ್ನೂ ಕರೆಯುತ್ತಿದ್ದರು. ಇಷ್ಟಾದರೂ ಇವನಿಗೆ ಉತ್ತಮ ಎನ್ನಬಹುದಾದ ಗಡ್ಡವಿತ್ತು. ಉಹ್ಞುಂ, ಇದು ಹೋತನ ಗಡ್ಡ ಎನ್ನುವಂತಿತ್ತು, ಅಲ್ಲಲ್ಲಿ ಒಂದಿಷ್ಟು ಕೂದಲುಗಳಿದ್ದವು, ಅಷ್ಟೆ. ಇವನಿಗೆ ಮಕ್ಕಳಿರಲಿಲ್ಲ. ನಿಜವನ್ನು ಹೇಳಲೇ? ಇವನು ಇನ್ನೂ ಶಾಲೆಯ ಹುಡುಗನಂತೆ ಕಾಣುತ್ತಿದ್ದ. ಇವನ ಹೆಂಡತಿ ಮೋತಿಷ ಅಷ್ಟೇನೂ ಸುಂದರವಾಗಿರಲಿಲ್ಲ. ಆದರೆ ಇವಳಲ್ಲಿ ಇರಬೇಕಾದುದೆಲ್ಲ ಸಾಕಷ್ಟಾಗಿಯೇ ಇತ್ತು. ಯಾವುದು ಒಳ್ಳೆಯದೋ

ಅದು ಹಾಗೆಯೇ ಇರಲಿ. ಇವರಿಬ್ಬರೂ ಜೊತೆಯಲ್ಲಿ ಬದುಕುತ್ತಿದ್ದರು. ಮೋತಿ ಸಾಕಷ್ಟು ಶ್ರೀಮಂತನಾಗಿಯೂ ಇದ್ದ. ಕಿರಾಣಿ ವರ್ತಕನಾಗಿದ್ದ ಇವನಿಗೆ ಸ್ವಂತದ ಅಂಗಡಿ ಮಳಿಗೆಯೂ ಇತ್ತು. ಸ್ಥಳೀಯ ಜಮೀನ್ದಾರರೂ ಇವನನ್ನು ಇಷ್ಟಪಡುತ್ತಿದ್ದರು. ಆದರೂ ಇವನ ಆಳ್ತನವನ್ನು ಎಲ್ಲರೂ ತಮಾಷೆ ಮಾಡುತ್ತಿದ್ದರು. ಆದರೆ ಇದೊಂದು ಜೀವನ. ನಮ್ಮ ಜೇಬಿನಲ್ಲಿ ಇರುವುದು ದೊಡ್ಡದಾಗಿದ್ದರೆ ಬದುಕಿನಲ್ಲಿ ಇದಕ್ಕಿಂತ ದೊಡ್ಡದು ಎನ್ನುವುದು ಯಾವುದಿದೆ ?

ಆದರೆ ಇದರಲ್ಲಿ ತುಂಬ ಕೆಟ್ಟದು ಎನಿಸುವಂತೆ ಇದ್ದದ್ದು ಮೋತಿಷ ಯಾವಾಗಲೂ ಇವನನ್ನು ಹಂಗಿಸುತ್ತಲೇ ಇರುತ್ತಿದ್ದುದು. (ಮೋತಿಷ ಕ್ಷಮಿಸುತ್ತಾಳೆ ಅಂದುಕೊಂಡಿದ್ದೇನೆ) ಇದನ್ನ ಮಾಡು ಗಿಡ್ಡ, ಅದನ್ನ ಮಾಡು ಪುಟ್ಟ ಎನ್ನುತ್ತಿದ್ದಳು. ಇವನ ಕೈಗೆಟುಕದಂತೆ ಏನೇನನ್ನೋ ಮೇಲೆಲ್ಲಾ ಇರಿಸಿರುತ್ತಿದ್ದಳು. "ಗೋಡೆ ಮೇಲೆ ಅಲ್ಲಿಗೆ, ಒಂದು ಮೊಳೆ ಹೊಡಿ!" "ಮೇಲಗಡೆ ಇರೋ ಆ ತಾಮ್ರದ ಪಾತ್ರೆ ಕೆಳಗಡೆ ತೆಗೆದುಕೊಡು!" ಎನ್ನುತ್ತಿದ್ದಳು. ಜನಗಳ ಎದುರಿಗೂ ಇವಳು ಇಂಥ ಗೇಲಿ ಮಾಡುತ್ತಿದ್ದಳು. ಪೇಟೆಯ ತುಂಬ ಯಾವಾಗಲೂ ಇಂಥ ಕತೆಗಳೇ ಹರಡಿರುತ್ತಿದ್ದವು. (ಗೌರವಸ್ಥ ಯಹೂದಿ ಹೆಂಗಸೊಬ್ಬಳು ಹೀಗೆಲ್ಲ ಹೇಳುತ್ತಾಳೆ ಎನ್ನುವುದನ್ನು ನೀವು ಊಹಿಸಿಕೊಳ್ಳಬಲ್ಲಿರೇನು?) ಇವಳ ಜೊತೆಗೆ ಹಾಸಿಗೆಗೆ ಬರಲು ಮೋತಿಗೆ ಒಂದು ಸ್ಟೂಲನ್ನು ಹಾಕಿಕೊಳ್ಳಲೂ ಹೇಳುತ್ತಿದ್ದಳು ಎಂಬ ಮಾತೂ ಇದೆ. ಈ ಗಾಳಿಮಾತಿನ ಹಿಂದೆ ಅಡಗಿರುವುದು ಏನು ಎಂಬುದನ್ನು ನೀವೇ ಕಲ್ಪಿಸಿಕೊಳ್ಳಬಹುದು ! ಇವನು ಮನೆಯಿಂದ ಹೊರಗೆ ಹೋಗಿದ್ದಾಗ ಯಾರಾದರೂ ಇವನನ್ನು ಕೇಳಿಕೊಂಡು ಹೋದರೆ, 'ಟೇಬಲ್ ಕೆಳಗಡೆ ಇರಬೇಕೇನೋ ನೋಡು' ಎನ್ನುತ್ತಿದ್ದಳು.

ನಮ್ಮ ಪೇಟೆಯಲ್ಲಿ ಕೆಟ್ಟಬಾಯಿಯ ಒಬ್ಬ ಉಪಾಧ್ಯಾಯನಿದ್ದ. ಇವನು ಒಂದು ಸಲ ಮ್ಯಾಪ್ ತೋರಿಸುವ ಉದ್ದದ ಸಣ್ಣಕೋಲನ್ನು ಉಪಯೋಗಿಸಿಕೊಂಡು, ಮೋತಿಯತ್ತ ಈ ಕೋಲನ್ನು ತೋರಿಸಿ, ಸುತ್ತೆಲ್ಲಾ ಕಣ್ಣಾಡಿಸಿ ನೋಡಿ, ಅವನ ವಾಕಿಂಗ್ ಸ್ಟಿಕ್‌ನಂತೆ ಮಾಡಿಕೊಂಡು ಅಭಿನಯಿಸಿಯೂ ತೋರಿಸಿದ್ದನಂತೆ ಈ ಭೂಪ. ಆಗಿನ ದಿನಗಳಲ್ಲಿ ಜನ ತಮ್ಮ ಮೈಕೈಗಳನ್ನು ಬಿಗಿ ಹಿಡಿದಿರುತ್ತಿದ್ದರು. ನಾಲಿಗೆಯನ್ನು ಮಾತ್ರ ಬೇಕೆಂದ ಹಾಗೆ ಹರಿಬಿಡುತ್ತಿದ್ದರು. ಮೋತಿ ತನ್ನನ್ನು ಕುರಿತ ಇಂಥ ಗೇಲಿ ಮಾತುಗಳಿಗೆ ನಗು ಬೀರುತ್ತಿದ್ದ. ಇಂಥವೆಲ್ಲಾ ಎಷ್ಟು ಬಂದರೇನು ಎಂಬಂತೆ. ಆದರೆ

ಇವು ಚುಚ್ಚುವಂತೆಯೂ ಇರುತ್ತಿದ್ದವು. ಎಷ್ಟಾದರೂ ಇದು ಅಲ್ಪಕಾಲದ ಬದುಕು. ಇದರಲ್ಲಿ ತಮಾಷೆ ಎನ್ನುವುದು ಯಾವುದಿದೆ ? ಯಾರಿಗಾದರೂ ಉದ್ದ ಕಾಲುಗಳಿದ್ದರೆ ಅವನು ದೇವರ ಕಣ್ಣಿನಲ್ಲಿ ದೊಡ್ಡವನಾಗಿ ಬಿಡುತ್ತಾನೇನು ? ಇದನ್ನೆಲ್ಲ ನೀವು ಮನಸ್ಸಿನಲ್ಲೇ ಇರಿಸಿಕೊಳ್ಳಿ. ಇದು ಬರಿಯ ಕುಚೋದ್ಯದ್ದು. ಸಣ್ಣತನದ ಜನಗಳು ಹರಡುವ ಕೆಟ್ಟ ಗಾಳಿ ಮಾತುಗಳು.

ಮೋತಿ ಪಂಡಿತನಲ್ಲ, ಒಬ್ಬ ಸಾಧಾರಣ ಮನುಷ್ಯ. ಸಿನಗಾಗ್‌ನಲ್ಲಿ ಉಪನ್ಯಾಸ ಮಾಡಲು ಬರುತ್ತಿದ್ದ ಪ್ರವಚನಕಾರರು ಹೇಳುವ ನೀತಿಕತೆಗಳನ್ನು ಕೇಳಲು ಇವನಿಗೆ ತುಂಬ ಇಷ್ಟವಾಗುತ್ತಿತ್ತು. ಶನಿವಾರಗಳ ಬೆಳಗಿನ ಪ್ರಾರ್ಥನೆಗೆ ಎಲ್ಲರ ಜೊತೆ ಹೋಗಿ ಸ್ತೋತ್ರಗೀತೆಗಳನ್ನು ಪಠಿಸುತ್ತಿದ್ದ. ಸಭೆ ಸಮಾರಂಭಗಳಲ್ಲಿ ತನ್ನ ಪ್ರೀತಿಯ ವಿಸ್ಕಿಯನ್ನೂ ಸೇವಿಸುತ್ತಿದ್ದ. ಕೆಲವು ವೇಳೆ ಇವನು ನಮ್ಮ ಮನೆಗೂ ಬರುತ್ತಿದ್ದ. ನನ್ನ ತಂದೆ (ಇವರು ಶಾಂತಿಯಲ್ಲಿ ನೆಲೆಸಿರಲಿ) ಇವನಿಂದ ಓಟ್ಸ್‌ಧಾನ್ಯವನ್ನು ತೆಗೆದುಕೊಳ್ಳುತ್ತಿದ್ದರು. ಬಾಗಿಲ ಬಳಿ ಬಂದು ನಿಲ್ಲುತ್ತಿದ್ದ ಇವನು ಒಂದು ಬೆಕ್ಕು ಒಳಬರಲು ಕಾತರಿಸುತ್ತ ಹಿಂದೆಮುಂದೆ ನೋಡುವಂತೆ ನಿಂತುಕೊಳ್ಳುತ್ತಿದ್ದ. ಹುಡುಗಿಯರಾದ ನಾವೆಲ್ಲ ಆಗ ಚಿಕ್ಕವರು. ಹೊಟ್ಟೆ ಹುಣ್ಣಾಗುವಂತೆ ಉಕ್ಕಿಬರುತ್ತಿದ್ದ ನಗುವನ್ನು ನುಂಗಿಕೊಳ್ಳುತ್ತ ಒಳಗೆ ಬರಲು ಹೇಳುತ್ತಿದ್ದೆವು. ಇವನು ಕೂರಲೆಂದು ಕುರ್ಚಿಯೊಂದನ್ನು ಇರಿಸುತ್ತಿದ್ದ ತಂದೆಯವರು ರೆಬ್ ಮೋತಿ ಎಂದು ಮಾತಿಗೆ ತೊಡಗುತ್ತಿದ್ದರು. ಆದರೆ ನಮ್ಮ ಕುರ್ಚಿಗಳು ಎತ್ತರವಾಗಿ ಇದ್ದುದರಿಂದ ಇವುಗಳನ್ನು ಏರಿ ಕೂರುವುದು ಇವನಿಗೆ ತ್ರಾಸಿನದಾಗಿರುತ್ತಿತ್ತು. ನಾವು ಟೀಯನ್ನು ಒಯ್ದು ಟೇಬಲ್ ಮೇಲೆ ಇರಿಸಿ ಬಂದರೆ ಅದನ್ನು ತೆಗೆದುಕೊಳ್ಳಲು ಚಡಪಡಿಸುತ್ತ ಒದ್ದಾಡುತ್ತಿದ್ದ. ಲೋಟ ಕೈಗೆ ಎಟುಕದಿದ್ದರೆ ತುಟಿಯನ್ನು ಅದರ ತುದಿ ಸೋಕುವವರೆಗೂ ಕಾಲುಗಳನ್ನು ಚಾಚಿ ಮುಂದೆ ಬಾಗುತ್ತಿದ್ದ. ಹೀಗೆಯೆ ಇವನು ಒಂದು ಸಲ ಮರದ ಬಕೆಟ್‌ನ ಒಳಕ್ಕೂ ಜಾರಿ ಬಿದ್ದಿದ್ದನಂತೆ. ಸ್ನಾನ ಮಾಡಲು ನಮ್ಮ ಮನೆಗಳಲ್ಲಿ ಇಂಥ ಮರದ ಬಕೆಟ್‌ಗಳನ್ನು ಇರಿಸಿಕೊಂಡಿರುತ್ತಿದ್ದರು. ಇಷ್ಟೆಲ್ಲ ತಮಾಷೆಗಳಿದ್ದರೂ ಇವನು ಒಳ್ಳೆಯ ವ್ಯಾಪಾರಸ್ಥನಾಗಿದ್ದ. ಮೋತಿಷಳೊಂದಿಗೆ ಆರಾಮವೆನ್ನಬಹುದಾದ ಜೀವನ ಸಾಗಿಸುತ್ತಿದ್ದ. ಸ್ವಂತದ ಮನೆಯೂ ಇತ್ತು. ಮನೆಯ ಶೆಲ್ಫ್‌ಗಳಲ್ಲಿ ಯಾವಾಗಲೂ ಒಳ್ಳೊಳ್ಳೆಯ ವಸ್ತುಗಳು ತುಂಬಿಯೇ ಇರುತ್ತಿದ್ದವು.

ಈಗ ಇದನ್ನು ಕೇಳಿ : ಒಂದು ದಿನ ಗಂಡ-ಹೆಂಡತಿಯರಲ್ಲಿ ಭಿನ್ನಾಭಿಪ್ರಾಯ

ಮೂಡಿತು. ಒಬ್ಬರಿಗೊಬ್ಬರು ಎದುರು ಮಾತಾಡಿದರು. ಆಮೇಲೆ ಇದು ನಿಜವಾದ ಜಗಳವಾಯಿತು. ಇಂಥಾದ್ದು ಎಲ್ಲಾ ಮನೆಗಳಲ್ಲಿಯೂ ನಡೆಯುವಂಥದೇ. ಆದರೆ ಅದೃಷ್ಟ ಕೂಡಿಕೊಂಡಂತೆ ನೆರೆಮನೆಯ ಒಬ್ಬರು ಜಗಳದ ಮಧ್ಯದಲ್ಲಿ ಹಾಜರಾದರು. ಮೋತಿಷಳ (ಇವಳು ಇದನ್ನು ನನ್ನ ಬಗ್ಗೆ ತಪ್ಪಾಗಿ ತಿಳಿಯದಿರಲಿ) ನಾಲಿಗೆ ಗಾಣದಂತೆ ಹೊರಳಲು ಪ್ರಾರಂಭವಾಯಿತು. ಸಿಟ್ಟಿನ ರೋಷದಲ್ಲಿ ತನ್ನ ದೇವರನ್ನೂ ಕೂಡ ಮರೆತಳು. ತನ್ನ ಗಂಡನಿಗೆ ಕೂಗಿ ಹೇಳಿದಳು : 'ನೀನೊಬ್ಬ ಗಿಡ್ಡ ! ದುರ್ನಾತ ಹೊಡಿಯೋ ಚಿಲ್ಲಾರಿ ! ಏನು ಮನುಷ್ಯ ನೀನು ? ಸೊಳ್ಳೆಗಿಂತಲೂ ಸಣ್ಣಗಿದೀಯ. ಬೆಳೆಯದ ಹುಡುಗನಂಗಿರೋ ನೀನು ಸಿನಗಾಗ್‌ಗೆ ನಡೆದು ಹೋಗೋದನ್ನ ನೋಡಿದರೆ ನನಗೆ ನಾಚಿಕೆಯಾಗುತ್ತೆ!' ಇವಳ ಮಾತು ಹೀಗೇ ಮುಂದುವರಿಯಿತು. ಕೆಂಡ ತನ್ನ ಕಾವನ್ನು ಕಳೆದುಕೊಳ್ಳುತ್ತ ಬೂದಿಯಾಗುವ ಹಾಗೆ ಮುಖದ ರಕ್ತ ಇಳಿಯುವವರೆಗೆ ಮೋತಿ ಮಾತ್ರ ಏನನ್ನೂ ಹೇಳಲಿಲ್ಲ. ಇವಳು ಕಾಡುಪ್ರಾಣಿಯಂತೆ ಇನ್ನೂ ಮುಂದುವರಿಸಿದಳು : 'ನಿನ್ನಂಥ ಗಿಡ್ಡ ಮನುಷ್ಯನ್ನ ಕಟ್ಟಿಕೊಂಡು ನಾನು ಏನು ಮಾಡಬೇಕು ? ನಿನಗೇ ಅಂತ ನಾನು ಮೆಟ್ಟಲಿರೋ ಸ್ಟೂಲನ್ನ ಕೊಂಡುಕೊಂಡು ನಿನ್ನನ್ನ ತೊಟ್ಟಿಲಿನ ಒಳಗಡೆ ಇಡಬೇಕು. ನನ್ನ ತಾಯಿಗೆ ನನ್ನ ಮೇಲೆ ಪ್ರೀತಿ ಇದ್ದರೆ ಅವಳು ಒಬ್ಬ ಗಂಡಸನ್ನ ಹುಡುಕಿಕೊಡುತ್ತಿದ್ದಳು. ಆಗ ತಾನೆ ಹುಟ್ಟಿದ ಹಸುಗೂಸಿಗೆ ಕೊಡತಿರಲಿಲ್ಲ!' ಮೋತಿಷ ಮನಸ್ಸಿನ ಸ್ಥಿಮಿತವನ್ನೇ ಕಳೆದುಕೊಂಡಿದ್ದಳು. ತುಂಬಾ ಹೊತ್ತಿನವರೆಗೆ ಇವಳಿಗೆ ತಾನು ಏನು ಹೇಳುತ್ತಿದ್ದೇನೆ ಎನ್ನುವುದೂ ತಿಳಿಯದಂತಿತ್ತು. ಇವಳದ್ದು ಕೆಂಪು ಮುಖ, ಕೆಂಪು ಕೂದಲು. ಆದರೆ ಆಗ ಮಾತ್ರ ಸುಣ್ಣದಂತೆ ಬಿಳಿಚಿಕೊಂಡಿದ್ದಳು. ಕೊನೆಯಲ್ಲಿ ಮೋತಿ ಹೇಳಿದ : 'ನಿನ್ನ ಎರಡನೆ ಗಂಡ ನನಗಿಂತ ಎತ್ತರವಾಗಿ ನಿನಗೆ ಪೂರ್ತಿ ಹೊಂದೋ ಹಾಗೆ ಇರತಾನೆ'. ಈ ಮಾತನ್ನು ಕೇಳಿದೊಡನೆ ಮೋತಿಷ ಕುಸಿದು ಕೂತು ಜಗತ್ತಿನಲ್ಲೇ ಸಣ್ಣಮಗುವೆಂಬಂತೆ ಅಳಲಾರಂಭಿಸಿದ್ದಳು. ಅಲ್ಲಿಯವರೆಗೆ ಇವಳು ಅಳುವುದನ್ನು ಯಾರೂ ಕಂಡಿರಲಿಲ್ಲ. ಯೋಮ್‌ಕಿಪ್ಪರ್‌ನಲ್ಲಿ ಕೂಡ ಅಳುತ್ತಿದ್ದವಳಲ್ಲ. ಅಂಥ ಮೋತಿಷ ಈಗ ಧೂಳಿನ ಕಣದಂತಾಗಿದ್ದಳು. ಮುಂದೆ ಏನು ನಡೆಯಿತು ಎನ್ನುವುದು ನನಗೆ ಗೊತ್ತಿಲ್ಲ. ಆಗ ನಾನು ಅಲ್ಲಿರಲಿಲ್ಲ. ಗಂಡಹೆಂಡತಿಯರು ಒಬ್ಬರಿಗೊಬ್ಬರು ಹೊಂದಿಕೊಂಡು ಹೋಗುವ ಸಮಾಧಾನದ ಮಾತುಗಳನ್ನು ಹೇಳಿರಬಹುದು. ಆದರೆ ಗಾದೆ ಮಾತೊಂದಿದೆ, 'ಗಾಳಿ ತೇಲಿ ಹೋದರೂ ಮಾತು ಉಳಿದುಕೊಂಡೇ ಇರುತ್ತದೆ' ಎಂದು.

ಒಂದು ತಿಂಗಳು ಕಳೆಯುವಷ್ಟರಲ್ಲಿ ಪೇಟೆಯ ಜನರ ಮಾತಿಗೆ ಹೊಸ ವಿಷಯವೊಂದು ಸಿಕ್ಕಿತ್ತು. ಲುಬ್ಲಿನ್‌ನಿಂದ ಕರೆತಂದಿದ್ದ ಒಬ್ಬ ಹೊಸಬನನ್ನು ತನ್ನ ಕೆಲಸಗಳಿಗೆ ಸಹಾಯಕನಾಗಿ ಇರಲೆಂದು ಮೋತಿ ತನ್ನ ಮನೆಯಲ್ಲಿ ಇರಿಸಿಕೊಂಡಿದ್ದ. ಇವನು ಈ ಸಹಾಯಕನಿಂದ ಮಾಡಿಸುತ್ತಿದ್ದುದು ಏನನ್ನು ? ಅಷ್ಟು ವರ್ಷಗಳವರೆಗೆ ತನ್ನ ವ್ಯಾಪಾರವನ್ನು ಚೆನ್ನಾಗಿಯೇ ನಡೆಸಿಕೊಂಡು ಬಂದಿದ್ದ. ಪೇಟೆ ಬೀದಿಯಲ್ಲಿ ಹೊಸದಾಗಿ ಬಂದವನು ನಡೆಯುತ್ತಾ ಹೊರಟರೆ ಎಲ್ಲರೂ ಇವನನ್ನೇ ನೋಡುತ್ತ ನಿಲ್ಲುತ್ತಿದ್ದರು ! ಎತ್ತರದ ಭಾರಿ ಆಳು, ಟಾರ್‌ನಷ್ಟು ಕಪ್ಪು, ಕಪ್ಪನೆಯ ಗಡ್ಡ, ಕಪ್ಪನೆಯ ಎರಡು ಕಣ್ಣುಗಳು. ಬೇರೆ ವ್ಯಾಪಾರಸ್ಥರು ಮೋತಿಯನ್ನು ಕೇಳಿದರು : 'ಇವನನ್ನು ಸಹಾಯಕ್ಕೆ ಇಟ್ಟುಕೊಂಡು ಏನೇನು ಮಾಡಿಸ್ತೀಯಾ ?' ಮೋತಿ ಇದಕ್ಕೆ ಹೇಳಿದ್ದು : 'ದೇವರ ದಯದಿಂದ ವ್ಯಾಪಾರ ದೊಡ್ಡದಾಗಿ ಬೆಳೆದಿದೆ. ಇದನ್ನೆಲ್ಲ ಭಾಳಕಾಲ ನಾನೊಬ್ಬನೇ ನಿಭಾಯಿಸೋಕೆ ಆಗೋಲ್ಲ'. ಒಳ್ಳೆಯದಾಯಿತು, ಏನು ಮಾಡಿಸಬೇಕು ಎನ್ನುವುದನ್ನು ಮೋತಿ ಯೋಚಿಸಿಕೊಂಡಿದ್ದಾನೆ ಎಂದು ತಿಳಿದರು ಈ ವ್ಯಾಪಾರಸ್ಥರು. ಆದರೆ ಸಣ್ಣ ಪೇಟೆಯೊಂದರಲ್ಲಿ ಎಲ್ಲರೂ ತಮ್ಮ ನೆರೆಮನೆಯ ಪಾತ್ರೆಯಲ್ಲಿ ಏನು ಬೇಯುತ್ತದೆ ಎಂದು ಹಣಿಕಿ ನೋಡುತ್ತಾರೆ. ಲುಬ್ಲಿನ್‌ನಿಂದ ಬಂದಿದ್ದ ಹೊಸಬ - ಇವನ ಹೆಸರು ಮೆಂದ್ಲ್ ಎಂದು - ವ್ಯಾಪಾರಿಯಂತೆ ಕಾಣುತ್ತಿರಲಿಲ್ಲ. ನಡೆಯುತ್ತಿರುವಾಗ ತನ್ನ ಕಪ್ಪುಗಣ್ಣುಗಳನ್ನು ಅತ್ತಿತ್ತ ಹೊರಳಿಸುತ್ತಾ ನೋಡುತ್ತಿದ್ದ. ಸಂತೆಯ ದಿನಗಳಲ್ಲಿ ಗಾಡಿಗಳ ಮುಂದೆ ಕಂಬದ ಹಾಗೆ ನಿಂತು ಒಣಹುಲ್ಲು ಮೇಯುತ್ತ ನಿಲ್ಲುವ ಪ್ರಾಣಿಗಳಂತೆ ನಿಂತುಕೊಂಡಿರುತ್ತಿದ್ದ.

ಇವನು ಸಿನಗಾಗ್‌ಗೆ ಪ್ರಾರ್ಥನೆಗೆಂದು ಬಂದಾಗ ಜನ ಕೇಳಿದರು : 'ಲುಬ್ಲಿನ್‌ನಲ್ಲಿ ನೀನು ಏನು ಮಾಡ್ತಿದ್ದೆ?' ಇವನು ಉತ್ತರಿಸಿದ್ದು : 'ನಾನೊಬ್ಬ ಮರ ಕಡಿಯೋನು', 'ನಿನಗೆ ಹೆಂಡತಿ ಇದಾಳಾ?' 'ಇಲ್ಲಾ' ಇವನು ಹೇಳಿದ. ಇವನು ಹೆಂಡತಿ ಸತ್ತ ವಿಧುರನಾಗಿದ್ದ. ಇಷ್ಟಿಗೆ ಬೀದಿಯ ಸೋಮಾರಿಗಳು ಹುಡುಗುಬುದ್ಧಿಯಲ್ಲಿ ಇದರ ಬಗ್ಗೆ ಗಾಳಿಸುದ್ದಿಯನ್ನು ಹಬ್ಬಿಸಿದರು. ಈ ವಿಷಯ ಹೊಸತರದ್ದೂ ಆಗಿತ್ತು. ಮೋತಿ ಎಷ್ಟು ಗಿಡ್ಡನೋ ಅವನು ಅಷ್ಟೇ ಎತ್ತರದವನು. ಈ ಇಬ್ಬರು ಯಾವಾಗಲಾದರೂ ಪರಸ್ಪರ ಮಾತಾಡಲು ನಿಂತರೆ ಹೊಸಬ ತನ್ನ ಸೊಂಟವನ್ನು ಬಗ್ಗಿಸಿರುತ್ತಿದ್ದ. ಮೋತಿ ಆಪಾದಮಸ್ತಕವನ್ನೂ ನೇರವಾಗಿ ಮೇಲಕ್ಕೆ ನೋಡುತ್ತಿರುತ್ತಿದ್ದ. ಇವರಿಬ್ಬರೂ

ಬೀದಿಯಲ್ಲಿ ಒಟ್ಟಿಗೆ ನಡೆಯುತ್ತಾ ಬಂದರೆ ಪ್ರತಿಯೊಬ್ಬರೂ ಕಿಟಕಿಯಲ್ಲಿ ನಿಂತು ಇವರನ್ನೇ ನೋಡುತ್ತಿದ್ದರು. ಎತ್ತರದವನು ತಲೆ ತಗ್ಗಿಸಿ ನಡೆಯುತ್ತಿದ್ದರೆ ಮೋತಿ ಇವನ ಹಿಂದೆ ಕುಪ್ಪಳಿಸುತ್ತಾ ಓಡುತ್ತಿದ್ದ. ಒಬ್ಬ ಮನುಷ್ಯ ತನ್ನ ಕೈಯನ್ನು ಮೇಲೆತ್ತಿದರೆ ಸೂರನ್ನೇ ಮುಟ್ಟುವಂತಿರುವ, ಬೈಬಲ್‌ನಲ್ಲಿರುವ ಕತೆಯೊಂದರಂತಿದೆ ; ಇಸ್ರೇಲಿಗಳು ಮಿಡತೆಗಳಂತೆ ಕಾಣುತ್ತ ಉಳಿದವರು ದೊಡ್ಡವರಾಗಿ ಕಾಣುತ್ತಿದ್ದರು ಎಂಬ ಕತೆಯಂತೆ. ಈ ಸಹಾಯಕ ಮೋತಿಯ ಮನೆಯಲ್ಲಿ ವಾಸವಾಗಿದ್ದ. ಮೋತಿಷ ಇವನಿಗೆ ಊಟವನ್ನು ಬಡಿಸುತ್ತಿದ್ದಳು. ಹೆಂಗಸರು ಇವಳನ್ನು ಕೇಳಿದ್ದರು : 'ಗೋಲ್ಯತ್‌ನಂಥ ಈ ಮನುಷ್ಯನನ್ನು ಮೋತಿ ಯಾಕೆ ಕರಕೊಂಡು ಬಂದು ಮನೇಲಿ ಇರಿಸಿಕೊಂಡಿದಾನೆ?' ಇವಳು ಹೇಳಿದ್ದು : 'ಯಾಕೋ ಏನೋ ನನಗಂತೂ ಏನೂ ಗೊತ್ತಿಲ್ಲ. ಚೆನ್ನಾಗಿ ಬೆಳೀತೀರೋ ಇವನ ವ್ಯಾಪಾರಕ್ಕೆ ಜೊತೆಗೆ ಏನಾದರೂ ಬೇಕೇನೋ. ಆದರೆ ಇವನಿಗೆ ಗೋಧಿ ಯಾವುದು, ರೇ ಯಾವುದು ಅಂತ ಹೇಳೋಕೆ ಬರೋಲ್ಲ. ಕುದುರೆ ಹಾಗೆ ತಿನ್ನಾನೆ, ಹೋರಿ ಹಾಗೆ ಗೊರಕೆ ಹೊಡೀತಾನೆ. ಇದು ಸಾಲದು ಅನ್ನೊ ಹಾಗೆ ಇವನು ದಿಕ್ಕಿಲ್ಲದವನು - ಬಂಗಾರದ ನಾಣ್ಯ ಇದ್ದೂ ಉಪಯೋಗಕ್ಕೆ ಬರೋದಿಲ್ಲವಲ್ಲ ಹಾಗೆ.'

ಮೋತಿಷಳಿಗೆ ಒಬ್ಬಳು ತಂಗಿಯಿದ್ದಳು. ತನ್ನ ಎದೆಯಲ್ಲಿ ಇದ್ದುದನ್ನೆಲ್ಲಾ ಇವಳ ಹತ್ತಿರ ಹೇಳಿಕೊಳ್ಳುತ್ತಿದ್ದಳು. ಮೋತಿ ತನ್ನ ಸಹಾಯಕ್ಕೆ ಒಬ್ಬನನ್ನು ಹೀಗೆ ಇರಿಸಿಕೊಳ್ಳುವುದು ಎಂದರೆ ತಲೆಯಲ್ಲಿ ರಂಧ್ರವೊಂದು ಬಿದ್ದಂತೆ ಎಂದು ಈ ತಂಗಿಯ ಬಳಿ ಹೇಳಿಕೊಂಡ ಮೋತಿಷ ಇದನ್ನೆಲ್ಲ ತನ್ನ ಗಂಡ ಬುದ್ಧಿಗೆ ತಿಳಿಯದಂತೆ ಮಾಡುತ್ತಿದ್ದಾನೆ ಎಂದಳು. ಈ ಹೊಸ ಮನುಷ್ಯ ಒಂದು ಕೆಲಸವನ್ನೂ ಮಾಡುತ್ತಿರಲಿಲ್ಲ. ಇವನು ತಿನ್ನೋಕೆ ಮನೆಗೆ ಬಂದಿದಾನೆ ಅಷ್ಟೆ, ಎನ್ನುವುದು ಇವಳ ಮಾತಿನ ಅಭಿಪ್ರಾಯವಾಗಿತ್ತು. ನಮ್ಮ ಪೇಟೆಯಲ್ಲಿ ಯಾವ ಗುಟ್ಟುಗಳೂ ಇರುತ್ತಿರಲಿಲ್ಲ. ನೆರೆಮನೆಯವರು ನಿಮ್ಮ ಮನೆಯ ಕಿಟಕಿ ಅಥವಾ ಬಾಗಿಲ ಬೀಗದ ಕಿಂಡಿಯಲ್ಲಿ ಕಿವಿ ಇರಿಸಿಕೊಂಡು ಕೇಳುತ್ತಿದ್ದರು. 'ಯಾಕೆ ಹೀಗೆ ದ್ವೇಷ ಸಾಧಿಸ್ತಿದಾನೆ?' ತಂಗಿ ಕೇಳಿದಳು. ಮೋತಿಷ ಅಳುವನ್ನು ಹೊರಹಾಕಿಕೊಳ್ಳುತ್ತಾ ಹೇಳಿದಳು : 'ಯಾಕೆ ಅದರೆ, ನಾನು ಒಂದು ಸಲ ಇವನನ್ನ ಆಗತಾನೆ ಹುಟ್ಟಿದ ಹಸುಗೂಸು ಅಂದಿದ್ದೆ'.

ಈ ಕತೆ ತಡವಿಲ್ಲದಂತೆ ಪೇಟೆಯ ತುಂಬ ಹರಡಿತು. ಆದರೆ ಜನರಿಗೆ ಇದನ್ನು ನಂಬಲು ಕಷ್ಟವಾಯಿತು. ಇದರಲ್ಲಿ ಎಂಥ ದ್ವೇಷವಿದೆ ? ಇಂಥ ತುರ್ಕಿ ತಂತ್ರದಿಂದ

ಇವನು ಯಾರ ಮೇಲೆ ಹಗೆ ಸಾಧಿಸುತ್ತಾನೆ ? ಇದೆಲ್ಲ ಅವನ ಸ್ವಂತದ ಹಣ, ಅವಳದ್ದಲ್ಲ. ಆದರೆ ಒಬ್ಬ ಮನುಷ್ಯನಿಗೆ ಯಾವಾಗ ಮೂರ್ಖ ಆಲೋಚನೆಗಳು ತುಂಬಿಕೊಳ್ಳುತ್ತವೆಯೋ ಆಗ ದೇವರೇ ಅನುಕಂಪ ತೋರಬೇಕು. ಇದು ಸತ್ಯ -ಈ ಹಿಂದೆ ನಾನು ಎಲ್ಲಿಯೋ ಈ ಅಂಶವನ್ನು ಕುರಿತು ಬರೆದಿರುವಂತೆ.

ಎರಡು ವಾರಗಳು ಉರುಳುವಷ್ಟರಲ್ಲಿ ಮೋತಿಷ ಅಳುತ್ತ ರಬಾಯಿಯವರ ಹತ್ತಿರ ಹೋಗಿದ್ದಳು.

'ರೆಬಯ್ಯ' ಅವಳು ಹೇಳಿದ್ದಳು, 'ನನ್ನ ಗಂಡ ತನ್ನ ಬುದ್ಧೀನೆ ಕಳಕೊಂಡಿದಾನೆ. ನಮ್ಮ ಮನೆಗೆ ಒಬ್ಬ ಹೊಟ್ಟೆಬಾಕನ್ನ ಕರಕೊಂಡು ಬಂದಿದಾನೆ. ಇಷ್ಟು ಸಾಲದು ಅಂತ ಅವನಿಗೆ ತನ್ನ ದುಡ್ಡನ್ನೇ ಕೊಡೋಕೆ ಹೊರಟಿದಾನೆ.' ಹೊಸಬನಾಗಿರುವ ಇವನ ಬಳಿಯೇ ಹಣದ ಪೆಟ್ಟಿಗೆಯೂ ಇದೆ ಎಂದೂ ಹೇಳಿದಳು. ತನಗೆ ಏನು ಬೇಕಾದರೂ ಕೇಳಲು ಇವನ ಹತ್ತಿರಕ್ಕೆ ಹೋಗಬೇಕಿದೆ ಎಂಬುದನ್ನೂ ತಿಳಿಸಿದಳು. 'ದೊಡ್ಡ ರೆಬಯ್ಯ' ಮೋತಿಷ ಅಳುತ್ತ ಹೇಳಿದಳು, 'ಮೋತಿ ಇದನ್ನೆಲ್ಲ ನನ್ನ ಮೇಲೆ ದ್ವೇಷ ತೀರಿಸಿಕೊಳ್ಳೋಕೆ ಮಾಡತಿದಾನೆ. ಯಾಕೆ ಗೊತ್ತಾ ? ನಾನು ಒಂದು ಸಲ ಇವನನ್ನ ಗೊಂಬೆ ಅಂದಿದ್ದೆ.' ರಬಾಯಿಗಳು ಏನು ಮಾಡಬೇಕು ಎಂದು ತಿಳಿಯದವರ ಹಾಗೆ ಸುಮ್ಮನಿದ್ದರು. ಇವರು ಒಂದು ಥರದ ದೇವರಂಥವರು. ಆದರೆ ಇನ್ನೊಬ್ಬರ ಮಾತಿನ ವಿಷಯಗಳಿಗೆ ಬಾಯಿ ಹಾಕುವಂಥವರಲ್ಲ. ಮೌನವಾಗಿದ್ದು ಕೊನೆಯಲ್ಲಿ ಹೇಳಿದರು. 'ನಿನ್ನ ಗಂಡನ ವ್ಯವಹಾರಗಳಿಗೆ ನಾನು ತಲೆ ಹಾಕೋಲ್ಲ.' 'ಆದರೆ ರೆಬ್ಬಯ್ಯ' ಮೋತಿಷ ಅತ್ತಳು, 'ಇದು ನಮ್ಮನ್ನ ಪೂರ್ತಿ ಹಾಳು ಮಾಡುತ್ತೆ.'

ರಬಾಯಿಯವರು ಮೋತಿಯನ್ನು ಕರೆಸಿದರು. ಮೋತಿ ಜೋರಾಗಿ ಹೇಳಿದ : 'ನಾನು ಇವಳಿಗೆ ಬೇಕಿರೋದಕ್ಕಿಂತ ಜಾಸ್ತಿ ದವಸ ಕೊಡ್ತಿದೀನಿ. ನನ್ನ ಸಹಾಯಕ್ಕೆ ಅಂತ ಒಬ್ಬನ್ನ ತಂದು ಇರಿಸಿಕೊಂಡಿದೀನಿ' ರಬಾಯಿಯವರು ಕೊನೆಗೆ 'ಇಬ್ಬರೂ ಹೊಂದಿ ಕೊಂಡು ಹೋಗಿ' ಎಂದು ಕಳಿಸಿದರು. ಇವರು ಇನ್ನೇನನ್ನು ಹೇಳಬಹುದಿತ್ತು ?

ಆಮೇಲೆ ಗಿಡ್ಡಮೋತಿ ಅಚಾನಕವಾಗಿ ಕಾಯಿಲೆ ಬಿದ್ದ. ಇದು ಎಂಥ ಕಾಯಿಲೆ ಎನ್ನುವುದು ಯಾರಿಗೂ ತಿಳಿಯಲಿಲ್ಲ. ಮೈ ಬಣ್ಣವೇ ಬದಲಾಗಿತ್ತು. ಮೊದಲೇ ಗಿಡ್ಡವಾಗಿದ್ದವನು ಮತ್ತಷ್ಟು ಕುಗ್ಗಿಕೊಂಡಿದ್ದ. ಪ್ರಾರ್ಥನೆಗೆಂದು ಸಿನಗಾಗ್‌ಗೆ ಬಂದರೆ

ಒಂದು ನೆರಳಿನಂತೆ ಮೂಲೆಯಲ್ಲಿ ನಿಲ್ಲುತ್ತಿದ್ದ. ಸಂತೆಯ ದಿನ ಗಾಡಿಯಿಲ್ಲದೆ ಹೊರಗೆ ಬರುತ್ತಿರಲಿಲ್ಲ. 'ನಿನಗೇನಾಗಿದೆ?' ಎಂದು ಕೇಳಿದ್ದಳು ಮೋತಿಷ. ಇವನು ಮಾತ್ರ 'ಏನಿಲ್ಲ, ಏನೂ ಆಗಿಲ್ಲ' ಎಂದಿದ್ದ. ಮೋತಿಷ ನಾಟಿವೈದ್ಯನನ್ನು ಕರೆಸಿದಳು. ಆದರೆ ಆ ವೈದ್ಯನಿಗೆ ತಿಳಿಯುವಂಥಹುದು ಏನಿತ್ತು ? ಗಿಡಮೂಲಿಕೆಗಳ ಒಂದಿಷ್ಟು ಔಷಧಿಗಳನ್ನು ಕೊಟ್ಟಿದ್ದ. ಆದರೆ ಇದು ಉಪಯೋಗವಾಗಲಿಲ್ಲ. ನಡುಹಗಲಿನಲ್ಲಿಯೂ ಮೋತಿ ಹಾಸಿಗೆಯಲ್ಲಿ ಮಲಗಿರುತ್ತಿದ್ದ. ಮೋತಿಷ ಕೇಳಿದ್ದಳು : 'ನಿನ್ನನ್ನ ಏನು ಬಾಧಿಸ್ತಿದೆ? ಇವನು ಉತ್ತರಿಸಿದ್ದು : 'ಏನೂ ಬಾಧಿಸ್ತಿಲ್ಲ'. 'ಹಾಗಿದ್ದರೆ ರೋಗ ಬಂದವನ ಹಾಗೆ ಹಾಸಿಗೇಲಿ ಯಾಕೆ ಮಲಗಿರ್‍ತೀಯ?' ಇವನು ಹೇಳಿದ್ದು : 'ನನಗೆ ಶಕ್ತೀನೇ ಇಲ್ಲ'. 'ನಿನಗೆ ಶಕ್ತಿ ಹೇಗೆ ಬರುತ್ತೆ, ನೀನು ಹಕ್ಕಿಯಂಗೆ ತಿಂದರೆ ?' ಈ ಮಾತಿಗೆ ಇವನು ಹೇಳುತ್ತಿದ್ದುದು ಇಷ್ಟೇ : 'ನನಗೆ ಹಸಿವೇನೇ ಇಲ್ಲ.'

ನಾನು ಏನು ಹೇಳಲಿ ನಿಮಗೆ ? ಮೋತಿ ಕೆಟ್ಟದಾರಿ ಹಿಡಿದಿರುವುದನ್ನು ಎಲ್ಲರೂ ನೋಡುತ್ತಿದ್ದರು. ಇವನು ಬೆಳಕಿನಿಂದ ಹೊರಗೆ ಹೋಗುತ್ತಿದ್ದ. ಲುಬ್ಲಿನ್‌ನಲ್ಲಿ ಡಾಕ್ಟರ್ ಬಳಿಗೆ ಹೋಗಿ ತೋರಿಸಿಕೊಂಡು ಬರಲು ಒತ್ತಾಯಿಸಿದರು. ಆದರೆ ಇವನು ತಿರಸ್ಕರಿಸಿದ. ಮೋತಿಷ ಗೋಳಾಡಿ ಅತ್ತಳು : 'ನನ್ನನ್ನ ಏನು ಮಾಡಬೇಕು ಅಂತಿದೀಯಾ? ನನ್ನನ್ನ ಯಾರ ಜೊತೆ ಬಿಡ್ತೀಯ?' ಇದಕ್ಕೆ ಮೋತಿಷ ಉತ್ತರಿಸಿದ : 'ನೀನು ಎತ್ತರವಾಗಿರೋನನ್ನ ಮದುವೆಯಾಗತೀಯ?' 'ಪಾಪಿ ! ಕೊಲೆಗಾರ!' ಮೋತಿಷ ಕಿರಚಿ ಅತ್ತಳು, 'ನೀನು ನನಗೆ ಎಲ್ಲ ಎತ್ತರದೋರಿಗಿಂತ ಇಷ್ಟವಾದವನು. ನನಗೆ ಯಾಕೆ ಇಂಥ ಚಿತ್ರಹಿಂಸೆ ಕೊಡತಿದೀಯ ? ಯಾವಾಗಲೋ ಒಂದು ಸಲ ಅಂದ ಒಂದೆರಡು ಮಾತುಗಳನ್ನ ಇನ್ನೂ ಮನಸ್ಸಿನೊಳಗೆ ಇಟ್ಟುಕೊಂಡಿದೀಯಲ್ಲ ? ನಾನು ಬುದ್ಧಿ ಕಳಕೊಂಡಾಗ ಅಂದಿರೋ ಮಾತುಗಳು ಇವು. ನೀನು ನನ್ನ ಗಂಡ, ನನ್ನ ಮಗ, ಈ ಪ್ರಪಂಚದೊಳಗೆ ನೀನು ಇಲ್ಲದ ನನ್ನ ಬದುಕು ಮಣ್ಣಿನ ಧೂಳಿಗಿಂತಲೂ ಕಡೆ....' ಇಷ್ಟೆಲ್ಲ ಕೇಳಿದರೂ ಮೋತಿ ಹೇಳಿದ್ದು, 'ನಾನು ಬಿದ್ದು ಹೋಗೋ ಮರ. ಅವನ ಜೊತೇಲಿ ನೀನು ಮಕ್ಕಳನ್ನೂ ಪಡೀತೀಯ.'

ಆಮೇಲೆ ನಡೆದ ಎಲ್ಲವನ್ನೂ ಪೂರ್ತಿಯಾಗಿ ಹೇಳಲು ಹೊರಟರೆ ನಾನು ರಾತ್ರಿ ಕಳೆದು ಬೆಳಗಾಗುವವರೆಗೂ ಇಲ್ಲಿಯೇ ತಂಗಬೇಕಾಗುತ್ತದೆ. ಪೇಟೆಯ ಎಲ್ಲ ಹಿರಿಯರೂ ಮೋತಿಯೊಡನೆ ಮಾತಾಡಲು ಹೋಗಿದ್ದರು. ರಬಾಯಿಯವರೂ ಸಾವಿನ

ಹಾಸಿಗೆಯಲ್ಲಿ ಇದ್ದವನನ್ನು ಭೇಟಿಯಾದರು. 'ಏನಿದು, ಎಂಥ ಕೆಟ್ಟ ವಿಷಯವನ್ನ ನಿನ್ನ ತಲೆಯೊಳಗೆ ಇಟ್ಟುಕೊಂಡಿದೀಯ. ಇದು ದೇವರ ಪ್ರಪಂಚ, ಮನುಷ್ಯರದಲ್ಲ' ಎಂದರು. ಆದರೆ ಮೋತಿ ಏನೂ ತಿಳಿಯುತ್ತಿಲ್ಲ ಎಂಬಂತೆ ನಟಿಸಿದ್ದ. ಇದನ್ನೆಲ್ಲ ನೋಡಿದ ಮೋತಿಷ ಎಲ್ಲವೂ ಕೆಟ್ಟದಾರಿಯತ್ತ ಹೊರಳುತ್ತಿರುವುದನ್ನು ಕಂಡು ಹೊಸಬನೊಡನೆ ಜಗಳಕ್ಕೆ ಇಳಿದು ಮನೆ ಬಿಟ್ಟು ಹೋಗಲು ಹೇಳಿದಳು, ಆಜ್ಞೆ ಮಾಡುತ್ತಿರುವಂತೆ. ಆದರೆ ಮೋತಿ ಹೇಳಿದ : 'ಇಲ್ಲ, ಅವನು ಇಲ್ಲೇ ಇರ್ತಾನೆ. ನನ್ನ ಉಸಿರು ಎಲ್ಲಿತನಕ ಇರುತ್ತೋ ಅಲ್ಲಿವರೆಗೂ ನಾನೇ ಇಲ್ಲಿಗೆ ಯಜಮಾನ.'

ಇಷ್ಟೆಲ್ಲವೂ ನಡೆದ ನಂತರ ಆ ಹೊಸಬ ಮಲಗಲು ಒಳಗಡೆ ಹೋದ. ಮಾರನೆ ದಿನ ಬೆಳಿಗ್ಗೆ ವ್ಯಾಪಾರದ ಪೂರ್ಣವಾದ ಅಧಿಕಾರವನ್ನು ತನ್ನದಾಗಿಸಿಕೊಂಡಿದ್ದ. ಎಲ್ಲವೂ ಇವನ ಕೈಯಲ್ಲಿಯೇ ಇತ್ತು. ಹಣ, ಬೀಗದ ಕೀಲಿಗಳು, ಬೇಡವೆಂದು ಬಿಸಾಡುವ ವಸ್ತುಗಳೂ ಕೂಡ ಇವನ ಅಧೀನದಲ್ಲಿ ಇದ್ದವು. ಮೋತಿ ಯಾವ ಕಾಲಕ್ಕೂ ಏನನ್ನೂ ಬರೆದಿಟ್ಟವನಲ್ಲ. ಆದರೆ ಈ ಹೊಸಬ ಎಲ್ಲವನ್ನೂ ದಪ್ಪದ ಲೆಕ್ಕದ ಪುಸ್ತಕದಲ್ಲಿ ಬರೆಯಲು ಆರಂಭಿಸಿದ್ದ. ಆಮೇಲೆ ಇವನು ಜಿಪುಣನೆಂದೂ ತಿಳಿದಿತ್ತು. ಮೋತಿಷ ಮನೆ ಖರ್ಚಿಗೆಂದು ಹಣಕ್ಕಾಗಿ ಒತ್ತಾಯಿಸುತ್ತಿದ್ದಳು. ಆದರೆ ಇವನು ಪ್ರತಿಯೊಂದು ಕೊಪೆಕ್ಕನ್ನೂ ಲೆಕ್ಕವಾಗಿಡುತ್ತಿದ್ದ. ಪ್ರತಿ ತುಣುಕುಗಳನ್ನೂ ತೂಕ ಮಾಡುತ್ತಿದ್ದ. ಮೋತಿಷ ಕಿರಿಚಾಡುತ್ತಿದ್ದಳು : 'ನೀನು ಹೊಸಬ. ಇದೆಲ್ಲ ನಿನ್ನ ವ್ಯವಹಾರವಲ್ಲ. ನಿನ್ನ ಕರೆದೆವ್ವಗಳ ಹತ್ತಿರಕ್ಕೆ ವಾಪಸ್ಸು ಹೋಗು. ನೀನೊಬ್ಬ ದರೋಡೆಕಾರ, ಕೊಲೆಗಾರ. ದೊಡ್ಡ ಠೊಣಪ, ಮರಗಡುಕ. ಈ ಮಾತುಗಳಿಗೆಲ್ಲ ಹೊಸಬನ ಉತ್ತರವೆಂದರೆ : 'ನಿನ್ನ ಗಂಡ ನನ್ನನ್ನ ಕೆಲಸದಿಂದ ತೆಗೆದುಹಾಕಿದರೆ ನಾನು ವಾಪಸ್ಸು ಹೋಗತೀನಿ'. ಆದರೆ ಹೆಚ್ಚಿನ ವೇಳೆಯಲ್ಲಿ ಇವನು ಏನನ್ನೂ ಹೇಳುತ್ತಿರಲಿಲ್ಲ. ಹಂದಿಯಂತೆ ದುರುಗುಟ್ಟಿ ನೋಡುತ್ತಿದ್ದ.

ಬೇಸಿಗೆಯ ದಿನಗಳು ಬಂದವು. ಹವೆ ಸ್ವಲ್ಪ ಕಾವುಗೊಂಡಾಗ ಮೋತಿ ಮಲಗಿದಲ್ಲಿಂದ ಎದ್ದು ತನ್ನ ಕಾಲಿನ ಮೇಲೆ ಒಂದಷ್ಟು ಹೊತ್ತು ನಿಲ್ಲುವಂತಾದ. ಯೋಮ್‌ಕಿಪ್ಪುರ್ ವೇಳೆಗೆ ಚೆನ್ನಾಗಿಯೇ ಸುಧಾರಿಸಿದ. ಆದರೆ ಆಮೇಲೆ ಬಂದ ಸುಕ್ಕೋತ್ ವೇಳೆಗೆ ಮತ್ತೆ ನಿತ್ರಾಣನಾದ. ಹಾಸಿಗೆಯಲ್ಲಿ ಮಲಗಿದವನು ಮೇಲೆ ಏಳದಂತಾದ. ಜಮೋಕ್‌ನಿಂದ ಮೋತಿಷ ಡಾಕ್ಟರ್‌ರನ್ನು ಕರೆಸಿದ್ದಳು. ಆದರೆ ಡಾಕ್ಟರ್

ಯಾವ ಔಷಧೋಪಚಾರವನ್ನೂ ನೀಡಲಿಲ್ಲ. ಮಂತ್ರವಾದಿಯ ಬಳಿಗೂ ಹೋಗಿದ್ದ ಮೋತಿಷ ಸ್ಮಶಾನದ ಸಮಾಧಿಗಳನ್ನು ಅಳೆಸಿ, ಉದ್ದದ ಮೇಣದಬತ್ತಿಗಳನ್ನೂ ಮಾಡಿಸಿ ಸಿನಗಾಗ್‌ನಲ್ಲಿ ಉರಿಸಲು ಕೊಟ್ಟಳು. ದೊಡ್ಡ ದೊಡ್ಡ ರಬಾಯಿಗಳ ಹತ್ತಿರಕ್ಕೂ ಹೇಳಿಕಳಿಸಿದಳು. ಆದರೂ ಮೋತಿ ದಿನದಿಂದ ದಿನಕ್ಕೆ ಕೃಶವಾಗುತ್ತ ಹೋದ. ಹಿಂದಕ್ಕೆ ಒರಗಿ ಸೂರನ್ನೇ ದಿಟ್ಟಿಸುತ್ತಿದ್ದ. ಬೆಳಗಿನ ಹೊತ್ತಿನಲ್ಲಿ ಪ್ರಾರ್ಥನೆ ಮಾಡಲು ಇವನ ಶಾಲನ್ನು ಹೊದಿಸಲು, ಚರ್ಮದ ಪೆಟ್ಟಿಗೆಯಿಂದ ತಾಲಮೂದ್ ಗ್ರಂಥವನ್ನು ತೆಗೆದುಕೊಡಲು ಯಾರಾದರೂ ನೆರವಿಗೆ ಇರಬೇಕಾಗಿತ್ತು. ಇದನ್ನೆಲ್ಲಾ ತಾನೇ ಮಾಡಿ ಕೊಳ್ಳದಂತೆ ಆಗಿದ್ದ. ಒಂದು ಚಮಚ ಮಾಂಸದ ಗಂಜಿಯನ್ನು ಮಾತ್ರ ಸೇವಿಸುತ್ತಿದ್ದ. ಸಬ್ಬತ್‌ನ ಪ್ರಾರ್ಥನೆಗಳು ಮುಗಿದ ನಂತರ ವೈನ್ ಬೇಕೆಂದೂ ಕೇಳುತ್ತಿರಲಿಲ್ಲ. ಸಿನಗಾಗ್‌ನಿಂದ ಬರುವಾಗ ಎತ್ತರದ ಹೊಸ ಆಳು ಇವನ ಮುಂದೆ ದೇವತೆಗಳ ಆಶೀರ್ವಚನಗಳನ್ನು ಪಠಿಸುತ್ತಿದ್ದ.

ಇದೆಲ್ಲಾ ಎಲ್ಲಿಗೆ ಹೋಗಿ ಮುಟ್ಟುವಂತಿದೆ ಎನ್ನುವುದನ್ನು ಕಂಡುಕೊಂಡ ಮೋತಿಷ ಮೂವರು ಯಹೂದಿಗಳನ್ನು ಕರೆತಂದು ಬೈಬಲನ್ನು ತೆಗೆದು ಮುಂದಿರಿಸಿ ಕೊಂಡಳು. ತನ್ನ ಕೈಗಳನ್ನು ತೊಳೆದುಕೊಂಡು ಧರ್ಮಗ್ರಂಥದ ಮೇಲೆ ತನ್ನ ಕೈಯನ್ನು ಇರಿಸಿ ಹೇಳಿದ್ದಳು : 'ನೀವೇ ನನಗೆ ಸಾಕ್ಷಿ, ನಾನೀಗ ದೇವರ ಸಮಾನವಾಗಿರೋ ಈ ಪುಸ್ತಕದ ಮೇಲೆ ಕೈ ಇಟ್ಟುಕೊಂಡು ಆಣೆ ಮಾಡತಿದೀನಿ. ನಾನು ತೊಂಬತ್ತು ವರ್ಷದ ತನಕ ವಿಧವೆಯಾಗಿ ಇದ್ದರೂ ಈ ಹೊಸಬನನ್ನ ಮಾತ್ರ ಮದುವೆಯಾಗೋಲ್ಲ !' ನಂತರ ಎತ್ತರದ ಆಳಿನತ್ತ ಹೊರಳಿ ಇವನ ಬಲಗಣ್ಣಿನ ಹುಬ್ಬಿಗೆ ತಿವಿದಳು. ಹೊಸಬ ತನ್ನ ಕರ್ಚೀಫ್ ಮುಚ್ಚಿಕೊಂಡು ಹೊರಗೆ ಹೋಗಿದ್ದ. ಇದಾದ ನಂತರ ಮೋತಿ ಹೇಳಿದ : 'ಇದೇನು ದೊಡ್ಡದಲ್ಲ ಬಿಡು, ನಿನ್ನ ಆಣೆಯನ್ನ ನೀನೆ ಮುರಕೊಳ್ಳತೀಯ...'

ಒಂದು ವಾರ ಕಳೆಯುವಷ್ಟರಲ್ಲಿ ಮೋತಿ ಸಾವಿನಂಚಿನಲ್ಲಿ ಇದ್ದ. ಇದು ಹೆಚ್ಚು ಸಮಯವನ್ನೇನೂ ತೆಗೆದುಕೊಂಡಿರಲಿಲ್ಲ. ಕೊನೆಯಲ್ಲಿ ಮೋತಿ ಉಳಿಯ ಲಿಲ್ಲ. ನೆಲದ ಮೇಲೆ ಮಲಗಿಸಿದ್ದ ಇವನ ತಲೆಯ ಬಳಿ ಮೇಣದಬತ್ತಿಗಳು ಉರಿಯುತ್ತಿದ್ದವು. ಕಾಲು ಬಾಗಿಲ ಕಡೆಗೆ ಚಾಚಿಕೊಂಡಿದ್ದವು. ಮೋತಿಷ ತನ್ನ ಕೆನ್ನೆಗಳನ್ನು ಬಡಿದುಕೊಳ್ಳುತ್ತ ಅಳುತ್ತಿದ್ದಳು : 'ಕೊಲೆಗಾರ ! ನಿನ್ನ ಬದುಕನ್ನ ನೀನೇ ಕೊಂದುಕೊಂಡೆ ! ನಿನ್ನನ್ನ ಯಹೂದಿಗಳ ಸಮಾಧಿಗಳೊಳಗೆ ಸಮಾಧಿ ಮಾಡೋ

ಹಾಗಿಲ್ಲ ! ಸ್ಮಶಾನದ ಬೇಲಿ ಹೊರಗೆ ಹೂಳಬೇಕು !' ಇವಳ ಬುದ್ಧಿ ಸ್ಥಿಮಿತದಲ್ಲೇ ಇರಲಿಲ್ಲ.....

ಎತ್ತರದ ಹೊಸ ಆಳು ಹೊರಗಡೆ ಕುಳಿತು ಎಲ್ಲಿಯೋ ನೋಡುತ್ತಿದ್ದ. ಸ್ಮಶಾನ ಸಮಿತಿಯವರು ಬಂದು ಶವಸಂಸ್ಕಾರದ ಖರ್ಚುಗಳಿಗೆ ಹಣ ಕೇಳಿದರು. ಆದರೆ ಮೋತಿಷಳ ಹತ್ತಿರ ಒಂದು ಕೊಪೆಕ್ ಕೂಡ ಇರಲಿಲ್ಲ. ತನ್ನ ಒಡವೆಯನ್ನೇ ಒತ್ತೆಯಿರಿಸಿದಳು. ಮೋತಿಯನ್ನು ಸಂಸ್ಕಾರಕ್ಕೆ ತೆಗೆದುಕೊಂಡು ಹೋದವನು ಆನಂತರ ಹೇಳಿದ್ದು ಅವನು ಹಕ್ಕಿಯಂತೆ ಹಗುರವಾಗಿದ್ದ ಎಂದು. ಅವರು ಹೆಣ ಒಯ್ಯುವುದನ್ನು ನಾನೂ ನೋಡಿದ್ದೆ. ಮಕ್ಕಳನ್ನು ಬಟ್ಟೆಯಲ್ಲಿ ಸುತ್ತಿಕೊಂಡು ಹೋದಂತೆ ಕಂಡಿತ್ತು. ಬಟ್ಟೆಯಲ್ಲಿ ಅವನು ಚೆಲ್ಲಿಕೊಂಡಿದ್ದ ರಸದ ಗುರುತುಗಳೂ ಇದ್ದವು. ಅಳತೆ ತೆಗೆದುಕೊಂಡು ಹೋಗಲು ಬರುವವರಿಗೆ ಮೋತಿ ಮೊದಲೇ ಹೇಳಿಕಳಿಸಿದ್ದನಂತೆ. ಗುಂಡಿಯನ್ನು ತೆಗೆದು ಶವಪೆಟ್ಟಿಗೆಯನ್ನು ಇರಿಸಿ ಸಮಾಧಿ ಮಾಡಿದರು. ಆನಂತರ ಈ ಹೊಸಬ, ಭಾರಿ ಆಸಾಮಿ ಎದ್ದು ನಿಂತಿದ್ದ. ಭೂಮಿಯೊಳಗಿಂದ ಎದ್ದವನಂತೆ. ನಿಂತ ಮೇಲೆ ಕಡ್ಡಿಶ್ ಹೇಳಲು ಆರಂಭಿಸಿದ. ಇವನನ್ನು ಕಂಡ ವಿಧವೆ ಮೋತಿಷ ಕಿರುಚಿದ್ದಳು : 'ನೀನು ಯಮದೂತ. ನನ್ನ ಗಂಡ ಈ ಜಗತ್ತಿನಿಂದ ದೂರವಾಗಿದ್ದು ನಿನ್ನಿಂದಲೇ !' ಇವನ ಎದುರಿಗೆ ನಿಂತ ಇವಳು ತನ್ನ ಎದೆಗೆ ಗುದ್ದಿಕೊಳ್ಳತೊಡಗಿದ್ದಳು. ಜನರು ಹಿಡಿದುಕೊಂಡು ಸಮಾಧಾನಪಡಿಸಿದ್ದರು.

ಆಗ ಹಗಲು ಚಿಕ್ಕದು. ಸಂಜೆಯಾದೊಡನೆ ಮೋತಿಷ ಒಂದು ಸಣ್ಣ ಸ್ಟೂಲನ್ನು ಇರಿಸಿಕೊಂಡು ಏಳು ದಿನದ ದುಃಖಕ್ಕೆ ಕುಳಿತಿದ್ದಳು. ಈ ಹೊಸಬ ಹೊರಕ್ಕೂ ಒಳಕ್ಕೂ ಓಡಾಡುತ್ತ ಆ ಸಾಮಾನು, ಈ ಸಾಮಾನು ಎಂದು ಹಲವಾರು ಸಾಮಗ್ರಿಗಳನ್ನು ಹೊರಕ್ಕೆ ತೆಗೆದಿಡುತ್ತಿದ್ದ. ಒಬ್ಬ ಹುಡುಗನನ್ನು ಕರೆದು ಅವನ ಕೈಯಲ್ಲಿ ವಿಧವೆಯ ಖರ್ಚಿಗೆ ಎಂದು ಒಂದಿಷ್ಟು ಹಣವನ್ನು ಕೊಟ್ಟು ಕಳಿಸಿದ. ಆಮೇಲೆ ಇದು ದಿನದಿನವೂ ಸಾಗತೊಡಗಿತು. ರಬಾಯಿಯವರು ಈ ಮನುಷ್ಯನನ್ನು ಕರೆಸಿದರು. ಇದೆಲ್ಲಾ ಏನು ? ಎಂದು ವಿಚಾರಿಸಿ, 'ಆ ಮನೆಯನ್ನ ನಿನ್ನ ಹಿಡಿತಕ್ಕೆ ಯಾಕೆ ತಗೊಳ್ಳುತಿದೀಯಾ?' ಎಂದು ಕೇಳಿದರು. ಈ ಎತ್ತರದವನು ಮೊದಲು ಮೌನವಾಗಿದ್ದ. ಇಂಥ ಸಮಯ ಬಂದರೆ ಏನು ಹೇಳಬೇಕು ಎಂಬುದನ್ನು ಮೊದಲೇ ಯೋಚಿಸಿದಂತಿರಲಿಲ್ಲ. ಹೀಗಾಗಿ ತನ್ನ ಎದೆ ಮೇಲಿನ ಜೇಬಿನಿಂದ ಒಂದು ಕಾಗದವನ್ನು

ಹೊರಗೆ ತೆಗೆದು ಅವರಿಗೆಲ್ಲ ತೋರಿಸಿದ. ಮೋತಿ ತನ್ನೆಲ್ಲಾ ಆಸ್ತಿಪಾಸ್ತಿಗಳಿಗೆ ಇವನನ್ನು ವಾರಸುದಾರನನ್ನಾಗಿಸಿದ್ದ. ತನ್ನ ಹೆಂಡತಿಗೆ ಎಂದು ಅವನು ಕೆಲವೊಂದು ಸಣ್ಣಪುಟ್ಟ ವಸ್ತುಗಳನ್ನು ಮಾತ್ರ ಬಿಟ್ಟಿದ್ದ. ಈ ಉಯಿಲನ್ನು ನೋಡಿ ಪೇಟೆಯ ಜನರೆಲ್ಲ ಗಾಬರಿಯಲ್ಲಿ ಮುಳುಗಿದರು. 'ಇದನ್ನೆಲ್ಲಾ ಮೋತಿ ಯಾವಾಗ, ಹೇಗೆ ಮಾಡಿದ?' ರಬಾಯಿಯವರು ಕೇಳಿದರು. ಉತ್ತರ ತಿಳಿಯುವುದು ತುಂಬ ಸರಳವಾಗಿತ್ತು. ಮೋತಿ ಲುಬ್ಲಿನ್‌ಗೆ ಹೋಗಿದ್ದಾಗ, ಈ ಎತ್ತರದ ಆಳನ್ನು ಹುಡುಕಿ ಅವನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಿಕೊಂಡಿದ್ದಾನೆ. ಇದಕ್ಕಿಂತಲೂ ಮೊದಲು ಇವನು ಮರ ಕಡಿಯುವರ ಮೇಸ್ತ್ರಿಯಾಗಿದ್ದ.

ರಬಾಯಿಯವರು ಈ ಎತ್ತರದ ಮನುಷ್ಯನಿಗೆ ಸೂಚನೆ ನೀಡಿದರು : 'ವಿಧವೆ ಆಣೆ ಇಟ್ಟಿದ್ದಳು. ಆದ್ದರಿಂದ ನೀನು ಆ ಮನೆಗೆ ಮಾತ್ರ ಹೋಗಬಾರದು'. ಆಗ ಈ ಮನುಷ್ಯ ಹೇಳಿದ : 'ಸಮಾಧಿಯೊಳಗಿನ ವಸ್ತುಗಳನ್ನು ನೀವು ಹೊರಗೆ ತಗೊಂಡು ಬರೋಕೆ ಆಗೋಲ್ಲ'. ಅವನು ಹೇಳಿದ ಮಾತು ಹೀಗೆಯೇ ಇದ್ದವು. ಪೇಟೆಯ ಹಿರಿಯರು ಇವನ ಮಾತುಗಳನ್ನು ಪ್ರತಿಭಟಿಸಿದರು. ಮೂರು ಪತ್ರಗಳನ್ನು ಕೊಟ್ಟು, ಒಂದು ಏಟನ್ನೂ ಹೊಡೆದು ಧರ್ಮದಿಂದ ಹೊರಗೆ ಹಾಕುವ ಬೆದರಿಕೆಯನ್ನೂ ತೋರಿಸಿದರು. ಆದರೆ ಈ ಎತ್ತರದವನು ಸುಲಭಕ್ಕೆ ಹೆದರುವವನಾಗಿರಲಿಲ್ಲ. ಓಕ್ ಮರದಂತೆ ಎತ್ತರವಾಗಿದ್ದ. ಮಾತಾಡಿದರೆ ಇವನ ದನಿ ಗವಿಯೊಳಗಿನಿಂದ ಬರುತ್ತಿದೆ ಎನ್ನುವಂತೆ ಇರುತ್ತಿತ್ತು. ಇಂಥ ಸಮಯದಲ್ಲೇ ಮೋತಿಷ ತನ್ನ ಆಣೆಯನ್ನೂ ಇಡುತ್ತಿದ್ದಳು. ಪ್ರತಿಸಲವೂ ಯಾರಾದರೊಬ್ಬರು ಇವಳನ್ನು ಸಮಾಧಾನಪಡಿಸಿ ಮನೆಯ ಒಳಕ್ಕೆ ಕರೆದೊಯ್ಯುತ್ತಿದ್ದರು. ಇವಳು ತನ್ನ ಆಣೆಯ ಶಪಥವನ್ನು ಮೇಣದಬತ್ತಿಗಳು, ಧರ್ಮಗ್ರಂಥಗಳ ಎದುರಿನಲ್ಲಿ ಮುಂದುವರಿಸುತ್ತಿದ್ದಳು. ಇದನ್ನು ಬಿಟ್ಟರೆ ಬೇರೆ ಏನನ್ನೂ ಯೋಚಿಸುತ್ತಿರಲಿಲ್ಲ. ಸಬ್ಬತ್ ದಿನ ಕೆಲವು ಜನ ಪ್ರಾರ್ಥನೆ ಮಾಡಲು ಇವಳ ಮನೆಗೆ ಹೋಗುತ್ತಿದ್ದರು. ಮೋತಿಷ ದೇವರ ವಾಕ್ಯಗಳಿದ್ದ ಬಟ್ಟೆಯ ಮೇಲೆ ಉರುಳಿ ಬೀಳುತ್ತಿದ್ದಳು. ಮೋತಿ ಬಯಸಿದ್ದು ನೇರವೇರದಂತಿರಲಿ ಎಂದು ಪ್ರಾರ್ಥಿಸುತ್ತಿದ್ದಳು. ಮೋತಿಯ ಹಾದಿಗೆ ಇವಳು ಹೋಗದಂತಿದ್ದಳು.

ತನ್ನೊಂದಿಗೆ ಉಳಿದವರೂ ಅಳುವಂತೆ ಮಾಡುತ್ತಿದ್ದಳು.

ಒಳ್ಳೆಯದಾಯಿತು ನೋಡಿ, ಮೋತಿಷ ಆ ಎತ್ತರದವನನ್ನು ಮದುವೆಯಾದಳು.

ಇದು ಎಷ್ಟು ದಿನಗಳಲ್ಲಿ ನಡೆಯಿತು ಎನ್ನುವುದು ನನಗೆ ಸರಿಯಾಗಿ ನೆನಪಿಲ್ಲ. ಆರು ಅಥವಾ ಒಂಬತ್ತು ತಿಂಗಳೇನೋ. ಅಂತೂ ಒಂದು ವರ್ಷದ ಅವಧಿಯಲ್ಲಿ ನಡೆದಿತ್ತು. ಎತ್ತರದವನಿಗೆ ಎಲ್ಲವೂ ಇತ್ತು. ಇವಳಿಗೆ ಮಾತ್ರ ಏನೂ ಇರಲಿಲ್ಲ. ಇವಳು ಮದುವೆಯ ಹೆಣ್ಣಾಗಲು ರಬಾಯಿಯವರ ಹತ್ತಿರಕ್ಕೆ ಹೋಗಿದ್ದಳು. 'ರೆಬಯ್ಯ, ನಾನೇನು ಮಾಡಲಿ ಹೇಳಿ ? ಮೋತಿ ಇದನ್ನೇ ಬಯಸಿದಾನೆ. ನನ್ನ ಕನಸುಗಳಲ್ಲಿ ಕಾಣತಿದಾನೆ. ಅವನು ನನಗೆ ಚುಚ್ಚುತಾನೆ. ನನ್ನ ಕಿವಿಗಳಲ್ಲಿ ಕಿರಿಚಿಕೊಳ್ತಾನೆ. ನಾನು ಉಸಿರಾಡೋಕೇ ಬಿಡೋಲ್ಲ'. ಒದಿನ ಕೋಣೆಯಲ್ಲಿ ಇದ್ದ ರಬಾಯಿಯವರಿಗೆ ತನ್ನ ತೋಳುಗಳಲ್ಲಿ ಇದ್ದ ಕಪ್ಪು-ನೀಲಿಯ ಮಚ್ಚೆಗಳನ್ನೂ ತೋರಿಸಿದ್ದಳು. ರಬಾಯಿಯವರು ತಾವಾಗಿಯೇ ಯಾವ ನಿರ್ಧಾರವನ್ನೂ ತೆಗೆದುಕೊಳ್ಳದೆ ಲುಬ್ಲಿನ್‌ಗೆ ಪತ್ರ ಬರೆದಿದ್ದರು. ಲುಬ್ಲಿನ್‌ನಿಂದ ಬಂದ ಮೂವರು ರಬಾಯಿಗಳು ತಾಲಮೂದ್ ಪಠಣವಿಧಿಯನ್ನು ಇವಳ ಮನೆಯಲ್ಲಿ ಮೂರು ದಿನಗಳವರೆಗೆ ನಡೆಸಿದರು. ಕೊನೆಯಲ್ಲಿ ಅವಳಿಗೆ ಇವು - ಏನೆಂದು ಕರೆಯುತ್ತಾರೆ ಇದಕ್ಕೆ - ಒಂದು ಬಿಡುಗಡೆ ; ಹೌದು, ಬಿಡುಗಡೆಯನ್ನು ಕೊಟ್ಟರು.

ಮದುವೆ ಸರಳವಾಗಿ ನಡೆಯಿತು. ಆದರೆ ನೆರೆದಿದ್ದ ಜನ ಇದಕ್ಕೆ ಅತಿಯಾದ ಸದ್ದುಗದ್ದಲವನ್ನು ತುಂಬಿದ್ದರು. ಆ ಸಂದರ್ಭದ ಅಪಹಾಸ್ಯದ ಕೇಕೆ ಮಾತುಗಳನ್ನು ನೀವೇ ಊಹಿಸಿಕೊಳ್ಳಬಹುದು. ಮದುವೆಗಿಂತ ಮೊದಲು ಮೋತಿಷ ಹಲಗೆಯಂತೆ ಒಣಗಿಕೊಂಡು ಹಳದಿಗಟ್ಟಿಕೊಂಡಿದ್ದಳು. ಆದರೆ ಮದುವೆಯಾದ ಮೇಲೆ ಗುಲಾಬಿಯಂತೆ ಅರಳಿದ್ದಳು. ಇವಳು ಪ್ರಾಯದವಳಾಗಿರಲಿಲ್ಲ. ಆದರೂ ಗರ್ಭಿಣಿಯಾದಳು. ಪೇಟೆಯಲ್ಲೆಲ್ಲಾ ಗುಲ್ಲು ಹರಡಿತ್ತು. ಇವಳು ಮೊದಲು ಗಂಡನಿಗೆ 'ಗಿಡ್ಡ' ಎಂದು ಕರೆಯುತ್ತಿದ್ದಂತೆ, ಈ ಎರಡನೆ ಗಂಡನಿಗೆ 'ಉದ್ದ, ಎತ್ತರದ ತೆಂಗಿನಮರ' ಎಂದು ಕರೆಯುತ್ತಿರಬಹುದು ಎಂದು. ಇದನ್ನು ತೆಗೆದುಕೊಡು ಉದ್ದದವನೇ. ಅದನ್ನ ತೆಗೆದು ಕೊಡು ಉದ್ದದವನೇ ಎನ್ನುತ್ತಾಳೇನೋ ಅನ್ನುತ್ತಿದ್ದರು. ಆದರೆ ಈ ಉದ್ದದವನ ಎದುರಿಗೆ ಅವನ ಪ್ರತಿಯೊಂದು ನೋಟಕ್ಕೂ ಇವಳು ಪೆದ್ದುಪೆದ್ದಾಗಿ ನಡೆದು ಕೊಳ್ಳುತ್ತಿದ್ದಳು. ಒಂಬತ್ತು ತಿಂಗಳಾದ ಮೇಲೆ ಗಂಡುಮಗುವೊಂದಕ್ಕೆ ಜನ್ಮ ನೀಡಿದಳು. ಮಗು ದೊಡ್ಡದಾಗಿದ್ದು ಇವಳು ಮೂರು ದಿನಗಳವರೆಗೆ ಸುಧಾರಿಸಿಕೊಂಡಿದ್ದಳು. ಜನ ಇವಳು ಸಾಯುತ್ತಾಳೆ ಅಂದುಕೊಂಡಿದ್ದರು. ಆದರೆ ಇವಳು ಚೇತರಿಸಿಕೊಂಡಿ ದ್ದಳು. ನಾಮಕರಣಕ್ಕೆ ಅರ್ಧ ಪೇಟೆಯೇ ಬಂದು ಸೇರಿತ್ತು. ಕೆಲವರು ಸಂತೋಷದಿಂದ

ಬಂದಿದ್ದರೆ, ಕೆಲವರು ಹಾಸ್ಯ ಮಾಡಲು ಬಂದಿದ್ದರು. ಅಂಥ ಸಂದರ್ಭಗಳಲ್ಲಿ ಇದೆಲ್ಲಾ ಸಾಮಾನ್ಯವೇ.

ಮೊದಲಿಗೆ ಎಲ್ಲವೂ ಚೆನ್ನಾಗಿತ್ತು. ಹಾಗೆ ನೋಡಿದರೆ ಇದು ಸಣ್ಣ ವಿಷಯವಲ್ಲ - ಮುಪ್ಪಿನ ವಯಸ್ಸಿನಲ್ಲಿ ಮಗುವನ್ನು ಪಡೆಯುವುದು ! ಮೋತಿ ತನ್ನೆಲ್ಲ ಸಾಹಸಗಳಲ್ಲೂ ಅದೃಷ್ಟವಂತನಾಗಿದ್ದ. ಮೆಂಡ್ಲ್ ಮಾತ್ರ ದುರದೃಷ್ಟದವನಾಗಿದ್ದ. ಜಮೀನ್ದಾರರು ಇವನನ್ನು ಇಷ್ಟಪಡುತ್ತಿರಲಿಲ್ಲ. ಇತರೆ ವ್ಯಾಪಾರಸ್ಥರು ಇವನನ್ನು ದೂರವಿರಿಸಿದ್ದರು. ಮೂಟೆಗಳನ್ನು ಇರಿಸಿದ್ದ ಗೋಡನ್‌ನಲ್ಲಿ ಬೆಕ್ಕಿನಷ್ಟು ದೊಡ್ಡ ಇಲಿ-ಹೆಗ್ಗಣಗಳು ತುಂಬಿಕೊಂಡಿದ್ದವು. ಕಾಳುಗಳನ್ನೆಲ್ಲಾ ಕಡಿದು ಹಾಳುಗೆಡವುತ್ತಿದ್ದವು. ಜನಗಳು ಇದೆಲ್ಲ ಮೇಲೆ ಇರುವ ದೇವರಿಂದ ಆಗುತ್ತಿರುವ ಶಿಕ್ಷೆ ಎಂದರು. ಹೀಗೆ ವ್ಯಾಪಾರಸ್ಥನಾಗಿ ಮೆಂಡ್ಲ್ ಹೆಚ್ಚು ಕಾಲ ಉಳಿಯಲಿಲ್ಲ. ಮತ್ತೆ ಮರ ಕಡಿಯುವ ಹಳೆಕೆಲಸಕ್ಕೆ ಮರಳಿ ಹೋಗಿದ್ದ. ಆಮೇಲೆ ನಡೆದ ಇದನ್ನು ಕೇಳಿ : ಮರದ ತುದಿಗೆ ಹತ್ತಿ ಮರ ಕಡಿಸುತ್ತಿದ್ದವನು ಮರ ಉರುಳಿದಾಗ ಬಿದ್ದು ಅಡಿಯಲ್ಲಿ ಸಿಕ್ಕಿದ್ದ. ಆಗ ಗಾಳಿಯೇ ಸುಳಿಯುತ್ತಿರಲಿಲ್ಲ. ಸೂರ್ಯ ಮಾತ್ರ ಹೊಳೆಯುತ್ತಿದ್ದ. ಕೂಗಿ ಪಾರಾಗಲು ಅವನಿಗೆ ಸಾಧ್ಯವಾಗಲೇ ಇಲ್ಲ.

ಮೋತಿಷಳೂ ಆಮೇಲಿನ ಸ್ವಲ್ಪ ದಿನಗಳಲ್ಲಿ ತೀರಿಕೊಂಡಿದ್ದಳು. ಕೊನೆಯಲ್ಲಿ ಇವಳು ತನ್ನ ಪ್ರಜ್ಞೆಯನ್ನೇ ಕಳೆದುಕೊಂಡಿದ್ದಳು. ಯಾವಾಗಲೂ ಗೊಣಗುಡುತ್ತಿರುವುದೇ ಕೇಳಿಸುತ್ತಿತ್ತು - ಗಿಡ್ಡ, ಎತ್ತರ, ಎತ್ತರ, ಗಿಡ್ಡ... ಪ್ರತಿದಿನವೂ ಸ್ಮಶಾನಕ್ಕೆ ಓಡಿ ಹೋಗಿ ಒಂದೊಂದು ಸಮಾಧಿಯ ಮೇಲೆಯೂ ಉರುಳಿ ಬೀಳುತ್ತಿದ್ದಳು. ಇವಳು ಸತ್ತಾಗ ನಾನು ಪೇಟೆಯಲ್ಲಿ ಇರಲಿಲ್ಲ. ನನ್ನ ಗಂಡನ ಮನೆಯಲ್ಲಿದ್ದೆ.

ಈಗಾಗಲೆ ನಾನು ಹೇಳಿದಂತೆ - ಹಗೆ, ದ್ವೇಷ.... ಯಾರಾದರೂ ಚುಚ್ಚಿ ಮಾತಾಡುತ್ತಾರೆ. ಗಿಡ್ಡವಾದದ್ದು ಗಿಡ್ಡವೇ, ಎತ್ತರದ್ದು ಎತ್ತರವೇ ಎಂದು. ಆದರೆ ಇದು ನಮ್ಮ ಪ್ರಪಂಚವಲ್ಲ. ಇದನ್ನು ಮಾಡಿರುವವರು ನಾವಲ್ಲ. ಆದರೂ ಮನುಷ್ಯ ಇಂಥ ಅಸಹಜವಾದುವನ್ನೆಲ್ಲಾ ಮಾಡುತ್ತಾನೆ. ಇಂಥ ಕತೆಯನ್ನು ನೀವು ಎಲ್ಲಿಯಾದರೂ ಕೇಳಿದ್ದೀರೇನು ? ಖಂಡಿತವಾಗಿಯೂ ಇವನಲ್ಲಿ ಕೆಟ್ಟತನವೇ ತುಂಬಿಕೊಂಡಿತ್ತು. ಇದನ್ನೆಲ್ಲಾ ಯೋಚಿಸಿದರೆ ಚಳಿಯಿಂದ ನಡುಗುತ್ತಿರುವಂತೆ ಭಾಸವಾಗುತ್ತದೆ.

ವಿಚ್ಛೇದನ

ಸಾಕಷ್ಟು ಡೈವೋರ್ಸ್ ಕೇಸುಗಳು ನನ್ನ ತಂದೆಯವರ ನ್ಯಾಯಾಲಯಕ್ಕೆ ಬರುತ್ತಿದ್ದವು. ಈ ನ್ಯಾಯಾಲಯವೆಂದರೆ ನಮ್ಮ ವಾಸದ ಮನೆಯ ಕೊಠಡಿಯೇ. ನನ್ನ ತಂದೆ ತಮ್ಮ ಧಾರ್ಮಿಕ ಗ್ರಂಥಗಳು ಮತ್ತು ತೋರಾದ ವ್ಯಾಸಪೀಠವನ್ನು ಇರಿಸಿಕೊಂಡಿದ್ದುದು ಈ ಕೊಠಡಿಯಲ್ಲಿಯೇ. ರಬಾಯಿಯವರ ಮಗನಾಗಿದ್ದ ನಾನು, ಹೀಗೆ ಡೈವೋರ್ಸ್‌ಗೆಂದು ಬರುತ್ತಿದ್ದವರ ಅಹವಾಲುಗಳನ್ನು ಕೇಳಿಸಿಕೊಳ್ಳುವ ಅವಕಾಶ ವನ್ನು ಯಾವಾಗಲೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಗಂಡಹೆಂಡಿರಾಗಿದ್ದವರು, ಮಕ್ಕಳ ಪಾಲಕ ರಾಗಿದ್ದವರು ಥಟಕ್ಕನೆ ಹೊಸಬರಾಗುವಂಥ ನಿರ್ಧಾರಕ್ಕೆ ಬಂದಿರುತ್ತಿದ್ದರು. ಯಾಕೆ ? ಇದಕ್ಕೆ ತೀರ ಅಪರೂಪಕ್ಕೆ ಸಮಾಧಾನ ತರುವ ಉತ್ತರ ನನಗೆ ದೊರೆಯುತ್ತಿತ್ತು.

ಈ ಜೋಡಿಗಳ ಎರಡೂ ಕಡೆಯ ಮಾತುಗಳಿಗೆ ತುಂಬ ಶಾಂತವಾಗಿಯೇ ಅವಕಾಶ ನೀಡುತ್ತಿದ್ದ ನನ್ನ ತಂದೆಯವರು ಆನಂತರವೇ ವಿಚ್ಛೇದನ ನೀಡಲಿರುವ ತಮ್ಮ ಅಧಿಕಾರ ತೋರುತ್ತಿದ್ದರು. ಇವರು ನನ್ನ ತಾಯಿ, ರಬಾಯಮ್ಮನ ನೆರವನ್ನೂ ಇದಕ್ಕಾಗಿ ಕೇಳುತ್ತಿದ್ದರು. ತಂದೆಯವರ ಹತ್ತಿರ ಬರುವ ಮೊದಲು ಈ ಜೋಡಿಗಳು ನನ್ನ ತಾಯಿಯವರ ಹತ್ತಿರ ಮಾತಾಡಿರುತ್ತಿದ್ದರು. ಬಹುಮಟ್ಟಿಗೆ ಎಲ್ಲ ಡೈವೋರ್ಸ್ ಕೇಸುಗಳಲ್ಲಿಯೂ ನನ್ನ ತಂದೆ ತಾಲಮೂದ್‌ನ ವಾಕ್ಯಗಳನ್ನು ಹೇಳುತ್ತಿದ್ದರು. ಒಬ್ಬ ಮನುಷ್ಯ ತನ್ನ ಮೊದಲ ಹೆಂಡತಿಗೆ ವಿಚ್ಛೇದನ ನೀಡುವಾಗ ಬಲಿಪೀಠದ ಮೇಲೆ ಕಣ್ಣಗಳಿಂದ ಉರುಳುವಂಥ ಹನಿಗಳನ್ನು ಹನಿಸುತ್ತಾನೆ. ನಾನು ಹುಡುಗನಾಗಿದ್ದಾಗ, ಪವಿತ್ರ ದೇಗುಲ ಹಾಗೂ ಬಲಿಪೀಠ ನಾಶವಾಗಿ ಆಗಲೇ ಇನ್ನೂರು ವರ್ಷಗಳಾ ಗಿತ್ತು. ಹೀಗಾಗಿ, ಕ್ರೊಷ್ಮಲ್ನ ಬೀದಿಯ ಹತ್ತನೇ ನಂಬರಿನ ನಮ್ಮ ಕಟ್ಟಡವೇ ಪವಿತ್ರ ದೇಗುಲ, ಬಲಿಪೀಠವಷ್ಟೇ ಅಲ್ಲದೆ ಪುರೋಹಿತರುಗಳಿಗೆ, ವಿಧಿಕರ್ಮದ ಕಾರ್ಯಗಳಿಗೆ ಒಂದು ಯಿದ್ದಿಷ್ ದಿನಪತ್ರಿಕೆಯ ಸುದ್ದಿಗಿಂತಲೂ ಮಿಗಿಲಾದ ತಾಣವಾಗಿತ್ತು. ಒಂದು ಸಲ ನನ್ನ ತಂದೆ ಬಲಿಪೀಠದಿಂದ ತೊಟ್ಟಿಕ್ಕುವ ಹನಿಗಳ ಬಗ್ಗೆ ಮಾತಾಡುತ್ತಿದ್ದಾಗ ಒಬ್ಬ ಹೆಂಗಸು ಡೈವೋರ್ಸ್ ಬೇಕೆಂದು ಅಳುತ್ತಾ ಬಂದಳು. "ರಬಾಯಿಯವರೇ, ಈ ಗಂಡನ್ನ ಕಟ್ಟಿಕೊಂಡು ನಾನು ಹಗಲೂರಾತ್ರಿ ಎಷ್ಟು ಗೋಳಿಟ್ಟಿದ್ದೀನಿ ಅಂತ ಈ ಬಲಿಪೀಠಕ್ಕೆ ಗೊತ್ತು."

ಈ ಸಲ ಬಂದಿದ್ದವರು ನಮ್ಮ ಬೀದಿಯವರಲ್ಲ, ತ್ಪರ್ದ ಬೀದಿಯವರು. ಇವರು ಬಜಾರ್‌ನಲ್ಲಿ ಉಲ್ರಿಚ್ ಮಳಿಗೆ ಎಂಬ ಅಂಗಡಿ ಹೊಂದಿದ್ದರು. ನೋಡಲು ಮೂವತ್ತರ ಆಸುಪಾಸಿನಲ್ಲಿರುವಂತೆ ಕಾಣುತ್ತಿದ್ದರು. ಗಂಡ ನೀಳವಾದ ಗ್ಯಾಬರ್ಡೈನ್ ಕೋಟು ತೊಟ್ಟು ಚಿಕ್ಕ ಟೋಪಿ ಧರಿಸಿ ಟೈ ಇಲ್ಲದ ಒಂದು ಕಾಲರ್ ಷರ್ಟ್ ಧರಿಸಿದ್ದ. ಹಿಂಬದಿಯಲ್ಲಿ ಸುಕ್ಕುಗಟ್ಟಿದ್ದ ಅಂಗಿ ಹೊರಕ್ಕೆ ಹಣಿಕಿಡುತ್ತಿತ್ತು. ಇವನು ನೀಳವಾಗಿದ್ದ. ಉದ್ದನೆ ಮೂಗು, ಹಳದಿಯ ಚಿಕ್ಕಗಡ್ಡ, ಸೈಡ್‌ಲಾಕ್ ಹೇಳಿಕೊಳ್ಳುವಂತಿರಲಿಲ್ಲ. ಇವನ ಕಣ್ಣುಗಳು ನನಗೆ ಹಳದಿಯಾಗಿ ಕಂಡಿದ್ದವು. ಒಬ್ಬ ಸಭ್ಯ ಮನುಷ್ಯನಂತೇ ಕಂಡರೂ ಹ್ಯಾಸ್ಡಿಕ್ ವಿದ್ವಾಂಸನಂತಿರಲಿಲ್ಲ. ಗ್ರಂದಿಗೆ ಸಾಮಗ್ರಿಗಳ ಮಾರಾಟದ ಅಂಗಡಿಯೊಂದು ತಮಗೆ ಇರುವುದನ್ನು ಹೇಳಿದ. ಇವನ ಹೆಂಡತಿ ಬುದ್ಧಿವಂತಳಂತೆಯೇ ಕಾಣುತ್ತಿದ್ದಳು. ವಿಗ್ ಧರಿಸಿರಲಿಲ್ಲ. ಆದರೆ ತಲೆಗೆ ಒಂದು ಕರ್ಚೀಫ್ ಸುತ್ತಿಕೊಂಡಿದ್ದಳು. ಹೀಗಾಗಿ ರಬಾಯಿಯವರು ಕೋಪಗೊಳ್ಳಲು ಕಾರಣವಿರಲಿಲ್ಲ. ಇವಳ ಷೂಗಳು ಹೈಹೀಲ್‌ನವು. ತೊಟ್ಟಿದ್ದ ಸ್ಕರ್ಟ್ ಮೊಣಕಾಲವರೆಗಷ್ಟೇ ಮುಟ್ಟುತ್ತಿತ್ತು. ಸೊಂಟಕ್ಕೆ ಕಪ್ಪನೆಯ ಚರ್ಮದ ಬೆಲ್ಟ್ ಕಟ್ಟಿ ಹಿತ್ತಾಳೆ ಬಟನ್‌ಗೆ ಸಿಕ್ಕಿಸಿದ್ದಳು. ನನಗಿವಳು ಹುಡುಗಿಯೆಂಬಂತೇ ಕಂಡಿದ್ದಳು. ತನ್ನ ವೈಯಕ್ತಿಕ ತೊಂದರೆಗಳನ್ನು ರಬಾಯಿಯವರ ನ್ಯಾಯಾಲಯಕ್ಕೆ ಹೇಳಿಕೊಳ್ಳಲು ಬಂದಿರುವ ಈಕೆ ಪ್ರೌಢಳಲ್ಲದ ಮುಂಗೋಪಿಯಂತೆ ತೋರುತ್ತಿದ್ದಳು.

"ರಬಾಯವರೇ, ನಾವು ಡೈವೋರ್ಸ್‌ಗಾಗಿ ಬಂದಿದೀವಿ" ಹೆಂಗಸು ಸ್ಪಷ್ಟವಾದ ಮಾತುಗಳಲ್ಲಿ ಹೇಳಿದಳು.

ನಿಯಮಗಳನ್ನು ಪಾಲಿಸುತ್ತಿದ್ದ ನಮ್ಮ ತಂದೆ ಹೆಂಗಸರನ್ನು ನೋಡುವುದನ್ನು ಆದಷ್ಟೂ ತಪ್ಪಿಸುತ್ತಿದ್ದರು. ಅದರಲ್ಲೂ ಮದುವೆಯಾದವರನ್ನು. ಕೆಟ್ಟ ಆಲೋಚನೆಗಳು ಮೂಡದಿರಲಿ ಎಂದು. ಆದರೆ ಈಗ ಅವಳತ್ತ ದೃಷ್ಟಿ ಹಾಯಿಸಿದರು. ಎಡಗೈಯಲ್ಲಿ ಅವರು ತಮ್ಮ ಕೆಂಪುಗಡ್ಡವನ್ನು ಹಿಡಿದಿದ್ದರು. ಬಲಗೈಯಲ್ಲಿ ಟೇಬಲ್ ಮೇಲೆ ಹರಡಿಕೊಂಡಿದ್ದ ದೊಡ್ಡ ಕರ್ಚೀಫ್ ಹಿಡಿದಿದ್ದರು. ದೂರು ಹೇಳಿಕೊಳ್ಳಲು ಬಂದವರು ಈ ಕರ್ಚೀಫನ್ನು ಮೌನವಾಗಿ ಮುಟ್ಟುವುದರಲ್ಲೇ ನಮ್ಮ ತಂದೆ ತಮ್ಮ ತೀರ್ಪನ್ನು ಹೇಳಲಿ ಎನ್ನುವುದನ್ನು ಸೂಚಿಸುವುದಾಗಿರುತ್ತಿತ್ತು.

"ಡೈವೋರ್ಸ್?" ಅವರು ಹೇಳಿದರು. "ನೀವು ಮದುವೆಯಾಗಿ ಎಷ್ಟು ವರ್ಷವಾಯ್ತು?"

"ಐದು ವರ್ಷದ ಮೇಲಾಯ್ತು" ಗಂಡ ಉತ್ತರಿಸಿದ. "ಹನೂಕ ಹಬ್ಬ ಆದ ಒಂದು ವಾರಕ್ಕೆ ಸರಿಯಾಗಿ ಆರು ವರ್ಷವಾಗುತ್ತೆ."

"ಡೈವರ್ಸ್ ಸಣ್ಣ ವಿಷಯವಲ್ಲ" ನನ್ನ ತಂದೆ ಹೇಳಿದರು. "ಇದು ಹಗುರವಾಗಿ ತಗೊಳ್ಳೋ ಅಂಥದಲ್ಲ. ತನ್ನ ಮೊದಲ ಹೆಂಡತಿಗೆ ವಿಚ್ಛೇದನ ಕೊಟ್ಟಾಗ ಬಲಿಪೀಠ ಕೂಡ ಕಣ್ಣೀರು ಹನಿಸುತ್ತೆ ಅಂತ ತಾಲಮೂದ್ ಹೇಳುತ್ತೆ."

"ಇದೆಲ್ಲ ನನಗೂ ಗೊತ್ತು ರಬಾಯವರೇ, ಆದರೆ ನಾವು ಒಟ್ಟಿಗೆ ಬಾಳಲಾರೆವು" ಹೆಂಗಸು ನಿರ್ಧಾರಿತ ದನಿಯಲ್ಲಿ ಹೇಳಿದಳು.

"ನಿಮಗೆ ಮಕ್ಕಳಿದ್ದಾರೆಯೇ?" ತಂದೆ ಕೇಳಿದರು.

"ಮುದ್ದಾದ ಮೂರು ಹುಡುಗೇರಿದಾರೆ" ಗಂಡ ಮೊರೆಯಿಟ್ಟ. "ದೊಡ್ಡೋಳು ನಾಲ್ಕು ವರ್ಷವೂ ತುಂಬದೋಳು."

"ಯಾವ ಕಾರಣಕ್ಕಾಗಿ ನೀವು ಡೈವೋರ್ಸ್ ಕೇಳ್ತಿದೀರಿ?" ತಂದೆ ಕೇಳಿದರು.

ಸ್ವಲ್ಪ ಹೊತ್ತಿನವರೆಗೆ ಗಂಡ-ಹೆಂಡತಿಯರಿಬ್ಬರೂ ಮೌನವಾಗಿದ್ದರು. ಆಮೇಲೆ ಆ ಹೆಂಗಸು ತುಸು ಕೆಮ್ಮಿ ತನ್ನ ಗಂಟಲು ಸರಿ ಮಾಡಿಕೊಂಡಳು. ಮಾತನ್ನು ನುಂಗಿ ಕೊಳ್ಳುತ್ತಿರುವಂತೆ ಹೇಳಿದಳು "ರಬಾಯವರೇ, ಇವನೊಬ್ಬ ಮೂರ್ಖ."

ನನ್ನ ತಂದೆಯವರ ನೀಲಿಕಂಗಳ ಹುಬ್ಬು ನನ್ನದರಂತೇ ಮೇಲೇರಿತ್ತು. ಈ ಉತ್ತರ ಕೇಳಿ ಅವರು ನನ್ನಂತೇ ಅಚ್ಚರಿಗೊಂಡಿದ್ದರು. ಒಂದು ಕ್ಷಣದ ನಂತರ ಹೇಳಿದರು. "ಮನುಷ್ಯರಲ್ಲೆಲ್ಲ ಜ್ಞಾನಿಗಳಾದ ಸಾಲೊಮನ್ ದೊರೆಗಳು ತಮ್ಮ ನುಡಿಗಳಲ್ಲಿ ಮೂರ್ಖತನ ಮತ್ತು ಜ್ಞಾನದ ಬಗ್ಗೆ ಹೇಳಿದಾರೆ. ಅವರ ಅಭಿಪ್ರಾಯದಂತೆ ಒಬ್ಬ ಪಾಪಿ ಮಾತ್ರವೇ ಮೂರ್ಖ. ದೇವರು ಮತ್ತು ಅವನ ನಿಯಮಗಳನ್ನು ಮೀರೋದಕ್ಕಿಂತ ದೊಡ್ಡ ಪಾಪ ಯಾವುದೂ ಇಲ್ಲ. ಮೊದಲ ಅಧ್ಯಾಯದಲ್ಲೇ ಒಂದು ಮಾತಿದೆ. 'ದೇವರಿಗೆ ಭಯ ಪಡೋದರಿಂದಲೇ ಜ್ಞಾನ ಶುರುವಾಗುತ್ತೆ. ಆದರೆ ಮೂರ್ಖರು ಇದನ್ನ ಜರೆದು ತಾತ್ಸಾರ ಮಾಡ್ತಾರೆ' ಅಂತ. ನೀನೂ ನೋಡಿರಬಹುದು. ದಡ್ಡರೆಲ್ಲ ಪಾಪಿಗಳೇ. ಆದರೆ ನಿನ್ನ ಗಂಡ ನನಗೆ ದುಷ್ಟನಾಗಿ ಕಾಣ್ತಿಲ್ಲ, ದೇವರಿಗೆ ಗೊತ್ತೇನೋ."

ತರುಣನ ಹಳದಿ ಕಂಗಳು ನಗುವಿನಲ್ಲಿ ತುಳುಕಿದ್ದವು. "ರಬಾಯಿಯವರೇ, ಇವಳೇ ದುಷ್ಟಿ."

"ಹೀಗೆ ಹೇಳಬೇಡ" ತಂದೆಯವರು ಅವನ ಮಾತಿಗೆ ಆಕ್ಷೇಪ ತೋರಿ ಹೇಳಿದರು. "ಸಿಟ್ಟು ಕೂಡ ಪಾಪದ್ದೇ. ಸಾಲೊಮನ್ ದೊರೆಗಳೇ ಧರ್ಮೋಪದೇಶದಲ್ಲಿ ಹೇಳಿದ್ದಾರೆ. 'ಸಿಟ್ಟು ಮೂರ್ಖರ ಎದೆಯೊಳಗೆ ನೆಲೆಯಾಗಿರುತ್ತೆ' ಅಂತ."

"ಒಳ್ಳೆ ಸ್ವಭಾವದ ಮೂರ್ಖರೂ ಇರ್ತಾರೆ ರಬಾಯಿಯವರೇ" ಹೆಂಗಸು ಹೇಳಿದಳು.

"ಇಲ್ಲ, ಒಳ್ಳೆತನ ಅನ್ನೋದು ಜ್ಞಾನ ಇರೋದರ ಗುರುತು. " ನನ್ನ ತಂದೆ ಉತ್ತರಿಸಿದರು.

ತಂದೆಯವರು ಬೈಬಲ್ ಮತ್ತು ತಾಲಮೂದ್‌ಗಳಿಂದ ಇನ್ನೂ ಒಂದಿಷ್ಟು ಭಾಗ ಗಳನ್ನು ಉದಾಹರಿಸಿದರು. ಆ ಪ್ರಾಯಸ್ಥ ಇದನ್ನು ಪರೋಕ್ಷವಾಗಿ ತನಗೆ ಉತ್ತೇಜನ ವೆಂಬಂತೆ ಸ್ವೀಕರಿಸುತ್ತಿದ್ದು ಹೇಳಿದ. "ರಬಾಯಿಯವರೇ, ಇವಳು ನನ್ನ ಹೆಸರು ಹಿಡಿದು ಕರೆಯೋ ಸಂದರ್ಭಗಳನ್ನೇ ಕಾಯ್ತಾಳೆ. ನಾನು ಏನಾದರೂ ಹೇಳೋಕೆ ಬಾಯಿ ತೆರೆದರೆ ನಡುವೇನೆ ಬಾಯಿ ಹಾಕಿ ಗದರ್ತಾಳೆ. ಗಿರಾಕಿಗಳ ಎದುರಿಗೇ ಅವಮಾನ ಮಾಡ್ತಾಳೆ. ಈಗ ಹಗಲು ಅಂತ ನಾನು ಹೇಳಿದರೆ ಥಟ್ಟನೆ ಇಲ್ಲ ರಾತ್ರಿ ಅಂತಾಳೆ. ಇಂಥ ಕೊಂಕು ನಾಲಿಗೆಯೋಳ ಜೊತೆ ಯಾರು ತಾನೆ ಬಾಳೋಕೆ ಆಗುತ್ತೆ? ನನ್ನ ಜೀವನಾನ ಇವಳು ದುಃಖದಲ್ಲಿ ಕೆಡವ್ತಿದಾಳೆ. ನನ್ನನ್ನಿವಳು ಎಷ್ಟು ಹಿಂಸಿಸ್ತಿದಾಳೆ ಅಂದರೆ ನಮ್ಮ ಬಾಳು ಗೆಹನ್ನಾ ನರಕಕ್ಕಿಂತ ಬೇರೆಯಲ್ಲ ಅನ್ನೋಂಗಿದೆ."

"ನಿಮ್ಮ ಮೂರು ಮಕ್ಕಳ ಬಗ್ಗೆ ಹೇಳ್ತೀಯಾ?" ತಂದೆ ಕೇಳಿದರು.

"ಹೇಳ್ತೀನಿ ರಬಾಯಿಯವರೇ" ಗಂಡ ಉತ್ತರಿಸಿದ. "ಒಬ್ಬಳಿಗಿಂತ ಒಬ್ಬಳು ಮುದ್ದಾಗಿದ್ದಾಳೆ, ಸಕ್ಕರೆ ಸವಿಯಂಗೆ. ಅವರನ್ನ ನೋಡಿದರೆ ಯಾರಿಗಾದರೂ ಉತ್ಸಾಹ ಚಿಮ್ಮುತ್ತೆ. ಆದರೆ ಒಬ್ಬ ಹೆಂಗಸು ಗಂಡನಿಗೆ ತನ್ನ ಮಕ್ಕಳ ಎದುರಿಗೇ ಕೆಟ್ಟ ಹೆಸರು ಗಳಲ್ಲಿ ಕರೀತಿದ್ದರೆ ಅವಕ್ಕೆ ಗೌರವ ಕೊಡಬೇಕು ಅನ್ನೋದೂ ಇಲ್ಲದಂಗಾಗುತ್ತೆ. ಮಕ್ಕಳಿಗೆ ಏನು ಗೊತ್ತಿರುತ್ತೆ? ತಮ್ಮ ತಂದೆಗೆ ತಾಯಿಯಾದವಳು ಅವಮಾನ ಮಾಡ್ತಾ ಇದ್ದರೆ."

"ಇದು ತಪ್ಪು" ತಂದೆಯವರು ಹೇಳಿದರು. "ತನ್ನ ಗಂಡನಿಗೆ ಹೆಂಡತಿಯಾದವಳು ಗೌರವ ಕೊಡಬೇಕು ಅಂತ ಗೆಮಾರ ಹೇಳುತ್ತೆ. ಸಬ್ಬತ್ ಆಚರಣೆಯಲ್ಲಿ ಯಹೂದಿಗಳು ಪಠಿಸೋ 'ಧೈರ್ಯಶಾಲಿ ಹೆಂಗಸು'ನಲ್ಲಿ 'ಆಕೆ ಅವನಿಗೆ ಒಳ್ಳೆದನ್ನ ಬಯಸಬೇಕು. ತನ್ನ ಬಾಳಿನಲ್ಲಿ ಆಕೆ ಕೆಟ್ಟದ್ದನ್ನ ಮಾಡಬಾರದು.... ತನ್ನ ಬಾಯಿ ತೆರೆದಾಗ ಅವಳು ಮಾತುಗಳಲ್ಲಿ ವಿನಯವಂತಿಕೆಯ ನಿಯಮವನ್ನು ತೋರಬೇಕು!"

"ರಬಾಯಿಯವರೇ, ನೀವು ಅವನು ಹೇಳೋದನ್ನಷ್ಟೇ ಕೇಳ್ತಿದೀರಿ" ಹೆಂಗಸು ಆಕ್ಷೇಪಿಸಿದಳು. "ನಾನು ಹೇಳೋದನ್ನ ಯಾಕೆ ಕೇಳೋಲ್ಲ?"

"ನೀನು ಹೇಳೋದನ್ನೂ ಕೇಳ್ತೀನಿ" ತಂದೆಯವರು ಆಕೆಗೆ ದೃಢವಾದ ಮಾತಿನಲ್ಲಿ ಹೇಳಿದರು. "ಎರಡು ಕಡೆಯದನ್ನೂ ಕೇಳೋದು ನನ್ನ ಕರ್ತವ್ಯ. ನೀನು ಹೇಳೋದನ್ನೂ ಹೇಳು, ದಯವಿಟ್ಟು."

"ರಬಾಯವರೇ, ಈತ ತಿಳಿಗೇಡಿ. ಯಾವಾಗಲೂ ಏನನ್ನೂ ಸರಿಯಾಗಿ ಮಾಡೋಲ್ಲ. ನನ್ನ ಎಡಗಾಲು ಷೂನಲ್ಲಿರೋಷ್ಟು ಬುದ್ಧೀನ ತನ್ನ ತಲೇಲಿ ತುಂಬಿಕೊಂಡಿದ್ದಾನೆ. ಅಂಗಡಿಗೆ ಯಾವ ಗಿರಾಕಿ ಬಂದರೂ ಕೊಳ್ಳೋ ಅಂಥೋರು ಯಾರು, ಸುಮ್ಮನೆ ತೊಂದರೆ ಕೊಡೋಕೆ ಸಾಮಗ್ರಿಗಳನ್ನು ಪರೀಕ್ಷೆ ಮಾಡೋಕೆ ಬರೋರು ಯಾರು ಅಂತ ತಿಳಕೋಬೇಕು. ಅಂಥ ಗಿರಾಕಿಗಳೂ ಇರ್ತಾರೆ ; ಸುಮ್ಮನೆ ಅಂಗಡಿಯಿಂದ ಅಂಗಡಿಗೆ ಹೋಗ್ತಿರ್ತಾರೆ. ಇವರಿಗೆ ಮಾಡೋಕೆ ಇನ್ನೇನೂ ಇರೋಲ್ಲ. ಇಂಥವರನ್ನು ನೋಡಿದ ತಕ್ಷಣ ನಾನು ಇವರು ಕೊಳ್ಳೋ ಅಂಥೋರಲ್ಲ ಅಂತ ಬೇಗ ಸಾಗಹಾಕ್ತೀನಿ. ಆದರೆ ಆ ಮಂಕು ಮನುಷ್ಯ ಅವರ ಜೊತೆ ಬಾಳಹೊತ್ತು ಮಾತಾಡುತ್ತೆ. ನಿಜವಾದ ಗಿರಾಕಿ ಬಂದರೆ ಅವಳು ಇಂಥ ಮಾತುಗಳನ್ನು ಕೇಳ್ತಾ ನಿಂತು ತಾಳ್ಮೆ ಕಳಕೊಂಡು ಹಾಗೇ ಹೋಗ್ತಾಳೆ. ನಾವು ಯಾವ ನೀತಿನೇಮವೂ ಇಲ್ಲದೆ ವ್ಯಾಪಾರ ಮಾಡ್ತಿದೀವಿ. ಕಿರಿಕಿರಿ ಕೊಡೋಂಥ ಮನುಷ್ಯ ಒಳಗೆ ಬಂದ ಕೂಡಲೇ ನಾನು ಬಾಚಣಿಗೆ ಎತ್ತಿಕೊಂಡು ಕೂದಲು ಬಾಚಿಕೊಳ್ಳೋಕೆ ಶುರು ಮಾಡ್ತೀನಿ ; ನಾನು ಈಗ ತೊಂದರೆ ಮಾಡಬಾರದು ಅಂತ ಇದು ಅವನಿಗೆ ಸೂಚಿಸುತ್ತೆ. ಅವನು ಯಾವ ಮಾಲನ್ನೂ ಕಣ್ಣಾಡಿಸೋಕೆ ಹೋಗೋಲ್ಲ. ಒಬ್ಬ ಹೆಂಗಸು ಇನ್ನೊಬ್ಬರನ್ನು ಮಾತಾಡಿಸೋಕೆ ಒಂಬತ್ತು ಥರದ ಉಪಾಯಗಳನ್ನು ಇರಿಸಿಕೊಂಡಿರ್ತಾಳೆ ಅನ್ನೋ ಮಾತಿದೆ. ಆದರೆ ಇವನ ಹತ್ತಿರ ಹದಿನೆಂಟು ಉಪಾಯಗಳಿವೆ. ಒಬ್ಬ ಹೆಂಗಸು ಮೂರು ವರ್ಷದ ಹಿಂದೆ ಷಷ್

ಹಬ್ಬದಲ್ಲಿ ಮಾಡಿದ್ದ ಸೀ ಉಂಡೆಗಳಿಗೆ ಬೇಕಿದ್ದ ಸಾಮಗ್ರಿಗಳ ಬಗ್ಗೆ ಕೇಳಿದರೆ ಇವನು ತನ್ನ ಚಿಕ್ಕಮ್ಮ ಯಾಷ್ಕ ಹೊಸೆದು ಮಾಡ್ತಿದ್ದ ಶಾವಿಗೆ ಬಗ್ಗೆ ಗಂಟೆ ತನಕ ಮಾತಾಡ್ತಾನೆ. ತಿಂಗಳ ಮೊದಲವಾರ ಬಂತೂ ಅಂದರೆ, ನಾನು ಬಾಡಿಗೆ ಕಟ್ಟ ಬೇಕು. ಸಾಲ ತರೋ ದುಡ್ಡಿಗೆ ಜಾಸ್ತಿ ಬಡ್ಡಿ ಕಟ್ಟಬೇಕು. ಇದು ನಿಜವೋ, ಸುಳ್ಳೋ ಹೇಳಿ ?"

ಈಕೆ ತನ್ನ ಗಂಡನ ಬಗೆಗೆ ಹೀಗೆ ಹೇಳುತ್ತಿದ್ದರೆ ಗಂಡ ಅವಳತ್ತ ಮೋಹಕ ವಾಗಿ ದಿಟ್ಟಿಸುತ್ತಿದ್ದ. ರಬಾಯಿಯವರ ಮಗನಾದ ನನ್ನನ್ನು ನೋಡಿ ನಕ್ಕಿದ್ದ. ಇವಳು ಹೊತ್ತುಗಳೆಯಲು ಮಾತಾಡುತ್ತಿದ್ದಾಳೇನೋ ಎಂದು ಅಣಕಿಸುತ್ತಿರುವಂತೆ ನನಗೆ ಕಂಡಿತ್ತು. ಅವಳು ಅಪಮಾನ ಮಾಡುತ್ತಿರುವುದೂ ಈತನಿಗೆ ಸಂಬಂಧಿಸಿದ್ದಲ್ಲ ಎನ್ನು ವಂತಿದ್ದ. ಅವಳು ಹೇಳುವುದು ಸರಿ - ಇವನು ಭಾರಿ ಮೂರ್ಖ ಎಂದು ಯೋಚಿಸಿದೆ.

"ನಿನ್ನ ಹೆಸರು ಕೇಳೋದನ್ನೇ ಮರೆತುಬಿಟ್ಟೆನಲ್ಲಪ್ಪ" ತಂದೆಯವರು ಹೇಳಿದರು.

"ನನ್ನ ಹೆಸರು ಷ್ಮೈಲ್ ಮಯೆರ್. ಆದರೆ ಎಲ್ಲರೂ ಕರೆಯೋದು ಷ್ಮೆಲ್ಕೆ ಅಂತ " ಈತ ಹೇಳಿದ. "ಆದರೆ ನನಗೆ ಮೂರು ಹೆಸರುಗಳಿವೆ - ಷ್ಮೈಲ್, ಮಯೆರ್ ಮತ್ತು ಅಲ್ತರ್. ಮೂರನೇದು ನನಗೆ ಎರಡು ವರ್ಷವಾಗಿದ್ದಾಗ ಬಂದ ಕಾಮಾಲೆ ರೋಗದ -"

ಬೇರೊಬ್ಬರು ಮಾತಾಡುವಾಗ ನನ್ನ ತಂದೆಯವರು ಮಧ್ಯದಲ್ಲೇ ತಡೆಯುವು ದನ್ನು ನಾನು ಅಲ್ಲಿಯತನಕ ನೋಡಿರಲಿಲ್ಲ. ಆದರೆ ಈಗ ಅವರು ಆತನ ಮಾತನ್ನು ಪೂರ್ತಿಯಾಗಲು ಬಿಡಲಿಲ್ಲ. "ರೆಬ್ ಷ್ಮೈಲ್ಕೆ, ನಿನ್ನ ಹೆಂಡತಿ ಹೇಳಿರೋ ದೂರುಗಳ ಬಗ್ಗೆ ಏನು ಹೇಳ್ತೀಯಾ?"

"ಹೇಳೋ ಅಂಥದು ಏನಿದೆ ? ಅವಳದು ನಾಜೂಕಿನ ನಾಲಿಗೆ. ಅವಳು ಯಾರನ್ನಾದರೂ ತನ್ನದೇ ಸರಿ ಅನ್ನೋಂಗೆ ಒಪ್ಪಿಸ್ತಾಳೆ. ನಾನು ಸರಳವಾದೋನು, ಮನಸ್ಸು ಓದೋ ಅಂಥವನಲ್ಲ. ಒಬ್ಬ ಹೆಂಗಸು ಕೊಳ್ಳೋಕೆ ಬರ್ತಾಳೋ ಅಥವಾ ಸುಮ್ಮನೆ ಬರ್ತಾಳೋ ಅಂತ ನನಗೆ ಹೇಗೆ ಗೊತ್ತಾಗಬೇಕು ? ಇದು ಯಾರ ಹಣೆ ಮೇಲೆಯೂ ಬರೆದಿರೋದಿಲ್ಲ. ಯಾರಾದರೂ ಮಾತಾಡಿದರೆ ನೀನು ಕೇಳಬೇಕು ಅನ್ನೋದನ್ನ ಮನೆಯಲ್ಲಿ ಕಲ್ತಿದೀನಿ. ನಾನು ಯಾರ ಹತ್ತಿರವಾದರೂ ವ್ಯಾಪಾರದಲ್ಲಿ ಮುಳುಗಿದ್ದಾಗ ನನ್ನ ಹೆಂಡತಿ ತನ್ನ ಬಾಚಣಿಕೇಲಿ ಏನು ಮಾಡ್ತಾಳೆ ಅಂತ ನಾನು

ನೋಡೋಲ್ಲ. ಒಂದೊಂದು ಸಾರಿ ಅವಳು ಕೆಮ್ತಾಳೆ. ಅದು ನಿಜವಾದ ಕೆಮ್ಮೋ ಅಥವಾ ಕೆಮ್ಮೋದರಲ್ಲಿ ಏನನ್ನಾದರೂ ಸೂಚಿಸ್ತಿದಾಳೋ ಅಂತ ಹೇಗೆ ಗೊತ್ತಾಗಬೇಕು ? ಚಳಿಗಾಲ ಬಂದಾಗ, ಮಂಜು ಉದುರಿ ಹಿಮಗಟ್ಟಿದಾಗ ಎಲ್ಲರೂ ಕೆಮ್ತಾರೆ. ಸುಕ್ಕೋತ್ ರಜಾ ದಿನ ಬಂದಾಗ ನಾವೆಲ್ಲ ಮಕ್ಕಳಿಗೆ ಗಂಟಲಿಗೆ ಬತ್ತಾಸು ಕೊಡ್ತೀವಿ. ಆದರೂ ಅವರು ಕೆಮ್ತಾರೆ. ದಿಟ ಏನೂ ಅಂದರೆ ಇವಳ ಹೆಸರು ಸಲ್ಕ - ಇವಳು ಹುಟ್ಟಿರೋದು ಕೆಟ್ಟಗಳಿಗೆಯಲ್ಲಿ ; ಇವಳ ತಾಯಿ, ಆಕೆ ಚಿರಶಾಂತಿಯಲ್ಲಿರಲಿ, ಒಂದು ಸಲ ನನಗೆ ಹೇಳಿದ್ದಳು : ಮಗುವಾಗಿದ್ದಾಗಿನಿಂದಲೂ ಇವಳು ಯಾವಾಗಲೂ ಅಳುತ್ತಲೇ ಇದ್ದಳು ಅಂತ. ಹೇಳೋಕೆ ಆಗದ ಎಂಥದೋ ಉರಿ ಇವಳೊಳಗೆ ಉರಿತಿರುತ್ತೆ. ಅದನ್ನ ಯಾರ ಮೇಲಾದರೂ ಹೊರಗೆ ಹರಿಸ್ತಾಳೆ. ನಮಗೆ ಮುದ್ದಾದ ಮೂರು ಮಕ್ಕಳಿವೆ. ಆದರೆ ಅವಕ್ಕೆ ಇವಳು ಯಾವಾಗಲೂ ಗದರುತ್ತಲೇ ಇರ್ತಾಳೆ. ಅವು ಏನು ಮಾಡಿದರೂ ಅವಕ್ಕೆ ಹೊಡೆದು ಜಿಗುಟಿ ಬೇಸರ ತರಿಸ್ತಾಳೆ. ಮಕ್ಕಳಿಗೆ ಹೊಡಿಯೋ ಅಂಥವರಲ್ಲಿ ದೊಡ್ಡ ರಸ್ತೆಗಳಲ್ಲಿ ದರೋಡೆ ಮಾಡೋವಂಥರ ಹೃದಯವೇ ಇರುತ್ತೆ."

ಬಾಗಿಲು ತೆರೆದ ನನ್ನ ತಾಯಿ ಬಾಡಿದ ತಮ್ಮ ಮುಖದೊಂದಿಗೆ ಒಳಗೆ ಹಣುಕಿದರು. "ನೋಡಮ್ಮ, ನೀನು ನನ್ನ ಜೊತೆ ಅಡುಗೆ ಕೋಣೆಗೆ ಬರ್ತೀಯಾ?" ಆಕೆ ಹೇಳಿದಳು.

"ರಬಾಯಮ್ಮಾರು ನನ್ನನ್ನ ಕರೀತಿದಾರಾ?" ಸಲ್ಕ ಕೇಳಿದಳು.

"ಹೌದು ನಿನ್ನನ್ನೇ. ನೀನೇನೂ ತಪ್ಪು ತಿಳಿಯೋಲ್ಲ ಅಂದ್ಕೊಂಡಿದೀನಿ."

"ಆಯ್ತು ರಬಾಯಮ್ಮ, ಒಂದು ನಿಮಿಷ ಬಂದೆ. ರಬಾಯವರೇ, ನನಗೆಲ್ಲ ಗೊತ್ತು. ನಾನು ಇಲ್ಲಿಂದ ಹೋದ ಮೇಲೆ ಇವನು ನನ್ನ ಬಗ್ಗೆ ವಿಚಿತ್ರ ಸಂಗತಿಗಳನ್ನೆಲ್ಲ ಹೇಳ್ತಾನೆ. ಆದರೆ ಅವನ್ನೆಲ್ಲ ಕಟ್ಟಿಕೊಂಡು ನನಗೇನೂ ಆಗಬೇಕಿಲ್ಲ. ನಾನು ಇವನಿಂದ ಬಿಡುಗಡೆಯಾಗಬೇಕು. ಈ ಹೆಡ್ಡನ ಜೊತೆ ಬಾಳೋದಕ್ಕಿಂತ ಸಮಾಧಿಯೊಳಗೆ ಇರೋದು ಲೇಸು" ಹೀಗೆಂದ ಆಕೆ ಅಡುಗೆಕೋಣೆಗೆ ಹೋದಳು.

* * * *

ಅಡುಗೆಕೋಣೆಯಲ್ಲಿ ನಡೆಯುವ ಮಾತುಕತೆಯನ್ನು ಕೇಳಬೇಕೆಂದು ನನಗೆ ಬಹಳ ಕುತೂಹಲವಾಯಿತು. ಆದರೆ ನನ್ನ ತಾಯಿ ಜೋರಾಗಿ ಗದರುತ್ತಾರೆಂದು

ಅಂಜಿದೆ. ನಮ್ಮ ಮನೆಗೆ ತಮ್ಮ ಅಹವಾಲುಗಳನ್ನು ಹೇಳಿಕೊಳ್ಳಲು ಬಂದವರ ಮಾತು ಗಳನ್ನು ನಾನು ಕೇಳಬಾರದೆಂದು ನನ್ನ ತಂದೆ ಮತ್ತು ತಾಯಿ ಇಬ್ಬರೂ ಈ ಹಿಂದೆಯೇ ನನಗೆ ಎಚ್ಚರಿಕೆ ನೀಡಿದ್ದರು. ತಂದೆಯವರು ಈ ಎಚ್ಚರಿಕೆಯನ್ನು ಮರೆತಿದ್ದರು. ಆದರೆ ತಾಯಿಯವರಿಗೆ ಎಲ್ಲವೂ ನೆನಪಿರುತ್ತಿತ್ತು.

ನಾನು ತಂದೆಯವರ ನ್ಯಾಯದ ಕೋಣೆಯಲ್ಲಿಯೇ ಉಳಿದೆ. ಷ್ಮೆಲ್ಕೆ ಹೇಳಿದ, "ರಬಾಯಿಯವರೇ ಇವಳು ಜಾಣೆ, ಸುಂದರಿ ಜೊತೆಗೆ ಉತ್ಸಾಹಿ. ಆದರೆ ಯಾವಾಗಲೂ ಸಮಾಧಾನವಿಲ್ಲದವಳು. ಯಾವಾಗ ನೋಡಿದರೂ ನಿಷ್ಠುರವಾಗಿ ನಡಕೊಳ್ತಾಳೆ. ಹೀಗಾಗಿಯೇ ನಮ್ಮ ಬದುಕು ತಿಕ್ಕಾಟದ್ದಾಗಿದೆ. ನಮ್ಮ ಅಂಗಡಿಯಿಂದ ಸ್ವಲ್ಪ ದೂರದಲ್ಲೇ ಇನ್ನೊಂದು ಅಂಗಡಿಯಿದೆ. ಅದು ಯಾವಾಗಲೂ ಗಿರಾಕಿಗಳಿಂದ ತುಂಬಿರುತ್ತೆ. ಆ ಅಂಗಡಿ ಯಜಮಾನ ಚೆನ್ನಾಗಿ ದುಡ್ಡು ಗಳಿಸ್ತಾನೆ. ಯಾಕೆ ಹೀಗೆ ಅಂದರೆ ಸಲ್ಕಾಳ ಸಿಟ್ಟು ಗಿರಾಕಿಗಳನ್ನ ನಮ್ಮಿಂದ ಹೊರಗೆ ಕಳಿಸುತ್ತೆ. ನಮ್ಮ ಹತ್ತಿರಕ್ಕೆ ಬರೋ ಗಿರಾಕಿಗಳೆಲ್ಲಾ ಬರೀ ಕಟಿಪಿಟಿ ಮಾಡೋರೇ. ಒಂದು ಮಾಲಿಗೆ ನಾವು ಎಷ್ಟೇ ಸಸ್ತ ಬೆಲೆ ಹೇಳಿದರೂ ಗಿರಾಕಿ ಅದನ್ನ ಇನ್ನೂ ಕಡಿಮೆ ಮಾಡಿ ಕೊಳ್ಳೋಕೆ ನೋಡ್ತಾನೆ. ಯಾರೇ ಆಗಲಿ ಮುಗ್ಗಲು, ಹುಳುಕು ಮಾಲು ಕೊಳ್ಳೋಕೆ ಬರ್ತಾರೆಯೇ ? ಏನೂ ಗತಿ ಇಲ್ಲ ಅನ್ನೋರು ಇಂಥದಕ್ಕೆ ಬಂದಾರು. ನಮ್ಮ ಮೇಲೆ ಪೈಪೋಟಿ ಮಾಡೋ ಅಂಗಡಿಯವನ ಹೆಂಡತಿ ಮುಖದಲ್ಲಿ ಯಾವಾಗಲೂ ನಗು ತುಂಬಿಕೊಂಡಿರ್ತಾಳೆ. ತನ್ನ ಹತ್ತಿರ ಬರೋ ಗಿರಾಕೀನ ಹೊರಗೆ ಬಿಡೋಲ್ಲ. ಗಿರಾಕಿಗಳ ಜೊತೆ ಸ್ನೇಹವಾಗಿ ಮಾತಾಡು ಅಂತ ಇವಳಿಗೆ ನಾನು ಹೇಳಿದರೆ, ನನ್ನ ಮೇಲೆ ಇವಳು ಸರ್ಪಂತ ಹಾರಿ ಬರ್ತಾಳೆ. ಇವಳ ಕಣ್ಣುಗಳು ಕತ್ತಿಯಷ್ಟು ಮೊನಚು. ಒಂದೊಂದು ಸಲ ಆ ದೇವರೇ ತಪ್ಪು ಮಾಡಿದ ಅಂತ ಯೋಚಿಸ್ತೀನಿ. ಇವಳು ಗಂಡಸಾಗಿ ಹುಟ್ಟಬೇಕಿತ್ತು. ಎಲ್ಲೋ ಏನೋ ಹೆಚ್ಚುಕಡಿಮೆಯಾಗಿ ಹೀಗಾಗಿದೆ."

"ತಾಳ್ಮೆಯಿಂದ ಶಾಂತೀಲಿ ಇರೋದು ಯಾವಾಗಲೂ ಫಲ ಕೊಡುತ್ತೆ" ತಂದೆ ಯವರು ಹೇಳಿದರು. "ನೀನು ಸಮಾಧಾನದಿಂದ ಬಾಳಬೇಕು ಅಂದರೆ ಹೀಗಿರಬೇಕು. ಆಮೇಲೆ....."

ಸಮಾಧಾನದಿಂದ ಒಂದು ಸಂಸಾರ ಬಾಳಬೇಕು ಎಂದರೆ ಹೇಗಿರಬೇಕು ಎನ್ನುವುದನ್ನು ಕೇಳಲು ನನಗೆ ಆಸಕ್ತಿಯಿರಲಿಲ್ಲ. ಹೀಗಾಗಿ ನಾನು ಅಡುಗೆ ಕೋಣೆಯ

ಕಡೆಗೆ ಕಾಲು ಹಾಕಿದೆ. ಸಣ್ಣ ಸೀಮೆಯೆಣ್ಣೆ ಲ್ಯಾಂಪಿನ ಮಂಕು ಬೆಳಕಿನಲ್ಲಿ ನನ್ನನ್ನು ತಾಯಿಯವರು ಗಮನಿಸುವುದಿಲ್ಲ ಎಂಬ ನಂಬಿಕೆಯಲ್ಲಿ ಒಂದು ಮೂಲೆಯಲ್ಲಿ ನಿಂತೆ. ಸ್ಟೂಲ್ ಮೇಲೆ ಒಂದು ಕತೆ ಪುಸ್ತಕವನ್ನು ಇರಿಸಿರುತ್ತಿದ್ದೆ. ಕಿವಿಯಲ್ಲಿ ಕೇಳಿಸಿ ಕೊಳ್ಳುವ ಮಾತುಗಳ ಸಂದರ್ಭಗಳಲ್ಲಿ ಓದುವವನಂತೆ ಹಿಡಿದುಕೊಂಡಿರಲು. ನನಗೆ ಜನರ ಮಾತುಗಳನ್ನು ಕೇಳಲು ತುಂಬ ಇಷ್ಟವಾಗುತ್ತಿತ್ತು. ಅವರ ಭಾವಭಂಗಿಗಳು, ತಪ್ಪಿಗೆ ಕ್ಷಮೆ ಕೇಳುವುದು, ಜೊತೆಗೆ ತಮ್ಮ ಸುಳ್ಳುಗಳನ್ನು ಮುಚ್ಚಿಕೊಳ್ಳಲು ಯತ್ನಿಸುವುದು. ಈ ಹೆಂಗಸು ಹೇಳುತ್ತಿದ್ದುದನ್ನು ಕೇಳಿಸಿಕೊಂಡೆ, "ರಬಾಯಮ್ಮಾರೆ, ಇವನೊಬ್ಬ ಮೂರ್ಖ. ಈ ರೋಗಕ್ಕೆ ಯಾರೂ ಔಷಧಿ ಮಾರೋದಿಲ್ಲ. ಎಲ್ಲೋ ಒಂದು ಕಡೆ ಬರೆದಿದೆ, ಮೆಸಯ್ಯಾರು ಬಂದಾಗ ಎಲ್ಲ ರೋಗಿಗಳೂ ಗುಣವಾಗ್ತಾರೆ. ಆದರೆ ಮೂರ್ಖರು ಮಾತ್ರ ಮೂರ್ಖರಾಗಿಯೇ ಉಳೀತಾರೆ ಅಂತ. ಇದು ಹಿಂಗ್ಯಾಕೆ ಹೇಳಮ್ಮ?"

"ಇದರ ಉತ್ತರ ತುಂಬ ಸರಳವಾಗಿದೆ" ತಾಯಿಯವರು ಹೇಳಿದರು. "ಕಾಯಿಲೆ ಇರೋರಿಗೆ ತಾನು ರೋಗಿ ಅಂತ ಗೊತ್ತಿರುತ್ತೆ. ಅವರು ದೇವರ ಹತ್ತಿರ ಪರಿಹಾರಕ್ಕಾಗಿ ಪ್ರಾರ್ಥಿಸ್ತಾರೆ. ಆದರೆ ಮೂರ್ಖರು ತಾವು ಚೆನ್ನಾಗಿಯೇ ಇದೀವಿ ಅಂತ ಯೋಚಿಸ್ತಾರೆ. ದೇವರನ್ನೂ ನೆರವಿಗಾಗಿ ಪ್ರಾರ್ಥಿಸೋದಿಲ್ಲ. ಹೀಗಾಗಿ ಅವರು ಹೇಗಿರ್ತಾರೋ ಹಾಗೆಯೇ ಉಳೀತಾರೆ."

"ಬಂಗಾರದಂಥ ಮಾತುಗಳು. ನಮ್ಮ ಅಜ್ಜಿ ಹೇಳ್ತಿದ್ದಳು. 'ಎಲ್ಲಿ ತೋರಾ ಇತೋ ಅಲ್ಲಿ ಜ್ಞಾನವೂ ಇರುತ್ತೆ' ಅಂತ. ಬೆಳಿಗ್ಗೆ ಕಣ್ಣುಬಿಟ್ಟು ಏಳೋ ಹೊತ್ತಿಗೇ ಇವನು 'ನಾನು ಇಂಥೋನು' ಅಂತ ತೋರಿಸೋಕೆ ಶುರು ಮಾಡ್ತಾನೆ. ನಾನು ಇವನಿಗೆ ಹೇಳ್ತೀನಿ, 'ಯಾಕಿಷ್ಟು ಅವಸರ, ಈಗಿನ್ನೂ ಬೆಳಗಾಗ್ತಿದೆ. ನೀನು ಕತ್ತೆಯಾಗೋಕೆ ಇನ್ನೂ ಸಾಕಷ್ಟು ಹೊತ್ತಿದೆ' ಅಂತ. ಇವನು ತಾನು ಕಂಡ ಕನಸು ಹೇಳೋಕೆ ಇಷ್ಟಪಡ್ತಾನೆ. ನಾನೂ ಕನಸು ಕಂಡಿರ್‍ತೀನಿ. ಆದರೆ ಕಣ್ಣು ತೆರೆದಾಗ ಅವೆಲ್ಲ ಮರೆತು ಹೋಗಿರುತ್ವೆ. ಇವನು ತನ್ನ ಕನಸುಗಳನ್ನು ಮೊದಲಿಂದ ಕೊನೇತನಕ ನೆನಪು ಇಟ್ಟುಕೊಂಡಿರ್‍ತಾನೆ. ಇವನ ಹಾಗೆಯೇ ಇವನ ಕನಸುಗಳೂ ಅರ್ಥವಿಲ್ಲದಂಥವು. ಏಳತಿದ್ದ ಹಾಗೆಯೇ ಇವನು ಹೇಳ್ತಾನೆ. 'ನಾನು ಬಾನಕ್ಕಿಯಾಗಿ ಹಾರಾಡ್ತಿದ್ದೆ' ಅಂತ. ಒಬ್ಬ ಶತಮೂರ್ಖ ಮಾತ್ರ ಇಂಥ ಕನಸು ಕಾಣ್ತಾನೆ. ಇಂಥವಕ್ಕೆಲ್ಲ ನಾನು ಮಾತಲ್ಲೇ ಶಿಕ್ಷೆ ಕೊಡ್ತೀನಿ. ಇಷ್ಟಲ್ಲದೆ ಇವನ ಬೂಟುಗಳೂ ನನಗೆ ಎಬಡವಾಗಿ ಕಾಣುತ್ವೆ.

"ಬೂಟುಗಳು?" ತಾಯಿಯವರು ಕೇಳಿದರು.

"ಹ್ಞೂಂ. ಅವನ ಬೂಟ್‌ಗಳು. ಇದು ಹೊಸದೇನಲ್ಲವಲ್ಲ ? ಒಂದು ದಿವಸ ಬೂಟ್‌ಗಳನ್ನು ನೋಡಿದಾಗ ಅನ್ನಿಸ್ತು. ಎಬಡ ಬೂಟಿನ ಜೋಡಿ ಅಂತ. ನನ್ನನ್ನ ನಂಬಿ ರಬಾಯಮ್ಮ. ನಾನೀಗ ಮೂರ್ಖಿಳ ಹಾಗೆಯೇ ಮಾತಾಡ್ತಿದೀನೇನೋ. ಆರು ವರ್ಷದ ತನಕ ನೀವು ಒಬ್ಬ ಮೂರ್ಖನ ಜೊತೆ ಇದ್ದರೆ ನೀವೂ ಮೂರ್ಖರೇ ಆಗಿರ್‍ತೀರಿ. ಒಬ್ಬ ನೇರಮನುಷ್ಯನಿಗೆ ಎಲ್ಲವೂ ನೇರವಾಗಿ ಕಾಣ್ತಿರುತ್ತೆ. ಇವನ ಬಟ್ಟೆ ಕೂಡ. ಒಬ್ಬ ನೀಟಾದ ವ್ಯಕ್ತಿ ಒಂದು ಸಾರಿ ಮೂರ್ಖತನ ತೋರಿಸೋಕೆ ಪ್ರಯತ್ನಿಸಿದರೆ ಅದೂ ಕೂಡ ನೇರವಾಗಿಯೇ ಕಾಣ್ತಿರುತ್ತೆ. ಮೂರ್ಖನಿಗೆ ಮಾತ್ರ ಇದು ತದ್ವಿರುದ್ಧವಾಗಿರುತ್ತೆ.

"ಸಲ್ಕೆ, ನನ್ನನ್ನು ನಂಬು" ತಾಯಿಯವರು ಹೇಳಿದರು. "ಒಬ್ಬ ಮನುಷ್ಯನನ್ನ ಹೀಗೆ ದ್ವೇಷಿಸೋದು ಮೈಗೂ ಒಳ್ಳೇದಲ್ಲ, ಜೀವಕ್ಕೂ ಒಳ್ಳೇದಲ್ಲ. ದೇವರಿಗೇ ಗೊತ್ತೇನೋ, ನೀನು ಇಂಥದರಿಂದಲೇ ಕಾಯಿಲೆ ತಂದುಕೊಂಡಿದೀಯೇ. ಇದು ನಿನ್ನ ಬಾಳಿಗೆ ತೊಂದರೆ ಕೊಡುತ್ತೆ."

"ನೀವು ಹೇಳೋದು ಸರಿ ರಬಾಯಮ್ಮ, ಸಾವಿರ ಪಾಲು ನಿಜ. ನಾನೇನು ಅವನನ್ನ ದ್ವೇಷಿಸೋಲ್ಲ. ನನಗೆ ಅವನು ಕೆಟ್ಟದ್ದೇನೂ ಮಾಡಿಲ್ಲ. ಇದರಲ್ಲಿ ಅವನ ತಪ್ಪೇನೂ ಇಲ್ಲ ಅಂತ ನನಗೆ ಗೊತ್ತು. ಆದರೆ ಅವನು ನನ್ನನ್ನ ಹೊಗಳೋಕೆ ಶುರು ಮಾಡಿದರೆ ನನಗೆ ಅಸಹ್ಯವಾಗುತ್ತೆ. ಜನ ಅವನನ್ನ ಭೇಟಿಯಾದರೆ ನನಗೆ ಅವಮಾನವಾಗುತ್ತೆ. ಒಬ್ಬ ಹೆಂಗಸು ತನ್ನ ಗಂಡನ್ನ ನೋಡೋಕೆ ಹೇಗೆ ಇಷ್ಟಪಡ್ತಾಳೆ ಅಂತ ನಿಮಗೆ ಗೊತ್ತು. ಆದರೆ ಅವಳ ಎದುರಿಗೇ ಅವನು ಕೀಳಾಗೋ ಅಂಥದನ್ನ ಅವಳು ಒಪ್ಪೋಲ್ಲ."

ನಾನು ವಾಪಸ್ ಹೋಗಲು ನಿರ್ಧರಿಸಿದೆ. ಷ್ಮೆಲ್ಕೆಯ ಎಬಡ ಬೂಟ್‌ಗಳನ್ನು ನೋಡಲು ಕುತೂಹಲವಾಗಿತ್ತು. ಈಗ ಅವನು ಬೆಂಚಿನ ಮೇಲೆ ಕುಳಿತಿದ್ದ. ಅವನ ಕಾಲುಗಳು ಮಬ್ಬಿನಲ್ಲಿ ಮರೆಯಾಗಿದ್ದವು. ಅವನು ಹೇಳುತ್ತಿದ್ದುದನ್ನೂ ಕೇಳಿಸಿಕೊಂಡೆ. "ರಬಾಯಿಯವರೇ, ನಾನು ಇವಳಿಗೆ ಎಲ್ಲವನ್ನೂ ಕೊಟ್ಟೆ - ಮಳಿಗೆ, ಅಂಗಡಿ, ಜೊತೆಗೆ ವ್ಯಾಪಾರಾನೂ. ಮೂರು ಮಕ್ಕಳನ್ನ ಇಟ್ಟುಕೊಂಡು ಇವಳು ಅಂಗಡೀನೂ

ಹೇಗೆ ನೋಡಿಕೊಳ್ತಾಳೆ. ಆದರೆ ಇವಳು ಇದನ್ನೆಲ್ಲ ಬಯಸ್ತಾಳೆ. ನಾನು ನನ್ನ ಬ್ರೆಡ್ ಗಳಿಸಿಕೊಳ್ತೀನಿ. ನನ್ನಿಂದ ಎಷ್ಟು ಸಾಧ್ಯವೊ ಅಷ್ಟನ್ನ ಮಕ್ಕಳಿಗೂ ಕೊಡ್ತೀನಿ. ಆದರೆ ಇವಳು ಸಬ್ಬತ್‌ನಲ್ಲಿ ಮಾತ್ರ ನಾನು ಮಕ್ಕಳನ್ನ ನೋಡೋಕೆ ಬರಲಿ ಅಂತಾಳೆ. ಅವರನ್ನ ನೋಡದಂಗಿರೋದು ನನ್ನಿಂದ ಆಗೋಲ್ಲ."

"ರೆಬ್ ಷ್ಮೆಲ್ಕೆ, ನಿಯಮಾವಳಿ ನಿನ್ನ ಪರವಾಗಿ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಒಂದು ಸಾರಿ ನೀವು ವಿಚ್ಛೇದನ ಪಡೆದ ಮೇಲೆ ನೀವು ಒಂದೇ ಸೂರಿನಲ್ಲಿ ವಾಸ ಮಾಡೋ ಹಾಗಿಲ್ಲ."

"ಯಾಕೆ ಆಗೋಲ್ಲ?"

"ಇದು ನಿಯಮ. ಗಂಡಹೆಂಡತಿಯರು ಒಬ್ಬರ ಮೇಲೊಬ್ಬರು ತಪ್ಪು ಹೊರಿಸ್ತಿದ್ದಾಗ ದುಷ್ಪ್ರೇರಣೆ ದೊಡ್ಡದಾಗ್ತಿರುತ್ತೆ. ಅವರು ಪಾಪದಲ್ಲಿ ಬೀಳ್ತಾರೆ. ಅವಳು ಮರುಮದುವೆ ಆಗೋದಾದರೆ ಈ ಪಾಪ ಇನ್ನೂ ಜಾಸ್ತಿನೇ ಆಗುತ್ತೆ."

"ರಬಾಯಿಯವರೇ, ಮಕ್ಕಳನ್ನ ನೋಡದೆ ನಾನು ಹ್ಯಾಗೆ ಇರಲಿ ? ಎಲ್ಲ ಮನೆಗಳು ಒಂದೊಂದು ಸೂರೇ. ಚಳಿಗಾಲದಲ್ಲಿ ಮಕ್ಕಳನ್ನ ಯಾರೂ ಹೊರಗೆ ಕರಕೊಂಡು ಬರೋಲ್ಲ."

"ನೀನು ಅವರನ್ನ ನೋಡೋಕೆ ಬಂದಾಗ ಯಾರಾದರೂ ಒಬ್ಬರು ಎದುರಿಗೆ ಇರಬೇಕು. ದೇವರ ಎದುರಿಗಿಂತಲೂ ಇನ್ನೊಬ್ಬರ ಎದುರಿಗೆ ನಿಲ್ಲೋ ಅಂಥದೇ ಮನುಷ್ಯ ಸ್ವಭಾವದಲ್ಲಿ ತುಂಬ ಮುಜುಗರದ್ದು."

ನನ್ನ ಗ್ಯಾಬರ್‌ಡಿನ್ ನಿಕ್ಕರಿನ ಜೇಬಿನಲ್ಲಿ ಕೈ ತೂರಿಸಿ ಬೆಳಿಗ್ಗೆ ಚೆದರ್‌ಗೆ ಹೋಗುವಾಗ ಕೊಟ್ಟಿದ್ದ ಗ್ರೋಷನ್ ಪೈಸೆಯನ್ನು ಹೊರತೆಗೆದು ಮೇಲೆಸೆದು ಹಿಡಿಯುವ ಆಟದಲ್ಲಿ ಮುಳುಗಿದೆ. ನನ್ನ ಕೈಜಾರಿ ಹೊರಬಿದ್ದ ಅದು ಉರುಳುತ್ತ ಆಶ್ಚರ್ಯವೆಂಬಂತೆ ಬೆಂಚಿನ ಕೆಳಕ್ಕೆ ಹೋಯಿತು. ಕೆಳಗೆ ಬಗ್ಗಿದ ನಾನು ಷ್ಮೆಲ್ಕೆಯ ಬೂಟ್‌ಗಳನ್ನು ನೋಡಿದೆ. ತೂಗುಬಿದ್ದ ದೀಪದ ಒಳ್ಳೆ ಬೆಳಕಿನಲ್ಲಿ ನಾನು ಅವುಗಳನ್ನು ನೋಡಿದೆ. ಧೂಳು ತುಂಬಿ ದೊಡ್ಡದಾಗಿ ಅಸಹ್ಯಾಕಾರವಾಗಿದ್ದ ಅವು ದಪ್ಪ ಚರ್ಮದಿಂದ ಮಾಡಿದ್ದವು. ಮುಂಭಾಗ ಅಗಲವಾಗಿ ಹಿಮ್ಮಡಿ ಸವೆದಿದ್ದವು. ಅವುಗಳಿಂದ ಕುದುರೆ ಲದ್ದಿಯಂಥ ವಾಸನೆ ಬರುತ್ತಿದೆ ಎನಿಸಿತ್ತು ನನಗೆ. ಹೌದು, ಅವು ನಿಜವಾಗಿಯೂ ಎಬಡ

ಬೂಟ್‌ಗಳೇ ಎಂದುಕೊಂಡೆ. ತಂದೆಯವರು ಕೆಳಗೆ ನೋಡುತ್ತಾ ಕೇಳಿದರು "ಏನಾದರೂ ಬೀಳಿಸಿಕೊಂಡೆಯಾ?"

"ನನ್ನ ಗ್ರೋಷನ್, ಸಿಕ್ತು" ನನ್ನನ್ನು ನಾನು ಸಂಬಾಳಿಸಿಕೊಳ್ಳುತ್ತ ನಕ್ಕೆ.

ನಾನು ಎದ್ದು ನಿಂತಾಗ ಷ್ಮೆಲ್ಕೆ ಕೇಳಿದ "ಗ್ರೋಷನ್ ಎಲ್ಲಿ ಸಿಕ್ತು ನಿನಗೆ? ಬೀದೀಲಿ ಬಿದ್ದಿದ್ದು ಸಿಕ್ಕಿತಾ?"

"ಅಮ್ಮ ನಂಗೆ ಕೊಟ್ಟಿದ್ದರು."

"ಈ ಕಾಲದಾಗೆ ಒಂದು ಗ್ರೋಷನ್‌ಗೆ ಏನು ಬರುತ್ತೆ ? ಇರು, ನಾನು ನಿನಗೆ ಒಂದು ಕೊಪೆಕ್ ಕೊಡ್ತೀನಿ.'

"ರೆಬ್ ಷ್ಮೆಲ್ಕೆ, ಅವನಿಗೆ ದುಡ್ಡು ಕೊಡಬೇಡಿ" ತಂದೆಯವರು ಹೇಳಿದರು.

"ಇದು ದೊಡ್ಡ ಪೇಟೆ. ಇಲ್ಲಿ ಮಕ್ಕಳಿಗೆ ದಿನವೂ ದುಡ್ಡು ಕೊಡೊಂಥ ರೂಢಿ ಇದೆ. ತೊಮಜೋವ್‌ನಲ್ಲಿ ನಾವು ಇಂಥದನ್ನ ಕೇಳಿರಲೇ ಇಲ್ಲ. ಜೆತ್ರೋರು ತಮ್ಮ ಅಳಿಯ ಮೋಸೆಸ್ ಅವರಿಗೆ ಮರುಭೂಮೀಲಿ ಬುದ್ಧಿ ಮಾತುಗಳನ್ನ ಹೇಳುವಾಗ ಸತ್ಯ ಹೇಳೋ ಮನುಷ್ಯರ ಹತ್ತಿರವೇ ಇರು, ದೇವರಿಗೆ ಭಯ ಪಡು, ಜಿಪುಣತನವನ್ನ ವಿರೋಧಿಸು ಅಂತ ಹೇಳಿದರು. ಹಣದ ಬಯಕೆ ಇರೋ ಅಂಥವರು ಸುಲಭವಾಗಿ ಲಂಚಗುಳಿಗಳಾಗ್ತಾರೆ. ಎಷ್ಟೋ ಅಪರಾಧಗಳು ನಡೆಯೋದು ಹಣದ ದುರಾಸೆಯಿಂದ."

"ಈ ಮಾತನ್ನ ನೀವು ನನ್ನ ಸಲ್ಕಾಳಿಗೆ ಹೇಳಬೇಕು ರಬಾಯಿಯವರೇ, ಎಷ್ಟೋ ಸಲ ಇವಳು ಒಂದು ಗ್ರೋಷನ್‌ಗಾಗಿ ತನ್ನನ್ನೇ ಕೊಂದುಕೊಳ್ತಾಳೆ. ಆಗಲೇ ಹೇಳಿದೆನಲ್ಲ, ನಮಗೊಬ್ಬ ಪೈಪೋಟಿಯೋನೂ ಇದಾನೆ. ಅವನು ವ್ಯಾಪಾರದಲ್ಲೂ ಕುದುರಿಕೊಂಡಿದಾನೆ ಅಂತ. ಇದು ಅದೃಷ್ಟದ ವಿಷಯವೂ ಹೌದು. ಆದರೆ ಹೊಟ್ಟೆಕಿಚ್ಚಿಗೆ ಏನು ಮಾಡೋದು ? ಅವನು ಹೇಗೆ ಇಷ್ಟೆಲ್ಲ ಮಾಡಿಕೊಂಡ ಅಂತ ನೋಡಿದಾಗ ಇವಳು ತನ್ನ ಜೀವಾನೆ ತಿಂದ್ಕೋತಾಳೆ. ಇವಳು ಅವನಿಗೆ ಶಾಪ ಹಾಕ್ತಾಳೆ. ಅವನ ಹೆಂಡತಿಗೆ ಅವಳು ಸತ್ತುಹೋಗಲಿ ಅನ್ನೋಂಥ ಶಾಪ ಹಾಕ್ತಾಳೆ. ಪ್ರತಿದಿನ ಸಾಯಂಕಾಲ ಹೊಟ್ಟೆ ಉರುಸಿಕೊಳ್ಳುತ್ಲೇ ಮನೆಗೆ ಬರ್ತಾಳೆ. ರಬಾಯಿಯವರೇ, ಈ ಹುಡುಗನಿಗೆ ಒಂದು ಕೊಪಕ್ ಕೊಡೋದಕ್ಕೆ ಒಪ್ಪಿಕೊಳ್ಳಿ. ಒಂದು ನಾಣ್ಯ ಇವನನ್ನ ಆಸೆಬುರುಕನನ್ನಾಗಿ ಮಾಡೋಲ್ಲ."

"ನಿಜವಾಗಿಯೂ, ಅವನಿಗೆ ಅದೇನೂ ಬೇಕಿಲ್ಲ."

ಷ್ಮೆಲ್ಕೆ ಎದ್ದು ನಿಂತು ತನ್ನ ಕಿಸೆಗಳಲ್ಲಿ ಕೈಹಾಕಿ ಹುಡುಕಿದ. ಆದರೆ ಒಂದು ಕೊಪೆಕ್ ಕೂಡ ಸಿಕ್ಕಲಿಲ್ಲ. ಬದಲಿಗೆ ಒಂದು ಬಟನ್, ತುಂಡುದಾರ ಮತ್ತು ದೊಡ್ಡದೊಂದು ಕೀಲಿ - ಬಹುಶಃ ಅವರ ಅಂಗಡಿಯದಿರಬೇಕು ಹೊರ ತೆಗೆದ. "ಸಲ್ಕ ಎಲ್ಲವನ್ನೂ ಹೊರಕ್ಕೆ ತಕ್ಕೊಂಡಿರಬೇಕು.' ಅವನು ಹೇಳಿದ. "ಅವಳು ನನ್ನ ಜೇಬುಗಳನ್ನೆಲ್ಲ ಕೊಡವ್ತಾಳೆ. ನನ್ನನ್ನ ನಂಬು ಮರಿ. ಇನ್ನೊಂದು ಸಲ ಕೊಡ್ತೀನಿ."

"ಇರಲಿ ಬಿಡಿ ಪರವಾಗಿಲ್ಲ" ನಾನು ಹೇಳಿದೆ. ಅಡುಗೆ ಕೋಣೆಯತ್ತ ವಾಪಸ್ ಬಂದೆ.

ಅಲ್ಲಿ ನನ್ನ ತಾಯಿಯವರು ಹೇಳುತ್ತಿರುವುದು ಕೇಳಿತು. "ನೀನು ಕೆಲಸದೋಳು, ಮಕ್ಕಳ ನೋಡಿಕೊಳ್ಳೋ ಆಯಾ ಅವರನ್ನ ನೆಚ್ಕೋಕೆ ಆಗೋಲ್ಲ. ಅವರೆಲ್ಲ ಹೊರಗಿನವರು. ಅವರು ಏನು ಮಾಡೋದಾದರೂ ದುಡ್ಡಿಗಾಗಿ ಮಾಡ್ತಾರೆ. ಅವರಲ್ಲಿ ತಾಯಿಯ ಸೆಳೆತ ಇರೋದಿಲ್ಲ. ಮಕ್ಕಳು ಯಾವಾಗಲೂ ಏನಾದರೂ ಮಾಡುತ್ತಲೇ ಇರುತ್ವೆ. ಬೀಳುತ್ವೆ. ಕುರ್ಚಿಗೆ ತಲೆ ಹೊಡಕೊಳ್ಳುತ್ವೆ. ಕಿಟಕಿ ಕಂಬಿ ಹಿಡಿದು ಹತ್ತುತ್ವೆ. ಉರಿಯೋ ಸ್ಟವ್ ಹತ್ತಿರ ಹೋಗುತ್ವೆ. ಮಕ್ಕಳನ್ನ ಬಿಟ್ಟು ಹೋದಾಗ ಅವು ಏನೂ ಮಾಡಿಕೊಂಡಿಲ್ಲ ಅನ್ನೋದನ್ನ ಕೇಳದಂಗಿರೋದು ಈ ದಿನಗಳಲ್ಲಿ ಇಲ್ಲವೇ ಇಲ್ಲ."

"ರಬಾಯಮ್ಮಾರೇ, ಅವರು ತಮ್ಮ ಪಾಡಿಗೆ ತಾವು ಬೆಳೆಯೋಕೆ ಯಾಕೆ ಬಿಡಬಾರದು ? ನಾನು ನನ್ನ ತಾಯಿಗೆ ಹೇಳಿದಾಗ - ಅವಳೇ ನಮ್ಮ ನಡುವೆ ಮಧ್ಯಸ್ಥಿಕೆ ವಹಿಸಿದ್ದು - ನಾನು ಷ್ಮೆಲ್ಕೆ ಮದುವೆಯಾಗ್ತೀನಿ ಅಂದಾಗ ಆಕೆ ಹೇಳಿದಳು, ಮಗಳೇ ನಿನ್ನ ತಲೇನ ನೀನೇ ಈಳಿಗೆ ಮಣೆಗೆ ಕೊಡ್ತಿದೀಯ."

* * * *

ಇದಾದ ನಾಲ್ಕು ವಾರಗಳಿಗೆ ಸರಿಯಾಗಿ ನಮ್ಮ ಮನೆಯಲ್ಲಿ ಈ ವಿಚ್ಛೇದನ ನಡೆಯಿತು. ಒಕ್ಕಣಿಕೆಗಾರ ತನ್ನ ಲೇಖನಿಯಿಂದ ಈ ವಿಚ್ಛೇದನ ಪತ್ರ ಬರೆದು ಇದಕ್ಕೆ ಇಬ್ಬರು ಸಾಕ್ಷಿಗಳು ತಮ್ಮ ರುಜು ಹಾಕಿದಾಗ ನಾನು ಅಲ್ಲಿಯೇ ಇದ್ದೆ. ನನ್ನ ತಂದೆ ತಮ್ಮ ಒಂದು ದೊಡ್ಡ ಗ್ರಂಥದಿಂದ ಷ್ಮೆಲ್ಕೆಗೆ ಓದಿ ಹೇಳಿದರು. "ಎಲಿಜರ್ ಮೋಷೆಯ ಮಗನಾದ ಷ್ಮೆಲ್ ಮಯೆರ್ ಅಲ್ಟರ್, ನಾನು ಹೇಳೋದನ್ನ ಕೇಳು.

ನಿನ್ನ ಹೆಂಡತಿ ಸಾರಾ ಸಲ್ಕಾಳ ವಿಚ್ಛೇದನಕ್ಕೆ ಯಾರಾದರೂ ನಿನಗೆ ಬಲವಂತದಿಂದ ಒತ್ತಾಯ ಮಾಡಿದಾರೆಯೇ? ಮಾಡದಿದ್ದರೆ ಇಲ್ಲ ಅನ್ನು."

"ಇಲ್ಲ."

"ಈ ವಿಚ್ಛೇದನವನ್ನು ನೀನು ಅವಳಿಗೆ ಅವಳ ಹೆಸರಿನಲ್ಲಿ ಕೊಡ್ತಿರೋದು ವಿಚ್ಛೇದನ ನಿಯಮಾವಳಿಗಳ ಹಾಗೆ ತಾನೆ? ಒಪ್ಪಿಗೆಯಿದ್ದರೆ ಹೌದು ಎನ್ನಬೇಕು."

"ಹೌದು."

ವಿಚ್ಛೇದನ ಪತ್ರವನ್ನು ಷ್ಮೆಲ್ಕೆ ತನ್ನ ಕೈಯಿಂದ ಸಲ್ಕಾಳ ಕೈಗೆ ಕೊಡುವಾಗ ಇವನು ಕೆಳಗೆ ಕುಸಿದು ಬಿದ್ದು ಒಡಕು ದನಿಯಲ್ಲಿ ಅಳಲಾರಂಭಿಸಿದ್ದ. ತಂದೆಯವರು ಸಲ್ಕಾಳಿಗೆ ಹೇಳಿದ್ದರು. "ತೊಂಬತ್ತು ದಿನಗಳವರೆಗೆ ನೀನು ಮರುಮದುವೆ ಆಗೋ ಹಾಗಿಲ್ಲ."

ಸಲ್ಕ ಹೇಳಿದ್ದಳು, "ನಾನೇನು ಈ ತಕ್ಷಣವೇ ಮದುವೆ ಹಸೆಮಣೆಗೆ ಓಡಿ ಹೋಗಲ್ಲ. ಸಾವಿನ ದೇವತೆ ಮಾತ್ರ ನನ್ನನ್ನ ಕರಕೊಳ್ಳಬೇಕು" ಇವಳು ಅಳಲಾರಂಭಿಸಿದ್ದಳು. ತನ್ನ ತಲೆಯನ್ನು ಕೈಗಳಲ್ಲಿ ಹಿಡಿದುಕೊಂಡು ಬಾಗಿಲ ಕಡೆಗೆ ಓಡಿದ್ದಳು. ನನ್ನ ತಾಯಿಯವರು ಇವಳ ಹಿಂದೆಯೇ ಸರ್ರನೆ ಹೋಗಿದ್ದರು. ಸಲ್ಕ ತನ್ನ ಪಾಕೆಟ್ ಪುಸ್ತಕ ಮತ್ತು ಡೈವೋರ್ಸ್ ಪತ್ರವನ್ನು ಟೇಬಲ್ ಮೇಲೆಯೇ ಬಿಟ್ಟಿದ್ದಳು. ನನ್ನ ಬಾಯಲ್ಲಿ ಆಗ ಒಂದು ಕಲ್ಲುಗುಂಡು ಇರುವಂತೆ ಭಾಸವಾಗಿತ್ತು. ಒಬ್ಬ ಮನುಷ್ಯ ತನ್ನ ಮೊದಲ ಹೆಂಡತಿಗೆ ವಿಚ್ಛೇದನ ಕೊಟ್ಟಾಗ ಬಲಿಪೀಠ ಯಾಕೆ ಹನಿಗಳನ್ನ ಹನಿಸುತ್ತೆ ಎಂದು ಮೊದಲ ಸಲ ನನಗೆ ತಿಳಿದಿತ್ತು.

ಈ ಡೈವೋರ್ಸ್ ಆದ ಮೇಲೆ ಷ್ಮೆಲ್ಕೆಯನ್ನಾಗಲೀ, ಸಲ್ಕಾಳನ್ನಾಗಲೀ ನಾನು ಮತ್ತೆ ನೋಡಲಿಲ್ಲ. ಆದರೆ ಈ ದಂಪತಿಗಳ ಪರಿಚಯವಿದ್ದ ನಮ್ಮ ನೆರಮನೆಯ ಹೆಂಗಸೊಬ್ಬಳು ನನ್ನ ತಾಯಿಗೆ ಆಮೇಲೆ ನಡೆದಿದ್ದ ಘಟನೆಗಳನ್ನು ಹೇಳಿದ್ದಳು. ಷ್ಮೆಲ್ಕೆ ತನ್ನ ಅಂಗಡಿಯನ್ನು ಸಲ್ಕಾಳಿಗೆ ಕೊಟ್ಟಿದ್ದನಂತೆ. ಆದರೆ ವಾರಗಳು ಉರುಳಿದರೂ ಅಲ್ಲಿಂದ ಯಾರೂ ಏನನ್ನೂ ಕೊಳ್ಳಲಿಲ್ಲವಂತೆ. ಸಲ್ಕ ಎಲ್ಲ ಮಾಲನ್ನೂ ತೀರ ಕಡಿಮೆ ಬೆಲೆಗೆ ಮಾರಿ ಅಂಗಡಿ ಮುಚ್ಚಿದಳಂತೆ. ಷ್ಮೆಲ್ಕೆ ಮರುಮದುವೆಯಾದನಂತೆ. ಇವನ ಹೊಸ ಹೆಂಡತಿ ಸ್ವಲ್ಪ ವಯಸ್ಸಾದ ಹುಡುಗಿಯಂತೆ. ಅವರು ಇನ್ನೊಂದು ಅಂಗಡಿ

ಇಟ್ಟರಂತೆ. ಸಲ್ಮ ಯಾವ್ಯಾವುದರಲ್ಲಿ ವಿಫಲಳಾಗಿದ್ದಳೋ ಆ ಎಲ್ಲದರಲ್ಲೂ ಈ ಹೊಸ ಜೋಡಿ ಫಲ ಕಂಡರಂತೆ. ಈ ಅಂಗಡಿ ಯಾವಾಗಲೂ ಗಿರಾಕಿಗಳಿಂದ ತುಂಬಿರುತ್ತಿತ್ತಂತೆ. ಯಾರೂ ಇವರಿಗೆ ಕೊಂಕು ಮಾತನ್ನು ಆಡುವುದಿಲ್ಲವಂತೆ. ಹೊಸ ಹೆಂಡತಿ ಷ್ಮೆಲ್ಕೇನ ಮೂರ್ಖ ಅಂತೇನೂ ತೀರ್ಮಾನಿಸಿಕೊಂಡಿಲ್ಲವಂತೆ. ಅವಳ ಪ್ರಕಾರ ಇವನು ಒಬ್ಬ ಸಾಧು ಥರವಂತೆ. ನಮ್ಮ ನೆರಮನೆಯವಳು ಇದನ್ನೆಲ್ಲ ಹೇಳಿದಳು. ಹೊಸ ಹೆಂಡತಿ ಸುಂದರಿಯಲ್ಲವಂತೆ, ಗುಡಾಣ ಹೂ ಕುಂಡದ ಥರ ಕುಳ್ಳಂತೆ - ಆದರೆ ಹಗಲು ಬೆಳಕಿನಷ್ಟೇ ಒಳ್ಳೆ ಸುಸ್ವಭಾವದವಳಂತೆ. ಷ್ಮೆಲ್ಮೆ ಹೇಳುವ ಒಂದೊಂದು ಮಾತನ್ನೂ ಪಾಲಿಸುತ್ತಾಳಂತೆ. ಅವನು ನಡೆಯುವ ನೆಲಕ್ಕೆ ಮುತ್ತಿಡುತ್ತಾಳಂತೆ. "ಎಲ್ಲ ಯಹೂದಿ ಹೆಣ್ಣುಮಕ್ಕಳೂ ಹಾಗಿರಲಿ ಅಂತಲೇ ನಾನು ಹಾರೈಸೋದು" ಈ ನೆರಮನೆಯವಳು ಹೇಳಿದ್ದಳು.

"ಮಕ್ಕಳು ಹೇಗಿವೆ?" ನನ್ನ ತಾಯಿ ಕೇಳಿದ್ದರು. "ಅವನು ಅವರನ್ನ ನೋಡೋಕೆ ಹೋಗ್ತಾನೆಯೇ?"

"ವಾರಕ್ಕೆ ಮೂರು ಸಲ ಅವನ್ನ ನೋಡ್ತಾನೆ. ದಿನ ಬಿಟ್ಟು ದಿನ."

"ಇದು ಮಾತ್ರ ಒಳ್ಳೆದಾಗಲಿಲ್ಲ ಬಿಡು" ನನ್ನ ತಾಯಿ ಸ್ವಲ್ಪ ಅನುಮಾನದಲ್ಲಿ ಹೇಳಿದರು.

"ರಬಾಯಮ್ಮ, ಅವನು ಆ ಮಕ್ಕಳನ್ನ ತನ್ನ ಜೀವದಂಗೆ ಪ್ರೀತಿಸ್ತಾನೆ. ಇವಕ್ಕಾಗಿ ತನ್ನ ಜೀವಾನೇ ತೇದುಕೊಳ್ತಾನೆ."

"ಸಲ್ಮ ಯಾಕೆ ಮತ್ತೆ ಮದುವೆಯಾಗಲಿಲ್ಲ" ತಾಯಿಯವರು ಕೇಳಿದರು.

"ಅವಳು ಒಳ್ಳೆಯವನಿಗೆ ಎದುರು ನೋಡ್ತಿದಾಳೆ. ಆದರೆ ಇಂಥ ಬಜಾರೀನ ಒಳ್ಳೆಯವರು ಯಾರಾದರೂ ಕಟ್ಟಿಕೊಳ್ತಾರೆಯೋ ? ಜೊತೆಗೆ ಮೂರು ಮಕ್ಕಳು ಇರೋಳನ್ನ" ನೆರಮನೆಯವಳು ಹೇಳಿದಳು. "ಆದರೆ ಚಿಂತೆ ಮಾಡೋ ಅಂಥದೇನಿಲ್ಲ. ಷ್ಮೆಲ್ಕೆ ಅವರನ್ನ ಹೇಗೋ ಚೆನ್ನಾಗಿ ಸಲಹ್ತಿದಾನೆ. ಅವರಿಗೆ ಉಡುಗೊರೆಗಳನ್ನ ಒಯ್ತಿರ್‍ತಾನೆ. ಅವನು ಪ್ಯಾಕೆಟ್, ಬಾಕ್ಸ್‌ಗಳಿಲ್ಲದೆ ಹೋಗೋದನ್ನ ನಾನು ಬೀದೀಲಿ ಒಂದು ಸಲವೂ ನೋಡಿಲ್ಲ. ಇಷ್ಟಿಲ್ಲದೆ 'ಒಂದು ಒಳ್ಳೆ ಹಸು ತನಗಾಗಿಯೇ ಹಾಲು ಕರೆದುಕೊಳ್ಳೋಲ್ಲ' ಅನ್ನೋ ಮಾತು ಬಂದಿದೆಯೇ?"

"ಸಲ್ಕ ಯಾರಾದರೂ ಕೆಲಸದೋಳನ್ನ ಇರಿಸಿಕೊಂಡಿದಾಳೆಯೇ?" ತಾಯಿ ಕೇಳಿದರು. "ಅವನು ಹೋದಾಗ ಅಲ್ಲಿ ಯಾರಾದರೂ ಇರ್‍ತಾರೆಯೇ!"

"ನನಗೆ ಗೊತ್ತಿರೋ ಹಾಗೆ ಅವಳು ಕೆಲಸದೋಳನ್ನೇನೂ ಇರಿಸಿಕೊಂಡಿಲ್ಲ. ಬರೋದಕ್ಕೆ ಹೊರಗೆ ಅಂಗಡಿಯೂ ಇಲ್ಲ. ಮಕ್ಕಳನ್ನ ನೋಡಿಕೊಂಡು ಮನೇಲೆ ಇರ್‍ತಾಳೆ."

"ಇದು ಮಾತ್ರ ಒಳ್ಳೆದಾಗಲಿಲ್ಲ ಬಿಡು" ತಾಯಿಯವರು ಮತ್ತೆ ಹೇಳಿದರು.

"ಮನುಷ್ಯರ ಜೀವನ ಈಗ ನಂಬಿಕೆ ಮೇಲೆ ಆಧರಿಸಿಲ್ಲ. ಕೆಟ್ಟಮಾರಿ ಯಾವಾಗ ಬೇಕಾದರೂ ತನ್ನ ಪ್ರಲೋಭನೇಲಿ ಸಿಲುಕಿಸ್ತಾಳೆ."

ನೆರೆಮನೆಯವಳು ತನ್ನ ಬಾಯಿಯ ಮೇಲೆ ಹೊಡೆದುಕೊಂಡಳು. "ನಿಜ, ಆದರೆ ಕೆಲಸದವರು ತುಂಬ ಸಂಬಳದೋರು. ಸುಧಾರಿಸೋದು ಕಷ್ಟ. ಇಷ್ಟಲ್ಲದೆ 'ಗೆಹನ್ನಾದಲ್ಲಿ ತನಗೆ ತಾನೇ ಬೆಂಕಿ ಹೊತ್ತಿಸಿಕೊಳ್ಳಬೇಕು' ಅನ್ನೋ ಮಾತು ಬಂದಿದೆಯೇ?"

ಆ ಹೆಂಗಸು ರೆಪ್ಪೆಗಳನ್ನು ಪಿಳಿಪಿಳಿ ಬಡಿದಳು, ನಿಟ್ಟುಸಿಟ್ಟಳು. ತಲೆದೂಗಿದಳು. ಆಮೇಲೆ ನಮ್ಮ ಅಡುಗೆ ಕೋಣೆಯಿಂದ ಹೊರಟಳು. ತಾಮ್ರಪಟಕ್ಕೆ ಎರಡೆರಡು ಸಲ ಮುತ್ತಿಟ್ಟಳು.

ಯೆಂತಲ್ - *ಯಶೀವಾ ಹುಡುಗ*

ತನ್ನ ತಂದೆಯ ಸಾವಿನ ನಂತರ ಯೆಂತಲ್‌ಳು ಯನೇವಾದಲ್ಲಿಯೇ ಉಳಿದಿರಬೇಕು ಎನ್ನಲು ಯಾವ ಕಾರಣಗಳೂ ಇರಲಿಲ್ಲ. ಇಡೀ ಮನೆಯಲ್ಲಿ ಅವಳೊಬ್ಬಳೇ ಒಬ್ಬೊಂಟಿಯಾಗಿದ್ದಳು. ಬಾಡಿಗೆದಾರರು ಬಾಡಿಗೆ ಕೊಟ್ಟು ಮನೆಗೆ ಬರಲು ಆಗಲೇ ಸಿದ್ಧರಾಗಿದ್ದರು ; ಮದುವೆ ದಲ್ಲಾಳಿಗಳು ಮನೆ ಬಾಗಿಲು ಬಡಿಯುತ್ತ ಲುಬ್ಲಿನ್, ತೊಮಷೆವ್, ಜಮೋಸ್ಕ್‌ಗಳಿಂದ ಸಂಬಂಧಗಳಿಗಾಗಿ ಕೇಳುತ್ತಿದ್ದಾರೆ ಎನ್ನುತ್ತಿದ್ದರು. ಆದರೆ ಯೆಂತಲ್ ಮದುವೆಯಾಗಲು ಸಿದ್ಧಳಾಗಿರಲಿಲ್ಲ. ಅವಳಲ್ಲಿ ಒಳದನಿಯೊಂದು ಮತ್ತೆ ಮತ್ತೆ ಹೇಳುತ್ತಿತ್ತು : 'ಇಲ್ಲ!' ಮದುವೆ ಆದ ಮೇಲೆ ಒಬ್ಬಳು ಹುಡುಗಿಯಾಗಿಯೇ ಇರುತ್ತಾಳೇನು ? ಮಕ್ಕಳನ್ನು ಹೆರುವುದು ಮತ್ತು ಅವುಗಳನ್ನು ಪಾಲನೆ ಮಾಡುವುದರಲ್ಲಿ ಮುಳುಗಿಕೊಳ್ಳುತ್ತಾಳೆ, ಅವಳ ಅತ್ತೆಯ ಹಿಡಿತವೂ ಅವಳ ಮೇಲಿರುತ್ತದೆ. ತಾನು ಹೆಣ್ಣಿನ ಜೀವನವನ್ನು ಕಡಿದುಕೊಳ್ಳಲಾಗುವುದಿಲ್ಲ ಎನ್ನುವುದನ್ನು ಯೆಂತಲ್ ತಿಳಿದಿದ್ದಳು. ಅವಳು ಹೊಲಿಗೆ ಕೆಲಸ ಮಾಡುತ್ತಿರಲಿಲ್ಲ, ಹೆಣಿಗೆಯ ಕಸೂತಿಯನ್ನೂ ಹಾಕುತ್ತಿರಲಿಲ್ಲ, ಅಡಿಗೆ ಬೇಯಿಸುವುದು ಮತ್ತು ಹಾಲು ಕಾಯಿಸುವುದನ್ನು ಮಾಡುತ್ತಿದ್ದಳು, ಅಷ್ಟೇ. ಅವಳ ಸಬ್ಬತ್ ಯಾವಾಗಲೂ ಸರಿಯಾಗಿ ಆಗುತ್ತಿರಲಿಲ್ಲ. ಅವಳ ಚಲ್ಲಾ ಬ್ರೆಡ್‌ಗಳು ಯಾವಾಗಲೂ ದುಂಡಾಗಿ ಊದಿಕೊಳ್ಳುತ್ತಿರಲಿಲ್ಲ. ಯೆಂತಲ್ ಹೆಂಗಸರೊಡನೆ ಗಂಡಸರ ಆಟಗಳನ್ನು ಆಡುತ್ತಿದ್ದಳು. ಚಿರಶಾಂತಿಯಲ್ಲಿ ನೆಲೆಸಿರುವ ಇವಳ ತಂದೆ ರೆಬ್ ತೊಡ್ರೋಸ್ ಹಾಸಿಗೆ ಹಿಡಿದು ಮಲಗಿ ಕಳೆದ ಹಲವು ವರ್ಷಗಳಿಂದ ಮಗಳೊಡನೆ ತೋರಾ ಓದುತ್ತ ಇವಳನ್ನು ಮಗನೆಂದೇ ತಿಳಿದಿದ್ದರು. ಇವರು ಯೆಂತಲ್‌ಳಿಗೆ ಬಾಗಿಲಿಗೆ ಬೀಗ ಹಾಕಿ ಕಿಟಕಿಗಳಿಗೆ ಬಟ್ಟೆಗಳನ್ನು ಇಳಿಬಿಡಲು ಹೇಳುತ್ತಿದ್ದರು. ನಂತರ ಇಬ್ಬರೂ ಪೆಂಚತ್ಯೂಕ್, ಮಿಷ್ನ, ಗೆಮಾರಾ ಮತ್ತು ಇವುಗಳ ಟೀಕೆಗಳನ್ನು ಓದುವುದರಲ್ಲಿ ಮುಳುಗುತ್ತಿದ್ದರು. ಇವಳು ಒಬ್ಬ ಶಿಷ್ಯನಂತೆ ಠೀಕಾಗಿರುತ್ತಿದ್ದು, ಇವಳ ತಂದೆಯೂ ಹೀಗೆಯೇ ಕರೆಯುವಂತಾಗಿತ್ತು :

'ಯೆಂತಲ್ - ನೀನು ಗಂಡಸಿನ ಆತ್ಮ ಹೊಂದಿದೀಯ.'

'ಹಾಗಿದ್ದರೆ ನಾನು ಹೆಣ್ಣಾಗಿ ಯಾಕೆ ಹುಟ್ಟಿದೆ?'

'ಸ್ವರ್ಗಲೋಕದಲ್ಲಿಯೇ ಏನೋ ತಪ್ಪಾಗಿರಬಹುದು.'

ಹೀಗೆನ್ನಲು ಯಾವ ಅನುಮಾನವೂ ಇರಲಿಲ್ಲ. ಯೆಂತಲ್‌ಳು ಯನೇವ್‌ನ ಬೇರೆ ಹುಡುಗಿಯರಂತಿಲಿಲ್ಲ - ಉದ್ದ, ತೆಳು, ಮೂಳೆ ಮೈ, ಸಣ್ಣ ಮೊಲೆಗಳು ಮತ್ತು ಕಿರಿದಾದ ಹಿಮ್ಮಡಿಗಳು. ಸಬ್ಬತ್‌ನ ಮಧ್ಯಾಹ್ನಗಳಲ್ಲಿ ಇವಳ ತಂದೆ ಮಲಗಿದ ನಂತರ ಇವಳು ತಂದೆಯ ಟ್ರೌಸರ್‌ನೊಂದಿಗೆ ನಿರಿಗೆ ಬಟ್ಟೆ ಇಳಿಬಿಟ್ಟುಕೊಂಡು, ರೇಷಿಮೆ ಕೋಟು ತೊಟ್ಟು, ತಲೆಟೊಪ್ಪಿಯೊಂದಿಗೆ ವೆಲ್‌ವೆಟ್ ಹ್ಯಾಟ್ ಹಾಕಿಕೊಂಡು ಕನ್ನಡಿಯ ಮುಂದೆ ನಿಂತು ಬಿಂಬವನ್ನು ಪರೀಕ್ಷಿಸುತ್ತಿದ್ದಳು ; ಕಪ್ಪನೆಯ ಹರೆಯದ ಸುಂದರ ತರುಣನಂತೆಯೇ ಕಾಣುತ್ತಿದ್ದಳು. ಮೇಲ್ತುಟಿಯ ಅಂಚಿನಲ್ಲಿ ಸಣ್ಣದಾಗಿ ಗೆರೆಯೂ ಇತ್ತು. ದಪ್ಪನೆಯ ಜಡೆಗಳಷ್ಟೇ ಇವಳ ಹೆಣ್ತನವನ್ನು ತೋರುತ್ತಿದ್ದವು - ಇವು ಇಲ್ಲಿಂದ ಹೋದುವೆಂದರೆ, ಕೂದಲು ಯಾವಾಗಲೂ ಕತ್ತರಿಸಲು ಬರುವಂಥವೇ. ಯೆಂತಲ್ ಹಗಲು ಮತ್ತು ರಾತ್ರಿಗಳಲ್ಲಿ ಆಗಲೇ ಒಂದು ಉಪಾಯವನ್ನೇ ಯೋಚಿಸ ತೊಡಗಿದ್ದಳು. ಇಲ್ಲ, ಇವಳು ಶಾವಿಗೆ ಮಣೆಯಲ್ಲಿ ಶಾವಿಗೆ ಹೊಸೆಯುವುದಿಲ್ಲ. ತಿನಿಸುಗಳನ್ನು ಬೇಯಿಸುವುದರಲ್ಲಿ ಮುಳುಗುವುದಿಲ್ಲ, ಅಥವಾ ಸಣ್ಣ ಹೆಂಗಸರೊಂದಿಗೆ ಹರಟೆ ಮಾತುಗಳಲ್ಲಿ ನಿಲ್ಲುವುದಿಲ್ಲ. ಇಲ್ಲವೇ ಕಟುಕರ ಮನೆಗೆ ಅಲೆದಾಡುವಂಥದರಲ್ಲಿ ಕಾಲ ಕಳೆಯುವುದಿಲ್ಲ. ಇವಳ ತಂದೆ ಇವಳಿಗೆ ಯಶೀವಾ ವಿದ್ಯಾರ್ಥಿಗಳ, ರಬಾಯಿಗಳ, ಗ್ರಂಥಗಳಲ್ಲಿ ಚಿರಸ್ಥಾನ ಪಡೆದಿರುವ ಹಲವರ ಸಾಕಷ್ಟು ಕತೆಗಳನ್ನು ಹೇಳಿದ್ದರು. ಇವಳ ತಲೆಯ ತುಂಬ ತಾಲಮೂದ್ ವಿವಾದಗಳು, ಪ್ರಶ್ನೆ ಮತ್ತು ಉತ್ತರಗಳು, ಜ್ಞಾನೋಕ್ತಿಯ ವಚನಗಳಂಥವು ತುಂಬಿಕೊಂಡಿದ್ದವು. ತಂದೆಯ ಉದ್ದ ಸಿಗಾರ್ ಕೊಳವೆಯಿಂದ ಇವಳು ರಹಸ್ಯವಾಗಿ ಧೂಮಪಾನವನ್ನೂ ಮಾಡುತ್ತಿದ್ದಳು.

ಯೆಂತಲ್ ದಲ್ಲಾಳಿಗಳಿಗೆ ಮನೆಯನ್ನು ಮಾರಾಟ ಮಾಡಿ ಕಲಿಷ್‌ನಲ್ಲಿರುವ ತನ್ನ ಚಿಕ್ಕಮ್ಮನ ಬಳಿ ಇರಲು ಹೋಗುವುದಾಗಿ ಹೇಳಿದಳು. ಇವಳ ಈ ಮಾತನ್ನು ನೆರಮನೆಯ ಹೆಂಗಸೊಬ್ಬಳು ತಡೆಯಲು ನೋಡಿದ್ದಳು. ಮದುವೆ ದಲ್ಲಾಳಿಗಳು ಇವಳು ತಮಾಷೆ ಮಾಡುತ್ತಿದ್ದಾಳೆ ಎಂದಿದ್ದರು. ಅನುರೂಪನಾದ ಹುಡುಗನನ್ನು ಮದುವೆಯಾಗಿ ಯನೇವಾದಲ್ಲಿಯೇ ಇರುವಂತೆ ಹೇಳಿದರು. ಆದರೆ ಯೆಂತಲ್ ಆಗಲೇ ನಿರ್ಧರಿಸಿಕೊಂಡಿದ್ದಳು. ಇವಳು ಎಷ್ಟು ಆತುರದಲ್ಲಿದ್ದಳು ಎಂದರೆ ಮೊದಲು ವ್ಯಾಪಾರಕ್ಕೆ ಕೇಳಲು ಬಂದವರಿಗೇ ಮನೆಯನ್ನು ಮಾರಾಟ ಮಾಡಿದಳು. ಮನೆ ಸಾಮಾನುಗಳನ್ನೆಲ್ಲ ಬಿಟ್ಟು, ಹಾಡೊಂದನ್ನು ಹೇಳತೊಡಗಿದ್ದಳು. ಇಡೀ ಆಸ್ತಿಯಿಂದ ತಾನು ಪಡೆದದ್ದು

ಒಂದುನೂರ ನಲವತ್ತು ರೂಬಲ್‌ಗಳು ಮಾತ್ರ ಎಂದು ಅರಿತಳು. ನಂತರ ಅವ್ ತಿಂಗಳ ಒಂದು ನಡುರಾತ್ರಿಯಲ್ಲಿ, ಇಡೀ ಯನೇವ್ ನಿದ್ದೆಯಲ್ಲಿ ಮುಳುಗಿದ್ದಾಗ, ಯೆಂತಲ್ ತನ್ನ ಜಡೆಗಳನ್ನು ಕತ್ತರಿಸಿಕೊಂಡಳು, ಕೆನ್ನೆಗಳಲ್ಲಿ ಕೆನ್ನೆಗೂದಲುಗಳನ್ನು ಬಿಟ್ಟುಕೊಂಡಳು. ತನ್ನ ತಂದೆಯ ಉಡುಪುಗಳನ್ನು ಧರಿಸಿದಳು. ಪ್ರಾರ್ಥನೆಯ ಸಾಮಗ್ರಿ ಮತ್ತು ತನ್ನ ಒಳಉಡುಪುಗಳನ್ನು ಒಂದು ಪೆಟ್ಟಿಗೆಯಲ್ಲಿ ತುಂಬಿಕೊಂಡಳು. ಲುಬ್ಲಿನ್ ದಾರಿಯಲ್ಲಿ ನಡೆಯುತ್ತ ಹೊರಟಳು.

ಹೆದ್ದಾರಿಯಲ್ಲಿ ಯೆಂತಲ್ ಒಂದು ಗಾಡಿಯನ್ನು ಹಿಡಿದು ಕೂತು ಜಮೋಸ್ಕ್‌ವರೆಗೆ ಹೋದಳು. ಅಲ್ಲಿಂದ ಮತ್ತೆ ಕಾಲುನಡಿಗೆಯಲ್ಲಿ ಹೊರಟಳು. ದಾರಿಯಲ್ಲಿ ಒಂದು ಛತ್ರದಲ್ಲಿ ತಂಗಿದಳು. ತನ್ನ ಹೆಸರನ್ನು ಇಲ್ಲಿ ಅನ್ಶೆಲ್ ಎಂದು ಹೇಳಿದಳು. ತೀರಿಹೋಗಿದ್ದ ತನ್ನ ಚಿಕ್ಕಪ್ಪನ ಹೆಸರನ್ನು ತನಗೆ ಕರೆದುಕೊಂಡಳು. ಛತ್ರವಿಡೀ ಸುಪ್ರಸಿದ್ಧ ರಬಾಯಿಗಳ ಬಳಿಗೆ ಅಧ್ಯಯನಕ್ಕೆಂದು ಹೋಗುತ್ತಿದ್ದ ಹರೆಯದ ಹುಡುಗರಿಂದ ತುಂಬಿಕೊಂಡಿತ್ತು. ಕೆಲವರು ಯಶೀವಾಗಳಲ್ಲಿ ಅಧ್ಯಯನ ನೀಡಲು ಎಂಥ ಮೌಲ್ಯಗಳನ್ನು ಇರಿಸಿಕೊಂಡಿದ್ದಾರೆ ಅನ್ನುವುದನ್ನು ಚರ್ಚಿಸುತ್ತಿದ್ದರು, ಹಲವರು ಲಿಥುವಿನಿಯಾದ ಯಶೀವಾಗಳನ್ನು ಪ್ರಶಂಸೆ ಮಾಡುತ್ತಿದ್ದರೆ ಉಳಿದವರು ಪೋಲೆಂಡ್‌ನಲ್ಲಿ ಆಳವಾದ ಅಧ್ಯಯನಕ್ಕೆ ಅವಕಾಶವಿದ್ದು, ಊಟ ಮತ್ತು ವಸತಿಯೂ ಉತ್ತಮವಾಗಿದೆ ಎನ್ನುತ್ತಿದ್ದರು. ಯೆಂತಲ್ ಮೊದಲಸಲ ಪ್ರಾಯದ ಹುಡುಗರ ಜೊತೆ ಕಳೆಯುತ್ತಿದ್ದಳು. ಹೆಂಗಸರ ಹರಟೆ ಮಾತುಗಳಿಗಿಂತ ಇವರ ಈ ಮಾತುಗಳು ಎಷ್ಟು ಬೇರೆಯಾಗಿವೆ ಎಂದು ಯೋಚಿಸಿದಳು. ಆದರೆ ಇವರ ಮಾತುಗಳಲ್ಲಿ ಜೊತೆಗೂಡಲು ಹಿಂಜರಿದಳು. ಒಬ್ಬ ಪ್ರಾಯದವನು ತನಗೆ ಎಂತಹ ಬಾಳಸಂಗಾತಿ ಬೇಕು ಮತ್ತು ಎಷ್ಟು ವರದಕ್ಷಿಣೆ ಪಡೆಯಬಹುದು ಅನ್ನುವುದರ ಚರ್ಚೆಯಲ್ಲಿದ್ದ, ಇನ್ನೊಬ್ಬ ಇಲ್ಲೇ ಸಮೀಪದಲ್ಲಿ ಪುರೀಮ್‌ನ ರಬಾಯಿ ತೋರಾ ಓದುವ ರೀತಿಯನ್ನು ಅಣಕ ಮಾಡುತ್ತ ಒಂದು ಅಧ್ಯಾಯವನ್ನು ವಾಚಿಸುತ್ತ ಅಭಿನಯಿಸುತ್ತಿದ್ದ. ಈ ಗುಂಪು ಒಂದು ಕ್ಷಣದ ನಂತರ ಶಕ್ತಿಪ್ರದರ್ಶನಕ್ಕೆ ಹೊರಳಿಕೊಂಡಿತು. ಒಬ್ಬ ಇನ್ನೊಬ್ಬನ ಮುಷ್ಟಿಯನ್ನು ಹಿಡಿದ. ಮತ್ತೊಬ್ಬ ಇನ್ನೊಬ್ಬನ ಕೈ ಹಿಡಿದು ಬಗ್ಗಿಸಲು ಯತ್ನಿಸಿದ. ಒಬ್ಬ ವಿದ್ಯಾರ್ಥಿ ತನ್ನ ಸಣ್ಣ ಚಾಕಿನಿಂದ ಬ್ರೆಡ್ ಕತ್ತರಿಸಿಕೊಂಡು ಚಮಚ ಬಳಸದೆ ಬ್ರೆಡ್ ಮತ್ತು ಟೀ ಸೇವಿಸುತ್ತಿದ್ದ. ಹೀಗಿದ್ದಾಗಲೇ ಗುಂಪೊಂದು ಯೆಂತಲ್‌ಳತ್ತ ಬಂದು ಇವಳ ಭುಜಕ್ಕೆ ತಟ್ಟಿ ಹೊಡೆಯಿತು :

'ಯಾಕೆ ಸುಮ್ಮನೇ ಇದೀಯ ? ನಿನಗೆ ನಾಲಿಗೆ ಇಲ್ಲವಾ?'

'ನಾನು ಮಾತಾಡೋ ಅಂಥದೇನೂ ಇಲ್ಲ.'

'ನಿನ್ನ ಹೆಸರೇನು?'

'ಅನ್ಷೆಲ್.'

'ನಾಚಿಕೊಳ್ಳತಿದೀಯ, ಹಾದಿ ಬದೀಲಿ ಇರಬೇಕಿದ್ದ ನೇರಳೆ ನೀನು.'

ತರುಣನೊಬ್ಬ ಯೆಂತಲ್‌ಳ ಮೂಗು ಹಿಡಿದೆಳೆದ. ಇದಕ್ಕೆ ಪ್ರತಿಯಾಗಿ ಅವನಿಗೆ ಹೊಡೆಯಬೇಕು ಅನ್ನಿಸಿತು, ಆದರೆ ಅವಳ ಕೈ ಮೇಲೆ ಏಳಲಿಲ್ಲ. ಅವಳ ಆಜ್ಞೆಯನ್ನೇ ನಿರಾಕರಿಸಿತು. ಯೆಂತಲ್ ಬಿಳಿಚಿಕೊಂಡಳು. ಎಲ್ಲರಿಗಿಂತ ಹಿರಿಯವನಾಗಿದ್ದ ಎತ್ತರದ, ತೆಳ್ಳನೆಯ, ಕೆಂಪುಕಂಗಳ ಕಪ್ಪುಗಡ್ಡದ ತರುಣನೊಬ್ಬ ಇವಳ ರಕ್ಷಣೆಗೆ ಬಂದ.

'ಏಯ್, ನೀನೇ. ನೀನು ಯಾಕೆ ಇವನಿಗೆ ಹೊಡೆದೆ?'

'ನಿನಗಿದು ಹಿಡಿಸದಿದ್ದರೆ ನೀನು ಇದನ್ನ ನೋಡಬೇಡ.'

'ನಿನ್ನ ಕೆನ್ನೆಗೂದಲು ಹಿಡಿದು ಎಳೀಬೇಕೇನು ?'

ಗಡ್ಡದ ತರುಣ ಯೆಂತಲ್‌ಳೊಂದಿಗೆ ಮಾತಿಗಿಳಿದ, ನಂತರ ಎಲ್ಲಿಂದ ಬರುತ್ತಿದ್ದೀಯ ಮತ್ತು ಎಲ್ಲಿಗೆ ಹೋಗುತ್ತಿದ್ದೀಯ ಎಂದು ಕೇಳಿದ. ಯೆಂತಲ್ ಒಂದು ಯಶೀವಾವನ್ನು ಹುಡುಕುತ್ತಿರುವುದಾಗಿ ಹೇಳಿದಳು, ಆದರೆ ಒಳ್ಳೆಯದಾಗಿರಬೇಕು ಎಂದಳು. ಗಡ್ಡದ ತರುಣ ತನ್ನ ಗಡ್ಡ ನೀವಿಕೊಂಡ.

'ಹಾಗಿದ್ದರೆ ನನ್ನ ಜೊತೆ ಬೆಷೆವ್‌ಗೆ ಬಾ.'

ಅವನು ಬೆಷೆವ್‌ಗೆ ನಾಲ್ಕನೆ ವರ್ಷದ ಅಧ್ಯಯನಕ್ಕೆ ಹೋಗುತ್ತಿರುವುದನ್ನು ವಿವರಿಸಿ ಹೇಳಿದ. ಅಲ್ಲಿನ ಯಶೀವಾ ಚಿಕ್ಕದು, ಮೂವತ್ತು ವಿದ್ಯಾರ್ಥಿಗಳು ಮಾತ್ರ ಇರುವಂಥದು. ಆದರೆ ಪೇಟೆಯಲ್ಲಿನ ಜನ ಇವರಿಗೆಲ್ಲ ವಸತಿ ಸೌಕರ್ಯ ನೀಡುತ್ತಾರೆ. ಊಟವಂತೂ ಹೆಚ್ಚಾಗಿಯೇ ದೊರೆಯುತ್ತದೆ ; ಮತ್ತು ಇಲ್ಲಿನ ಮನೆಯೊಡತಿಯರು ವಿದ್ಯಾರ್ಥಿಗಳ ಬಟ್ಟೆಗಳನ್ನು ತೊಳೆದುಕೊಡುವ ಕಾಳಜಿಯನ್ನೂ ತೋರುತ್ತಾರೆ. ಯಶೀವಾದ ಮುಖ್ಯಸ್ಥರಾದ ಬೆಷೆವ್‌ನ ರಬಾಯಿಗಳು ತುಂಬ ದೊಡ್ಡ ವಿದ್ವಾಂಸರು.

ಅವರು ಹತ್ತು ಪ್ರಶ್ನೆಗಳನ್ನಿರಿಸುತ್ತಾರೆ ಮತ್ತು ಈ ಎಲ್ಲ ಪ್ರಶ್ನೆಗಳನ್ನು ಒಂದು ಉತ್ತರದಲ್ಲಿ ಪರಿಹರಿಸುತ್ತಾರೆ. ಸಾಕಷ್ಟು ವಿದ್ಯಾರ್ಥಿಗಳು ಈ ಪೇಟೆಯಲ್ಲಿಯೇ ತಮ್ಮ ಬಾಳಸಂಗಾತಿಯನ್ನು ಪಡೆದುಕೊಳ್ಳುತ್ತಾರೆ.

'ನೀನು ಯಾಕೆ ವರ್ಷದ ಮಧ್ಯದಲ್ಲೇ ಬಿಟ್ಟು ಬಂದಿದೀಯ ?' ಯೆಂತಲ್ ಕೇಳಿದಳು.

'ನನ್ನ ತಾಯಿ ತೀರಿಕೊಂಡಳು. ಈಗ ನಾನು ಮತ್ತೆ ಹೋಗತಿದೀನಿ.'

'ನಿನ್ನ ಹೆಸರೇನು ?'

'ಅವಿಗ್ಡೋರ್.'

'ನೀನಿನ್ನೂ ಮದುವೆಯಾಗಿಲ್ಲವಲ್ಲ, ಯಾಕೆ?'

ತರುಣ ತನ್ನ ಗಡ್ಡ ಕೆರೆದುಕೊಂಡ.

'ಇದೊಂದು ದೊಡ್ಡ ಕತೆ.'

'ಏನದು ಹೇಳು.'

ಅವಿಗ್ಡೋರ್ ಕಣ್ಣುಮುಚ್ಚಿಕೊಂಡು ಒಂದು ಕ್ಷಣಕಾಲ ಯೋಚನೆಯಲ್ಲಿ ಮುಳುಗಿದ.

'ನೀನು ಬೆಷೆವ್‌ಗೆ ಬರತಿಯೇನು?'

'ಹೌದು.'

'ಹಾಗಿದ್ದ ಮೇಲೆ ಎಲ್ಲ ವಿಷಯವೂ ನಿನಗೆ ತಾನಾಗಿಯೇ ತಿಳಿಯುತ್ತೆ. ಆ ಪೇಟೇಲಿ ಶ್ರೀಮಂತನಾಗಿರೋ ಅಲ್ತರ್ ವಿಷ್ಕೋವೆರ್‌ರ ಮಗಳ ಜೊತೆ ನನ್ನ ನಿಶ್ಚಿತಾರ್ಥ ನಡೆದಿತ್ತು, ಮದುವೆ ದಿನವೂ ಗೊತ್ತಾಗಿತ್ತು, ಅವರು ಇದ್ದಕ್ಕಿದ್ದಂಗೇ ನಿಶ್ಚಿತಾರ್ಥ ಮುರಿದರು.'

'ಏನು ನಡೆಯಿತು?'

'ನನಗೆ ಗೊತ್ತಿಲ್ಲ. ನಾನೇ ಊಹಿಸಿಕೊಂಡೆ, ಗಾಳಿಮಾತುಗಳು ಕತೆಗಳಾಗಿ

ಹರಡಿದ್ದವು. ನಾನು ಅರ್ಧ ವರದಕ್ಷಿಣೆ ಕೇಳೋಕೆ ಸರಿಯಾಗಿಯೇ ಇದ್ದೆ. ಆದರೆ ಇದು ನನ್ನ ಸ್ವಭಾವಕ್ಕೆ ವಿರುದ್ಧದ್ದಾಗಿತ್ತು. ಅವರು ನನಗೆ ಬೇರೆ ಹುಡುಗಿ ಜೊತೆ ಮದುವೆ ಮಾಡತೀವಿ ಅಂದರು. ಆದರೆ ಹುಡುಗಿ ನನಗೆ ಒಪ್ಪಿಗೆಯಾಗಲಿಲ್ಲ.'

'ಬೆಷೆವ್‌ನಲ್ಲಿ ಯಶೀವಾದ ಹುಡುಗರು ಹೆಂಗಸರನ್ನ ನೋಡತಾರೇನು?'

'ನಾನು ವಾರಕ್ಕೊಂದು ದಿನ ಊಟ ಮಾಡತಿದ್ದ ಅಲ್ತರ್‌ರ ಮನೇಲಿ ಅವರ ಮಗಳು ಹಾದಾಸ್ ತಾನೇ ನನಗೆ ಊಟಕ್ಕೆ ತಂದು ಬಡಿಸತಿದ್ದಳು.....'

'ನೋಡೋಕೆ ಅವಳು ಚೆನ್ನಾಗಿದಾಳೇನು?'

'ಕೆಂಪಗಿದಾಳೆ.'

'ಕರಿಹುಡುಗಿನೂ ಚೆನ್ನಾಗಿರತಾಳೆ.'

'ಇಲ್ಲ.'

ಅವಿಗ್ದೋರ್‌ನನ್ನು ಯೆಂತಲ್ ದಿಟ್ಟಿಸಿ ನೋಡಿದಳು. ತೆಳ್ಳನೆಯ ಮೂಳೆ ಮೈ, ಗುಳಿಬಿದ್ದ ಕೆನ್ನೆಗಳು. ಕೆನ್ನೆಗೂದಲುಗಳು ಕಪ್ಪಗೆ ಗುಂಗುರಾಗಿ ಸುರುಳಿಗಟ್ಟಿಕೊಂಡು ನೀಲಿಗೆ ಹೊರಳಿದ್ದವು, ಹುಬ್ಬುಗಳು ಮೂಗಿನ ಮೇಲೆ ಒಂದಕ್ಕೊಂದು ಕೂಡಿಕೊಂಡಿದ್ದವು. ತನ್ನ ರಹಸ್ಯಗಳನ್ನು ಇವಳು ಅರಿತಳೆಂಬಂತೆ ಅವನು ಯೆಂತಲ್‌ಳನ್ನು ತೀಕ್ಷ್ಣವಾಗಿ ದೃಷ್ಟಿಸಿದ. ಸೂತಕದ ದಿನಗಳ ಶೋಕ ಸೂಚನೆಗೆ ಸಂಪ್ರದಾಯದಂತೆ ಕೋಟಿನ ಪಟ್ಟಿಯಲ್ಲಿನ ಗೆರೆಯನ್ನು ತೆಗೆಯಲಾಗಿತ್ತು. ಇವನು ಮೇಜನ್ನು ಕುಟ್ಟಿ ಬಡಿಯುತ್ತ ಒಂದು ಹಾಡು ಹೇಳಲಾರಂಭಿಸಿದ್ದ. ಇವನಲ್ಲಿ ಹರಿದುಹೋಗುತ್ತಿರುವ ಆಲೋಚನೆಗಳು ದಪ್ಪದ ಹುಬ್ಬುಗಳಲ್ಲಿ ವ್ಯಕ್ತವಾಗುತ್ತಿದ್ದವು. ಇವನು ಥಟ್ಟನೆ ಹೇಳಿದ :

'ಒಳ್ಳೇದು, ಇದರಿಂದ ಏನಾಯಿತು, ನಾನು ಒಂಟಿಜೀವನ ಸಾಗಿಸತೀನಿ, ಅಷ್ಟೇ.'

೨

ಇದು ತುಂಬ ವಿಲಕ್ಷಣವಾದದ್ದು. ಆದರೆ, ಹೀಗಿದ್ದೂ ಕೂಡ ಯೆಂತಲ್ - ಅಥವಾ ಅನ್ಷೆಲ್ - ಬೆಷೆವ್ ಪೇಟೆಯನ್ನು ತಲುಪಿದಳು. ಅವಿಗ್ದೋರ್‌ಗೆ ತನ್ನ

ಮಗಳನ್ನು ಕೊಡುವ ನಿಶ್ಚಿತಾರ್ಥವನ್ನು ಮುರಿದಿದ್ದ ಶ್ರೀಮಂತ ಅಲ್ತರ್ ವಿಷ್ಕೋವೆರ್ ಮನೆಯಲ್ಲಿ ಇವಳಿಗೆ ವಾರಕ್ಕೆ ಒಂದು ದಿನ ಊಟದ ವ್ಯವಸ್ಥೆ ಗೊತ್ತಾಯಿತು.

ಯಷೀವಾದ ವಿದ್ಯಾರ್ಥಿಗಳು ಇಬ್ಬಿಬ್ಬರು ಒಟ್ಟಾಗಿ ಅಭ್ಯಾಸ ಮಾಡುತ್ತಿದ್ದರು. ಅವಿಗ್ದೋರ್ ತನ್ನ ಸಹಪಾಠಿಯಾಗಿ ಅನ್ಸೆಲ್‌ಳನ್ನು ಆಯ್ದುಕೊಂಡ. ಇವಳು ಪಾಠಗಳನ್ನು ಅಧ್ಯಯನ ಮಾಡಿಕೊಳ್ಳಲು ನೆರವಾಗುತ್ತಿದ್ದ. ಇವನು ಒಳ್ಳೆಯ ಈಜುಗಾರನಾಗಿದ್ದ. ಎತ್ತರದಿಂದ ನೀರಿಗೆ ಹಾರಿ ಬೀಳುವ ಮತ್ತು ಕೈಗಳನ್ನು ನೀರಿನಲ್ಲಿ ಎಳೆಯುವ ತಂತ್ರ ಗಳನ್ನು ಹೇಳಿಕೊಡುತ್ತೇನೆಂದು ಅನ್ಸೆಲ್‌ಳನ್ನು ಕರೆದಿದ್ದ. ಆದರೆ ತಾನು ಹೊಳೆಗೆ ಬರುವುದಿಲ್ಲ ಎಂದು ಇವಳು ಕ್ಷಮೆ ಕೋರಿದ್ದಳು. ಇಬ್ಬರೂ ಒಟ್ಟಾಗಿ ಬಾಡಿಗೆಯನ್ನು ಹಂಚಿಕೊಳ್ಳೋಣ ಎಂಬ ಸಲಹೆಯನ್ನೂ ಇರಿಸಿದ. ಆದರೆ ಅನ್ಸೆಲ್ ರಾತ್ರಿ ಮಲಗಲೆಂದು ವಯಸ್ಸಾದ ಅರೆಗುರುಡಿ ವಿಧವೆಯೊಬ್ಬಳ ಮನೆಯಲ್ಲಿ ಏರ್ಪಾಟು ಮಾಡಿಕೊಂಡಳು. ಮಂಗಳವಾರಗಳಂದು ಅಲ್ತರ್ ವಿಷ್ಕೋವೆರ್ ಅವರ ಮನೆಗೆ ಅನ್ಸೆಲ್ ಊಟಕ್ಕೆ ಹೋಗುತ್ತಿದ್ದಳು. ಅಲ್ಲಿ ಹಾದಾಸ್ ಇವಳಿಗಾಗಿ ನಿರೀಕ್ಷಿಸುತ್ತಿದ್ದಳು. ಅವಿಗ್ದೋರ್ ಯಾವಾಗಲೂ ಹಲವು ಪ್ರಶ್ನೆಗಳನ್ನು ಕೇಳುತ್ತಲೇ ಇರುತ್ತಿದ್ದ : 'ಹಾದಾಸ್ ಹೇಗಿದಾಳೆ? ದುಃಖದಲ್ಲಿದಾಳೇನು ? ಗೆಲುವಾಗಿದಾಳೇನು ? ಅವರ ಮನೆಯವರು ಅವಳ ಮದುವೆ ಮಾಡೋಕೆ ಪ್ರಯತ್ನಿಸುತಿದಾರೇನು ? ಯಾವಾಗಲಾದರೂ ನನ್ನ ಕೇಳತಾಳೇನು ?' ಹಾದಾಸ್ ನೆಂಚಿಗೆಗಳನ್ನು ಮೇಜಿನ ಮೇಲಿರಿಸಿ ಮರೆಯುತ್ತಾಳೆ, ಉಪ್ಪಿನಪುಡಿ ತರುವು ದನ್ನು ಮರೆತಿರುತ್ತಾಳೆ, ಸಜ್ಜಿಗೆ ಬಟ್ಟಲು ತರುವಾಗ ಅದರೊಳಗೇ ಬೆರಳಿರಿಸಿರುತ್ತಾಳೆ. ಹತ್ತಿರವಿರುವ ಕೆಲಸದ ಹುಡುಗಿಗೆ ಕತೆ ಪುಸ್ತಕಗಳನ್ನು ತಂದುಕೊಡಲು ಹೇಳುತ್ತಾಳೆ. ತಲೆಗೂದಲಿನ ಶೈಲಿಯನ್ನು ವಾರಕ್ಕೊಂದು ರೀತಿ ಬದಲಾಯಿಸಿಕೊಳ್ಳುತ್ತಾಳೆ, ಇಷ್ಟೆಲ್ಲದರ ನಡುವೆಯೂ ತನ್ನನ್ನು ಸೌಂದರ್ಯವಂತೆ ಎಂದು ತಿಳಿದಿದ್ದಾಳೆ, ಕನ್ನಡಿಯ ಮುಂದೆಯೇ ನಿಂತಿರುತ್ತಾಳೆ. ಆದರೆ ಇವಳು ಅಷ್ಟು ಸೌಖ್ಯವಾಗಿರುವಂತಿಲ್ಲ.

'ಅವಳು ಎರಡು ವರ್ಷ ಕಳೆದ ಮೇಲೆ ಮದುವೆಯಾಗತಾಳೆ' ಅನ್ಸೆಲ್ ಹೇಳಿದಳು, 'ಅವಳು ಒಂದು ಹಳೆ ಚೀಲ ಇಟ್ಟುಕೊಂಡಿದಾಳೆ.'

'ಹಾಗಿದ್ದರೆ ಅವಳು ನಿನ್ನನ್ನ ಏನೂ ಕೇಳಿಲ್ಲ.'

'ಸರಿಯಾಗಿ ಗೊತ್ತಿಲ್ಲ.'

'ಅವಳೇನಾದರೂ ನಿನ್ನನ್ನ ಇಷ್ಟಪಟ್ಟರೆ ನೀನು ಅವಳ ಕೈಬಿಡಬೇಡ.'

'ಅವಳಿಲ್ಲದೇನೂ ಇರತೀನಿ.'

'ನಿನಗೆ ಕೆಟ್ಟಭಾವನೆಗಳೇನಾದರೂ ಇವೆಯಾ?'

ಈ ಇಬ್ಬರು ಸ್ನೇಹಿಗಳೂ ಪಾಠಶಾಲೆಯಲ್ಲಿ ಮೂಲೆಯಲ್ಲಿನ ಒಂದೇ ಮೇಜನ್ನು ಬಳಸುತ್ತಿದ್ದರು. ಹೆಚ್ಚಿನ ಸಮಯವನ್ನು ಓದುವುದು ಮತ್ತು ಮಾತುಕತೆಗಳಲ್ಲಿ ಕಳೆಯುತ್ತಿದ್ದರು. ಆಗಾಗ ಅವಿಗ್ದೋರ್ ಧೂಮಪಾನ ಮಾಡುತ್ತಿದ್ದ. ಇವನ ತುಟಿಯಿಂದ ಸಿಗರೇಟ್ ತೆಗೆದುಕೊಳ್ಳುತ್ತಿದ್ದ ಅನ್ಷೆಲ್ ಒಂದು ದಂ ಎಳೆಯುತ್ತಿದ್ದಳು. ಜವೆಗೋಧಿ ಹಿಟ್ಟಿನಿಂದ ಮಾಡುವ ಸಣ್ಣಕೇಕ್‌ಗಳನ್ನು ಅವಿಗ್ದೋರ್ ಇಷ್ಟಪಡುತ್ತಿದ್ದ. ಆದ್ದರಿಂದ ಪ್ರತಿದಿನ ಬೆಳಿಗ್ಗೆ ಈ ಕೇಕೊಂದನ್ನು ಕೊಳ್ಳಲು ಅನ್ಷೆಲ್ ಬೇಕರಿಯ ಹತ್ತಿರ ನಿಲ್ಲುತ್ತಿದ್ದಳು. ಇದರ ಹಣವನ್ನು ತಾನೇ ಕೊಡುತ್ತಿದ್ದಳು. ಆಗಾಗ ಅವಿಗ್ದೋರ್‌ನಿಗೆ ಆಶ್ಚರ್ಯವಾಗುವಂತೆಯೂ ನಡೆದುಕೊಳ್ಳುತ್ತಿದ್ದಳು. ಅವಿಗ್ದೋರ್‌ನ ಕೋಟಿನಿಂದ ಒಂದು ಗುಂಡಿ ಕಿತ್ತು ಹೋಗಿತ್ತೆಂದರೆ, ಮರುದಿನ ಸೂಜಿದಾರದೊಂದಿಗೆ ಬಂದು ಇದನ್ನು ಹಾಕಿ ಕೊಡುತ್ತಿದ್ದಳು. ಅವಿಗ್ದೋರ್‌ಗೆ ಹಲವು ಬಗೆಯ ಉಡುಗೊರೆಗಳನ್ನೂ ತಂದುಕೊಡುತ್ತಿದ್ದಳು : ರೇಷ್ಮೆ ಕರವಸ್ತ್ರ, ಜೋಡಿ ಕಾಲುಚೀಲಗಳು, ಒಂದು ಮಫ್ಲರ್. ತನಗಿಂತ ಐದು ವರ್ಷ ಕಿರಿಯವನಾಗಿ ಇನ್ನೂ ಗಡ್ಡ ಮೊಳೆಯಲೂ ಆರಂಭಿಸಿರದ ಈ ಹುಡುಗನಿಗೆ ಅವಿಗ್ದೋರ್ ಹೆಚ್ಚಾಗಿ ಅಂಟಿಕೊಳ್ಳತೊಡಗಿದ್ದ. ಅವಿಗ್ದೋರ್ ಒಂದು ಸಲ ಅನ್ಷೆಲ್‌ಳಿಗೆ ಹೇಳಿದ :

'ನಾನು ನಿನಗೆ ಹಾದಾಸ್‌ಳನ್ನ ಮದುವೆ ಮಾಡಿಸೋಕೆ ಇಷ್ಟಪಡತೀನಿ.'

'ಹೀಗೆ ಮಾಡೋದರಿಂದ ನಿನಗೆ ಯಾವ ತರದಲ್ಲಿ ಒಳ್ಳೇದಾಗುತ್ತೆ?'

'ಈಗ ಇರೋ ಎಲ್ಲ ಹೊಸಬರಲ್ಲಿ ನೀನೆ ತುಂಬ ಒಳ್ಳೆಯವನು.'

'ನಾನು ನಿನಗೆ ಶತೃವಾಗಬಹುದು.'

'ಇಲ್ಲ, ಯಾವತ್ತಿಗೂ ಸಾಧ್ಯವಿಲ್ಲ'

ಅವಿಗ್ದೋರ್ ಪೇಟೆಯಿಂದ ದೂರಕ್ಕೆ ವಾಕಿಂಗ್ ಹೋಗುತ್ತಿದ್ದ. ಅನ್ಷೆಲ್

ಸಹ ಆಗ ಇವನ ಜೊತೆಗೂಡುತ್ತಿದ್ದಳು. ಇಬ್ಬರೂ ಮಾತುಗಳಲ್ಲಿ ತನ್ಮಯವಾಗುತ್ತ ನಡೆಯುತ್ತಿದ್ದರು. ನೀರುಗೊಳವೆಯ ಕಡೆಗೆ ಹೋಗುತ್ತಿದ್ದರು, ಅಥವಾ ಪೈನ್ ಕಾಡಿನತ್ತ ಹೆಜ್ಜೆ ಹಾಕುತ್ತಿದ್ದರು. ಇಲ್ಲವೇ ಕ್ರೈಸ್ತ ಚರ್ಚಿದ್ದ ಕೂಡುದಾರಿಯತ್ತ ನಡೆಯುತ್ತಿದ್ದರು. ಕೆಲವು ಸಲ ಹುಲ್ಲಿನ ಮೇಲೆ ಕೂರುತ್ತಿದ್ದರು.

'ಒಬ್ಬ ಹೆಣ್ಣು ಗಂಡಸಿನ ತರ ಇರೋದಿಲ್ಲವಲ್ಲ, ಯಾಕೆ?' ಒಂದು ಸಲ ಅವಿಗ್ಡೋರ್ ಮೇಲೆ ಆಕಾಶ ನೋಡುತ್ತ ಕೇಳಿದ.

'ನೀನು ಹೇಳೋ ಮಾತಿನ ಅರ್ಥವೇನು?'

'ಹಾದಾಸ್‌ಳೂ ನಿನ್ನ ಹಾಗೆಯೇ ಇದಾಳಲ್ಲ?'

'ನಾನು ಹೇಗಿದೀನಿ ಅನ್ನಿಸುತ್ತೆ?'

'ಓಹ್ - ತುಂಬ ಒಳ್ಳೆ ವ್ಯಕ್ತಿ.'

ಅನ್ಷೆಲ್ ಎದ್ದು ಆಟವಾಡಲಾರಂಭಿಸಿದಳು. ಒಂದು ಹೂವನ್ನು ಕಿತ್ತು ಅದರ ಪೊಕಳೆಗಳನ್ನು ಒಂದೊಂದಾಗಿ ಕೀಳುತ್ತ ಎಸೆಯತೊಡಗಿದಳು. ಗೇರುಬೀಜವೊಂದನ್ನು ಕೈಗೆತ್ತಿಕೊಂಡು ಅವಿಗ್ಡೋರ್ ಕಡೆಗೆ ಬೀಸಿ ಎಸೆದಳು. ತನ್ನ ಮೊಳಕೈ ಸಮೀಪದಲ್ಲಿ ಹುಳುವೊಂದು ಹರಿದು ಹೋಗುತ್ತಿರುವುದನ್ನು ಗಮನಿಸಿದ ಅವಿಗ್ಡೋರ್ ಒಂದು ಕ್ಷಣ ಬಿಟ್ಟು ಮಾತಿಗೆ ಆರಂಭಿಸಿದ :

'ಅವರು ನನ್ನನ್ನ ಮದುವೆಗೆ ಒತ್ತಾಯಿಸತಿದಾರೆ.'

ಅನ್ಷೆಲ್ ನಿಶ್ಚಲಳಾಗಿ ನಿಂತಳು.

'ಯಾರ ಜೊತೇಲಿ?'

'ಫೈತಲ್‌ನ ಮಗಳು ಪೇಷಳ ಜೊತೆ.'

'ಗಂಡ ಸತ್ತಿರೋ ವಿಧವೆ?'

'ಹೌದು, ಅವಳೇ.'

'ನೀನು ಯಾಕೆ ಗಂಡ ಸತ್ತಿರೋಳನ್ನ ಮದುವೆಯಾಗಬೇಕು?'

'ನನಗೆ ಬೇರೆ ಇನ್ಯಾರೂ ಇಲ್ಲ.'

'ಇದು ದಿಟವಲ್ಲ, ಬೇರೆ ಯಾರಾದರೂ ನಿನಗೆ ಒಲೀತಾರೆ.'

'ಇಲ್ಲ, ಯಾವತ್ತಿಗೂ ಸಾಧ್ಯವಿಲ್ಲ.'

ಅನ್ನೆಲ್ ಇಂಥ ಜೋಡಿ ಒಳ್ಳೆಯದಲ್ಲ ಎಂದಳು. ಪೇಷೆ ನೋಡಲು ಅಷ್ಟು ಚೆನ್ನಾಗಿರುವವಳಲ್ಲ ಮತ್ತು ಬುದ್ಧಿವಂತಳೂ ಅಲ್ಲ. ಹಸುವಿಗೆ ಮಾತ್ರ ಇವಳಿಗಿರುವಂಥ ದೊಡ್ಡನೆಯ ಕಣ್ಣುಗಳಿರುತ್ತವೆ. ಜೊತೆಗೆ ಇವಳು ದುರದೃಷ್ಟದವಳು. ಮದುವೆಯಾದ ಮೊದಲ ವರ್ಷದಲ್ಲಿಯೇ ಇವಳ ಗಂಡ ಸತ್ತಿದ್ದಾನೆ. ಇಂಥ ಹೆಂಗಸರು ಗಂಡಂದಿರಿಗೆ ಸಾವು ತರುವಂಥವರು. ಆದರೆ ಅವಿಗ್ಡೋರ್ ಉತ್ತರ ಕೊಡಲಿಲ್ಲ. ಒಂದು ಸಿಗರೇಟ್ ಹೊತ್ತಿಸಿಕೊಂಡ. ದೀರ್ಘವಾಗಿ ಉಸಿರೆಳೆದು ಹೊಗೆಯ ಉಂಗುರಗಳನ್ನು ಬಿಡಲಾರಂಭಿಸಿದ. ಇವನ ಮುಖ ಹಸಿರುಗಟ್ಟಿತು.

'ನನಗೊಬ್ಬಳು ಹೆಂಗಸು ಬೇಕು, ರಾತ್ರಿ ನನಗೆ ಮಲಗೋಕೆ ಆಗೋಲ್ಲ.'

ಅನ್ನೆಲ್ ಬಿಳಿಚಿಕೊಂಡಳು.

'ಸರಿಯಾಗಿ ಇರೋ ಒಬ್ಬಳು ಸಿಗೋತನಕ ಯಾಕೆ ಕಾಯಬಾರದು?'

'ಹಾದಾಸ್ ನನ್ನ ಅದೃಷ್ಟದಲ್ಲಿ ಇದ್ದವಳು.'

ಅವಿಗ್ಡೋರ್‌ನ ಕಣ್ಣುಗಳು ತೇವಗೊಂಡವು. ಇವನ ಕಾಲುಗಳು ಫಕ್ಕನೆ ಮುಂದೆ ಚಾಚಿದವು.

'ಮಲಗಿದ್ದು ಸಾಕು, ಹೋಗೋಣ ನಡಿ."

ಇದಾದ ನಂತರ ಎಲ್ಲವೂ ಶೀಘ್ರವಾಗಿ ನಡೆಯಿತು. ಒಂದು ದಿನ ಅವಿಗ್ಡೋರ್ ತನ್ನ ಸಮಸ್ಯೆಯನ್ನು ಅನ್ನೆಲ್ ಬಳಿ ಹೇಳಿಕೊಂಡ. ಎರಡು ದಿನಗಳ ನಂತರ ಪೇಷಳೊಂದಿಗೆ ಇವನ ನಿಶ್ಚಿತಾರ್ಥ ಗೊತ್ತಾಯಿತು. ಇವನು ಯಷೀವಾಗೆ ಜೇನುತುಪ್ಪದ ಕೇಕ್‌ಗಳು ಮತ್ತು ಬ್ರಾಂದಿಯನ್ನು ತಂದ. ಶೀಘ್ರದಲ್ಲಿಯೇ ಮದುವೆ ದಿನವೂ ಗೊತ್ತಾಯಿತು. ಮದುವೆ ಹೆಣ್ಣು ವಿಧವೆಯಾದ್ದರಿಂದ ವಧುವಿನ ವಸ್ತ್ರಗಳಿಗಾಗಿ ಕಾಯಬೇಕಿರಲಿಲ್ಲ. ಎಲ್ಲವೂ ಸಿದ್ಧವಾಗಿಯೇ ಇತ್ತು. ಮೇಲಾಗಿ ಗಂಡು ಒಬ್ಬ

ಅನಾಥನಾದ್ದರಿಂದ ಯಾರನ್ನೂ ಕೇಳುವಂಥದೇನಿರಲಿಲ್ಲ. ಯಷೀವಾದ ವಿದ್ಯಾರ್ಥಿಗಳು ಬ್ರಾಂದಿ ಕುಡಿದು ಶುಭಾಶಯ ಕೋರಿದ್ದರು. ಅನ್ನೆಲ್ ಕೂಡ ಒಂದು ಗುಟುಕು ಗುಟುಕರಿಸಿದ್ದಳು. ಆದರೆ ಅವಳ ಗಂಟಲಲ್ಲೇ ಕಟ್ಟಿಕೊಂಡಿತ್ತು.

'ಓಯ್, ಇದು ಸುಡುತ್ತೆ.'

'ನೀನು ಗಂಡಸಲ್ಲ ಬಿಡು' ಅವಿಗ್ಡೋರ್ ಕುಚೋದ್ಯ ಮಾಡಿದ.

ಈ ಕೂಟ ಮುಗಿದ ನಂತರ ಅವಿಗ್ಡೋರ್ ಮತ್ತು ಅನ್ನೆಲ್ ಗೆಮಾರಾದ ಒಂದು ಸಂಪುಟವನ್ನು ಹಿಡಿದು ಕುಳಿತುಕೊಂಡರು. ಆದರೆ ಇದರ ಅಭ್ಯಾಸ ಮುಂದೆ ಸಾಗಲಿಲ್ಲ. ಅವರ ಮಾತುಕತೆಗಳೂ ತುಂಬ ನಿಧಾನವಾಗಿದ್ದವು. ಅವಿಗ್ಡೋರ್ ಹಿಂದಕ್ಕೊರಗಿ ಗಡ್ಡ ಕೆರೆದುಕೊಳ್ಳುತ್ತ ತನ್ನೊಳಗಿನ ಉಸಿರನ್ನು ಪೂರ್ಣವಾಗಿ ಹೊರಗೆ ಬಿಟ್ಟ.

'ನನಗೆ ಸಾಕನ್ನಿಸಿ ಹೋಗಿದೆ' ಅವನು ಥಟ್ಟನೆ ಹೇಳಿದ.

'ನಿನಗೆ ಅವಳು ಇಷ್ಟವಾಗಿಲ್ಲ ಅಂದರೆ, ಅವಳನ್ನ ಯಾಕೆ ಮದುವೆಯಾಗತಿದೀಯಾ?'

'ನಾನು ಒಂದು ಹೆಣ್ಣು ಟಗರನ್ನ ಮದುವೆಯಾಗತಿದೀನಿ.'

ಮರುದಿನ ಅವಿಗ್ಡೋರ್ ಪಾಠಶಾಲೆಗೆ ಬರಲಿಲ್ಲ. ಹ್ಯಾಸ್ಕಿಡ್ ಪಂಡಿತರ ಬಳಿ ಬಂದ ಚರ್ಮಕಾರ ಫೈತಲ್ ಭಾವಿಅಳಿಯ ತನ್ನ ಮನೆಯಲ್ಲಿಯೇ ಹ್ಯಾಸ್ಕಿಡ್ ಅಧ್ಯಯನ ಮುಂದುವರಿಸುವ ಅವಕಾಶಕ್ಕಾಗಿ ಕೋರಿಕೊಂಡ. ಯಶೀವಾದ ವಿದ್ಯಾರ್ಥಿಗಳು ಈ ವಿಧವೆ ಈಗಿನಂತೆ ಹೀಗೆಯೇ ಇನ್ನೂ ಹೆಚ್ಚು ಕಾಲ ಸಣ್ಣದಾಗಿರುವುದಿಲ್ಲ, ಪಿಪಾಯಿಯಂತೆ ದುಂಡಗೆ ಊದಿಕೊಳ್ಳುತ್ತಾಳೆ ಎಂದರು. ಗೌಳಿಗರ ಮಗಳಾದ ಇವಳ ತಾಯಿ ಮತ್ತು ಅಲ್ಪ ತಿಳಿವಳಿಕೆಯ ಮನುಷ್ಯನಾದ ಇವಳ ಅಪ್ಪ ಈಗಲೂ ಮನೆಗೆ ಹಣ ತರುತ್ತಾರೆ. ಫೈತಲ್‌ನಿಗೆ ಚರ್ಮದಂಗಡಿಯಲ್ಲಿ ಅರ್ಧ ಪಾಲುಗಾರಿಕೆ ಇದೆ. ತನ್ನ ಗೆಳತಿಯರೊಂದಿಗೆ ಅಂಗಡಿಗೆ ಹೋದ ಪೇಷೆ ವರದಕ್ಷಿಣೆ ಹಣವನ್ನು ಹೆರಿಂಗ್ ಮೀನುಗಳು, ಹೂದಾನಿ ಮತ್ತು ಕುಡಿಕೆಗಳನ್ನು ಕೊಳ್ಳುವುದರಲ್ಲಿ ವಿನಿಯೋಗಿಸಿದಳು. ತಂದೆ ಮತ್ತು ಮಗಳು ಒಟ್ಟುಗೂಡಿ ಅವಿಗ್ಡೋರ್‌ಗೆ ಒಂದು ಫರ್ ಕೋಟು, ಒಂದು ಹತ್ತಿ ಕೋಟು, ರೇಷ್ಮೆ ನಿಲುವಂಗಿ ಮತ್ತು ಎರಡು ಜೊತೆ ಬೂಟ್ಸ್‌ಗಳನ್ನು

ತೆಗೆಸಿಕೊಟ್ಟರು. ಇವುಗಳ ಜೊತೆಯಲ್ಲಿಯೇ ಅವಿಗ್ಡೋರ್‌ಗೆ ಸಾಕಷ್ಟು ಉಡುಗೊರೆಗಳೂ ಬಂದವು. ಪೇಷಳ ಮೊದಲ ಗಂಡನಿಂದ ಉಳಿದಿದ್ದ ವಸ್ತುಗಳೂ ಬಂದವು ; ತಾಲ ಮೂದ್‌ನ ಮಿಷ್ನ ಸಂಪುಟ, ಬಂಗಾರದ ಗಡಿಯಾರ, ಚೆನ್ನೂಕ ಕಾಲದ ಮೊಂಬತ್ತಿ ಕಂಬ, ಲವಂಗದ ಪೆಟ್ಟಿಗೆ. ಅನ್ಷೆಲ್ ಒಬ್ಬಂಟಿಯಾಗಿ ಲಾಂದ್ರದ ಬಳಿ ಕೂರುತ್ತಿದ್ದಳು. ಮಂಗಳವಾರ ಅನ್ಷೆಲ್ ಊಟಕ್ಕಾಗಿ ಅಲ್ತರ್ ವಿಷ್ಕೋವೆರ್ ಮನೆಗೆ ಹೋದಾಗ ಹಾದಾಸ್ ವಿಚಾರಿಸಿದಳು :

'ನಿನ್ನ ಜೊತೆಗಾರನ ಬಗ್ಗೆ ಏನು ಹೇಳತೀಯಾ - ಲವಂಗದ ಪೆಟ್ಟಿಗೆ ಸಿಕ್ಕಿದೆ ಯಲ್ಲವೇ?'

'ನೀನು ಏನನ್ನ ಬಯಸತೀಯೋ - ಅವನನ್ನ ಇಷ್ಟಪಡೋರು ಯಾರೂ ಇಲ್ಲವಲ್ಲ?'

ಹಾದಾಸ್ ಕೆಂಪಾದಳು.

'ಇದರಲ್ಲಿ ನನ್ನ ತಪ್ಪಿಲ್ಲ. ನನ್ನ ತಂದೆ ಇದಕ್ಕೆ ವಿರೋಧವಾದರು.'

'ಯಾಕೆ?'

'ಯಾಕೆ ಅಂದರೆ, ಇವನ ಒಬ್ಬ ಅಣ್ಣ ನೇಣುಹಾಕಿಕೊಂಡನಂತೆ.'

ಅನ್ಷೆಲ್ ಇವಳನ್ನೇ ದೃಷ್ಟಿಸಿದಳು - ತೆಳ್ಳಗೆ ಎತ್ತರವಾಗಿದ್ದಾಳೆ, ಕೆಂಬಣ್ಣ, ಉದ್ದನೆ ಕೊರಳು, ಕುಳಿಬಿದ್ದ ಕೆನ್ನೆಗಳು, ಹತ್ತಿಬಟ್ಟೆ ತೊಟ್ಟು ಒಂದು ಏಪ್ರನ್ ಹಾಕಿಕೊಂಡಿದ್ದಾಳೆ. ಎರಡು ಗಲ್ಲಗಳಿಗೂ ಕೂಡಿಕೊಂಡ ಕೂದಲುಗಳು ಭುಜಕ್ಕೆ ಇಳಿಬಿದ್ದಿದೆ. ನಾನು ಗಂಡಸಾಗಿಲ್ಲವಲ್ಲ, ಅನ್ಷೆಲ್ ಯೋಚಿಸಿದಳು.

'ನೀನು ಈಗಲೂ ಅವನನ್ನ ಇಷ್ಟಪಡತಿಯೇನು?' ಅನ್ಷೆಲ್ ಕೇಳಿದಳು.

'ಓಹ್, ಹೌದು!'

ಹಾದಾಸ್ ಕೋಣೆಯಿಂದ ಓಡಿದಳು. ಮಾಂಸದ ತಿನಿಸುಗಳೊಂದಿಗೆ ಟೀಯ ಉಳಿದ ಊಟವನ್ನು ಕೆಲಸದ ಹುಡುಗಿ ಬಡಿಸಿದಳು. ಊಟ ಮುಗಿಸಿ ಕೈ ತೊಳೆದು ಕೊಂಡು ಕೊನೆಗೆ ಆಶೀರ್ವಚನಗಳನ್ನು ಹೇಳುವ ಸಮಯಕ್ಕೆ ಹಾದಾಸ್ ಮರಳಿದಳು.

ಮೇಜಿನ ಬಳಿ ಬಂದು ನಿಂತು ಮೆಲುದನಿಯಲ್ಲಿ ಹೇಳಿದಳು :

'ನನ್ನ ಮೇಲೆ ಆಣೆ, ನೀನು ಅವನಿಗೆ ಏನೂ ಹೇಳಬೇಡ. ನನ್ನ ಹೃದಯದೊಳಗೆ ಏನು ನಡೀತಿದೆ ಅನ್ನೋದು ಅವನಿಗೆ ಹೇಗೆ ತಿಳಿಯುತ್ತೆ!....'

ನಂತರ ಮತ್ತೆ ಓಡಿದಳು, ಬಾಗಿಲ ಬಳಿ ಎಡವಿ ಬಿದ್ದಳೇನೋ ಅನ್ನುವಂತೆ.

೩

ಯಶೀವಾದ ಮುಖ್ಯೋಪಾಧ್ಯಾಯರು ಅನ್ಸೆಲ್‌ಗೆ ಬೇರೊಬ್ಬ ಸಹಪಾಠಿಯನ್ನು ಆಯ್ದುಕೊಳ್ಳಲು ಹೇಳಿದರು. ಆದರೆ ವಾರಗಳು ಉರುಳಿದರೂ ಅನ್ಸೆಲ್ ಒಬ್ಬೊಂಟಿಯಾಗಿಯೇ ಓದುತ್ತಿದ್ದಳು. ಅವಿಗ್ಡೋರ್‌ನ ಸ್ಥಾನವನ್ನು ತುಂಬುವ ಬೇರೆ ಯಾರೂ ಯಷೀವಾದಲ್ಲಿರಲಿಲ್ಲ. ಎಲ್ಲರೂ ದೈಹಿಕವಾಗಿ ಮತ್ತು ಬೌದ್ಧಿಕವಾಗಿ ಚಿಕ್ಕವರಾಗಿದ್ದರು. ಸಣ್ಣತನದ ಮಾತುಗಳಲ್ಲಿ ಮುಳುಗಿಕೊಳ್ಳುತ್ತಿದ್ದರು, ಅಹಂನ ಬಡಾಯಿ ಕೊಚ್ಚಿಕೊಳ್ಳುತ್ತಿದ್ದರು, ಹಲ್ಲು ಕಿಸಿಯುತ್ತ ನಗುತ್ತಿದ್ದರು. ಅವಿಗ್ಡೋರ್ ಇಲ್ಲದೆ ಪಾಠಶಾಲೆ ಬರಿದಾಗಿರುವಂತಿತ್ತು. ರಾತ್ರಿಯಲ್ಲಿ ಅನ್ಸೆಲ್ ವಿಧವೆಯ ಮನೆಯಲ್ಲಿ ಮಲಗಲಾಗದೆ ಕಿಟಕಿ ಪಕ್ಕದ ಬೆಂಚಿನಲ್ಲಿ ಉರುಳಿಕೊಳ್ಳುತ್ತಿದ್ದಳು. ಮೇಲೆ ತೊಟ್ಟಿರುವ ಕೋಟು ಮತ್ತು ಟ್ರೌಸರ್‌ಗಳನ್ನು ಕಳಚಿ ತೆಗೆದರೆ ಅವಳು ಮತ್ತೆ ಯೆಂತಲ್‌ಳಾಗುತ್ತಾಳೆ, ಮದುವೆಗೆ ಬೆಳೆದು ನಿಂತಿರುವ ಪ್ರಾಯದವಳಾಗಿ, ಬೇರೊಬ್ಬ ಹೆಣ್ಣಿನೊಂದಿಗೆ ನಿಶ್ಚಿತಾರ್ಥವಾಗಿರುವ ಗಂಡಿನ ಪ್ರೇಮದಲ್ಲಿ ಸಿಲುಕಿರುವ ಹೆಣ್ಣಾಗುತ್ತಾಳೆ. 'ಅವನಿಗೆ ತಾನು ಸತ್ಯವನ್ನು ಹೇಳಿದರೆ', ಅನ್ಸೆಲ್ ಯೋಚಿಸಿದಳು. ಆದರೆ ಇದು ತೀರ ತಡವಾಯಿತು. ಅನ್ಸೆಲ್ ಮತ್ತೆ ಹೆಣ್ಣಾಗಲು ಹೋಗುವುದಿಲ್ಲ. ಪಾಠಶಾಲೆ ಮತ್ತು ಪುಸ್ತಕಗಳನ್ನು ಬಿಟ್ಟು ಇಂಥದಕ್ಕೆ ಮರಳುವುದಿಲ್ಲ. ಉರುಳಿಕೊಂಡಿದ್ದ ಇವಳಲ್ಲಿ ಹಾದುಹೋಗುತ್ತಿದ್ದ ಒಣ ಆಲೋಚನೆಗಳು ಇವಳನ್ನು ಕೆಟ್ಟತನದ ಕಡೆ ಸೆಳೆಯುತ್ತಿದ್ದವು. ನಿದ್ದೆ ಹೋಗುತ್ತಿದ್ದಳು, ಥಟ್ಟನೆ ಎಚ್ಚರಗೊಳ್ಳುತ್ತಿದ್ದಳು. ಇವಳ ಕನಸಿನಲ್ಲಿ ಇವಳು ಒಂದೇ ಸಮಯದಲ್ಲಿ ಗಂಡು ಮತ್ತು ಹೆಣ್ಣಾಗಿರುತ್ತಿದ್ದಳು, ಹೆಂಗಸರ ಮತ್ತು ಗಂಡಸರ ಉಡುಗೆತೊಡುಗೆಗಳನ್ನು ತೊಟ್ಟಿರುತ್ತಿದ್ದಳು. ಯೆಂತಲ್‌ಳ ಕಾಲ ಮುಗಿದು ಹೋಗಿದೆ, ಅವಳು ಥಟ್ಟನೆ ಭಯಗೊಂಡಳು.... ಯಾರಿಗೆ ತಿಳಿದಿದೆ? ಮದ್ರಸ್ ತಲ್ಮಿಯೋತ್‌ನಲ್ಲಿ ಹೆಣ್ಣೊಬ್ಬಳು

ಗಂಡಾಗಲು ಪರಿತಪಿಸುವುದನ್ನು ಇವಳು ಓದಿದ್ದಳು. ತೋರಾದಲ್ಲಿ ಹೇಳಿರುವ ಬೇರೊಂದು ಲಿಂಗಭೇದದ ಉಡುಪು ತೊಟ್ಟಾಗ ಅನುಭವಕ್ಕೆ ಬರುವ ಭಾವನೆಗಳು ಯೆಂತಲ್‌ಳಿಗೆ ಈಗ ಗ್ರಹಿಕೆಗೆ ನಿಲುಕತೊಡಗಿದ್ದವು. ಇನ್ನೊಬ್ಬರಿಗೆ ಮೋಸಗೊಳಿಸಲು ಹೋಗುವಂಥದು ತನಗೇ ಮೋಸ ಮಾಡಿಕೊಳ್ಳುವಂಥದು. ಆತ್ಮವೂ ಕೂಡ ಕಂಗೆಟ್ಟು ಬೇರೆ ಶರೀರದಲ್ಲಿ ಪುನರ್ಜನ್ಮ ಹೊಂದುತ್ತದೆ.

ರಾತ್ರಿ ಅವಳು ಎಚ್ಚರವಾಗಿದ್ದಳು ; ಹಗಲಿನಲ್ಲಿ ಸುಮ್ಮನೆ ಕಣ್ಣು ತೆರೆದುಕೊಂಡಿದ್ದಳು. ಇವಳು ಊಟ ಮಾಡುತ್ತಿದ್ದ ಮನೆಗಳ ಹೆಂಗಸರು ಈ ತರುಣ ಎಲ್ಲವನ್ನೂ ತಟ್ಟೆಯಲ್ಲಿಯೇ ಬಿಡುತ್ತಿದ್ದಾನೆ ಎಂದು ದೂರಿದರು. ರಬಾಯಿಯವರು ಅನ್ಷೆಲ್ ಪಾಠಗಳ ಉಪನ್ಯಾಸಗಳತ್ತ ಗಮನ ಹರಿಸುತ್ತಿಲ್ಲ ಎಂದು ಕಂಡರು. ಕಿಟಕಿಯಿಂದ ಹೊರನೋಡುತ್ತ ತನ್ನ ಯೋಚನೆಗಳಲ್ಲಿ ಮುಳುಗುವುದನ್ನು ನೋಡಿದರು. ಮಂಗಳವಾರ ಬಂದಾಗ ವಿಷ್ಕೋವೆರ್ ಮನೆಗೆ ಅನ್ಷೆಲ್ ಊಟಕ್ಕೆ ಹೋದಳು. ಇವಳು ಹೋಗುವುದಕ್ಕೆ ಮುನ್ನವೇ ಸೂಪ್‌ನ ಬಟ್ಟಲಿರಿಸಿಕೊಂಡು ಹಾದಾಸ್ ನಿರೀಕ್ಷೆಯಲ್ಲಿದ್ದಳು. ಗೊಂದಲಗಳಲ್ಲಿ ಮುಳುಗಿದ್ದ ಅನ್ಷೆಲ್ ನಮಸ್ತೆಯನ್ನೂ ಹೇಳಲಿಲ್ಲ. ಒಂದು ಚಮಚ ಮೇಲೆತ್ತಿಕೊಂಡರೂ ಕೆಳಬಿಟ್ಟಳು. ಹಾದಾಸ್ ಧೈರ್ಯ ತಾಳಿ ಮಾತಿಗಾರಂಭಿಸಿದಳು :

'ಅವಿಗ್ದೋರ್ ನಿನ್ನನ್ನ ಒಂಟಿ ಮಾಡಿದಾನೆ ಅಂತ ಕೇಳಿದೆ.'

ಅನ್ಷೆಲ್ ತನ್ನ ತಳಮಳದಿಂದ ಹೊರಬಂದಳು.

'ನೀನು ಏನು ಹೇಳತೀಯಾ?'

'ನಿನ್ನ ಜೊತೆಗಾರನಾಗಿ ಅವನು ಬಹಳಕಾಲ ಉಳಿಯಲಿಲ್ಲ.'

'ಅವನು ಯಶೀವಾ ಬಿಟ್ಟ.'

'ನಿನ್ನನ್ನ ಅವನು ಭೇಟಿಯಾಗತಾನೇನು?'

'ಅವನು ಕಣ್ಣಾಮುಚ್ಚಾಲೆ ಆಡತಿರೋ ಹಾಗಿದೆ.'

'ಅವನ ಮದುವೆಗಾದರೂ ಹೋಗತೀಯಲ್ಲ ನೀನು?'

ತನ್ನ ಮಾತಿನ ಅರ್ಥಗಳು ಜಾರಿ ಹೋಗುತ್ತವೇನೋ ಎಂಬಂತೆ ಅನ್ಷೆಲ್

ಕ್ಷಣಕಾಲ ಮೌನವಾಗಿದ್ದು ನಂತರ ಹೇಳಿದಳು :

'ಅವನೊಬ್ಬ ಮಹಾಮೂರ್ಖ.'

'ಯಾಕೆ ಹೀಗೆ ಹೇಳತೀಯಾ?'

'ನೀನು ಸುಂದರವಾಗಿದೀಯ. ಅವನು ಕೋತಿ ಇದ್ದ ಹಾಗಿದಾನೆ.'

ಕೂದಲುಗಳು ನಿಮಿರಿ ಹಾದಾಸ್ ಕೆಂಪಾದಳು.

'ಇದೆಲ್ಲ ನನ್ನ ತಂದೆ ಮಾಡಿದ ತಪ್ಪು.'

'ಚಿಂತೆ ಮಾಡಬೇಡ. ನಿನಗೆ ಹೊಂದೋ ಅಂಥವನನ್ನೇ ಪಡಕೊಳ್ಳತೀಯ.'

'ನನಗೆ ಇಷ್ಟವಾಗೋ ಅಂಥವರು ಯಾರೂ ಇಲ್ಲ.'

'ಆದರೆ ಎಲ್ಲರೂ ನಿನ್ನನ್ನ ಇಷ್ಟಪಡತಾರೆ....'

ದೀರ್ಘ ಮೌನವೊಂದು ನೆಲಸಿತು. ಹಾದಾಸ್ ಕಣ್ಣುಗಳು ಅರಳಿಕೊಂಡವು. ಸಾಂತ್ವನಗೊಳಿಸಲು ಯಾರೂ ಇಲ್ಲವೆಂಬಂತೆ ದುಃಖ ತುಂಬಿಕೊಂಡವು.

'ನಿನ್ನ ಸೂಪ್ ತಣ್ಣಗಾಗತಿದೆ.'

'ನಾನೂ ನಿನ್ನನ್ನ ಇಷ್ಟಪಡತೀನಿ.'

ಅನ್ಶೆಲ್‌ಳಿಗೆ ತಾನು ಏನು ಹೇಳಿದೆನೆಂದು ಆಶ್ಚರ್ಯವಾಯಿತು. ಹಾದಾಸ್ ಅವಳ ಹೆಗಲಿಗೊರಗಿದಳು.

'ಏನು ಹೇಳತಿದೀಯಾ ನೀನು?'

'ಇದು ಸತ್ಯ.'

'ಯಾರಾದರೂ ಕೇಳಿಸಿಕೊಂಡಾರು?'

'ನಾನು ಹೆದರೋದಿಲ್ಲ.'

'ಸೂಪ್ ಕುಡಿ, ಬೇಗ ಮಾಂಸದ ತುಂಡುಗಳನ್ನ ತರತೀನಿ.'

ಹಾದಾಸ್ ಹೋಗಲೆಂದು ಹೊರಳಿದಳು. ಎತ್ತರದ ಅವಳ ಹಿಮ್ಮಡಿಗಳು ಸದ್ದು ಮಾಡಿದವು. ಅನ್ನೆಲ್ ಸೂಪಿನಲ್ಲಿ ಬೀನ್ಸಿನ ಬೀಜವನ್ನು ಅರಸುತ್ತಿದ್ದಳು. ಸಿಕ್ಕಿದ ಒಂದನ್ನು ಮೇಲೆತ್ತಿದಳು. ನಂತರ ಕೆಳಬಿಟ್ಟಳು. ಅವಳ ಹಸಿವು ಹಾರಿತ್ತು. ಗಂಟಲು ಕಟ್ಟಿಕೊಂಡಿತ್ತು. ತಾನು ಕೆಡುಕಿನಲ್ಲಿ ಮುಳುಗಿದ್ದೇನೆ ಎನ್ನುವುದು ಅವಳಿಗೆ ಸ್ಪಷ್ಟವಾಗಿ ತಿಳಿಯಿತು. ಆದರೆ ಅಗೋಚರ ಶಕ್ತಿಯೊಂದು ಅವಳಲ್ಲಿ ಒತ್ತಾಯ ಹೇರುತ್ತಿತ್ತು. ಹಾದಾಸ್ ಮತ್ತೆ ಬಂದಳು. ತಟ್ಟೆಯಲ್ಲಿ ಎರಡು ಮಾಂಸದ ತುಣುಕುಗಳನ್ನು ತಂದಿದ್ದಳು.

'ಯಾಕೆ ನೀನು ಊಟ ಮಾಡೇ ಇಲ್ಲ?'

'ನಾನು ನಿನ್ನ ಬಗ್ಗೆ ಯೋಚಿಸತಿದೀನಿ.'

'ಏನು ಯೋಚಿಸತಿದೀಯ?'

'ನಾನು ನಿನ್ನನ್ನ ಮದುವೆಯಾಗತೀನಿ.'

ಹಾದಾಸ್‌ಳ ಮುಖ ಏನನ್ನೋ ನುಂಗಿದಂತೆ ಬದಲಾಯಿತು.

'ಇಂಥ ವಿಷಯವನ್ನ ನೀನು ನನ್ನ ತಂದೆ ಹತ್ತಿರ ಮಾತಾಡು.'

'ನನಗೆ ಗೊತ್ತಿದೆ.'

'ಮದುವೆ ದಲ್ಲಾಳಿ ಹತ್ತಿರ ಮಾತುಕತೆಗೆ ಹೇಳಿಕಳಿಸತಾರೆ.'

ಅವಳು ಓಡಿಹೋದಳು. ತನ್ನ ಬೆನ್ನ ಹಿಂದೆಯೇ ಬಾಗಿಲು ಹಾಕಿಕೊಂಡಳು. ಅನ್ನೆಲ್ ತನ್ನಲ್ಲಿಯೇ ನಗುತ್ತ ಯೋಚಿಸಿದಳು : 'ಹುಡುಗೀರ ಜೊತೆ ನನಗೆ ಇಷ್ಟ ವಾಗೋ ಆಟ ಆಡತೀನಿ!' ಸೂಪ್‌ನ ಮೇಲೆ ಉಪ್ಪಿನಪುಡಿ ಉದುರಿಸಿಕೊಂಡಳು. ನಂತರ ಮೆಣಸಿನಪುಡಿ ಚಿಮುಕಿಸಿಕೊಂಡಳು. ಬುದ್ಧಿ ವಿಕಲ್ಪಗೊಂಡಿರುವಂತೆ ಕುಳಿತೇ ಇದ್ದಳು. ನಾನೇನು ಮಾಡತಿದೀನಿ ? ಕೆಟ್ಟತನಕ್ಕೆ ಇಳಿಯತಿದೀನಿ, ಬೇರೆ ಕಾರಣವೇ ಕಾಣಿಸತಿಲ್ಲ... ಬಲವಂತವಾಗಿ ಊಟ ಮಾಡಲು ನೋಡಿದಳು. ಆದರೆ ರುಚಿಸಲಿಲ್ಲ. ನಂತರ ಹಾದಾಸ್‌ಳನ್ನು ಅವಿಗ್ಡೋರ್ ಮದುವೆಯಾಗಲು ಇಚ್ಛಿಸಿದ್ದು ನೆನಪಾಯಿತು. ಅನ್ನೆಲ್‌ಳಿಗೆ ಗೊಂದಲಗಳಲ್ಲಿ ಉಪಾಯವೊಂದು ಹೊಳೆಯಿತು ; ಅವಿಗ್ಡೋರ್‌ನ ಮೇಲೆ ಇವಳಲ್ಲಿ ದ್ವೇಷ ಮೂಡಿತು, ಇದೇ ಸಮಯದಲ್ಲಿ ಹಾದಾಸ್‌ಳಿಗೆ ಹತ್ತಿರವಾಗಿ ಒಲಿದಳು.

ಹಾದಾಸ್ ದೇವಕನ್ಯೆ : ಗಂಡಸರ ಬಗೆಗೆ ಇವಳಿಗೆ ಏನು ತಿಳಿದಿದೆ? ಇಂಥ ಮುಗ್ಧ ಹುಡುಗಿಯೊಬ್ಬಳು ಬಹಳ ಕಾಲದಿಂದ ಮೋಸ ಹೋಗುತ್ತಿದ್ದಾಳೆ. ಖಂಡಿತವಾಗಿ ಅನ್ಷೆಲ್ ಸಹ ಒಬ್ಬ ಪವಿತ್ರ ಕನ್ಯೆ. ಆದರೆ ಇಂಥ ವಿಷಯಗಳ ಬಗೆಗೆ ಗೆಮಾರಾ ಮತ್ತು ಗಂಡಸರ ಮಾತುಗಳಿಂದ ಸಾಕಷ್ಟನ್ನು ತಿಳಿದಿದ್ದಾಳೆ. ಭಯ ಮತ್ತು ಸಂತೋಷ ಗಳಿಂದ ಅನ್ಷೆಲ್ ನಿಶ್ಚಲಳಾದಳು, ಇವಳು ಇಡೀ ಜನಾಂಗಕ್ಕೆ ವಂಚಿಸುವ ಉಪಾಯ ಹೂಡಿಕೊಂಡಿರುವ ವ್ಯಕ್ತಿಯಾಗಿದ್ದಾಳೆ. ಇವಳಿಗೆ ಗಾದೆಯೊಂದು ನೆನಪಾಯಿತು : 'ಜನ ಗಳು ಮೂರ್ಖರು' ಎದ್ದು ನಿಂತು ಜೋರಾಗಿಯೇ ಹೇಳಿದಳು : 'ನಾನೀಗ ನಿಜವಾಗಿಯೂ ಹೊಸದೊಂದನ್ನ ಆರಂಭಿಸಿದೀನಿ.'

ರಾತ್ರಿ ಇವಳು ರೆಪ್ಪೆ ಮುಚ್ಚಿ ನಿದ್ರಿಸಲಿಲ್ಲ. ಐದೈದು ನಿಮಿಷಕ್ಕೂ ಎದ್ದು ಒಂದಿಷ್ಟು ನೀರು ಕುಡಿಯುತ್ತಿದ್ದಳು. ಗಂಟಲು ಒಣಗುತ್ತಿತ್ತು. ಹಣೆ ಸುಡುತ್ತಿತ್ತು. ಮೆದುಳು ತನ್ನಲ್ಲಿ ಜ್ವಾಲಾಮುಖಿಯನ್ನು ಇರಿಸಿಕೊಂಡಿರುವಂತೆ ವರ್ತಿಸುತ್ತಿತ್ತು. ಇವಳಲ್ಲಿ ಒಳಗೇ ಅಂತರ್ಯುದ್ಧವೊಂದು ನಡೆಯಲಾರಂಭಿಸಿತ್ತು. ಹೊಟ್ಟೆ ಗುಡುಗಾಡುತ್ತಿತ್ತು. ಅಂಗಾಲುಗಳಲ್ಲಿ ತುರಿಕೆಯಾಗುತ್ತಿತ್ತು. ತನ್ನಲ್ಲಿ ಸೈತಾನವೊಂದು ಹೊಕ್ಕಿದೆ ಎನಿಸುತ್ತಿತ್ತು. ಕೆಟ್ಟಶಕ್ತಿಯೊಂದು ಮನುಷ್ಯರಲ್ಲಿ ಸೇರಿಕೊಂಡು ತನ್ನ ಆಟಗಳನ್ನು ಆಡುತ್ತಿರುವಂತಿತ್ತು. ಅನ್ಷೆಲ್‌ಳಿಗೆ ನಡೆಯುವ ದಾರಿಯಲ್ಲಿ ಎಡವಿ ಮುಗ್ಗರಿಸಿ ಬಿದ್ದಿರುವಂತಾಗಿತ್ತು. ನಿದ್ದೆ ಬಂದಾಗ ಬೆಳಗಾಗಿತ್ತು. ಮೊದಲಿಗಿಂತಲೂ ಹೆಚ್ಚಿರುವ ಬಳಲಿಕೆಯಲ್ಲಿ ಎಚ್ಚರ ಗೊಂಡಳು. ಆದರೆ ವಿಧವೆಯ ಆ ಮನೆಯ ಮೇಜಿನಲ್ಲಿ ಮಲಗಲು ಹೋಗಲಿಲ್ಲ. ಪ್ರಯಾಸಪಟ್ಟು ಎದ್ದು ತನ್ನ ಚೀಲ ಮತ್ತು ಪ್ರಾರ್ಥನೆಯ ಸಾಮಗ್ರಿಗಳೊಂದಿಗೆ ಪಾಠಶಾಲೆಯತ್ತ ಬಂದಳು. ಹಾದಿಯಲ್ಲಿ ಇವಳಿಗೆ ಹಾದಾಸ್‌ಳ ತಂದೆ ಭೇಟಿಯಾದರು. ಅನ್ಷೆಲ್ ಇವರಿಗೆ ಗೌರವಯುತವಾಗಿ ನಮಸ್ಕಾರ ಹೇಳಿ ಅವರಿಂದ ಆತ್ಮೀಯವಾದ ಅಭಿವಂದನೆಯನ್ನು ಪಡೆದಳು. ರೆಬ್ ಅಲ್ತರ್ ತನ್ನ ಗಡ್ಡವನ್ನು ನೀವಿಕೊಂಡು ಮಾತಿಗೆ ಆರಂಭಿಸಿದರು !

'ನನ್ನ ಮಗಳು ಹಾದಾಸ್ ನಿನಗೆ ಸರಿಯಾಗಿ ಊಟಕ್ಕೆ ಬಡಿಸತಿಲ್ಲ ಅಂತ ಕಾಣುತ್ತೆ. ನೀನು ಬಳಲಿರೋನ ಹಾಗೆ ಕಾಣತಿದೀಯ.'

'ನಿಮ್ಮ ಮಗಳು ತುಂಬ ಒಳ್ಳೆ ಹುಡುಗಿ, ವಿಶಾಲ ಹೃದಯದವಳು.'

'ಹಾಗಿದ್ದರೆ ನೀನು ಯಾಕೆ ಒಣಗಿಕೊಂಡಿದೀಯ?'

ಅನ್ಷೆಲ್ ಒಂದು ಕ್ಷಣ ಮೌನವಾಗಿದ್ದಳು.

'ರೆಬ್ ಅಲ್ತರ್, ನಾನು ನಿಮ್ಮ ಹತ್ತಿರ ಒಂದು ವಿಷಯ ಹೇಳಬೇಕಿದೆ.'

'ಒಳ್ಳೆಯದು. ಆಯಿತು, ಏನು ಹೇಳು.'

'ರೆಬ್ ಅಲ್ತರ್, ನಿಮ್ಮ ಮಗಳು ನನಗೆ ಮೆಚ್ಚಿಕೆಯಾಗಿದಾಳೆ.'

ಅಲ್ತರ್ ವಿಷ್ಕೋವೆರ್ ನೆಟ್ಟಗೆ ನಿಂತರು.

'ಓಹ್ ಅವಳೇ ? ಯಶೀವಾದ ಹುಡುಗರು ಇಂಥ ವಿಷಯಗಳನ್ನ ಮಾತಾಡೋಲ್ಲ ಅಂದುಕೊಂಡಿದ್ದೆ.'

ಅವರ ಕಣ್ಣುಗಳ ತುಂಬ ನಗು ತುಂಬಿತ್ತು.

'ಆದರೆ ಇದು ದಿಟ.'

'ಇಂಥ ವಿಷಯಗಳನ್ನ ಯಾರೂ ಪ್ರಾಯದ ಹುಡುಗರ ಹತ್ತಿರ ಮಾತಾಡೋದಿಲ್ಲ.'

'ಆದರೆ ನಾನೊಬ್ಬ ಅನಾಥ.'

'ಒಳ್ಳೆಯದು..... ಹಾಗಿದ್ದ ಮೇಲೆ ಮದುವೆ ದಲ್ಲಾಳಿ ಹತ್ತಿರ ಹೇಳಿ ಕಳಿಸತೀನಿ.'

'ಆಯಿತು....'

'ಅವಳಲ್ಲಿ ನೀನು ಏನ ಕಂಡೆ?'

'ಅವಳು ಸುಂದರವಾಗಿದಾಳೆ..... ಒಳ್ಳೆಯವಳು.... ಬುದ್ಧಿವಂತೆ.'

'ಆಯಿತು... ಆಯಿತು.... ಆಗಬಹುದು.... ನನ್ನ ಜೊತೆ ಬಾ, ನಿನ್ನ ಮನೆ ಬಗ್ಗೆ ಹೇಳುವಂತೆ.'

ಅಲ್ತರ್ ವಿಷ್ಕೋವೆರ್ ತನ್ನ ಕೈಯನ್ನು ಅನ್ಷೆಲ್ ಹೆಗಲಿನಲ್ಲಿ ಹಾಕಿದರು. ಸಿನಗಾಗ್‌ನ ಕಟ್ಟೆಯವರೆಗೂ ಇವರು ಹೀಗೆಯೇ ನಡೆಯುತ್ತ ಹೋದರು.

೪

ಒಂದು ಸಲ ನೀವು 'ಅ'ವನ್ನು ಹೇಳಿದರೆ ಖಂಡಿತವಾಗಿ 'ಆ'ವನ್ನೂ ಹೇಳುತ್ತೀರಿ. ಯೋಚನೆಗಳು ಪದಗಳನ್ನು ನಿಯಂತ್ರಿಸುತ್ತವೆ. ಪದಗಳು ಅವಶ್ಯಕತೆಗಳನ್ನು ನಿಯಂತ್ರಿಸುತ್ತವೆ. ರೆಬ್ ಅಲ್ತರ್ ವಿಷ್ಕೋವೆರ್ ಈ ಜೋಡಿಗೆ ತಮ್ಮ ಸಮ್ಮತಿಯನ್ನಿತ್ತರು. ಹಾದಾಸ್‌ಳ ತಾಯಿ ಫ್ರೈದಾಲೆಹ್ ಕೆಲವು ದಿನಗಳ ಮಟ್ಟಿಗೆ ಪೇಟೆಯಲ್ಲಿರಲು ಬಂದಳು. ಬೆಷೆವ್‌ನ ಯಶೀವಾದಲ್ಲಿ ತನ್ನ ಮಗಳಿಗೆ ಹೊಂದುವ ಹುಡುಗರಿಲ್ಲ ಅಂದಿದ್ದ ಇವಳು ಲುಬ್ಲಿನ್ ಅಥವಾ ಜಮೋಸ್ಕ್‌ಗಳಲ್ಲಿ ಯಾರನ್ನಾದರೂ ನೋಡಬೇಕು ಎಂದಿದ್ದಳು. ಆದರೆ ಹಾದಾಸ್ ಮತ್ತೆ ಬಹಿರಂಗವಾಗಿ ತನಗೆ ಅಪಮಾನವಾದರೆ - ಅವಿಗ್ದೋರ್‌ನ ಸಂಬಂಧದಲ್ಲಿ ಈ ಹಿಂದೆ ಆಗಿರುವಂತೆ - ತಾನು ಬಾವಿಗೆ ಹಾರಿಕೊಳ್ಳುವುದಾಗಿ ಎಚ್ಚರಿಸಿದಳು. ಹೀಗೆಲ್ಲ ಸಂಭವಿಸುತ್ತಿದ್ದರೂ ಈ ಅಸಂಬದ್ಧ ಜೋಡಿ ಜೊತೆಗೂಡುವುದಕ್ಕೆ ಎಲ್ಲರೂ ವಿಶ್ವಾಸದಿಂದ ಒಪ್ಪಿಗೆ ನೀಡಿದ್ದರು - ರಬಾಯಿಯವರು, ನೆಂಟರಿಷ್ಟರು, ಹಾದಾಸ್‌ನ ಗೆಳತಿಯರೂ ಕೂಡ. ಹರೆಯದ ಹುಡುಗನೊಬ್ಬ ಬೀದಿಯಲ್ಲಿ ಹೋಗುತ್ತಿದ್ದರೆ ನೋಡುವಂತೆ ಬೆಷೆವ್‌ನ ಹುಡುಗಿಯರು ಅನ್ಶೆಲ್‌ಳನ್ನು ದೃಷ್ಟಿಸಿ ನೋಡುತ್ತಿದ್ದರು. ಅನ್ಶೆಲ್ ತನ್ನ ಬೂಟ್ಸ್‌ಗಳನ್ನು ಪಾಲಿಷ್ ಮಾಡಿಕೊಂಡಿದ್ದಳು. ಯಾರಾದರೂ ಹೆಂಗಸರು ಎದುರಾದರೆ ತಲೆ ಕೆಳಗೆ ಹಾಕುತ್ತಿರಲಿಲ್ಲ. ಬೇಕರಿಯ ಹತ್ತಿರ ಇವಳು ಫ್ಲೆತ್ಸ್‌ಕೇಕ್ ಕೊಳ್ಳಲೆಂದು ನಿಂತಾಗ ಬೇಕರಿಯ ಬೈಲಾ ತಮಾಷೆ ಮಾಡುತ್ತ ಇದೆಲ್ಲ ಆಶ್ಚರ್ಯವಾಗಿದೆ ಎನ್ನುತ್ತಿದ್ದ. ಹೆಂಗಸರೆಲ್ಲ ಅನ್ಶೆಲ್‌ನಲ್ಲಿ ಏನೋ ವಿಶೇಷವಿದೆ ಎಂದು ಒಪ್ಪುತ್ತಿದ್ದರು : ಇವನ ಕೆನ್ನೆಗೂದಲು ಬೇರೆಲ್ಲರಿಗಿಂತ ಗುಂಗುರಾಗಿವೆ, ಕೊರಳಚೌಕವನ್ನು ಬೇರೆ ರೀತಿಯಲ್ಲಿ ಸುತ್ತಿಕೊಳ್ಳುತ್ತಾನೆ. ಇವನ ಕಣ್ಣುಗಳು ದೂರದಲ್ಲಿದ್ದರೂ ನಗುತ್ತವೆ, ದೂರದ ಯಾವುದೋ ಬಿಂದುವಿನಲ್ಲಿಯೇ ನೆಟ್ಟುಕೊಂಡಿರುತ್ತವೆ ; ಮತ್ತು ಇನ್ನೊಂದು ವಿಷಯವೆಂದರೆ ಅವಿಗ್ದೋರ್‌ಗೆ ಫೈತಲ್‌ನ ಮಗಳು ಪೇಷಳೊಂದಿಗೆ ನಿಶ್ಚಿತಾರ್ಥವಾಗಿ ಅವನ ಜೊತೆ ಬಿಟ್ಟ ನಂತರ ಪೇಟೆಯ ಜನರೆಲ್ಲ ಅನ್ಶೆಲ್‌ನೊಂದಿಗೆ ಮಾತಿಗೆ ತೊಡಗಿದ್ದರು. ಅಲ್ತರ್ ವಿಷ್ಕೋವೆರ್ ಮೊದಲಿನ ನಿಶ್ಚಿತಾರ್ಥವನ್ನು ಮುರಿದಿರುವುದರಿಂದ, ಅನ್ಶೆಲ್‌ಗೆ ಹೆಚ್ಚು ವರದಕ್ಷಿಣೆ ಕೊಡುವ ಮಾತು ಕೊಡಬಹುದು, ಹೆಚ್ಚು ಉಡುಗೊರೆಗಳು ಮತ್ತು ಅವಿಗ್ದೋರ್‌ಗೆ ಹೇಳಿದ್ದ ಅವಧಿಗಿಂತಲೂ ದೀರ್ಘ ಕಾಲದವರೆಗೆ ಖರ್ಚುವೆಚ್ಚಗಳನ್ನು ತೂಗಿಸುವುದಾಗಿಯೂ

ಹೇಳಬಹುದು. ಬೆಷೆವ್‌ನ ಹರೆಯದ ಹುಡುಗಿಯರು ಹಾದಾಸ್‌ಳ ಕೊರಳಿಗೆ ಕೈಹಾಕಿ ಅವಳನ್ನು ಅಭಿನಂದಿಸಿದ್ದರು. ಹಾದಾಸ್ ತಕ್ಷಣವೇ ಅನ್ನೆಲ್‌ಗೆ ಪ್ರಾರ್ಥನೆಯ ಸಾಮಗ್ರಿಗಳನ್ನು ಕೂಡಿಸಲಾರಂಭಿಸಿದಳು, ಒಂದು ಚೆಲ್ಲಾ ಬಟ್ಟೆ, ಒಂದು ಮತ್ಜೋಹ್ ಚೀಲ. ಅನ್ನೆಲ್‌ಗೆ ನಿಶ್ಚಿತಾರ್ಥವಾಗುವ ಸುದ್ದಿಯನ್ನು ಕೇಳಿದ ಅವಿಗ್ದೋರ್ ಪಾಠಶಾಲೆಗೆ ಬಂದು ತನ್ನ ಶುಭಾಶಯಗಳನ್ನು ಕೋರಿದ. ಮುಂದೆ ಉರುಳಿದ್ದ ಕೆಲವು ವಾರಗಳು ಅವನನ್ನು ವಯಸ್ಸಾದವನನ್ನಾಗಿಸಿದ್ದವು. ಗಡ್ಡದ ಕೂದಲು ಕೆದರಿ ಅಸ್ತವ್ಯಸ್ತವಾಗಿದ್ದವು. ಕಂಗಳು ಕೆಂಪಾಗಿದ್ದವು. ಇವನು ಅನ್ನೆಲ್‌ಗೆ ಹೇಳಿದ :

'ಇದು ಈ ರೀತಿಯೇ ನಡೆದಿದೆ ಅಂತ ನನಗೆ ಗೊತ್ತು, ಮೊದಲಿಂದಲೂ ಗೊತ್ತಿದೆ. ನಿನ್ನನ್ನ ನಾನು ಛತ್ರದಲ್ಲಿ ಭೇಟಿಯಾದೆನಲ್ಲ ಅಲ್ಲಿಂದ.'

'ಆದರೆ ನನಗೆ ಈ ಸಲಹೆ ಕೊಟ್ಟಿದ್ದೇ ನೀನು.'

'ನನಗೆ ಗೊತ್ತಿದೆ.'

'ನೀನು ಯಾಕೆ ನನ್ನನ್ನ ಒಂಟಿ ಮಾಡಿಬಿಟ್ಟೆ? ಒಂದು ಮಾತಿನ ನಮಸ್ಕಾರನೂ ಹೇಳಲಿಲ್ಲ.'

'ನನ್ನ ಹಿಂದೆಯೇ ನನ್ನ ಕನಸುಗಳನ್ನು ಸುಟ್ಟುಕೊಳ್ಳಬೇಕು ಅನ್ನಿಸ್ತು.'

ಅವಿಗ್ದೋರ್ ಸ್ವಲ್ಪ ದೂರ ನಡೆದು ಹೋಗೋಣವೆಂದು ಹೇಳಿದ. ಆಗ ಆಗಲೇ ಸುಕ್ಕೋತ್ ಉರುಳಿತ್ತು. ಹಗಲು ಬಿಸಿಲಿನಿಂದ ಹೊಳೆಯುತ್ತಿತ್ತು. ಮೊದಲಿಗಿಂತಲೂ ಆತ್ಮೀಯವಾಗಿರುವಂತೆ ಅವಿಗ್ದೋರ್ ತನ್ನ ಹೃದಯವನ್ನು ಅನ್ನೆಲ್‌ಗೆ ತೆರೆದುಕೊಂಡ. ಹೌದು, ಇದು ಸತ್ಯ. ಇವನ ಅಣ್ಣನೊಬ್ಬ ಮಾನಸಿಕವಾಗಿ ಅಸ್ವಸ್ಥನಾಗಿದ್ದು ನೇಣು ಹಾಕಿಕೊಂಡ. ಇವನೂ ಸಹ ಈಗ ನಿಧಾನವಾಗಿ ಪಾಪದಂಚಿಗೆ ಸಮೀಪಿಸುತ್ತಿದ್ದಾನೆ. ಪೇಷೆ ಹೇರಳವಾಗಿ ಹಣವಿರಿಸಿಕೊಂಡಿದ್ದಾಳೆ ಮತ್ತು ಇವಳ ತಂದೆಯೂ ಶ್ರೀಮಂತ ಮನುಷ್ಯ. ಆದರೂ ರಾತ್ರಿಯಲ್ಲಿ ಇವನಿಗೆ ನಿದ್ದೆ ಮಾಡಲಾಗುವುದಿಲ್ಲ. ಅಂಗಡಿ ನೋಡಿಕೊಳ್ಳುವುದು ಇವನಿಗೆ ಇಷ್ಟವಿಲ್ಲ. ಹಾದಾಸ್‌ಳನ್ನು ಮರೆಯಲಾಗುತ್ತಿಲ್ಲ. ಅವಳು ಇವನ ಕನಸಿನಲ್ಲಿ ಬರುತ್ತಾಳೆ. ಸಬ್ಬತ್‌ನ ರಾತ್ರಿ ಅವಳ ಹೆಸರು ಹವ್‌ದ್ಲಾ ಪ್ರಾರ್ಥನೆಯಲ್ಲಿ ಉದ್ಧೃತವಾದಾಗ ಇವನ ತಲೆ ಸುತ್ತುತ್ತದೆ. ಹೀಗಿದ್ದರೂ ಅವಳನ್ನು ಬೇರೆ ಯಾರೂ ಕೈ ಹಿಡಿಯದೆ ಅನ್ನೆಲ್‌ನಂಥವನು ಮದುವೆಯಾಗುತ್ತಿರು

ವುದು ಒಳ್ಳೆಯದಾಗಿದೆ..... ಅವಳು ಒಳ್ಳೆಯವನ ಕೈಗಾದರೂ ಬೀಳುತ್ತಿದ್ದಾಳೆ. ಯಾವ ಗೊತ್ತುಗುರಿಯೂ ಇಲ್ಲದವನಂತೆ ನಿಂತ ಅವಿಗ್ದೋರ್ ಹುಲ್ಲಿನ ಮೇಲೆ ಉರುಳಿಕೊಂಡ. ಅವನ ಮಾತು ಗುರುತು ಸಿಗದಂಥಾಗಿದ್ದವು, ಹುಚ್ಚು ಹಿಡಿದಿರುವ ಮನುಷ್ಯನಂತೆ. ಅವನು ಥಟ್ಟನೆ ಹೇಳಿದ :

'ನನಗೂ ನನ್ನ ಅಣ್ಣ ಮಾಡಿಕೊಂಡಿದ್ದ ಯೋಚನೆ ಬರತಿದೆ.'

'ನೀನು ಅವಳನ್ನ ತುಂಬ ಪ್ರೀತಿಸತಿದ್ದಯೇನು?'

'ಅವಳು ನನ್ನ ಹೃದಯದಲ್ಲಿ ತುಂಬಿ ನಿಂತಿದಾಳೆ.'

ತಮ್ಮ ಸ್ನೇಹ ಎಂದಿಗೂ ಕಡಿಯುವುದಿಲ್ಲ ಎಂದು ಇಬ್ಬರೂ ಮಾತು ಕೊಟ್ಟುಕೊಂಡರು. ಅನ್ನೆಲ್ ಒಂದು ಸಲಹೆಯನ್ನಿಟ್ಟಳು ; ತಾವಿಬ್ಬರೂ ಮದುವೆಯಾದ ಮೇಲೆ ಅಕ್ಕಪಕ್ಕದ ಮನೆಗಳಲ್ಲಿ ಅಥವಾ ಒಂದೇ ಮನೆಯನ್ನು ಹಂಚಿಕೊಂಡು ಬದುಕಬೇಕು. ಇಬ್ಬರೂ ಪ್ರತಿದಿನ ಒಟ್ಟಿಗೆ ಓದುತ್ತ ಅಧ್ಯಯನದಲ್ಲಿ ಮುಳುಗಬೇಕು. ಒಂದು ವೇಳೆ ಇಬ್ಬರೂ ಅಂಗಡಿಯಲ್ಲಿ ಪಾಲುದಾರರೂ ಆಗಬಹುದು.

'ನಿನಗೆ ಸತ್ಯ ತಿಳಿಕೊಳ್ಳಬೇಕು ಅನ್ನಿಸುತ್ತೇನು?' ಅವಿಗ್ದೋರ್ ಕೇಳಿದ : 'ಜಾಕೋಬ್ ಮತ್ತು ಬೆಂಜಮಿನ್‌ರ ಕತೆ ಇದ್ದ ಹಾಗಿದೆ. ನನ್ನ ಜೀವನ ನಿನ್ನ ಜೀವನದ ಜೊತೆ ಸುತ್ತಿಕೊಂಡಿದೆ.'

'ಹಾಗಿದ್ದ ಮೇಲೆ ನೀನು ಯಾಕೆ ನನ್ನನ್ನ ದೂರ ಮಾಡಿದ್ದೆ.'

'ಅದಕ್ಕೆ ಇದೇ ಕಾರಣವಿರಬಹುದು.'

ಹಗಲು ತಂಪಾಗುತ್ತ ಮೆಲುಗಾಳಿ ಬೀಸಲಾರಂಭಿಸಿತು. ಇಬ್ಬರೂ ಪೈನ್ ಕಾಡಿನತ್ತ ನಡೆಯುತ್ತ ಹೊರಟರು. ಸಂಜೆಯ ಮಬ್ಬಿಳಿದು ಪ್ರಾರ್ಥನೆಯ ಹೊತ್ತಾಗುವವರೆಗೂ ಮರಳಿ ಹೊರಳಲಿಲ್ಲ. ಬೆಷೆವ್‌ನ ಹುಡುಗಿಯರು ಈ ಇಬ್ಬರೂ ಪರಸ್ಪರರ ಹೆಗಲಿನಲ್ಲಿ ಕೈ ಹಾಕಿಕೊಂಡು ಮಾತಾಡುತ್ತ ಹಳ್ಳದ ತೊರೆಗಳನ್ನು ದಾಟುತ್ತ ಹೋಗುತ್ತಿರುವುದನ್ನು ತಮ್ಮ ಕಿಟಕಿಗಳಿಂದ ದಿಟ್ಟಿಸಿ ನೋಡಿದರು. ಅವಿಗ್ದೋರ್ ಬಳಲಿದ್ದ, ಕೂದಲು ಕೆದರಿದ್ದವು, ಒಂದೆಡೆಯ ಕೆನ್ನೆಗೂದಲುಗಳನ್ನು ಗಾಳಿ ಹಾರಾಡಿಸುತ್ತಿತ್ತು ; ಅನ್ನೆಲ್ ತನ್ನ ಉಗುರನ್ನು ಕಡಿದುಕೊಳ್ಳುತ್ತಿದ್ದಳು. ಹಾದಾಸ್ ಸಹ

ಕಿಟಕಿಯತ್ತ ಓಡಿದ್ದಳು. ಒಮ್ಮೆ ದೃಷ್ಟಿ ಹರಿಸಿದ್ದಳು. ಅವಳ ಕಂಗಳಲ್ಲಿ ನೀರು ತುಂಬಿದ್ದವು....

ಘಟನೆಗಳು ಶೀಘ್ರವಾಗಿ ಸಾಗಿದವು. ಅವಿಗ್ಡೋರ್ ಮೊದಲು ಮದುವೆಯಾದ. ಏಕೆಂದರೆ ಹೆಣ್ಣು ವಿಧವೆ. ಮದುವೆ ಸದ್ದಿಲ್ಲದಂತಿತ್ತು, ವಾದ್ಯದವರಿರಲಿಲ್ಲ, ವಿದೂಷಕನಿರಲಿಲ್ಲ. ಸಂಪ್ರದಾಯದಂತೆ ಹೆಣ್ಣು ತೆಳುಬಟ್ಟೆಯಿಂದ ಮುಖ ಮುಚ್ಚಿಕೊಂಡಿರಲಿಲ್ಲ. ಒಂದು ದಿನ ಪೇಷೆ ಮದುವೆ ಕಟ್ಟೆಯಲ್ಲಿ ನಿಂತಳು, ನಂತರ ತನ್ನ ಅಂಗಡಿಗೆ ಮರಳಿದಳು. ಕೈಗಳಲ್ಲಿದ್ದ ಹಚ್ಚೆಯ ಕಲೆಯನ್ನು ಎಣ್ಣೆಯಿಂದ ತೊಳೆದುಕೊಂಡಿದ್ದಳು. ಅವಿಗ್ಡೋರ್ ಹೊಸ ಶಾಲು ಹೊದ್ದು ಹ್ಯಾಸ್ಡಿಕ್ ವಿದ್ವಾಂಸರ ಸಭೆಯಲ್ಲಿ ಪ್ರಾರ್ಥನೆ ಸಲ್ಲಿಸಿದ. ಅನ್ಷೆಲ್ ಇವನನ್ನು ಭೇಟಿಯಾಗಲು ಮಧ್ಯಾಹ್ನದ ವೇಳೆಯಲ್ಲಿ ಹೋಗುತ್ತಿದ್ದ. ಪಿಸುಮಾತಿನೊಂದಿಗೆ ಇಬ್ಬರೂ ಸಂಜೆಯವರೆಗೆ ಮಾತಾಡುತ್ತಿದ್ದರು. ಅನ್ಷೆಲ್ ಮದುವೆ ಹಾದಾಸ್‌ಳೊಂದಿಗೆ ಚನ್ನೂಕ ವಾರದ ಸಬ್ಬತ್ ನಂದು ಎಂದು ನಿಷ್ಕರ್ಷಿತವಾಯಿತು. ಭಾವಿಮಾವ ಬೇಗ ಮದುವೆ ಮಾಡಲು ಇಚ್ಛಿಸಿದ್ದ. ಹಾದಾಸ್ ಆಗಲೇ ಒಮ್ಮೆ ನಿಶ್ಚಿತಾರ್ಥವಾಗಿದ್ದವಳು. ಜೊತೆಗೆ ಗಂಡು ಅನಾಥ. ಹೀಗಿರುವಾಗ ಅವನು ತನ್ನವಳಾಗಲಿರುವ ಹೆಂಡತಿ ಮತ್ತು ಮನೆಯನ್ನು ಬಿಟ್ಟು ವಿಧವೆಯೊಬ್ಬಳ ಮನೆಯಲ್ಲಿ ಏಕೆ ಮಲಗಬೇಕು ?

ಪ್ರತಿದಿನ ಅನ್ಷೆಲ್ ಹಲವಾರು ಸಲ ತಾನೇನು ಮಾಡುತ್ತಿದ್ದೇನೆ, ಇದು ತುಂಬ ಪಾಪದ್ದು, ಕೆಟ್ಟದ್ದು, ಅಧೋಗತಿಗಿಳಿಯುವಂಥದ್ದು ಎಂದು ತನ್ನಲ್ಲಿಯೇ ಎಚ್ಚರಿಸಿಕೊಳ್ಳುತ್ತಿದ್ದಳು. ತನ್ನನ್ನು ಮತ್ತು ಹಾದಾಸ್‌ಳನ್ನು ಒಂದೇ ಸರಪಳಿಯಲ್ಲಿ ಬಿಗಿದುಕೊಂಡು ಯಾವ ಕಾಲಕ್ಕೂ ಪರಿಹರಿಸಲಾಗದಂಥ ಪಾಪಗಳಲ್ಲಿ ಮುಳುಗುತ್ತೇನೆ ಅಂದುಕೊಳ್ಳುತ್ತಿದ್ದಳು. ಒಂದು ಸುಳ್ಳು ಮತ್ತೊಂದನ್ನು ಅನುಸರಿಸುತ್ತದೆ. ತನ್ನ ಮನಸ್ಸಿನಲ್ಲಿ ಹೀಗೆ ಯೋಚಿಸಿಕೊಳ್ಳುವಾಗ ಅವಳಿಗೆ ಬೆಷೆವ್ ಬಿಟ್ಟು ಹೋಗಬೇಕು ಅನಿಸುತ್ತದೆ. ದೆವ್ವವೊಂದು ಮಾನವ ವೇಷದಲ್ಲಿಗೈಯುತ್ತಿರುವಂಥ ಈ ವಿಚಿತ್ರ ಹಾಸ್ಯವನ್ನು ಕೊನೆಗೊಳಿಸಬೇಕು ಅಂದುಕೊಳ್ಳುತ್ತಾಳೆ. ಆದರೆ ಅವಳು ಒಂದು ಶಕ್ತಿಯ ಹಿಡಿತದಲ್ಲಿ ಸಿಲುಕಿದ್ದು ಅದನ್ನು ಕಳಚಿಕೊಳ್ಳಲಾಗಿರಲಿಲ್ಲ. ಅವಿಗ್ಡೋರ್‌ನೊಂದಿಗೆ ಹೆಚ್ಚಾಗಿ ಅಂಟಿಕೊಳ್ಳಲಾರಂಭಿಸಿದಳು. ಹಾದಾಸ್‌ಳೊಂದಿಗಿನ ಭಾವನೆಗಳ ಉಲ್ಲಾಸಗಳನ್ನೂ ನಾಶಪಡಿಸಿಕೊಳ್ಳಲಿಲ್ಲ. ಅವನೀಗ ಮದುವೆಯಾಗಿದ್ದ. ಅವಿಗ್ಡೋರ್‌ನಲ್ಲಿ

ಈಗ ಮೊದಲಿಗಿಂತಲೂ ಹೆಚ್ಚಾದ ಓದುವ ತೀವ್ರತೆ ತುಂಬಿತ್ತು. ಇಬ್ಬರು ಸ್ನೇಹಿಗಳೂ ದಿನಕ್ಕೆರಡು ಸಲ ಭೇಟಿಯಾಗುತ್ತಿದ್ದರು : ಬೆಳಿಗ್ಗೆ ಗೆಮಾರಾ ಮತ್ತು ಇದರ ಭಾಷ್ಯಗಳನ್ನು ಓದುತ್ತಿದ್ದರು; ಮಧ್ಯಾಹ್ನಗಳಲ್ಲಿ ವಿಧಿವಿಧಾನಗಳು ಮತ್ತು ಇವುಗಳ ಆಚರಣೆಗಳ ವಿವರಗಳನ್ನು ಅಭ್ಯಸಿಸುತ್ತಿದ್ದರು. ಅಲ್ತರ್ ವಿಷ್ಕೋವೆರ್ ಮತ್ತು ಚರ್ಮಕಾರ ಪೈತೆಲ್ ಈ ಅವಿಗ್ಡೋರ್ ಮತ್ತು ಅನ್ಶೆಲ್‌ರನ್ನು ದಾವೂದ್ ಮತ್ತು ಜೋನತನ್‌ಗೆ ಹೋಲಿಸುತ್ತಿದ್ದರು. ಈ ಎಲ್ಲ ಗೊಂದಲಗಳ ನಡುವಿನಲ್ಲಿಯೂ ಅನ್ಶೆಲ್ ಹುಡುಗನಂತೆ ವರ್ತಿಸುತ್ತಿದ್ದಳು. ದರ್ಜಿಗಳು ಹೊಸ ಉಡುಪುಗಳನ್ನು ಹೊಲಿಯಲೆಂದು ತೆಗೆದುಕೊಳ್ಳುವ ಎಲ್ಲ ಅಳತೆಗಳಿಗೂ ವಿರೋಧಿಸಿದ್ದ ಇವಳು ತಾನು ಗಂಡಸಲ್ಲ ಎನ್ನುವುದು ಇವರಿಂದ ಬಯಲಾಗುತ್ತದೇನೋ ಅಂದುಕೊಂಡಿದ್ದಳು. ಈ ವಂಚನೆ ಇನ್ನು ಕೆಲವೇ ವಾರಗಳಲ್ಲಿ ಕೊನೆಯಾಗುತ್ತದೆ, ಅನ್ಶೆಲ್‌ಗೆ ಇದನ್ನೆಲ್ಲ ನಂಬಲಾಗುವುದಿಲ್ಲ : ಇದು ಹೇಗೆ ಸಾಧ್ಯ? ಒಂದು ಜನಾಂಗವನ್ನು ಮೂರ್ಖವಾಗಿಸುವುದು ಒಂದು ಆಟವಾಗುತ್ತದೆ. ಆದರೆ ಇದು ಎಷ್ಟು ಕಾಲದವರೆಗೆ ಸಾಗುತ್ತದೆ ? ಮತ್ತು ಸತ್ಯ ಯಾವ ರೀತಿಯಲ್ಲಿ ಯಾದರೂ ಹೊರಗೆ ಬರುತ್ತದೆ. ಅನ್ಶೆಲ್ ತನ್ನಲ್ಲಿಯೇ ನಗುತ್ತಿದ್ದಳು, ಅಳುತ್ತಿದ್ದಳು. ತಾನು ಯಕ್ಷಿಯಾಗಿ ಪರಿವರ್ತನೆ ಹೊಂದಿ ಮರಳಿದರೆ ಜನರಿಗೆ ಬೆರಗಾಗುವ ತಂತ್ರಗಳನ್ನು ತೋರಿಸಬಹುದು. ನಾನೊಬ್ಬ ನೀಚ, ಪಾಪಿ, ಜೆರೋಬೋವ್ ಬೆನ್ ನಬತ್ ಎಂದು ತನ್ನಲ್ಲಿಯೇ ಹೇಳಿಕೊಂಡಿದ್ದಳು. ಈ ಎಲ್ಲ ವೇಷಾಂತರಗಳ ಕಾರ್ಯಗಳಿಗೆ ಅವಳಲ್ಲಿದ್ದ ಒಂದು ಸಮಾಧಾನಕರ ವಿವರಣೆ ಎಂದರೆ, ಅವಳ ಆತ್ಮದಲ್ಲಿದ್ದ ತೋರಾ ಅಭ್ಯಾಸ ಮಾಡಬೇಕೆಂಬ ಹಸಿವು......

ಅವಿಗ್ಡೋರ್ ಕೆಲವು ದಿನಗಳಲ್ಲಿಯೇ ಪೇಷ ತನ್ನನ್ನು ಕೆಟ್ಟದಾಗಿ ಉಪಚರಿಸುತ್ತಾಳೆ ಎಂದು ದೂರಿದ. ಅವಳು ಇವನನ್ನು ಸೋಮಾರಿ, ಮೈಗಳ್ಳ, ಮನೆಯಲ್ಲಿ ಊಟಕ್ಕಿರುವ ಒಂದು ಬಾಯಿ ಅಂದಿದ್ದಳು. ಇವನನ್ನು ಅವಳು ಅಂಗಡಿಯಲ್ಲಿ ಕಟ್ಟಿಹಾಕಲು ನೋಡಿದ್ದಳು. ತನ್ನ ಮಾತುಗಳಿಂದ ಇವನನ್ನು ತನ್ನ ಅಧೀನವಾಗಿಸಿಕೊಳ್ಳಲು ಯತ್ನಿಸುತ್ತಿದ್ದಳು. ಇವನ ಚಿಲ್ಲರೆ ಖರ್ಚಿಗೆ ಹಣ ಕೊಡಲು ನಿರಾಕರಿಸಿದ್ದಳು. ಅವಿಗ್ಡೋರ್‌ನ ದೂರುಗಳನ್ನು ಕೇಳಿ ಪೇಷಯನ್ನು ಅನ್ಶೆಲ್ ನಿಂದಿಸಿದಳು. ಇವನ ಹೆಂಡತಿಯನ್ನು ಒಕ್ಕಣ್ಣಿ, ಜಿಪುಣ, ಬಜಾರಿ, ತನ್ನ ಮೊದಲ ಗಂಡನನ್ನು ತಾನೇ ನೇಣು ಹಾಕಿರುವುದರಲ್ಲಿ ಅನುಮಾನವಿಲ್ಲ ಮತ್ತು ಅವಿಗ್ಡೋರ್‌ನಿಗೂ ಹೀಗೆಯೇ ಆಗುತ್ತದೆ

ಎಂದಳು. ಇದರೊಂದಿಗೇ ಅನ್ನೆಲ್‌ಳು ಅವಿಗ್ಡೋರ್‌ನ ಗುಣಗಳನ್ನು ಪ್ರಶಂಸೆಗೈದಳು. ಇವನ ಔನ್ನತ್ಯ ಮತ್ತು ಸಭ್ಯತೆ, ಬುದ್ಧಿವಂತಿಕೆ, ಪಾಂಡಿತ್ಯ.

'ನಾನೇನಾದರೂ ಹೆಣ್ಣಾಗಿದ್ದರೆ ನಿನ್ನನ್ನ ಮದುವೆಯಾಗತಿದ್ದೆ' ಅನ್ನೆಲ್ ಹೇಳಿದಳು, 'ನಾನು ನಿನ್ನನ್ನ ಹೇಗೆ ಕೊಂಡಾಡಬೇಕು ಅಂತ ತಿಳಿಯೋದಿಲ್ಲ.'

'ಒಳ್ಳೇದು. ಆದರೆ ನೀನು ಹೆಣ್ಣಲ್ಲವಲ್ಲ....'

ಹೀಗಿರುವಾಗ ಅನ್ನೆಲ್‌ಳ ಮದುವೆ ದಿನ ಸಮೀಪಿಸಿತು.

ಚನ್ನೂಕಗೆ ಮೊದಲಿನ ಸಬ್ಬತ್‌ನಲ್ಲಿ ಅನ್ನೆಲ್‌ಳನ್ನು ತೋರಾ ಓದಲು ವೇದಿಕೆಗೆ ಕರೆತರಲಾಯಿತು. ಹೆಂಗಸರು ಇವಳ ಮೇಲೆ ದ್ರಾಕ್ಷಿ ಮತ್ತು ಬಾದಾಮಿಗಳನ್ನು ಸುರಿದರು. ಮದುವೆ ದಿನ ಅಲ್ತರ್ ವಿಷ್ಕೋವೆರ್ ಹರೆಯದ ಹುಡುಗರಿಗೆ ಔತಣ ನೀಡಿದರು. ಅನ್ನೆಲ್‌ಳ ಬಲಗಡೆಯಲ್ಲಿ ಅವಿಗ್ಡೋರ್ ಕುಳಿತಿದ್ದ. ಮದುವಳಿಗ ತಾಲ ಮೂದ್ ಪಠಿಸಿದ. ನೆರೆದ ಗುಂಪು ವಿಷಯಗಳನ್ನು ಕೇಳುತ್ತ ಚರ್ಚಿಸಿದರು. ಸಿಗರೇಟ್ ಸೇದುತ್ತ, ವೈನ್ ಸೇವಿಸುತ್ತ, ಪಾನೀಯಗಳನ್ನು ಕುಡಿಯುತ್ತ ರಾಸ್ಬೆರಿ ಅಥವಾ ನಿಂಬೆ ಜಾಮ್‌ನೊಂದಿಗೆ ಟೀ ಕುಡಿಯುತ್ತ ಕೂಟ ಸಾಗುತ್ತಿತ್ತು. ನಂತರ ಮದುವಣಗಿತ್ತಿಯ ಸಂಸ್ಕಾರ ಆರಂಭವಾಗಿತ್ತು. ಇದರ ನಂತರ ಗಂಡನ್ನು ಸಿನಗಾಗ್ ಬಳಿಯ ಮದುವೆ ಕಟ್ಟೆಗೆ ಕರೆದೊಯ್ಯಲಾಯಿತು. ರಾತ್ರಿ ತಂಪಾಗಿ ತಿಳಿಯಾಗಿತ್ತು. ಆಕಾಶ ನಕ್ಷತ್ರಗಳಿಂದ ತುಂಬಿಕೊಂಡಿತ್ತು. ವಾದ್ಯದವರು ಶೃತಿ ಹಿಡಿದರು. ಹುಡುಗಿಯರು ಎರಡು ಸಾಲಿನಲ್ಲಿ ತಿಳಿಬೆಳಕಿನ ಮೊಂಬತ್ತಿಗಳನ್ನು ಹಿಡಿದು ಬಂದರು. ಮದುವೆ ಕಾರ್ಯದ ನಂತರ ಗಂಡು ಮತ್ತು ಹೆಣ್ಣು ಬಂಗಾರದ ಕೋಳಿಸಾರಿನಲ್ಲಿ ತಮ್ಮ ಉಪವಾಸವನ್ನು ಕೊನೆಗೊಳಿಸಿದರು. ನಂತರ ನೃತ್ಯ ಆರಂಭವಾಯಿತು. ಉಡುಗೊರೆಗಳನ್ನು ಓದಲಾಯಿತು. ಎಲ್ಲವೂ ಸಂಪ್ರದಾಯದಂತೆಯೇ ಇತ್ತು. ಉಡುಗೊರೆಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು ಬೆಲೆಯುಳ್ಳವೂ ಆಗಿದ್ದವು. ವಿದೂಷಕ ಉಲ್ಲಾಸ ಮತ್ತು ದುಃಖಗಳನ್ನು ಅಭಿನಯಿಸುತ್ತ ಹೆಣ್ಣು ಅಂಗಡಿಯಲ್ಲಿರುವಂತೆ ಹಾಸ್ಯವನ್ನು ಸೃಷ್ಟಿಸುತ್ತಿದ್ದ. ಅವಿಗ್ಡೋರ್‌ನ ಹೆಂಡತಿ ಪೇಷಳೂ ಒಬ್ಬ ಅತಿಥಿಯಾಗಿದ್ದಳು. ಆದರೆ ಅವಳು ಒಡವೆಗಳನ್ನು ಧರಿಸಿಕೊಂಡಿದ್ದಳು. ಮುಂದಲೆಯ ಹಣೆಯವರೆಗೆ ಬರುವಂತೆ ಹಾಕಿಕೊಂಡಿದ್ದ ದುಬಾರಿ ಫರ್ ಟೋಪಿಯಲ್ಲಿದ್ದರೂ ಅವಳು ಈಗಲೂ ಕುರೂಪಿಯಾಗಿ ಕಾಣುತ್ತಿದ್ದಳು. ಅವಳ

ಕೈಗಳ ಹಚ್ಚೆಕಲೆಗಳು ಯಾವುದರಿಂದ ತೊಳೆದರೂ ಹೋಗದಂತಿದ್ದವು. ಸಾಂಪ್ರದಾಯಿಕ ನೃತ್ಯದ ನಂತರ ಹೆಣ್ಣು ಮತ್ತು ಗಂಡುಗಳನ್ನು ಮದುವೆ ಮನೆಯ ಕೋಣೆಯಲ್ಲಿ ಬಿಡಲಾಯಿತು. ಮದುವೆಗೆ ಬಂದಿದ್ದವರು ಹೊಸಜೋಡಿಗಳಿಗೆ ಸಂತೋಷೋಲ್ಲಾಸಗಳನ್ನು ಸರಿಯಾದ ರೀತಿಯಲ್ಲಿ ಅನುಭವಿಸುವಂತೆ ಸೂಚಿಸಿದರು : 'ಫಲ ಬೆಳೆದು ವರ್ಧಿಸಲಿ.'

ಮುಂಜಾನೆ ಅನ್ಸೆಲ್‌ಳ ಅತ್ತೆ ಮತ್ತು ಇವಳ ಬಳಗ ನಿಷೇಕದ ಕೋಣೆಗೆ ಹೋಗಿ ಹಾಸಿಗೆ ಮೇಲಿನ ಬಟ್ಟೆಗಳನ್ನು ಪರೀಕ್ಷಿಸುತ್ತ ಹಾದಾಸ್‌ಳ ಮದುವೆ ಸಂತೃಪ್ತವಾಗಿ ನೆರವೇರಿದೆಯೇ ಎಂದು ಅರಸಿದಳು. ರಕ್ತದ ಕಲೆಗಳನ್ನು ಕಂಡೊಡನೆ ಗುಂಪು ಗೆಲುವಿನಿಂದ ನಲಿಯುತ್ತ ಹೆಣ್ಣಿನ ಸುತ್ತ ಸುತ್ತಿಕೊಂಡು ಅವಳಿಗೆ ಮುದ್ದಿಡಲಾರಂಭಿಸಿದರು. ನಂತರ ಆ ಬಟ್ಟೆಯನ್ನು ಸುತ್ತಲೂ ತಿರುಗಿಸುತ್ತ ಎಲ್ಲರೂ ಹೊರಗೋಡಿ ಹೊಸದಾಗಿ ಸುರಿದಿದ್ದ ಮಂಜಿನ ಮೇಲೆ ಕೋಷರ್ ನರ್ತನದಲ್ಲಿ ಮುಳುಗಿದರು. ಹೆಣ್ಣಿನ ಕನ್ಯತ್ವವನ್ನು ಅನ್ಸೆಲ್ ತೊಡೆಯಲು ಒಂದು ಉಪಾಯ ಹುಡುಕಿದ್ದಳು. ಹಾದಾಸ್ ತನ್ನ ಮುಗ್ಧತೆಯಲ್ಲಿ ಇಂಥವೆಲ್ಲ ಹೇಗೆ ಸಂಭವಿಸುತ್ತವೆ ಎಂದು ತಿಳಿಯದಂತಿದ್ದಳು. ಈಗಾಗಲೇ ಅವಳು ಅನ್ಸೆಲ್‌ಳನ್ನು ತುಂಬ ಪ್ರೀತಿಸಲಾರಂಭಿಸಿದಳು. ನಿಷೇಕದಿಂದ ಏಳು ದಿನಗಳವರೆಗೆ ಗಂಡು ಮತ್ತು ಹೆಣ್ಣು ಬೇರೆಯಾಗುವಂತಿರಲಿಲ್ಲ. ಮರುದಿನ ಅವಿಗ್ಡೋರ್ ಮತ್ತು ಅನ್ಸೆಲ್ ಹೆಂಗಸು ರಜಸ್ವಲೆಯಾಗುವುದರ ಸುಳಿವನ್ನು ತಿಳಿಯಲೆಂದು ಓದಿನಲ್ಲಿ ಮುಳುಗಿದರು. ಅಲ್ಲಿಗೆ ಇನ್ನೊಬ್ಬ ಮನುಷ್ಯ ಬಂದಾಗ ಇಬ್ಬರೂ ಸಿನಗಾಗ್‌ನ ಕಡೆ ಹೊರಟರು. ಅವಿಗ್ಡೋರ್ ಅಳುಕುತ್ತಲೇ ಹಾದಾಸ್ ಳೊಂದಿಗಿನ ಮೊದಲ ರಾತ್ರಿ ಹೇಗಿತ್ತೆಂದು ಅನ್ಸೆಲ್‌ಳನ್ನು ಕೇಳಿದ. ಅನ್ಸೆಲ್ ಇವನ ಕುತೂಹಲ ತಣಿಯುವಂತೆ ಕತ್ತಲಾಗುವವರೆಗೂ ಪಿಸುಮಾತಿನಲ್ಲಿ ಮುಳುಗಿದಳು.

೫

ಅನ್ಸೆಲ್ ಒಳ್ಳೆಯ ಕೈಗಳಲ್ಲಿ ಬಿದ್ದಳು. ಹಾದಾಸ್ ನಿಷ್ಠಾವಂತ ಹೆಂಡತಿ, ಮತ್ತು ಇವಳ ತಂದೆ ತಾಯಿಯರು ಅಳಿಯನ ಪ್ರತಿಯೊಂದು ಅವಶ್ಯಕತೆಯನ್ನೂ ಇವನಿಗೆ ತೃಪ್ತವಾಗುವಂತೆ ಈಡೇರಿಸುತ್ತಾರೆ. ಖಂಡಿತವಾಗಿ, ಹಲವಾರು ತಿಂಗಳುಗಳು ಉರುಳಿದರೂ ಒಂದು ಮಗು ಇಲ್ಲದಂತಿದ್ದಳು. ಆದರೆ ಯಾರೂ ಇದನ್ನು ಗಂಭೀರವಾಗಿ

ಪರಿಗಣಿಸಲಿಲ್ಲ. ಅಲ್ಲಿ, ಇನ್ನೊಂದು ಕಡೆ ಅವಿಗ್ದೋರ್‌ನ ಅವಸ್ಥೆ ತೀರ ಕೆಡುತ್ತ ಹೋಯಿತು. ಪೇಷೆ ಇವನಿಗೆ ಅತಿಯಾಗಿ ಕಿರುಕುಳ ಕೊಡುತ್ತಿದ್ದಳು, ಇವನಿಗೆ ಊಟಕ್ಕೆ ನೀಡದಂತಿದ್ದವಳು ಇವನ ಬಟ್ಟೆಗಳನ್ನು ತೊಳೆಯಲೂ ನಿರಾಕರಿಸಿದ್ದಳು. ಇವನಿಗೀಗ ಒಂದು ಪೆನ್ನಿಯೂ ಇಲ್ಲದಂತಾಗಿತ್ತು. ಅನ್ಷೆಲ್ ಇವನಿಗೆ ದಿನವೂ ಜವೆಗೋದಿಯ ಕೇಕ್ ಒಯ್ಯುತ್ತಿದ್ದಳು. ಏಕೆಂದರೆ ಪೇಷೆ ತುಂಬ ಗಡಿಬಿಡಿಯಲ್ಲಿ ಇರುತ್ತಿದ್ದು ಅಡಿಗೆ ಮಾಡುವ ಪುರುಸೊತ್ತಿಲ್ಲದೆ ಕೆಲಸದ ಆಳನ್ನಿರಿಸಿಕೊಳ್ಳಲೂ ಜಿಪುಣತನ ತೋರಿದ್ದಳು. ಅನ್ಷೆಲ್ ತಮ್ಮ ಮನೆಗೆ ಬಂದು ಅವಿಗ್ದೋರ್‌ನಿಗೆ ಊಟ ಮಾಡುವಂತೆ ಹೇಳಿದಳು. ಆದರೆ ರೆಬ್ ಅಲ್ತೆರ್ ವಿಷ್ಕೋವೆರ್ ಮತ್ತು ಇವನ ಹೆಂಡತಿ ಇದನ್ನು ವಿರೋಧಿಸಿ, ಒಮ್ಮೆ ನಿಶ್ಚಿತಾರ್ಥವಾಗಿ ಇದನ್ನು ಮುರಿದುಕೊಂಡ ಗಂಡು ತಾನು ಮದುವೆಯಾಗಬೇಕಿದ್ದವಳ ಮನೆಗೆ ಬರುವುದು ಸರಿಯಲ್ಲ ಎಂದು ವಾದಿಸಿದರು. ಇಡೀ ಪೇಟೆಯಲ್ಲಿ ಇದರ ಕುರಿತು ಸಾಕಷ್ಟು ಮಾತುಕತೆಗಳು ಸಾಗಿದವು. ಆದರೆ ಅನ್ಷೆಲ್ ಇದು ಸಂಪ್ರದಾಯ ವಿಧಿಗಳಲ್ಲಿ ವಿರೋಧಿಸಿರುವಂಥದಲ್ಲ ಎಂದು ದೃಷ್ಟಾಂತಗಳೊಂದಿಗೆ ಹೇಳಿದಳು. ಪೇಟೆಯ ಹೆಚ್ಚಿನ ಜನ ಅವಿಗ್ದೋರ್‌ನ ಪರವಾಗಿದ್ದ ಎಲ್ಲ ತಪ್ಪನ್ನೂ ಪೇಷೆಯ ಮೇಲೆ ಹೊರಿಸಿದರು. ಅವಿಗ್ದೋರ್ ವಿಚ್ಛೇದನಕ್ಕಾಗಿ ಪೇಷಳನ್ನು ಒತ್ತಾಯಿಸಿದ. ಏಕೆಂದರೆ ಅವನು ಈ ಸಿಡುಕಿಯಿಂದ ಒಂದು ಮಗುವನ್ನೂ ಪಡೆದಿರಲಿಲ್ಲ. ಇವನು ಓನನ್‌ನಂತೆ ವರ್ತಿಸುತ್ತಿದ್ದ ಅಥವಾ ಗೆಮಾರಾ ವ್ಯಾಖ್ಯಾನಿಸಿರುವಂತೆ : ಅವನು ಬೀಜವನ್ನು ಒಳಗೆ ನೆಟ್ಟ ಮತ್ತು ಅದು ನಿಷ್ಫಲವಾಯಿತು. ಅನ್ಷೆಲ್ ಹತ್ತಿರ ಇವನು ಗುಟ್ಟಾಗಿ ಪೇಷೆ ಹೇಗೆ ಮೈ ತೊಳೆದುಕೊಳ್ಳದೆ ಹಾಸಿಗೆಗೆ ಬರುತ್ತಾಳೆ ಮತ್ತು ಹೇಗೆ ಜೋರಾದ ಸದ್ದಿನಿಂದ ಗರಗಸ ಕೊಯ್ಯುತ್ತಿರುವಂತೆ ಗೊರಕೆ ಹೊಡೆಯುತ್ತಾಳೆ, ಅಂಗಡಿಯಲ್ಲಿ ಹಣವನ್ನು ಹೇಗೆ ತೆಗೆದಿರಿಸಿಕೊಳ್ಳುತ್ತಾಳೆ ಮತ್ತು ಇದನ್ನೆಲ್ಲ ನಿದ್ದೆಯಲ್ಲಿಯೂ ಹೇಗೆ ಕನವರಿಸಿ ಮಾತಾಡುತ್ತಾಳೆ ಅನ್ನುವುದನ್ನು ಹೇಳಿದ.

'ಓಹ್, ಅನ್ಷೆಲ್, ನಿನ್ನನ್ನ ನೋಡಿದರೆ ನನಗೆ ಎಷ್ಟೊಂದು ಅಸೂಯೆಯಾಗುತ್ತೆ' ಅವಿಗ್ದೋರ್ ಹೇಳಿದ.

'ನನ್ನ ಮೇಲೆ ಅಸೂಯೆಪಟ್ಟುಕೊಳ್ಳೋ ಅಂಥದೇನೂ ಇಲ್ಲ.'

'ನೀನು ಎಲ್ಲದನೂ ಪಡಕೊಂಡಿದೀಯ. ನಿನಗೆ ನನಗಿಂತಲೂ ಸ್ವಲ್ಪವಾದರೂ ಒಳ್ಳೆ ಜೀವನವಿದೆ ಅಂತ ಹಾರೈಸತೀನಿ.'

'ಎಲ್ಲರಿಗೂ ಅವರವರ ತೊಂದರೆಗಳಿರುತ್ತವೆ.'

'ನಿನಗೆ ಎಂಥ ತೊಂದರೆಗಳಿವೆ ? ದುರಾಸೆಗಳಿಗೆ ಬಲಿಯಾಗಬೇಡ'

ರಾತ್ರಿಯಲ್ಲಿ ಅನ್ನೆಲ್ ನಿದ್ದೆ ಮಾಡುವುದಿಲ್ಲ ಮತ್ತು ಇಲ್ಲಿಂದ ಹೇಗೆ ಓಡಿ ಹೋಗುವುದು ಎನ್ನುವುದನ್ನು ಯೋಚಿಸುತ್ತಾಳೆ ಅನ್ನುವುದು ಅವಿಗ್ಡೋರ್‌ನ ಊಹೆಗೆ ಸಿಗದಂಥಹುದು. ಹಾದಾಸ್‌ಳೊಡನೆ ಮಲಗುವುದು, ಅವಳನ್ನು ವಂಚನೆಗೊಳಿಸುತ್ತಿರುವುದು ನೋವನ್ನು ಹೆಚ್ಚಿಸುತ್ತಲೇ ಇದೆ. ಹಾದಾಸ್‌ಳ ಅರ್ಪಣೆ ಮತ್ತು ಪ್ರೀತಿ ಇವಳನ್ನು ಅಪಮಾನಿಸುತ್ತಿವೆ. ಇವಳ ಅತ್ತೆ-ಮಾವಂದಿರು ಮತ್ತು ಬಂಧು ಬಳಗದವರು ಮಗುವೊಂದಕ್ಕಾಗಿ ಮೊರೆಯಿಡುತ್ತಿರುವುದು ಅತಿಯಾದ ಭಾರವೆನಿಸುತ್ತಿದೆ. ಪ್ರತಿ ಶುಕ್ರವಾರ ಮಧ್ಯಾಹ್ನಗಳಂದು ಪೇಟೆಯ ಎಲ್ಲರೂ ಸ್ನಾನದ ಮನೆಗಳಿಗೆ ಹೋಗುತ್ತಿದ್ದರೆ ಅನ್ನೆಲ್ ಪ್ರತಿವಾರವೂ ಹೊಸ ನೆಪವೊಂದನ್ನು ಹುಡುಕಿ ಇದರಿಂದ ತಪ್ಪಿಸಿಕೊಳ್ಳುತ್ತಿದ್ದಳು. ಇದು ಅನುಮಾನಕ್ಕೆ ಪೀಠಿಕೆ ಹಾಕಿತು. ಅನ್ನೆಲ್‌ಗೆ ಹುಟ್ಟಿನಿಂದಲೇ ಯಾವುದೋ ದೋಷವಿರಬಹುದು ಅಥವಾ ಷಂಡತ್ವ ಅಥವಾ ಇವನ ಜನನಾಂಗದ ಚರ್ಮ ಸರಿಯದಂತಿರಬಹುದು. ಪ್ರಾಯದ ಹುಡುಗರನ್ನು ನೋಡಿಯೇ ನಿರ್ಣಯಿಸುವಂತೆ, ಇವನ ಗಡ್ಡ ಈ ವೇಳೆಗೆ ಮೊಳೆತು ಬಿಗಿಯಬೇಕಿತ್ತು. ಆದರೆ ಕೆನ್ನೆಗಳು ನಯವಾಗಿಯೇ ಇವೆ. ಇದನ್ನೆಲ್ಲಾ ಪುರಿಮ್ ಮತ್ತು ಪಸ್ಕ ಹಬ್ಬಗಳಲ್ಲಿಯೇ ಗಮನಿಸಿದ್ದರು. ಈಗ ಆಗಲೇ ಬೇಸಿಗೆ. ಬೆಷೆವ್‌ಗೆ ಅಷ್ಟೇನೂ ದೂರವಿಲ್ಲದ ಹೊಳೆಯಲ್ಲಿ ಈಜಲೆಂದು ಯಶೀವಾ ವಿದ್ಯಾರ್ಥಿಗಳು ಮತ್ತು ತರುಣರು ಸೆಖೆ ಅತಿಯಾಗಿದೆ ಎಂದು ದಿನವೂ ಹೋಗುತ್ತಿದ್ದರು. ಈ ದಿನಗಳಲ್ಲಿ ಯಾರಾದರೂ ಮಲಗಿಯೇ ಇದ್ದರೆ ಅವರ ಮೈ ಕೀವುಗಟ್ಟಿದಂಥ ವಾಸನೆಯಲ್ಲಿ ಮೈ ಒಡೆಯುವಂತಾಗಿರುತ್ತದೆ. ಅನ್ನೆಲ್ ತಾನು ಮುಕ್ತಳಾಗಿ ಹೋಗುವ ಉಪಾಯ ಹುಡುಕಿಕೊಂಡಳು.

ಪಸ್ಕ ವಾರದ ಬಿಡುವಿನಲ್ಲಿ ಅತ್ತೆಮಾವಂದಿರೊಂದಿಗೆ ಇರುವವರು ನಡುಗಾಲದ ಈ ರಜೆಯ ದಿನಗಳಲ್ಲಿ ಹತ್ತಿರದ ಪೇಟೆಗಳಿಗೆ ಪ್ರವಾಸ ಹೋಗುವುದು ರೂಢಿಯಲ್ಲಿತ್ತು. ಅವರು ಸ್ಥಳ ಬದಲಾವಣೆಯಿಂದ ಸಂತೋಷಗೊಳ್ಳುತ್ತಿದ್ದರು, ಪ್ರಫುಲ್ಲಿತರಾಗುತ್ತಿದ್ದರು. ಸುತ್ತಿನ ಸಮೀಪದಲ್ಲಿ ವ್ಯಾಪಾರದ ಅವಕಾಶಗಳಿದ್ದರೆ ನೋಡುತ್ತಿದ್ದರು. ಹರೆಯದ ಹುಡುಗರಿಗೆ ಬೇಕಾಗುವ ವಸ್ತುಗಳೊಂದಿಗೆ ಪುಸ್ತಕಗಳನ್ನು ಕೊಳ್ಳುತ್ತಿದ್ದರು. ಲುಬ್ಲಿನ್‌ನಿಂದ ಬೆಷೆವ್ ಅಷ್ಟೇನೂ ದೂರವಾಗಿರಲಿಲ್ಲ. ಅನ್ನೆಲ್

ತನ್ನ ಖರ್ಚಿನಲ್ಲಿಯೇ ಅವಿಗ್ಡೋರ್‌ನನ್ನು ಕರೆದೊಯ್ಯುವುದಾಗಿ ಹೇಳಿ ಬರಲು ಒತ್ತಾಯಿಸಿದಳು. ಅವಿಗ್ಡೋರ್ ನಿಗೆ ತಾನಿರುವ ಗಯ್ಯಾಳಿಯ ಮನೆಯಿಂದ ಕೆಲವು ದಿನಗಳಾದರೂ, ದೂರವಾಗುವುದು ಹರ್ಷ ತರುವಂಥದಾಯಿತು. ಪ್ರಯಾಣದ ಗಾಡಿ ಇನ್ನೂ ಹೊಸದಾಗಿತ್ತು. ಹೊಲಗಳು ಹಸಿರಿಗೆ ಹೊರಳಿದ್ದವು ; ಕೊಕ್ಕರೆಗಳು ಉಷ್ಣ ದೇಶಗಳಿಂದ ಮರಳುತ್ತಿದ್ದವು, ಆಕಾಶದಲ್ಲಿ ತಮ್ಮ ಅಗಲ ರೆಕ್ಕೆಗಳನ್ನು ಅಗಲಿಸಿ ಹಾರುತ್ತಿದ್ದವು. ಕಣಿವೆಗಳಲ್ಲಿ ಹೊಳೆಗಳು ತುಂಬಿ ಹರಿಯುತ್ತಿದ್ದವು. ಹಕ್ಕಿಗಳು ಕಲರವಗುಡುತ್ತಿದ್ದವು. ಗಾಳಿಯಂತ್ರಗಳು ತಿರುಗುತ್ತಿದ್ದವು. ಚೈತ್ರದ ಹೂಗಳು ಬಯಲಿನಲ್ಲಿ ಉದುರಿ ಬೀಳುತ್ತಿದ್ದವು. ಬಯಲಿನ ಅಲ್ಲಲ್ಲಿ ಹಸುವೊಂದು ಮೇಯುತ್ತಾ ಮುಂದೆ ಸಾಗುತ್ತಿತ್ತು. ಇಬ್ಬರು ಸ್ನೇಹಿಗಳೂ ಹರಟೆಯ ಮಾತಾಡುತ್ತ ಹಾದಾಸ್ ಕಟ್ಟಿಕೊಟ್ಟಿದ್ದ ಸಣ್ಣ ಕೇಕ್‌ಗಳು ಮತ್ತು ಹಣ್ಣುಗಳನ್ನು ತಿನ್ನುತ್ತ ಒಬ್ಬರಿಗೊಬ್ಬರು ತಮಾಷೆ ಮಾತಾಡುತ್ತ, ಪರಸ್ಪರರಲ್ಲಿನ ವಿಶ್ವಾಸವನ್ನು ಹೆಚ್ಚಿಸಿಕೊಳ್ಳುತ್ತ ಲುಬ್ಲಿನ್ ತಲುಪಿದರು. ಇಲ್ಲಿ ಈ ಇಬ್ಬರೂ ಒಂದು ಛತ್ರದಲ್ಲಿ ಎರಡು ಕೋಣೆಗಳನ್ನು ಬಾಡಿಗೆ ಹಿಡಿದರು. ಪ್ರಯಾಣದ ಹಾದಿಯಲ್ಲಿ ಲುಬ್ಲಿನ್ ತಲುಪಿದ ನಂತರ ಒಂದು ರಹಸ್ಯವನ್ನು ಹೇಳಿ ಅವಿಗ್ಡೋರ್‌ನನ್ನು ಬೆರಗುಗೊಳಿಸುವುದಾಗಿ ಅನ್ಷೆಲ್ ಹೇಳಿದ್ದಳು. ಅವಿಗ್ಡೋರ್ ತಮಾಷೆ ಮಾಡಿದ್ದ : ಇದು ಎಂಥ ರಹಸ್ಯವಿರಬಹುದು ? ಅನ್ಷೆಲ್ ಒಂದು ಭಾರಿ ನಿಧಿಯನ್ನು ಪತ್ತೆ ಮಾಡಿರಬಹುದೇ? ಕಬಾಲಾ ಅಭ್ಯಾಸ ಮಾಡಿರುವ ಇವನು ಒಂದು ಬಾತುಕೋಳಿ ಸೃಷ್ಟಿಸಿ ತೋರಬಹುದೇ?.... ಇಬ್ಬರೂ ಕೋಣೆಯನ್ನು ಪ್ರವೇಶಿಸಿದರು. ಅನ್ಷೆಲ್ ಎಚ್ಚರವಾಗಿ ಬಾಗಿಲಿಗೆ ಅಗಳಿ ಹಾಕಿದಳು. ಅವಿಗ್ಡೋರ್ ಕೀಟಲೆ ಮಾಡುತ್ತ ಹೇಳಿದ :

'ಒಳ್ಳೆಯದು, ನಿನ್ನ ಭಾರಿ ದೊಡ್ಡ ರಹಸ್ಯವನ್ನು ಈಗ ಕೇಳತೀನಿ.'

'ಇಲ್ಲಿವರೆಗೆ ಕೇಳದಂಗಿರೋ ಈ ವಿಷಯಕ್ಕೆ ನೀನು ನಿನ್ನನ್ನ ಮೊದಲು ಸಿದ್ಧಮಾಡಿಕೋ.'

'ನಾನು ಯಾವುದಕ್ಕಾದರೂ ಸಿದ್ಧವಾಗಿಯೇ ಇದೀನಿ.'

'ನಾನು ಗಂಡಸಲ್ಲ, ಒಬ್ಬ ಹೆಂಗಸು' ಅನ್ಷೆಲ್ ಹೇಳಿದಳು. 'ನನ್ನ ಹೆಸರು ಅನ್ಷೆಲ್ ಅಲ್ಲ, ಯೆಂತಲ್.'

ಅವಿಗ್ಡೋರ್ ಹೊಟ್ಟೆ ಬಿರಿಯುವಷ್ಟು ಜೋರಾಗಿ ನಕ್ಕ.

'ನನಗೆ ಗೊತ್ತು, ಇದೊಂದು ತಮಾಷೆ.'

'ಆದರೆ ಇದು ಸತ್ಯ.'

'ನಾನು ಮೂರ್ಖನಾಗಿಲ್ಲದಿದ್ದರೆ, ಇದನ್ನ ನಂಬೋಲ್ಲ.'

'ನಾನು ಏನೂಂತ ನಿನಗೆ ತೋರಿಸಲೇನು?'

'ಆಯಿತು.'

'ಹಾಗಿದ್ದರೆ ನಾನು ಬಟ್ಟೆ ಕಳಚಿ ಬೆತ್ತಲಾಗತೀನಿ.'

ಅವಿಗ್ದೋರ್‌ನ ಕಣ್ಣುಗಳು ಅಗಲವಾದವು. ಅವನಿಗೆ ಅನ್ಷೆಲ್ ಸಲಿಂಗರತಿ ಅಭ್ಯಾಸದವನಿರಬೇಕು ಅನ್ನಿಸಿತು. ಅನ್ಷೆಲ್ ಕೋಟು ಮತ್ತು ನೆರಿಗೆಯಂಚಿನ ಬಟ್ಟೆಗಳ ಮೇಲುಡುಪು ತೆಗೆದು ತನ್ನ ಒಳ ಉಡುಪುಗಳನ್ನು ಕಳಚಿದಳು. ಅವಿಗ್ದೋರ್ ಒಮ್ಮೆ ದೃಷ್ಟಿ ಬೀರಿ ಮೊದಲು ಬಿಳಿಚಿಕೊಂಡ, ನಂತರ ಕೆಂಪಾದ. ಅನ್ಷೆಲ್ ಲಜ್ಜೆಯಿಂದ ಮೈ ಮುಚ್ಚಿಕೊಂಡಳು.

'ನಾನು ಹೀಗೆ ಇದನ್ನ ಮಾಡತಿರೋದು ನೀನು ಪಂಚಾಯತಿ ಕಟ್ಟೆಯಲ್ಲಿ ಪ್ರಮಾಣಿಸಲಿ ಅಂತ. ಇಲ್ಲ ಅಂದರೆ ಹಾದಾಸ್ ಪೂರ್ತಿ ಬಂಜೆಯಾಗಿ ಉಳಿದುಬಿಡತಾಳೆ.'

ಅವಿಗ್ದೋರ್ ನಾಲಿಗೆ ಕಳೆದುಕೊಂಡಿದ್ದ. ಅವನು ಕಂಪನದಿಂದ ಬಿಗಿದುಕೊಂಡಿದ್ದ. ಮಾತಾಡಲು ಬಯಸಿದ್ದ. ಆದರೆ ಅವನ ತುಟಿ ಅಲುಗಾಡಲಿಲ್ಲ, ಏನೂ ಹೊರಗೆ ಬರಲಿಲ್ಲ. ಥಟ್ಟನೆ ಎದ್ದುನಿಂತ, ಅವನ ಕಾಲುಗಳು ಅವನನ್ನು ಆಸರೆ ಹಿಡಿಯಲಿಲ್ಲ. ಕೊನೆಗೆ ಬಡಬಡಿಸಿದ :

'ಇದು ಹೇಗೆ ಸಾಧ್ಯ? ಇದನ್ನ ನಂಬೋಕೇ ಆಗತಿಲ್ಲ ನನಗೆ !'

'ನಾನು ಮತ್ತೊಂದು ಸಲ ಬೆತ್ತಲಾಗಲೇನು?'

'ಬೇಡ.'

ಯೆಂತಲ್ ಇಡೀ ಕತೆಯನ್ನು ಹೇಳತೊಡಗಿದಳು : ಇವಳ ತಂದೆ ಹೇಗೆ ಹಾಸಿಗೆ ಹಿಡಿದು ಮಲಗಿದ್ದರು, ಇವಳೊಂದಿಗೆ ಹೇಗೆ ತೋರಾ ಓದುತ್ತಿದ್ದರು :

ಹೆಣ್ಣಾಗಿರಲಾಗದೆ ಹೇಗೆ ತನ್ನ ತಾಳ್ಮೆ ಕಳೆದುಕೊಳ್ಳುತ್ತಿದ್ದಳು ಮತ್ತು ಹೆಂಗಸರ ಕ್ಷುಲ್ಲಕ ಹರಟೆಗಳನ್ನು ಕೇಳುತ್ತಿದ್ದಳು ; ಹೇಗೆ ತನ್ನ ಮನೆ ಮತ್ತು ಎಲ್ಲ ಸಾಮಾನುಗಳನ್ನೂ ಮಾರಾಟ ಮಾಡಿದಳು, ಪೇಟೆಯಿಂದ ಹೊರಬಂದಳು, ಗಂಡಸಿನ ವೇಷಧಾರಿಯಾಗಿ ಲುಬ್ಲಿನ್ ದಾರಿ ಹಿಡಿದಳು ಮತ್ತು ಅವಿಗ್ಡೋರ್‌ನನ್ನು ಭೇಟಿಯಾದಳು, ಅವಿಗ್ಡೋರ್ ಮಾತಿಲ್ಲದಂತೆ ಕುಳಿತಿದ್ದ, ಕತೆ ಹೇಳುತ್ತಿದ್ದವಳನ್ನೇ ದಿಟ್ಟಿಸುತ್ತಿದ್ದ. ಯೆಂತಲ್ ಈಗ ಮತ್ತೆ ಗಂಡಸಿನ ಉಡುಪು ತೊಟ್ಟಳು. ಅವಿಗ್ಡೋರ್ ಹೇಳಿದ :

'ಇದು ಖಂಡಿತ ಕನಸು.'

ಅವನು ತನ್ನ ಕೆನ್ನೆಯನ್ನು ಚಿವುಟಿಕೊಂಡ.

'ಇದು ಕನಸಲ್ಲ.'

'ಇಂಥದೆಲ್ಲ ನನಗಾಗಿಯೇ ನಡೆಯುತಿದೆಯೇನೋ....!'

'ಇದೆಲ್ಲ ಸತ್ಯ.'

'ಯಾಕೆ ಹೀಗೆ ಮಾಡಿದೆ ? ನಾನು ಸುಮ್ಮನಿರೋದು ಒಳ್ಳೆಯದು.'

'ನನ್ನ ಜೀವನವನ್ನು ಬ್ರೆಡ್ ಬೇಯಿಸೋದು ಮತ್ತು ಹಿಟ್ಟು ನಾದೋದರಲ್ಲಿಯೇ ಕಳಿಯೋಕೆ ಇಷ್ಟಪಡಲಿಲ್ಲ.'

'ಹಾದಾಸ್‌ಳ ಪಾಡು ಏನು - ಹೀಗೆ ಯಾಕೆ ಮದುವೆಯಾದೆ ?'

'ನಾನಿದನ್ನ ನಿನ್ನ ಸಲುವಾಗಿ ಮಾಡಿದೆ. ಪೇಷೆ ನಿನಗೆ ಕಿರುಕುಳ ಕೊಡತಿರೋದು ಗೊತ್ತಿತ್ತು. ಈ ನಮ್ಮ ಮನೇಲಾದರೂ ನೀನು ಸ್ವಲ್ಪ ನೆಮ್ಮದಿಯಾಗಿ ಇರಬಹುದು....'

ಅವಿಗ್ಡೋರ್ ತುಂಬ ಹೊತ್ತು ಮೌನವಾಗಿದ್ದ. ತಲೆ ತಗ್ಗಿಸಿಕೊಂಡು ಕೈಗಳನ್ನು ಹುಬ್ಬಿಗೆ ಒತ್ತಿಕೊಂಡಿದ್ದ, ಕೊನೆಗೆ ತಲೆ ಅಲ್ಲಾಡಿಸಿದ.

'ಈಗೇನು ಮಾಡತೀಯಾ?'

'ನಾನು ಇನ್ನೊಂದು ಯಶೀವಾಗೆ ಹೋಗತೀನಿ.'

'ಏನು ? ನೀನು ಈಗ ಸ್ವಲ್ಪ ಹೊತ್ತಿಗೆ ಮುಂಚೆ ತಾನೆ ಹೇಳಿದ್ದೆ, ನಾವು ಯಾವತ್ತಿಗೂ...'

ಅವಿಗ್ಡೋರ್ ಮಧ್ಯದಲ್ಲಿಯೇ ನಿಲ್ಲಿಸಿದ.

'ಇಲ್ಲ - ಇದು ಅಷ್ಟೊಂದು ಒಳ್ಳೆದಲ್ಲ.'

'ಯಾಕೆ?'

'ನಾನು ಹೆಣ್ಣೂ ಅಲ್ಲ, ಗಂಡೂ ಅಲ್ಲ.'

'ನಾನು ಎಂಥ ಇಕ್ಕಟ್ಟಿನಲ್ಲಿದೀನಿ!'

'ಆ ಗಯ್ಯಾಳಿನ ವಿಚ್ಛೇದನ ಮಾಡು. ಹಾದಾಸ್‌ಳನ್ನ ಮದುವೆಯಾಗು.'

'ಅವಳು ಯಾವತ್ತಿಗೂ ನನಗೆ ವಿಚ್ಛೇದನ ಕೊಡೋಲ್ಲ, ಹಾದಾಸೂ ನನ್ನವಳಾಗೋಲ್ಲ.'

'ಹಾದಾಸ್ ನಿನ್ನನ್ನ ಪ್ರೀತಿಸುತ್ತಾಳೆ, ಅವಳು ಮತ್ತೆ ತಂದೆ ಮಾತು ಕೇಳೋಲ್ಲ.'

ಅವಿಗ್ಡೋರ್ ಥಟ್ಟನೆ ಎದ್ದು ನಿಂತ, ಆದರೆ ನಂತರವೇ ಕುಳಿತುಕೊಂಡ.

'ನನಗೆ ನಿನ್ನನ್ನ ಮರೆಯೋದಕ್ಕೆ ಆಗೋಲ್ಲ. ಯಾವತ್ತಿಗೂ.....'

೬

ನಿಯಮಾನುಸಾರವಾಗಿ ಈ ಸಮಯದಲ್ಲಿ ಅವಿಗ್ಡೋರ್ ಇನ್ನಷ್ಟು ಕಾಲವನ್ನು ಯೆಂತಲ್‌ಳೊಂದಿಗೆ ಕಳೆಯುವುದು ನಿಷೇಧದ್ದಾಗಿತ್ತು ; ಹೀಗಿದ್ದೂ ಅವಳು ತನ್ನ ಕೋಟು ಮತ್ತು ಟ್ರೌಸರ್‌ಗಳನ್ನು ಧರಿಸಿ ಮತ್ತೆ ಅನ್ಷೆಲ್‌ಳಾದ ಮೇಲೆ ತಮ್ಮ ಮಾತು ಕತೆಗಳನ್ನು ಮೊದಲಿನಂತೆಯೇ ಆಪ್ತವಾಗಿ ಮುಂದುವರಿಸಿದರು :

'ನೀನು ಪ್ರತಿದಿವಸ ನಿನ್ನ ನಿತ್ಯದ ಕರ್ಮಗಳನ್ನು ಹೇಗೆ ಮಾಡಿಕೊಳ್ಳುತ್ತಿದ್ದೆ? ಒಬ್ಬ ಹೆಂಗಸು ಗಂಡಸಿನ ವೇಷಧಾರಿಯಾಗಿ ಈ ಪ್ರಾತಃರ್ವಿಧಿಗಳಂಥ ಶೌಚಕ್ರಿಯೆಗಳನ್ನು ನಡೆಸಿಕೊಳ್ಳೋದು ಕಷ್ಟವಲ್ಲವೆ ?'

'ನಾನು ಗರಿ ಕಿತ್ತ ಹಕ್ಕಿಯಾಗೋಕೆ ಅಥವಾ ಹೆಂಗಸರ ಮಾತುಗಳಲ್ಲಿ ಮುಳುಗಿರೋಕೆ ಸೃಷ್ಟಿಯಾದವಳಲ್ಲ.'

'ಪ್ರಪಂಚಕ್ಕೆ ಬಂದು ನೀನು ನಿನ್ನತನವನ್ನ ಕಳಕೊಳ್ಳತಿದೀಯಲ್ಲವೇ?'

'ಸ್ವಲ್ಪಮಟ್ಟಿಗೆ ಇರಬಹುದು.'

ಅವಿಗ್ದೋರ್ ಕಣ್ಣುಗಳನ್ನು ಮೇಲೆ ಹೊರಳಿಸಿದ. ಅವನಿಗೀಗ ಅನ್ಷೆಲ್‌ಳ ಕೆನ್ನೆಗಳು ಗಂಡಸರ ಕೆನ್ನೆಗಳಿಗಿಂತ ನಯವಾಗಿರುವುದು ತಿಳಿಯಿತು. ಕೂದಲುಗಳೂ ಹೆಚ್ಚಾಗಿಯೇ ಇವೆ. ಕೈಗಳು ತುಂಬ ಚಿಕ್ಕದಾಗಿವೆ. ಹೀಗಿದ್ದೂ ಸಹ ಇಂಥದು ಸಂಭವಿಸುತ್ತದೆಯೇ ಎಂದು ಅವನಿಗೆ ನಂಬಲಾಗಲಿಲ್ಲ. ಯಾವ ಕ್ಷಣದಲ್ಲಾದರೂ ಏಳುವಂತೆ ಕೂತಿದ್ದ. ತುಟಿಗಳನ್ನು ಬಿಗಿ ಹಿಡಿದ, ತೊಡೆಯನ್ನು ಹಿಸುಕಿಕೊಂಡ. ನಾಚಿಕೆಯಿಂದ ಕುಗ್ಗಿಹೋಗಿದ್ದ, ಮಾತಾಡಲು ತಡವರಿಸಿದ. ಅನ್ಷೆಲ್ ಜೊತೆಗಿನ ಸ್ನೇಹ, ಆಪ್ತವಾದ ಮಾತುಕತೆಗಳು, ಇಬ್ಬರ ನಡುವಿನ ವಿಶ್ವಾಸ, ಈ ಎಲ್ಲವೂ ಬರಿಯ ನಟನೆ ಮತ್ತು ಭ್ರಮೆಗಳೇನೋ ಅನಿಸಿದವು. ಅನ್ಷೆಲ್ ದೆವ್ವವಿರಬಹುದೇನೋ ಎಂಬ ಆಲೋಚನೆಯೂ ಹರಿದುಹೋಯಿತು. ಇವಳು ಹೆಣ್ಣು ದೆವ್ವವಿರಬಹುದು ಎಂದು ನಡುಗಿದ ; ಆದರೆ ಕನಸು ಮತ್ತು ದಿಟಕ್ಕಿರುವ ವ್ಯತ್ಯಾಸ ಅವನಿಗೆ ತಿಳಿದಿತ್ತು. ಅವನು ಧೈರ್ಯ ತಂದುಕೊಂಡ. ಅನ್ಷೆಲ್ ಮತ್ತು ಅವನು ಒಬ್ಬರಿಗೊಬ್ಬರು ಹೊಸಬರೇನಲ್ಲ, ಅನ್ಷೆಲ್ ಒಂದು ವೇಳೆ ಯೆಂತಲ್‌ಳಾಗಿದ್ದರೂ.... ಧೈರ್ಯ ತಾಳಿಕೊಂಡು ಹೇಳಿದ :

'ನನಗೆ ತಿಳಿಯೋ ಹಾಗೆ, ಮದುವೆಯಾಗದೆ ಅಲೆಮಾರಿಯಾಗಿರೋ ಒಬ್ಬ ಹೆಂಗಸಿಗೆ ಸಾಕ್ಷ್ಯಾಧಾರ ಹೇಳೋಕೆ ಹೋಗೋದನ್ನ ಕಾನೂನು ಒಪ್ಪೋದಿಲ್ಲ.'

'ಏನು ? ನನಗೆ ಹೀಗನ್ನಿಸಲಿಲ್ಲ!'

'ನಾವಿದನ್ನ ಎಬೆನ್ ಏಜರ್‌ನಲ್ಲಿ ನೋಡತೀವಿ.'

'ಅಲೆಮಾರಿಯಾದ ಹೆಂಗಸರಿಗೆ ಇದು ಅನ್ವಯವಾಗುತ್ತೇನೋ ಅಂತ ನನಗಂತೂ ಖಂಡಿತವಾಗಿ ಅನ್ನಿಸೋದಿಲ್ಲ' ಅನ್ಷೆಲ್ ವಿದ್ವಾಂಸಳೆಂಬ ತಿಳಿವಳಿಕೆಯಲ್ಲಿ ಹೇಳಿದಳು.

'ನಿನಗೆ ಹಾದಾಸ್ ಬಂಜೆಯಾಗಿ ಇರಬಾರದು ಅನ್ನಿಸುತಿದ್ದರೆ ನೀನು ಅವಳಿಗೆ ನೇರವಾಗಿ ಈ ರಹಸ್ಯವನ್ನು ಹೇಳು.'

'ಇದನ್ನ ನಾನು ಹೇಳತೀನಿ.'

'ಏನೇ ಆಗಲಿ, ನೀನು ಇನ್ನೊಬ್ಬರನ್ನ ಸಾಕ್ಷಿಗೆ ಇರಿಸಿಕೊಳ್ಳಬೇಕು.'

ನಿಧಾನವಾಗಿ ಅವರಿಬ್ಬರೂ ತಾಲಮೂದ್‌ನ ಮಾತುಕತೆಗಳತ್ತ ಮರಳಿದರು. ಅವಿಗ್ಡೋರ್‌ನಿಗೆ ಇದು ಮೊದಲು ವಿಚಿತ್ರವೆನಿಸಿತು, ಹೆಂಗಸೊಬ್ಬಳ ಜೊತೆ ಪವಿತ್ರವಾದ ಧಾರ್ಮಿಕ ವಿಷಯಗಳನ್ನು ಕುರಿತು ಮಾತಾಡುವುದು ; ಇದಕ್ಕೂ ಮೊದಲೇ ತಾವಿಬ್ಬರೂ ಇದನ್ನೆಲ್ಲಾ ಮಾತಾಡಿದ್ದರು. ಆದರೇನು, ಇವರ ದೇಹಗಳು ಭಿನ್ನ ರೀತಿಯವು, ಆತ್ಮಗಳು ಮಾತ್ರ ಒಂದೇ ರೀತಿಯವು. ಅನ್ಷೆಲ್ ಒಂದು ಹಾಡನ್ನು ಹಾಡಿದಳು, ಕಾಲುಬೆರಳನ್ನು ಕುಣಿಸಿದಳು. ತನ್ನ ಕೆನ್ನೆಗೂದಲುಗಳನ್ನು ಹಿಡಿದುಕೊಂಡಳು, ಗಡ್ಡವಿಲ್ಲದ ಕೆನ್ನೆಗೆ ಹೊಡೆದುಕೊಂಡಳು, ಯಶೀವಾದ ವಿದ್ಯಾರ್ಥಿಗಳಂತೆ ಎಲ್ಲ ಚೇಷ್ಟೆಗಳನ್ನೂ ಮಾಡಿದಳು. ಮಾತಿನ ಆವೇಗದಲ್ಲಿ ಅವಳು ಅವಿಗ್ಡೋರ್‌ನ ಕೋಟಿನ ಪಟ್ಟಿಯನ್ನು ಹಿಡಿದುಕೊಂಡಳು. ಅವನನ್ನು ಪೆದ್ದ ಎಂದಳು. ಅವಿಗ್ಡೋರ್‌ನ ಬಗೆಗೆ ತುಂಬಿದ ಪ್ರೀತಿಯಲ್ಲಿ ಲಜ್ಜೆ, ಕರುಣೆ, ತಳಮಳಗಳ ಸಮ್ಮಿಶ್ರ ಭಾವಗಳಲ್ಲಿ ಅವಿಗ್ಡೋರ್‌ನ ಹೆಗಲನ್ನು ಹಿಡಿದಳು. ಇದು ನನಗೊಬ್ಬನಿಗೇ ಮೊದಲೇ ಗೊತ್ತಿದ್ದರೆ ಅವನು ತನ್ನಲ್ಲಿಯೇ ಹೇಳಿಕೊಂಡ. ತನ್ನ ಯೋಚನೆಗಳಲ್ಲಿ ಅವನು ಅನ್ಷೆಲ್ (ಅಥವಾ ಯೆಂತಲ್) ಬ್ರೂರಿಯಾಳಾಗಿ, ರೆಬ್ ಮೈರ್‌ನ ಹೆಂಡತಿಯಂತೆ ಅಥವಾ ಯಾಲ್ತಾ ರೆಬ್ ನಹ್ಮಾನ್‌ರ ಹೆಂಡತಿಯಂತೆ ತನ್ನೊಂದಿಗಿದ್ದರೆ ಅಂದುಕೊಂಡ. ಮೊದಲ ಸಲ ಅವನಿಗೆ ತಾನು ಬಯಸುವಂಥ ಸಾಮಾನ್ಯ ವಿಷಯಗಳಲ್ಲಿ ಮುಳುಗಿಕೊಳ್ಳದಂಥ ಹೆಂಡತಿಯಾಗುವವಳನ್ನು ಬಯಸುತ್ತಿದ್ದುದು ಸ್ಪಷ್ಟವಾಗಿ ತಿಳಿಯಿತು...... ಹಾದಾಸ್‌ಳ ಮೇಲೆ ಅವನಲ್ಲಿದ್ದ ಸೆಳೆತ ಈಗ ಮಾಯವಾಗಿತ್ತು. ಈಗ ಅವನು ಯೆಂತಲ್‌ಳೊಂದಿಗೆ ದೀರ್ಘ ಕಾಲದವರೆಗೆ ಇರಲು ಬಯಸಿದ. ಆದರೆ ಇದನ್ನು ಹೇಳಲು ಹೆದರಿದ. ಅವನ ಮುಖ ಬಿಸಿಯಾಗಿ ಸುಡುತ್ತಿರುವಂತಾಯಿತು. ಅನ್ಷೆಲ್‌ಳ ಕಣ್ಣುಗಳನ್ನು ಹೆಚ್ಚು ಹೊತ್ತು ದೃಷ್ಟಿಸಲಾಗಲಿಲ್ಲ. ಅನ್ಷೆಲ್‌ಳ ಪಾಪಗಳನ್ನು ಎಣಿಸತೊಡಗಿ ತಾನು ಇವುಗಳಲ್ಲಿ ಭಾಗಿಯಾಗಿದ್ದೇನೆ ಎನ್ನುವುದನ್ನೂ ಕಂಡ. ಯೆಂತಲ್ ಬಹಿಷ್ಕೃಯಾದ ದಿನಗಳಲ್ಲಿ ಅವಳ ಮೈ ಮುಟ್ಟಿಕೊಂಡೇ ಕುಳಿತಿದ್ದೇನೆ. ಇವಳು ಹಾದಾಸ್‌ಳೊಂದಿಗೆ ಮದುವೆ

ಯಾದದ್ದರ ಬಗ್ಗೆ ಏನು ಹೇಳುವುದು ? ಇಲ್ಲಿ ಇದು ಎಷ್ಟೊಂದು ಮಿತಿ ಮೀರಿದೆ ! ಬೇಕೆಂದೇ ಮಾಡಿರುವ ವಂಚನೆ, ಅಧೋಃಗತಿಗೆಳೆಯುವ ಆಣೆಗಳು, ಮೋಸದ ವೇಷಾಂತರ - ಇನ್ನೂ ಏನೇನೆಂಬುದು ದೇವರಿಗೆ ಗೊತ್ತು. ಅವನು ಥಟ್ಟನೆ ಹೇಳಿದ :

'ಸತ್ಯ ಹೇಳು, ನೀನು ಸಂಪ್ರದಾಯ ವಿರೋಧಿನಾ?'

'ದೇವರ ಮೇಲೆ ಆಣೆ, ಅಲ್ಲ !'

'ಹಾಗಿದ್ದ ಮೇಲೆ ನೀನು ಇಂಥದನ್ನೆಲ್ಲ ಯಾಕೆ ಮಾಡಿದೆ ?'

ಪ್ರಬುದ್ಧ ಅನ್ನೆಲ್ ಮಾತಾಡಿದಳು, ಕಿರಿಯ ಅವಿಗ್ಡೋರ್ ತಿಳಿದುಕೊಂಡ. ಅನ್ನೆಲ್‌ಳ ಎಲ್ಲ ವಿವರಣೆಗಳೂ ಒಂದು ವಿಷಯಕ್ಕೆ ಬಂದು ತಲುಪುತ್ತಿದ್ದವು ! ಅವಳು ಗಂಡಸಿನ ಆತ್ಮ ಹೊಂದಿದ್ದಾಳೆ ಮತ್ತು ಹೆಣ್ಣಿನ ದೇಹ ಪಡೆದಿದ್ದಾಳೆ. ಅನ್ನೆಲ್ ತಾನು ಹಾದಾಸ್‌ಳನ್ನು ಮದುವೆಯಾದದ್ದು ಅವಿಗ್ಡೋರ್‌ಗೆ ಸಮೀಪವಾಗಿರಲು ಎಂದು ಹೇಳಿದಳು.

'ನೀನು ನನ್ನನ್ನ ಮದುವೆಯಾಗಬಹುದು', ಅವಿಗ್ಡೋರ್ ಹೇಳಿದ.

'ನಾನು ಗೆಮಾರಾ ಮತ್ತು ಅದರ ಭಾಷ್ಯಗಳನ್ನು ನಿನ್ನ ಜೊತೆ ಓದಬೇಕು. ನಿನ್ನ ಬಟ್ಟೆಗಳನ್ನ ಹೊಲಿಯುತಾ ಕೂರಬೇಕಿಲ್ಲ!'

ದೀರ್ಘಕಾಲದವರೆಗೆ ಯಾರೂ ಮಾತಾಡಲಿಲ್ಲ. ನಂತರ ಅವಿಗ್ಡೋರ್ ಮೌನ ಒಡೆದ :

'ಈ ಎಲ್ಲದರಿಂದ ಹಾದಾಸ್‌ಳೂ ನೋಯುತಾಳೆ ಅಂತ ನನಗೆ ಭಯವಾಗುತ್ತೆ, ದೇವರಾಣೇ!'

'ಇದು ನನಗೂ ಭಯವಾಗತಿದೆ.'

'ಈಗ ಮುಂದೆ ಏನು ಮಾಡಬೇಕು ಅಂತ ?'

ಸಂಜೆಯ ಮಬ್ಬಿಳಿಯಿತು. ಇಬ್ಬರೂ ಸಾಯಂಕಾಲದ ಪ್ರಾರ್ಥನೆಗಳನ್ನು ಪಠಿಸಿ ದರು. ತನ್ನ ಗೊಂದಲಗಳಲ್ಲಿ ಅವಿಗ್ಡೋರ್ ಆಶೀರ್ವಚನಗಳ ಕೆಲ ಸಾಲುಗಳನ್ನು ಮರೆತು ಬೇರೆ ಕೆಲವು ಸಾಲುಗಳನ್ನು ಹೇಳುತ್ತಿದ್ದ. ಅವನು ಪಕ್ಕದಲ್ಲಿ ಹಿಂದಕ್ಕೊರಗಿದ್ದ

ಅನ್ನೆಲ್‌ಳನ್ನು ಗಮನಿಸಿದ, ಎದೆ ಏರಿಳಿಯುತ್ತಿತ್ತು, ತಲೆ ಕೆಳಗೆ ಹಾಕಿದ್ದಳು. ಇವನು ಅವಳನ್ನೇ ನೋಡಿದ, ಕಣ್ಣುಗಳನ್ನು ಮುಚ್ಚಿದ್ದಳು, ಮುಖವನ್ನು ಸ್ವರ್ಗದತ್ತ ಮೇಲೆತ್ತಿ ಬೇಡಿಕೊಳ್ಳುತ್ತಿದ್ದಳು : ಸ್ವರ್ಗದಲ್ಲಿರುವ ತಂದೆ, ನಿನಗೆ ಸತ್ಯ ತಿಳಿದಿದೆ..... ಪ್ರಾರ್ಥನೆ ಮುಗಿದ ನಂತರ ಇಬ್ಬರೂ ಎದುರುಬದುರಿನ ಕುರ್ಚಿಗಳಲ್ಲಿ ಕುಳಿತರು, ಪರಸ್ಪರರ ಮುಖಗಳು ಒಂದೇ ಅಂತರದಲ್ಲಿದ್ದವು. ಕೋಣೆಯ ತುಂಬ ನೆರಳುಗಳು ತುಂಬಿಕೊಂಡಿದ್ದವು. ಸೂರ್ಯಾಸ್ತದ ಪ್ರತಿಬಿಂಬ ನೇರಳೆ ಕಸೂತಿಯಂತಿತ್ತು. ಎದುರಿನ ಗೋಡೆ ಕಿಟಕಿಯಲ್ಲಿ ಅಲುಗಾಡುತ್ತಿತ್ತು. ಅವಿಗ್ಡೋರ್ ಮತ್ತೆ ಮಾತಾಡಲಿಚ್ಛಿಸಿದ. ಆದರೆ ಮೊದಲು ಅವನ ನಾಲಿಗೆ ತುದಿಯಲ್ಲಿ ಪದಗಳು ನಡುಗಿದವು, ಹೊರಗೆ ಬರಲಿಲ್ಲ. ಥಟ್ಟನೆ ಅವು ಒಡೆದುಕೊಂಡು ಹೊರಬಂದವು :

'ಈಗಲೂ ಇದು ತೀರ ತಡವಾಗಿಲ್ಲವಲ್ಲ ? ನಾನು ಆ ಬಜಾರಿ ಹೆಂಗಸಿನ ಜೊತೆ ಬದುಕೋಕೆ ಹೋಗೋದಿಲ್ಲ.... ನೀನು....'

'ಇಲ್ಲ ಅವಿಗ್ಡೋರ್, ಇದು ಸಾಧ್ಯವಿಲ್ಲ'

'ಯಾಕೆ?'

'ನಾನು ಈಗ ಹೇಗಿದೀನೋ ಹಾಗೆಯೇ ಇರತೀನಿ....'

'ನಾನು ನಿನ್ನನ್ನ ಕಳಕೊಳ್ಳತೀನಿ. ನಂಬೋಕೆ ಆಗದ ಹಾಗೆ.'

'ನಾನೂ ನಿನ್ನನ್ನ ಕಳಕೊಳ್ಳತೀನಿ.'

'ಇದೆಲ್ಲದರ ಅರ್ಥವೇನು ?'

ಅನ್ನೆಲ್ ಉತ್ತರಿಸಲಿಲ್ಲ. ಕತ್ತಲಿಳಿದು ಬೆಳಕು ಮಬ್ಬಾಯಿತು. ಕತ್ತಲಿನಲ್ಲಿ ಅವರು ಪರಸ್ಪರರ ಆಲೋಚನೆಗಳನ್ನೂ ಕೇಳಿಸಿಕೊಳ್ಳುತ್ತಿದ್ದರು. ಅನ್ನೆಲ್‌ಳೊಂದಿಗೆ ಅವಿಗ್ಡೋರ್ ಒಂಟಿಯಾಗಿರುವುದನ್ನು ವಿಧಿ ನಿಷೇಧಿಸಿತ್ತು. ಆದರೆ ಅವನು ಅವಳನ್ನು ಹೆಂಗಸು ಎಂಬ ದೃಷ್ಟಿಯಲ್ಲಿ ನೋಡಲಿಲ್ಲ. ಬಟ್ಟೆ ತೊಡುವುದರಲ್ಲಿ ಎಷ್ಟೆಲ್ಲ ಶಕ್ತಿಯಿದೆ? ಅವನು ಯೋಚಿಸಿದ. ಆದರೆ ಬೇರೆ ವಿಷಯವನ್ನು ಕುರಿತು ಮಾತಾಡಿದ. :

'ನೀನು ಸರಳವಾಗಿ ಹಾದಾಸ್‌ಗೆ ವಿಚ್ಛೇದನಕ್ಕೆ ಪತ್ರ ಕಳಿಸಿಕೊಡೋದು ಒಳ್ಳೇದು ಅನ್ನಿಸುತ್ತೆ.'

'ಅದನ್ನ ನಾನು ಹೇಗೆ ಕಳಿಸಲಿ?'

'ಮದುವೆ ವಿಧಿಗಳು ಬೆಲೆ ಇರೋ ಅಂಥವಾಗಿಲ್ಲ ಅಂದಾಗ ಇದರಲ್ಲೆಲ್ಲಾ ಏನು ವ್ಯತ್ಯಾಸವಿದೆ ?'

'ನೀನು ಹೇಳೋದೂ ನಿಜ.'

'ಅವಳು ಸತ್ಯ ಕಂಡುಕೊಳ್ಳೋಕೆ ಸಾಕಷ್ಟು ಸಮಯವಿತ್ತು.'

ಕೆಲಸದ ಹೆಂಗಸು ದೀಪ ಹಿಡಿದು ತಂದಳು. ಆದರೆ ಬಂದಷ್ಟೇ ವೇಗವಾಗಿ ಹೋದಳು, ಅವಿಗ್ದೋರ್ ಅದನ್ನು ಹೊರಗಿರಿಸಿದ. ತಮ್ಮ ಗೊಂದಲ ಮತ್ತು ಮಾತುಕತೆಗಳನ್ನು ಯಾರಾದರೂ ಬೆಳಕಿನಲ್ಲಿ ನೋಡಬಾರದು ಅನ್ನಿಸಿತ್ತು. ಅನ್ನೆಲ್ ಕತ್ತಲಿನಲ್ಲಿ ಎಲ್ಲವನ್ನೂ ಸರಿಯಾಗಿ ಗುರುತಿಸಿದಳು. ಅವಳು ಅವಿಗ್ದೋರ್‌ನ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಿದಳು. ಗಡಿಯಾರ ಎರಡು ಗಂಟೆ ಹೊಡೆಯಿತು. ಆದರೂ ಇವರು ಮಾತಾಡುತ್ತಿ ದ್ದರು. ಹಾದಾಸ್ ಅವಿಗ್ದೋರ್‌ನನ್ನು ಯಾವತ್ತಿಗೂ ಮರೆತಿಲ್ಲ ಎಂದಳು. ಅವಳು ಅವನೊಂದಿಗೆ ಮುಕ್ತವಾಗಿಯೇ ಮಾತಾಡಿದಳು, ಅವನ ಆರೋಗ್ಯದ ಬಗ್ಗೆ ಕಾಳಜಿ ತೋರಿಸಿದಳು, ಸರಿಯಾದ ಹೊಂದಾಣಿಕೆಯಾಗದಿದ್ದುದಕ್ಕೆ ಕ್ಷಮೆ ಕೋರಿದಳು - ಪೇಷೆಳಿಂದ ವಿಷಯಗಳಲ್ಲಿ ಬದಲಾದುದ್ದಕ್ಕೆ.

'ಇವಳು ತುಂಬ ಒಳ್ಳೆ ಹೆಂಡತಿ' ಅನ್ನೆಲ್ ಹೇಳಿದಳು. 'ನನಗೆ ಈಗಲೂ ಬ್ರೆಡ್ ಬೇಯಿಸೋದು ಹೇಗೆ ಅಂತ ಗೊತ್ತಿಲ್ಲ.'

'ಖಂಡಿತವಾಗಿಯೂ ನೀನು ಸಂತೋಷದಲ್ಲಿ ಇದ್ದಾಗಲೂ....'

'ಇಲ್ಲ ಅವಿಗ್ದೋರ್, ಇದು ನನಗೆ ಬರಲೇ ಇಲ್ಲ...'

ಇದೆಲ್ಲ ಪೇಟೆಯಲ್ಲಿ ಒಂದು ಭಾರಿ ಒಗಟಿನಂತಾಯಿತು : ಹಾದಾಸ್‌ಳಿಗೆ ಒಬ್ಬ ಆಳು ವಿಚ್ಛೇದನ ಪತ್ರವನ್ನು ತಂದ ; ಅವಿಗ್ದೋರ್ ರಜಾದಿನಗಳನ್ನು ಕಳೆಯುವವರೆಗೆ ಲುಬ್ಲಿನ್‌ನಲ್ಲಿಯೇ ಇದ್ದ. ಇವನು ಬೆಷೆವ್‌ಗೆ ಮರಳಿ ಬಂದದ್ದು ಜೋಲು ಬಿದ್ದ ಹೆಗಲುಗಳು ಮತ್ತು ನಿಸ್ತೇಜ ಕಣ್ಣುಗಳೊಂದಿಗೆ ಕಾಯಿಲೆ ಬಿದ್ದಿದ್ದವನಂತೆ. ಹಾದಾಸ್ ಇವನನ್ನು ಹಾಸಿಗೆಗೆ ಕರೆದೊಯ್ದು ಮಲಗಿಸಿ ದಿನಕ್ಕೆ ಮೂರು ಸಲ ಡಾಕ್ಟರ್‌ನ್ನು ಭೇಟಿ ಮಾಡುತ್ತಿದ್ದಳು. ಅವಿಗ್ದೋರ್ ಪ್ರಾಪಂಚಿಕನಂತಿರಲಿಲ್ಲ. ಇವನ

ಬಳಿಗೆ ಯಾರಾದರೂ ಓಡುತ್ತ ಹೋಗಿ ಮಾತಾಡಿಸಿದರೂ ಇವನು ಉತ್ತರ ಕೊಡುತ್ತಿರಲಿಲ್ಲ. ಪೇಷೆ ತನ್ನ ತಂದೆತಾಯಿಯರಿಗೆ ಇವನು ರಾತ್ರಿಯೆಲ್ಲಾ ಸಿಗರೇಟ್ ಸೇದುತ್ತಿದ್ದ ಎಂದು ದೂರಿದಳು. ಕೊನೆಗೆ ಇವನಿಗೆ ಪ್ರಶ್ನೆ ಮರಳಿದಾಗ ತನ್ನ ನಿದ್ದೆಯಲ್ಲಿ ಯಾರಿಗೂ ಗೊತ್ತಿಲ್ಲದ ಹೆಂಗಸೊಬ್ಬಳ ಹೆಸರನ್ನು ಕನವರಿಸಿದ - ಯೆಂತಲ್. ಪೇಷೆ ವಿಚ್ಛೇದನ ಕೊಡುವ ಮಾತಾಡಿದಳು. ಪೇಟೆಯ ಜನ ಅವಿಗ್ಡೋರ್ ಇವಳಿಗೆ ಸಮ್ಮತಿ ನೀಡುವುದಿಲ್ಲ ಅಥವಾ ಹೆಚ್ಚು ಹಣಕ್ಕಾಗಿ ಒತ್ತಡ ಹೇರಬಹುದು ಎಂದರು. ಆದರೆ ಅವನು ಎಲ್ಲದಕ್ಕೂ ಒಪ್ಪಿದ.

ಬೆಷೆವ್‌ನ ಜನ ನಿಗೂಢವಾದುವನ್ನು ಹೆಚ್ಚು ಕಾಲ ನಿಗೂಢವಾಗಿಯೇ ಇರಿಸುವುದಿಲ್ಲ. ಒಂದು ಸಣ್ಣ ಪೇಟೆಯಲ್ಲಿ ಎಲ್ಲರ ಮನೆಗಳಲ್ಲಿನ ಪಾತ್ರೆಗಳಲ್ಲಿಯೂ ಏನೇನು ಬೇಯುತ್ತದೆ ಎನ್ನುವುದನ್ನು ಒಬ್ಬರಿಗೊಬ್ಬರು ಹಣಿಕಿ ನೋಡುತ್ತಿರುವಾಗ ರಹಸ್ಯಗಳನ್ನು ಕಾಪಾಡಲು ಹೇಗೆ ಸಾಧ್ಯವಿರುತ್ತದೆ ? ಹೀಗಿದ್ದರೂ ಹಲವರು ತಮ್ಮ ಕಿವಿಗಳನ್ನು ಕಿಟಕಿ ಬಾಗಿಲುಗಳ ಕಿಂಡಿಗಳಲ್ಲಿ ಇರಿಸಿಕೊಂಡು ಆಲಿಸುತ್ತಿದ್ದರು. ಹೀಗಿರುವಾಗ ಒಗಟಿನಂತಹುದು ಹೇಗೆ ಒಗಟಾಗಿ ಉಳಿದಿರುತ್ತದೆ ? ಹಾದಾಸ್ ತನ್ನ ಹಾಸಿಗೆಯಲ್ಲಿ ಒದ್ದೆಯಾಗಿದ್ದಳು. ನಾಟಿ ವೈದ್ಯರು ಇವಳು ಸಮಯವನ್ನು ವ್ಯರ್ಥ ಮಾಡುತ್ತಿದ್ದಾಳೆ ಎಂದರು. ಅನ್ಷೆಲ್ ಒಂದು ಮಾತೂ ಹೇಳದಂತೆ ಕಣ್ಮರೆಯಾಗಿದ್ದಾಳೆ. ರೆಬ್ ಅಲ್ತರ್ ವಿಷ್ಕೋವೆರ್ ಅವಿಗ್ಡೋರ್‌ನಿಗೆ ಬರಲು ಹೇಳಿಕಳಿಸಿದರು, ಅವನು ಬಂದ. ಆದರೆ ಕಿಟಕಿ ಬಳಿ ನಿಂತು ಆಲಿಸುತ್ತಿದ್ದವರಿಗೆ ಇವರ ನಡುವೆ ನಡೆದ ಮಾತುಗಳು ಏನೆಂದೇ ತಿಳಿಯಲಿಲ್ಲ. ಇನ್ನೊಬ್ಬರ ವಿಷಯಗಳಿಗೆ ಮನಸ್ಸನ್ನು ಕೊಟ್ಟುಕೊಳ್ಳಲು ಬರುವ ಸ್ವಭಾವ ಉಳ್ಳವರು ತಮ್ಮ ಗೊಡವೆಗಳನ್ನು ಹೀಗೆ ಯೋಚಿಸುವುದಿಲ್ಲ.

ಒಂದು ಗುಂಪು ಇದಕ್ಕೆ ಪರಿಹಾರ ಹೇಳಲೆಂದು ಅನ್ಷೆಲ್ ಕ್ಯಾಥೋಲಿಕ್ ಪಾದ್ರಿಗಳ ಬಳಿ ಸಿಲುಕಿರಬಹುದು. ಅವರು ಇವನನ್ನು ಮತಾಂತರ ಮಾಡಿರಬಹುದು ಎಂದರು. ಇಂಥವು ಆಗಾಗ ನಡೆಯುತ್ತಿದ್ದವು. ಆದರೆ ಅವನು ಪಾದ್ರಿಗಳಿಗೆ ಯಾವಾಗ ಸಿಕ್ಕಿದ, ಅವನು ಯಶೀವಾದಲ್ಲಿಯೇ ಅಧ್ಯಯನ ಮಾಡುತ್ತಿದ್ದನಲ್ಲ ? ಹೀಗಲ್ಲದೆಯೇ ಅವನು ತನ್ನ ಹೆಂಡತಿಗೆ ವಿಚ್ಛೇದನವನ್ನೂ ಕಳಿಸಿದ್ದಾನಲ್ಲ ?

ಇನ್ನೊಂದು ಗುಂಪು ಅನ್ಷೆಲ್ ಬೇರೊಂದು ಹೆಣ್ಣಿನ ಮೇಲೆ ಕಣ್ಣಿಟ್ಟಿರಬಹುದು ಎಂದು ಪಿಸುಗುಟ್ಟಿತು. ಆದರೆ ಅವಳು ಯಾರಿರಬಹುದು ? ಬೆಷೆವ್‌ನಲ್ಲಿ ಪ್ರೇಮ

ಪ್ರಕರಣಗಳಿರುತ್ತಿರಲಿಲ್ಲ ಮತ್ತು ಇತ್ತೀಚೆಗೆ ಯಹೂದಿ ಅಥವಾ ಯಾವ ಅನ್ಯಧರ್ಮೀಯ ಹೆಣ್ಣೂ ಪೇಟೆಯಿಂದ ಹೊರಗೆ ಹೋಗಿಲ್ಲ.

ಉಳಿದ ಹಲವರು ಅನ್ಶೆಲ್ ಕೆಟ್ಟ ಶಕ್ತಿಗಳಿಂದ ಕಳಿಸಲ್ಪಟ್ಟಿದ್ದವನು ಎಂಬ ಮಾತಾಡಿದರು ಅಥವಾ ಈತನೇ ಕೆಟ್ಟಶಕ್ತಿಯ ದೆವ್ವವಿರಬಹುದು. ಇದಕ್ಕೆ ಸಾಕ್ಷಿ ಎಂಬಂತೆ ಇವನು ಯಾವಾಗಲೂ ಸ್ನಾನಗೃಹಕ್ಕಾಗಲೀ ಹೊಳೆಗಾಗಲೀ ಸ್ನಾನಕ್ಕೆ ಬರಲಿಲ್ಲ. ದೆವ್ವ ಗಳು ಬಾತುಕೋಳಿಯಂಥ ಕಾಲುಗಳನ್ನೊಳಗೊಂಡಿರುತ್ತವೆ ಎನ್ನುವುದು ಎಲ್ಲರಿಗೂ ತಿಳಿದಿರುವಂಥದೇ. ಒಳ್ಳೆಯದು, ಆದರೆ ಹಾದಾಸ್ ಇವನನ್ನು ಯಾವಾಗಲೂ ಬರಿಗಾಲಿನಲ್ಲಿ ನೋಡಲಿಲ್ಲವೇ ? ಮತ್ತು ದೆವ್ವವೊಂದು ತನ್ನ ಹೆಂಡತಿಗೆ ವಿಚ್ಛೇದನಕ್ಕೆ ಕಳಿಸಿರುವುದನ್ನು ಯಾರಾದರೂ ಯಾವಾಗಲಾದರೂ ಕೇಳಿದ್ದಾರೆಯೇ ? ದೆವ್ವವೊಂದು ಮನುಷ್ಯರ ಹೆಣ್ಣುಮಗಳನ್ನು ಮದುವೆಯಾದರೆ ಅವಳನ್ನು ಪೂರ್ಣ ಬಂಜೆಯಾಗಿಸಿ ಬಿಡುತ್ತದೆ.

ಇನ್ನು ಕೆಲವರಿಗೆ ಅನ್ಶೆಲ್ ತನ್ನ ತಪ್ಪಿನ ಪ್ರಾಯಶ್ಚಿತ್ತಕ್ಕಾಗಿ ಬೇರೊಂದು ರೂಪ ತಾಳಿ ಪರಿವರ್ತನೆ ಹೊಂದಿ ಹೋಗಿರಬಹುದು ಎಂದರು. ಆದರೆ ಏನಾಗಿ ಪರಿವರ್ತನೆ ಹೊಂದಿರಬಹುದು ? ಮತ್ತು ಇದನ್ನೆಲ್ಲ ರಬಾಯಿಯವರ ಹತ್ತಿರವೇ ಒಪ್ಪಿಕೊಳ್ಳಬಹುದಿತ್ತಲ್ಲ ? ಮತ್ತು ಅವಿಗ್ಡೋರ್‌ನೇಕೆ ದೆವ್ವ ಹಿಡಿದಿರುವವನಂತೆ ವರ್ತಿಸುತ್ತಾನೆ ?

ವಾದ್ಯದ ತೆವೆಲ್‌ನ ಊಹೆಯೊಂದು ಮಾತ್ರ ಸತ್ಯಕ್ಕೆ ಹತ್ತಿರವಾಗಿತ್ತು. ಅವಿಗ್ಡೋರ್‌ನಿಗೆ ಹಾದಾಸ್‌ಳನ್ನು ಮರೆಯಲು ಸಾಧ್ಯವಾಗಿಲ್ಲ ಮತ್ತು ಅನ್ಶೆಲ್ ತನ್ನ ಸ್ನೇಹಿತನಿಗಾಗಿ ಅವಳಿಗೆ ವಿಚ್ಛೇದನ ಕೊಡುತ್ತಿದ್ದಾನೆ. ಅವನು ಇವಳನ್ನು ಮದುವೆ ಯಾಗಲಿ ಎಂದು. ಆದರೆ ಇಂಥ ಸ್ನೇಹ ಜಗತ್ತಿನಲ್ಲಿರಲು ಸಾಧ್ಯವೇ ? ಇದು ಹೀಗೆಯೇ ಇರಬಹುದಾದರೆ ಅನ್ಶೆಲ್ ಹಾದಾಸ್‌ಳಿಗೆ, ಅವಿಗ್ಡೋರ್ ಪೇಷೆಳಿಗೆ ವಿಚ್ಛೇದನ ಕೊಡುವುದಕ್ಕೆ ಮುನ್ನವೇ ವಿಚ್ಛೇದನಕ್ಕೆ ಕೊಟ್ಟು ಕಳಿಸಿದ್ದೇಕೆ ? ಇದಿಷ್ಟು ಸಾಲದೆಂಬಂತೆ, ಒಬ್ಬ ಹೆಂಡತಿಯೇ ತನ್ನ ಬಯಕೆಯನ್ನು ಈಡೇರುವಂತೆ ಏರ್ಪಡಿಸಿಕೊಂಡಿರಬಹುದು, ಹಾದಾಸ್‌ಳ ಪ್ರೇಮ ಅನ್ಶೆಲ್ ಮೇಲೆ ಹೇಗಿದೆ ಎಂಬಂತೆಯೂ ಹೊರಳಿಕೊಂಡವು. ಈ ಕಾರಣಕ್ಕಾಗಿ ಅನ್ಶೆಲ್ ಕಾಯಿಲೆ ಬೀಳು ವಂತೆಯೂ ಆಯಿತು.

ಒಂದು ವಿಷಯ ಮಾತ್ರ ಎಲ್ಲರಿಗೂ ಸ್ಪಷ್ಟವಾಗಿತ್ತು : ಅವಿಗ್ಡೋರ್‌ನಿಗೆ ಸತ್ಯ ತಿಳಿದಿದೆ. ಆದರೆ ಅವನಿಂದ ಇದನ್ನು ಹೊರಬೀಳಿಸುವುದು ಅಸಾಧ್ಯ. ಅವನಿನ್ನೂ ತನ್ನ ಏಕಾಂತವಾಸದಲ್ಲಿಯೇ ಇದ್ದ ಮತ್ತು ತನ್ನ ಮೌನದಲ್ಲಿಯೇ ಗಟ್ಟಿಯಾಗಿದದ್ದೂ ಇಡೀ ಪೇಟೆಗೆ ಸಾಕ್ಷ್ಯಾಧಾರವಾಗಿತ್ತು.

ಪೇಷೆಯ ಹತ್ತಿರದ ಸ್ನೇಹಿತರು ಇವಳಿಗೆ ವಿಚ್ಛೇದನ ಕೊಡಬೇಡ ಎಂದು ಹೇಳಿಕೊಟ್ಟರು. ಇವರಿಬ್ಬರೂ ಬಹಳ ಕಾಲ ಗಂಡ ಹೆಂಡತಿಯರಾಗಿ ಬದುಕಿಲ್ಲ ಎನ್ನುವುದನ್ನು ಎಲ್ಲ ಬಂಧು-ಬಳಗದವರೂ ಕಂಡಿದ್ದೇವೆ ಎಂದರು. ಇವನು ಶುಕ್ರವಾರದ ರಾತ್ರಿಗಳಲ್ಲಿಯೂ ಇವಳಿಗೆ ಕಡ್ಡಿಷ್ ಆಶೀರ್ವಚನಗಳನ್ನು ನೀಡಿಲ್ಲ. ಇವನ ರಾತ್ರಿಗಳನ್ನು ಪಾಠಶಾಲೆಗಳಲ್ಲಿ ಅಥವಾ ಅನ್ನೆಲ್ ಮಲಗುತ್ತಿದ್ದ ವಿಧವೆಯ ಮನೆಯಲ್ಲಿ ಕಳೆಯುತ್ತಿದ್ದ. ಪೇಷೆ ಇವನನ್ನು ಮಾತಾಡಿಸಿದಾಗ ಇವನು ಉತ್ತರಿಸುತ್ತಿರಲಿಲ್ಲ, ತಲೆ ತಗ್ಗಿಸಿಕೊಂಡು ನಿಲ್ಲುತ್ತಿದ್ದ. ವ್ಯಾಪಾರಸ್ಥೆ ಪೇಷೆಗೆ ಇಂಥದೆಲ್ಲ ಮುಂದುವರಿಯುವುದು ತಾಳ್ಮೆ ತರಿಸುತ್ತಿರಲಿಲ್ಲ. ಅವಳಿಗೆ ಅಂಗಡಿಯಲ್ಲಿ ಒಬ್ಬ ಗಂಡಸಿನ ನೆರವು ಬೇಕಿತ್ತು, ಯಶೀವಾದಲ್ಲಿ ವಿರಕ್ತಿ ಭಾವದಲ್ಲಿರುವವರು ಬೇಕಿರಲಿಲ್ಲ. ಅವನ ತಲೆಗೆ ಯಾರೋ ಇಲ್ಲದ್ದನ್ನೆಲ್ಲ ಹೇಳಿ ತುಂಬಿ ಇವಳನ್ನು ಒಂಟಿಯಾಗಿಸಲು ಹೇಳಿಕೊಟ್ಟಿದ್ದಾರೆ. ಪೇಷೆ ವಿಚ್ಛೇದನಕ್ಕೆ ಸಮ್ಮತಿಸಿದಳು.

ಇದೇ ಸಮಯಕ್ಕೆ ಹಾದಾಸ್ ಸುಧಾರಿಸಿಕೊಂಡಳು. ರೆಬ್ ಅಲ್ಟರ್ ವಿಷ್ಕೋವೆರ್ ಮದುವೆ ನಿಶ್ಚಿತಾರ್ಥವೊಂದನ್ನು ಮಾಡಿಕೊಂಡರು. ಅವಿಗ್ಡೋರ್‌ನನ್ನು ಹಾದಾಸ್ ಮದುವೆಯಾಗುತ್ತಾಳೆ. ಪೇಟೆ ಒಂದೇ ತೆರನಾಗಿ ಕುತೂಹಲದಲ್ಲಿತ್ತು. ಒಂದು ಸಲ ನಿಶ್ಚಿತಾರ್ಥವಾಗಿದ್ದ ಗಂಡು ಹೆಣ್ಣುಗಳು ನಿಶ್ಚಿತಾರ್ಥ ಮುರಿದು ಬೇರೆ ಮದುವೆಯಾಗಿ ಮತ್ತೆ ಮದುವೆಯಾಗಿ ಒಂದುಗೂಡುವುದನ್ನು ಯಾರೂ ಕೇಳಿರಲಿಲ್ಲ. ಮದುವೆ ಶಿಷೆಬೋವ್ ನಂತರದ ಮೊದಲ ಸಬ್ಬತ್‌ನಲ್ಲಿ ನಡೆಯಿತು. ದೇವಕನ್ಯೆಗೆ ನಡೆಯುವಂತೆ ವಿಧಿಬದ್ಧವಾಗಿಯೇ ಮದುವೆ ನೆರವೇರಿತು : ಬಡವರಿಗೆ ಔತಣ, ಸಿನಗಾಗ್ ಮುಂದೆ ಇಳಿದೋರಣ, ವಾದ್ಯಗಾರರು, ವಿದೂಷಕ ಮತ್ತು ಸಾಂಪ್ರದಾಯಿಕ ನೃತ್ಯ. ಒಂದೇ ಒಂದು ವಿಷಯ ಮಾತ್ರ ಇಲ್ಲದಾಗಿತ್ತು : ಉಲ್ಲಾಸ. ಗಂಡು ಮದುವೆ ಕಟ್ಟೆಯಲ್ಲಿ ನಿಂತ, ಹಳೆಯ ಚಿತ್ರವೊಂದರಂತೆ. ಹೆಣ್ಣು ತನ್ನ ಅನಾರೋಗ್ಯದಿಂದ ಸುಧಾರಿಸಿಕೊಂಡಿದ್ದಳು. ಆದರೆ ತೆಳ್ಳಗೆ ಬಿಳಚಿಕೊಂಡಿದ್ದಳು, ಅವಳ ಕಣ್ಣೀರು ಬಂಗಾರದ

ಕೋಳಿಸಾರಿನಲ್ಲಿ ಉದುರಿದ್ದವು. ಎಲ್ಲರ ಕಣ್ಣುಗಳಿಂದಲೂ ಒಂದೇ ಪ್ರಶ್ನೆ ಹೊರಗೆ ಬಂದಿತ್ತು : ಅನ್ಷೆಲ್ ಯಾಕೆ ಹೀಗೆ ಮಾಡಿದ ?

ಹಾದಾಸ್‌ಳೊಂದಿಗೆ ಅವಿಗ್ಡೋರ್‌ನ ಮದುವೆಯಾದ ನಂತರ ಪೇಷೆ ಸುದ್ದಿಯೊಂದನ್ನು ಹರಡಿದಳು, ಅನ್ಷೆಲ್ ತನ್ನ ಹೆಂಡತಿಯನ್ನು ಅವಿಗ್ಡೋರ್‌ನಿಗೆ ಹಣಕ್ಕೆ ಮಾರಿದ ಎಂದು. ಮತ್ತು ಈ ಹಣವನ್ನು ಅಲ್ತರ್ ವಿಷ್ಕೋವೆರ್‌ರೇ ಕಳಿಸಿಕೊಟ್ಟರು ಎಂದಳು. ಒಬ್ಬ ತರುಣ ತನ್ನ ದೀರ್ಘ ಯೋಚನೆಯಿಂದ ಹೊರಬಂದು ಅನ್ಷೆಲ್ ತನ್ನ ಹೆಂಡತಿಯನ್ನು ಅವಿಗ್ಡೋರ್‌ನಿಗೆ ಇಸ್ಪೀಟ್ ಆಟದಲ್ಲಿ ಸೋತಿದ್ದಾನೆ ಎಂದ. ಸತ್ಯದ ಮೂಲಬೀಜ ಯಾವಾಗಲೂ ಸಿಗುವಂಥದಲ್ಲ ಎನ್ನುವುದು ಸಾಮಾನ್ಯ ವಾದದ್ದು. ಮನುಷ್ಯರು ತಮ್ಮ ಸುಳ್ಳಿನ ಕಂತೆಗಳನ್ನು ಕಟ್ಟುತ್ತಲೇ ಇರುತ್ತಾರೆ. ಸತ್ಯ ಯಾವಾಗಲೂ ತನ್ನ ಪಾಡಿಗೆ ತಾನು ಮರೆಯಲ್ಲಿಯೇ ನೀವು ನೋಡಲು ಕಷ್ಟವಾಗುವಂತಿರುತ್ತದೆ, ಅದನ್ನು ಹುಡುಕುವುದು ಕಷ್ಟ.

ಮದುವೆಯಾಗಿ ಹೆಚ್ಚು ದಿನ ಉರುಳುವ ಮೊದಲೇ ಹಾದಾಸ್ ಗರ್ಭಿಣಿ ಯಾದಳು. ಮಗು ಗಂಡಾಗಿತ್ತು. ನಾಮಕರಣಕ್ಕೆ ಬಂದು ಕೂಡಿದ್ದವರು ತಮ್ಮ ಕಿವಿ ಗಳನ್ನು ತಾವೇ ನಂಬಲಿಲ್ಲ, ಮಗುವಿನ ತಂದೆ ಕೊನೆಗೆ ಕರೆದಿದ್ದ ಹೆಸರು ಕೇಳಿ - ಅನ್ಷೆಲ್.

●

ಹುಟ್ಟಿರದ ಜೀವಿಯ ದಿನಚರಿ

ಎಲ್ಲಿ ಮನುಷ್ಯ ಓಡಾಡುವುದಿಲ್ಲವೋ, ಎಲ್ಲಿ ದನಕರುಗಳು ನಡೆದಾಡುವುದಿಲ್ಲವೋ; ಹದಿಮೂರನೇ ತಿಂಗಳು, ಹದಿಮೂರನೇ ತಾರೀಕು ! ಶುಕ್ರವಾರ ಹಗಲು ಮತ್ತು ರಾತ್ರಿಯ .ನಡುಹೊತ್ತಿನಲ್ಲಿ, ಕಪ್ಪು ಬೆಟ್ಟಗಳ ಹಿಂಬದಿಯಲ್ಲಿ, ಹಾಳು ಬಿದ್ದ ನೆಲಗಾಡಿನಲ್ಲಿ, ಅಸ್ಮೋಡ್ಯೂಸ್‌ನ ಕೋಟೆಯಲ್ಲಿ, ಚಂದ್ರನ ಮೋಹಕ ಬೆಳದಿಂಗಳಿನಲ್ಲಿ....

ಈ ಸಾಲುಗಳನ್ನು ಬರೆದಿರುವ ನಾನು ಹತ್ತು ಸಾವಿರದಲ್ಲಿ ಒಬ್ಬನಿಗೆ ಮಾತ್ರ ಒಳ್ಳೆಯ ಅದೃಷ್ಟಭಾಗ್ಯ ಒಲಿದಿರುವಂಥವನು ; ನಾನು ಹುಟ್ಟಿರುವವನಲ್ಲ, ನನ್ನ ತಂದೆ ಯಶೀವಾದ ವಿದ್ಯಾರ್ಥಿ. ಓನನ್‌ನಂತೆ ಪಾಪಗೈದವನು. ಅವನ ಈ ಫಲಬೀಜವೇ ನನ್ನನ್ನು ಸೃಷ್ಟಿಸಿದೆ - ಅರ್ಧ ಶಕ್ತಿ, ಅರ್ಧ ಭೂತ, ಅರ್ಧ ಗಾಳಿ, ಅರ್ಧ ನೆರಳು, ಜಿಂಕೆಯಂಥ ಕೋಡು ಮತ್ತು ಬಾವಲಿಯಂಥ ರೆಕ್ಕೆಯೊಂದಿಗೆ ಪಂಡಿತನ ಮನಸ್ಸು ಮತ್ತು ದೊಡ್ಡ ಮನುಷ್ಯನ ಹೃದಯ. ನಾನು ಮತ್ತು ನಾನಲ್ಲ. ನಾನು ಚಿಮಣಿಗಳಲ್ಲಿ ಸಿಳ್ಳೆ ಹಾಕುತ್ತೇನೆ, ಸಾರ್ವಜನಿಕ ಸ್ನಾನಗೃಹಗಳಲ್ಲಿ ನೃತ್ಯಗೈಯುತ್ತೇನೆ. ಬಡವರ ಅಡುಗೆ ಕೋಣೆಗಳಲ್ಲಿ ಸಬ್ಬತ್ ಖಾದ್ಯದ ಪಾತ್ರೆಗಳನ್ನು ತಲೆ ಕೆಳಗಾಗಿಸುತ್ತೇನೆ. ಹೆಂಗಸೊಬ್ಬಳನ್ನು ಆಕೆಯ ಗಂಡ ಪ್ರಯಾಣದಿಂದ ಮರಳಿ ಬಂದಿರುವಾಗ ಮುಟ್ಟಾಗಿಸುತ್ತೇನೆ. ನಾನು ಎಲ್ಲ ತರದ ಕುಚೇಷ್ಟೆಗಳನ್ನೂ ಆಡಲಿಚ್ಛಿಸುತ್ತೇನೆ. ಒಂದು ಸಲ ಒಬ್ಬ ಪ್ರಾಯದ ರಬಾಯಿ ಪಸ್ಕ ಹಬ್ಬಕ್ಕೆ ಮುಂಚಿನ ದೊಡ್ಡ ಸಬ್ಬತ್ ಸಂದರ್ಭದಲ್ಲಿ ತನ್ನ ಮೊಟ್ಟಮೊದಲ ಪ್ರವಚನ ನೀಡಲು ಸಿನಗಾಗ್‌ಗೆ ಬಂದು, ಯಾವಾಗ ಪ್ರವಚನಕ್ಕೆ ಆರಂಭಿಸಿದನೋ ಆಗ ಈ ತರುಣಪಂಡಿತನ ಮೂಗಿನ ಮೇಲೆ ಕುಳಿತಿದ್ದೆ. ಇವನು ನನ್ನನ್ನು ಹಿಡಿಯಲು ಯತ್ನಿಸಿದ್ದ. ಆದರೆ ನಾನು ಇವನ ಕಿವಿಯ ಹೊರಳೆಯ ಸುತ್ತ ಹಾರಾಡಿದ್ದೆ. ನನ್ನನ್ನು ಓಡಿಸಲು ಇವನು ತನ್ನ ಕೈ ಬೀಸಾಡಿದ್ದ. ಆದರೆ ನಾನು ಇವನ ಅಗಲದ ಹಣೆಯ ಮುಂಭಾಗದಲ್ಲಿ ನರ್ತಿಸಿದ್ದೆ. ನಂತರ ರಬಾಯಿಗಳ ಸಾಲಿನಲ್ಲಿ ಉದ್ದಕ್ಕೂ ಅತ್ತಿತ್ತ ಮೆರವಣಿಗೆ ಮಾಡಿದೆ. ಇವನು ಪ್ರವಚನಗೈದ, ನಾನು ಹಾಡಿದೆ. ಚಿಪ್ಪೊಡೆದುಕೊಂಡು ಹೊರ ಬಂದಂತಿದ್ದ ಈ ಹೊಸ ಪಂಡಿತರ ಬಾಯಿಯ ಪ್ರವಚನ ಕಿವಿಯ ಹಿಂಬದಿಯಲ್ಲಿ ಒದ್ದೆಯಾಗುವವರೆಗೂ ಸಾಗಿ ನನಗೆ ಖುಷಿ ತಂದಿತ್ತು.

ಗ್ರಂಥವನ್ನು ಸರಿಯಾಗಿ ಹಿಡಿದುಕೊಳ್ಳಲು ಪೇಚಾಡುತ್ತಿದ್ದ ಇವನು ತನ್ನ ತೋಳಿನಿಂದ ಒದ್ದೆ ಒರೆಸಿಕೊಳ್ಳಲು ಇಚ್ಛಿಸಿದ್ದ. ಓ, ಹೌದು ! ಇವನ ಶತ್ರುಗಳು ಸಬ್ಬತ್‌ನ ಹರ್ಷದಲ್ಲಿದ್ದರು ! ಓಹ್, ಇವನ ಹೆಂಡತಿ ಅಂದು ಸಂಜೆ ಇವನಿಗೆ ಎಷ್ಟು ಜೋರಾಗಿ ಬೈದಿದ್ದಳು ! ಹೀಗಿದ್ದರೂ, ಗಂಡಹೆಂಡಿರ ನಡುವಿನಲ್ಲಿ ಇಂಥ ಜಗಳಗಳು ನಡೆಯುವುದು ಸಾಮಾನ್ಯವಾದರೂ, ತುಂಬ ಸಂಕೋಚದಲ್ಲಿಯೇ ಹೇಳುತ್ತೇನೆ, ಪ್ರತಿಯೊಬ್ಬ ಯಹೂದಿ ಗಂಡನೂ ರಾಜನಾಗಿ, ಪ್ರತಿಯೊಬ್ಬ ಯಹೂದಿ ಹೆಂಡತಿಯೂ ರಾಣಿಯಾಗಿರುವ ಪಸ್ಕ ಹಬ್ಬದ ಆ ರಾತ್ರಿಯಲ್ಲಿ ಇವಳು ತನ್ನ ಹಾಸಿಗೆಗೆ ಇವನನ್ನು ಬರಗೊಟ್ಟಿರಲಿಲ್ಲ. ಮೆಸಯ್ಯನೇನಾದರೂ ಇದನ್ನು ಇವರ ಹಣೆಬರಹದಲ್ಲಿ ಬರೆಯಲು ಹೋದರೆ ನಾನಿದನ್ನು ಮೊಳಕೆಯಲ್ಲಿಯೇ ಚಿವುಟುತ್ತೇನೆ !

ನನ್ನ ಜೀವನ ಆ ಕಾಲದಿಂದಲೂ ಒಂದು ಕಂಬದ ಮೇಲೆ ನಿಂತಿರುವಂತೆ ಶಾಶ್ವತವಾಗಿಯೇ ಇದೆ. ಹೀಗಿದ್ದರೂ ಜೀವಿಸಲು, ಮಕ್ಕಳನ್ನು ಪಡೆಯಲು ಅಥವಾ ನನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು ತೊಂದರೆ ತೆಗೆದುಕೊಂಡಿಲ್ಲ. ನನಗೆ ಹೇಗನ್ನಿಸುತ್ತದೋ ಹಾಗೆ ಮಾಡಿದ್ದೇನೆ. ಸಂಜೆ ಹೊತ್ತಿನಲ್ಲಿ ಹೆಂಗಸರು ಸ್ನಾನಗೃಹಗಳಲ್ಲಿ ಪವಿತ್ರ ಸ್ನಾನ ಮಾಡುವುದನ್ನು ನೋಡಿದ್ದೇನೆ. ಬಡವರ ಮನೆಯ ಶಯ್ಯಾಗೃಹಗಳತ್ತ ನನ್ನ ದಾರಿಯನ್ನು ಹೊರಳಿಸಿಕೊಂಡು ಗಂಡಹೆಂಡಿರ ಏಕಾಂತದ ಮಾತುಗಳನ್ನು ಕೇಳಿಸಿಕೊಳ್ಳಬಾರದೆಂಬ ನಿಷೇಧವಿದ್ದರೂ ಕೇಳಿಸಿಕೊಂಡಿದ್ದೇನೆ. ಬೇರೆಯವರ ಪತ್ರಗಳನ್ನು ಓದುವುದರಲ್ಲಿಯೂ ಖುಷಿಗೊಂಡಿದ್ದೇನೆ. ಹೆಣ್ಣುಹಕ್ಕಿಗಳು ಗೂಡುಗಳಲ್ಲಿ ಇಡುವ ಮೊಟ್ಟೆಗಳ ಸಂಖ್ಯೆಯನ್ನೂ ಎಣಿಸಿದ್ದೇನೆ. ನನ್ನ ಕಿವಿಗಳಂತೂ ತುಂಬ ಚುರುಕಾಗಿದ್ದು ತಲೆಬುರುಡೆಯೊಳಗಿನ ಆಲೋಚನೆಗಳನ್ನೂ ಕೇಳಿಸಿಕೊಳ್ಳುತ್ತವೆ. ಬಾಯಿಯನ್ನು ಹೊಂದಿಲ್ಲದ ನಾನು ಮೀನಿನಂತೆ ಕಲ್ಮಷವನ್ನು ಹೊರಹಾಕುತ್ತೇನೆ. ಯಾವಾಗಲಾದರೂ ಸಂದರ್ಭ ಒದಗಿ ಬಂದಾಗ ನನ್ನನ್ನು ನಾನು ತುಂಡರಿಸಿಕೊಳ್ಳುತ್ತೇನೆ. ನನಗೆ ಹಣದ ಅಪೇಕ್ಷೆಯಿಲ್ಲ. ಆದರೆ ಜುಜುಬಿ ಕಳ್ಳರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತೇನೆ. ಹೆಂಗಸರ ಉಡುಪುಗಳಿಂದ ಪಿನ್ನುಗಳನ್ನು ಕದ್ದು ಅವರು ಹಾಕಿಕೊಂಡ ಗಂಟು ಮತ್ತು ಕುಣಿಕೆಗಳನ್ನು ಸಡಿಲಿಸುತ್ತೇನೆ. ಮುಖ್ಯವಾದ ಕಾಗದಪತ್ರಗಳು ಮತ್ತು ಉಯಿಲುಗಳನ್ನೂ ನಾನು ಅವುಚಿಡುತ್ತೇನೆ - ಅಸೂಯಾಪರರು ಮಾಡುವಂಥಹುದನ್ನೇ ನಾನು ಮಾಡುವುದಿಲ್ಲ ! ದೃಷ್ಟಾಂತಕ್ಕೆ :

ರೆಬ್ ಪಲ್ಟೆಲ್ ಒಬ್ಬ ಯಹೂದಿ ಜಮೀನುದಾರ. ಪ್ರಖ್ಯಾತ ಮನೆತನದವನು. ಧಾರ್ಮಿಕ ಸ್ವಭಾವ, ಬುದ್ಧಿವಂತ ಮನುಷ್ಯ ; ಇವನು ದರಿದ್ರನಾಗುತ್ತಾನೆ. ಇವನ ಹಸುಗಳು ಹಾಲು ಕರೆಯುವುದನ್ನು ನಿಲ್ಲಿಸುತ್ತವೆ. ಇವನ ಜಮೀನು ಬಂಜರು ಬೀಳುತ್ತದೆ. ಇವನ ಜೇನುಹುಳುಗಳು ತುಪ್ಪವಿಡುವುದಿಲ್ಲ. ಎಲ್ಲ ಕೆಲಸಕಾರ್ಯಗಳೂ ಅನರ್ಥಗಳೆಡೆಗೇ ಸಾಗುತ್ತವೆ. ತನ್ನ ಅದೃಷ್ಟ ತಿರುಗುಮುರುಗಾದುದನ್ನು ರೆಬ್ ಪಲ್ಟೆಲ್ ಗಮನಿಸಿ ನೋಡುತ್ತಾನೆ. ತನಗೆ ತಾನೇ ಹೇಳಿಕೊಳ್ಳುತ್ತಾನೆ, 'ಒಳ್ಳೆದಾಯಿತು, ನಾನು ದರಿದ್ರದವನಾಗಿ ಸಾಯುತ್ತೇನೆ'. ಇವನ ಬಳಿ ತಾಲಮೂದ್ ಮತ್ತು ಸ್ತೋತ್ರ ಗೀತಗಳ ಕೆಲವು ಸಂಪುಟಗಳು ಉಳಿದುಕೊಂಡಿರುವುದರಿಂದ ಅಧ್ಯಯನ ಮಾಡಲು ಕುಳಿತುಕೊಳ್ಳುತ್ತಾನೆ. ಪ್ರಾರ್ಥನೆಗೈಯುತ್ತಾನೆ : 'ದೇವರು ಕೊಟ್ಟಿದ್ದ, ಆ ದೇವರೇ ಮರಳಿ ತೆಗೆದುಕೊಂಡ' ಯೋಚಿಸಿಕೊಳ್ಳುತ್ತಾನೆ 'ಎಲ್ಲಿಯವರೆಗೆ ಬ್ರೆಡ್ ಇತ್ತೋ ಅಲ್ಲಿಯವರೆಗೂ ತಿಂದಿದ್ದೇನೆ. ಈಗ ಅದೂ ಇಲ್ಲದಂತಾಗಿರುವುದರಿಂದ ಒಂದು ಕೋಲು ಹಿಡಿದು ಭಿಕ್ಷೆ ಬೇಡಿ ಪಡೆದುಕೊಳ್ಳುವ ಪಾಡಿಗೆ ಬಂದಿದ್ದೇನೆ.'

ಇವನಿಗೆ ಗ್ರೀನ್ ಪೇಕ್ಷಿ ಎಂಬ ಹೆಂಡತಿಯಿದ್ದಳು. ಇವಳಿಗೆ ವಾರ್ಸಾದಲ್ಲಿ ರೆಬ್ ಗೆಜ್ತ್ ಎಂಬ ಅಣ್ಣನಿದ್ದ. ಆದ್ದರಿಂದ ಇವಳು ತನ್ನ ಗಂಡನನ್ನು ಪೀಡಿಸಲಾರಂಭಿಸಿದಳು, 'ಏನಿದು, ಇಲ್ಲಿ ಹೀಗೆ ಕೂತುಕೊಂಡು ತಿನ್ನೋಕೆ ಇರೋದೆಲ್ಲ ಮುಗಿಯೋತನಕ ಯೋಚಿಸೋದು ? ವಾರ್ಸಾಕ್ಕೆ ಹೋಗಿ ನನ್ನ ಅಣ್ಣನಿಗೆ ಏನು ನಡಿಯಿತು ಅಂತ ಹೇಳಿ'. ಅವಳ ಗಂಡ ಸ್ವಾಭಿಮಾನದ ಮನುಷ್ಯನಾದ್ದರಿಂದ ಅವಳಿಗೆ ಹೇಳಿದ : 'ನಾನು ಯಾರಿಂದಲೂ, ಎಲ್ಲಿಂದಲೂ ಉಪಕಾರದ ನೆರವು ಪಡೆಯೋದಿಲ್ಲ. ದೇವರ ಇಚ್ಛೆಯಿದ್ದರೆ ನನಗೆ ಏನು ಬೇಕೋ ಅದು ಬರುತ್ತೆ. ಅವನು ಕೈ ತುಂಬ ಕೊಡ್ತಾನೆ, ನಾನು ಹೀಗೆ ದರಿದ್ರನಾಗಬೇಕು ಅನ್ನೋದಿದ್ದರೆ ಎಲ್ಲಿಗೂ ಹೋಗದ ಹಾಗೆ ಹೀಗೇ ಇರತೀನಿ.'

ಆದರೆ, ಹೆಂಗಸು ಒಂದು ಸಲ ಹೇಳುವುದನ್ನು ಒಂಬತ್ತು ಸಲ ಹೇಳುವಂಥ ವಾಚಾಳಿಯಾಗಿದ್ದು, ಅರ್ಧದಷ್ಟಾದರೂ ಆಸೆಯಿಂಸಿಕೊಂಡಿರುವವಳಾದರೆ ಅವನು ಒಪ್ಪುವವರೆಗೂ ಬಿಡುವುದಿಲ್ಲ. ಇವನು ತನ್ನ ಹಳೆ ಫರ್‌ಕೋಟನ್ನು ತೊಟ್ಟು ಚಿಗಟಗಳು ಮೆತ್ತಿಕೊಂಡ ಹೊದಿಕೆಯನ್ನು ಕಮಾನಿನ ಮೇಲೆ ಹೊದಿಸಿ ರೈಲಿತ್ಜ್‌ಗೆ ಹೊರಟ. ಅಲ್ಲಿಂದ ಲುಬ್ಲಿನ್‌ಗೆ ಹೋಗಬೇಕು. ಅನಂತರ ಕೆಲದಿನಗಳಲ್ಲಿ ವಾರ್ಸಾಕ್ಕೆ ಹೋಗುತ್ತಾನೆ.

ಪ್ರಯಾಣ ತುಂಬ ದೀರ್ಘವಾದದ್ದೂ, ಕಷ್ಟದಾಯಕವಾದದ್ದೂ ಆಗಿತ್ತು. ಗಾಡಿಯ ಕಮಾನು ಉದ್ದಕ್ಕೂ ಧಡಗುಡುತ್ತಿತ್ತು. ರಾತ್ರಿಗಳಲ್ಲಿ ರೆಬ್ ಪಲ್ಟೆಲ್ ದಾರಿ ಬದಿಯ ಛತ್ರಗಳಲ್ಲಿ ಮಲಗುತ್ತಿದ್ದ. ಆಗ ಚಪ್ಪರದ ಹಬ್ಬ ಮುಗಿದ ದಿನಗಳಾದ್ದರಿಂದ ಆಕಾಶದ ತುಂಬ ಭಾರಿ ಮಳೆ ಮೋಡಗಳು ತುಂಬಿಕೊಂಡಿದ್ದವು. ಗಾಡಿಯ ಚಕ್ರಗಳು ಕೆಸರಿನಲ್ಲಿ ಹೂತುಕೊಳ್ಳುತ್ತಿದ್ದವು. ಗುಂಬಕ್ಕೂ ಕೆಸರು ಮೆತ್ತಿಕೊಳ್ಳುತ್ತಿತ್ತು. ಉದ್ದದ ಕತೆಯನ್ನು ಚಿಕ್ಕದಾಗಿ ಹೇಳುತ್ತೇನೆ. ವಾರ್ಸಾದ ಕುಬೇರ ರೆಬ್ ಗೆಜ್ತ್ ಹೇಳಿದ್ದನ್ನೆಲ್ಲಾ ಕೇಳಿ ಮುಖ ಹುಳ್ಳಗೆ ಮಾಡಿಕೊಂಡ. ಅವನ ಹೊಸ ಬಂಧು-ಬಳಗದವರೆಲ್ಲಾ ಗುಸುಪಿಸು ಮಾತಾಡಿಕೊಂಡರು. ಇವನ ಹೆಂಡತಿಯ ಕಡೆ ಬಂಧುಗಳು ಮತ್ತು ಇವನ ಕಡೆಯವರೂ ಗೋಡೆಯ ಹಿಂದೆ ಕಟಕಿಯ ಮಾತಾಡಿದರು. ಕೊನೆಯಲ್ಲಿ ಇವನು ಐನೂರು ನೋಟುಗಳನ್ನು ತೆಗೆದು ಈ ಭಾವನಿಗೆ ಕೊಟ್ಟು ಬೀಳ್ಕೊಟ್ಟ. ಅರೆಸಂತೋಷ ಅರೆ ಬೇಸರ ತೋರಿ ನಸುನಕ್ಕು ನಿಟ್ಟುಸಿರಿಟ್ಟ. ತಂಗಿಯನ್ನು ಕುಶಲ ಕೇಳಿದೆನೆಂದು ಹೇಳಲು ಹೇಳಿದ. ತಂಗಿ ಎಷ್ಟಾದರೂ ತಂಗಿಯೇ - ಅವನ ರಕ್ತ ಮತ್ತು ಮಾಂಸ ದೊಂದಿಗೆ ಬಾಂಧವ್ಯವುಳ್ಳವಳು.

ರೆಬ್ ಪಲ್ಟೆಲ್ ಬ್ಯಾಂಕ್ ನೋಟುಗಳನ್ನು ತೆಗೆದುಕೊಂಡು ಎದೆ ಜೇಬಿನಲ್ಲಿರಿಸಿ ಕೊಂಡು ಮನೆಗೆ ಹೊರಟ. ನಿಜವಾಗಿಯೂ ಅವನು ಆ ಐನೂರು ನೋಟುಗಳನ್ನು ತೆಗೆದುಕೊಳ್ಳಲು ಐನೂರು ಪಟ್ಟು ಸಂಕಟಪಟ್ಟಿದ್ದ. ಆದರೆ ಮನುಷ್ಯನೊಬ್ಬ ಏನು ಮಾಡಬಹುದು ? ಖಂಡಿತವಾಗಿಯೂ ಗೌರವಕ್ಕೆ ಒಂದು ಸಮಯವಿರುತ್ತದೆ ಮತ್ತು ಅಪಮಾನಕ್ಕೆ ಒಂದು ಸಮಯವಿರುತ್ತದೆ. ಇದೇನೇ ಇರಲಿ, ಅಪಮಾನ ಕಳೆದುಹೋಗಿ ಅವನ ಜೇಬಿನಲ್ಲಿ ಐನೂರು ರೂಪಾಯಿಗಳಿದ್ದವು.

ಇಂಥ ಮೊತ್ತದಿಂದ ಅವನು ಕೆಲವು ಹಸುಗಳು, ಕುದುರೆಗಳು ಮತ್ತು ಕುರಿ ಗಳನ್ನು ಕೊಳ್ಳಬಹುದಿತ್ತು. ಮನೆಯ ಸೂರನ್ನು ಹೊದಿಸಬಹುದಿತ್ತು. ತೆರಿಗೆಯನ್ನು ಕಟ್ಟಬಹುದಿತ್ತು. ಸ್ವರ್ಗ ಲೋಕದ ಕೃಪೆ ಇಂಥ ಇನ್ನೂ ಎಷ್ಟೊಂದು ಅಗತ್ಯಗಳನ್ನು ಪೂರೈಸಿಕೊಳ್ಳಬೇಕಿತ್ತು ಎನ್ನುವುದು ಅವನಿಗೆ ಮಾತ್ರ ಗೊತ್ತಿತ್ತು ! (ಇರಲಿ, ನಾನಾಗ ಅಲ್ಲಿಯೇ ಇದ್ದೆ. ರೆಬ್ ಪಲ್ಟೆಲ್‌ನ ಗಡ್ಡದಲ್ಲಿ ಚಿಗಟವಾಗಿ) ಅವನಿಗೆ ಪಿಸುಗುಟ್ಟಿ ಹೇಳಿದೆ. 'ಒಳ್ಳೆಯದೇ ಆಯಿತಲ್ಲ, ಈಗ ಏನು ಹೇಳತೀಯ ನೀನು ? ಗ್ರೀನ್ ಪೇಷ ತಮಾಷೆಗೆ ಹೇಳಲಿಲ್ಲವಲ್ಲ !' ಇದಕ್ಕೆ ಅವನು ಉತ್ತರಿಸಿದ್ದು, 'ಖಂಡಿತವಾಗಿಯೂ ಇದು

ಒಪ್ಪಬಹುದಾದದ್ದೇ, ಯಾರಿಗೆ ಗೊತ್ತಿದೆ ? ನಾನು ಪಾಪಗ್ಯೆದಿದ್ದೆ ಅಂತ ಹೀಗಾಗಿತ್ತೇನೋ. ಇನ್ನು ಮುಂದೆ ನನ್ನ ಅದೃಷ್ಟದಲ್ಲಿ ಒಳ್ಳೆಯದಿರಬಹುದು.'

ಪ್ರಯಾಣದಿಂದ ಹೊರಳಿ ಬರುತ್ತಿರುವ ಕೊನೆ ರಾತ್ರಿಯಲ್ಲಿ ಭಾರಿ ಹಿಮ ಸುರಿಯುತ್ತಿತ್ತು. ಹಾದಿಯಲ್ಲಿ ದುರ್ಗಮವಾದ ಅರಣ್ಯವೊಂದು ಇತ್ತು. ಗಾಡಿ ಮಂಜು ಮುಸುಕಿದ ದಾರಿಯಲ್ಲಿ ಮುಂದೆ ಉರುಳುತ್ತಿರಲಿಲ್ಲ. ರೆಬ್ ಪಲ್ಕೆಲ್ ದೀರ್ಘ ನಿಟ್ಟುಸಿರೊಂದನ್ನು ಬಿಟ್ಟ. ಹಿಮದ ಮುದ್ದೆಯಾಗಿ ಮನೆಯನ್ನು ಸಮೀಪಿಸಿದ. ದೀರ್ಘ ಪ್ರಯಾಣದಿಂದ ಬಳಲಿ ಕೆಮ್ಮುತ್ತ ಮನೆಗೆ ಬಂದ. ಇವನ ಹೆಂಡತಿ ಗ್ರೀನ್ ಪೇಷ ಬೆಂಕಿ ಕಾಯಿಸಿಕೊಳ್ಳುತ್ತಿದ್ದಳು. ಗಂಡನನ್ನು ಹೀಗೆ ಕಂಡೊಡನೆ ಆತಂಕಗೊಂಡಳು. 'ನನ್ನ ಪೀನ ಆಣಿ ಹೇಗೆ ಕಾಣಿಸತಿದೀಯ ನೀನು ! ಅವರೆಲ್ಲ ತುಂಬ ಚೆನ್ನಾಗಿದ್ದಾರೆ ಅಂದುಕೊಂಡಿದ್ದೆ!' ದುಃಖದ ಈ ಮಾತುಗಳನ್ನು ಕೇಳಿಸಿಕೊಂಡ ರೆಬ್ ಪಲ್ಕೆಲ್ ತನ್ನ ಎದೆ ಜೇಬಿನಿಂದ ಬ್ಯಾಂಕಿನ ನೋಟುಗಳನ್ನು ಹೊರತೆಗೆದು ಅವಳ ಮುಂದಿರಿಸಿದ. 'ಇದನ್ನು ತಗೋ, ಇದು ನಿನ್ನದ್ದು'. ದಾನದ ಉಡುಗೊರೆಯಾಗಿ ನೀಡಿದ್ದ ಅದು ತನಗೆ ತುಂಬ ಬೆಲೆ ಬಾಳುವಂತಿದೆ ಅಂದುಕೊಂಡ. ಗ್ರೀನ್ ಪೇಷಳ ಮುಖ ಹರ್ಷದಲ್ಲಿ ಅರಳಿಕೊಂಡಿತು. 'ಹೀಗೋ, ಒಳ್ಳೆಯದಾಯಿತು. ನಾನು ಸಾವಿರ ರೂಪಾಯಿಗಳ ನಿರೀಕ್ಷೆ ಇಟ್ಟುಕೊಂಡಿದ್ದೆ. ಅವಳು ಹೇಳಿದಳು. 'ಆದರೆ ಐನೂರು ರೂಪಾಯಿಗಳು ಯಾವ ಖರ್ಚಿಗೂ ಆಗೋದಿಲ್ಲವೇನೋ.'

ಅವಳು ಈ ಮಾತುಗಳನ್ನು ಹೇಳುತ್ತಿರುವಾಗ ರೆಬ್ ಪಲ್ಕೆಲ್‌ನ ಗಡ್ಡದಿಂದ ಹಾರಿದ ನಾನು ಗ್ರೀನ್ ಪೇಷಳ ಮೂಗಿನ ಮೇಲೆ ಕುಳಿತುಕೊಂಡೆ. ನಾನು ಹಾರಿ ಕುಳಿತ ಬಿರುಸಿಗೇ ಆ ಬಡಪಾಯಿ ಹೆಂಗಸು ಕೈಯಲ್ಲಿ ಹಿಡಿದಿದ್ದ ಕಾಗದದ ತುಣುಕುಗಳನ್ನು ಕೈಬಿಟ್ಟಿದ್ದಳು. ಇವು ಬೆಂಕಿಯೊಳಗೆ ಬಿದ್ದವು. ಈ ಇಬ್ಬರೂ ಕೂಗಿಕೊಳ್ಳುವ ಹೊತ್ತಿಗೇ ನೀಲಿ ಹಸುರಿನ ಜ್ವಾಲೆ ಹೊಮ್ಮಿಕೊಂಡಿತ್ತು. ಐದು ನೂರು ರೂಪಾಯಿಗಳ ಬೂದಿಯಷ್ಟೇ ಉಳಿದಿತ್ತು.

ಒಳ್ಳೆಯದಾಯಿತು. ಅವತ್ತು ಈಕೆ ಏನು ಹೇಳಿದಳು, ಇವನು ಏನು ಹೇಳಿದ ಎನ್ನುವುದನ್ನೆಲ್ಲಾ ನಿಮಗೇತಕ್ಕೆ ಹೇಳಲಿ? ಇದನ್ನೆಲ್ಲಾ ನೀವೇ ಊಹಿಸಿಕೊಳ್ಳಿ. ನಾನು ರೆಬ್ ಪಲ್ಕೆಲ್‌ನ ಗಡ್ಡಕ್ಕೆ ಮತ್ತೆ ಹಾರಿ ಕೂತಿದ್ದೆ. ಇಲ್ಲಿ ನಾನು ಎಲ್ಲಿಯವರೆಗೂ ಕುಳಿತಿದ್ದೆ ಎಂದರೆ - ಇದನ್ನೆಲ್ಲಾ ಹೇಳಲು ನನ್ನ ಮೇಲೆ ನನಗೇ ಸಿಟ್ಟು ಮೂಡುತ್ತದೆ.

ಅವನು ಬಲವಂತವಾಗಿ ಒಂದು ಕೋಲನ್ನು ಹಿಡಿದುಕೊಂಡು ಭಿಕ್ಷಾಟನೆ ಹೋಗುವ ವರೆಗೂ ಕುಳಿತಿದ್ದೆ. ಚಿಗಟವೊಂದಕ್ಕೆ ನೇಣು ಹಾಕಲು ಯತ್ನಿಸಿದ್ದ. ದುರದೃಷ್ಟ ದಿಂದ ದೂರ ಓಡಲು ಯತ್ನಿಸಿದ್ದ ! ಕೆಟ್ಟ ಶಕ್ತಿಯ ಚಿತ್ರವನ್ನು ಹೊರ ಹಾಕಲು ಯತ್ನಿಸಿದ್ದ....!

ಕಪ್ಪು ಬೆಟ್ಟಗಳಿಗೆ ಮರಳಿ ಹೋದಾಗ ಅಸ್ಮೋಡ್ಯೂಸ್‌ಗೆ ನಾನು ಏನು ಮಾಡಿದೆ ಎನ್ನುವುದನ್ನು ಹೇಳಿದೆ. ಇವನು ನನ್ನ ಕಿವಿಯನ್ನು ಗಿಲ್ಲಿ ಈ ಕತೆಯನ್ನು ತನ್ನ ಹೆಂಡತಿ ಲಲಿತ್‌ಳಿಗೆ ಹೇಳಿದ. ಇವಳು ಇದನ್ನೆಲ್ಲಾ ಕೇಳಿ ಎಷ್ಟು ಜೋರಾಗಿ ನಕ್ಕಳೆಂದರೆ ಮರಳುಗಾಡಿನಲ್ಲೆಲ್ಲಾ ಇದರ ಪ್ರತಿಧ್ವನಿ ಹೊಮ್ಮಿಕೊಂಡಿತ್ತು. ಸೈತಾನನ ಆಸ್ಥಾನದ ಈ ಮಹಾರಾಣಿ ನನ್ನ ಮೂಗು ಹಿಂಡಿದ್ದಳು.

'ನೀನು ನಿಜವಾಗಿಯೂ ಮೊದಲ ದರ್ಜೆಯ ಮರಿದೆವ್ವ!' ಇವಳು ಹೇಳಿದಳು. 'ಮುಂದೆ ನೀನು ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡತೀಯ!'

ಎಲ್ಲಿ ಸ್ವರ್ಗಗಳು ತಾಮ್ರದವಾಗಿ ಭೂಮಿ ಕಬ್ಬಿಣದ್ದಾಗಿದೆಯೋ ಅಲ್ಲಿ; ಕಪ್ಪೆಗಳು ವಟಗುಡುವ ಬಯಲಿನಲ್ಲಿ; ಪೇಟೆಯ ಹೊರಗಿನ ಪಾಳುಮನೆಯಲ್ಲಿ; ನೆಲಗವಿಯ ಕಸಗುಪ್ಪೆಯಲ್ಲಿ; ಬುಡವಿಲ್ಲದ ಮಡಿಕೆಯಲ್ಲಿ ಚಳಿಗಾಲ ಸಂಕ್ರಮಿಸುವ ಸಬ್ಬತ್ ರಾತ್ರಿಯಲ್ಲಿ; ಈಗ ಆಲೋಚನೆಯಲ್ಲಿ ಇಲ್ಲದ, ಮುಂದೆಯೂ ಇಲ್ಲದ, ರಾತ್ರಿಯಲ್ಲಿಯೂ ಇಲ್ಲದ... ಆಮೆನ್ ಸೆಲಾ !

ಕೆಡುಕಿನ ಕಣಿ ನುಡಿಯುವ ಕೊರವಂಜಿಯರು ನನ್ನ ಪ್ರೇಯಸಿಯರು. ಲಿಲಿತ್ ಇಂಥದನ್ನು ಸಾಧಿಸುತ್ತಾಳೆ. ನಾನು ಬಹಳ ಕಾಲ ಮರಿದೆವ್ವವಾಗಿಯೇ ಉಳಿದಿಲ್ಲ. ಬೆಳೆದು ದೊಡ್ಡ ದೆವ್ವವಾಗಿದ್ದೇನೆ, ಅದೂ ಒಂದು ಗಂಡು ದೆವ್ವವಾಗಿ. ಕೇಡು ಬಗೆಯುವ ನನ್ನ ಕುಚೇಷ್ಟೆಗಳ ಆಟಗಳನ್ನಾಡಲು ನಾನು ಮನುಷ್ಯನಂತೆ ವೇಷ ತೊಟ್ಟು ಮರೆಮಾಚಿಕೊಳ್ಳುತ್ತೇನೆ, ಇದರಿಂದ ಮನುಷ್ಯರ ಕಣ್ಣುಗಳು ಮೋಸ ಹೋಗುತ್ತವೆ. ನಿಜ, ದೈವೀ ನುಡಿಯೊಂದರಿಂದ ನನ್ನನ್ನು ತೊಡೆದು ಹಾಕಬಹುದು, ಆದರೆ ಈಗಿನ ದಿನಗಳಲ್ಲಿ ಕಬಾಲ ಎನ್ನುವುದು ಯಾರಿಗೆ ತಿಳಿದಿದೆ ? ಸಣ್ಣ ರಬಾಯಿ ಗಳು ನನ್ನ ಬಾಲದ ಮೇಲೆ ಉಪ್ಪು ಸುರಿಯುತ್ತಾರೆ. ಇವರ ಯಂತ್ರಗಳಂತೂ ನನಗೆ ಕಸಕ್ಕೆಸೆಯುವ ಕಾಗದದ ತುಣುಕುಗಳು. ಇನ್ನು ಇವರ ಮಂತ್ರಗಳಂತೂ ನನಗೆ ನಗು ತರಿಸುತ್ತವೆ.

ಯಾವಾಗಲಾದರೊಮ್ಮೆ ಇವರ ತಲೆ ಟೋಪ್ಪಿಗಳಲ್ಲಿ ನಾನು ದೆವ್ವರಂಧ್ರವನ್ನು ಕೊರೆಯುತ್ತೇನೆ ಅಥವಾ ಇವರ ಗಡ್ಡವನ್ನು ಗಂಟುಹಾಕುತ್ತೇನೆ.

ಹೌದು, ನಾನು ಮಾಡುವುದು ದಿಗಿಲು ಹುಟ್ಟಿಸುವಂಥ ವಿಷಯಗಳು. ನಾನು ದೆವ್ವಗಳಿಗೇ ದೆವ್ವ, ಕೆಟ್ಟವರಿಗೇ ಕೆಟ್ಟವನು. ಬೆಳದಿಂಗಳ ರಾತ್ರಿಯೊಂದರಲ್ಲಿ ನಾನು ಉಪ್ಪಿನ ಚೀಲವಾಗಿ ರಸ್ತೆ ಬದಿಯಲ್ಲಿ ಬಿದ್ದುಕೊಂಡೆ. ಅದೇ ಸಮಯದಲ್ಲಿ ಅಲ್ಲಿಗೆ ಗಾಡಿಯೊಂದು ಬಂದಿತು. ತುಂಬಿದ ಚೀಲವನ್ನು ಕಂಡು ಗಾಡಿಯವನು ಕುದುರೆಯನ್ನು ನಿಲ್ಲಿಸಿದ. ಹೊರಗೆ ಹಾರಿ ನನ್ನನ್ನು ಎತ್ತಿ ಗಾಡಿಯೊಳಗೆ ಹಾಕಿಕೊಂಡ. ಯಾರೇ ಆದರೂ ಸುಮ್ಮನೆ ಏನನ್ನಾದರೂ ಏಕೆ ತೆಗೆದುಕೊಂಡಾರು ? ನಾನು ಮುಂದೆ ಎಳೆಯಲಾರದಷ್ಟು ಭಾರವಾದೆ. ಆ ತಿಳಿಗೇಡಿ ಕಷ್ಟಪಟ್ಟು ನನ್ನನ್ನು ಎತ್ತಿ ನಿಲ್ಲಿಸಿದ. ನಾನು ಗಾಡಿಯಲ್ಲಿ ಇದ್ದಾಗಲೇ ಚೀಲದ ಬಾಯಿಯನ್ನು ತೆರೆದ ಅವನು ಒಂದು ತುಣುಕನ್ನು ತೆಗೆದುಕೊಂಡ - ನಾನು ಉಪ್ಪೋ ಅಥವಾ ಸಕ್ಕರೆಯೋ ಎಂದು ಪರೀಕ್ಷಿಸಲು. ಕ್ಷಣಾರ್ಧದಲ್ಲಿಯೇ ಕಾಲುಗಳನ್ನು ಚಾಚಿಕೊಂಡೆ. ಅವನು ನನಗೆ ಎಲ್ಲಿಗೆ ಹೊಡೆದ ಎನ್ನುವುದನ್ನು ಊಹಿಸಿಕೊಳ್ಳಲು ನಿಮಗೆ ಮೂರು ಅವಕಾಶಗಳನ್ನು ಕೊಡುತ್ತೇನೆ. ಅವನು ಯಾವಾಗ ತಾನು ಏನು ಮಾಡಿದ್ದೇನೆ ಎನ್ನುವುದನ್ನು ನೋಡಿದನೋ ಆಗ ಅವನ ಕಾಲುಗಳು ನಡುಗಲಾರಂಭಿಸಿದವು. 'ಇಲ್ಲಿ ಏನು ನಡಿಯುತ್ತಿದೆ'? ಅವನು ಕೂಗಿದ. 'ಈ ದೆವ್ವ ನನಗೆ ಯಾಕೆ ಸಿಕ್ಕಿತು?' ತಕ್ಷಣವೇ ನಾನು ರೆಕ್ಕೆಗಳನ್ನು ಬಡಿದು ಹದ್ದಿನಂತೆ ಹಾರಿದೆ. ಬಿಳಿಚಿಕೊಂಡಿದ್ದ ಮನುಷ್ಯ ರೋಗಿಯಂತೆ ಮನೆಯನ್ನು ತಲುಪಿದ. ಈಗ ಇವನ ಯಂತ್ರಗಳಿಗಾಗಿ ಅಲೆಯುತ್ತ ಯಂತ್ರದ ತುಣುಕುಗಳಿಗೆ ಹುಡುಕುತ್ತಿದ್ದಾನೆ. ಆದರೆ ಇವೆಲ್ಲ ಇವನನ್ನು ಆದಷ್ಟು ಬೇಗ ಹೆಣದ ಪೆಟ್ಟಿಗೆಯೊಳಗೆ ಸೇರುವಂತೆ ಮಾಡುತ್ತಿವೆ.

ಒಂದು ಚಳಿಗಾಲದಲ್ಲಿ ತುರ್ಬಿನ್‌ನ ಹಳ್ಳಿಯೊಂದಕ್ಕೆ ಹೋದೆ. ಮನುಷ್ಯ ವೇಷ ಧರಿಸಿ ಧರ್ಮಕಾರ್ಯಗಳಿಗೆ ದೇಣಿಗೆ ಎತ್ತುವವನಂತೆ ಹೊರಟೆ. ಮನೆ ಮನೆಗೂ ಹೋದೆ. ಬಾಗಿಲ ಮೇಲೆ ನೇತು ಹಾಕಿದ್ದ ಭಿಕ್ಷುಕರಿಗೆ ಹಾಕಲು ಪುಡಿಚಿಲ್ಲರೆ ಇರಿಸಿದ್ದ ಕಬ್ಬಿಣದ ಡಬ್ಬಿಗೆ ಕೈಯಿಡುತ್ತಿದ್ದವರು ಒಂದಿಷ್ಟು ಚಿಲ್ಲರೆಯನ್ನಷ್ಟೇ ಕೊಡುತ್ತಿದ್ದರು, ಹೆಚ್ಚಿನವರು ಅರ್ಧ ಪೆನ್ನಿಗಳನ್ನು ಕೊಡುತ್ತಿದ್ದರು. ಹೀಗೆ ಮನೆಯಿಂದ ಮನೆಗೆ ಅಲೆಯುತ್ತ ನಾನು ಒಲೆಗೂಡಿನ ಕಾವು ಅತಿಯಾಗಿ ಹರಡಿಕೊಂಡಿದ್ದ ಒಂದು

ಮನೆಗೆ ಹೋದೆ. ಮನೆಯ ಒಡತಿ ಮೂವತ್ತು ವರ್ಷದ ಅಂಚಿನಲ್ಲಿದ್ದ ಅವಿವಾಹಿತೆ. ತಂದೆ-ತಾಯಿಗಳು ತೀರಿಕೊಂಡಿದ್ದರು. ಇವಳು ಯಶೀವಾದ ವಿದ್ಯಾರ್ಥಿಗಳಿಗೆ ಬ್ರೆಡ್ ಬೇಯಿಸಲು ನೆರವಾಗುತ್ತಿದ್ದಳು. ಕುಳ್ಳಗೆ ದಪ್ಪಗಿದ್ದಳು. ಅಗಲದ ಎದೆ, ದೊಡ್ಡವಾದ ಇವಕ್ಕೆ - ನೀವು ಏನೆಂದು ಕರೆಯುತ್ತೀರೋ ಅವು ಇದ್ದವು. ಮನೆ ತುಂಬ ಕಾವಿ ನಿಂದಿತ್ತು. ಗಾಳಿಯಲ್ಲಿ ಲವಂಗ ಮತ್ತು ಗಸಗಸೆಯ ಕಂಪು ಸೂಸಿಕೊಂಡಿತ್ತು. ಇದು ನನ್ನಲ್ಲಿ ವಯಸ್ಸಾದ ಈ ಹೆಣ್ಣನ್ನು ಸ್ವಲ್ಪಕಾಲ ಮದುವೆಯಾದರೆ ತಪ್ಪಾಗುವಂಥದೇನಲ್ಲ ಎಂಬಂತೆ ಪ್ರಚೋದಿಸಿತು. ಕಿವಿ ಸುತ್ತಿನ ಕೂದಲುಗಳನ್ನು ತೀಡಿಕೊಂಡೆ. ಗಡ್ಡವನ್ನು ಕೈಯಿಂದ ನೇವರಿಸಿದೆ. ಹುಣ್ಣುಗಟ್ಟಿದ ನನ್ನ ಉದ್ದಮೂಗನ್ನು ನಯವಾಗಿಸಿಕೊಂಡೆ. ಆ ಹುಡುಗಿಯೊಂದಿಗೆ ಮಾತಾಡಲು ತೊಡಗಿದೆ. ಒಂದು ಮಾತು ಮತ್ತೊಂದಕ್ಕೆ ಎಳೆಸಿತ್ತು -ಅವಳಿಗೆ ನಾನೊಬ್ಬ ಮಕ್ಕಳಿಲ್ಲದ ವಿಧುರನೆಂದು ಹೇಳಿದೆ. 'ನಾನು ಹೆಚ್ಚು ಸಂಪಾದಿಸಿ ಇಟ್ಟುಕೊಂಡಿ ರೋಂಥವನಲ್ಲ. ಆದರೆ ನನ್ನ ಥೈಲಿಯೊಳಗೆ ಖರ್ಚುವೆಚ್ಚಕ್ಕೆ ಒಂದಿಷ್ಟು ಹಣ ಇರಿಸಿ ಕೊಂಡಿದ್ದೀನಿ.'

'ನಿನ್ನ ಹೆಂಡತಿ ಸತ್ತು ತುಂಬ ಕಾಲವಾಯಿತೆ?' ಅವಳು ಕೇಳಿದ್ದಕ್ಕೆ ನಾನು ಉತ್ತರ ಕೊಟ್ಟಿದ್ದೆ. 'ಕಳೆದು ಹೋಯಿತಲ್ಲ, ಆ ಈಸ್ಟರ್‌ಗೆ ಮೂರು ವರ್ಷ ವಾಯಿತು.'

ಅವಳು ಹೇಳಿದಳು, 'ಏನಾಗಿತ್ತು ಅವಳಿಗೆ?' ನಾನು ಹೇಳಿದೆ 'ಹೆರಿಗೆ ಸಮಯದಲ್ಲಿ ತೀರಿಕೊಂಡಳು' ನಾನು ನರಳಿಕೆ ತೋರಿದೆ.

ನನ್ನ ಮೇಲೆ ಅವಳು ನಂಬಿಕೆ ಇಟ್ಟು ನೋಡಿದ್ದಳು - ಮೂರು ವರ್ಷಗಳಾದರೂ ಒಬ್ಬ ಮನುಷ್ಯ ತನ್ನ ಹೆಂಡತಿ ಬಗ್ಗೆ ಹೀಗೆ ನರಳೋದು ಎಲ್ಲಾದರೂ ಉಂಟೇ ? ಸ್ವಲ್ಪ ಸಮಯದಲ್ಲಿಯೇ ಮದುವೆಗೆ ಒಪ್ಪಂದವಾಯಿತು. ಪೇಟೆಯ ಹೆಂಗಸರು ಈ ಅನಾಥಳನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡರು. ಇವರೇ ವರದಕ್ಷಿಣೆಯನ್ನು ಒಟ್ಟುಗೂಡಿಸಿದರು. ಇವಳಿಗಾಗಿ ಅವರು ಮೇಜಿನ ವಸ್ತ್ರಗಳು, ಕರವಸ್ತ್ರಗಳು, ಹೊದಿಕೆ, ಅಂಗಿ, ಒಳ ಉಡುಪುಗಳು ಎಲ್ಲವನ್ನೂ ಒದಗಿಸಿದರು. ಆನಂತರ ಇವಳು ದೇವತೆಯಂತಾದಳು. ಇವರೆಲ್ಲ ಸಿನಗಾಗ್‌ನ ಮದುವೆ ಕಟ್ಟೆಯಲ್ಲಿ ನಿಂತರು. ಮದುವೆಯ ಉಡುಗೊರೆಗಳನ್ನೆಲ್ಲಾ ಕೊಟ್ಟರು. ಪ್ರತಿಯೊಬ್ಬರೂ ಹೊಸದಾಗಿ ಮದುವೆಯಾದವ ರೊಂದಿಗೆ ನರ್ತಿಸಿದರು. ಆಮೇಲೆ ಹೆಣ್ಣನ್ನು ಅವಳ ಶಯ್ಯಾಗೃಹಕ್ಕೆ ಕಳಿಸಿದರು.

'ತುಂಬ ಅದೃಷ್ಟವಂತೆ!' ಸಂತೋಷದಲ್ಲಿದ್ದ ಕೆಲವರು ನನಗೆ ಹೇಳಿದರು. 'ಮುಂದಿನ ವರ್ಷ ಮಗುವಿನ ನಾಮಕರಣ ಮಹೋತ್ಸವ ನಡೆಯುತ್ತೆ ಅಂತ ನನಗೆ ನಂಬಿಕೆಯಿದೆ!'

ಅತಿಥಿಗಳು ಹೊರಟು ಹೋಗಿದ್ದರು. ರಾತ್ರಿ ಕತ್ತಲು ತುಂಬಿಕೊಂಡು ದೀರ್ಘ ವಾಗಿತ್ತು. ಶಯ್ಯಾಗೃಹದಲ್ಲಿ ಈಜಿಪ್ಟ್‌ನಂತ ಕತ್ತಲಿದ್ದು ಚಿಮಣಿಯಲ್ಲಿರುವಂಥ ಕಾವಿತ್ತು. ಕೆಳಗೆ ಹಾಸಿದ್ದ ಸುಪ್ಪತ್ತಿಗೆಯಲ್ಲಿ ನನ್ನ ಹೆಣ್ಣು ಆಗಲೇ ಹಾಸಿಗೆಯಲ್ಲಿದ್ದಳು - ತನ್ನಲ್ಲೇ ಧೈರ್ಯ ತಂದುಕೊಂಡು - ತನ್ನ ಗಂಡನನ್ನು ನಿರೀಕ್ಷಿಸುತ್ತಿದ್ದಳು. ನಾನು ಕತ್ತಲಿನಲ್ಲಿ ಸುತ್ತೆಲ್ಲ ತಡಕಾಡಿದ್ದೆ; ನಾನು ಹತ್ತಿರಕ್ಕೆ ಹೋದ ಗುರುತಿಗಾಗಿ ಉಡುಪು ಗಳನ್ನು ಕಳಚಿದೆ, ಮೆಲ್ಲಗೆ ಕೆಮ್ಮಿದೆ, ನನ್ನಲ್ಲೇ ಎಂಬಂತೆ ಪಿಸುಗುಟ್ಟಿದೆ. 'ನಿನಗೆ ದಣಿವಾಗಿದೆಯಾ?'

'ಇಲ್ಲ ಅಂಥ ದಣಿವೇನಿಲ್ಲ' ಅವಳು ಉತ್ತರಿಸಿದಳು.

'ನಿನಗೆ ಗೊತ್ತಾ?' ನಾನು ಹೇಳಿದೆ. ಅವಳು ಇದ್ದಳಲ್ಲ ಅವಳ ಆತ್ಮಶಾಂತಿ ಯಿಂದ ಇರಲಿ, ಅವಳು ಯಾವಾಗಲೂ ದಣಿದು ಸುಸ್ತಾಗಿದ್ದಳು. ಬಡಪಾಯಿ, ತುಂಬ ನಿತ್ರಾಣಿ'.

'ಅವಳ ಬಗ್ಗೆ ಈಗ ಏನೂ ಮಾತಾಡಬೇಡಿ' - ನನ್ನ ಹೆಂಡತಿ ಎಚ್ಚರ ನೀಡುತ್ತಿರುವಂತೆ ಸೂಚನೆಯಿತ್ತಳು. 'ಅವಳನ್ನು ನಾವು ಒಂದೇ ಮಾತಿನಲ್ಲಿ ಸ್ವರ್ಗ ದಲ್ಲಿ ಇಟ್ಟುಬಿಡೋಣ.'

'ನಾನು ನಿನಗೆ ಕೆಲವು ವಿಷಯಗಳನ್ನು ಹೇಳಬೇಕಿದೆ'. ನಾನು ಹೇಳಿದೆ. 'ನೀನು ಬೇಸರ ಮಾಡಿಕೊಳ್ಳಬೇಡ, ಅವಳು ಸಾಯುತ್ತಿರುವಾಗ ಮತ್ತೆ ನಾನು ಮದುವೆ ಮಾಡಿಕೊಳ್ಳಬಾರದು ಅಂತ ಆಣೆ ಇಡೋಕೆ ಕೇಳಿದ್ದಳು.'

'ನೀವು ಅವಳಿಗೆ ಪ್ರಮಾಣದ ಮಾತನ್ನು ಕೊಡಲಿಲ್ಲ ತಾನೆ?'

'ನೀವು ರಬಾಯಿಗಳ ಹತ್ತಿರ ಇದಕ್ಕೆ ಏನು ಮಾಡಬಹುದು ಅಂತ ಕೇಳ ಬೇಕಿತ್ತು' ಬ್ರೆಡ್ ಬೇಯಿಸೋಳು ನನಗೆ ಹೇಳಿದಳು 'ನೀನು ಇದನ್ನು ನನಗೆ ಮುಂಚೆನೇ ಯಾಕೆ ಹೇಳಲಿಲ್ಲ?'

'ಅವಳು ಹೊರಳಿ ಬಂದು ನಿನ್ನನ್ನು ಚುಚ್ಚಿ ಪೀಡಿಸುತಾಳೆ ಅಂದುಕೊಂಡಿದೀ ಯೇನು? ಇದೇನೂ ಅಂಥ ವಿಷಯವಲ್ಲ.'

'ದೇವರ ಮೇಲೆ ಆಣೆ !' ಅವಳು ಉತ್ತರಿಸಿದಳು. 'ನಾನು ಯಾಕೆ ಹೆದರಲಿ ? ನನಗೆ ಇಂಥದರ ಬಗ್ಗೆ ಏನೂ ಗೊತ್ತಿಲ್ಲ.'

ನಾನು ಹಾಸಿಗೆಯಲ್ಲಿ ಕುಳಿತೆ. ನನ್ನ ಶರೀರ ತಣ್ಣಗಿತ್ತು. 'ನೀನು ಯಾಕೆ ಇಷ್ಟೊಂದು ತಣ್ಣಗಿದ್ದೀಯ?' ನನ್ನ ಹೆಂಡತಿ ಕೇಳಿದಳು.

'ಯಾಕೆ ಅಂತ ನಿನಗೆ ತಿಳಕೊಳ್ಳೋಕೆ ಆಸಕ್ತಿ ಇದೆಯ ?' ನಾನು ಹೇಳಿದೆ 'ಹತ್ತಿರಕ್ಕೆ ಒತ್ತಿಗೆ ಬಾ, ನಿನ್ನ ಕಿವೀಲಿ ಹೇಳತೀನಿ.'

'ನಿನ್ನ ಮಾತನ್ನು ಇಲ್ಲಿ ಬೇರೆ ಯಾರೂ ಕೇಳೊಲ್ಲ' ಅವಳು ಆಶ್ಚರ್ಯ ತೋರಿದಂತೆ ಹೇಳಿದಳು.

'ಗೋಡೆಗಳಿಗೂ ಕಿವಿಗಳಿರುತ್ತವೆ ಅನ್ನೋ ಮಾತಿದೆ' ನಾನು ಹೇಳಿದೆ. ಅವಳು ತನ್ನ ಕಿವಿಯನ್ನು ಕೊಟ್ಟಳು. ನಾನು ಅದರಲ್ಲಿ ಉಸುರಿ ಹೇಳಿದ. ನಡುಗಿದ ಅವಳು ಎದ್ದು ಕುಳಿತಳು. ಮಂಚದ ಹಲಗೆಗಳು ಕಿರುಗುಟ್ಟಿದ್ದವು. ಮಂಚದ ಕಾಲುಗಳು ಅಲುಗುತ್ತ ಅತ್ತಿತ್ತ ಸರಿದಾಡಿದ್ದವು.

'ಏನು ಮಾಡತಿದೀಯ ನೀನು?' ಅವಳು ಕಿರಿಚಿದಳು. 'ಇದು ಜಾಣನಾಗಿ ರೋನು ಮಾಡೋ ಅಂಥದೇನು?'

ಉತ್ತರಿಸುವ ಬದಲು ನಾನು ನಕ್ಕಿದ್ದೆ.

ಅವಳು ಹೇಳಿದಳು - 'ಏನು ಆಟ ಇದು ? ಇದೆಲ್ಲ ಮಕ್ಕಳಿಗೆ ಸರಿಹೋಗೋ ಅಂಥದು. ಬೆಳೆದು ದೊಡ್ಡೋರಾಗಿರೋರ್ಗೆ ಅಲ್ಲ.'

'ನಾನು ಚಿಕ್ಕ ಹುಡುಗನಲ್ಲ ಅನ್ನೋದು ನಿನಗೆ ಹೇಗೆ ಗೊತ್ತಿದೆ ?' ನಾನು ಉತ್ತರಿಸಿದೆ 'ನಾನು ಗಡ್ಡ ಇರೋ ಚಿಕ್ಕ ಹುಡುಗ, ಸಣ್ಣ ಕುರಿಮರಿಗಳಿಗೂ ಗಡ್ಡ ಇರುತ್ತೆ.'

'ಹಾಗಿದ್ದರೆ ಒಳ್ಳೇದು ಬಿಡು' ಅವಳು ಹೇಳಿದಳು - 'ನೀನು ಬ್ಯಾ, ಬ್ಯಾ ಅನ್ನೋದಾದರೆ ಅನ್ನುತಿರು ಗುಡ್ ನೈಟ್.'

ಆಮೇಲೆ ಇವಳು ತನ್ನ ಮುಖವನ್ನು ಗೋಡೆ ಕಡೆಗೆ ಹೊರಳಿಸಿಕೊಂಡಳು. ಸ್ವಲ್ಪ ಕಾಲ ನಾವಿಬ್ಬರೂ ಮೌನವಾಗಿಯೇ ಮಲಗಿದ್ದೆವು. ಆಮೇಲೆ ನಾನು ಅವಳಿಗೆ ಅವಳು ದಪ್ಪವಾಗಿದ್ದ ಜಾಗಕ್ಕೆ ಜಿಗುಟಿದೆ. ನನ್ನ ಹೆಂಡತಿ ಗಾಳಿಯಲ್ಲಿ ಗುಂಡು ಹಾರಿಸಿದಳು. ಹಾಸಿಗೆ ಅಲುಗಾಡಿತ್ತು. ಜೋರಾಗಿ ಕಿರುಚಿದಳು. 'ನೀನು ತಮಾಷೆ ಮಾಡ್ತಿದಿಯೋ ಅಥವಾ ಏನಿದು ? ನನಗೆ ನೀನು ಯಾಕೆ ಜಿಗುಟಿದೆ? ಸ್ವರ್ಗ ಲೋಕವೇ ನನ್ನನ್ನು ಕಾಪಾಡಬೇಕು - ನಾನು ಎಂಥವನ ಕೈಯೊಳಗೆ ಬಂದು ಬಿದ್ದಿದೀನಿ?'

ಆಮೇಲೆ ಅವಳು ಜೋರು ದನಿಯೆತ್ತಿ ಅಳಲಾರಂಭಿಸಿದಳು - ಬಾಳ ಸಂಗಾತಿ ಇಲ್ಲದೆ ಅನಾಥಳಾಗಿದ್ದವಳು ಮೂವತ್ತು ವರ್ಷಗಳಿಂದಲೂ ನನ್ನ ಭಾಗ್ಯದ ಬಾಗಿಲು ತೆರೆಯಬೇಕಿದ್ದ ಪ್ರಥಮ ರಾತ್ರಿಗಾಗಿ ಕಾಯುತ್ತಿದ್ದವಳು, ತನ್ನನ್ನು ಕಟ್ಟಿಕೊಂಡಿರುವವನು ಮನುಷ್ಯ ಪ್ರಾಣಿಯಲ್ಲ ಎಂದು ತಿಳಿದಾಗ ಏನಾಗಬಹುದು ಹೇಳಿ? ದರೋಡೆಕೋರನ ಹೃದಯವೂ ಕರಗಿ ಹೋಗುತ್ತದೆ. ಅವತ್ತು ರಾತ್ರಿ ದೇವರೂ ಕೂಡ ಕಣ್ಣೀರಿಟ್ಟಿರಬೇಕು ಅನಿಸುತ್ತದೆ ನನಗೆ. ಆದರೆ ದೆವ್ವವೊಂದು ದೆವ್ವವೇ.

ಬೆಳಗಿನ ನಸುಕಿನಲ್ಲಿ ನಾನು ಮನೆಯಿಂದ ಹೊರಬಂದು ರಬಾಯಿಯ ಹತ್ತಿರ ಹೋದೆ. ಸಂತನಂತಿದ್ದ ಸಾಧುಸ್ವಭಾವದ ರಬಾಯಿ ಆಗಲೇ ತನ್ನ ಅಧ್ಯಯನದಲ್ಲಿ ಮುಳುಗಿದ್ದ. ನನ್ನನ್ನು ಕಂಡು ಅವನಿಗೆ ಆಘಾತವಾಗಿತ್ತು. 'ದೇವರು ಯಹೂದಿಯನ್ನು ಆಶೀರ್ವದಿಸಲಿ' ಅವನು ಕೇಳಿದ 'ಏನು ಇಷ್ಟು ಬೇಗ?'

'ನಾನು ಇಲ್ಲಿಗೆ ಹೊಸಬ, ನಿಜ. ಬಡವನೂ ಹೌದು. ಆದರೆ ಪೇಟೆ ಜನ ನನಗೆ ಒಬ್ಬ ಸೂಳೆಯನ್ನು ಕಟ್ಟಬಾರದು!'

'ಸೂಳೆ.'

'ಒಬ್ಬ ಹೆಣ್ಣು ದೇವತೆ ಹಾಗೆ ಕನ್ಯೆಯಾಗಿ ಇಲ್ಲ ಅಂದರೆ ಮತ್ತಿನ್ನೇನು?' ನಾನು ಹೇಳಿದೆ. ಅಲ್ಲಿಯೇ ಓದುವ ಕೋಣೆಯಲ್ಲಿ ಕೂತಿರಲು ಹೇಳಿದ. ಒಳಗೆ ಹೋಗಿ ತನ್ನ ಹೆಂಡತಿಯನ್ನು ಎಬ್ಬಿಸಿದ. ಎದ್ದ ಅವಳು ಉಡುಪು ತೊಟ್ಟಳು (ಕೈ ತೊಳೆಯುವುದನ್ನೂ ಮರೆತು) ತನ್ನ ಜೋಲು ಮೈಯನ್ನು ಒಳಸೇರಿಸಿದಳು. ಹೆಂಗಸರ ಒಂದಿಷ್ಟು ಸಣ್ಣ ಗಂಟುಗಳನ್ನು ಹಾಕಿಕೊಂಡಳು. ರಬಾಯಿಯ ಹೆಂಡತಿಯೂ ಸೇರಿದಂತೆ

ಕೆಲವು ಹೆಂಗಸರು ನನ್ನ ಹೆಣ್ಣನ್ನು ಪರೀಕ್ಷಿಸಿ ನೋಡಲು ಹೋಗಿ ಹಾಸಿಗೆ ಮೇಲಿನ ಬಟ್ಟೆಯನ್ನು ಪರೀಕ್ಷಿಸಿದರು. ತುರ್ಬಿನ್‌ನಲ್ಲಿ ಗುಟ್ಟುಗಳಿರುತ್ತಿರಲಿಲ್ಲ. ಪಾಪ ಕಾರ್ಯವೊಂದು ಘಟಿಸಿದರೆ ಇದು ಪೇಟೆಗೆ ತಿಳಿದಿರುತ್ತಿತ್ತು.

ನನ್ನ ಹೆಂಡತಿ ಜೋರಾಗಿ ಅತ್ತಳು. ನಾನು ರಾತ್ರಿ ಅವಳ ಹತ್ತಿರಕ್ಕೆ ಹೋಗಿಲ್ಲ ಎಂದು ಆಣೆ-ಪ್ರಮಾಣಗಳನ್ನಿಟ್ಟಳು. ನಾನು ತಮಾಷೆ ಮಾಡುತ್ತಿದ್ದೇನೆ ಎಂದು ಕಟಕಿ ನುಡಿದಳು. ನಾನು ಅವಳಿಗೆ ಜಿಗಟಿದ್ದನ್ನು ಹೇಳಿ, ಕಿವಿಯಲ್ಲಿ ಹೇಳಿದ್ದನ್ನೂ ಹೇಳಿದಳು. ಆದರೆ ಹೆಂಗಸರು ತಲೆ ಅಲುಗಿಸಿದರು. ಅವನ್ನೆಲ್ಲ ರಬಾಯಿಯವರ ಬಳಿ ಹೇಳಲು ಕರೆ ತಂದರು. ಗುಂಪು ಸಂತೆ ಮೈದಾನದುದ್ದಕ್ಕೂ ಸಾಗಿ ಬಂತು. ಪೇಟೆಯ ಜನ ಪ್ರತಿಯೊಂದು ಕಿಟಕಿಯಲ್ಲಿಯೂ ಹಣಿಕಿ ನೋಡುತ್ತಿದ್ದರು. ಓದುವ ಕೋಣೆ ಭರ್ತಿಯಾಗಿ ತುಂಬಿಕೊಂಡಿತ್ತು. ನನ್ನ ಹೆಂಡತಿ ಬಿಕ್ಕಬಿಕ್ಕಿ ಅಳುತ್ತ ಗೋಳಿಟ್ಟಳು. ನನ್ನ ಹೊರತು ಬೇರೆ ಯಾರೂ ತನ್ನನ್ನು ಇದುವರೆಗೆ ಮುಟ್ಟಿಲ್ಲ ಎಂದು ಆಣೆಯಿಟ್ಟಳು.

'ಇವನೊಬ್ಬ ಹುಚ್ಚ'! ಅವಳು ನನ್ನನ್ನು ನೋಡಿ ಹೇಳಿದಳು. ಆದರೆ ನಾನು ಆಕೆ ಸುಳ್ಳು ಹೇಳುತ್ತಿದ್ದಾಳೆ ಎಂದೆ.

'ಈ ವಿಷಯ ಏನು ಅಂತ ತಿಳಿಯಬೇಕಾದರೆ' ನಾನು ಒಂದು ಸೂಚನೆಯನ್ನು ಕೊಟ್ಟೆ. 'ಪರೀಕ್ಷೆ ಮಾಡೋದಕ್ಕೆ ಡಾಕ್ಟರನ್ನ ಕರಿಸಿ.'

'ತುರ್ಬಿನ್‌ನಲ್ಲಿ ನಾವು ಡಾಕ್ಟರನ್ನ ಎಲ್ಲಿ ಹುಡುಕಲಿ?' ಜನ ಹೇಳಿದರು.

'ಸರಿ ಬಿಡಿ ! ನಾನು ಹೇಳಿದೆ. 'ಇವಳನ್ನ ಲುಬ್ಲಿನ್‌ಗೆ ಕರಕೊಂಡು ಹೋಗಿ. ಅಲ್ಲಿನ್ನೂ ಜಗತ್ತಿನಲ್ಲಿ ಇರಬೇಕಾದ ಗೌರವ ಉಳಕೊಂಡಿದೆ !' ನಾನು ಚೀರಿ ಹೇಳಿದೆ. 'ಇಡೀ ಪೋಲೆಂಡ್ ಇದನ್ನ ಕೇಳಬೇಕಿದೆ ! ರಬಾಯಿ ಮುಖಂಡರಿಗೆ ಇದರ ಪೂರ್ತಿ ಕತೇನ ಹೇಳತೀನಿ !'

'ಇದು ಇಸ್ರೇಲಿನ ಎಲ್ಲರಿಗೂ ಸೇರಿರೋ ಜವಾಬ್ದಾರಿ !' ನಾನು ಧರ್ಮಿಷ್ಠನಂತೆ ಹೇಳಿದೆ. 'ಒಬ್ಬ ಹುಡುಗಿ ಮೂವತ್ತು ವರ್ಷದ ತನಕ ಮದುವೆಯಾಗದೆ, ಯಶೀವಾದ ವಿದ್ಯಾರ್ಥಿಗಳಿಗೆ ಬ್ರೆಡ್ ಬೇಯಿಸೋಕೆ ನೆರವಾಗೋದನ್ನ ಎಲ್ಲಾದರೂ ಕೇಳಿದಿರೇನು ?' ನನ್ನ ಹೆಂಡತಿಗೆ ನಾನು ಅವಳ ಸ್ವಂತ ವ್ಯವಹಾರದಲ್ಲೆಲ್ಲಾ ಬಾಯಿ ಹಾಕುತ್ತಿರುವುದು ತಿಳಿದು, ನಾನು ಸುಳ್ಳಿನ ಆರೋಪಗಳನ್ನು ಹೊರಿಸುತ್ತಿರುವುದು ತಿಳಿಯಿತು. ಅವಳು

ನನಗೆ ಹೊಡೆಯಲು ಮುನ್ನುಗ್ಗಿದಳು. ಸುತ್ತ ಇದ್ದವರು ಹಿಡಿದುಕೊಳ್ಳದಂತಿದ್ದರೆ ಹೊಡೆಯುತ್ತಿದ್ದಳು.

'ನೀವೇ ನೋಡಿ ! ನಾನು ಅರಚಿಕೊಂಡೆ. 'ಇವಳು ಎಷ್ಟು ಬಿಳಿಚಿಕೊಂಡಿದಾಳೆ?' ಜನಗಳಿಗೆ ಈಗ ನನ್ನ ಮೇಲೆ ನಂಬಿಕೆ ಮೂಡಲಾರಂಭಿಸಿತ್ತು. ಅಷ್ಟರಲ್ಲೇ ರಬಾಯಿ ಹೇಳಿದರು, 'ಈಗಲೂ ನಾವು ಸ್ವರ್ಗದಲ್ಲಿ ದೇವರನ್ನ ಇರಿಸಿಕೊಂಡಿದೀವಿ. ಇವಳಿಗೆ ವಿಚ್ಛೇದನ ಕೊಡು. ಇವಳನ್ನು ಬಿಟ್ಟುಬಿಡು.'

'ನೀವು ಹೇಳೋದನ್ನ ಒಪ್ಪುತೀನಿ ಸ್ವಾಮಿ' ನಾನು ಹೇಳಿದೆ. 'ಆದರೆ ನನಗೆ ಸಾಕಷ್ಟು ಖರ್ಚು-ವೆಚ್ಚಗಳಾಗಿದ್ದವು. ಮದುವೆ ಖರ್ಚು ಸರಿಯಾಗಿ ನೂರು ನಾಣ್ಯ ಗಳಾಗಿದ್ದವು.'

ಆನಂತರ ಹೊಂದಾಣಿಕೆ ಆರಂಭವಾಯಿತು ! ನನ್ನ ಹೆಂಡತಿ ತನ್ನ ಅಡಿಗೆ ಕೆಲಸದಿಂದ ಪೆನ್ನಿಗೆ ಪೆನ್ನಿ ಕೂಡಿಸಿ ಇಟ್ಟಿದ್ದಳು. ಇವು ಹಳೆಗಾಲದ ಎಪ್ಪತ್ತು ನಾಣ್ಯಗಳಷ್ಟಿದ್ದವು. ಅವರು ಇಷ್ಟಕ್ಕೇ ಒಪ್ಪಿಕೊಳ್ಳಲು ಹೇಳಿದರು. ಆದರೆ ನಾನು ಒಪ್ಪಲಿಲ್ಲ.

'ಹಾಗಿದ್ದ ಮೇಲೆ ಅವಳು ಮದುವೆಗೆ ಬಂದ ಉಡುಗೊರೆಗಳನ್ನು ಮಾರಲಿ' ನಾನು ಹೇಳಿದೆ. ಹುಡುಗಿ ಚೀರಿಕೊಂಡಿದ್ದಳು. 'ಎಲ್ಲದನ್ನು ತಗೋ ! ನನ್ನೊಳಗೇ ಇರೋ ಕಣ್ಣೀರನ್ನೂ ತಗೊ!' ಮುಖ ಮುಚ್ಚಿಕೊಂಡು ಅಳಲಾರಂಭಿಸಿದಳು. 'ಅಯ್ಯೋ ಅಮ್ಮಾ, ನಾನೂ ನಿನ್ನ ಜೊತೆ ಸ್ಮಶಾನದ ಸಮಾಧಿಯೊಳಗೆ ಮಲಗಿದರೆ ಎಷ್ಟು ಚೆನ್ನಾಗಿರುತ್ತಿತ್ತು'. ಅವಳು ತನ್ನ ಕಾಲುಗಳನ್ನು ಮೇಜಿಗೆ ಒದ್ದಳು. ಮಸಿ ಕುಡಿಕೆ ಯನ್ನು ಬಡುಮೇಲಾಗಿಸಿದ್ದಳು. ಬಿಕ್ಕಿ ಅತ್ತಳು. 'ನನಗೆ ಇಷ್ಟೆಲ್ಲ ನಡೀತಿದೆ ಅಂದರೆ ದೇವರು ಇಲ್ಲವೇ ಇಲ್ಲ.'

ಪ್ರಾರ್ಥನೆಯ ನೀಳ ಉಡುಪುಗಳು ಅವಳ ಎದುರಿಗೆ ಕಂಡವು ! ಅವಳು ಹಣೆ ಚಚ್ಚಿಕೊಳ್ಳುತ್ತ ನೆಲಕ್ಕುರುಳಿ ಬಿದ್ದಳು. ಅವಳ ಉಡುಪು ಮೇಲೆ ಸರಿದಿತ್ತು. ಅವಳ ಕರವಸ್ತ್ರ ತಲೆಬದಿ ಬಿದ್ದಿತ್ತು. ಅವರೆಲ್ಲ ಅವಳನ್ನು ಏಳಿಸಲು ಯತ್ನಿಸಿದರು. ಆದರೆ ಅವಳು ಕೊಸರಿಕೊಂಡು ಕಳ್ಳಿದಳು. 'ನೀವು ಯಹೂದಿಗಳಲ್ಲ, ಪ್ರಾಣಿ ಗಳು !'

ಇದೇನೆ ಇರಲಿ, ಅಂದು ಸಂಜೆ ನಾನು ನನ್ನ ನೂರು ನಾಣ್ಯಗಳನ್ನು ಸಂಗ್ರಹಿಸಿ ಕೊಂಡೆ. ಮೋಡಿ ಅಕ್ಷರದವನು ವಿಚ್ಛೇದನದ ಪತ್ರ ಬರೆಯಲು ಕುಳಿತ. ಥಟ್ಟನೆ ನಾನು ಸ್ವಲ್ಪಕಾಲ ಹೊರಗೆ ಹೋಗಿ ಬರುವುದಾಗಿ ತಿಳಿಸಿದೆ. ಮತ್ತೆ ನಾನು ಹೊರಳಿ ಹೋಗಲೇ ಇಲ್ಲ. ಅವರು ನನ್ನನ್ನು ನಡುರಾತ್ರಿಯವರೆಗೂ ಹುಡುಕಿದರು. ಅವರು ನಾನು ಜೀವಂತವಾಗಿರುವೆನೇ ಎಂದೆಲ್ಲ ವಿಚಾರಿಸಿದರು. ನನಗಾಗಿ ಎಲ್ಲೆಲ್ಲೋ ಹುಡುಕಾಡಿದರು. ನನ್ನ ಹೆಂಡತಿ ಶಾಶ್ವತವಾಗಿ ವಿಧವೆಯಾಗಿಯೇ ಉಳಿದಳು. ಆಮೇಲೆ, ಸ್ವಲ್ಪಕಾಲದ ನಂತರ ಪೇಟೆ ಮತ್ತು ಅವಳ ಸ್ವಂತ ದುರದೃಷ್ಟದಿಂದ ಅವಳು ತಾನಾಗಿಯೇ ಬಾವಿಗೆ ಹಾರಿಕೊಂಡಳು.

●

ಕಾದಂಬರಿ

೧೬೪೮ನೇ ಇಸವಿಯಲ್ಲಿ ಗೋರೆ*

೧೬೪೮ನೇ ಇಸವಿಯಲ್ಲಿ ಉಕ್ರೈನ್‌ನ ದುಷ್ಟ ಪಾಖಂಡಿ ಬೊಗ್ದನ್ ಛ್ಮೆಲ್ನಿಕಿ ಮತ್ತು ಇವನ ಅನುಯಾಯಿಗಳು ಜಮೋಸ್ಕಿ ನಗರಕ್ಕೆ ಮುತ್ತಿಗೆ ಹಾಕಿದರು. ಆದರೆ ಇದನ್ನು ವಶಕ್ಕೆ ತೆಗೆದುಕೊಳ್ಳಲಿಲ್ಲ. ಏಕೆಂದರೆ ಇದು ತುಂಬಾ ಶಕ್ತಿಯುತವಾಗಿತ್ತು ; ದಂಗೆಕೋರ ಹೈದ್‌ಮಕ್ ರೈತರು ಮುನ್ನಡೆದು ಗಲಭೆಯನ್ನು ತೊಮಜೊವ್, ಬಿಲ್ಗರೋಜ್, ಕ್ರಶ್ನಿಕ್, ತುರ್ಬಿನ್, ಫ್ರಾಂಪೋಲ್ - ಮತ್ತು ಗೋರೆಯಲ್ಲಿ ಸಹ ಹಬ್ಬಿಸಿದರು. ಈ ಪಟ್ಟಣ ಬೆಟ್ಟಗಳ ನಡುವೆ ಜಗತ್ತಿನ ಕೊನೆಯಲ್ಲಿ ಮಲಗಿತ್ತು. ಇವರು ಎಲ್ಲ ಕೈಗಳಿಂದಲೂ ಕತ್ತರಿಸಿದರು, ಮನುಷ್ಯರ ಸಾವಿನಲ್ಲಿ ತೇಲಿದರು. ಚಿಕ್ಕ ಮಕ್ಕಳನ್ನು ಕೊಂದರು. ಹೆಂಗಸರ ಮಾನಭಂಗ ಮಾಡಿದರು. ನಂತರ ಇವರ ಹೊಟ್ಟೆಗಳನ್ನು ಸೀಳಿ ಅಲ್ಲಿಗೆ ಬೆಕ್ಕುಗಳನ್ನು ತುಂಬಿ ಹೊಲಿದರು. ಹಲವರು ಲುಬ್ಲಿನ್‌ಗೆ ಪಲಾಯನ ಮಾಡಿದರು, ಕೆಲವರು ಮತಾಂತರಕ್ಕೆ ಒಳಗಾದರು ಅಥವಾ ಗುಲಾಮರಾಗಿ ಮಾರಲ್ಪಟ್ಟರು. ಒಂದು ಕಾಲದಲ್ಲಿ ತನ್ನಲ್ಲಿನ ವಿದ್ವಾಂಸರು ಮತ್ತು ಮೇಧಾವಿ ಜನರಿಂದ ಪ್ರಸಿದ್ಧಿಗೊಂಡಿದ್ದ ಗೋರೆ ಸಂಪೂರ್ಣವಾಗಿ ನಾಶವಾಗಿತ್ತು. ಎಲ್ಲೆಡೆಗಳಿಂದಲೂ ರೈತಾಪಿಗಳು ಸಂತೆಗೆ ಬರುತ್ತಿದ್ದ ಸಂತೆಮಾಳವು ವಿಧವೆಯರ ದುಃಖವಸ್ತ್ರಗಳಿಂದ ತುಂಬಿತ್ತು. ಪ್ರಾರ್ಥನಾಗೃಹ ಮತ್ತು ಅಧ್ಯಯನಗೃಹ ಸೈನಿಕರು ಕಟ್ಟಿದ್ದ ಕುದುರೆಗಳ ಲದ್ದಿಯಿಂದ ತುಂಬಿಕೊಂಡಿದ್ದವು. ಸಾಕಷ್ಟು ಮನೆಗಳು ಬೆಂಕಿಯಿಂದ ಮಟ್ಟಸವಾಗಿದ್ದವು. ಗೋರೆ ನೆಲಸಮವಾಗಿ ವಾರಗಳು ಉರುಳಿದ ಮೇಲೆಯೂ ಯಾರೂ ಹೂಳದೆ ಹೆಣಗಳು ಎಲ್ಲ ಬೀದಿಗಳಲ್ಲಿ ನಿರ್ಲಕ್ಷಿತ ವಾಗಿ ಬಿದ್ದಿದ್ದವು. ಕ್ರೂರನಾಯಿಗಳು ಕತ್ತರಿಸಿದ ಮೂಳೆಗಳನ್ನು ಎಳೆದಾಡುತ್ತಿದ್ದವು. ಹದ್ದು ಮತ್ತು ಕಾಗೆಗಳು ಮಾನವಮಾಂಸದ ಮೇಲೆ ಹಾರಾಡುತ್ತಿದ್ದವು. ಪಟ್ಟಣ ದಿಂದ ಪಾರಾಗಿ ಅಲೆಮಾರಿಗಳಾಗಿದ್ದವರು ದೂರವಾಗಿದ್ದರು. ನೋಡುವವರಿಗೆ ಗೋರೆ ಪೂರ್ಣವಾಗಿ ಅಳಿದು ಹೋಯಿತೆಂಬಂತೆ ಕಾಣತೊಡಗಿತ್ತು.

ವರುಷ ಉರುಳಿದ ನಂತರ ದಿಕ್ಕೆಟ್ಟ ಅನಾಥ ಪಟ್ಟಣಿಗರು ಮಾತ್ರ ಹೊರಳಿ

---

* 'ಸೇಟನ್ ಇನ್ ಗೋರೆ' ಕಾದಂಬರಿಯ ಮೊದಲ ಅಧ್ಯಾಯ.

ಬಂದರು. ಪ್ರತಿಯೊಂದೂ ದೊಡ್ಡ ಕುಟುಂಬದಂತಿತ್ತು. ಹೀಗಿರುವಾಗ ನಾಶಗೊಂಡಿದ್ದ ಗೋರೆ ಹಸಿರಿಗೆ ಹೊರಳಿಕೊಂಡಿತ್ತು. ಜನಾಂಗದೊಳಗೆ ಶಕ್ತಿ ತೋರಿಕೊಳ್ಳುವ ಪ್ರಾಯಸ್ಥರು ಹಿಮ ಮುಸುಕಿದ ಗೋಣಿತಾಟಿನ ಉಡುಗೆಯಲ್ಲಿ ಬಂದರು. ಜೊತೆಯಲ್ಲಿ ಭಿಕ್ಷುಕರ ಚೀಲಗಳನ್ನು ತಂದಿದ್ದರು. ಹಲವರು ಧರ್ಮ ಪಥವನ್ನು ತೊರೆದಿದ್ದರು. ಉಳಿದವರು ದುಃಖದಲ್ಲಿ ಮುಳುಗಿದ್ದರು. ಆದರೆ ಜಗತ್ತಿನಲ್ಲಿ ಏನು ನಡೆಯಬೇಕು ಎಂದಿರುತ್ತದೆ ಅದೆಲ್ಲ ತಿರುವುಮುರುವೂ ಆಗುತ್ತಿರುತ್ತದೆ. ಬಹಳ ಕಾಲದವರೆಗೆ ಮುಚ್ಚಿಕೊಂಡೇ ಇದ್ದ ಅಂಗಡಿ ಬಾಗಿಲುಗಳು ನಿಧಾನವಾಗಿ ಒಂದೊಂದಾಗಿಯೇ ತೆರೆದುಕೊಂಡವು. ಮೂಳೆಗಳೆಲ್ಲ ಪಾಳು ಬಿದ್ದಿದ್ದ ಸ್ಮಶಾನಕ್ಕೆ ಸಾಗಿಸಲ್ಪಟ್ಟವು. ಎಲ್ಲವನ್ನೂ ಒಂದೇ ಸಮಾಧಿಯಲ್ಲಿ ಒಟ್ಟಿಗೇ ಹೂಳಲಾಯಿತು. ಸೂರುಗಳು ತುಂಬ ಕೆಳಮಟ್ಟಕ್ಕೆ ಇಳಿದುಕೊಂಡಿದ್ದವು. ; ಕೆಲಸ ಕಲಿಯುತ್ತಿದ್ದವರೇ ಬಿರಿದಿದ್ದ ಮಾಳಿಗೆಗಳಿಗೆ ಮಣ್ಣು ಮೆತ್ತಿದರು, ಚಿಮಣಿಗಳನ್ನು ರಿಪೇರಿ ಮಾಡಿದರು. ರಕ್ತ ಮತ್ತು ನೆಣ ಮೆತ್ತಿಕೊಂಡಿದ್ದ ಗೋಡೆಗಳಿಗೆ ಬಣ್ಣ ಬಳಿದರು. ಉದ್ದನೆಯ ಗಳಗಳಿಂದ ಹುಡುಗರು ಎತ್ತರದಲ್ಲಿ ತೂಗಿಬಿದ್ದಿದ್ದ ಮೂಳೆಗಳನ್ನು ತೆಗೆದರು. ಸುತ್ತಲಿನ ಹಳ್ಳಿಗಳ ರೈತಾಪಿಗಳು ಗೋರೆಯಲ್ಲಿ ದೆವ್ವಗಳಿರಬಹುದು ಎಂದು ಭಯಗೊಂಡು ಇಲ್ಲಿಗೆ ಹೆಜ್ಜೆ ಇಡದಿದ್ದರೂ ಗೋಧಿ ಹಿಟ್ಟು, ಧಾನ್ಯಗಳನ್ನು ಕೊಳ್ಳಲು ನಿಧಾನವಾಗಿ ಬರಲಾರಂಭಿಸಿದರು. ಉಪ್ಪು ಮತ್ತು ಮೊಂಬತ್ತಿಗಳು, ಹೆಂಗಸರಿಗೆ ಕಸೂತಿ ಬಟ್ಟೆ, ರವಿಕೆಗಳು, ಹತ್ತಿ ಬಟ್ಟೆಗಳು, ಮಣ್ಣಿನ ಹೂಜಿಗಳು, ಎಲ್ಲ ತರಹದ ಒಡವೆ ಮತ್ತು ಆಭರಣಗಳು ಮುಂತಾಗಿ ಎಲ್ಲವನ್ನೂ ಕೊಳ್ಳುವವರೂ ಬರತೊಡಗಿದರು. ಗೋರೆ ಆಗಲೇ ಜಗತ್ತಿನಿಂದ ಕಣ್ಮರೆಯಾಗಿತ್ತು. ಬೆಟ್ಟಗಳು ಮತ್ತು ಎತ್ತರಕ್ಕೆ ಬೆಳೆದ ಕಾಡು ಪೇಟೆಯನ್ನು ಇಲ್ಲಿಂದ ಮೈಲಿಗಳಷ್ಟು ಅಂತರದಲ್ಲಿರಿಸಿತ್ತು. ಚಳಿಗಾಲದಲ್ಲಿ ಹಿಮಾವೃತ ದಾರಿಗಳು ಕರಡಿ, ತೋಳ ಮತ್ತು ಕಾಡು ಹಂದಿಗಳ ಹೆಜ್ಜೆಗಳಿಂದ ಕೂಡಿದ್ದುವು.

ಗೋರೆಗೆ ಕೊನೆಯಲ್ಲಿ ಬಂದ ನಾಗರೀಕರೆಂದರೆ ತುಂಬ ಹೆಸರುವಾಸಿಯಾಗಿದ್ದ ರಬಾಯಿ ಬೆನಿಷ್ ಅಷ್ಕೆನಾಜಿ, ಮತ್ತು ಇಲ್ಲಿನ ಜನಾಂಗದೊಳಗೆ ಶ್ರೀಮಂತನೂ, ಮುಖಂಡನೂ ಆಗಿದ್ದ ಎಲಿಜರ್ ಬಬದ್. ರಬಾಯಿ ಬೆನಿಷ್ ತಮ್ಮೊಂದಿಗೆ ತಮ್ಮ ಅರ್ಧ ಸಂಸಾರವನ್ನು ಕರೆತಂದಿದ್ದರು. ಇವರು ತಡಮಾಡದಂತೆ ಪ್ರಾರ್ಥನಾಗೃಹದ ಬಳಿಯಲ್ಲಿನ ತಮ್ಮ ಹಳೆಯ ಮನೆಗೆ ಹೋಗಿದ್ದರು. ಧಾರ್ಮಿಕ ನಿಯಮಾಚರಣೆಗಳ ಪಾಲನೆಯ ಅವಲೋಕನದಲ್ಲಿ ಮುಳುಗಿದರು. ಹೆಂಗಸರು ಸಮಯಕ್ಕೆ ಸರಿಯಾಗಿ

ಸ್ನಾನಗೃಹಗಳಿಗೆ ಪವಿತ್ರಸ್ನಾನಕ್ಕೆ ಹೋಗುತ್ತಿರುವರೇ, ಪ್ರಾಯಸ್ಥರು ತೋರಾ ಅಧ್ಯಯನ ಮಾಡುತ್ತಿದ್ದಾರೆಯೇ ಎಂದು ಪರೀಕ್ಷಿಸ ಹತ್ತಿದರು. ರಬಾಯಿಯವರು ತಮ್ಮ ಇಬ್ಬರು ಹೆಣ್ಣುಮಕ್ಕಳು ಮತ್ತು ಐವರು ಮೊಮ್ಮಕ್ಕಳನ್ನು ಲುಬ್ಲಿನ್‌ನ ಸ್ಮಶಾನದಲ್ಲಿ ಈ ಹಿಂದೆಯೇ ಸ್ವರ್ಗಕ್ಕೆ ಕಳಿಸಿದ್ದರು. ಇಷ್ಟು ದಿನ ಇವರು ಸೆರೆಮನೆಯಲ್ಲಿಯೇ ಇದ್ದರು. ಆದರೆ ದುರ್ದೈವ ಇವರ ರೀತಿನೀತಿಗಳನ್ನು ಬದಲಾಗಿಸಿರಲಿಲ್ಲ. ಇವರು ಬೇಗ ಏಳುತ್ತಿದ್ದರು. ತಾಲಮಂದ್ ಮತ್ತು ಇದರ ಟೀಕೆಗಳನ್ನು ಮೊಂಬತ್ತಿಗಳ ಬೆಳಕಿನಲ್ಲಿ ಓದುತ್ತಿದ್ದರು. ತಮ್ಮನ್ನು ತಣ್ಣೀರಿನೊಳಗೆ ಮುಳುಗಿಸಿಕೊಳ್ಳುತ್ತಿದ್ದರು ಹಾಗೂ ಸೂರ್ಯೋದಯದಲ್ಲಿ ಸಿನಗಾಗ್‌ನೊಳಗೆ ಪ್ರಾರ್ಥನೆಗಳನ್ನು ಪಠಿಸುತ್ತಿದ್ದರು. ರಬಾಯಿ ಬೆನಿಷ್ ತಮ್ಮ ಅರವತ್ತನೇ ವಯಸ್ಸಿನಲ್ಲಿದ್ದರು. ಆದರೆ ಇವರ ಚರ್ಮ ಇನ್ನೂ ಮೃದುವಾಗಿತ್ತು. ತಮ್ಮಲ್ಲಿನ ಬಿಳಿಕೂದಲುಗಳನ್ನು ಇವರು ಕಳೆದುಕೊಂಡಿರಲಿಲ್ಲ ಹಾಗೂ ಇವರ ಹಲ್ಲುಗಳು ಹೊರಗೆ ಬಿದ್ದಿರಲಿಲ್ಲ. ಬಹಳ ವರ್ಷಗಳ ನಂತರ ಪ್ರಾರ್ಥನಾಗೃಹದ ಹೊಸ್ತಿಲನ್ನು ಇವರು ಮೊದಲ ಬಾರಿಗೆ ದಾಟಿದಾಗ - ಉದ್ದನೆಯ ದೊಡ್ಡ ಮೂಳೆಗಳಲ್ಲಿ ತುಂಬಿಕೊಂಡ ದುಂಡನೆಯ ಗುಂಗುರು ಗಡ್ಡವಿತ್ತು, ಇವರ ಸ್ಯಾಟೀನ್ ಕೋಟು ನೆಲ ಮುಟ್ಟುತ್ತಿತ್ತು. ಕರಿಟೊಪ್ಪಿಗೆ ಹಿಂದೆ ಸರಿದು ಕುತ್ತಿಗೆ ಮೇಲೆ ಕೂತಿತ್ತು - ಕುಳಿತಿದ್ದ ಎಲ್ಲರೂ ಮೇಲೆ ಎದ್ದು ಸಾವಿನಿಂದ ಹೊರಳಿ ಬಂದಿರುವುದಕ್ಕೆ ವಂದನೆಗಳನ್ನು ಹೇಳಿ ಇವರ ಆಶೀರ್ವಾದ ಕೋರಿದರು. ಕೆಲವರು ಇವರಿಗೆ ೧೬೫೫ರ ಮಂಟಪೋತ್ಸವದ ಸಮಾರಂಭದಲ್ಲಿ ಇವರು ಲುಬ್ಲಿನ್‌ನಲ್ಲಿ ಸಾವನ್ನಪ್ಪಿದ್ದರು ಎಂಬ ಸುದ್ದಿಯ ದೂರನ್ನು ಹೇಳಿದರು. ರಬಾಯಿ ಬೆನೆಷ್ ಅವರು ಧರಿಸಿದ್ದ ಶರಟು ಮತ್ತು ಕೋಟಿನ ಮಧ್ಯೆ, ಜರಿಪಟ್ಟೆ ಪಾದಗಳವರೆಗೆ ಇಳಿಬಿದ್ದಿತ್ತು. ಇವರು ಬಿಳಿಶರಟು ಮತ್ತು ಟ್ರೌಸರ್, ಬಿಳಿ ಕಾಲು ಚೀಲ ಹಾಗೂ ಹಾಫ್ ಷೂಗಳನ್ನೂ ಧರಿಸಿದ್ದರು. ಹೆಬ್ಬೆರಳಿನೊಂದಿಗೆ ಎರಡು ಬೆರಳು ಕೂಡಿಸಿ ಬಲಗಣ್ಣಿನ ದೊಡ್ಡ ಹುಬ್ಬಿನ ಮೇಲೆ ಕೂದಲುಗಳನ್ನು ಹಿಂದೆ ಸರಿಸಿದ ರಬಾಯಿ ಬೆನಿಷ್ ಅವರು ಕತ್ತಲಿನಲ್ಲಿರುವುದು ಚೆನ್ನಾಗಿ ಕಾಣುವಂತೆ ದೃಷ್ಟಿ ಹರಿಸಿ ಚೆಕ್ಕಳ ಎದ್ದ ಪ್ರಾರ್ಥನಾಗೃಹದ ಗೋಡೆಗಳು ಮತ್ತು ಪುಸ್ತಕಗಳ ಖಾಲಿ ಕಪಾಟುಗಳತ್ತ ಕಣ್ಣಾಡಿಸಿದರು. ಎತ್ತರದ ದನಿಯಲ್ಲಿ ಹೇಳಿದರು : "ಸಾಕು !.. ಇಲ್ಲಿ ನಮಗೆ ಆಶೀರ್ವದಿಸೋದು ದೇವರ ಸಂಕಲ್ಪವಾಗಿತ್ತು, ಈಗ ನಾವು ಹೊಸದಾಗಿ ಎಲ್ಲವನ್ನೂ ಆರಂಭಿಸ್ತಿದ್ದೇವೆ."

ರಬಾಯಿ ಬೆನಿಷ್ ಅಷ್ಕೆನಾಜಿಯವರು ಗೋರೆಯಲ್ಲಿನ ಕಛೇರಿಯನ್ನು ರಬಾಯಿ

ಗಳ ತಲೆಮಾರಿನಿಂದ ಪಿತ್ರಾರ್ಜಿತವಾಗಿ ಹೊಂದಿದ್ದರು. ಇವರು ವ್ಯಾಖ್ಯಾನಗಳ ಲೇಖಕರೂ, ಜವಾಬ್ದಾರಿ ಹೊತ್ತವರೂ ಆಗಿದ್ದರು. ನಾಲ್ಕು ನಾಡಿನ ಸಾಮಾಜಿಕ ನ್ಯಾಯಾಂಗ ಪಂಚಾಯಿತಿಗೆ ಸದಸ್ಯರೂ ಆಗಿದ್ದರು ; ಮತ್ತು ತಮ್ಮ ಕಾಲದಲ್ಲಿನ ತುಂಬ ಹೆಸರಾಂತ ಲೆಕ್ಕಾಚಾರದ ಮನುಷ್ಯರಾಗಿದ್ದರು. ಈ ಹಿಂದೆ ಉರುಳಿದ್ದ ದಿನಗಳಲ್ಲಿ ಗಂಡಂದಿರು ತೊರೆದ ಬಹಳಷ್ಟು ಹೆಂಗಸರು ಮರುಮದುವೆಯಾಗಲೆಂದು ದೂರಕ್ಕೆ ಹೋಗಲು ರಬಾಯಿ ಬೆನಿಷ್ ಅವರಿಂದ ಅನುಮತಿ ಪಡೆದಿದ್ದರು. ರಬಾಯಿ ಬೆನಿಷ್‌ರು ನಿಯಮಗಳನ್ನು ಉದಾರತೆಯಿಂದ ರೂಢಿಗೊಳಿಸುವಂಥವರಾಗಿದ್ದರು. ರಬಾಯಿಗಳ ಹುದ್ದೆಗೆ ಸಮ್ಮತಿ ಕೋರಲು ಹೆಸರಾಂತ ಜನಾಂಗಗಳಿಂದ ಹಲವರು ಆಗಾಗ ಅತ್ಯಾಶೆಯಲ್ಲಿ ಬರುತ್ತಿದ್ದರು - ಆದರೆ ಎಲ್ಲರೂ ನಿರಾಶೆಯಿಂದ ಮರಳುತ್ತಿದ್ದರು. ರಬಾಯಿ ಬೆನಿಷ್ ತಮ್ಮ ದಿನಗಳನ್ನು ತಾವು ಕಛೇರಿ ಮಾಡಿಕೊಂಡಲ್ಲಿಯೇ ಕಳೆಯುವ ಅಪೇಕ್ಷೆ ತೋರಿದರು. ಈಗ ಅವರು ಮತ್ತೆ ಮನೆಯನ್ನು ಹೊಂದಿದ್ದರು. ಆಶ್ಚರ್ಯವೆಂಬಂತೆ, ಈ ಮನೆ ಒಂದಿಷ್ಟು ಮುಕ್ಕಾಗಿತ್ತು. ಓಕ್ ಮರದ ಎರಡು ಕಪಾಟುಗಳು ಹಿಂದೊಮ್ಮೆ ಹಸ್ತಪ್ರತಿ ಮತ್ತು ಕಾಗದ ಪತ್ರಗಳಿಂದ ತುಂಬಿಕೊಂಡಿದ್ದಂಥವು. ಮೊದಲು ಇದ್ದಲ್ಲಿಯೇ ನಿಂತಿದ್ದವು. ಹಳೆ ಮಾದರಿಯ ಕುರ್ಚಿಗಳು, ಹಳದಿ ಸ್ಯಾಟಿನ್ ಬಟ್ಟೆಯ ಹೊದಿಕೆಯೊಂದಿಗೆ ಬಳಿಯಲ್ಲೇ ಇದ್ದವು. ತಾಮ್ರದ ಮೊಂಬತ್ತಿ ಸ್ಟ್ಯಾಂಡ್ ಮೇಲಿನಿಂದ ತೂಗಿಕೊಂಡಿತ್ತು. ಪವಿತ್ರಗ್ರಂಥ ರಾಶಿಯ ಸಂಪುಟಗಳು ಮತ್ತು ಇತರೆ ಬರವಣಿಗೆಗಳು ಗೋಪುರ ಕೋಣೆಯ ಒಳಗೆ ಸುರಕ್ಷಿತವಾಗಿ ಇಡಲ್ಪಟ್ಟಿದ್ದವು. ಈ ಮನೆಯೊಳಗಿನ ಯಾವುದೋ ಒಂದು ಭಾಗದಲ್ಲಿ ಜ್ಯೂಗಳಿಗೆ ಹಿಂಸೆ ಕೊಡುತ್ತಿದ್ದಾಗ ಪಟ್ಟಣದಿಂದ ಪಾರು ಮಾಡಿದ ಗೊಂಬೆ ಮನುಷ್ಯನನ್ನು ಹೂಳಲಾಗಿದೆ ಎಂಬ ವದಂತಿಯೂ ಇತ್ತು.

ರೆಬ್ ಎಲಿಜರ್ ಬಬದ್ ತಮ್ಮ ಒಬ್ಬಳು ಮಗಳೊಂದಿಗಷ್ಟೇ ಗೋರೆಗೆ ಮರಳಿ ಬಂದಿದ್ದರು. ಇವರ ಮದುವೆಯಾಗಿ ಮೊದಲ ಮಗಳಿಗೇ ಕಸಾಕ್ಸ್‌ರಿಂದ ಮಾನ ಭಂಗಕ್ಕೊಳಗಾಗಿ ಈಕೆ ಭರ್ಜಿಯಿಂದ ತಿವಿದುಕೊಂಡಿದ್ದಳು. ಇವನ ಹೆಂಡತಿ ಮಾರಿರೋಗದಿಂದ ಸಾವನ್ನಪ್ಪಿದ್ದಳು ; ಒಬ್ಬನೇ ಮಗ ಕಾಣೆಯಾಗಿದ್ದ. ಇವನಿಗೆ ಏನಾಯಿತು ಎನ್ನುವುದು ಯಾರಿಗೂ ತಿಳಿದಿರಲಿಲ್ಲ. ಇವರ ಮನೆಯ ಮೊದಲ ಅಂತಸ್ತು ಬಿರಿದಿತ್ತು. ಹೀಗಾಗಿ ಇವರು ಗೋಪುರದ ಕೋಣೆಗೆ ಹೋಗಿದ್ದರು. ಈ ಹಿಂದೆ ರೆಬ್ ಎಲಿಜರ್ ತಮ್ಮ ಶ್ರೀಮಂತಿಕೆಗೆ ಪ್ರಸಿದ್ಧರಾಗಿದ್ದರು. ವಾರದ ದಿನಗಳಲ್ಲಿಯೂ ಇವರು ರೇಷಿಮೆ ಬಟ್ಟೆ ಧರಿಸುತ್ತಿದ್ದರು. ಇವರಿಗಿದ್ದ ಘನತೆಯಿಂದಾಗಿ ವಾದ್ಯ ಬಾರಿಸುತ್ತಿದ್ದ ಮದುವೆಗಳಲ್ಲಿ

ಮದುವಳಗಿತ್ತಿಯನ್ನು ಇವರ ಮನೆಯಲ್ಲಿಯೇ ಬಿಡದಿಗೆ ಬಿಡಲಾಗುತ್ತಿತ್ತು. ಪ್ರಾರ್ಥನಾ ಗೃಹದಲ್ಲಿ ಹಾಡುಗಾರ ಹದಿನೆಂಟು ವಾಕ್ಯಗಳ ಪಠಣಕ್ಕೆ ರೆಬ್ ಎಲಿಜರ್ ಅವರಿಗಾಗಿ ಕಾಯುತ್ತಿದ್ದ. ಸಬ್ಬತ್ ದಿನಗಳಲ್ಲಿ ಹಾಗೂ ರಜೆಗಳಲ್ಲಿ ಬರುವ ಅತಿಥಿಗಳು ಇವರ ಮನೆಯಲ್ಲಿನ ಊಟದ ಮೇಜಿನಲ್ಲಿ ಬೆಳ್ಳಿಯ ಪಾತ್ರೆಗಳಲ್ಲಿ ಭೋಜನ ಮಾಡುತ್ತಿದ್ದರು. ಒಮ್ಮೊಮ್ಮೆ ಗೋರೆಯ ಒಡೆಯರು ತಮ್ಮ ಶ್ರೀಮತಿಯರಿಗೆ ಆಭರಣಗಳನ್ನು ಮಾಡಿಸಲು ರೆಬ್ ಎಲಿಜರ್ ಅವರಲ್ಲಿಗೆ ಬಂಗಾರದ ನಾಣ್ಯಗಳೊಂದಿಗೆ ಗಾಡಿಯನ್ನು ಕಳಿಸುತ್ತಿದ್ದರು.

ಆದರೆ ಈಗ ರೆಬ್ ಎಲಿಜರ್ ಗುರುತು ಸಿಗದಂತಾಗಿದ್ದರು. ಉದ್ದನೆಯ ಸಣ್ಣ ಶರೀರ ಮೊಂಬತ್ತಿಯಂತೆ ಬಾಗಿಕೊಂಡಿತ್ತು. ಬೆಣೆ ಆಕಾರದ ಗಡ್ಡ. ಬೂದು ಬಣ್ಣಕ್ಕೆ ತಿರುಗಿತ್ತು. ಬತ್ತಿದ ಮುಖ ಇಟ್ಟಿಗೆಯಂತೆ ಕೆಂಪಾಗಿತ್ತು. ರೆಬ್ ಎಲಿಜರ್ ಅವರ ಕಣ್ಣುಗಳು ಮೂಳೆಗಳಿಗೆ ಅಂಟಿದ್ದವು. ಸಿಪ್ಪೆಯಂತೆ ಎದ್ದಿದ್ದ ಮೂಗು ಹೊರಚಾಚಿಕೊಂಡಿತ್ತು; ನೆಲದಲ್ಲಿ ಏನನ್ನೋ ನೋಡುತ್ತಿರುವ ಹಾಗೆ ಕಾಣಿಸುತ್ತಿತ್ತು. ಇವರು ಕುರಿತುಪ್ಪಟದ ಹಳೆ ಟೋಪಿ ಧರಿಸಿ, ಒಂದು ತೆರನ ಕೋಟು ತೊಟ್ಟು ಅಲೆಯುತ್ತಿದ್ದರು ; ಇವರ ಸೊಂಟದಲ್ಲಿ ಒಂದು ಹಗ್ಗ ಸುತ್ತಿರುತ್ತಿತ್ತು. ಭಿಕ್ಷುಕರ ಹಾಗೆ ಕಾಲುಗಳಿಗೆ ಚಿಂದಿ ಬಟ್ಟೆ ಯಿರುತ್ತಿತ್ತು. ಇವರು ಎಂದೂ ಪ್ರಾರ್ಥನಾಗೃಹಕ್ಕೆ ಬರುತ್ತಿರಲಿಲ್ಲ ; ತಮ್ಮ ಮನೆ ಕೆಲಸವನ್ನು ಮಾಡಿಕೊಳ್ಳುತ್ತ ಇರುತ್ತಿದ್ದರು. ಕಸ ಗುಡಿಸುತ್ತಿದ್ದರು. ತಮಗೆ ಮತ್ತು ಮಗಳಿಗೆ ಅಡಿಗೆ ಮಾಡುತ್ತಿದ್ದರು. ಆಹಾರ ಸಾಮಗ್ರಿಗಳನ್ನು ಕೊಳ್ಳಲು ಸಂತೆಮಾಳಕ್ಕೆ ತಾಮ್ರನಾಣ್ಯಗಳೊಂದಿಗೆ ಹೋಗಿ ಸಸ್ತವಾಗಿ ಸಿಗುವ ಮಾಲಿಗಾಗಿ ಗಾಡಿಗಳ ಬಳಿ ಕೂತಿರುತ್ತಿದ್ದ ಹೆಂಗಸರಲ್ಲಿಗೆ ವ್ಯಾಪಾರಕ್ಕೆಂದು ಹೋಗುತ್ತಿದ್ದರು. ಇಷ್ಟು ದಿನಗಳನ್ನು ಹೇಗೆ ಕಳೆದಿರಿ ಎಂದು ತಮ್ಮನ್ನು ಯಾರಾದರೂ ಕೇಳಿದರೆ ಕೇಳಿಸದಂತೆ ಹೋಗುತ್ತಿದ್ದರು. ತಮ್ಮ ಮೈ ಮುದುಡಿಸಿಕೊಳ್ಳುತ್ತಿದ್ದರು. ತಮ್ಮ ಹಳೆಕಾಲವನ್ನು ನೆನಪಿಸಲು ಕೇಳುತ್ತಿದ್ದಾರೆ ಯೇನೋ ಎಂದು ಪ್ರಶ್ನಿಸಿದವರಿಗೆ ಉತ್ತರಿಸುತ್ತಿದ್ದರು. 'ಅದನ್ನೆಲ್ಲಾ ಯಾಕೆ ಮಾತಾಡಬೇಕು ? ಮಾತಾಡಿ ಏನು ಪ್ರಯೋಜನ ?'

ಕೆಲವರು ತಮ್ಮ ಪಾಪಗಳಿಗೆ ಇವರು ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಿದ್ದಾರೆ ಎಂದು ಹೇಳಿದರು. ದೈವಭಕ್ತಳಾಗಿದ್ದ ಶೆಮೇ ರಾಷೆಲ್ ಒಂದು ದಿನ ರಾತ್ರಿ ಇವರ ಮನೆಯ ಕಿಟಕಿಯ ಬಳಿ ಹಾದು ಹೋಗುವಾಗ ಇವರು ಜೋರಿನ ದನಿಯಲ್ಲಿ

ಕೆಟ್ಟದಾಗಿ ಮಾತಾಡುತ್ತಿದ್ದುದನ್ನು ಹೇಳಿದಳು. ಉಳಿದವರು ಇವರ ಬುದ್ಧಿ ಕೆಟ್ಟುಹೋಗಿದೆ, ಎಂದು ಪಿಸುಗುಟ್ಟಿದರು ; ಕೆಲಸದ ಹೆಂಗಸಿನಂತೆ ದೆವ್ವವನ್ನು ದೂರ ಓಡಿಸಲು ಮಲಗುವಾಗ ತಮ್ಮ ತಲೆದಿಂಬಿನ ಕೆಳಗೆ ಉದ್ದನೆಯ ಚಾಕೊಂದನ್ನು ಇರಿಸಿಕೊಳ್ಳು ತ್ತಾರೆ ಎಂದೂ ಹೇಳಿದರು.

ಹದಿನೇಳು ವರ್ಷಗಳ ಇವರ ಮಗಳು ರೆಷೇಲೆಗೆ ಎಡಗಾಲು ಕುಂಟು. ಇವಳು ತೀರ ಅಪರೂಪಕ್ಕೆ ಹೊರಗೆ ಬರುತ್ತಿದ್ದಳು. ಉಳಿದಂತೆ ತನ್ನ ಕೋಣೆಯಲ್ಲಿಯೇ ಇರುತ್ತಿದ್ದಳು. ಇವಳು ಉದ್ದವಾಗಿ ಹಸಿರುಮಿಶ್ರ ಬಣ್ಣದವಳಾಗಿದ್ದಳು. ಆದರೆ ಸುಂದರಳಾಗಿದ್ದಳು. ಉದ್ದನೆಯ ಕಪ್ಪುಕೂದಲು ಇವಳ ಸೊಂಟದವರೆಗೆ ತೂಗಿರುತ್ತಿದ್ದವು. ಈ ಹಿಂದೆ ರೆಬ್ ಎಲಿಜರ್ ಅವರ ಬಳಿಗೆ ಬರುತ್ತಿದ್ದ ಜನರು ಇವಳಿಗೆ ಒಬ್ಬ ಗಂಡನ್ನು ನೋಡಲು ಹೇಳುತ್ತಿದ್ದರು. ಏಕೆಂದರೆ ಬೆಳೆದ ಹುಡುಗಿಯೊಬ್ಬಳು ಒಬ್ಬ ಗಂಡಿಲ್ಲದೆ ಮನೆಯಲ್ಲಿ ಕುಳಿತಿರಬಾರದು ಎಂದು. ಆದರೆ ರೆಬ್ ಎಲಜೆರ್ ಮದುವೆ ದಲ್ಲಾಳಿಗಳಿಗೆ ಆಯಿತು ಅಥವಾ ಇಲ್ಲ ಎಂದು ಯಾವ ಉತ್ತರವನ್ನೂ ಹೇಳಿರಲಿಲ್ಲ. ಹೀಗಾಗಿ ಸುಮ್ಮನೆ ಮಾತಾಡುವುದನ್ನು ನಿಲ್ಲಿಸಿದ್ದರು. ಇದರ ಜೊತೆಗೆ ರೆಷೇಲೆ ಮೊದಲಿನಿಂದಲೂ ವಿಚಿತ್ರವಾಗಿ ನಡೆದುಕೊಳ್ಳುತ್ತಿದ್ದಳು. ಗುಡುಗು ಗುಡುಗಿದಾಗ ಚೀರಿಕೊಂಡು ಹಾಸಿಗೆಯಲ್ಲಿ ಹುದುಗಿಕೊಳ್ಳುತ್ತಿದ್ದಳು. ಕೂಗು ಕೇಳಿ ಇವಳತ್ತ ಪ್ರಾಯಸ್ಥ ಹೆಂಡತಿಯರು ಹಾಗೂ ಹುಡುಗಿಯರು ಬಂದಾಗ ಇವಳು ಏನೂ ಆಗಿಲ್ಲವೆಂಬಂತೆ ಅವರನ್ನೆಲ್ಲ ಕಳಿಸುತ್ತಿದ್ದಳು. ಬೆಳಗಿನಿಂದ ರಾತ್ರಿಯವರೆಗೂ ಒಂಟಿಯಾಗಿಯೇ ಕೂತಿರುತ್ತಿದ್ದಳು. ಕಾಲುಚೀಲಗಳನ್ನು ಹೆಣೆಯುತ್ತಿರುತ್ತಿದ್ದಳು ಅಥವಾ ತಾನು ದೂರದಿಂದ ತಂದಿದ್ದ ಹೀಬ್ರೂ ಸಂಪುಟಗಳನ್ನು ಓದುತ್ತಿರುತ್ತಿದ್ದಳು. ಒಮ್ಮೊಮ್ಮೆ ಕಿಟಕಿಯಲ್ಲಿ ತನ್ನ ತಲೆಗೂದಲು ಬಾಚಿಕೊಳ್ಳುತ್ತ ನಿಲ್ಲುತ್ತಿದ್ದಳು. ಇವಳ ಅಗಲದ ದೊಡ್ಡ ಕಂಗಳು ಮಾಳಿಗೆಯಿಂದ ದೂರಕ್ಕೆ ನಿಟ್ಟಿಸುತ್ತಾ ಇರುತ್ತಿದ್ದವು - ಹೊಳೆಯುತ್ತ, ಅಗಲವಾಗಿರುತ್ತಿದ್ದ ಇವನ್ನು ಹೊರಗಿನ ಯಾರಾದರೂ ಗುರುತಿಸಬಹುದಿತ್ತು. ಹೀಗಿರುವಾಗಲೇ ರೆಷೇಲೆ ಅಂದಗೆಡುತ್ತಿದ್ದಳು. ಪುರುಷರಲ್ಲಿ ಕೆಟ್ಟ ಆಲೋಚನೆಗಳನ್ನು ಹುಟ್ಟಿಸುತ್ತಿದ್ದಳು. ಹೆಂಗಸರು ತಮ್ಮ ತಲೆಗಳನ್ನು ಅಲುಗಿಸುತ್ತ ಇವಳ ಬಗೆಗೆ ಪಿಸುಗುಡುತ್ತಿದ್ದರು :

'ಪಾಪದ ಒಬ್ಬಂಟಿ ಹುಡುಗಿ..... ಬಲ ಕಳಕೊಂಡ ಮಗು. ಇದೇ ತುಂಬ ದುಃಖದ ಸಂಗತಿ.'

●

ಪ್ರಬಂಧ

ತತ್ವಜ್ಞಾನಿ ಹುಡುಗ*

ನನ್ನ ಅಣ್ಣ ಇಸ್ರಾಯಿಲ್ ಜೋಷುವ ಸ್ವತಂತ್ರ ದೃಷ್ಟಿಕೋನಗಳನ್ನು ಇರಿಸಿ ಕೊಂಡಿದ್ದರಿಂದ ಇವನ ಜೊತೆ ಮಾತಾಡುವುದು ತಂದೆಯವರಿಗೆ ಕಷ್ಟವಾಗುತ್ತಿತ್ತು. 'ನಂಬಿಕೆಯಿಲ್ಲದವನು ! ಯಹೂದಿಧರ್ಮ ದ್ವೇಷಿ !' ಎನ್ನುತ್ತಿದ್ದರು. ಹೀಗಾಗಿ ನನ್ನ ಅಣ್ಣ ತನ್ನ ಸುದೀರ್ಘವಾದ ಮಾತುಕತೆಗಳನ್ನು ಅಮ್ಮನೊಂದಿಗೆ ನಡೆಸುತ್ತಿದ್ದ. ಈ ಮಾತುಕತೆಗಳು ನನ್ನ ಎದುರಿನಲ್ಲಿಯೇ ನಡೆಯುತ್ತಿದ್ದುವು. ಈ ಸಮಯಗಳಲ್ಲಿ ಕೆಲವು ಸಲ ನನ್ನ ಬಗ್ಗೆಯೂ ಚರ್ಚಿಸುತ್ತಿದ್ದರು.

'ಮುಂದೆ ಏನಾಗಬಹುದು ಇವನು?' ಅಣ್ಣ ಮಾತಿನ ಚರ್ಚೆಗಿಳಿಯುತ್ತಿದ್ದ. 'ಮದುವೆ ಮಾಡಿಕೊಂಡು ಒಂದು ಅಂಗಡಿ ಇಟ್ಟುಕೊಳ್ಳಬಹುದು ಅಥವಾ ಯಾವು ದಾದರೂ ಒಂದು ಚೆದರ್‌ನಲ್ಲಿ ಮೇಷ್ಟ್ರು ಆಗಬಹುದೇನೋ? ಆದರೆ ಈಗಾಗಲೆ ಸಾಕಷ್ಟು ಅಂಗಡಿಗಳಿವೆ. ಬೇಕಾದಷ್ಟು ಜನ ಮೇಷ್ಟ್ರುಗಳೂ ಇದಾರೆ. ಕಿಟಕಿಯಿಂದ ಹೊರಗೆ ಕಣ್ಣು ಹಾಯಿಸಿ ನೋಡಮ್ಮ. ಯಹೂದಿಗಳು ಹೇಗೆ ಕಾಣತಿದಾರೆ ಅನ್ನೋ ದನ್ನ ನೀನೇ ನೋಡು - ಇವರ ಬೆನ್ನು ಆಗಲೇ ಗೂನು ಬಿದ್ದಿದೆ. ಹೃದಯಾನೂ ಕಳಕೊಂಡಿದಾರೆ, ಕೊಳಕಿನಲ್ಲಿ ಬದುಕತಿದಾರೆ. ನಡೆಯುವಾಗ ಹೇಗೆ ಕಾಲೆಳೆಯುತಿದಾರೆ ಅನ್ನೋದನ್ನ ನೀನೇ ಗಮನಿಸಿ ನೋಡು..... ಇವರು ಮಾತಾಡಿ ಕೊಳ್ಳತಿರೋದನ್ನೂ ಕೇಳಿಸಿಕೋ. ತಾವು ಎಲ್ಲಿಯೇ ಇದ್ದರೂ ತಾವೆಲ್ಲ ಏಷಿಯಾದವರೇ ಅಂತ ಯೋಚಿಸತಿ ರೋದು ಆಶ್ಚರ್ಯ ತರಿಸುತ್ತೆ. ಯೂರೋಪಿನೊಳಗೆ ನೆಲೆ ಏಲ್ನೋಕೆ ಇವರಿಗೆ ಇನ್ನೂ ಎಷ್ಟು ಕಾಲ ಬೇಕು ಅಂತ ಯಾವಾಗಲಾದರೂ ಯೋಚಿಸಿದೀಯಾ?'

'ಈಗಾಗಲೆ ಬೇರೆ ಎಲ್ಲ ಧರ್ಮದವರೂ ಯಹೂದಿಗಳನ್ನ ದ್ವೇಷಿಸತಿದಾರೆ' ಅಮ್ಮ ಹೇಳಿದಳು, 'ಯಹೂದಿ ಆಗಿರೋ ಯಾರಾದರೂ ಎತ್ತರದ ಹ್ಯಾಟ್ ಹಾಕಿ ಕೊಂಡರೆ ಈಗಲೂ ದ್ವೇಷಿಸತಾರೆ. ಯಾಕೆ ಅಂದರೆ ಇವನು ಸತ್ಯಕ್ಕಾಗಿ ನಿಂತಿರತಾನೆ.'

---

* 'ಇನ್ ಮೈ ಫಾದರ್ಸ್ ಕೋರ್ಟ್ಸ್' ನಿಂದ ಆಯ್ದ ಭಾಗ.

'ಯಾವುದು ಸತ್ಯ? ಸತ್ಯ ಏನು ಅಂತ ಯಾರಿಗಾದರೂ ಗೊತ್ತಿದೆಯೇನು ? ಪ್ರತಿಯೊಂದು ಧರ್ಮಕ್ಕೂ ಅವರವರ ಮಹಾಪುರುಷರಿದಾರೆ, ಧರ್ಮಗ್ರಂಥಗಳೂ ಇವೆ. ಬೌದ್ಧಧರ್ಮದ ಬಗ್ಗೆ ನೀನು ಕೇಳಿದಿಯೇನಮ್ಮ ? ಬುದ್ಧ ಮೋಸೆಸ್‌ರ ಹಾಗೇ ಇದ್ದವನು, ಇವನೂ ಪವಾಡಗಳನ್ನ ಮಾಡಿದಾನೆ.'

ಕೆಟ್ಟ ರುಚಿಯ ಪದಾರ್ಥವೊಂದು ತನ್ನ ಬಾಯಿಯೊಳಗೆ ಇರುವಂತೆ ಅಮ್ಮನ ಮುಖ ಬದಲಾಗಿತ್ತು. 'ವಿಗ್ರಹಾರಾಧನೆ ಮಾಡೋ ಅಂಥವರ ಜೊತೆಗೆಲ್ಲಾ ಮೊಸೆಸ್ ಅಂಥವರನ್ನ ಹೋಲಿಸೋಕೆ ಎಷ್ಟು ಧೈರ್ಯ ನಿನಗೆ? ನನಗೆ ದುಃಖವಾಗತಿದೆ! ನನ್ನ ಮೈ ಒಳಗಿನ ಚರ್ಮ, ರಕ್ತವೆಲ್ಲ ಹೇಳತಿದೆ....'

'ನಾನು ಹೇಳೋದನ್ನ ಕೇಳಮ್ಮ. ಬುದ್ಧ ವಿಗ್ರಹಾರಾಧಕನಲ್ಲ. ತುಂಬ ಗಂಭೀರವಾದ ಚಿಂತನಕಾರ. ಅವನು ನಮ್ಮ ಮಹಾಪುರುಷರನ್ನೂ ಒಪ್ಪಿಕೊಳ್ಳತಾನೆ. ಕನ್‌ಫ್ಯೂಷಿಯಸ್ ಹಾಗೆ.....'

'ಸಾಕು ನಿಲ್ಲಿಸು ! ನಮ್ಮ ಪ್ರವಾದಿಗಳ ಹಾಗೆಯೇ ಬೇರೆ ಧರ್ಮದವರೂ ಅಂತ ಹೀಗೆಲ್ಲ ಒಂದೇ ಉಸುರಿನಲ್ಲಿ ಮಾತಾಡಬೇಡ. ಬುದ್ಧ ಭಾರತದಿಂದ ಬಂದವನು. 'ಜಗತ್ತಿನ ದಾರಿಗಳು' ಓದಿ ನಾನೂ ತಿಳಕೊಂಡಿದೀನಿ. ಅಲ್ಲಿ ಅವರು ವಿಧವೆಯರನ್ನ ಸುಡತಾರೆ. ವಯಸ್ಸಾಗಿರೋರನ್ನ ಸಂತೋಷಕೂಟದೊಳಗೆ ಎಲ್ಲರ ಎದುರಿಗೇ ಕೊಲ್ಲತಾರೆ!'

'ಭಾರತ ಅಂದರೆ ನಿನಗೆ ತಿಳಿದಿರೋದು ಇದೇ ಏನು?'

'ಅಲ್ಲಿ ಇಂಥವರನ್ನ ಯಾರು ರಕ್ಷಿಸತಾರೆ? ಅವರೆಲ್ಲ ಪ್ರಾಣಿಗಳು. ಅವರಿಗೆ ಒಂದು ಹಸುವೂ ದೇವರು. ಆ ಕಡೆ ಚೀನಾದವರೂ ತಮಗೆ ಹೆಚ್ಚಾಗಿ ಇರೋ ಹೆಣ್ಣು ಮಕ್ಕಳನ್ನ ತಳ್ಳತಾರೆ. ಯಹೂದಿಗಳಾದ ನಾವೊಬ್ಬರೇ ಒಂದೇ ದೇವರಲ್ಲಿ ನಂಬಿಕೆ ಇಟ್ಟಿರೋರು. ಬೇರೆ ಎಲ್ಲರೂ ಮರಗಳು, ಹಾವುಗಳು, ಮೊಸಳೆಗಳು ಎಲ್ಲವನ್ನೂ ಆರಾಧಿಸತಾರೆ.... ನೀನೇ ಯೋಚನೆ ಮಾಡು. ಅವರೆಲ್ಲ ಕ್ರೂರಿಗಳು. "ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆ ಕೊಡು" ಅನ್ನೋ ಇವರೇ ಒಬ್ಬರನ್ನ ಮತ್ತೊಬ್ಬರು ಕೊಂದುಕೊಳ್ಳುತ ಪಾಪಕ್ಕೆ ಹೋಗತಿದಾರೆ. ಅಂಥವರ ಜೊತೆಗೆಲ್ಲ ನಮ್ಮನ್ನ ಹೋಲಿಸ ತೀಯಾ ನೀನು?'

'ನಮಗೆ ನಮ್ಮದೇ ಆದ ಒಂದು ದೇಶ ಇದ್ದರೆ ನಾವೂ ಯುದ್ಧ ಮಾಡೋಕೆ ಸೇರಿಕೊಳ್ಳತಿದ್ದೆವೇನೋ. ದಾವೂದ್ ರಾಜರು ಕರುಣೆ ಇರಿಸಿಕೊಂಡಿದ್ದ ಮಹಾನುಭಾವರಲ್ಲ....'

'ಶ್! ನೀನು ಏನು ಹೇಳತಿದೀಯ ಅನ್ನೋದನ್ನ ಗಮನದಲ್ಲಿ ಇಟ್ಟುಕೋ! ನಿನ್ನ ಮೇಲೆ ದೇವರ ದಯೆ ಇದೆ ! ನಮ್ಮ ಪ್ರವಾದಿಗಳನ್ನ ಹೀಗೆಲ್ಲ ಮಾತಿಗೆ ಎಳೆಯಬಾರದು. ದಾವೂದ್ ರಾಜರು ಮತ್ತು ಸಾಲೊಮನ್ ಇಬ್ಬರೂ ಪ್ರವಾದಿಗಳು. ದಾವೂದ್‌ರನ್ನ ಪಾಪ ಮಾಡಿದವರು ಅಂತ ತೀರ್ಮಾನಿಸೋದು ತಪ್ಪು ಅನ್ನುತ್ತೆ ತಾಲಮೂದ್....'

'ತಾಲಮೂದ್ ಏನು ಹೇಳುತ್ತೆ ಅನ್ನೋದು ನನಗೆ ಗೊತ್ತಿದೆ ಬಾತ್‌ಷೇಬ. ಆದರೆ...?' ಇದು ನನ್ನ ಅಮ್ಮನ ಹೆಸರು. ಪ್ರತಿಸಲವೂ ಬಾತ್‌ಷೇಬಳು ತೊಡಕಿನಲ್ಲಿ ಸಿಲುಕಿಕೊಳ್ಳುವುದು ನನಗೆ ಕಾಣುತ್ತಿತ್ತು. ಇವಳ ಮುಖ ಕೆಂಪಾಗಿರುತ್ತಿತ್ತು.

'ಶ್! ನೀನು ಕೆಟ್ಟ ಪುಸ್ತಕಗಳನ್ನ ಓದತೀಯ. ಅದನ್ನೆಲ್ಲ ಇಲ್ಲಿ ಹೇಳತೀಯ ! ದಾವೂದ್ ರಾಜರು ಎಲ್ಲ ಕಾಲಕ್ಕೂ ಉಳಕೊಳ್ಳತಾರೆ. ಆಮೇಲೆ, ಪೇಪರ್‌ನಲ್ಲಿ ಪ್ರಿಂಟ್ ಆಗಿರೋ ಪುಸ್ತಕಗಳೆಲ್ಲ ಯೋಗ್ಯವಾದವಲ್ಲ. ಅವನ್ನ ಬರೆದಿರೋರು ಯಾರು ? ಲೋಫರ್‌ಗಳು !'

ಇಂಥ ಚರ್ಚೆಗಳು ನನ್ನನ್ನು ಗೊಂದಲಗೊಳಿಸುತ್ತಿದ್ದವು. ಈ ವಿಷಯಗಳನ್ನು ನಾನು ಆ ಸಮಯಗಳಲ್ಲಿಯೇ ಅಮ್ಮನೊಂದಿಗೆ ಚರ್ಚಿಸುತ್ತಿದ್ದೆ. ದೊಡ್ಡವನಾದ ಮೇಲೆ ನಾನು ಅಂಗಡಿ ಇರಿಸಿಕೊಳ್ಳೋದಿಲ್ಲ. ತಾಲಮೂದ್ ಹೇಳಿಕೊಡುವ ಪಂಡಿತನೂ ಆಗೋದಿಲ್ಲ. ಅಣ್ಣ ಹೇಳುವಂತೆ ಚೆನ್ನಾಗಿಲ್ಲದ ಹೆಂಗಸನ್ನೂ ಮದುವೆ ಆಗೋದಿಲ್ಲ. ಏಳೆಂಟು ಮಕ್ಕಳನ್ನೂ ಪಡೆಯೋದಿಲ್ಲ. ಇವೆಲ್ಲ ನನಗೆ ಒಗ್ಗುವಂಥವಲ್ಲ ಎನ್ನುತ್ತಿದ್ದೆ.

ಒಂದು ಸಲ ನನ್ನ ಅಣ್ಣ ಹೇಳಿದ : 'ಇವನು ಒಳ್ಳೆ ಕಾರ್ಮಿಕನಾಗತಾನೆ.'

'ದೇವರ ದಯದಿಂದ ಇವನು ರಬಾಯಿಯಾಗತಾನೆ, ಕಾರ್ಮಿಕನಾಗೋಲ್ಲ. ಇವನ ಅಜ್ಜನಾದ ಮೇಲೆ ಇವನೇ ರಬಾಯಿ.' ಅಮ್ಮ ಹೇಳಿದಳು.

'ರಬಾಯಿ ? ಎಲ್ಲಿಗೆ ? ಈಗಾಗಲೇ ಎಲ್ಲ ಕಡೆಗಳಲ್ಲೂ ರಬಾಯಿಗಳಿದಾರೆ. ಇನ್ನೂ ಹೆಚ್ಚು ರಬಾಯಿಗಳು ಯಾಕೆ ಬೇಕು?'

'ಹಾಗಿದ್ದರೆ ಹೆಚ್ಚಿಗೆ ಕಾರ್ಮಿಕರು ಯಾಕೆ ಬೇಕು ? ಒಬ್ಬ ರಬಾಯಿಯಾದರೆ ಇವನು ಎಷ್ಟೇ ಬಡವನಾಗಿದ್ದರೂ ಷೂಗಳನ್ನ ಮಾಡೋನಿಗಿಂತಲೂ ಚೆನ್ನಾಗಿ ಇರತಾನೆ.'

'ಕಾರ್ಮಿಕರೆಲ್ಲ ಒಟ್ಟಾಗೋತನಕ ತಡಕೊಳ್ಳಮ್ಮ.'

'ಅವರು ಯಾವ ಕಾಲಕ್ಕೂ ಒಗ್ಗಟ್ಟಾಗೋಲ್ಲ. ಪ್ರತಿಯೊಬ್ಬ ಕಾರ್ಮಿಕನೂ ಇನ್ನೊಬ್ಬನ ಬ್ರೆಡ್ಡನ್ನ ಕದಿಯೋದಕ್ಕೇ ಪ್ರಯತ್ನಿಸತಾನೆ. ಸೈನಿಕರೆಲ್ಲ ಯಾಕೆ ಒಟ್ಟಾಗ ಬಾರದು? ಒಗ್ಗಟ್ಟಾಗಿ ನಿಂತು ಯುದ್ಧಕ್ಕೆ ಹೋಗೋಕೆ ಆಗೋಲ್ಲ ಅಂತ ಹೇಳ ಬಾರದು?

'ಓಹ್, ಅಂಥ ಕಾಲವೂ ಬರುತ್ತೆ!'

'ಯಾವಾಗ ? ಈಗಾಗಲೇ ಸಾಕಷ್ಟು ಜನರನ್ನ ಸುಮ್ಮಸುಮ್ಮನೇ ಕೊಂದಿದಾರೆ. ಪ್ರತಿ ಸೋಮವಾರ, ಗುರುವಾರ ಇಲ್ಲಿ ತುರ್ಕಿಗಳ ಹಾರಾಟ. ಪ್ರಪಂಚದ ತುಂಬ ಬರಿಯ ಕೆಟ್ಟದೇ ತುಂಬಿಕೊಂಡಿದೆ. ಅದಕ್ಕೇ ಹೀಗೆಲ್ಲ ಆಗತಿರೋದು. ನಾವು ಯಾವ ಕಾಲಕ್ಕೂ ಇಲ್ಲಿ ನೆಮ್ಮದಿಯಿಂದ ಇರೋಕೆ ಆಗೋಲ್ಲ. ನಾವು ಶಾಂತಿಯಿಂದ ಇರೋದಾದರೆ ಅದು ಬೇರೆ ಜಗತ್ತಿನಲ್ಲಿ....'

'ನೀನೊಬ್ಬಳು ವಿಧಿವಾದಿ ಅಮ್ಮ.'

'ಸ್ವಲ್ಪ ತಡಿ, ನನ್ನ ಸೂಪ್ ಸೀದು ಹೋಗತಿದೆ.'

ಎರಡು ಕಡೆಗಳಲ್ಲಿಯೂ ತುಂಬ ಪರಿಣಾಮಕಾರಿಯಾದ ವಿಚಾರಗಳು ಇರುತ್ತಿದ್ದ ಇಂಥ ವಾದ ವಿವಾದದ ಮಾತುಕತೆಗಳನ್ನು ನಾನು ಹೇಗೆ ಕೇಳುತ್ತಿದ್ದೆ! ಯಾವಾಗ ಇದು ಜಗಳದಂತೆ ಮಾರ್ಪಟ್ಟು ತೀರ ಸುಲಭವಾಗಿ ಧರ್ಮಗ್ರಂಥಗಳ ವಾಕ್ಯಗಳನ್ನೆಲ್ಲ ಉಲ್ಲೇಖಿಸಲು ಆರಂಭವಾಗುತ್ತಿತ್ತೋ ಆಗ ನನ್ನ ಅಭಿಪ್ರಾಯಗಳನ್ನು ಮೌನವಾಗಿ ನನ್ನಲ್ಲಿಯೇ ಇರಿಸಿಕೊಳ್ಳುತ್ತಿದ್ದೆ. ಪರಧರ್ಮಿಗಳು ವಿಗ್ರಹಾರಾಧಕರು, ನಿಜ. ಆದರೆ ದಾವೂದ್ ರಾಜರು ಖಂಡಿತವಾಗಿಯೂ ಪಾಪವನ್ನುಗೈದಿದ್ದರು ಮತ್ತು

ತಮ್ಮದೇ ಆದ ದೇಶವೊಂದನ್ನು ಹೊಂದಿದ್ದರೆ ಯಹೂದಿಗಳು ಕೂಡ ಕೊಲೆಗೈಯುತ್ತಿದ್ದರು. ಪ್ರತಿಯೊಂದು ಧರ್ಮವೂ ತನ್ನದೇ ಆದ ಪ್ರವಾದಿಗಳನ್ನು ಹೊಂದಿರುತ್ತದೆ ಎನ್ನುವುದು ನಿಜ. ಆದರೆ ದೇವರ ಜೊತೆ ಯಾರು ಮಾತಾಡುತ್ತಾರೆ ಎನ್ನುವುದನ್ನು ಯಾರು ಹೇಳುತ್ತಾರೆ ? ಇಂಥ ಪ್ರಶ್ನೆಗಳಿಗೆಲ್ಲ ಅಮ್ಮ ಉತ್ತರವನ್ನೇ ಕೊಡುತ್ತಿರಲಿಲ್ಲ.

'ನೀನು ಮೇಲಿನ ಲೋಕಕ್ಕೆ ಯಾವ ರೀತಿ ದೂರು ಕೊಡತೀಯ ಅಮ್ಮ ?' ನನ್ನ ಅಣ್ಣ ಕೇಳುತ್ತಿದ್ದ. 'ಹಿತ್ತಾಳೆ ಅಥವಾ ತಾಮ್ರದ ತಗಡುಗಳನ್ನೇ ಪತ್ರ ಮಾಡಿ ಇವನ್ನೆಲ್ಲ ಕೊರೆಸಿ ದೂರು ಕೊಡತಿಯೇನು?'

'..........'

'ಅಥವಾ ಒಬ್ಬ ಗಡಿಯಾರ ಮಾಡೋನಿಂದ.'

'ಭಾರಿ ಒರಟ.'

'ಇಂಥದನ್ನೆಲ್ಲ ನೀನು ತಿಳಕೊಳ್ಳಬೇಕಮ್ಮ. ಡಾಕ್ಟರಾದರೆ ಹೇಗೆ?'

'ಹೋಗಲಿ ಬಿಡು. ಡಾಕ್ಟರ್‌ಗಳಿಗೆ ಏನೇನು ತಿಳಿದಿದೆ? ಅವರು ಏನೂ ಕಾಯಿಲೆ ಇಲ್ಲದ್ದಕ್ಕೂ ಹಣ ತಗೊಳ್ಳತಾರೆ. ಜ್ಯೂಗಳು ಯಾವಾಗಲೂ ಜ್ಯೂಗಳೇ. ಇವರು ಯಾವಾಗಲೂ ರಬ್ಬಾಯಿಗಳನ್ನ ಬಯಸುತಾರೆ.'

'ಜರ್ಮನೀಲಿ ರಬ್ಬಾಯಿಗಳು ಯೂನಿವರ್ಸಿಟಿಗಳಲ್ಲೆಲ್ಲ ಹಾಜರಾಗತಿದಾರೆ' ನನ್ನಣ್ಣ ಹೆಮ್ಮೆಯಿಂದ ಹೇಳಿದ.

'ಬದಲಾಗತಿರೋ ಆ ರಬ್ಬಾಯಿಗಳು ನನಗೂ ಗೊತ್ತು.' ಅಮ್ಮ ಹೇಳಿದಳು. 'ಹಾಲಿನ ಜೊತೆ ಮಾಂಸ ತಿನ್ನೋದಕ್ಕೂ ಅವರು ಒಪ್ಪಿಗೆ ಕೊಡತಾರೆ. ಆದರೆ ಶೇವ್ ಮಾಡಿಕೊಳ್ಳತಿರೋದನ್ನ ಹೇಗೆ ಸಾಬೀತು ಮಾಡತಾರೆ ಅವರು ? ಮೋಸೆಸ್‌ರು ಮಾಡಿರೋ ನಿಯಮದ ಜೊತೆ ಇದು ಹೇಗೆ ಹೊಂದುತ್ತೆ? ತೋರಾನ್ನ ಹಗುರವಾಗಿ ನೋಡೋನು ಎಂಥ ರಬ್ಬಾಯಿ?'

'ಅವರು ಶೇವಿಂಗ್‌ಗೆ ಒಂದು ಥರದ ಪೌಡರ್ ಬಳಸತಾರೆ ಅಮ್ಮ, ರೇಜರ್‌ನಲ್ಲ.'

'ಗಡ್ಡ ಇದ್ದರೆ ಅವರಿಗೆ ಅವಮಾನವೇನೋ. ಯಾಕೆ ಅಂದರೆ ಅವರೂ ಬೇರೆ ಧರ್ಮದವರ ಹಾಗೆ ಇರಬೇಕಲ್ಲವೇ ? ಈ ರಬಾಯಿಗಳೇ ಹೀಗಾದರೆ ಉಳಿದವರು ಹೇಗೆ ಇರಬಹುದು ಅಂತ ಯೋಚಿಸತಿದೀನಿ ನಾನು.'

ಥಟ್ಟನೆ ಓದುವ ಕೋಣೆಯಿಂದ ತಂದೆಯವರು ಬರುತ್ತಿದ್ದರು. 'ಈ ಮಾತು ಕತೇನ ಎಲ್ಲರೂ ಇಷ್ಟಕ್ಕೇ ಕೊನೆ ಮಾಡಿರಿ' ಅವರು ಹೇಳುತ್ತಿದ್ದರು. 'ನಾನು ಕೇಳೋ ದಕ್ಕೆ ಉತ್ತರ ಹೇಳಿ, ಜಗತ್ತನ್ನ ಯಾರು ಸೃಷ್ಟಿಸಿದರು ? ದೇಹವನ್ನ ಎಲ್ಲರೂ ನೋಡ ತಾರೆ. ಅದರಿಂದಲೇ ಇದೆಲ್ಲ ಇದೆ ಅಂತ ಯೋಚಿಸತಾರೆ. ದೇಹ ಒಂದು ಉಪಕರಣವೇ ಹೊರತು ಬೇರೆ ಏನೂ ಅಲ್ಲ. ಆತ್ಮ ಇಲ್ಲದಿದ್ದರೆ ದೇಹ ಒಂದು ಮರದ ತುಂಡಿದ್ದ ಹಾಗೆ. ತಮ್ಮ ಆತ್ಮವನ್ನ ಯಾರು ಪೂರ್ತಿ ನುಂಗಿ ಬಿಟ್ಟಿರತಾರೋ ಅವರು ಕೆಟ್ಟತನ ಗಳಲ್ಲಿ ಮರುಳುಗಾಡಿನೊಳಗೆ ಇರೋರ ಹಾಗೆ ಅಲೆಯತಾರೆ. ಇಂಥವರನ್ನ ದೆವ್ವ, ಭೂತಗಳೂ ಪೀಡಿಸತವೆ. ಇವರು ಸತ್ಯವನ್ನ ಕೊನೇಲಿ ಕಂಡುಕೊಳ್ಳತಾರೆ. ಇಂಥವರಿಗೆ ಗೆಹೆನ್ನಾವೂ ಮುಚ್ಚಿಕೊಂಡಿರುತ್ತೆ. ಜಗತ್ತಿನ ತುಂಬ ಸುತ್ತಿ ಹೊರಳತಿರೋ ಬರಿಯ ಆತ್ಮಗಳೇ ಇವೆ.... "ತಂದೆಯವರು ಜೋರಾಗಿ ಹೇಳುತ್ತಿದ್ದರು 'ಯಾವಾಗ ಆತ್ಮ ದೇಹವನ್ನ ಶುದ್ಧಿ ಮಾಡದೆ ಹೊರಗೆ ಬರುತ್ತೋ ಆಗ ಇದು ಮತ್ತೆ ಭೂಮಿಗೆ ಅಲೆ ಯೋಕೆ ಬರುತ್ತೆ, ಕ್ರಿಮಿ-ಕೀಟಗಳಾಗಿ. ಇದರ ದುಃಖವಂತೂ ಹೇಳೋಕೆ ಅಸಾಧ್ಯ ವಾದದ್ದು.....'

'ಹಾಗಿದ್ದರೆ ನೀವು ಹೇಳತಿರೋ ಮಾತಿನ ಪ್ರಕಾರ ದೇವರು ದುಷ್ಟ ಅಪ್ಪ.'

'ಇಸ್ರೈಲಿನ ಶತ್ರು ! ದೇವರು ಮನುಷ್ಯನನ್ನ ಪ್ರೀತಿಸತಾನೆ. ಮನುಷ್ಯ ಯಾವಾಗ ಕೊಳಕು ಮಾಡಿಕೊಂಡಿರತಾನೋ ಅದನ್ನ ಅವನು ತೊಳೆಯತಾನೆ.'

'ಬೇರೆಯವರು ತೋರಾನ ತಿಳಕೊಂಡಿದ್ದರೆ ನೀವು ಏನನ್ನ ಅಪೇಕ್ಷಿಸತೀರಿ?'

'ಬೇರೆಯವರು ಅಂದರೆ ಯಾರು ನಿನಗೆ ? ಬೇರೆ ಧರ್ಮಗಳವರು ಹಕ್ಕಿ ಅಥವಾ ಮೀನುಗಳಾಗಿ ಹೋಗಬಹುದೇನೋ. ನಾನು ಯಾವಾಗ ಧರ್ಮಗ್ರಂಥವನ್ನ ತೆರೆಯತೀನೋ ಆಗ, ಕೆಲವು ಸಲ ಒಂದು ಸಣ್ಣ ಅಣು ಚಲಿಸತಿರೋದನ್ನ ಕಾಣತೀನಿ. ಇದೂ ಸಹ ದೇವರ ಆಶ್ಚರ್ಯವೇ. ಜಗತ್ತಿನಲ್ಲಿ ಇರೋ ಎಲ್ಲ ಪ್ರೊಫೆಸರ್‌ಗಳೂ ಒಟ್ಟಿಗೆ ಸೇರಿ ಒಂದು ಅಣು ಸೃಷ್ಟಿಸೋಕೆ ಸಾಧ್ಯವಾಗುತ್ತಾ ?

'ಒಳ್ಳೆಯದು. ಇದೆಲ್ಲ ಎಲ್ಲಿಗೆ ಹೋಗಿ ಕೂಡಿಕೊಳ್ಳುತ್ತೆ?'

ತಂದೆಯವರು ಹೋದ ನಂತರ, ಅಮ್ಮ ಏನನ್ನಾದರೂ ಕೊಳ್ಳಲು ಹೋದ ಮೇಲೆ ನಾನು ಅಣ್ಣನನ್ನು ಕೇಳುತ್ತಿದ್ದೆ. 'ಅಣುವನ್ನ ಯಾರು ಸೃಷ್ಟಿಸತಾರೆ/'

'ಪ್ರಕೃತಿ'.

'ಪ್ರಕೃತಿಯನ್ನ ಯಾರು ಸೃಷ್ಟಿಸಿದಾರೆ?'

'ದೇವರನ್ನ ಯಾರು ಸೃಷ್ಟಿಸಿದಾರೆ?' ನನ್ನ ಅಣ್ಣ ಮರುಪ್ರಶ್ನೆ ಹಾಕುತ್ತಿದ್ದ. 'ಕೆಲವೊಂದು ತಮಗೆ ತಾವೇ ಬರುತ್ವೆ. ಆಮೇಲೆ ಇವು ತಮ್ಮ ನಿಜವಾದ ಸ್ವರೂಪ ವನ್ನ ತಾವೇ ರೂಪಿಸಿಕೊಳ್ಳುತ್ವೆ. ಸೂರ್ಯನ ಶಕ್ತಿಯಿಂದ ಮೊದಲ ಬೆಕ್ಟೀರಿಯ ಸಮುದ್ರದ ಅಂಚಿನಲ್ಲಿ ಸೃಷ್ಟಿಯಾಯಿತು. ವಿದ್ಯಮಾನಗಳು ಅನುಕೂಲಕರವಾಗಿ ಕೂಡಿ ಕೊಳ್ಳುತ್ವೆ. ಸೃಷ್ಟಿಕ್ರಿಯೆಗಳು ತಮಗೆ ತಾವೇ ಹೋರಾಡುತ್ವೆ. ಬಲವಾಗಿ ಇರೋವು ಉಳಿದುಕೊಳ್ಳುತ್ವೆ. ಬೆಕ್ಟೀರಿಯಾಗಳು ಭಾಗಗಳಾಗಿ ಒಡೆಯುತ್ತಾ ಕ್ರಿಯೆಯನ್ನ ಆರಂಭಿಸುತ್ವೆ.'

'ಆದರೆ ಇದೆಲ್ಲ ಮೊದಲು ಎಲ್ಲಿಂದ ಯಾವ ಸ್ಥಳದಿಂದ ಬರುತ್ತೆ ?'

'ಇದೆಲ್ಲ ಹೇಗಿದೆ ಅಂದರೆ, ಯಾರಿಗೂ ತಿಳಿದಿಲ್ಲ. ಆದರೆ ಒಂದು ವಿಷಯದಲ್ಲಿ ಮಾತ್ರ ನೀನು ಖಚಿತವಾಗಿ ಇರಬಹುದು - ರಬಾಯಿ ತಾಮ್‌ನ ಯಂತ್ರಗಳನ್ನ ಯಾರು ಕಟ್ಟಿಕೊಳ್ಳೋಕೆ ಬಯಸೋಲ್ಲವೋ ಹಾಗೆ ಇದೆಲ್ಲ ಕಲ್ಪಿಸಿಕೊಳ್ಳೋ ಅಂಥದು. ಪ್ರತಿಯೊಬ್ಬ ಮನುಷ್ಯನಿಗೂ ಅವನದೇ ಆದ ವಿಧಾನವಿರುತ್ತೆ. ಉದಾಹರಣೆಗೆ ಯಾರಾದರೊಬ್ಬರು ನೀನು ಸಬ್ಬತ್ ದಿನ ಮಂಜಿನ ಮೇಲೆ ಮೂತ್ರ ಮಾಡಬೇಡ ಅನ್ನೋ ಹಾಗೆ. ಯಾಕೆ ಅಂದರೆ ಅದು ಉರುಳಿ ಹೋಗೋದಿಲ್ಲ.'

ಹೀಗಿದ್ದರೂ ಆನಂತರ ನನ್ನ ಜೀವನದಲ್ಲಿ ನಾನು ದೊಡ್ಡ ಪ್ರಮಾಣದಲ್ಲಿ ತತ್ವಶಾಸ್ತ್ರವನ್ನು ಓದಿದೆ. ಆ ನಮ್ಮ ಅಡುಗೆ ಕೋಣೆಯಲ್ಲಿ ನಡೆಯುತ್ತಿದ್ದ ವಾಗ್ವಾದ ದಂಥದನ್ನು ಮಾತ್ರ ನಾನು ಮತ್ತೆ ಕಾಣಲಾಗಲಿಲ್ಲ. ಮನೆಯಲ್ಲಿ ನಾನು ಆತ್ಮಾನು ಭೂತಿಯಂಥ ದೊಡ್ಡ ವಿಷಯಗಳ ಕುರಿತೂ ಕೇಳುತ್ತಿದ್ದೆ. ಇಂಥ ಮಾತುಕತೆಗಳ ನಂತರ ಆಟವಾಡಲೆಂದು ಹೊರಗೆ ಹೋಗುತ್ತಿದ್ದೆ. ಆದರೆ ಆಟಕ್ಕೆ ಹೋಗಿ ನಿಂತು

ಕಳ್ಳ-ಪೊಲೀಸ್, ಕಣ್ಣಾಮುಚ್ಚಾಲೆಯಂಥವುಗಳಲ್ಲಿ ಮುಳುಗಿದರೂ ನನ್ನ ಕಲ್ಪನೆ ಕೆಲಸ ಮಾಡಲು ಆರಂಭಿಸಿರುತ್ತಿತ್ತು.

ಒಂದು ರೀತಿಯ ಮಂತ್ರಜಲವನ್ನು ನಾನು ಹುಡುಕಿ ಪಡೆದುಕೊಂಡು ಇದು ಯಾರನ್ನಾದರೂ ಒಳ್ಳೆಯವನನ್ನಾಗಿ ಮಾಡುವಂತೆಯೇ ಎಲ್ಲ ರಹಸ್ಯಗಳನ್ನೂ ಒಡೆಯುವಂತಿದ್ದರೆ ಅಥವಾ ಪ್ರವಾದಿ ಎಲೀಜ ನನ್ನ ಬಳಿ ಬಂದು ಜಗತ್ತಿನ ಏಳು ಸತ್ಯಗಳನ್ನು ಉಪದೇಶಿಸಿದರೆ ? ಅಥವಾ ಸ್ವರ್ಗವನ್ನೇ ನೇರವಾಗಿ ನೋಡುವಂಥಹ ದುರ್ಬೀನೊಂದನ್ನು ನಾನು ಪಡೆದುಕೊಂಡರೆ ? ನನ್ನ ಯೋಚನೆಗಳು ಬೇರೆ ಹುಡುಗರ ಯೋಚನೆಗಳಂತಿರದೆ ನನ್ನನ್ನ ಒಂದು ರೀತಿಯ ಹೆಮ್ಮೆಯಲ್ಲಿ ಒಂಟಿಯನ್ನಾಗಿಸುತ್ತಿದ್ದವು. ಆದರೂ ಕೊನೆಯಲ್ಲಿ ಒಂದು ಪ್ರಶ್ನೆ ಉಳಿದೇ ಇರುತ್ತಿತ್ತು : ಯಾವುದು ಸರಿ ? ನಾನು ಏನನ್ನು ಮಾಡಬೇಕು ? ದೇವರು ಏಳನೇ ಸ್ವರ್ಗದಲ್ಲಿ ಸಂಪೂರ್ಣ ಮೌನದಲ್ಲಿ ಸುಮ್ಮನಿದ್ದಾನೇಕೆ ? ಒಂದು ಸಲ ಒಬ್ಬಾತ ನನ್ನ ಬಳಿ ಬಂದು ಕೇಳಿದ, 'ಏನು ವಿಷಯ? ಯಾಕೆ ಅತಿಯಾಗಿ ಯೋಚಿಸತಿದೀಯ ? ಆಕಾಶ ನಿನ್ನ ಮೇಲೆ ಬೀಳುತ್ತೆ ಅಂತ ಹೆದರಿದೀಯೇನು ?'

●

ಅನುಬಂಧ - ೧

ಹತ್ತು ನಿಯಾಮಕ ಸೂತ್ರಗಳು
(TEN COMMANDMENTS)

★ ನಿಮ್ಮನ್ನು ಈಜಿಪ್ಟ್ ನೆಲದ ಗುಲಾಮತ್ವದಿಂದ ಹೊರತಂದಿರುವ, ನಿಮ್ಮ ಒಡೆಯನೂ ದೇವರೂ ಆಗಿರುವ ನನ್ನ ಹೊರತು ನಿಮಗೆ ಬೇರೆ ದೇವರುಗಳಿಲ್ಲ.

★ ಮೇಲಿನ ಸ್ವರ್ಗದಲ್ಲಾಗಲೀ ಅಥವಾ ಭೂಮಿಯ ಮೇಲಾಗಲೀ ಅಥವಾ ನೀರಿನಲ್ಲಾಗಲೀ ನೀವು ನಿಮ್ಮಲ್ಲಿ ಯಾವ ಕಾಲ್ಪನಿಕ ಆಕಾರಗಳನ್ನೂ ಸೃಷ್ಟಿಸಿ ಕೊಳ್ಳಬೇಡಿ.

★ ನಿಮ್ಮ ಒಡೆಯನನ್ನು ಕೆಡುಕಿನ ದೈವವಾಗಿಸಿ ಮೊರೆಯಿಡಬೇಡಿ.

★ ಸಬ್ಬತ್‌ನ ಪವಿತ್ರ ದಿನದಂದು ಎಚ್ಚರದಿಂದಿರಿ... ಆರು ದಿನಗಳೂ ನೀವು ನಿಮ್ಮ ಕೆಲಸಗಳನ್ನು ಮಾಡಿರಿ. ಆದರೆ ಏಳನೆಯ ದಿನ... ನೀವು ಯಾವ ಕೆಲಸವನ್ನೂ ಮಾಡದಿರಿ... ನೀವಾಗಲೀ, ನಿಮ್ಮ ಮಗನಾಗಲೀ, ನಿಮ್ಮ ಮಗಳಾಗಲೀ, ಆಳುಗಳಾಗಲೀ, ನಿಮ್ಮ ಎತ್ತು, ಕತ್ತೆಯಾಗಲೀ, ನಿಮ್ಮ ಗಾಡಿಯಾಗಲೀ ನಿಮ್ಮ ಪಂಗಡದಲ್ಲಿ ಕೆಲಸ ಮಾಡುವ ಯಾರೇ ಆಗಲೀ ಏನನ್ನೂ ಮಾಡಬಾರದು.

★ ನಿಮ್ಮ ತಂದೆ ಮತ್ತು ತಾಯಿಯರಲ್ಲಿ ಗೌರವವಿಡಿ... ನೀವು ಬಹುಕಾಲ ಸಾರ್ಥಕವಾಗಿ ಬಾಳುತ್ತೀರಿ.

★ ನೀವು ಕೊಲೆ ಮಾಡದಿರಿ.

★ ನೀವು ವ್ಯಭಿಚಾರಿಯಾಗದಿರಿ.

★ ನೀವು ಕಳವು ಮಾಡದಿರಿ.

★ ನೀವು ನಿಮ್ಮ ನೆರೆಯವರೊಂದಿಗೆ ಸುಳ್ಳು ಹೇಳದಿರಿ.

★ ನೀವು ನಿಮ್ಮ ನೆರೆಯವನ ಹೆಂಡತಿಯನ್ನು ಮೋಹಿಸದಿರಿ. ನೆರೆಯವನ ಮೇಲೆ ದುರಾಸೆ ಮಾಡದಿರಿ. ಅವನ ನೆಲ, ಆಳುಕಾಳುಗಳು, ಅವನ ಎತ್ತು ಕತ್ತೆ ಅಥವಾ ನೆರೆಯವನ ಎಲ್ಲವೂ ನೆರೆಯದಾಗಿರಲಿ.

ಅನುಬಂಧ - ೨

ಪಾರಿಭಾಷಿಕ ಪದಗಳು

ತಾಲಮೂದ್ : ಯಹೂದಿ ಧರ್ಮ ಪ್ರತಿಪಾದನೆಯ ನಿಯಮಗಳನ್ನುಳ್ಳ ಗ್ರಂಥ. ತೋರಾದಿಂದಲೇ ಬೆಳೆದುಕೊಂಡರೂ ನಂತರದಲ್ಲಿ ಜನಾಂಗದ ಹಲವರ ಆಲೋಚನೆಗಳನ್ನೆಲ್ಲ ಒಳಗೊಂಡಂಥದ್ದು. ಯಹೂದಿಯರಲ್ಲಿ ಪವಿತ್ರ ಭಾವನೆ ಮೂಡಿಸುವ ಪರಂಪರಾಗತ ನಂಬಿಕೆಯ ನೆಲೆಯಲ್ಲಿ ಹರಿದು ಬರುತ್ತಿರುವಂಥಹುದು.

ತೋರಾ : ಹತ್ತು ಮುಖ್ಯ ನಿಯಮಗಳ ಮೂಲಕವೇ ಬೆಳೆದ, ಧಾರ್ಮಿಕ ಸ್ವರೂಪ ಕ್ಕೊಳಪಟ್ಟು ಪ್ರಾಚೀನ ನಿಯಮಗಳ ಚೌಕಟ್ಟನ್ನುಳ್ಳ ನಿಯಮಗಳು.

ಯೋಮ್ ಕಿಪ್ಪರ್ : ಹೀಬ್ರೂ ಕ್ಯಾಲೆಂಡರ್‌ನಂತೆ ಬರುವ ದೀರ್ಘರಜೆಯ ದಿನಗಳ ಕಾಲ. ಹೊಸವರುಷದ ಆರಂಭಕ್ಕೆ ಮುನ್ನ ತಮ್ಮ ಎಲ್ಲ ಕೆಡುಕಿನ ಕಾರ್ಯ ಗಳನ್ನು ಕಳೆದುಕೊಳ್ಳುವ ಸಂಕೇತವಾಗಿಯೂ ಈ ದಿನಗಳು ಉರುಳುತ್ತವೆ.

ಯಶೀವಾ : ಯಹೂದಿ ಧರ್ಮವನ್ನು ಅಧ್ಯಯನ ಮಾಡುವ ಶಾಲೆ. ಬಾಲ್ಯದಿಂದ ತಾರುಣ್ಯಕ್ಕೆ ಅಡಿಯಿಡುತ್ತಿರುವ ಸಮಯದಲ್ಲಿ ಯಶೀವಾಗಳಲ್ಲಿ ಹರೆಯದ ಯಹೂದಿಗಳು ಅಧ್ಯಯನವನ್ನು ಕೈಗೊಳ್ಳುತ್ತಾರೆ.

ರಬಾಯಿ : ಯಹೂದಿಗಳಲ್ಲಿನ ಧರ್ಮಗುರು. ಕ್ರೈಸ್ತರಲ್ಲಿನ ಪಾದ್ರಿಯಂತೆ ತೋರಿ ಕೊಂಡರೂ, ಈತನ ಮನೆಯೇ ಯಹೂದಿಗಳಿಗೆ ಹಲವು ವಿಷಯಗಳಿಗೆ ಮುಖ್ಯ ವಾಗಿರುತ್ತದೆ. ರಬಾಯಿಯ ಸಲಹೆ, ಮಾರ್ಗದರ್ಶನಗಳಿಲ್ಲದೆ ಯಹೂದಿಗಳು ತಮ್ಮಲ್ಲಿ ಯಾವ ಕಾರ್ಯಗಳನ್ನೂ ಮಾಡುವುದಿಲ್ಲ.

ಸಬ್ಬತ್ : ವಾರದ ಕೊನೆಯದಿನ, ಶನಿವಾರ. ಅಂದು ಯಹೂದಿಗಳಿಗೆ ಬಿಡುವಿನ ದಿನ. ವಿಶೇಷ ಅಡಿಗೆ ಮಾಡಿ ಪ್ರಾರ್ಥನೆ ಮಾಡುತ್ತಾರೆ.

ಸಿನಾಗ್ : ಯಹೂದಿಗಳ ದೇವಾಲಯ. ಸಾಮೂಹಿಕ ಪ್ರಾರ್ಥನೆ,ಉಪನ್ಯಾಸ ಮತ್ತಿತರ ಕಾರ್ಯಗಳು ಇಲ್ಲಿಯೇ ನಡೆಯುತ್ತವೆ.

ಸ್ತೆತಲ್ : ಯಹೂದಿಗಳು ವಾಸವಿರುವ ಊರು. ಇವನ್ನು ಬಿಲ್ಗೊರೇರೆ ಎಂದೂ ಕರೆಯಲಾಗುತ್ತದೆ.

ಕಬಾಲಾ : ಯಹೂದಿಗಳಲ್ಲಿನ ಆಧ್ಯಾತ್ಮಿಕ ದರ್ಶನದಲ್ಲಿನ ಉನ್ನತಾವಸ್ಥೆಯ ಒಂದು ಅಪೂರ್ವ ಮಾರ್ಗ.

ರೆಬ್ : ಯಹೂದಿಗಳಲ್ಲಿನ ಗೌರವ ಸೂಚಕ ಪದ. ಶ್ರೀ, ಸರ್ ಎಂಬಂತೆ.

ಹ್ಯಾಸ್ಡಿಕ್, ಚೆದರ್ : ಶಾಲೆಗಳಿಗೆ ಕರೆಯುವಂಥವು.

ಕಡ್ಡಿಷ್, ಕ್ರಸವೆತ್ಸ್ : ತಮ್ಮ ಬಂಧುಗಳು, ಪರಿಚಯದವರು, ಆತ್ಮೀಯರುಗಳನ್ನು ಗುಣಗಾನ ಮಾಡುವುದು.

ಬಗೇಲ್ : ಬೇಕರಿಯಲ್ಲಿ ಮಾರುವ ಒಂದು ತಿನಿಸು.

ಕಷಾ : ಒಂದು ತಿನಿಸು.

ಪುಷ್ಕ : ಯಹೂದಿಗಳಲ್ಲಿನ ಒಂದು ಹಬ್ಬ.

ಗೆಹನ್ನಾ : ರೌರವ ನರಕ.

ಗ್ರಂಥ ಋಣ

ಐಸಾಕ್ ಭಾಷೆವಿಸ್ ಸಿಂಗರ್‌ನ ಕೃತಿಗಳು

The Collected Stories 'Farrar - Straus', Giroux New York, Seventh Printing 1988

A Crown of Feathers and Other Stories, Penguin 1980

Passions and Other Stories, Penguin 1979

Short Friday and Other Stories, Penguin 1979

A Friend of Kafka, Penguin 1979

The Seance and Other Stories, Penguin 1979

The Spinoza of Market Street, Penguin 1979

Gimpel the Fool and Other Stories, Penguin 1979

The Image and Other Stories, Penguin 1989

The Magician of Lublin, Penguin 1980

The Manor, Penguin 1975

The Estate, Penguin 1977

Enemies - A Love Story, Fawcett, Penguin 1973

Satan in Gory, Penguin 1981

Shosha, Penguin 1979

The Penitent

In my Father's Court - Penguin 1979

Selected Short Stories of Isaac Bashevis Singer - The Modern Library

ಇತರೆ ಪೂರಕ ಗ್ರಂಥಗಳು

The Achievement of Isaac Bashevis Singer

Ed. by : Marcia Allentuck - Feffer and Simons London 1970

A Treasury of Yiddish Stories

Ed by : Irving Hove& Eliezer Greenberg - Andre Deutsch 1955

Writers at Work Fifth Series - Penguin 1981

The Living Talmud - Mentor 1957

The Wisdom of Israiel

Ed : Lewis Browne- Modern Library, New York 1945.

ನೊಬೆಲ್ ಪ್ರಶಸ್ತಿ ವಿಜೇತ ಲೇಖಕ-ಲೇಖಕಿಯರು

ವರ್ಷ	ವಿಜೇತರು	ದೇಶ-ಭಾಷೆ
೧೯೦೧	ಸುಲಿ ಪ್ರುಧೋಮ್ (Sully Prudhomme)	ಫ್ರಾನ್ಸ್ - ಫ್ರೆಂಚ್
೧೯೦೨	ಥಿಯೆಡೋರ್ ಮೊಮೆಸೆನ್ (Theodor Mommesen)	ಜರ್ಮನಿ - ಜರ್ಮನ್
೧೯೦೩	ಬ್ಯೋರ್ನ್‌ಸ್ಟರ್ನ್ ಬ್ಯೋರ್ನ್‌ಸನ್ (Brjornstjerne Bjornson)	ನಾರ್ವೆ - ನಾರ್ವೇಜಿಯನ್
೧೯೦೪	ಫ್ರೆಡೆರಿಕ್ ಮಿಸ್ತ್ರಲ್ (Frederic Mistral)	ಫ್ರಾನ್ಸ್ - ಫ್ರೆಂಚ್
	ಯೋಸೆ ಈಚೆಗಾರೆ (Jose Echegaray)	ಸ್ಪೇನ್ - ಸ್ಪ್ಯಾನಿಷ್
೧೯೦೫	ಹೆನ್ರಿಕ್ ಸಿಯೆನ್‌ಕಿಯೆವಿಚ್ (Henryk Sienkiewichz)	ಪೋಲೆಂಡ್ - ಪೋಲಿಷ್
೧೯೦೬	ಜಿಯೂಸೆ ಕಾರ್ದೂಚ್ಚಿ (Giouse Carducci)	ಇಟಲಿ - ಇಟಾಲಿಯನ್
೧೯೦೭	ರಡ್‌ಯಾರ್ಡ್ ಕಿಪ್ಲಿಂಗ್ (Rudyard Kipling)	ಗ್ರೇಟ್ ಬ್ರಿಟನ್ - ಇಂಗ್ಲಿಷ್
೧೯೦೮	ರುಡಾಲ್ಫ್ ಯೂಕೆನ್ (Rudolf Eucken)	ಜರ್ಮನಿ - ಜರ್ಮನ್
೧೯೦೯	ಸೆಲ್ಮಾ ಲಾಗರ್‌ಲಾಫ್ (Selma Lagerlof)	ಸ್ವೀಡನ್ - ಸ್ವೀಡಿಷ್
೧೯೧೦	ಪಾಲ್ ಹೇಸೆ (Paul Heyse)	ಜರ್ಮನಿ - ಜರ್ಮನ್
೧೯೧೧	ಮಾರೀಸ್ ಮೇತರ್‌ಲಿಂಕ್ (Mourice Maeterlinck)	ಬೆಲ್ಜಿಯಂ - ಫ್ರೆಂಚ್
೧೯೧೨	ಗೆರ್‌ಹಾರ್ಟ್ ಹಾಪ್ಟ್‌ಮನ್ (Gerhart Hauptmann)	ಜರ್ಮನಿ - ಜರ್ಮನ್
೧೯೧೩	ರವೀಂದ್ರನಾಥ ಠಾಕೂರ್ (Rabindranath Togore)	ಭಾರತ - ಬಂಗಾಳಿ
೧೯೧೪	ಯಾರಿಗೂ ಇಲ್ಲ	- -
೧೯೧೫	ರೋಮೆ ರೋಲಾ (Romain Rolland)	ಫ್ರಾನ್ಸ್ - ಫ್ರೆಂಚ್
೧೯೧೬	ವೆರ್ನೆರ್ ವಿ. ಹೈದೆನ್‌ಸ್ತಾಮ್ (Verner V. Heidenstam)	ಸ್ವೀಡನ್ - ಸ್ವೀಡಿಷ್
೧೯೧೭	ಕಾರ್ಲ್ ಜ್ಯೆಲೆರೂಪ್ (Karl Gjellerup)	ಡೆನ್ಮಾರ್ಕ್ - ಡೇನಿಷ್
	ಹೆನ್ರಿಕ್ ಪೋಂತೊಪ್ಪಿದಾನ್ (Hemrik Pantoppidan)	ಡೆನ್ಮಾರ್ಕ್ - ಡೇನಿಷ್
೧೯೧೮	ಯಾರಿಗೂ ಇಲ್ಲ	- -
೧೯೧೯	ಕಾರ್ಲ್ ಸ್ಪಿಟೆಲರ್ (Carl Spitteler)	ಸ್ವಿಟ್ಜರ್‌ಲ್ಯಾಂಡ್-ಜರ್ಮನ್
೧೯೨೦	ನುಟ್ ಹ್ಯಾಮ್ಸುನ್ (Knut Hamsun)	ನಾರ್ವೆ - ನಾರ್ವೇಜಿಯನ್

೧೯೨೧ ಅನಾತೋಲ್ ಫ್ರಾನ್ಸ್ (Anatole France)	ಫ್ರಾನ್ಸ್ - ಫ್ರೆಂಚ್
೧೯೨೨ ಯಾಸಿಂತೊ ಬೆನಾವೆಂತೆ (Jacinto Benavente)	ಸ್ಪೇನ್ - ಸ್ಪ್ಯಾನಿಷ್
೧೯೨೩ ಡಬ್ಲ್ಯು.ಬಿ.ಯೇಟ್ಸ್ (W.B. Yeats)	ಐರ್ಲೆಂಡ್ - ಇಂಗ್ಲಿಷ್
೧೯೨೪ ವ್ಲಾದಿಸ್ಲಾ ರೇಮೋಂತ್ (Wladyslaw Reymont)	ಪೋಲೆಂಡ್ - ಪೋಲಿಷ್
೧೯೨೫ ಜಾರ್ಜ್ ಬರ್ನಾಡ್ ಷಾ (George Bernard Shaw)	ಗ್ರೇಟ್ ಬ್ರಿಟನ್ - ಇಂಗ್ಲಿಷ್
೧೯೨೬ ಗ್ರೇತ್ಸಿಯಾ ದೆಲೆದ್ದಾ (Grazia Deledda)	ಇಟಲಿ - ಇಟಾಲಿಯನ್
೧೯೨೭ ಹೆನ್ರಿ ಬೆರ್ಗ್‌ಸನ್ (Henri Bergson)	ಫ್ರಾನ್ಸ್ - ಫ್ರೆಂಚ್
೧೯೨೮ ಸಿಗ್ರಿದ್ ಉಂದ್‌ಸೆತ್ (Sigrid Undset)	ನಾರ್ವೆ - ನಾರ್ವೇಜಿಯನ್
೧೯೨೯ ಥಾಮಸ್ ಮಾನ್ (Thomas Mann)	ಜರ್ಮನಿ - ಜರ್ಮನ್
೧೯೩೦ ಸಿಂಕ್ಲೇರ್ ಲೇವಿಸ್ (Sinclair Lewis)	ಅಮೆರಿಕ - ಇಂಗ್ಲಿಷ್
೧೯೩೧ ಎರಿಕ್ ಏಕ್ಸೆಲ್ ಕಾರ್ಲ್‌ಫೆಲ್ಡ್ (Erik Axel Karlfeldt)	ಸ್ವೀಡನ್ - ಸ್ವೀಡಿಷ್
೧೯೩೨ ಜಾನ್ ಗಾಲ್ಸ್‌ವರ್ದಿ (John Galsworthy)	ಗ್ರೇಟ್ ಬ್ರಿಟನ್ - ಇಂಗ್ಲಿಷ್
೧೯೩೩ ಇವಾನ್ ಬುನಿನ್ (Ivan Bunin)	ರಷ್ಯಾ/ಫ್ರಾನ್ಸ್ - ರಷ್ಯನ್
೧೯೩೪ ಲುಯಿಜಿ ಪಿರಾಂಡೆಲೊ (Luigi Pirandello)	ಇಟಲಿ - ಇಟಾಲಿಯನ್
೧೯೩೫ ಯಾರಿಗೂ ಇಲ್ಲ	- -
೧೯೩೬ ಯೂಜೀನ್ ಓನೀಲ್ (Eugene O'Neill)	ಅಮೆರಿಕ - ಇಂಗ್ಲಿಷ್
೧೯೩೭ ರೋಜರ್ ಮಾರ್ಟಿನ್ ದೂ ಗಾರ್ (Roger Martin Du Gard)	ಫ್ರಾನ್ಸ್- ಫ್ರೆಂಚ್
೧೯೩೮ ಪರ್ಲ್ ಎಸ್. ಬಕ್ (Peral S. Buck)	ಅಮೆರಿಕ - ಇಂಗ್ಲಿಷ್
೧೯೩೯ ಫ್ರಾನ್ಸ್ ಈಮಿಲ್ ಸಿಲ್ಲಾನ್ ಪಾ (France Eemil Sillanpaa)	ಫಿನ್ಲೆಂಡ್ - ಫಿನ್ನಿಷ್
೧೯೪೦ ಯಾರಿಗೂ ಇಲ್ಲ	- -
೧೯೪೧ ಯಾರಿಗೂ ಇಲ್ಲ	- -
೧೯೪೨ ಯಾರಿಗೂ ಇಲ್ಲ	- -
೧೯೪೩ ಯಾರಿಗೂ ಇಲ್ಲ	- -
೧೯೪೪ ಯೊಹಾನ್ನೆಸ್ ವಿ. ಯೆನ್‌ಸೆನ್ (Johannes V. Jensen)	ಡೆನ್ಮಾರ್ಕ್ - ಡೇನಿಷ್

೧೯೪೫	ಗೇಬ್ರಿಯೆಲಾ ಮಿಸ್ತ್ರಲ್ (Gabriela Mistral)	ಚಿಲಿ - ಸ್ಪ್ಯಾನಿಷ್
೧೯೪೬	ಹರ್ಮನ್ ಹೆಸ್ (Hermann Hesse)	ಸ್ವಿಟ್ಜರ್‌ಲ್ಯಾಂಡ್-ಜರ್ಮನ್
೧೯೪೭	ಆಂದ್ರೆ ಜೀದ್ (Andre Gide)	ಫ್ರಾನ್ಸ್ - ಫ್ರೆಂಚ್
೧೯೪೮	ಟಿ.ಎಸ್. ಎಲಿಯಟ್ (T.S. Eliot)	ಗ್ರೇಟ್ ಬ್ರಿಟನ್ - ಇಂಗ್ಲಿಷ್
೧೯೪೯	ವಿಲಿಯಂ ಫಾಕ್ನರ್ (William Faulkner)	ಅಮೆರಿಕ - ಇಂಗ್ಲಿಷ್
೧೯೫೦	ಬರ್ಟ್ರಂಡ್ ರಸೆಲ್ (Bertrand Russel)	ಗ್ರೇಟ್ ಬ್ರಿಟನ್ - ಇಂಗ್ಲಿಷ್
೧೯೫೧	ಪಾರ್ ಲಾಗರ್‌ಕ್ವಿಸ್ಟ್ (Par Lagerkvist)	ಸ್ವೀಡನ್ - ಸ್ವೀಡಿಷ್
೧೯೫೨	ಫ್ರಾನ್ಸುವಾ ಮೋರಿಯಾಕ್ (Francois Mouriac)	ಫ್ರಾನ್ಸ್ - ಫ್ರೆಂಚ್
೧೯೫೩	ವಿನ್‌ಸ್ಟನ್ ಚರ್ಚಿಲ್ (Winston Chruchill)	ಗ್ರೇಟ್ ಬ್ರಿಟನ್ - ಇಂಗ್ಲಿಷ್
೧೯೫೪	ಅರ್ನೆಸ್ಟ್ ಹೆಮಿಂಗ್‌ವೇ (Ernest Hemingway)	ಅಮೆರಿಕ - ಇಂಗ್ಲಿಷ್
೧೯೫೫	ಹಾಲ್‌ದೋರ್ ಲ್ಯಾಕ್ಸ್‌ನೆಸ್ (Halldor Laxness)	ಐಸ್‌ಲೆಂಡ್ - ಐಸ್‌ಲ್ಯಾಂಡಿಕ್
೧೯೫೬	ಯುವಾನ್ ಆರ್. ಯಿಮಿನೆಸ್ (Juan R. Jimenez)	ಸ್ಪೇನ್ - ಸ್ಪ್ಯಾನಿಷ್
೧೯೫೭	ಆಲ್ಬರ್ಟ್ ಕಾಮು (Albert Camus)	ಫ್ರಾನ್ಸ್ - ಫ್ರೆಂಚ್
೧೯೫೮	ಬೋರಿಸ್ ಪಾಸ್ತರ್‌ನಾಕ್ (Boris Pasternak) (ಪ್ರಶಸ್ತಿ ಪಡೆಯಲಿಲ್ಲ)	ಸೋವಿಯೆತ್ ಒಕ್ಕೂಟ - ರಷ್ಯನ್
೧೯೫೯	ಸಾಲ್ವತೋರೆ ಕಾಸಿಮೋದೊ (Salvatore Quasimodo)	ಇಟಲಿ - ಇತಾಲಿಯನ್
೧೯೬೦	ಸೇಂಟ್-ಜಾನ್ ಪೆರ್ಸ್ (Saint-John Perse)	ಫ್ರಾನ್ಸ್-ಫ್ರೆಂಚ್
೧೯೬೧	ಇವೊ ಆಂದ್ರಿಚ್ (Ivo Andric)	ಯೂಗೋಸ್ಲಾವಿಯಾ-ಸೆರ್ಬೋ-ಕ್ರೋತ್
೧೯೬೨	ಜಾನ್ ಸ್ಟೈನ್‌ಬೆಕ್ (John Steinbeck)	ಅಮೆರಿಕ - ಇಂಗ್ಲಿಷ್
೧೯೬೩	ಜಿಯಾರ್‌ಜೋಸ್ ಸೆಫೇರಿಸ್ (Giorgos Seferis)	ಗ್ರೀಸ್ - ಗ್ರೀಕ್
೧೯೬೪	ಜೀನ್-ಪಾಲ್ ಸಾರ್ತ್ರ್ (Jean-Paul Sartre) (ಪ್ರಶಸ್ತಿ ನಿರಾಕರಿಸಿದ)	ಫ್ರಾನ್ಸ್ - ಫ್ರೆಂಚ್
೧೯೬೫	ಮಿಖಾಯಿಲ್ ಶೊಲೋಖೊವ್ (Mikhail Sholokhov)	ಸೋವಿಯೆತ್ ಒಕ್ಕೂಟ - ರಷ್ಯನ್

೧೯೬೬	ಎಸ್.ವೈ. ಅಗ್ನಾನ್ (S.Y. Agnon)	ಇಸ್ರೇಲ್ - ಹೀಬ್ರೂ
	ನೆಲ್ಲಿ ಸ್ಯಾಚ್ಸ್ (Nelly Sach)	ಜರ್ಮನಿ - ಜರ್ಮನ್
೧೯೬೭	ಮಿಗೇಲ್ ಏಂಜಲ್ ಅಸ್ಟೂರಿಯಾಸ್ (Miguel Angel Astruias)	ಗ್ವಾಟೆಮಾಲಾ - ಸ್ಪ್ಯಾನಿಷ್
೧೯೬೮	ಯಸುನಾರಿ ಕವಾಬಾಟ (Yasunari Kawabata)	ಜಪಾನ್ - ಜಾಪನೀಸ್
೧೯೬೯	ಸ್ಯಾಮ್ಯುಯೆಲ್ ಬೆಕೆಟ್ (Samuel Beckt)	ಐರ್ಲೆಂಡ್/ಫ್ರಾನ್ಸ್ - ಫ್ರೆಂಚ್/ಇಂಗ್ಲಿಷ್
೧೯೭೦	ಅಲೆಕ್ಸಾಂಡರ್ ಸೋಲ್ಜೆನಿತ್ಸಿನ್ (Alexsander Solzheniysyn)	ಸೋವಿಯತ್ ಒಕ್ಕೂಟ - ರಷ್ಯನ್
೧೯೭೧	ಪ್ಯಾಬ್ಲೊ ನೆರೂಡಾ (Pablo Neruda)	ಚಿಲಿ - ಸ್ಪ್ಯಾನಿಷ್
೧೯೭೨	ಹೆನ್ರಿಚ್ ಬ್ಯೋಲ್ (Heinrich Boll)	ಪಶ್ಚಿಮ ಜರ್ಮನಿ-ಜರ್ಮನ್
೧೯೭೩	ಪ್ಯಾಟ್ರಿಕ್ ವೈಟ್ (Patrick white)	ಆಸ್ಟ್ರೇಲಿಯ - ಇಂಗ್ಲಿಷ್
೧೯೭೪	ಐವಿಂಡ್ ಜಾನ್ಸನ್ (Eyvind Johnson)	ಸ್ವೀಡನ್ - ಸ್ವೀಡಿಷ್
	ಹ್ಯಾರಿ ಮಾರ್ಟಿನ್‌ಸನ್ (Harry Martinson)	ಸ್ವೀಡನ್ - ಸ್ವೀಡಿಷ್
೧೯೭೫	ಯೂಜೇನಿಯೊ ಮೊಂಟಾಲೆ (Eugeoio Montale)	ಇಟಲಿ - ಇಟಾಲಿಯನ್
೧೯೭೬	ಸಾಲ್ ಬೆಲೊ (Saul Bellow)	ಅಮೆರಿಕ - ಇಂಗ್ಲಿಷ್
೧೯೭೭	ವಿನ್ಸೆಂತೆ ಅಲೆಕ್ಸಾಂಡ್ರೆ (Vincentre Aleixandre)	ಸ್ಪೇನ್ - ಸ್ಪ್ಯಾನಿಷ್
೧೯೭೮	ಐಸಾಕ್ ಬಾಷೆವಿಸ್ ಸಿಂಗರ್ (Isaac Bashevis Singer)	ಪೋಲೆಂಡ್/ ಅಮೆರಿಕ - ಯಿಡ್ಡಿಶ್
೧೯೭೯	ಒಡಿಸ್ಸ್ಯೂಸ್ ಎಲಿಟಸ್ (Odysseus Elytis)	ಗ್ರೀಸ್ - ಗ್ರೀಕ್
೧೯೮೦	ಚೆಸ್ಲಾ ಮಿಲೋಶ್ (Czeslaw Milosz)	ಪೋಲೆಂಡ್/ಅಮೆರಿಕ - ಪೋಲಿಷ್
೧೯೮೧	ಎಲಿಯಾಸ್ ಕ್ಯಾನೆಟಿ (Elias Canetti)	ಗ್ರೇಟ್ ಬ್ರಿಟನ್ - ಜರ್ಮನ್
೧೯೮೨	ಗೇಬ್ರಿಯಲ್ ಗಾರ್ಸಿಯಾ ಮಾರ್ಕೆಜ್ (Gabriel Garcia Marquez)	ಕೊಲಂಬಿಯ - ಸ್ಪ್ಯಾನಿಷ್
೧೯೮೩	ವಿಲಿಯಂ ಗೋಲ್ಡಿಂಗ್ (William Golding)	ಗ್ರೇಟ್ ಬ್ರಿಟನ್ - ಇಂಗ್ಲಿಷ್

೧೯೮೪	ಯೂರೋಸ್ಲಾವ್ ಸೀಫರ್ಟ್ (Jaroslow Seifert)	ಚೆಕೋಸ್ಲೋವಾಕಿಯ- ಚೆಕ್
೧೯೮೫	ಕ್ಲಾದ್ ಸಿಮೊನ್ (Claude Simon)	ಫ್ರಾನ್ಸ್ - ಫ್ರೆಂಚ್
೧೯೮೬	ವೊಲೆ ಷೊಯಿಂಕ (Wole Soyinka)	ನೈಜೀರಿಯಾ - ಇಂಗ್ಲಿಷ್
೧೯೮೭	ಜೋಸೆಫ್ ಬ್ರಾಡ್‌ಸ್ಕಿ (Joseph Brodsky)	ರಷಿಯಾ/ಅಮೆರಿಕ - ರಷ್ಯನ್
೧೯೮೮	ನಜೀಬ್ ಮಹಫೌಜ್ (Najib Mahfuz)	ಈಜಿಪ್ಟ್ - ಅರಾಬಿಕ್
೧೯೮೯	ಕಾಮಿಲೆ ಯೋಸೆ ಸೆಲಾ (Camile Jose Cela)	ಸ್ಪೈನ್ - ಸ್ಪ್ಯಾನಿಷ್
೧೯೯೦	ಒಕ್ತಾವಿಯೋ ಪಾಜ್ (Octavio Paz)	ಮೆಕ್ಸಿಕೋ - ಸ್ಪ್ಯಾನಿಷ್
೧೯೯೧	ನ್ಯಾಡಿನ್ ಗೋರ್ಡಿಮರ್ (Nadine Govdimer)	ದಕ್ಷಿಣ ಆಫ್ರಿಕಾ - ಇಂಗ್ಲಿಷ್
೧೯೯೨	ಡೆರೆಕ್ ವಾಲ್ಕಾಟ್ (Derek Wolcott)	ಸೈಂಟ್ ಲೂಸಿಯ (ಕೆರೆಬಿಯನ್) - ಇಂಗ್ಲಿಷ್
೧೯೯೩	ಟೋನಿ ಮಾರಿಸನ್ (Toni Morison)	ಅಮೆರಿಕ - ಇಂಗ್ಲಿಷ್
೧೯೯೪	ಕೆಂಜಬುರೋ ಒಯೆ (Kenzaburo Oe)	ಜಪಾನ್ - ಜಪಾನಿ
೧೯೯೫	ಸೀಮನ್ ಹೀನಿ (Seaman Heany)	ಯುಕೆ - ಐರಿಷ್
೧೯೯೬	ವಿಸ್ಲಾವಾ ಸಿಂಬೊಸ್ಕ (Wislawa Zymoska)	ಪೋಲೆಂಡ್ - ಪೋಲಿಷ್
೧೯೯೭	ಡೇರಿಯೋ ಫೋ (Dario Fo)	ಇಟಲಿ - ಇತಾಲಿಯನ್

ಕನ್ನಡ ಪುಸ್ತಕ ಪ್ರಾಧಿಕಾರದ ಕೆಲವು ಪ್ರಕಟಣೆಗಳು

	ಜನಪ್ರಿಯ ಪುಸ್ತಕ ಮಾಲೆ	ಲೇಖಕರು	ದರ
೧.	ದಕ್ಷಿಣ ಕನ್ನಡ ಜಿಲ್ಲೆಯ ಹರಿಜನರ ಮತ್ತು ಗಿರಿಜನರ ಸಾಮಾಜಿಕ ಇತಿಹಾಸ	ಪಿ. ಕಮಲಾಕ್ಷ	೧೨.೦೦
೨.	ಖಾಸನೀಸರ ಕಥೆಗಳು	ರಾಘವೇಂದ್ರ ಖಾಸನೀಸ	೧೪.೦೦
೩.	ಸಂಗೀತ ಕಲಾನಿಧಿ ಟಿ. ಚೌಡಯ್ಯ	ಎಸ್. ಕೃಷ್ಣಮೂರ್ತಿ	೧೦.೦೦
೪.	ವೈದ್ಯನ ವಿದೇಶ ಪ್ರವಾಸ	ಡಾ. ಜಿ. ಗೋಪಾಲ್	೧೧.೦೦
೫.	ಪುರಾಣ ಭಾರತ ಕೋಶ	ಯಜ್ಞನಾರಾಯಣ ಉಡುಪ	೭೫.೦೦
೬.	ಕಲೆಯ ಗೊಂಚಲು	ಬಿ.ವಿ.ಕೆ. ಶಾಸ್ತ್ರೀ	೨೩.೦೦
೭.	ಬಹುರೂಪಾ ವಸುಂಧರಾ	ಗುರುಮೂರ್ತಿ ಪೆಂಡಕೂರು	೧೬.೦೦
೮.	ಪಂಜರವಳ್ಳಿಯ ಪಂಜು	ಕಡಿದಾಳ್ ಮಂಜಪ್ಪ	೧೮.೦೦
೯.	ಬಾಗಲೋಡಿ ದೇವರಾಯರ ಆಯ್ದ ಕಥೆಗಳು	ಬಾಗಲೋಡಿ ದೇವರಾಯ	೧೦.೦೦
೧೦.	ಪ್ರೀತಿ	ಗೌರೀಶ ಕಾಯ್ಕಿಣಿ	೧೦.೦೦
೧೧.	ಪ್ರಹಾರ	ಪಾ.ವೆಂ. ಆಚಾರ್ಯ	೧೧.೦೦
೧೨.	ಹಕ್ಕಿನೋಟ	ದ.ಬಾ. ಕುಲಕರ್ಣಿ	೧೦.೦೦
೧೩.	ಮಲ್ಲಿಗೆ ದಂಡೆ (ಜನಪದ ಗೀತ ಸಂಗ್ರಹ)	ಕಾಪಸೆ ರೇವಪ್ಪ	೧೫.೦೦
೧೪.	ಲೂಯಿ ಪಾಸ್ತರ್	ಜೆ.ಆರ್. ಲಕ್ಷ್ಮಣರಾವ್	೧೫.೦೦
೧೫.	ಭಾರತದ ಸ್ವಾತಂತ್ರ್ಯ ಚಳುವಳಿ ೧೮೫೭-೧೯೪೭	ಎ.ಪಿ. ಶ್ರೀನಿವಾಸಮೂರ್ತಿ	೧೬.೦೦
೧೬.	ನಕ್ಷತ್ರಗಾನ	ಡಿ.ಎಸ್. ಕರ್ಕಿ	೧೧.೦೦
೧೭.	ಅಪೂರ್ಣ ವರ್ತಮಾನಕಾಲ	ಡಾ. ಶಂಕರ ಮೊಕಾಶಿ ಪುಣೇಕರ	೧೪.೦೦
೧೮.	ಋಗ್ವೇದದಲ್ಲಿ ವಿಶ್ವಸಾಮರಸ್ಯ	ಪ್ರೊ. ಜಿ.ಎನ್. ಚಕ್ರವರ್ತಿ	೧೮.೦೦
೧೯.	ವಚನಾನುಭವ	ಪ್ರೊ. ಆರ್. ರಾಚಪ್ಪ	೧೩.೦೦
೨೦.	ಗಾಂಧಿ ಪ್ರಭಾವ ಸೌರಭ	ಕೆ.ಎಸ್. ನಾರಾಯಣಸ್ವಾಮಿ	೧೩.೦೦
೨೧.	ಪುಟ್ಟೋಲೆ ಪಳಮೆ	ನಡಿಕೇರಿಯಂಡ ಚಿಣ್ಣಪ್ಪ	೪೫.೦೦
೨೨.	ಅನ್ವಯಿಕ ಜಾನಪದ	ಡಾ. ಬಿ.ಎ. ವಿವೇಕ ರೈ	೧೬.೦೦
೨೩.	ನಕ್ಷತ್ರ ದರ್ಶನ	ಆರ್.ಎಲ್. ನರಸಿಂಹಯ್ಯ	೩೪.೦೦
೨೪.	ಭಾರತೀಯ ಚಿತ್ರಕಲೆ	ಡಾ. ಶಿವರಾಮ ಕಾರಂತ	೪೦.೦೦
೨೫.	ಪಣಿಯಲ್ಲ ಪರಮನ್ನಂ	ಎನ್ಕೆ	೪೩.೦೦

೨೬.	ಮಹಿಳೆಯರ ಅಲಂಕಾರ	ಶಾಂತದೇವಿ ಮಾಳವಾಡ	೨೫.೦೦
೨೭.	ನಗೆಮುಗಿಲು	ಅ.ರಾ.ಸೇ	೧೮.೦೦
೨೮.	ನಾಲ್ಕನೆಯ ಆಯಾಮ	ಕುಸುಮಾಕರ ದೇವರಗಣ್ಣೂರು	೨೪.೦೦
೨೯.	ಜೀವನ	ಕೃಷ್ಣಕುಮಾರ	೨೫.೦೦
೩೦.	ಸಾಲಿರಾಮಚಂದ್ರರಾಯರ ಸಮಗ್ರ ಕಾವ್ಯ	ಸಂ. ಸಿದ್ದಲಿಂಗಪಟ್ಟಣಶೆಟ್ಟಿ	೫೦.೦೦
೩೧.	ಭಗವಂತಂಡ ಪಾಟ್	ನಡಿಕೇರಿಯಂಡ ಚಿಣ್ಣಪ್ಪ	೨೩.೦೦
೩೨.	ಕನ್ನಡ-ಕನ್ನಡಿಗ-ಕರ್ನಾಟಕ	ಸಂ. ಚಿದಾನಂದಮೂರ್ತಿ	೪೦.೦೦
೩೩.	ವರಪ್ರದಾನ	ಕಂದಗಲ್ಲ ಹಣಮಂತರಾಯ	೨೧.೦೦
೩೪.	ದೇವ್ರುಡು ಅವರ ಆಯ್ದ ಕತೆಗಳು	ಸಂ. ಲಿಂಗರಾಜು	೪೦.೦೦
೩೫.	ಹಾಸ್ಯ ಕಸ್ತೂರಿ	ಸು.ಕೆ.ಬಿ. ಪ್ರಭುಪ್ರಸಾದ್ ಎಚ್.ಎಲ್. ಕೇಶವಮೂರ್ತಿ	೬೦.೦೦
೩೬.	ಆಯ್ದ ಕವಿತೆಗಳು	ಡಾ. ಸಿದ್ಧಲಿಂಗಯ್ಯ	೨೦.೦೦

ಪಂಪ ಪ್ರಶಸ್ತಿ ಪಡೆದ ಕೃತಿಗಳು

*೧.	ಶ್ರೀ ರಾಮಾಯಣ ದರ್ಶನಂ	ಡಾ. ಕುವೆಂಪು	೧೫.೦೦
*೨.	ಭಾರತೀಯ ಕಾವ್ಯ ಮೀಮಾಂಸೆ	ಪ್ರೊ. ತೀ.ನಂ. ಶ್ರೀ.	೧೫.೦೦
*೩.	ಶೂನ್ಯ ಸಂಪಾದನೆಯ ಪರಾಮರ್ಶೆ	ಪ್ರೊ. ಎಸ್.ಎಸ್. ಭೂಸನೂರಮಠ	೨೦.೦೦
೪.	ಶ್ರೀ ಹರಿಚರಿತೆ	ಡಾ. ಪು.ತಿ.ನ.	೧೫.೦೦
೫.	ಸುವರ್ಣ ಪುತ್ಥಳಿ	ಪ್ರೊ. ಗೋಪಾಲಕೃಷ್ಣ ಅಡಿಗ	೧೫.೦೦

ನೋಬೆಲ್ ಪುರಸ್ಕೃತ ಸಾಹಿತ್ಯ ಮಾಲೆ :-

೧. ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್ - ಸಂ. : ಬಿದರಹಳ್ಳಿ ನರಸಿಂಹಮೂರ್ತಿ

೨. ಅಕ್ಟೋವಿಯಾ ಫಾಜ್ - ಅನು : ಕೆ.ಎನ್. ವಿಜಯಲಕ್ಷ್ಮಿ

೩. ಬೋರಿಸ್ ಪಾಸ್ತರ್‌ನಾಕ್ - ಅನು : ಕೇಶವ ಮಳಗಿ

೪. ಹರ್ಮನ್ ಹೆಸ್ - ಅನು : ಜ.ಹೊ. ನಾರಾಯಣಸ್ವಾಮಿ

೫. ಐಸಾಕ್ ಬಾಷೆವಿಸ್ ಸಿಂಗರ್ - ಅನು : ಲಿಂಗರಾಜು

೬. ಮಾರಿಸ್ ಮೇಟರ್‌ಲಿಂಕ್ - ಅನು : ಸಂಧ್ಯಾ ಎಸ್

---

* *ಈ ಗುರುತು ಮಾಡಿರುವ ಪುಸ್ತಕಗಳು ಮುಗಿದಿವೆ.*



೧೯೭೮ ರ ನೊಬೆಲ್ ಪುರಸ್ಕಾರಕ್ಕೆ ಪಾತ್ರನಾದ ಯಿದ್ದಿಷ್ ಭಾಷೆಯ ಲೇಖಕ ಐಸಾಕ್ ಬಾಷೆವಿಸ್ ಸಿಂಗರ್. ಪೋಲೆಂಡ್ ದೇಶದವನಾದ ಈತ ಸಿಂಗರ್‌ನೆಂದೇ ಪ್ರಸಿದ್ಧ. ಪೂರ್ವ ಯೂರೋಪಿನ ಯಹೂದಿ ಬದುಕಿನ ಶ್ರೀಮಂತಿಕೆಯನ್ನು ಅದರ ಎಲ್ಲ ವೈರುಧ್ಯಗಳೊಂದಿಗೆ ತನ್ನ ಕತೆ - ಕಾದಂಬರಿಗಳಲ್ಲಿ ಚಿತ್ರಿಸಿದ ಸಿಂಗರ್ ಈ ಶತಮಾನದ ಮಹಾನ್ ಕತೆಗಾರರಲ್ಲಿ ಒಬ್ಬ. ಜನಪದ ಕಥನಶೈಲಿಯನ್ನು ಆಧುನಿಕತೆಗೆ ಒಗ್ಗಿಸಿಕೊಳ್ಳುವುದರೊಂದಿಗೇ ತನ್ನ ಕೃತಿಗಳಿಗೆ ಒಂದು ಅಪೂರ್ವ ಆವರಣ ನಿರ್ಮಿಸುವ ಪ್ರತಿಭೆ ಈತನದು. ಷೇಕ್ಸ್‌ಪಿಯರ್ ನಂತರ ಮಾನವ ಬದುಕಿನ ಎಲ್ಲ ಥರದ ಪಾತ್ರಗಳನ್ನು ಚಿತ್ರಿಸಿದ ಅಪರೂಪದ ಲೇಖಕ ಸಿಂಗರ್. ಜಗತ್ತಿನಾದ್ಯಂತ ಓದುಗರನ್ನು ಪಡೆದ ವಿರಳ ಲೇಖಕರಲ್ಲಿ ಒಬ್ಬನಾದ ಈತನ ನಲವತ್ತಕ್ಕೂ ಹೆಚ್ಚು ಕೃತಿಗಳು ಪ್ರಕಟವಾಗಿವೆ. ಜನಾಂಗೀಯ ದ್ವೇಷದಿಂದ ಯೂರೋಪಿನಿಂದ ಅಮೆರಿಕೆಗೆ ವಲಸೆ ಹೋದ ಹಲವರಂತೆ ಸಿಂಗರ್ ಕೂಡ ಅಮೆರಿಕೆಗೆ ಹೋಗಿ ಮೃತದ ಹಾದಿ ಹಿಡಿದಿದ್ದ ಯಿದ್ದಿಷ್ ಭಾಷೆಗೆ ತನ್ನ ಗೌರವ ಲಭ್ಯವಾಗುವಂಥ ಸಾಧನೆ ಮಾಡಿದ. ಕನ್ನಡ ಓದುಗರಿಗೆ ಸಿಂಗರ್ ಸಾಹಿತ್ಯದ ಆಯ್ದ ಭಾಗಗಳನ್ನು ಈ ವಾಚಿಕೆಯಲ್ಲಿ ಕನ್ನಡಿಸಲಾಗಿದೆ.

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು - ೫೬೦ ೦೧೮